ಪೀವಾ ಯತಸ್ತದ್ವದ ನಃ ಕ್ಷಮಂ ಚೇತ್ ॥೧೭॥

ಕವಿಃ ಕಲ್ಪೋ ನಿಪುಣದೃಕ್ಚಿತ್ರಪ್ರಿಯಕಥಃ ಸಮಃ ।
ಲೋಕಸ್ಯ ಕುರ್ವತಃ ಕರ್ಮ ಶೇಷೇ ತದ್ವೀಕ್ಷಿತಾಪಿ ವಾ ॥೧೮॥

ನಾರದ ಉವಾಚ :

ಸ ಇತ್ಥಂ ದೈತ್ಯಪತಿನಾ ಪರಿಪೃಷ್ಟೋ ಮಹಾಮುನಿಃ ।
ಸ್ಮಯಮಾನಸ್ತಮಭ್ಯಾಹ ತದ್ವಾಗಮೃತಯನ್ತ್ರಿತಃ ॥೧೯॥

ಬ್ರಾಹ್ಮಣ ಉವಾಚ :

ವೇದೇದಮಸುರಶ್ರೇಷ್ಠ ಭವಾನ್ನನ್ವಾರ್ಯಸಮ್ಮತಃ ।
ಈಹೋಪರಮಯೋರ್ನೄಣಾಂ ಪದಾನ್ಯಧ್ಯಾತ್ಮಚಕ್ಷುಷಾ ॥೨೦॥

ಯಸ್ಯ ನಾರಾಯಣೋ ದೇವೋ ಭಗವಾನ್ಹೃದ್ಗತಃ ಸದಾ ।
ಭಕ್ತ್ಯಾ ಕೇವಲಯಾಜ್ಞಾನಂ ಧುನೋತಿ ಧ್ವಾನ್ತಮರ್ಕವತ್ ॥೨೧॥

ಅಥಾಪಿ ಬ್ರೂಮಹೇ ಪ್ರಶ್ನಾಂಸ್ತವ ರಾಜನ್ಯಥಾಶ್ರುತಮ್ ।
ಸಮ್ಭಾವನೀಯೋ ಹಿ ಭವಾನಾತ್ಮನಃ ಶುದ್ಧಿಮಿಚ್ಛತಾಮ್ ॥೨೨॥

ತೃಷ್ಣಯಾ ಭವವಾಹಿನ್ಯಾ ಯೋಗ್ಯೈಃ ಕಾಮೈರಪೂರಯಾ ।
ಕರ್ಮಾಣಿ ಕಾರ್ಯಮಾಣೋऽಹಂ ನಾನಾಯೋನಿಷು ಯೋಜಿತಃ॥೨೩॥

ಯದೃಚ್ಛಯಾ ಲೋಕಮಿಮಂ ಪ್ರಾಪಿತಃ ಕರ್ಮಭಿರ್ಭ್ರಮನ್ ।
ಸ್ವರ್ಗಾಪವರ್ಗಯೋರ್ದ್ವಾರಂ ತಿರಶ್ಚಾಂ ಪುನರಸ್ಯ ಚ ॥೨೪॥

ಅತ್ರಾಪಿ ದಮ್ಪತೀನಾಂ ಚ ಸುಖಾಯಾನ್ಯಾಪನುತ್ತಯೇ ।
ಕರ್ಮಾಣಿ ಕುರ್ವತಾ ದೃಷ್ಟ್ವಾನಿವೃತ್ತೋऽಸ್ಮಿ ವಿಪರ್ಯಯಮ್ ॥೨೫॥

ಸುಖಮಸ್ಯಾತ್ಮನೋ ರೂಪಂ ಸರ್ವೇಹೋಪರತಿಸ್ತನುಃ ।
ಮನಃಸಂಸ್ಪರ್ಶಜಾನ್ದೃಷ್ಟ್ವಾ ಭೋಗಾನ್ಸ್ವಪ್ಸ್ಯಾಮಿ ಸಂವಿಶನ್ ॥೨೬॥

ಇತ್ಯೇತದಾತ್ಮನಃ ಸ್ವಾರ್ಥಂ ಸನ್ತಂ ವಿಸ್ಮೃತ್ಯ ವೈ ಪುಮಾನ್ ।
ವಿಚಿತ್ರಾಮಸತಿ ದ್ವೈತೇ ಘೋರಾಮಾಪ್ನೋತಿ ಸಂಸೃತಿಮ್ ॥೨೭॥

ಜಲಂ ತದುದ್ಭವೈಶ್ಛನ್ನಂ ಹಿತ್ವಾಜ್ಞೋ ಜಲಕಾಮ್ಯಯಾ ।
ಮೃಗತೃಷ್ಣಾಮುಪಾಧಾವೇದ್ಯಥಾನ್ಯತ್ರಾರ್ಥದೃಕ್ಸ್ವತಃ ॥೨೮॥

ದೇಹಾದಿಭಿರ್ದೈವತನ್ತ್ರೈರಾತ್ಮನಃ ಸುಖಮೀಹತಃ ।
ದುಃಖಾತ್ಯಯಂ ಚಾನೀಶಸ್ಯ ಕ್ರಿಯಾ ಮೋಘಾಃ ಕೃತಾಃ ಕೃತಾಃ ॥೨೯॥

ಆಧ್ಯಾತ್ಮಿಕಾದಿಭಿರ್ದುಃಖೈರವಿಮುಕ್ತಸ್ಯ ಕರ್ಹಿಚಿತ್ ।
ಮರ್ತ್ಯಸ್ಯ ಕೃಚ್ಛ್ರೋಪನತೈರರ್ಥೈಃ ಕಾಮೈಃ ಕ್ರಿಯೇತ ಕಿಮ್ ॥೩೦॥

ಪಶ್ಯಾಮಿ ಧನಿನಾಂ ಕ್ಲೇಶಂ ಲುಬ್ಧಾನಾಮಜಿತಾತ್ಮನಾಮ್ ।
ಭಯಾದಲಬ್ಧನಿದ್ರಾಣಾಂ ಸರ್ವತೋऽಭಿವಿಶಙ್ಕಿನಾಮ್ ॥೩೧॥

ರಾಜತಶ್ಚೋರತಃ ಶತ್ರೋಃ ಸ್ವಜನಾತ್ಪಶುಪಕ್ಷಿತಃ ।
ಅರ್ಥಿಭ್ಯಃ ಕಾಲತಃ ಸ್ವಸ್ಮಾನ್ನಿತ್ಯಂ ಪ್ರಾಣಾರ್ಥವದ್ಭಯಮ್ ॥೩೨॥

ಶೋಕಮೋಹಭಯಕ್ರೋಧರಾಗಕ್ಲೈಬ್ಯಶ್ರಮಾದಯಃ ।
ಯನ್ಮೂಲಾಃ ಸ್ಯುರ್ನೃಣಾಂ ಜಹ್ಯಾತ್ಸ್ಪೃಹಾಂ ಪ್ರಾಣಾರ್ಥಯೋರ್ಬುಧಃ ॥

ಮಧುಕಾರಮಹಾಸರ್ಪೌ ಲೋಕೇಽಸ್ಮಿನ್ನೋ ಗುರೂತ್ತಮೌ ।
ವೈರಾಗ್ಯಂ ಪರಿತೋಷಂ ಚ ಪ್ರಾಪ್ತಾ ಯಚ್ಛಿಕ್ಷಯಾ ವಯಮ್ ॥೩೪॥

ವಿರಾಗಃ ಸರ್ವಕಾಮೇಭ್ಯಃ ಶಿಕ್ಷಿತೋ ಮೇ ಮಧುವ್ರತಾತ್ ।
ಕೃಚ್ಛ್ರಾಪ್ತಂ ಮಧುವದ್ವಿತ್ತಂ ಹತ್ವಾಪ್ಯನ್ಯೋ ಹರೇತ್ಪತಿಮ್ ॥೩೫॥

ಅನೀಹಃ ಪರಿತುಷ್ಟಾತ್ಮಾ ಯದೃಚ್ಛೋಪನತಾದಹಮ್ ।
ನೋ ಚೇಚ್ಛಯೇ ಬಹ್ವಹಾನಿ ಮಹಾಹಿರಿವ ಸತ್ತ್ವವಾನ್ ॥೩೬॥

ಕ್ವಚಿದಲ್ಪಂ ಕ್ವಚಿದ್ಭೂರಿ ಭುಞ್ಜೇಽನ್ನಂ ಸ್ವಾದ್ವಸ್ವಾದು ವಾ ।
ಕ್ವಚಿದ್ಭೂರಿಗುಣೋಪೇತಂ ಗುಣಹೀನಮುತ ಕ್ವಚಿತ್ ॥೩೭॥

ಶ್ರದ್ಧಯೋಪಾಹೃತಂ ಕ್ವಾಪಿ ಕದಾಚಿನ್ಮಾನವರ್ಜಿತಮ್ ।
ಭುಞ್ಜೇ ಭುಕ್ತ್ವಾಥ ಕಸ್ಮಿಂಶ್ಚಿದ್ದಿವಾ ನಕ್ತಂ ಯದೃಚ್ಛಯಾ ॥೩೮॥

ಕ್ಷೌಮಂ ದುಕೂಲಮಜಿನಂ ಚೀರಂ ವಲ್ಕಲಮೇವ ವಾ ।
ವಸೇಽನ್ಯದಪಿ ಸಮ್ಪ್ರಾಪ್ತಂ ದಿಷ್ಟಭುಕ್ತುಷ್ಟಧೀರಹಮ್ ॥೩೯॥

ಕ್ವಚಿಚ್ಛಯೇ ಧರೋಪಸ್ಥೇ ತೃಣಪರ್ಣಾಶ್ಮಭಸ್ಮಸು ।
ಕ್ವಚಿತ್ಪ್ರಾಸಾದಪರ್ಯಙ್ಕೇ ಕಶಿಪೌ ವಾ ಪರೇಚ್ಛಯಾ ॥೪೦॥

ಕ್ವಚಿತ್ಸ್ನಾತೋಽನುಲಿಪ್ತಾಙ್ಗಃ ಸುವಾಸಾಃ ಸ್ರಗ್ವ್ಯಲಂಕೃತಃ ।
ರಥೇಭಾಶ್ವೈಶ್ಚರೇ ಕ್ವಾಪಿ ದಿಗ್ವಾಸಾ ಗ್ರಹವದ್ವಿಭೋ ॥೪೧॥

ನಾಹಂ ನಿನ್ದೇ ನ ಚ ಸ್ತೌಮಿ ಸ್ವಭಾವವಿಷಮಂ ಜನಮ್ ।
ಏತೇಷಾಂ ಶ್ರೇಯ ಆಶಾಸೇ ಉತೈಕಾತ್ಮ್ಯಂ ಮಹಾತ್ಮನಿ ॥೪೨॥

ವಿಕಲ್ಪಂ ಜುಹುಯಾಚ್ಚಿತ್ತೌ ತಾಂ ಮನಸ್ಯರ್ಥವಿಭ್ರಮೇ ।
ಮನೋ ವೈಕಾರಿಕೇ ಹುತ್ವಾ ತನ್ಮಾಯಾಯಾಂ ಜುಹೋತ್ಯನು ॥೪೩॥

ಆತ್ಮಾನುಭೂತೌ ತಾಂ ಮಾಯಾಂ ಜುಹುಯಾತ್ಸತ್ಯದೃಙ್ಮುನಿಃ ।
ತತೋ ನಿರೀಹೋ ವಿರಮೇತ್ಸ್ವಾನುಭೂತ್ಯಾತ್ಮನಿ ಸ್ಥಿತಃ ॥೪೪॥

ಸ್ವಾತ್ಮವೃತ್ತಂ ಮಯೇತ್ಥಂ ತೇ ಸುಗುಪ್ತಮಪಿ ವರ್ಣಿತಮ್ ।
ವ್ಯಪೇತಂ ಲೋಕಶಾಸ್ತ್ರಾಭ್ಯಾಂ ಭವಾನ್ಹಿ ಭಗವತ್ಪರಃ ॥೪೫॥

ನಾರದ ಉವಾಚ :

ಧರ್ಮಂ ಪಾರಮಹಂಸ್ಯಂ ವೈ ಮುನೇಃ ಶ್ರುತ್ವಾಸುರೇಶ್ವರಃ ।
ಪೂಜಯಿತ್ವಾ ತತಃ ಪ್ರೀತ ಆಮನ್ತ್ರ್ಯ ಪ್ರಯಯೌ ಗೃಹಮ್ ॥೪೬॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಸಂಹಿತಾಯಾಂ ಸಪ್ತಮಸ್ಕನ್ಧೇ ಯುಧಿಷ್ಠಿರ-ನಾರದಸಂವಾದೇ
ಯತಿಧರ್ಮೇ ತ್ರಯೋದಸೋಽಧ್ಯಾಯಃ

ಅಥ ಚತುರ್ದಶೋಽಧ್ಯಾಯಃ

ಯುಧಿಷ್ಠಿರ ಉವಾಚ :

ಗೃಹಸ್ಥ ಏತಾಂ ಪದವೀಂ ವಿಧಿನಾ ಯೇನ ಚಾಞ್ಜಸಾ ।
ಯಾತಿ ದೇವಋಷೇ ಬ್ರೂಹಿ ಮಾದೃಶೋ ಗೃಹಮೂಢಧೀಃ ॥೧॥

ನಾರದ ಉವಾಚ :

ಗೃಹೇಷ್ವವಸ್ಥಿತೋ ರಾಜನಿ ಯ್ರಾಃ ಕುರ್ವನ್ಗೃಹೋಚಿತಾಃ ।
ವಾಸುದೇವಾರ್ಪಣಂ ಸಾಕ್ಷಾದುಪಾಸೀತ ಮಹಾಮುನೀನ್ ॥೨॥

ಶೃಣ್ವನ್ಭಗವತೋಽಭೀಕ್ಷ್ಣಮವತಾರಕಥಾಮೃತಮ್ ।
ಶ್ರದ್ದಧಾನೋ ಯಥಾಕಾಲಮುಪಶಾನ್ತಜನಾವೃತಃ ॥೩॥

ಸತ್ಸಙ್ಗಾಚ್ಛನಕೈಃ ಸಙ್ಗಮಾತ್ಮಜಾಯಾತ್ಮಜಾದಿಷು ।
ವಿಮುಚ್ಯೇನ್ಮುಚ್ಯಮಾನೇಷು ಸ್ವಯಂ ಸ್ವಪ್ನವದುತ್ಥಿತಃ ॥೪॥

ಯಾವದರ್ಥಮುಪಾಸೀನೋ ದೇಹೇ ಗೇಹೇ ಚ ಪಣ್ಡಿತಃ ।
ವಿರಕ್ತೋ ರಕ್ತವತ್ತತ್ರ ನೃಲೋಕೇ ನರತಾಂ ನ್ಯಸೇತ್ ॥೫॥

ಜ್ಞಾತಯಃ ಪಿತರೌ ಪುತ್ರಾ ಭ್ರಾತರಃ ಸುಹೃದೋಽಪರೇ ।
ಯದ್ವದನ್ತಿ ಯದಿಚ್ಛನ್ತಿ ಚಾನುಮೋದೇತ ನಿರ್ಮಮಃ ॥೬॥

ದಿವ್ಯಂ ಭೌಮಂ ಚಾನ್ತರಿಕ್ಷಂ ವಿತ್ತಮಚ್ಯುತನಿರ್ಮಿತಮ್ ।
ತತ್ಸರ್ವಮುಪಭುಞ್ಜಾನ ಏತತ್ಕುರ್ಯಾತ್ಸ್ವತೋ ಬುಧಃ ॥೭॥

ಯಾವದ್ಧ್ರಿಯೇತ ಜಠರಂ ತಾವತ್ಸತ್ವಂ ಹಿ ದೇಹಿನಾಮ್ ।
ಅಧಿಕಂ ಯೋಽಭಿಮನ್ಯೇತ ಸ ಸ್ತೇನೋ ದಣ್ಡಮರ್ಹತಿ ॥೮॥

ಮೃಗೋಷ್ಟ್ರಖರಮರ್ಕಾಖುಸರೀಸೃಪ್ಖಗಮಕ್ಷಿಕಾಃ ।
ಆತ್ಮನಃ ಪುತ್ರವತ್ಪಶ್ಯೇತ್ತೈರೇಷಾಮನ್ತರಂ ಕಿಯತ್ ॥೯॥

ತ್ರಿವರ್ಗಂ ನಾತಿಕೃಚ್ಛ್ರೇಣ ಭಜೇತ ಗೃಹಮೇಧ್ಯಪಿ ।
ಯಥಾದೇಶಂ ಯಥಾಕಾಲಂ ಯಾವದ್ದೈವೋಪಪಾದಿತಮ್ ॥೧೦॥

ಆಶ್ವಾಘಾನ್ತೇಽವಸಾಯಿಭ್ಯಃ ಕಾಮಾನ್ಸಂವಿಭಜೇದ್ಯಥಾ ।
ಅಪ್ಯೇಕಾಮಾತ್ಮನೋ ದಾರಾಂ ನೃಣಾಂ ಸ್ವತ್ವಗ್ರಹೋ ಯತಃ ॥೧೧॥

ಜಹ್ಯಾದ್ಯದರ್ಥೇ ಸ್ವಪ್ರಾಣಾನ್ಹನ್ಯಾದ್ವಾ ಪಿತರಂ ಗುರುಮ್ ।
ತಸ್ಯಾಂ ಸ್ವತ್ವಂ ಸ್ತ್ರಿಯಾಂ ಜಹ್ಯಾದ್ಯಸ್ತೇನ ಹ್ಯಜಿತೋ ಜಿತಃ ॥೧೨॥

ಕೃಮಿವಿಡ್ಭಸ್ಮನಿಷ್ಠಾನ್ತಂ ಕ್ವೇದಂ ತುಚ್ಛಂ ಕಲೇವರಮ್ ।
ಕ್ವ ತದೀಯರತಿರ್ಭಾರ್ಯಾ ಕ್ವಾಯಮಾತ್ಮಾ ನಭಶ್ಛದಿಃ ॥೧೩॥

ಸಿದ್ಧೈರ್ಯಜ್ಞಾವಶಿಷ್ಟಾರ್ಥೈಃ ಕಲ್ಪಯೇದ್ವೃತ್ತಿಮಾತ್ಮನಃ ।
ಶೇಷೇ ಸ್ವತ್ವಂ ತ್ಯಜನ್ಪ್ರಾಜ್ಞಃ ಪದವೀಂ ಮಹತಾಮಿಯಾತ್ ॥೧೪॥

ದೇವಾನೃಷೀನ್ನೃಭೂತಾನಿ ಪಿತೄನಾತ್ಮಾನಮನ್ವಹಮ್ ।
ಸ್ವವೃತ್ತ್ಯಾಗತವಿತ್ತೇನ ಯಜೇತ ಪುರುಷಂ ಪೃಥಕ್ ॥೧೫॥

ಯರ್ಹ್ಯಾತ್ಮನೋಽಧಿಕಾರಾದ್ಯಾಃ ಸರ್ವಾಃ ಸ್ಯುರ್ಯಜ್ಞಸಮ್ಪದಃ ।
ವೈತಾನಿಕೇನ ವಿಧಿನಾ ಅಗ್ನಿಹೋತ್ರಾದಿನಾ ಯಜೇತ್ ॥೧೬॥

ನ ಹ್ಯಗ್ನಿಮುಖತೋಽಯಂ ವೈ ಭಗವಾನ್ಸರ್ವಯಜ್ಞಭುಕ್ ।
ಇಜ್ಯೇತ ಹವಿಷಾ ರಾಜನ್ಯಥಾ ವಿಪ್ರಮುಖೇ ಹುತೈಃ ॥೧೭॥

ತಸ್ಮಾದ್ಬ್ರಾಹ್ಮಣದೇವೇಷು ಮರ್ತ್ಯಾದಿಷು ಯಥಾರ್ಹತಃ ।
ತೈಸ್ತೈಃ ಕಾಮೈರ್ಯಜಸ್ವೈನಂ ಕ್ಷೇತ್ರಜ್ಞಂ ಬ್ರಾಹ್ಮಣಾನನು ॥೧೮॥

ಕುರ್ಯಾದಾಪರಪಕ್ಷೀಯಂ ಮಾಸಿ ಪ್ರೌಷ್ಠಪದೇ ದ್ವಿಜಃ ।
ಶ್ರಾದ್ಧಂ ಪಿತ್ರೋರ್ಯಥಾವಿತ್ತಂ ತದ್ಬನ್ಧೂನಾಂ ಚ ವಿತ್ತವಾನ್ ॥೧೯॥

ಅಯನೇ ವಿಷುವೇ ಕುರ್ಯಾದ್ವ್ಯತೀಪಾತೇ ದಿನಕ್ಷಯೇ ।
ಚನ್ದ್ರಾದಿತ್ಯೋಪರಾಗೇ ಚ ದ್ವಾದಶೀಶ್ರವಣೇಷು ಚ ॥೨೦॥

ತೃತೀಯಾಯಾಂ ಶುಕ್ಲಪಕ್ಷೇ ನವಮ್ಯಾಮಥ ಕಾರ್ತಿಕೇ ।
ಚತಸೃಷ್ವಪ್ಯಷ್ಟಕಾಸು ಹೇಮನ್ತೇ ಶಿಶಿರೇ ತಥಾ ॥೨೧॥

ಮಾಘೇ ಚ ಸಿತಸಪ್ತಮ್ಯಾಂ ಮಘಾರಾಕಾಸಮಾಗಮೇ ।
ರಾಕಯಾ ಚಾನುಮತ್ಯಾ ವಾ ಮಾಸರ್ಕ್ಷಾಣಿ ಯುತಾನ್ಯಪಿ ॥೨೨॥

ದ್ವಾದಶ್ಯಾಮನುರಾಧಾ ಸ್ಯಾಚ್ಛ್ರವಣಸ್ತಿಸ್ರ ಉತ್ತರಾಃ ।
ತಿಸೃಷ್ವೇಕಾದಶೀ ವಾಸು ಜನ್ಮರ್ಕ್ಷಶ್ರೋಣಯೋಗಯುಕ್ ॥೨೩॥

ತ ಏತೇ ಶ್ರೇಯಸಃ ಕಾಲಾ ನೃಣಾಂ ಶ್ರೇಯೋವಿವರ್ಧನಾಃ ।
ಕುರ್ಯಾತ್ಸರ್ವಾತ್ಮನೈತೇಷು ಶ್ರೇಯೋಽಮೋಘಂ ತದಾಯುಷಃ ॥೨೪॥

ಏಷು ಸ್ನಾನಂ ಜಪೋ ಹೋಮೋ ವ್ರತಂ ದೇವದ್ವಿಜಾರ್ಚನಮ್ ।
ಪಿತೃದೇವನೃಭೂತೇಭ್ಯೋ ಯದ್ದತ್ತಂ ತದ್ಧ್ಯನಶ್ವರಮ್ ॥೨೫॥

ಸಂಸ್ಕಾರಕಾಲೋ ಜಾಯಾಯಾ ಅಪತ್ಯಸ್ಯಾತ್ಮನಸ್ತಥಾ ।
ಪ್ರೇತಸಂಸ್ಥಾ ಮೃತಾಹಶ್ಚ ಕರ್ಮಣ್ಯಭ್ಯುದಯೇ ನೃಪ ॥೨೬॥

ಅಥ ದೇಶಾನ್ಪ್ರವಕ್ಷ್ಯಾಮಿ ಧರ್ಮಾದಿಶ್ರೇಯಆವಹಾನ್ ।
ಸ ವೈ ಪುಣ್ಯತಮೋ ದೇಶಃ ಸತ್ಪಾತ್ರಂ ಯತ್ರ ಲಭ್ಯತೇ ॥೨೭॥

ಬಿಮ್ಬಂ ಭಗವತೋ ಯತ್ರ ಸರ್ವಮೇತಚ್ಚರಾಚರಮ್ ।
ಯತ್ರ ಹ ಬ್ರಾಹ್ಮಣಕುಲಂ ತಪೋವಿದ್ಯಾದಯಾನ್ವಿತಮ್ ॥೨೮॥

ಯತ್ರ ಯತ್ರ ಹರೇರರ್ಚಾ ಸ ದೇಶಃ ಶ್ರೇಯಸಾಂ ಪದಮ್ ।
ಯತ್ರ ಗಙ್ಗಾದಯೋ ನದ್ಯಃ ಪುರಾಣೇಷು ಚ ವಿಶ್ರುತಾಃ ॥೨೯॥

ಸರಾಂಸಿ ಪುಷ್ಕರಾದೀನಿ ಕ್ಷೇತ್ರಾಣ್ಯರ್ಹಾಶ್ರಿತಾನ್ಯುತ ।
ಕುರುಕ್ಷೇತ್ರಂ ಗಯಶಿರಃ ಪ್ರಯಾಗಃ ಪುಲಹಾಶ್ರಮಃ ॥೩೦॥

ನೈಮಿಷಂ ಫಾಲ್ಗುನಂ ಸೇತುಃ ಪ್ರಭಾಸೋಽಥ ಕುಶಸ್ಥಲೀ ।
ವಾರಾಣಸೀ ಮಧುಪುರೀ ಪಮ್ಪಾ ಬಿನ್ದುಸರಸ್ತಥಾ ॥೩೧॥

ನಾರಾಯಣಾಶ್ರಮೋ ನನ್ದಾ ಸೀತಾರಾಮಾಶ್ರಮಾದಯಃ ।
ಸರ್ವೇ ಕುಲಾಚಲಾ ರಾಜನ್ಮಹೇನ್ದ್ರಮಲಯಾದಯಃ ॥೩೨॥

ಏತೇ ಪುಣ್ಯತಮಾ ದೇಶಾ ಹರೇರರ್ಚಾಶ್ರಿತಾಶ್ಚ ಯೇ ।
ಏತಾನ್ದೇಶಾನ್ನಿಷೇವೇತ ಶ್ರೇಯಸ್ಕಾಮೋ ಹ್ಯಭೀಕ್ಷ್ಣಶಃ ।
ಧರ್ಮೋ ಹ್ಯತ್ರೇಹಿತಃ ಪುಂಸಾಂ ಸಹಸ್ರಾಧಿಫಲೋದಯಃ ॥೩೩॥

ಪಾತ್ರಂ ತ್ವತ್ರ ನಿರುಕ್ತಂ ವೈ ಕವಿಭಿಃ ಪಾತ್ರವಿತ್ತಮೈಃ ।
ಹರಿರೇವೈಕ ಉರ್ವೀಶ ಯನ್ಮಯಂ ವೈ ಚರಾಚರಮ್ ॥೩೪॥

ದೇವರ್ಷ್ಯರ್ಹತ್ಸು ವೈ ಸತ್ಸು ತತ್ರ ಬ್ರಹ್ಮಾತ್ಮಜಾದಿಷು ।
ರಾಜನ್ಯದಗ್ರಪೂಜಾಯಾಂ ಮತಃ ಪಾತ್ರತಯಾಚ್ಯುತಃ ॥೩೫॥

ಜೀವರಾಶಿಭಿರಾಕೀರ್ಣ ಆಣ್ಡಕೋಶಾಙ್ಘ್ರಿಪೋ ಮಹಾನ್
ತನ್ಮೂಲತ್ವಾದಚ್ಯುತೇಜ್ಯಾ ಸರ್ವಜೀವಾತ್ಮತರ್ಪಣಮ್ ॥೩೬॥

ಪುರಾಣ್ಯನೇನ ಸೃಷ್ಟಾನಿ ನೃತಿರ್ಯಗೃಷಿದೇವತಾಃ ।
ಶೇತೇ ಜೀವೇನ ರೂಪೇಣ ಪುರೇಷು ಪುರುಷೋ ಹ್ಯಸೌ ॥೩೭॥

ತೇಷ್ವೇಷು ಭಗವಾನ್ರಾಜಂಸ್ತಾರತಮ್ಯೇನ ವರ್ತತೇ ।
ತಸ್ಮಾತ್ಪಾತ್ರಂ ಹಿ ಪುರುಷೋ ಯಾವಾನಾತ್ಮಾ ಯಥೇಯತೇ ॥೩೮॥

ದೃಷ್ಟ್ವಾ ತೇಷಾಂ ಮಿಥೋ ನೃಣಾಮವಜ್ಞಾನಾತ್ಮತಾಂ ನೃಪ ।
ತ್ರೇತಾದಿಷು ಹರೇರರ್ಚಾ ಕ್ರಿಯಾಯೈ ಕವಿಭಿಃ ಕೃತಾ ॥೩೯॥

ತತೋಽರ್ಚಾಯಾಂ ಹರಿಂ ಕೇಚಿತ್ಸಂಶ್ರದ್ಧಾಯ ಸಪರ್ಯಯಾ ।
ಉಪಾಸತ ಉಪಾಸ್ತಾಪಿ ನಾರ್ಥದಾ ಪುರುಷದ್ವಿಷಾಮ್ ॥೪೦॥

ಪುರುಷೇಷ್ವಪಿ ರಾಜೇನ್ದ್ರ ಸುಪಾತ್ರಂ ಬ್ರಾಹ್ಮಣಂ ವಿದುಃ ।
ತಪಸಾ ವಿದ್ಯಯಾ ತುಷ್ಟ್ಯಾ ಧತ್ತೇ ವೇದಂ ಹರೇಸ್ತನುಮ್ ॥೪೧॥

ನನ್ವಸ್ಯ ಬ್ರಾಹ್ಮಣಾ ರಾಜನ್ಕೃಷ್ಣಸ್ಯ ಜಗದಾತ್ಮನಃ ।
ಪುನನ್ತಃ ಪಾದರಜಸಾ ತ್ರಿಲೋಕೀಂ ದೈವತಂ ಮಹತ್ ॥೪೨॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಸಂಹಿತಾಯಾಂ ಸಪ್ತಮಸ್ಕನ್ಧೇ ಸದಾಚಾರನಿರ್ಣಯೋ ನಾಮ
ಚತುರ್ದಶೋಽಧ್ಯಾಯಃ

ಅಥ ಪಞ್ಚದಶೋಽಧ್ಯಾಯಃ

ನಾರದ ಉವಾಚ :

ಕರ್ಮನಿಷ್ಠಾ ದ್ವಿಜಾಃ ಕೇಚಿತ್ತಪೋನಿಷ್ಠಾ ನೃಪಾಪರೇ ।
ಸ್ವಾಧ್ಯಾಯೇಽನ್ಯೇ ಪ್ರವಚನೇ ಯೇ ಕೇಚಿಜ್ಜ್ಞಾನಯೋಗಯೋಃ ॥೧॥

ಜ್ಞಾನನಿಷ್ಠಾಯ ದೇಯಾನಿ ಕವ್ಯಾನ್ಯಾನನ್ತ್ಯಮಿಚ್ಛತಾ ।
ದೈವೇ ಚ ತದಭಾವೇ ಸ್ಯಾದಿತರೇಭ್ಯೋ ಯಥಾರ್ಹತಃ ॥೨॥

ದ್ವೌ ದೈವೇ ಪಿತೃಕಾರ್ಯೇ ತ್ರೀನೇಕೈಕಮುಭಯತ್ರ ವಾ ।
ಭೋಜಯೇತ್ಸುಸಮೃದ್ಧೋಽಪಿ ಶ್ರಾದ್ಧೇ ಕುರ್ಯಾನ್ನ ವಿಸ್ತರಮ್ ॥೩॥

ದೇಶಕಾಲೋಚಿತಶ್ರದ್ಧಾದ್ರವ್ಯಪಾತ್ರಾರ್ಹಣಾನಿ ಚ ।
ಸಮ್ಯಗ್ಭವನ್ತಿ ನೈತಾನಿ ವಿಸ್ತರಾತ್ಸ್ವಜನಾರ್ಪಣಾತ್ ॥೪॥

ದೇಶೇ ಕಾಲೇ ಚ ಸಮ್ಪ್ರಾಪ್ತೇ ಮುನ್ಯನ್ನಂ ಹರಿದೈವತಮ್ ।
ಶ್ರದ್ಧಯಾ ವಿಧಿವತ್ಪಾತ್ರೇ ನ್ಯಸ್ತಂ ಕಾಮಧುಗಕ್ಷಯಮ್ ॥೫॥

ದೇವರ್ಷಿಪಿತೃಭೂತೇಭ್ಯ ಆತ್ಮನೇ ಸ್ವಜನಾಯ ಚ ।
ಅನ್ನಂ ಸಂವಿಭಜನ್ಪಶ್ಯೇತ್ಸರ್ವಂ ತತ್ಪುರುಷಾತ್ಮಕಮ್ ॥೬॥

ನ ದದ್ಯಾದಾಮಿಷಂ ಶ್ರಾದ್ಧೇ ನ ಚಾದ್ಯಾದ್ಧರ್ಮತತ್ತ್ವವಿತ್ ।
ಮುನ್ಯನ್ನೈಃ ಸ್ಯಾತ್ಪರಾ ಪ್ರೀತಿರ್ಯಥಾ ನ ಪಶುಹಿಂಸಯಾ ॥೭॥

ನೈತಾದೃಶಃ ಪರೋ ಧರ್ಮೋ ನೃಣಾಂ ಸದ್ಧರ್ಮಮಿಚ್ಛತಾಮ್ ।
ನ್ಯಾಸೋ ದಣ್ಡಸ್ಯ ಭೂತೇಷು ಮನೋವಾಕ್ಕಾಯಜಸ್ಯ ಯಃ ॥೮॥

ಏಕೇ ಕರ್ಮಮಯಾನ್ಯಜ್ಞಾನ್ ಜ್ಞಾನಿನೋ ಯಜ್ಞವಿತ್ತಮಾಃ ।
ಆತ್ಮಂಯಮನೇಽನೀಹಾ ಜುಹ್ವತಿ ಜ್ಞಾನದೀಪಿತೇ ॥೯॥

ದ್ರವ್ಯಯಜ್ಞೈರ್ಯಕ್ಷ್ಯಮಾಣಂ ದೃಷ್ಟ್ವಾ ಭೂತಾನಿ ಬಿಭ್ಯತಿ ।
ಏಷ ಮಾಕರುಣೋ ಹನ್ಯಾದತಜ್ಞೋ ಹ್ಯಸುತೃಬ್ಧ್ರುವಮ್ ॥೧೦॥

ತಸ್ಮಾದ್ದೈವೋಪಪನ್ನೇನ ಮುನ್ಯನ್ನೇನಾಪಿ ಧರ್ಮವಿತ್ ।
ಸನ್ತುಷ್ಟೋಽಹರಹಃ ಕುರ್ಯಾನ್ನಿತ್ಯ ನೈಮಿತ್ತಿಕೀಃ ಕ್ರಿಯಾಃ ॥೧೧॥

ವಿಧರ್ಮಃ ಪರಧರ್ಮಶ್ಚ ಆಭಾಸ ಉಪಮಾ ಛಲಃ ।
ಅಧರ್ಮಶಾಖಾಃ ಪಞ್ಚೇಮಾ ಧರ್ಮಜ್ಞೋಽಧರ್ಮವತ್ತ್ಯಜೇತ್ ॥೧೨॥

ಧರ್ಮಬಾಧೋ ವಿಧರ್ಮಃ ಸ್ಯಾತ್ಪರಧರ್ಮೋಽನ್ಯಚೋದಿತಃ ।
ಉಪಧರ್ಮಸ್ತು ಪಾಖಣ್ಡೋ ದಮ್ಭೋ ವಾ ಶಬ್ದಭಿಚ್ಛಲಃ ॥೧೩॥

ಯಸ್ತ್ವಿಚ್ಛಯಾ ಕೃತಃ ಪುಮ್ಭಿರಾಭಾಸೋ ಹ್ಯಾಶ್ರಮಾತ್ಪೃಥಕ್ ।
ಸ್ವಭಾವವಿಹಿತೋ ಧರ್ಮಃ ಕಸ್ಯ ನೇಷ್ಟಃ ಪ್ರಶಾನ್ತಯೇ ॥೧೪॥

ಧರ್ಮಾರ್ಥಮಪಿ ನೇಹೇತ ಯಾತ್ರಾರ್ಥಂ ವಾಧನೋ ಧನಮ್ ।
ಅನೀಹಾನೀಹಮಾನಸ್ಯ ಮಹಾಹೇರಿವ ವೃತ್ತಿದಾ ॥೧೫॥

ಸನ್ತುಷ್ಟಸ್ಯ ನಿರೀಹಸ್ಯ ಸ್ವಾತ್ಮಾರಾಮಸ್ಯ ಯತ್ಸುಖಮ್ ।
ಕುತಸ್ತತ್ಕಾಮಲೋಭೇನ ಧಾವತೋಽರ್ಥೇಹಯಾ ದಿಶಃ ॥೧೬॥

ಸದಾ ಸನ್ತುಷ್ಟಮನಸಃ ಸರ್ವಾಃ ಸುಖಮಯಾ ದಿಶಃ ।
ಶರ್ಕರಾಕಣ್ಟಕಾದಿಭ್ಯೋ ಯಥೋಪಾನತ್ಪದಃ ಶಿವಮ್ ॥೧೭॥

ಸನ್ತುಷ್ಟಃ ಕೇನ ವಾ ರಾಜನ್ನ ವರ್ತೇತಾಪಿ ವಾರಿಣಾ ।
ಔಪಸ್ಥ್ಯಜೈಹ್ವ್ಯಕಾರ್ಪಣ್ಯಾದ್ಗೃಹಪಾಲಾಯತೇ ಜನಃ ॥೧೮॥

ಅಸನ್ತುಷ್ಟಸ್ಯ ವಿಪ್ರಸ್ಯ ತೇಜೋ ವಿದ್ಯಾ ತಪೋ ಯಶಃ ।
ಸ್ರವನ್ತೀನ್ದ್ರಿಯಲೌಲ್ಯೇನ ಜ್ಞಾನಂ ಚೈವಾವಕೀರ್ಯತೇ ॥೧೯॥

ಕಾಮಸ್ಯಾನ್ತಂ ಚ ಕ್ಷುತ್ತೃಡ್ಭ್ಯಾಂ ಕ್ರೋಧಸ್ಯೈತತ್ಫಲೋದಯಾತ್ ।
ಜನೋ ಯಾತಿ ನ ಲೋಭಸ್ಯ ಜಿತ್ವಾ ಭುಕ್ತ್ವಾ ದಿಶೋ ಭುವಃ ॥೨೦॥

ಪಣ್ಡಿತಾ ಬಹವೋ ರಾಜನ್ಬಹುಜ್ಞಾಃ ಸಂಶಯಚ್ಛಿದಃ ।
ಸದಸಸ್ಪತಯೋಽಪ್ಯೇಕೇ ಅಸನ್ತೋಷಾತ್ಪತನ್ತ್ಯಧಃ ॥೨೧॥

ಅಸಙ್ಕಲ್ಪಾಜ್ಜಯೇತ್ಕಾಮಂ ಕರೋಧಂ ಕಾಮವಿವರ್ಜನಾತ್ ।
ಅರ್ಥಾನರ್ಥೇಕ್ಷಯಾ ಲೋಭಂ ಭಯಂ ತತ್ತ್ವಾವಮರ್ಶನಾತ್ ॥೨೨॥

ಆನ್ವೀಕ್ಷಿಕ್ಯಾ ಶೋಕಮೋಹೌ ದಮ್ಭಂ ಮಹದುಪಾಸಯಾ ।
ಯೋಗಾನ್ತರಾಯಾನ್ಮೌನೇನ ಹಿಂಸಾಂ ಕಾಯಾದ್ಯನೀಹಯಾ ॥೨೩॥

ಕೃಪಯಾ ಭೂತಜಂ ದುಃಖಂ ದೈವಂ ಜಹ್ಯಾತ್ಸಮಾಧಿನಾ ।
ಆತ್ಮಜಂ ಯೋಗವೀರ್ಯೇಣ ನಿದ್ರಾಂ ಸತ್ತ್ವನಿಷೇವಯಾ ॥೨೪॥

ರಜಸ್ತಮಶ್ಚ ಸತ್ತ್ವೇನ ಸತ್ತ್ವಂ ಚೋಪಶಮೇನ ಚ ।
ಏತತ್ಸರ್ವಂ ಗುರೌ ಭಕ್ತ್ಯಾ ಪುರುಷೋ ಹ್ಯಞ್ಜಸಾ ಜಯೇತ್ ॥೨೫॥

ಯಸ್ಯ ಸಾಕ್ಷಾದ್ಭಗವತಿ ಜ್ಞಾನದೀಪಪ್ರದೇ ಗುರೌ ।
ಮರ್ತ್ಯಾಸದ್ಧೀಃ ಶ್ರುತಂ ತಸ್ಯ ಸರ್ವಂ ಕುಞ್ಜರಶೌಚವತ್ ॥೨೬॥

ಏಷ ವೈ ಭಗವಾನ್ಸಾಕ್ಷಾತ್ಪ್ರಧಾನಪುರುಷೇಶ್ವರಃ ।
ಯೋಗೇಶ್ವರೈರ್ವಿಮೃಗ್ಯಾಙ್ಘ್ರಿರ್ಲೋಕೋ ಯಂ ಮನ್ಯತೇ ನರಮ್ ॥

ಷಡ್ವರ್ಗಸಂಯಮೈಕಾನ್ತಾಃ ಸರ್ವಾ ನಿಯಮಚೋದನಾಃ ।
ತದನ್ತಾ ಯದಿ ನೋ ಯೋಗಾನಾವಹೇಯುಃ ಶ್ರಮಾವಹಾಃ ॥೨೮॥

ಯಥಾ ವಾರ್ತಾದಯೋ ಹ್ಯರ್ಥಾ ಯೋಗಸ್ಯಾರ್ಥಂ ನ ಬಿಭ್ರತಿ ।
ಅನರ್ಥಾಯ ಭವೇಯುಸ್ತೇ ಪೂರ್ತಮಿಷ್ಟಂ ತಥಾಸತಃ ॥೨೯॥

ಯಶ್ಚಿತ್ತವಿಜಯೇ ಯತ್ತಃ ಸ್ಯಾನ್ನಿಃಸಙ್ಗೋಽಪರಿಗ್ರಹಃ ।
ಏಕೋ ವಿವಿಕ್ತಶರಣೋ ಭಿಕ್ಷುರ್ಭಿಕ್ಷಾಮಿತಾಶನಃ ॥೩೦॥

ದೇಶೇ ಶುಚೌ ಸಮೇ ರಾಜನ್ಸಂಸ್ಥಾಪ್ಯಾಸನಮಾತ್ಮನಃ ।
ಸ್ಥಿರಂ ಸಮಂ ಸುಖಂ ತಸ್ಮಿನ್ನಾಸೀತರ್ಜ್ವಙ್ಗ ಓಮಿತಿ ॥೩೧॥

ಪ್ರಾಣಾಪಾನೌ ಸನ್ನಿರುನ್ಧ್ಯಾತ್ಪೂರಕುಮ್ಭಕರೇಚಕೈಃ ।
ಯಾವನ್ಮನಸ್ತ್ಯಜೇತ್ಕಾಮಾನ್ಸ್ವನಾಸಾಗ್ರನಿರೀಕ್ಷಣಃ ॥೩೨॥

ಯತೋ ಯತೋ ನಿಃಸರತಿ ಮನಃ ಕಾಮಹತಂ ಭ್ರಮತ್ ।
ತತಸ್ತತ ಉಪಾಹೃತ್ಯ ಹೃದಿ ರುನ್ಧ್ಯಾಚ್ಛನೈರ್ಬುಧಃ ॥೩೩॥

ಏವಮಭ್ಯಸತಶ್ಚಿತ್ತಂ ಕಾಲೇನಾಲ್ಪೀಯಸಾ ಯತೇಃ ।
ಅನಿಶಂ ತಸ್ಯ ನಿರ್ವಾಣಂ ಯಾತ್ಯನಿನ್ಧನವಹ್ನಿವತ್ ॥೩೪॥

ಕಾಮಾದಿಭಿರನಾವಿದ್ಧಂ ಪ್ರಶಾನ್ತಾಖಿಲವೃತ್ತಿ ಯತ್ ।
ಚಿತ್ತಂ ಬ್ರಹ್ಮಸುಖಸ್ಪೃಷ್ಟಂ ನೈವೋತ್ತಿಷ್ಠೇತ ಕರ್ಹಿಚಿತ್ ॥೩೫॥

ಯಃ ಪ್ರವ್ರಜ್ಯ ಗೃಹಾತ್ಪೂರ್ವಂ ತ್ರಿವರ್ಗಾವಪನಾತ್ಪುನಃ ।
ಯದಿ ಸೇವೇತ ತಾನ್ಭಿಕ್ಷುಃ ಸ ವೈ ವಾನ್ತಾಶ್ಯಪತ್ರಪಃ ॥೩೬॥

ಯೈಃ ಸ್ವದೇಹಃ ಸ್ಮೃತೋ ನಾತ್ಮಾ ಮರ್ತ್ಯೋ ವಿಟ್ಕೃಮಿಭಸ್ಮಸಾತ್ ।
ತ ಏನಮಾತ್ಮಸಾತ್ಕೃತ್ವಾ ಶ್ಲಾಘಯನ್ತಿ ಹ್ಯಸತ್ತಮಾಃ ॥೩೭॥

ಗೃಹಸ್ಥಸ್ಯ ಕ್ರಿಯಾತ್ಯಾಗೋ ವ್ರತತ್ಯಾಗೋ ವಟೋರಪಿ ।
ತಪಸ್ವಿನೋ ಗ್ರಾಮಸೇವಾ ಭಿಕ್ಷೋರಿನ್ದ್ರಿಯಲೋಲತಾ ॥೩೮॥

ಆಶ್ರಮಾಪಸದಾ ಹ್ಯೇತೇ ಖಲ್ವಾಶ್ರಮವಿಡಮ್ಬಕಾಃ ।
ದೇವಮಾಯಾವಿಮೂಢಾಂಸ್ತಾನುಪೇಕ್ಷೇತಾನುಕಮ್ಪಯಾ ॥೩೯॥

ಆತ್ಮಾನಂ ಚೇದ್ವಿಜಾನೀಯಾತ್ಪರಂ ಜ್ಞಾನಧುತಾಶಯಃ ।
ಕಿಮಿಚ್ಛನ್ಕಸ್ಯ ವಾ ಹೇತೋರ್ದೇಹಂ ಪುಷ್ಣಾತಿ ಲಮ್ಪಟಃ ॥೪೦॥

ಆಹುಃ ಶರೀರಂ ರಥಮಿನ್ದ್ರಿಯಾಣಿ
ಹಯಾನಭೀಷೂನ್ಮನ ಇನ್ದ್ರಿಯೇಶಮ್ ।
ವರ್ತ್ಮಾನಿ ಮಾತ್ರಾ ಧಿಷಣಾಂ ಚ ಸೂತಂ
ಸತ್ತ್ವಂ ಬೃಹದ್ಬನ್ಧುರಮೀಶಸೃಷ್ಟಮ್ ॥೪೧॥

ಅಕ್ಷಂ ದಶಪ್ರಾಣಮಧರ್ಮಧರ್ಮೌ
ಚಕ್ರೇಽಭಿಮಾನಂ ರಥಿನಂ ಚ ಜೀವಮ್ ।
ಧನುರ್ಹಿ ತಸ್ಯ ಪ್ರಣವಂ ಪಠನ್ತಿ
ಶರಂ ತು ಜೀವಂ ಪರಮೇವ ಲಕ್ಷ್ಯಮ್ ॥೪೨॥

ರಾಗೋ ದ್ವೇಷಶ್ಚ ಲೋಭಶ್ಚ ಶೋಕಮೋಹೌ ಭಯಂ ಮದಃ ।
ಮಾನೋಽವಮಾನೋಽಸೂಯಾ ಚ ಮಾಯಾ ಹಿಂಸಾ ಚ ಮತ್ಸರಃ॥

ರಜಃ ಪ್ರಮಾದಃ ಕ್ಷುನ್ನಿದ್ರಾ ಶತ್ರವಸ್ತ್ವೇವಮಾದಯಃ ।
ರಜಸ್ತಮಃಪ್ರಕೃತಯಃ ಸತ್ತ್ವಪ್ರಕೃತಯಃ ಕ್ವಚಿತ್ ॥೪೪॥

ಯಾವನ್ನೃಕಾಯರಥಮಾತ್ಮವಶೋಪಕಲ್ಪಂ
ಧತ್ತೇ ಗರಿಷ್ಠಚರಣಾರ್ಚನಯಾ ನಿಶಾತಮ್ ।
ಜ್ಞಾನಾಸಿಮಚ್ಯುತಬಲೋ ದಧದಸ್ತಶತ್ರುಃ
ಸ್ವಾರಾಜ್ಯತುಷ್ಟ ಉಪಶಾನ್ತ ಇದಂ ವಿಜಹ್ಯಾತ್ ॥೪೫॥

ನೋ ಚೇತ್ಪ್ರಮತ್ತಮಸದಿನ್ದ್ರಿಯವಾಜಿಸೂತಾ
ನೀತ್ವೋತ್ಪಥಂ ವಿಷಯದಸ್ಯುಷು ನಿಕ್ಷಿಪನ್ತಿ ।
ತೇ ದಸ್ಯವಃ ಸಹಯಸೂತಮಮುಂ ತಮೋಽನ್ಧೇ
ಸಂಸಾರಕೂಪ ಉರುಮೃತ್ಯುಭಯೇ ಕ್ಷಿಪನ್ತಿ ॥೪೬॥

ಪ್ರವೃತ್ತಂ ಚ ನಿವೃತ್ತಂ ಚ ದ್ವಿವಿಧಂ ಕರ್ಮ ವೈದಿಕಮ್ ।
ಆವರ್ತೇತ ಪ್ರವೃತ್ತೇನ ನಿವೃತ್ತೇನಾಶ್ನುತೇಽಮೃತಮ್ ॥೪೭॥

ಹಿಂಸ್ರಂ ದ್ರವ್ಯಮಯಂ ಕಾಮ್ಯಮಗ್ನಿಹೋತ್ರಾದ್ಯಶಾನ್ತಿದಮ್ ।
ದರ್ಶಶ್ಚ ಪೂರ್ಣಮಾಸಶ್ಚ ಚಾತುರ್ಮಾಸ್ಯಂ ಪಶುಃ ಸುತಃ ॥೪೮॥
ಏತದಿಷ್ಟಂ ಪ್ರವೃತ್ತಾಖ್ಯಂ ಹುತಂ ಪ್ರಹುತಮೇವ ಚ ।
ಪೂರ್ತಂ ಸುರಾಲಯಾರಾಮಕೂಪಾಜೀವ್ಯಾದಿಲಕ್ಷಣಮ್ ॥೪೯॥
ದ್ರವ್ಯಸೂಕ್ಷ್ಮವಿಪಾಕಶ್ಚ ಧೂಮೋ ರಾತ್ರಿರಪಕ್ಷಯಃ ।
ಅಯನಂ ದಕ್ಷಿಣಂ ಸೋಮೋ ದರ್ಶ ಓಷಧಿವೀರುಧಃ ॥೫೦॥
ಅನ್ನಂ ರೇತ ಇತಿ ಕ್ಷ್ಮೇಶ ಪಿತೃಯಾನಂ ಪುನರ್ಭವಃ ।
ಏಕೈಕಶ್ಯೇನಾನುಪೂರ್ವಂ ಭೂತ್ವಾ ಭೂತ್ವೇಹ ಜಾಯತೇ ॥೫೧॥
ನಿಷೇಕಾದಿಶ್ಮಶಾನಾನ್ತೈಃ ಸಂಸ್ಕಾರೈಃ ಸಂಸ್ಕೃತೋ ದ್ವಿಜಃ ।
ಇನ್ದ್ರಿಯೇಷು ಕ್ರಿಯಾಯಜ್ಞಾನ್ ಜ್ಞಾನದೀಪೇಷು ಜುಹ್ವತಿ ॥೫೨॥

ಇನ್ದ್ರಿಯಾಣಿ ಮನಸ್ಯೂರ್ಮೌ ವಾಚಿ ವೈಕಾರಿಕಂ ಮನಃ ।
ವಾಚಂ ವರ್ಣಸಮಾಮ್ನಾಯೇ ತಮೋಙ್ಕಾರೇ ಸ್ವರೇ ನ್ಯಸೇತ್ ।
ಓಙ್ಕಾರಂ ಬಿನ್ದೌ ನಾದೇ ತಂ ತಂ ತು ಪ್ರಾಣೇ ಮಹತ್ಯಮುಮ್ ॥

ಅಗ್ನಿಃ ಸೂರ್ಯೋ ದಿವಾ ಪ್ರಾಹ್ಣಃ ಶುಕ್ಲೋ ರಾಕೋತ್ತರಂ ಸ್ವರಾಟ್
ವಿಶ್ವಶ್ಚ ತೈಜಸಃ ಪ್ರಾಜ್ಞಸ್ತುರ್ಯ ಆತ್ಮಾ ಸಮನ್ವಯಾತ್ ॥೫೪॥

ದೇವಯಾನಮಿದಂ ಪ್ರಾಹುರ್ಭೂತ್ವಾ ಭೂತ್ವಾನುಪೂರ್ವಶಃ ।
ಆತ್ಮಯಾಜ್ಯುಪಶಾನ್ತಾತ್ಮಾ ಹ್ಯಾತ್ಮಸ್ಥೋ ನ ನಿವರ್ತತೇ ॥೫೫॥

ಯ ಏತೇ ಪಿತೃದೇವಾನಾಮಯನೇ ವೇದನಿರ್ಮಿತೇ ।
ಶಾಸ್ತ್ರೇಣ ಚಕ್ಷುಷಾ ವೇದ ಜನಸ್ಥೋಽಪಿ ನ ಮುಹ್ಯತಿ ॥೫೬॥

ಆದಾವನ್ತೇ ಜನಾನಾಂ ಸದ್ಬಹಿರನ್ತಃ ಪರಾವರಮ್ ।
ಜ್ಞಾನಂ ಜ್ಞೇಯಂ ವಚೋ ವಾಚ್ಯಂ ತಮೋ ಜ್ಯೋತಿಸ್ತ್ವಯಂ
ಸ್ವಯಮ್ ॥೫೭॥

ಅಬಾಧಿತೋಽಪಿ ಹ್ಯಾಭಾಸೋ ಯಥಾ ವಸ್ತುತಯಾ ಸ್ಮೃತಃ ।
ದುರ್ಘಟತ್ವಾದೈನ್ದ್ರಿಯಕಂ ತದ್ವದರ್ಥವಿಕಲ್ಪಿತಮ್ ॥೫೮॥

ಕ್ಷಿತ್ಯಾದೀನಾಮಿಹಾರ್ಥಾನಾಂ ಛಾಯಾ ನ ಕತಮಾಪಿ ಹಿ ।
ನ ಸಂಘಾತೋ ವಿಕಾರೋಽಪಿ ನ ಪೃಥಙ್ನಾನ್ವಿತೋ ಮೃಷಾ ॥೫೯॥

ಧಾತವೋಽವಯವಿತ್ವಾಚ್ಚ ತನ್ಮಾತ್ರಾವಯವೈರ್ವಿನಾ ।
ನ ಸ್ಯುರ್ಹ್ಯಸತ್ಯವಯವಿನ್ಯಸನ್ನವಯವೋಽನ್ತತಃ ॥೬೦॥

ಸ್ಯಾತ್ಸಾದೃಶ್ಯಭ್ರಮಸ್ತಾವದ್ವಿಕಲ್ಪೇ ಸತಿ ವಸ್ತುನಃ ।
ಜಾಗ್ರತ್ಸ್ವಾಪೌ ಯಥಾ ಸ್ವಪ್ನೇ ತಥಾ ವಿಧಿನಿಷೇಧತಾ ॥೬೧॥

ಭಾವಾದ್ವೈತಂ ಕ್ರಿಯಾದ್ವೈತಂ ದ್ರವ್ಯಾದ್ವೈತಂ ತಥಾತ್ಮನಃ ।
ವರ್ತಯನ್ಸ್ವಾನುಭೂತ್ಯೇಹ ತ್ರೀನ್ಸ್ವಪ್ನಾನ್ಧುನುತೇ ಮುನಿಃ ॥೬೨॥

ಕಾರ್ಯಕಾರಣವಸ್ತ್ವೈಕ್ಯಮರ್ಶನಂ ಪಟತನ್ತುವತ್ ।
ಅವಸ್ತುತ್ವಾದ್ವಿಕಲ್ಪಸ್ಯ ಭಾವಾದ್ವೈತಂ ತದುಚ್ಯತೇ ॥೬೩॥

ಯದ್ಬ್ರಹ್ಮಣಿ ಪರೇ ಸಾಕ್ಷಾತ್ಸರ್ವಕರ್ಮಸಮರ್ಪಣಮ್ ।
ಮನೋವಾಕ್ತನುಭಿಃ ಪಾರ್ಥ ಕ್ರಿಯಾದ್ವೈತಂ ತದುಚ್ಯತೇ ॥೬೪॥

ಆತ್ಮಜಾಯಾಸುತಾದೀನಾಮನ್ಯೇಷಾಂ ಸರ್ವದೇಹಿನಾಮ್ ।
ಯತ್ಸ್ವಾರ್ಥಕಾಮಯೋರೈಕ್ಯಂ ದ್ರವ್ಯಾದ್ವೈತಂ ತದುಚ್ಯತೇ ॥೬೫॥

ಯದ್ಯಸ್ಯ ವಾನಿಷಿದ್ಧಂ ಸ್ಯಾದ್ಯೇನ ಯತ್ರ ಯತೋ ನೃಪ ।
ಸ ತೇನೇಹೇತ ಕರ್ಮಾಣಿ ನರೋ ನಾನ್ಯೈರನಾಪದಿ ॥೬೬॥

ಏತೈರನ್ಯೈಶ್ಚ ವೇದೋಕ್ತೈರ್ವರ್ತಮಾನಃ ಸ್ವಕರ್ಮಭಿಃ ।
ಗೃಹೇಽಪ್ಯಸ್ಯ ಗತಿಂ ಯಾಯಾದ್ರಾಜಂಸ್ತದ್ಭಕ್ತಿಭಾಙ್ನರಃ ॥೬೭॥

ಯಥಾ ಹಿ ಯೂಯಂ ನೃಪದೇವ ದುಸ್ತ್ಯಜಾ-
ದಾಪದ್ಗಣಾದುತ್ತರತಾತ್ಮನಃ ಪ್ರಭೋಃ ।
ಯತ್ಪಾದಪಙ್ಕೇರುಹಸೇವಯಾ ಭವಾ-
ನಹಾರ್ಷೀನ್ನಿರ್ಜಿತದಿಗ್ಗಜಃ ಕ್ರತೂನ್ ॥೬೮॥

ಅಹಂ ಪುರಾಭವಂ ಕಶ್ಚಿದ್ಗನ್ಧರ್ವ ಉಪಬರ್ಹಣಃ ।
ನಾಮ್ನಾತೀತೇ ಮಹಾಕಲ್ಪೇ ಗನ್ಧರ್ವಾಣಾಂ ಸುಸಮ್ಮತಃ ॥೬೯॥

ರೂಪಪೇಶಲಮಾಧುರ್ಯಸೌಗನ್ಧ್ಯಪ್ರಿಯದರ್ಶನಃ ।
ಸ್ತ್ರೀಣಾಂ ಪ್ರಿಯತಮೋ ನಿತ್ಯಂ ಮತ್ತಸ್ತು ಪುರುಲಮ್ಪಟಃ ॥೭೦॥

ಏಕದಾ ದೇವಸತ್ರೇ ತು ಗನ್ಧರ್ವಾಪ್ಸರಸಾಂ ಗಣಾಃ ।
ಉಪಹೂತಾ ವಿಶ್ವಸೃಗ್ಭಿರ್ಹರಿಗಾಥೋಪಗಾಯನೇ ॥೭೧॥

ಅಹಂ ಚ ಗಾಯಂಸ್ತದ್ವಿದ್ವಾನ್ ಸ್ತ್ರೀಭಿಃ ಪರಿವೃತೋ ಗತಃ ।
ಜ್ಞಾತ್ವಾ ವಿಶ್ವಸೃಜಸ್ತನ್ಮೇ ಹೇಲನಂ ಶೇಪುರೋಜಸಾ ।
ಯಾಹಿ ತ್ವಂ ಶೂದ್ರತಾಮಾಶು ನಷ್ಟಶ್ರೀಃ ಕೃತಹೇಲನಃ ॥೭೨॥

ತಾವದ್ದಾಸ್ಯಾಮ್ಯಹಂ ಜಜ್ಞೇ ತತ್ರಾಪಿ ಬ್ರಹ್ಮವಾದಿನಾಮ್ ।
ಶುಶ್ರೂಷಯಾನುಷಙ್ಗೇಣ ಪ್ರಾಪ್ತೋಽಹಂ ಬ್ರಹ್ಮಪುತ್ರತಾಮ್ ॥೭೩॥

ಧರ್ಮಸ್ತೇ ಗೃಹಮೇಧೀಯೋ ವರ್ಣಿತಃ ಪಾಪನಾಶನಃ ।
ಗೃಹಸ್ಥೋ ಯೇನ ಪದವೀಮಞ್ಜಸಾ ನ್ಯಾಸಿನಾಮಿಯಾತ್ ॥೭೪॥

ಯೂಯಂ ನೃಲೋಕೇ ಬತ ಭೂರಿಭಾಗಾ
ಲೋಕಂ ಪುನಾನಾ ಮುನಯೋಽಭಿಯನ್ತಿ ।
ಯೇಷಾಂ ಗೃಹಾನಾವಸತೀತಿ ಸಾಕ್ಷಾ-
ದ್ಗೂಢಂ ಪರಂ ಬ್ರಹ್ಮ ಮನುಷ್ಯಲಿಙ್ಗಮ್ ॥೭೫॥

ಸ ವಾ ಅಯಂ ಬ್ರಹ್ಮ ಮಹದ್ವಿಮೃಗ್ಯಂ
ಕೈವಲ್ಯನಿರ್ವಾಣಸುಖಾನುಭೂತಿಃ ।
ಪ್ರಿಯಃ ಸುಹೃದ್ವಃ ಖಲು ಮಾತುಲೇಯ
ಆತ್ಮಾರ್ಹಣೀಯೋ ವಿಧಿಕೃದ್ಗುರುಶ್ಚ ॥೭೬॥

ನ ಯಸ್ಯ ಸಾಕ್ಷಾದ್ಭವಪದ್ಮಜಾದಿಭೀ
ರೂಪಂ ಧಿಯಾ ವಸ್ತುತಯೋಪವರ್ಣಿತಮ್ ।
ಮೌನೇನ ಭಕ್ತ್ಯೋಪಶಮೇನ ಪೂಜಿತಃ
ಪ್ರಸೀದತಾಮೇಷ ಸ ಸಾತ್ವತಾಂ ಪತಿಃ ॥೭೭॥

ಶ್ರೀಶುಕ ಉವಾಚ :

ಇತಿ ದೇವರ್ಷಿಣಾ ಪ್ರೋಕ್ತಂ ನಿಶಮ್ಯ ಭರತರ್ಷಭಃ ।
ಪೂಜಯಾಮಾಸ ಸುಪ್ರೀತಃ ಕೃಷ್ಣಂ ಚ ಪ್ರೇಮವಿಹ್ವಲಃ ॥೭೮॥

ಕೃಷ್ಣಪಾರ್ಥಾವುಪಾಮನ್ತ್ರ್ಯ ಪೂಜಿತಃ ಪ್ರಯಯೌ ಮುನಿಃ ।
ಶ್ರುತ್ವಾ ಕೃಷ್ಣಂ ಪರಂ ಬ್ರಹ್ಮ ಪಾರ್ಥಃ ಪರಮವಿಸ್ಮಿತಃ ॥೭೯॥

ಇತಿ ದಾಕ್ಷಾಯಣೀನಾಂ ತೇ ಪೃಥಗ್ವಂಶಾಃ ಪ್ರಕೀರ್ತಿತಾಃ ।
ದೇವಾಸುರಮನುಷ್ಯಾದ್ಯಾ ಲೋಕಾ ಯತ್ರ ಚರಾಚರಾಃ ॥೮೦॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಸಂಹಿತಾಯಾಂ ಸಪ್ತಮಸ್ಕನ್ಧೇ
ಪ್ರಹ್ಲಾದಾನುಚರಿತೇ ಯುಧಿಷ್ಠಿರ-ನಾರದ ಸಂವಾದೇ
ಸದಾಚಾರನಿರ್ಣಯೋ ನಾಮ ಪಞ್ಚದಶೋಽಧ್ಯಾಯಃ

ಇತಿ ಸಪ್ತಮಃ ಸ್ಕನ್ಧಃ ಸಮಾಪ್ತಃ

॥ ಹರಿಃ ಓಂ ತತ್ಸತ್ ॥

ಶ್ರೀಮಹಾಗಣಪತಯೇ ನಮಃ ಶ್ರೀಮಹಾಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ಶ್ರೀಮದ್ಭಾಗವತ (ನಾಲ್ಕನೆಯ ಸಂಪುಟ)

ಪಂಚಮಸ್ಕಂಧ ೨೦ನೆಯ ಅಧ್ಯಾಯ

ಇತರ ಆರು ದ್ವೀಪಗಳ ಮತ್ತು ಲೋಕಾಲೋಕ ಪರ್ವತದ ವರ್ಣನೆ

ಜನ್ಮಾದ್ಯಸ್ಯ ಯತೋಽನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃದಾ ಯ ಆದಿಕವಯೇ ಮುಹ್ಯನ್ತಿ ಯತ್ಸೂರಯಃ ।
ತೇಜೋವಾರಿಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋಽಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ॥

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಅತಃ ಪರಂ ಪ್ಲಕ್ಷಾದೀನಾಂ ಪ್ರಮಾಣಲಕ್ಷಣಸಂಸ್ಥಾನತೋ ವರ್ಷವಿಭಾಗ ಉಪವರ್ಣ್ಯತೇ ॥೧॥

"ರಾಜೇಂದ್ರನೇ! ಇಲ್ಲಿಯವರೆಗೆ ನಿನಗೆ ಜಂಬೂದ್ವೀಪವನ್ನು ವರ್ಣಿಸಿದೆನು. ಇನ್ನು ಪ್ಲಕ್ಷವೇ ಮುಂತಾದ ದ್ವೀಪಗಳ ಪ್ರಮಾಣ, ಲಕ್ಷಣ ಮತ್ತು ಆಕಾರಗಳನ್ನೂ, ಆ ದ್ವೀಪಗಳಲ್ಲಿರುವ ವರ್ಷಗಳ ವಿಭಾಗಗಳನ್ನೂ ವರ್ಣಿಸುತ್ತೇನೆ ; ಕೇಳು :

ಮೇರುಪರ್ವತವು ಜಂಬೂದ್ವೀಪದಿಂದ ಬಳಸಲ್ಪಟ್ಟಿರುವಂತೆ ಜಂಬೂ ದ್ವೀಪವೂ ತನ್ನಷ್ಟೇ ಅಳತೆ-ವಿಸ್ತಾರಗಳುಳ್ಳ (ಲಕ್ಷಯೋಜನದಷ್ಟು ವಿಶಾಲ ವಾದ) ಲವಣಸಮುದ್ರದಿಂದ ಸುತ್ತುವರಿಯಲ್ಪಟ್ಟಿದೆ. ಜಂಬೂದ್ವೀಪದಲ್ಲಿ ಎಷ್ಟು ಉನ್ನತವಾದ ನೇರಳೆಮರವಿದೆಯೋ–ಅಷ್ಟೇ ಎತ್ತರವಿರುವ ಅತಿದೊಡ್ಡ ಚಿನ್ನದ ಬಸರೀಮರವೂ ಈ ದ್ವೀಪದಲ್ಲಿದೆ. ಆದುದರಿಂದಲೇ ಇದಕ್ಕೆ ಪ್ಲಕ್ಷ ದ್ವೀಪವೆಂದು ಹೆಸರಾಯಿತು. ಇಲ್ಲಿ ಏಳು ನಾಲಿಗೆಗಳಿಂದ ಕಂಗೊಳಿಸುತ್ತಿರುವ

ಅಗ್ನಿದೇವನು ಬೆಳಗುತ್ತಿದ್ದಾನೆ. ಪ್ರಿಯವ್ರತಮಹಾರಾಜನ ಪುತ್ರನಾದ ಇಧ್ಮಜಿಹ್ವನು ಈ ದ್ವೀಪಕ್ಕೆ ಅಧಿಪತಿಯು. ಆತನು ಇದನ್ನು ಏಳು ವರ್ಷಗಳನ್ನಾಗಿ ವಿಂಗಡಿಸಿ ಆಯಾ ವರ್ಷದ ಹೆಸರನ್ನೇ ಹೊಂದಿರುವ ತನ್ನ ಪುತ್ರರಿಗೆ ಅವುಗಳ ಆಧಿಪತ್ಯವನ್ನು ಒಪ್ಪಿಸಿ ತಾನು ಅಧ್ಯಾತ್ಮಯೋಗ ವನ್ನಾಶ್ರಯಿಸಿ ಮುಕ್ತನಾದನು. ಶಿವ, ಯವಸ, ಸುಭದ್ರ, ಶಾಂತ, ಕ್ಷೇಮ, ಅಮೃತ ಮತ್ತು ಅಭಯ—ಎಂಬಿವೇ ಆ ಏಳು ವರ್ಷಗಳು. ಅವುಗಳಲ್ಲೂ ಏಳು ಪರ್ವತಗಳೂ ಮತ್ತು ಏಳು ನದಿಗಳೂ ಪ್ರಸಿದ್ಧವಾಗಿರೆ. ಮಣಿಕೂಟ, ವಜ್ರಕೂಟ, ಇಂದ್ರಸೇನ, ಜ್ಯೋತಿಷ್ಮಾನ್, ಸುಪರ್ಣ, ಹಿರಣ್ಯಷ್ಠೀವ ಮತ್ತು ಮೇಘಮಾಲ—ಎಂಬ ಏಳೂ ಗಡಿಯಾಗಿರುವ ಪರ್ವತಗಳು. ಹಾಗೆಯೇ ಅರುಣಾ, ನೃಮ್ಣಾ, ಅಂಗಿರಸೀ, ಸಾವಿತ್ರೀ, ಸುಪ್ರಭಾತಾ, ಋತಂಭರಾ ಮತ್ತು ಸತ್ಯಂಭರಾ—ಎಂಬ ಏಳೂ ಮಹಾನದಿಗಳು. ಅಲ್ಲಿ ಹಂಸ, ಪತಂಗ, ಊರ್ಧ್ವಾಯನ ಮತ್ತು ಸತ್ಯಾಂಗ—ಎಂಬ ಹೆಸರಿನ ನಾಲ್ಕು ವರ್ಣಗಳಿಗೆ ಸೇರಿದ ಜನರಿದ್ದಾರೆ. ಇವರು ಮೇಲೆ ಹೇಳಿದ ಮಹಾನದಿಗಳಲ್ಲಿ ಸ್ನಾನಮಾಡಿ ತಮ್ಮ ರಜೋಗುಣ-ತಮೋಗುಣಗಳನ್ನು ಕಳೆದುಕೊಂಡವರಾಗಿ ಸಾವಿರ ವರ್ಷಗಳ ಕಾಲದ ಆಯುಸ್ಸುಳ್ಳವರಾಗಿದ್ದಾರೆ. ಇವರ ದೇಹಗಳು ದೇವತೆಗಳ ದೇಹ ಗಳಂತೆಯೇ ಆಯಾಸ, ಬೆವರು—ಇವೇ ಮುಂತಾದ ದೋಷಗಳಿಂದ ರಹಿತವಾಗಿವೆ. ಸಂತಾನಗಳ ಜನನದ ವಿಷಯದಲ್ಲೂ ಇವರು ದೇವತೆ ಗಳನ್ನೇ ಹೋಲುತ್ತಾರೆ. ಇವರು ತ್ರಯೀವಿದ್ಯೆಯ ಮೂಲಕ ಮೂರು ವೇದಗಳಲ್ಲಿಯೂ ವರ್ಣಿತರಾಗಿ ಸ್ವರ್ಗಕ್ಕೆ ದ್ವಾರವಾಗಿರುವ ಭಗವಂತನಾದ ಸೂರ್ಯನನ್ನು ಹೀಗೆ ಉಪಾಸನೆ ಮಾಡುತ್ತಾರೆ :

(ಶ್ಲೋಕ 2-4)

ಪ್ರತ್ನಸ್ಯ ವಿಷ್ಣೋ ರೂಪಂ ಯತ್ಸತ್ಯಸ್ಯರ್ತಸ್ಯ ಬ್ರಹ್ಮಣಃ ।
ಅಮೃತಸ್ಯ ಚ ಮೃತ್ಯೋಶ್ಚ ಸೂರ್ಯಮಾತ್ಮಾನಮೀಮಹೀತಿ ॥೫॥

'ಸತ್ಯಕ್ಕೂ (ಆಚರಣೆಯಲ್ಲಿರುವ ಧರ್ಮಕ್ಕೂ), ಋತಕ್ಕೂ (ನಿಯಮ ರೂಪದಲ್ಲಿರುವ ಧರ್ಮಕ್ಕೂ), ವೇದಕ್ಕೂ, ಅಮೃತಕ್ಕೂ ಮತ್ತು ಮೃತ್ಯುವಿಗೂ ಆತ್ಮಸ್ವರೂಪನಾಗಿ, ಪುರಾಣಪುರುಷನಾದ, ವಿಷ್ಣುಸ್ವರೂಪಿ

ಯಾದ ಸೂರ್ಯಭಗವಂತನನ್ನು ನಾವು ಶರಣುಹೊಂದುತ್ತೇವೆ'–ಎಂದು ಆ ಸೂರ್ಯದೇವನನ್ನು ಸ್ತೋತ್ರಮಾಡುತ್ತಾರೆ.

ಪ್ಲಕ್ಷವೇ ಮುಂತಾದ ಐದು ದ್ವೀಪಗಳಲ್ಲಿ ಎಲ್ಲ ಮನುಷ್ಯರಿಗೂ ಹುಟ್ಟಿನಿಂದಲೇ ಆಯುಸ್ಸು, ಇಂದ್ರಿಯ, ಮನೋಬಲ, ಇಂದ್ರಿಯಬಲ, ಶಾರೀರಿಕ ಬಲ, ಬುದ್ಧಿ ಮತ್ತು ಪರಾಕ್ರಮಗಳು ಸಹಜವಾಗಿ ಒಂದೇ ಸಮನಾಗಿರು ತ್ತವೆ. ಪ್ಲಕ್ಷದ್ವೀಪವು ತನ್ನಂತೆಯೇ ಎರಡು ಲಕ್ಷ ಯೋಜನಗಳಷ್ಟು ವಿಸ್ತಾರವುಳ್ಳ ಕಬ್ಬಿನ ರಸದ ಕಡಲಿನಿಂದ ಸುತ್ತುವರಿಯಲ್ಪಟ್ಟಿದೆ. ಅದರ ಮುಂದೆ ಅದಕ್ಕೆ ಎರಡರಷ್ಟು ವಿಸ್ತಾರವುಳ್ಳ (ನಾಲ್ಕು ಲಕ್ಷ ಯೋಜನಗಳಷ್ಟು ವಿಸ್ತಾರವುಳ್ಳ) ಶಾಲ್ಮಲೀದ್ವೀಪವಿದೆ. ಇದು ತನ್ನಷ್ಟೇ ವಿಸ್ತಾರವುಳ್ಳ ಮದ್ಯದ ಸಮುದ್ರದಿಂದ ಬಳಸಲ್ಪಟ್ಟಿದೆ. ಪ್ಲಕ್ಷದ್ವೀಪದಲ್ಲಿ ಬಸರೀಮರವು ಇರುವಂತೆ ಇದರಲ್ಲಿ ಆ ಬಸರೀಮರದಷ್ಟೇ ಎತ್ತರವುಳ್ಳ ಬೂರುಗದ ಮರವಿದೆ. ಈ ವೃಕ್ಷವೇ, ತನ್ನ ವೇದಮಯವಾದ ರೆಕ್ಕೆಗಳಿಂದ ಕೂಡಿ ಶ್ರೀಭಗವಂತನನ್ನು ಸ್ತೋತ್ರಮಾಡುತ್ತಿರುವ ಪಕ್ಷಿರಾಜನಾದ ಗರುಡದೇವರ ಬೀಡೆಂದೂ, ಇದೇ ಆ ದ್ವೀಪದ ಹೆಸರಿಗೂ ಕಾರಣವೆಂದೂ ಹೇಳುತ್ತಾರೆ. ಪ್ರಿಯವ್ರತನ ಪುತ್ರನಾದ ಯಜ್ಞಬಾಹುವು ಆ ದ್ವೀಪಕ್ಕೆ ಅಧಿಪತಿಯು. ಆತನು ಈ ದ್ವೀಪವನ್ನು ಸರೋಚನ, ಸೌಮನಸ್ಯ, ರಮಣಕ, ದೇವವರ್ಷ, ಪಾರಭದ್ರ, ಆಪ್ಯಾಯನ ಮತ್ತು ಅವಿಜ್ಞಾತಗಳೆಂದು ಏಳಾಗಿ ವಿಭಾಗಮಾಡಿ ಅವುಗಳನ್ನು ಅದೇ ಹೆಸರುಗಳುಳ್ಳ ತನ್ನ ಪುತ್ರರಿಗೆ ಹಂಚಿಕೊಟ್ಟನು. ಅದರಲ್ಲೂ ಏಳು ವರ್ಷಪರ್ವತಗಳೂ ಮತ್ತು ಏಳು ಮಹಾನದಿಗಳೂ ಪ್ರಸಿದ್ಧವಾಗಿವೆ. ಸ್ವರಸ, ಶತಶೃಂಗ, ವಾಮದೇವ, ಕುಂದ, ಮುಕುಂದ, ಪುಷ್ಪವರ್ಷ ಮತ್ತು ಸಹಸ್ರಶ್ರುತಿ–ಇವೇ ಆ ಪರ್ವತಗಳ ನಾಮಧೇಯಗಳು. ಅನುಮತಿ, ಸಿನೀವಾಲೀ, ಸರಸ್ವತೀ, ಕುಹೂ, ರಜನೀ, ನಂದಾ ಮತ್ತು ರಾಕಾ-ಎಂಬಿವು ನದಿಗಳ ಹೆಸರುಗಳು. ಆ ವರ್ಷಗಳಲ್ಲಿ ವಾಸಮಾಡುತ್ತಿರುವ ಶ್ರುತಧರ, ವೀರ್ಯಧರ, ವಸುಂಧರ ಮತ್ತು ಈಷಂಧರ–ಎಂಬ ನಾಲ್ಕು ವರ್ಣಗಳಿಗೆ ಸೇರಿದ ಜನರು ವೇದಮಯನೂ, ಆತ್ಮಸ್ವರೂಪನೂ ಆಗಿರುವ ಭಗವಂತನಾದ ಚಂದ್ರದೇವನನ್ನು ವೇದಮಂತ್ರಗಳಿಂದ ಉಪಾಸನೆಮಾಡುತ್ತಾ ಹೀಗೆ ಸ್ತುತಿಸುತ್ತಾರೆ : (ಶ್ಲೋಕ 6-11)

ಸ್ವಗೋಭಿಃ ಪಿತೃದೇವೇಭ್ಯೋ ವಿಭಜನ್ಕೃಷ್ಣಶುಕ್ಲಯೋಃ ।
ಪ್ರಜಾನಾಂ ಸರ್ವಾಸಾಂ ರಾಜಾನ್ಧಃ ಸೋಮೋ ನ ಆಸ್ತ್ವಿತಿ ॥೧೨॥

'ತನ್ನ ಕಿರಣಗಳಿಂದ ಶುಕ್ಲಪಕ್ಷದಲ್ಲಿ ದೇವತೆಗಳನ್ನೂ ಮತ್ತು ಕೃಷ್ಣಪಕ್ಷದಲ್ಲಿ ಪಿತೃಗಳನ್ನೂ ಅನ್ನದಿಂದ ತೃಪ್ತಿಪಡಿಸುವವನೂ, (ಔಷಧಿಗಳಿಗೆ ಅಧಿಪತಿಯಾಗಿ) ಎಲ್ಲ ಪ್ರಜೆಗಳಿಗೂ ಅನ್ನವನ್ನು ನೀಡುವವನೂ ಆಗಿರುವ ಸೋಮದೇವನು ನಮಗೆಲ್ಲರಿಗೂ ರಾಜನಾಗಿ ನಮಗೆ ರಂಜನೆಯನ್ನುಂಟು ಮಾಡುತ್ತಿರಲಿ.'

ಇದೇ ರೀತಿಯಲ್ಲಿ ಮದ್ಯಸಮುದ್ರದ ಮುಂದೆ ಅದಕ್ಕೆ ಎರಡರಷ್ಟು ವಿಸ್ತಾರವುಳ್ಳ (ಎಂಟು ಲಕ್ಷಯೋಜನ ವಿಸ್ತಾರವುಳ್ಳ) ಕುಶದ್ವೀಪವಿದೆ. ಅದೂ ಕೂಡ ಹಿಂದೆ ಹೇಳಿದ ದ್ವೀಪಗಳಂತೆಯೇ ತನ್ನಷ್ಟೇ ವಿಸ್ತಾರವುಳ್ಳ ತುಪ್ಪದ ಸಮುದ್ರದಿಂದ ಬಳಸಲ್ಪಟ್ಟಿದೆ. ಇದರಲ್ಲಿ ಶ್ರೀಭಗವಂತನು ನಿರ್ಮಿಸಿರುವ ಒಂದು ದರ್ಭೆಯ ತೆಂಡೆಯಿರುವುದರಿಂದ ಅದಕ್ಕೆ ಕುಶದ್ವೀಪವೆಂಬ ಹೆಸರು ಬಂದಿದೆ. ಇದು ಮತ್ತೊಂದು ಅಗ್ನಿಯಂತೆಯೇ ಇದ್ದು ತನ್ನ ಹುಲ್ಲುಗಳ ಕಾಂತಿಯಿಂದ ಎಲ್ಲ ದಿಕ್ಕುಗಳನ್ನೂ ಬೆಳಗಿಸುತ್ತಿದೆ. ಎಲೈ ರಾಜೇಂದ್ರನೇ! ಪ್ರಿಯವ್ರತನ ಪುತ್ರನಾದ ಹಿರಣ್ಯರೇತಮಹಾರಾಜನು ಆ ದ್ವೀಪಕ್ಕೆ ಅಧಿಪತಿಯು. ಆತನು ಆ ದ್ವೀಪವನ್ನು ಏಳಾಗಿ ವಿಭಾಗಿಸಿ ಅವುಗಳಲ್ಲಿ ಒಂದೊಂದನ್ನೂ ತನ್ನ ಪುತ್ರರಾದ ವಸು, ವಸುದಾನ, ದೃಢರುಚಿ, ನಾಭಿಗುಪ್ತ, ಸ್ತುತ್ಯವ್ರತ, ವಿವಿಕ್ತ ಮತ್ತು ವಾಮದೇವ-ಎಂಬ ಏಳು ಮಂದಿಗೆ ಹಂಚಿಕೊಟ್ಟು ತಾನು ತಪಸ್ಸನ್ನಾಚರಿಸಲು ಹೊರಟುಹೋದನು. ಅವುಗಳ ಗಡಿಗಳನ್ನೂ ನಿರ್ಧರಿಸುವ ಏಳು ಪರ್ವತಗಳುಂಟು ಮತ್ತು ಏಳು ನದಿಗಳೂ ಅಲ್ಲಿ ಪ್ರವಹಿಸುತ್ತವೆ. ಚಕ್ರ, ಚತುಃಶೃಂಗ, ಕಪಿಲ, ಚಿತ್ರಕೂಟ, ದೇವಾನೀಕ, ಊರ್ಧ್ವರೋಮ ಮತ್ತು ದ್ರವಿಣ-ಎಂಬ ಏಳೂ ಆ ಎಲ್ಲೆಯ ಪರ್ವತಗಳು. ರಸಕುಲ್ಯಾ, ಮಧುಕುಲ್ಯಾ, ಮಿತ್ರವಿಂದಾ, ಶ್ರುತವಿಂದಾ, ದೇವಗರ್ಭಾ, ಘೃತಚ್ಯುತಾ ಮತ್ತು ಮಂತ್ರಮಾಲಾ ಎಂಬ ಏಳೂ ಅಲ್ಲಿ ಪ್ರವಹಿಸುತ್ತಿರುವ ಮಹಾನದಿಗಳು. ಈ ನದಿಗಳಲ್ಲಿ ಮಿಂದು ಕುಶದ್ವೀಪ ನಿವಾಸಿಗಳಾದ ಕುಶಲ, ಕೋವಿದ, ಅಭಿಯುಕ್ತ ಮತ್ತು ಕುಲಕರೆಂಬ ನಾಲ್ಕು ವರ್ಣದ ಪುರುಷರು ಅಗ್ನಿಸ್ವರೂಪನಾದ, ಭಗವಂತನಾದ ಶ್ರೀಹರಿ

ಯನ್ನು ಯಜ್ಞವೇ ಮುಂತಾದ ಕರ್ಮಕೌಶಲದ ಮೂಲಕ ಉಪಾಸನೆ ಮಾಡುತ್ತಾ ಹೀಗೆ ಸ್ತುತಿಸುತ್ತಾರೆ : (ಶ್ಲೋಕ 13-16)

ಪರಸ್ಯ ಬ್ರಹ್ಮಣಃ ಸಾಕ್ಷಾಜ್ಜಾತವೇದೋಽಸಿ ಹವ್ಯವಾಟ್ ।
ದೇವಾನಾಂ ಪುರುಷಾಙ್ಗಾನಾಂ ಯಜ್ಞೇನ ಪುರುಷಂ ಯಜೇತಿ ॥೧೭॥

'ಎಲೈ ಅಗ್ನಿದೇವನೇ! ನೀನು ಪರಬ್ರಹ್ಮಕ್ಕೇ ಸಾಕ್ಷಾತ್ತಾಗಿ ಹವಿಸ್ಸನ್ನು ಕೊಂಡೊಯ್ಯುವವನು. ಆದುದರಿಂದ ಶ್ರೀಭಗವಂತನಿಗೆ ಅಂಗಭೂತ ರಾಗಿರುವ ದೇವತೆಗಳನ್ನು ಕುರಿತು ನಾವು ಮಾಡುವ ಯಜ್ಞಗಳ ಮೂಲಕ ಅಂಗಿಯಾಗಿರುವ ಆ ಶ್ರೀಹರಿಗೇ ಯಜ್ಞಪೂಜೆಯು ಸಂತೃಪ್ತಿಯುಂಟಾಗು ವಂತೆ ಮಾಡು.'

ಎಲೈ ರಾಜನೇ! ತುಪ್ಪದ ಸಮುದ್ರಕ್ಕೆ ಹೊರಗಡೆಯಲ್ಲಿ ಅದಕ್ಕೆ ಎರಡರಷ್ಟು ವಿಸ್ತಾರವಾಗಿರುವ (ಹದಿನಾರು ಲಕ್ಷಯೋಜನ ವಿಸ್ತಾರವುಳ್ಳ) ಕ್ರೌಂಚದ್ವೀಪವಿದೆ. ಕುಶದ್ವೀಪವು ತುಪ್ಪದ ಸಮುದ್ರದಿಂದ ಬಳಸಲ್ಪಟ್ಟಿರು ವಂತೆ ಇದು ತನ್ನಷ್ಟೇ ವಿಸ್ತಾರವುಳ್ಳ ಹಾಲಿನ ಸಮುದ್ರದಿಂದ ಸುತ್ತುವರಿಯ ಲ್ಪಟ್ಟಿದೆ. ಇಲ್ಲಿ ಕ್ರೌಂಚವೆಂಬ ಮಹಾಪರ್ವತವು ಇರುವುದರಿಂದ ಈ ದ್ವೀಪಕ್ಕೆ ಕ್ರೌಂಚದ್ವೀಪ ಎಂದು ಹೆಸರಾಯಿತು. ಈ ಪರ್ವತವು ಹಿಂದೆ ಸ್ವಾಮೀಕಾರ್ತಿಕೇಯನ ಶಕ್ತ್ಯಾಯುಧದಿಂದ ಭೇದಿಸಲ್ಪಟ್ಟು ಗಾಯ ಗೊಂಡಿದ್ದರೂ ಕ್ಷೀರಸಮುದ್ರದಿಂದ ನೆನೆಸಲ್ಪಟ್ಟು ವರುಣದೇವರ ರಕ್ಷಣೆಗೂ ಒಳಪಟ್ಟು ಭಯರಹಿತವಾಯಿತು. ಪ್ರಿಯವ್ರತನ ಪುತ್ರ ಘೃತಪೃಷ್ಠನು ಈ ಪರ್ವತಕ್ಕೆ ಅಧಿಪತಿಯಾಗಿದ್ದನು. ಆತನು ಮಹಾಜ್ಞಾನಿಯು. ಆ ದ್ವೀಪ ವನ್ನು ಏಳು ವರ್ಷಗಳನ್ನಾಗಿ ವಿಂಗಡಿಸಿ ಅವುಗಳನ್ನು ಆಯಾ ವರ್ಷದ ಹೆಸರನ್ನೇ ಹೊಂದಿರುವ ತನ್ನ ಏಳು ಮಂದಿ ಪುತ್ರರಿಗೆ ಹಂಚಿಕೊಟ್ಟು ಅವರನ್ನು ಅಲ್ಲಿ ತನ್ನ ಉತ್ತರಾಧಿಕಾರಿಗಳನ್ನಾಗಿ ನೇಮಿಸಿ, ಸಮಸ್ತ ಜೀವಿಗಳಿಗೂ ತಾನೇ ಅಂತರಾತ್ಮನಾಗಿ ಪರಮಮಂಗಲಮಯವಾದ ಕೀರ್ತಿಯುಳ್ಳ ಭಗವಂತನಾದ ಶ್ರೀಹರಿಯ ಅಡಿದಾವರೆಗಳನ್ನು ಶರಣು ಹೊಂದಿದನು. ಅಮ, ಮಧುರುಹ, ಮೇಘಪೃಷ್ಠ, ಸುಧಾಮಾ, ಭ್ರಾಜಿಷ್ಠ, ಲೋಹಿತಾರ್ಣ ಮತ್ತು ವನಸ್ಪತಿ–ಎಂಬುವರೇ ಘೃತಪೃಷ್ಠಮಹಾ

ರಾಜನ ಪುತ್ರರು. ಅವರ ವರ್ಷಗಳಲ್ಲಿಯೂ ಏಳು ಕುಲಪರ್ವತಗಳೂ ಮತ್ತು ಏಳು ನದಿಗಳೂ ವಿರಾಜಿಸುತ್ತಿವೆ. ಶುಕ್ಲ, ವರ್ಧಮಾನ, ಭೋಜನ, ಉಪಬರ್ಹಿಣ, ನಂದ, ನಂದನ, ಸರ್ವತೋಭದ್ರ–ಎಂಬಿವೇ ಏಳು ಪರ್ವತಗಳು. ಅಭಯಾ, ಅಮೃತೌಘಾ, ಆರ್ಯಕಾ, ತೀರ್ಥವತೀ, ತೃಪ್ತಿರೂಪವತೀ, ಪವಿತ್ರವತೀ ಮತ್ತು ಶುಕ್ಲಾ–ಎಂಬಿವು ಅಲ್ಲಿಯ ಏಳು ನದಿಗಳು. ಅವುಗಳ ಪವಿತ್ರವೂ, ನಿರ್ಮಲವೂ ಆದ ಜಲವನ್ನು ಸೇವಿಸುವ ಅಲ್ಲಿಯ ಪುರುಷ, ಋಷಭ, ದ್ರವಿಮ ಮತ್ತು ದೇವಕ–ಎಂಬ ನಾಲ್ಕು ವರ್ಣಗಳಿಗೆ ಸೇರಿದ ಅಲ್ಲಿಯ ನಿವಾಸಿಗಳು ನೀರುತುಂಬಿದ ಅಂಜಲಿಗಳಿಂದ ನೀರಿನ ದೇವತೆಯಾದ ವರುಣದೇವರನ್ನು ಉಪಾಸನೆಮಾಡುವರು. ಅವರು ಈ ಮಂತ್ರದಿಂದ ಜಲಾಧಿಪತಿಯನ್ನು ಪೂಜಿಸುತ್ತಾರೆ. (ಶ್ಲೋಕ 18-22)

ಆಪಃ ಪುರುಷವೀರ್ಯಾಃ ಸ್ಥ ಪುನನ್ತೀರ್ಭೂರ್ಭುವಃ ಸುವಃ ।
ತಾ ನಃ ಪುನೀತಾಮೀವಘ್ನೀಃ ಸ್ಪೃಶತಾಮಾತ್ಮನಾ ಭುವ ಇತಿ ॥೨೩॥

'ಎಲೈ ಜಲದೇವತೆಯೇ! ನೀನು ಪರಮಪುರುಷನಿಂದ ಸಾಮರ್ಥ್ಯವನ್ನು ಪಡೆದಿದ್ದೀಯೆ. ಭೂಃ-ಭುವಃ-ಸುವಃ–ಎಂಬ ಮೂರು ಲೋಕಗಳನ್ನೂ ಪವಿತ್ರಗೊಳಿಸುತ್ತಿದ್ದೀಯೆ. ಸ್ವಾಭಾವಿಕವಾಗಿಯೇ ಪಾವನಗೊಳಿಸುವ ಶಕ್ತಿಯನ್ನು ಹೊಂದಿದ್ದೀಯೆ. ನಮ್ಮ ಶರೀರದಿಂದ ನಿನ್ನನ್ನು ಮುಟ್ಟುತ್ತಿರುವ ನಮ್ಮ ಅಂಗಗಳನ್ನು ಪವಿತ್ರಗೊಳಿಸು.'

ಇದೇ ರೀತಿಯಲ್ಲೇ ಕ್ಷೀರಸಮುದ್ರಕ್ಕಿಂತಲೂ ಆಚೆಗೆ ಅದರ ನಾಲ್ಕು ಕಡೆಗಳಲ್ಲೂ ಮೂವತ್ತೆರಡು ಲಕ್ಷಯೋಜನ ವಿಸ್ತಾರವುಳ್ಳ ಶಾಕದ್ವೀಪವಿದೆ. ಈ ಶಾಕದ್ವೀಪವನ್ನು ಇದರಷ್ಟೇ ವಿಸ್ತಾರವುಳ್ಳ ಮೊಸರುಕೆನೆಯ ಸಮುದ್ರವು ಬಳಸಿಕೊಂಡಿದೆ. ಈ ದ್ವೀಪದಲ್ಲಿ ಶಾಕವೆಂಬ ಹೆಸರಿನ ಮಹಾವೃಕ್ಷವೊಂದುಂಟು. ಈ ಕ್ಷೇತ್ರಕ್ಕೆ ಶಾಕದ್ವೀಪವೆಂದು ಹೆಸರು ಬರಲು ಈ ವೃಕ್ಷವೇ ಕಾರಣವು ಮತ್ತು ಈ ವೃಕ್ಷವು ಅದ್ಭುತವಾದ ಪರಿಮಳದಿಂದ ಘಮ-ಘಮಿಸುತ್ತಾ ಇಡೀ ದ್ವೀಪವನ್ನು ತನ್ನ ಸುವಾಸನೆಯಿಂದ ತುಂಬುತ್ತಿದೆ. ಇದರ ಅಧಿಪತಿಯಾದ ಮೇಧಾತಿಥಿಯೆಂಬುವನೂ ಕೂಡ ಪ್ರಿಯವ್ರತಮಹಾರಾಜನ ಪುತ್ರನೇ. ಆತನೂ ತನ್ನ ಈ ದ್ವೀಪವನ್ನು ಏಳು ವರ್ಷಗಳನ್ನಾಗಿ ವಿಭಾಗ

ಮಾಡಿ ಅವುಗಳ ಆಧಿಪತ್ಯವನ್ನು ಆಯಾ ದ್ವೀಪದ ಹೆಸರನ್ನೇ ಹೊಂದಿರುವ ತನ್ನ ಪುತ್ರರಾದ ಪುರೋಜವ, ಮನೋಜವ, ಪವಮಾನ, ಧೂಮ್ರಾನೀಕ, ಚಿತ್ರರೇಫ, ಬಹುರೂಪ ಮತ್ತು ವಿಶ್ವಧಾರ ಎಂಬುವರಿಗೆ ಒಪ್ಪಿಸಿಬಿಟ್ಟು, ತಾನು ಭಗವಂತನಾದ ಅನಂತನಲ್ಲಿ ಮನಸ್ಸನ್ನಿಟ್ಟು ತಪೋವನಕ್ಕೆ ತೆರಳಿಬಿಟ್ಟನು. ಈ ವರ್ಷಗಳಲ್ಲಿಯೂ ಏಳು ಗಡಿಯ ಪರ್ವತಗಳೂ ಮತ್ತು ಏಳು ನದಿಗಳೂ ಕಂಗೊಳಿಸುತ್ತಿವೆ. ಈಶಾನ, ಉರುಶೃಂಗ, ಬಲಭದ್ರ, ಶತಕೇಸರ, ಸಹಸ್ರಸ್ರೋತ, ದೇವಪಾಲ ಮತ್ತು ಮಹಾಸನ–ಎಂಬ ಏಳೂ ಎಲ್ಲೆಯನ್ನು ನಿರ್ಧರಿಸುವ ಗಿರಿಗಳು ಮತ್ತು ಅನಘಾ, ಆಯುರ್ದಾ, ಉಭಯಸ್ಪೃಷ್ಟಿ, ಅಪರಾಜಿತಾ, ಪಂಚಪದೀ, ಸಹಸ್ರಸ್ತುತಿ ಮತ್ತು ನಿಜಧೃತಿ ಎಂಬಿವೇ ಆ ಏಳು ಮಹಾನದಿಗಳು. ಆ ವರ್ಷದಲ್ಲಿರುವ ಋತವ್ರತ, ಸತ್ಯವ್ರತ, ದಾನವ್ರತ ಮತ್ತು ಅನುವ್ರತರೆಂಬುವರು ಅಲ್ಲಿಯ ನಾಲ್ಕು ವರ್ಣದವರು. ಆ ನಾಲ್ಕು ವರ್ಣದವರೂ ಪ್ರಾಣಾಯಾಮದಿಂದ ತಮ್ಮ ರಜೋಗುಣ-ತಮೋಗುಣಗಳನ್ನು ನೀಗಿದವರಾಗಿ ವಾಯುದೇವರೂಪಿ ಯಾದ ಶ್ರೀಹರಿಯನ್ನು ಆರಾಧಿಸುತ್ತಾರೆ. ಈ ಮಂತ್ರವನ್ನು ಜಪಿಸುತ್ತಾ ಅವರು ಶ್ರೀಹರಿಯನ್ನು ಉಪಾಸನೆಮಾಡುತ್ತಾರೆ. (ಶ್ಲೋಕ 24-27)

ಅನ್ತಃ ಪ್ರವಿಶ್ಯ ಭೂತಾನಿ ಯೋ ಬಿಭರ್ತ್ಯಾತ್ಮಕೇತುಭಿಃ ।
ಅನ್ತರ್ಯಾಮೀಶ್ವರಃ ಸಾಕ್ಷಾತ್ಪಾತು ನೋ ಯದ್ವಶೇ ಸ್ಫುಟಮ್ ॥

'ಯಾವನು ತನ್ನ ಪ್ರಾಣಾಪಾನಾದಿ ವೃತ್ತಿಗಳೆಂಬ ಧ್ವಜಗಳೊಡನೆ ಕೂಡಿ ಪ್ರಾಣಿಗಳ ಒಳಹೊಕ್ಕು ಅವುಗಳನ್ನು ರಕ್ಷಿಸುತ್ತಿದ್ದಾನೆಯೋ ಮತ್ತು ಜಗತ್ತೆಲ್ಲವೂ ಸ್ಪಷ್ಟವಾಗಿ ಯಾವನಿಗೆ ಅಧೀನವಾಗಿದೆಯೋ–ಆ ಅಂತರ್ಯಾಮಿಯಾಗಿರುವ ಸಾಕ್ಷಾದ್ವಾಯುರೂಪಿಯಾದ ಶ್ರೀಭಗವಂತನು ನಮ್ಮನ್ನು ರಕ್ಷಿಸಲಿ.'

ಹೀಗೆಯೇ ಕೆನೆಮೊಸರಿನ ಸಮುದ್ರಕ್ಕೆ ಆಚೆ ಅದರ ನಾಲ್ಕು ಕಡೆಗಳಲ್ಲಿಯೂ ಅದಕ್ಕೆ ಎರಡರಷ್ಟು ವಿಸ್ತಾರವುಳ್ಳ (ಅರುವತ್ತು ನಾಲ್ಕು ಲಕ್ಷ ಯೋಜನಗಳ ವಿಸ್ತಾರವುಳ್ಳ) ಪುಷ್ಕರದ್ವೀಪವಿದೆ. ಅದನ್ನು ಅದರಷ್ಟೇ ವಿಸ್ತಾರವುಳ್ಳ ಸಿಹಿನೀರಿನ ಸಮುದ್ರವು ಬಳಸಿಕೊಂಡಿದೆ. ಅಲ್ಲಿ ಲಕ್ಷಾಂತರ

ಸುವರ್ಣಮಯವಾದ ದಳಗಳಿಂದ ಕೂಡಿ ಅಗ್ನಿಯ ಶಿಖೆಯಂತೆ ತೊಳ-ತೊಳಗಿ ಬೆಳಗುತ್ತಿರುವ ಒಂದು ದೊಡ್ಡ ಕೆಂದಾವರೆಯಿದೆ. ಅದನ್ನು ಬ್ರಹ್ಮ ದೇವರ ಆಸನವೆಂದು ತಿಳಿಯುತ್ತಾರೆ. (ದ್ವೀಪಕ್ಕೆ ಪುಷ್ಕರವೆಂಬ ಹೆಸರು ಬರುವುದಕ್ಕೆ ಆ ಕಮಲವೇ ಕಾರಣವು). ಆ ದ್ವೀಪದ ನಟ್ಟನಡುವೆ ಅದರ ಪೂರ್ವ ಮತ್ತು ಪಶ್ಚಿಮವಿಭಾಗಗಳ ಗಡಿಗಳನ್ನು ನಿರ್ಧರಿಸುವ ಮಾನ ಸೋತ್ತರವೆಂಬ ಒಂದೇ ಒಂದು ಪರ್ವತವಿದೆ. ಆ ಪರ್ವತದ ಎತ್ತರ ಹತ್ತು ಸಾವಿರ ಯೋಜನಗಳು ಮತ್ತು ಪರ್ವತದ ಉದ್ದವೂ ಅಷ್ಟೇ ಆಗಿದೆ. ಅದರ ಮೇಲೆ ನಾಲ್ಕು ದಿಕ್ಕುಗಳಲ್ಲಿಯೂ ಕ್ರಮವಾಗಿ ಇಂದ್ರನೇ ಮುಂತಾದ ನಾಲ್ಕು ದಿಕ್ಪಾಲಕರ ರಾಜಧಾನಿಗಳು ಬೆಳುಗುತ್ತಿವೆ. ಆ ನಗರಿಗಳ ಮೇಲ್ಗಡೆಯಲ್ಲಿ ಸಂಚರಿಸುವ ಸೂರ್ಯದೇವನ ರಥದ ಸಂವತ್ಸರವೆಂಬ ಚಕ್ರವು ದೇವತೆ ಗಳಿಗೆ ಹಗಲು-ರಾತ್ರಿಗಳೆನಿಸಿದ ಉತ್ತರಾಯಣ ಮತ್ತು ದಕ್ಷಿಣಾಯನರೂಪ ವಾಗಿ ಸದಾ ಸುತ್ತುತ್ತಿರುವುದು. ಆ ದ್ವೀಪಕ್ಕೆ ಅಧಿಪತಿಯಾದ ಪ್ರಿಯವ್ರತ ಪುತ್ರನಾದ ವೀತಿಹೋತ್ರಮಹಾರಾಜನೂ ಕೂಡ ತನ್ನ ಪುತ್ರರಾದ ರಮಣಕ ಮತ್ತು ಧಾತಕಿ ಎಂಬುವರಿಗೆ ಎರಡು ವರ್ಷಗಳ ಅಧಿಪತ್ಯವನ್ನು ಒಪ್ಪಿಸಿ ತನ್ನ ಅಣ್ಣಂದಿರಂತೆ ಭಗವತ್ಸೇವೆಯಲ್ಲೇ ತತ್ಪರನಾಗಿದ್ದಾನೆ. ಅಲ್ಲಿಯ ನಿವಾಸಿಗಳು ಬ್ರಹ್ಮರೂಪಿಯಾದ ಶ್ರೀಭಗವಂತನನ್ನು ಬ್ರಹ್ಮಲೋಕ ಪ್ರಾಪ್ತಿಯೇ ಮುಂತಾದ ಇಷ್ಟಾರ್ಥಗಳಿಗೆ ಸಾಧನವಾದ ಕರ್ಮಗಳಿಂದ ಆರಾಧಿಸುತ್ತಾ ಈ ಮಂತ್ರಜಪದಿಂದ ಸ್ತೋತ್ರಮಾಡುತ್ತಾರೆ. (ಶ್ಲೋಕ 29-32)

ಯತ್ತತ್ಕರ್ಮಮಯಂ ಲಿಙ್ಗಂ ಬ್ರಹ್ಮಲಿಙ್ಗಂ ಜನೋಽರ್ಚಯೇತ್ ।
ಏಕಾನ್ತಮದ್ವಯಂ ಶಾನ್ತಂ ತಸ್ಮೈ ಭಗವತೇ ನಮ ಇತಿ ॥೩೩॥

‘ಕರ್ಮಫಲಸ್ವರೂಪನಾಗಿ, ಬ್ರಹ್ಮಸ್ವರೂಪವನ್ನು ಪ್ರಕಾಶಪಡಿಸುವವನಾಗಿ, ಬ್ರಹ್ಮ(ವೇದ) ಪ್ರತಿಪಾದ್ಯನಾಗಿ, ಪರಬ್ರಹ್ಮವೊಂದರಲ್ಲೇ ತತ್ಪರನಾಗಿ, ಅದ್ವಿತೀಯನಾಗಿ, ಸರ್ವರಿಂದಲೂ ಪೂಜಿತನಾಗಿರುವ, ಶಾಂತಸ್ವರೂಪಿಯಾದ, ಭಗವಂತನಾದ ಬ್ರಹ್ಮದೇವರಿಗೆ ನಮಸ್ಕಾರವು.’

ಶ್ರೀಶುಕ ಮಹರ್ಷಿಗಳು ಹೇಳುತ್ತಾರೆ :

ಕೇಳು, ಪರೀಕ್ಷಿದ್ರಾಜ! ಆ ಸಿಹಿನೀರಿನಿಂದಾಚೆ ಲೋಕಾಲೋಕವೆಂಬ ಪರ್ವತವಿದೆ. ಅದು ಸೂರ್ಯನ ಬೆಳಕು ಬೀಳುವ ಪ್ರದೇಶಗಳಿಗೂ ಮತ್ತು ಬೆಳಕು ಬೀಳದ ಕತ್ತಲೆಯ ಪ್ರದೇಶಗಳಿಗೂ ಗಡಿಯಾಗಿ ಮಧ್ಯಭಾಗದಲ್ಲಿದೆ. ಮೇರುವಿಗೂ ಮಾನಸೋತ್ತರಪರ್ವತಕ್ಕೂ ಎಷ್ಟು ದೂರವಿದೆಯೋ–ಅಷ್ಟೇ ದೂರದ ವಿಸ್ತಾರವುಳ್ಳ (ಒಂದು ಕೋಟಿ ಐವತ್ತೇಳು ಲಕ್ಷದ ಐವತ್ತು ಸಾವಿರ ಯೋಜನಗಳ ವಿಸ್ತಾರವುಳ್ಳ) ಭೂಮಿಯು ಸಿಹಿನೀರಿನ ಸಮುದ್ರದ ಆಚೆಗೆ ಇರುವುದು. ಅದರ ಮುಂದೆ ಕನ್ನಡಿಯಂತೆ ಕಂಗೊಳಿಸುತ್ತಿರುವ ಶುದ್ಧವಾದ ಚಿನ್ನದ ನೆಲವಿದೆ. ಅಲ್ಲಿ ಬಿದ್ದ ಪದಾರ್ಥವು ಮತ್ತೆ ಯಾರಿಗೂ ಸಿಕ್ಕುವುದಿಲ್ಲ. ಆದುದರಿಂದ ಅಲ್ಲಿ ದೇವತೆಗಳನ್ನು ಬಿಟ್ಟು ಬೇರೆ ಯಾರೂ ವಾಸಮಾಡುವುದಿಲ್ಲ. ಬೆಳಕು ಮತ್ತು ಕತ್ತಲೆಗಳ ಪ್ರವೇಶಗಳೆರಡಕ್ಕೂ ನಡುವಿನ ಗಡಿಯಾಗಿರುವುದರಿಂದ ಆ ಪರ್ವತಕ್ಕೆ ಲೋಕಾಲೋಕವೆಂಬ ಹೆಸರು ಬಂದಿದೆ. ಪರಮಾತ್ಮನು ಅದನ್ನು ಮೂರು ಲೋಕಗಳಿಗೂ ಹೊರಗೆ ಅವುಗಳ ನಾಲ್ಕು ಕಡೆಗಳ ಎಲ್ಲೆಗಳ ರೂಪದಲ್ಲಿ ಸ್ಥಾಪಿಸಿದ್ದಾನೆ. ಅದು ಎಷ್ಟು ಎತ್ತರವಾಗಿದೆಯೆಂದರೆ–ಅದರ ಒಂದು ಕಡೆಯಿಂದ ಮೂರು ಲೋಕಗಳಿಗೂ ಪ್ರಕಾಶವನ್ನು ಬೀರುವ ಸೂರ್ಯನಿಂದ ಹಿಡಿದು ಧ್ರುವನಕ್ಷತ್ರದವರೆಗೆ ಇರುವ ಇಡೀ ಜ್ಯೋತಿರ್ಮಂಡಲದ ಕಿರಣಗಳು ಮತ್ತೊಂದು ಕಡೆಗೆ ಹೋಗಲಾರವು. ವಿದ್ವಾಂಸರು-ಪ್ರಮಾಣ, ಲಕ್ಷಣ ಮತ್ತು ಸ್ಥಿತಿಗಳಿಗೆ ತಕ್ಕಂತೆ ಸಂಪೂರ್ಣಲೋಕಗಳ ವಿಸ್ತಾರವು ಇಷ್ಟೇ ಎಂದು ನಿರೂಪಿಸಿದ್ದಾರೆ. ಈ ಇಡೀ ಭೂಗೋಳದ ಪರಿಮಾಣವು ಐವತ್ತು ಕೋಟಿ ಯೋಜನಗಳು. ಲೋಕಾಲೋಕಪರ್ವತವು ಇದರ ನಾಲ್ಕನೇ ಒಂದು ಭಾಗದಷ್ಟಿದೆ. (ಹನ್ನೆರಡೂವರೆ ಕೋಟಿ ಯೋಜನಗಳಷ್ಟು ವಿಸ್ತಾರವಾಗಿದೆ.) ಚರಾಚರಗುರುವಾದ ಬ್ರಹ್ಮದೇವರು ಅದರ ಮೇಲೆ ನಾಲ್ಕು ದಿಕ್ಕುಗಳಲ್ಲಿಯೂ ಸಂಪೂರ್ಣಲೋಕಗಳ ಸ್ಥಿತಿಗೇ ಆಧಾರವಾಗಿರುವಂತೆ ಋಷಭ, ಪುಷ್ಕರಚೂಡ, ವಾಮನ ಮತ್ತು ಅಪರಾಜಿತಗಳೆಂಬ ನಾಲ್ಕು ದಿಗ್ಗಜಗಳನ್ನು ನೇಮಿಸಿದ್ದಾರೆ. ಆ ನಾಲ್ಕು ದಿಗ್ಗಜಗಳ ಮತ್ತು ತನ್ನ ಅಂಶಸ್ವರೂಪವಾಗಿರುವ ಇಂದ್ರಾದಿಲೋಕಪಾಲಕರ ಬಗೆ-ಬಗೆಯ ಶಕ್ತಿ-

ಸಾಮರ್ಥ್ಯಗಳನ್ನು ವೃದ್ಧಿಪಡಿಸುವುದಕ್ಕಾಗಿಯೂ ಮತ್ತು ಸಮಸ್ತಲೋಕಗಳ ಕ್ಷೇಮಕ್ಕಾಗಿಯೂ ಪರಮೈಶ್ವರ್ಯಗಳಿಗೆ ಅಧಿಪತಿಯೂ, ಸರ್ವಾಂತರ್ಯಾಮಿಯೂ ಆಗಿರುವ ಪರಮಪುರುಷನಾದ ಶ್ರೀಹರಿಯು ವಿಷ್ವಕ್ಸೇನನೇ ಮುಂತಾದ ತನ್ನ ಪಾರ್ಷದರೊಡನೆ ಆ ಪರ್ವತರಾಜನ ಮೇಲೆ ಎಲ್ಲ ಕಡೆಗಳಲ್ಲಿಯೂ ಬೆಳಗುತ್ತಿದ್ದಾನೆ. ಸ್ವಾಮಿಯು, ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯಗಳೇ ಮುಂತಾದ ಅಷ್ಟಸಿದ್ಧಿಗಳಿಂದ ಸಂಪನ್ನನಾಗಿ ತನ್ನ ದಿವ್ಯಶುದ್ಧಸತ್ತ್ವಮಯವಾದ ದಿವ್ಯಮಂಗಳವಿಗ್ರಹದಲ್ಲಿ ಶಂಖ-ಚಕ್ರಾದಿ ದಿವ್ಯಾಯುಧಗಳನ್ನು ಹಸ್ತಗಳಲ್ಲಿ ಧರಿಸಿ ಮೆರೆಯುತ್ತಿದ್ದಾನೆ. ಹೀಗೆ ತನ್ನ ಯೋಗಮಾಯೆಯಿಂದ ರಚಿತವಾಗಿರುವ ಬಗೆ-ಬಗೆಯ ಲೋಕಗಳ ವ್ಯವಸ್ಥೆಗಾಗಿ ಶ್ರೀಭಗವಂತನು ಇದೇ ಲೀಲಾಮಯದಿವ್ಯವಿಗ್ರಹದಿಂದ ಕಲ್ಪಕಾಲದವರೆಗೂ ಅಲ್ಲಿ ಪ್ರತ್ಯಕ್ಷನಾಗಿರುವನು. ಲೋಕಾಲೋಕಪರ್ವತದ ಒಳಗಿರುವ ಭೂಭಾಗದ ವಿಸ್ತಾರವನ್ನು ಹೇಳಿದ್ದರಿಂದ ಅದರ ಹೊರಗಿರುವ ಕತ್ತಲೆಯ ಪ್ರದೇಶದ ವಿಸ್ತಾರವನ್ನೂ ವಿವರಿಸಿದಂತಾಯಿತು. ಅಲ್ಲಿಂದ ಆಚೆಗಾದರೋ ಯೋಗೇಶ್ವರರು ಮಾತ್ರವೇ ಸಂಚರಿಸಬಲ್ಲರು.

(ಶ್ಲೋಕ 34-42)

ಅಣ್ಡಮಧ್ಯಗತಃ ಸೂರ್ಯೋ ದ್ಯಾವಾಭೂಮ್ಯೋರ್ಯದನ್ತರಮ್ ।
ಸೂರ್ಯಾಣ್ಡಗೋಲಯೋರ್ಮಧ್ಯೇ ಕೋಟ್ಯಃ ಸ್ಯುಃ ಪಞ್ಚವಿಂಶತಿಃ ॥

ಎಲೈ ರಾಜೇಂದ್ರನೇ! ಕೇಳು. ಸ್ವರ್ಗ ಮತ್ತು ಭೂಮಿಗಳ ಯಾವ ಮಧ್ಯಭಾಗವುಂಟೋ–ಅದೇ ಸೂರ್ಯನಿಗೆ ನೆಲೆಯು. ಸೂರ್ಯನು ಬ್ರಹ್ಮಾಂಡದ ನಟ್ಟನಡುವೆ ಇದ್ದಾನೆಂದು ತಿಳಿಯಬೇಕು. ಆ ಸೂರ್ಯ ಮತ್ತು ಬ್ರಹ್ಮಾಂಡಗೋಳಗಳ* ನಡುವೆ ಎಲ್ಲ ಕಡೆಗಳಿಂದ ಇಪ್ಪತ್ತೈದು ಕೋಟಿ ಯೋಜನಗಳಷ್ಟು ವಿಸ್ತಾರವಿದೆ.

---

* ಕಾಲಿನ ನಡಿಗೆಯಿಂದ ಹೊಂದಬಹುದಾದ, ಪೃಥಿವೀಮಯ ವಸ್ತುಗಳೆಲ್ಲಾ ಭೂಲೋಕವೆನಿಸುತ್ತದೆ. ಈ ಭೂಮಿಯಿಂದ ಸೂರ್ಯನವರೆಗೂ ಇರುವುದು ಭುವರ್ಲೋಕ. ಸೂರ್ಯಮಂಡಲದಿಂದ ಧ್ರುವಮಂಡಲದವರೆಗೂ ಇರುವುದೇ ಸ್ವರ್ಗಲೋಕ. ಸ್ವರ್ಗಲೋಕದ ಮೇಲೆ ಒಂದು ಕೋಟಿ ಯೋಜನಗಳ ಎತ್ತರದ ವರೆಗೂ ಇರುವುದು ಮಹರ್ಲೋಕವು. ಮಹರ್ಲೋಕಕ್ಕೆ ಮೇಲೆ ಎರಡು ಕೋಟಿ

ಮೃತೇಽಣ್ಡ ಏಷ ಏತಸ್ಮಿನ್ಯದಭೂತ್ತತೋ ಮಾರ್ತಣ್ಡ ಇತಿ
ವ್ಯಪದೇಶಃ ।
ಹಿರಣ್ಯಗರ್ಭ ಇತಿ ಸ್ಯಾದ್ಧಿರಣ್ಯಾಣ್ಡಸಮುದ್ಭವಃ ॥೪೪॥

ಸೂರ್ಯದೇವರನ್ನು–ಮೃತವಾದ (ಅಚೇತನವಾಗಿರುವ) ಬ್ರಹ್ಮಾಂಡದಲ್ಲಿ ವೈರಾಜರೂಪದಲ್ಲಿ ಬೆಳಗುತ್ತಿರುವುದರಿಂದ 'ಮಾರ್ತಣ್ಡ' ಎಂದೂ, ಹಿರಣ್ಮಯ (ಜ್ಯೋತಿರ್ಮಯ)ವಾದ ಬ್ರಹ್ಮಾಂಡದಿಂದ ಪ್ರಕಟಗೊಂಡ ಕಾರಣ 'ಹಿರಣ್ಯಗರ್ಭ' ಎಂದೂ ಕರೆಯುತ್ತಾರೆ.

ಸೂರ್ಯೇಣ ಹಿ ವಿಭಜ್ಯನ್ತೇ ದಿಶಃ ಖಂ ದ್ಯೌರ್ಮಹೀ ಭಿದಾ ।
ಸ್ವರ್ಗಾಪವರ್ಗೌ ನರಕಾ ರಸೌಕಾಂಸಿ ಚ ಸರ್ವಶಃ ॥೪೫॥

ಪೂರ್ವವೇ ಮುಂತಾದ ದಿಕ್ಕುಗಳನ್ನೂ, ಆಕಾಶವನ್ನೂ, ಸ್ವರ್ಗವನ್ನೂ, ಭೂಮಿಯನ್ನೂ ಮತ್ತು ಇತರ ವಸ್ತುಗಳನ್ನೂ, ಸ್ವರ್ಗ-ಮೋಕ್ಷ-ನರಕ ಮತ್ತು ಪಾತಾಳಲೋಕಗಳನ್ನೂ ಎಲ್ಲವನ್ನೂ ವಿಂಗಡಿಸುವವನು ಈ ಸೂರ್ಯನೇ.

ದೇವತಿರ್ಯಙ್ಮನುಷ್ಯಾಣಾಂ ಸರೀಸೃಪಸವೀರುಧಾಮ್ ।
ಸರ್ವಜೀವನಿಕಾಯಾನಾಂ ಸೂರ್ಯ ಆತ್ಮಾ ದೃಗೀಶ್ವರಃ ॥೪೬॥

ದೇವತೆಗಳು, ತಿರ್ಯಕ್ಪ್ರಾಣಿಗಳು, ಮನುಷ್ಯರು, ಸರ್ಪಜಾತಿಯ ಪ್ರಾಣಿಗಳು, ಗಿಡ-ಮರ-ಬಳ್ಳಿಗಳು–ಇವೇ ಮುಂತಾದ ಸಮಸ್ತಜೀವ ಸಮೂಹಗಳಿಗೂ ಆತ್ಮವೂ, ಕಣ್ಣೂ ಮತ್ತು ಪ್ರಭುವೂ ಸೂರ್ಯದೇವನೇ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಪಂಚಮಸ್ಕಂಧದ ೨೦ನೆಯ ಅಧ್ಯಾಯವು ಮುಗಿಯಿತು.

ಯೋಜನಗಳ ಎತ್ತರದವರೆಗೂ ಇರುವುದೇ ಜನೋಲೋಕವು. ಜನೋಲೋಕಕ್ಕೆ ನಾಲ್ಕರಷ್ಟು ಎತ್ತರದಲ್ಲಿ ತಪೋಲೋಕವಿದೆ. ಅದಕ್ಕೂ ಮೇಲೆ ಹನ್ನೆರಡು ಕೋಟಿ ಯೋಜನಗಳಷ್ಟು ಎತ್ತರದಲ್ಲಿ ಸತ್ಯಲೋಕವು ವಿರಾಜಿಸುತ್ತಿದೆ. ಆಮೇಲೆ ಗಾಢಾಂಧ ಕಾರ. ಅನಂತರ ಗರ್ಭೋದಕವು. ಅದಕ್ಕೆ ಹೊರಗೆ ಬ್ರಹ್ಮಾಂಡಕಟಾಹ. ಅದರ ಸುತ್ತಲೂ ಜಲಾವರಣಗಳು ಇವೆ. ಇದೇ ಬ್ರಹ್ಮಾಂಡವು. (ಸಿದ್ಧಾಂತಚಂದ್ರಿಕಾ)

ಸೂರ್ಯನ ರಥ ಮತ್ತು ಗತಿಗಳ ವರ್ಣನೆ

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಏತಾವಾನೇವ ಭೂವಲಯಸ್ಯ ಸಂನಿವೇಶಃ ಪ್ರಮಾಣಲಕ್ಷಣತೋ ವ್ಯಾಖ್ಯಾತಃ ||೧||

"ಎಲೈ ರಾಜನೇ! ಇಲ್ಲಿಯವರೆಗೂ ನಿನಗೆ ಇಡೀ ಭೂಮಂಡಲದ ವಿಸ್ತಾರವನ್ನು ಲಕ್ಷಣ-ಪ್ರಮಾಣಗಳೊಡನೆ ವಿವರಿಸಿದೆನು. ಇನ್ನು ಖಗೋಳದ ಸ್ವರೂಪವನ್ನು ವಿವರಿಸುತ್ತೇನೆ, ಕೇಳು :

ಭೂಮಂಡಲದ ವಿಸ್ತಾರಕ್ಕೆ ಅನುಗುಣವಾಗಿಯೇ ದ್ಯುಲೋಕದ ಪರಿಮಾಣವನ್ನು ವಿದ್ವಾಂಸರು ನಿರೂಪಿಸುತ್ತಾರೆ. ಅವರೆಯೇ ಮುಂತಾದ ದ್ವಿದಳಧಾನ್ಯಗಳ ಎರಡು ಹೋಳುಗಳಲ್ಲಿ ಒಂದರ ಪರಿಮಾಣವನ್ನು ತಿಳಿದರೆ ಮತ್ತೊಂದರ ಪರಿಮಾಣವೂ ಹಾಗೆಯೇ ಎಂದು ತಿಳಿಯುವುದಿಲ್ಲವೇ! ಹಾಗೆಯೇ ಭೂಮಂಡಲದ ಪರಿಮಾಣವನ್ನು ತಿಳಿಸಿದ್ದರಿಂದಲೇ ಖಗೋಳ ಗಳ ಪರಿಮಾಣವನ್ನೂ ಹೇಳಿದಂತಾಯಿತು. ಈ ಭೂಗೋಳ-ಖಗೋಳ ಗಳ ಮಧ್ಯದಲ್ಲಿ ಇವೆರಡಕ್ಕೂ ಸಂಧಿಸ್ಥಾನವಾಗಿರುವ ಅಂತರಿಕ್ಷಲೋಕವಿದೆ. ಜ್ಯೋತಿಗಳಿಗೆ (ಗ್ರಹ-ನಕ್ಷತ್ರ-ತಾರೆಗಳಿಗೆ) ಅಧಿಪತಿಯಾಗಿರುವ ಸೂರ್ಯನು ಈ ಅಂತರಿಕ್ಷದಲ್ಲಿದ್ದು ಮೂರು ಲೋಕಗಳಿಗೂ ತನ್ನ ಬಿಸಿಲು ಮತ್ತು ಪ್ರಕಾಶಗಳನ್ನು ಬೀರುತ್ತಿರುವನು. ಉತ್ತರಾಯಣ, ದಕ್ಷಿಣಾಯನ ಮತ್ತು ವಿಷುವಾಯನಗಳಲ್ಲಿ ಕ್ರಮವಾಗಿ ಆಯಾ ಗತಿಗಳಿಗೆ ತಕ್ಕಂತೆ ಆರೋಹಣ*

---

* ಭಗವತ್ಸ್ವರೂಪವಾದ ಕಾಲಚಕ್ರಕ್ಕೆ ಶಿಂಶುಮಾರಚಕ್ರವೆಂದು ಹೆಸರು. ಅದರಲ್ಲಿ ಎಂಟು ಸಾವಿರ ರೇಖಾಕಾರಗಳಾದ ಮಂಡಲಗಳಿವೆ. ಅದು ಮೂರು ವಲಯ ಗಳಿಂದ ಕೂಡಿ ಮಂಡಲಾಕಾರವಾಗಿದೆ. ಸೂರ್ಯನು ಆ ಚಕ್ರದಲ್ಲಿ ಈಶ್ವರ, ಅದೃಷ್ಟ ಮತ್ತು ಕಾಲಗಳಿಗೆ ಅಧೀನನಾಗಿ ಸುತ್ತುತ್ತಿರುವನು. ಅಲ್ಲಿ ಮಕರವೇ ಮುಂತಾದ ಆಕಾರಗಳುಳ್ಳ ರಾಶಿಗಳಿವೆ. ಆ ರಾಶಿಗಳಲ್ಲಿ ಆಯಾ ನಕ್ಷತ್ರಗಳಿಗೆ ಅಭಿಮುಖ ವಾಗಿ ಸೂರ್ಯನು ವಲಯಭೇದದಿಂದ ಸಂಚರಿಸುವುದರಿಂದ ನಮ್ಮ ಹಗಲು-ರಾತ್ರಿಗಳಲ್ಲಿ ಕಾಲವ್ಯತ್ಯಾಸವಾಗುವುದು. ಆ ವಲಯಗಳು ಒಂದಕ್ಕಿಂತಲೂ

(ಏರುವ) ಸ್ಥಾನ, ಅವರೋಹಣ (ಇಳಿಯುವ) ಸ್ಥಾನ ಮತ್ತು ಸಮಸ್ಥಾನಗಳನ್ನು ಹೊಂದುತ್ತಾ ಕಾಲಾನುಸಾರವಾಗಿ ಮಕರವೇ ಮುಂತಾದ ರಾಶಿಗಳಲ್ಲಿ ಪ್ರವೇಶಿಸಿ ಹಗಲು-ರಾತ್ರಿಗಳಲ್ಲಿ ಹಿಗ್ಗುವಿಕೆ, ಕುಗ್ಗುವಿಕೆ ಮತ್ತು ಸಮತ್ವಗಳನ್ನು ಉಂಟುಮಾಡುತ್ತಾನೆ. ಆತನು ಮೇಷರಾಶಿ-ತುಲಾರಾಶಿ ಗಳಲ್ಲಿ ಹೆಜ್ಜೆಯಿಟ್ಟಾಗ ಹಗಲು-ರಾತ್ರಿಗಳು ಸಮನಾಗಿರುತ್ತವೆ. ವೃಷಭವೇ ಮುಂತಾದ ಐದು ರಾಶಿಗಳಲ್ಲಿ ಹೆಜ್ಜೆಯಿಡುವಾಗ ಪ್ರತಿ ತಿಂಗಳಲ್ಲಿಯೂ ರಾತ್ರಿಗಳಲ್ಲಿ ಒಂದೊಂದು ಗಳಿಗೆ ಕಡಿಮೆಯಾಗುತ್ತಿರುವುದು ಮತ್ತು ಅದೇ ಲೆಕ್ಕದಿಂದ ಹಗಲು ಕಾಲವು ಒಂದೊಂದು ಗಳಿಗೆ ಹಿಗ್ಗವುದು. ವೃಶ್ಚಿಕವೇ ಮುಂತಾದ ಐದು ರಾಶಿಗಳಲ್ಲಿ ಆತನು ಹೆಜ್ಜೆಯಿಡುವಾಗ ಹಗಲು-ರಾತ್ರಿಗಳ ಪ್ರಮಾಣವು ಅದಕ್ಕೆ ವಿರುದ್ಧವಾಗಿ ಆಗುವುದು. (ಹಗಲುಗಳಲ್ಲಿ ಒಂದೊಂದು ಗಳಿಗೆ ಕಡಿಮೆಯಾಗುತ್ತಿರುವುದು ಮತ್ತು ರಾತ್ರಿಗಳಲ್ಲಿ ಒಂದೊಂದು ಗಳಿಗೆ ಹೆಚ್ಚುತ್ತಿರುವುದು.) ಹೀಗೆ ದಕ್ಷಿಣಾಯನವು ಆರಂಭವಾಗುವವರೆಗೂ ಹಗಲು ಹೆಚ್ಚುತ್ತಿರುವುದು ಮತ್ತು ಉತ್ತರಾಯಣವು ಬರುವವರೆಗೂ ರಾತ್ರಿಯು ಹೆಚ್ಚುತ್ತಿರುವುದು.

(ಶ್ಲೋಕ 2-9)

ಹೀಗೆ ವಿದ್ವಾಂಸರು ಮಾನಸೋತ್ತರಪರ್ವತದ ಮೇಲೆ ಸೂರ್ಯನ ಪ್ರದಕ್ಷಿಣೆಯ ಮಾರ್ಗವು ಒಂಬತ್ತು ಕೋಟಿ ಐವತ್ತೊಂದು ಲಕ್ಷ ಯೋಜನ ಗಳಷ್ಟಿದೆಯೆಂದು ಹೇಳುತ್ತಾರೆ. ಆತನು ಇದನ್ನು ಸುತ್ತುವಷ್ಟು ಕಾಲವನ್ನು ಒಂದು ದಿನವೆಂದು ತಿಳಿಯುವುದು. ಆ ಪರ್ವತದಲ್ಲಿ ಮೇರುವಿನ ಪೂರ್ವದ ಕಡೆಯಲ್ಲಿ ಇಂದ್ರನ ರಾಜಧಾನಿಯಾದ ದೇವದಾನಿಯೂ, ದಕ್ಷಿಣದಲ್ಲಿ ಯಮನ ಪುರಿಯಾದ ಸಂಯಮನಿಯೂ, ಪಶ್ಚಿಮದಲ್ಲಿ ವರುಣನ ಪುರಿ

ಒಂದು ದೂರವಾಗಿರುವುದರಿಂದ ಸೂರ್ಯನು ಹೊರವಲಯದಿಂದ ಒಳವಲಯವನ್ನು ಪ್ರವೇಶಿಸುವುದೇ ಆರೋಹಣ. ಅದೇ ಉತ್ತರಾಯಣ. ಸೂರ್ಯನು ದೂರಮಾರ್ಗದಲ್ಲಿ ಸಂಚಾರಮಾಡುವುದರಿಂದ ಆಗ ಹಗಲು ಹೆಚ್ಚುವುದು. ಸೂರ್ಯನು ಒಳವಲಯದಿಂದ ಹೊರವಲಯವನ್ನು ಪ್ರವೇಶಿಸುವುದೇ ಅವರೋಹಣ. ಅದೇ ದಕ್ಷಿಣಾಯನ. ಈ ಸಮಯದಲ್ಲಿ ರಾತ್ರಿಯು ಹೆಚ್ಚುವುದು. ಅಹೋರಾತ್ರಗಳು ಸಮನಾಗಿರುವುದೇ ವೈಷುವತ.
(ವೀರರಾಘವೀಯ)

ಯಾದ ನಿಮ್ಲೋಚನಿಯೂ ಮತ್ತು ಉತ್ತರದಲ್ಲಿ ಕುಬೇರನ ಪುರಿಯಾದ ವಿಭಾವರೀನಗರಿಯೂ ಇರುವುದು. ಆ ಪುರಿಗಳಲ್ಲಿ ಮೇರುವಿನ ನಾಲ್ಕು ಕಡೆಗಳಲ್ಲಿಯೂ ಕಾಲ-ಕಾಲಗಳಲ್ಲಿ ಕ್ರಮವಾಗಿ ಪ್ರಾಣಿಗಳ ಪ್ರವೃತ್ತಿ ಮತ್ತು ನಿವೃತ್ತಿಗಳಿಗೆ ಸಾಧನಗಳಾದ ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲ ಮತ್ತು ಮಧ್ಯರಾತ್ರಿಗಳು ಆಗುವುವು. (ಸೂರ್ಯನು ಮೊದಲು ಮೇರುವಿನ ಪೂರ್ವದಿಕ್ಕಿಗೆ ಮಾನಸೋತ್ತರದಲ್ಲಿರುವ ದೇವದಾನಿಯನ್ನು ಪ್ರವೇಶಿಸಿ ಅನಂತರ ಸಂಯಮನೀ, ನಿಮ್ಲೋಚನೀ, ವಿಭಾವರೀಪುರಿಗಳನ್ನು ಕ್ರಮವಾಗಿ ಸುತ್ತುವನು. ಆದ್ದರಿಂದ ಇವುಗಳಲ್ಲಿ ಒಂದು ಪುರಿಯಲ್ಲಿ ಉದಯವಾದಾಗ ಮತ್ತೊಂದರಲ್ಲಿ ಮಧ್ಯಾಹ್ನವಾಗುವುದು. ಬೇರೊಂದರಲ್ಲಿ ಸಾಯಂಕಾಲವಾಗುವುದು. ಇನ್ನೊಂದರಲ್ಲಿ ಮಧ್ಯರಾತ್ರಿಯಾಗುವುದು.) ಇದರಿಂದ ಮೇರುವಿನ ದಕ್ಷಿಣದಲ್ಲಿರುವವರಿಗೆ ಇಂದ್ರನ ದೇವದಾನಿಯನ್ನು ಮೊದಲು ಮಾಡಿ ಪೂರ್ವವೇ ಮುಂತಾದ ದಿಕ್ಕುಗಳ ವಿಭಾಗವಾಗುವುದು. ಪಶ್ಚಿಮದಲ್ಲಿರುವವರಿಗೆ ಯಮನ ಪುರಿಯನ್ನು ಮೊದಲು ಮಾಡಿ ಪೂರ್ವಾದಿ ದಿಕ್ಕುಗಳ ವಿಭಾಗವಾಗುವುದು. ಉತ್ತರದಲ್ಲಿರುವವರಿಗೆ ವರುಣನಗರಿಯಿಂದಾರಂಭವಾಗಿ ಪೂರ್ವಾದಿ ದಿಗ್ವಿಭಾಗವು. ಪೂರ್ವದಲ್ಲಿರುವವರಿಗೆ ಕುಬೇರನ ನಗರವನ್ನು ಮೊದಲಾಗಿ ಪೂರ್ವಾದಿ ದಿಕ್ಕುಗಳ ವಿಭಾಗವು.* ಸುಮೇರು ಪರ್ವತದ ಮೇಲೆ ವಾಸಮಾಡುವವರಿಗಾದರೋ ಸೂರ್ಯನು ಸದಾ ಮಧ್ಯಾಹ್ನದಲ್ಲಿಯೇ ಹೊಳೆಯುತ್ತಿರುವನು ಮತ್ತು ಮೇರು ಪರ್ವತವು ಎಡಗಡೆಗೆ ನಿಲ್ಲುವಂತೆ ಬಲಗಡೆಯಾಗಿ ಸುತ್ತುತ್ತಿರುವನು. ಭಗವಂತನಾದ ಸೂರ್ಯನು ಎಲ್ಲಿ ಉದಯಹೊಂದುತ್ತಾನೆಯೋ–ಆ ಜಾಗಕ್ಕೆ ಸಮರೇಖಾ ಸ್ಥಾನದಲ್ಲಿ (ಅದರ ನೇರವಾದ ಮತ್ತೊಂದು ದಿಕ್ಕಿನ ಪುರಿಯಲ್ಲಿ) ಮುಳುಗುವಂತೆ ಕಾಣುವನು. ಎಲ್ಲಿ ಮಧ್ಯಾಹ್ನದಲ್ಲಿದ್ದು ಬೆವರುಸುರಿಯುವಂತೆ ಪರಿತಪಿಸುವನೋ–ಅದಕ್ಕೆ ಸಮಸೂತ್ರಸ್ಥಾನದಲ್ಲಿ (ಅದರ ನೇರ ಎದುರಿಗೆ)

---

* ಸೋಮ್ಯಾಂ–ಎಂಬ ಪದಕ್ಕೆ 'ಸೋಮನ ರಾಜಧಾನಿಯಾದ ಎಂದೂ' ಅರ್ಥಮಾಡುವುದುಂಟು. ಪ್ರಕೃತದಲ್ಲಿ ನಾಲ್ಕು ಪ್ರಧಾನ ದಿಕ್ಕುಗಳ ಅಧಿಪತಿಗಳಲ್ಲಿ ಉತ್ತರದಿಕ್ಕಿನ ಅಧಿಪತಿಯು ಕುಬೇರನಾಗಿರುವುದರಿಂದ ಆತನ ಹೆಸರನ್ನು ಇಲ್ಲಿ ತೆಗೆದುಕೊಂಡಿದೆ.

ಅರ್ಧರಾತ್ರಕಾಲವನ್ನು ಮಾಡುವನು. ಯಾರಿಗೆ ಮಧ್ಯಾಹ್ನದಲ್ಲಿ ಸೂರ್ಯನು ಸ್ಪಷ್ಟವಾಗಿ ಕಾಣಿಸುತ್ತಿರುವನೋ–ಅವರಿಗೆ ಸೂರ್ಯನು ಉತ್ತರದಿಕ್ಕಿಗೆ ಬಂದಾಗ ಆತನ ದರ್ಶನವಾಗುವುದೇ ಇಲ್ಲ. ಯಾಮ್ಯಾದಿ ಸ್ಥಾನಗಳಲ್ಲಿರುವವರು ಸೂರ್ಯನ ಅಸ್ತಮವನ್ನು ಕಾಣಬಲ್ಲರೇ ಹೊರತು ಸಮಸ್ಥಾನದಲ್ಲಿ ನಡುರಾತ್ರಿಯಾಗುವುದನ್ನು ನೋಡಲಾರರು.*

ಸೂರ್ಯನು ಇಂದ್ರನ ಪುರಿಯಿಂದ ಹೊರಟಾಗ ಮೊದಲು ಹದಿನೈದು ಘಳಿಗೆಗಳಲ್ಲಿ ಎರಡು ಕೋಟಿ ಮೂವತ್ತೇಳು ಲಕ್ಷ ಎಪ್ಪತ್ತೈದು ಸಾವಿರ ಯೋಜನಗಳ ದೂರದಲ್ಲಿರುವ ಯಮನ ಪುರಿಯನ್ನು ತಲುಪುವನು. ಹೀಗೆಯೇ ವರುಣನ ನಗರಿಯನ್ನೂ, ಕುಬೇರನ ನಗರಿಯನ್ನೂ ಸುತ್ತಿಕೊಂಡು ಅರುವತ್ತು ಘಳಿಗೆಗಳಿಗೆ ಇಂದ್ರನಗರಿಗೆ ಹಿಂದಿರುಗುವನು. ಹೀಗೆಯೇ

---

* ಎಲ್ಲ ಗ್ರಹಗಳಿಗೂ ಮೂರು ವಲಯಗಳೇ ಸ್ಥಾನಗಳೆನಿಸುತ್ತವೆ. ಇವುಗಳಲ್ಲಿ ಜರದ್ಗವವಲಯವು ಮಧ್ಯದಲ್ಲಿಯೂ, ಐರಾವತವಲಯವು ಉತ್ತರದಲ್ಲಿಯೂ, ವೈಶ್ವಾನರವಲಯವು ದಕ್ಷಿಣದಲ್ಲಿಯೂ ಇರುವುದು. ಪ್ರತಿವಲಯವೂ ಮೂರು ವೀಥಿ ಗಳಾಗಿ ವಿಭಾಗಿಸಲ್ಪಟ್ಟಿದೆ. ಅವುಗಳಲ್ಲಿ ಅಶ್ವಿನೀ, ಭರಣೀ, ಕೃತ್ತಿಕಾನಕ್ಷತ್ರಗಳಿಗೆ ನಾಗವೀಥಿಯೆಂದೂ, ರೋಹಿಣೀ, ಮೃಗಶಿರ, ಆರ್ದ್ರಾನಕ್ಷತ್ರಗಳಿಗೆ ಗಜವೀಥಿಯೆಂದೂ, ಪುನರ್ವಸು, ಪುಷ್ಯ, ಆಶ್ಲೇಷಾನಕ್ಷತ್ರಗಳಿಗೆ ಐರಾವತವೀಥಿಯೆಂದೂ ಹೆಸರು. ಈ ಮೂರು ವೀಥಿಗಳೂ ಗ್ರಹಸಂಚಾರಕ್ಕೆ ಉತ್ತರಮಾರ್ಗವು. ಮಖೆ, ಪುಬ್ಬೆ, ಉತ್ತರೆಗಳಿಗೆ ಆರ್ಷ ಭವೀಥಿಯೆಂದೂ, ಹಸ್ತ, ಚಿತ್ತೆ, ಸ್ವಾತಿಗಳಿಗೆ ಗೋವೀಥಿಯೆಂದೂ, ವಿಶಾಖೆ, ಅನೂರಾಧೆ, ಜ್ಯೇಷ್ಠೆಗಳಿಗೆ ಜರದ್ಗವವೀಥಿಯೆಂದೂ ಹೆಸರು. ಈ ಮೂರು ವೀಥಿಗಳೂ ಗ್ರಹಗಳ ಸಂಚಾರಕ್ಕೆ ಮಧ್ಯಮಾರ್ಗವು. ಮೂಲ, ಪೂರ್ವಾಷಾಢ, ಉತ್ತರಾಷಾಢನಕ್ಷತ್ರಗಳಿಗೆ ಅಜವೀಥಿಯೆಂದೂ, ಶ್ರವಣ, ಧನಿಷ್ಠೆ, ಶತಭಿಷಗಳಿಗೆ ಮೃಗವೀಥಿಯೆಂದೂ, ಪೂರ್ವಾಭಾಧ್ರಾ, ಉತ್ತರಾಭಾದ್ರಾ, ರೇವತಿಗಳಿಗೆ ವೈಶ್ವಾನರವೀಥಿಯೆಂದೂ ಹೆಸರು. ಈ ಮೂರು ವೀಥಿಗಳೂ ಗ್ರಹಸಂಚಾರಕ್ಕೆ ದಕ್ಷಿಣಮಾರ್ಗವು. ಉತ್ತರಾಯಣದಲ್ಲಿ ಧ್ರುವನು ಸೂರ್ಯ ರಥದ ಅಚ್ಚಿನ ತುದಿಗಳಿಗೆ ಕಟ್ಟಿರುವ ವಾಯುಪಾಶಗಳನ್ನು ಸೆಳೆಯುತ್ತಾನೆ. ಅದರಿಂದ ಆಗ ಸೂರ್ಯ ರಥವು ಗ್ರಹಮಂಡಲಕ್ಕಿಂತ ಒಳಗಡೆಗೆ ಉತ್ತರಮಾರ್ಗದಲ್ಲಿಯೇ ಪ್ರವೇಶಿಸುವುದು. ಅನಂತರ ಸೂರ್ಯನ ಗಮನವು ಮಂದವಾಗುವುದು. ಆದುದರಿಂದ ಉತ್ತರಾಯಣದಲ್ಲಿ ಹಗಲು ಹೆಚ್ಚುವುದು ಮತ್ತು ರಾತ್ರಿಯು ಕಡಿಮೆಯಾಗುವುದು. ಧ್ರುವನು ಆ

ಚಂದ್ರನೇ ಮುಂತಾದ ಗ್ರಹಗಳೂ ಕೂಡ ಜ್ಯೋತಿಶ್ಚಕ್ರದಲ್ಲಿ ಇತರ ನಕ್ಷತ್ರ ಗಳೊಡನೆ ಉದಯ ಮತ್ತು ಅಸ್ತಗಳನ್ನು ಹೊಂದುತ್ತಿರುತ್ತವೆ. ಹೀಗೆ ಸೂರ್ಯಭಗವಂತನ ವೇದಮಯವಾದ ರಥವು ಒಂದು ಮುಹೂರ್ತದಲ್ಲಿ ಮೂವತ್ತುನಾಲ್ಕು ಲಕ್ಷದ ಎಂಟನೂರು ಯೋಜನಗಳ ಲೆಕ್ಕದಲ್ಲಿ ಚಲಿ ಸುತ್ತಾ ನಾಲ್ಕು ಪುರಿಗಳನ್ನು ಬಳಸುತ್ತಿರುವುದು.* ಸೂರ್ಯದೇವನ ಈ ರಥಕ್ಕೆ ಒಂದೇ ಒಂದು ಚಕ್ರವಿದೆ. ಅದೇ ಸಂವತ್ಸರ. ಚೈತ್ರವೇ ಮುಂತಾದ ಹನ್ನೆರಡು ಮಾಸಗಳು ಆ ಚಕ್ರದ ಆರೆಕಾಲುಗಳು. ವಸಂತವೇ ಮುಂತಾದ ಆರು ಋತುಗಳೇ ಅದರ ಪಟ್ಟಿ (ಅಂಚು)ಗಳು. ಚಾತುರ್ಮಾಸ್ಯಗಳೇ (ನಾಲ್ಕು ತಿಂಗಳುಗಳೇ) ಅದರ ಮೂರು ಹೊಟ್ಟೆಗಳು. ಈ ರಥದ ಅಚ್ಚಿನ ಒಂದು ಭಾಗವು ಮೇರುಗಿರಿಯ ಶಿಖರದಲ್ಲಿ ನಿಂತಿದೆ ಮತ್ತು ಇನ್ನೊಂದು ಭಾಗವು ಮಾನಸೋತ್ತರಪರ್ವತದ ಮೇಲೆ ನೆಲೆಸಿದೆ. ಅಚ್ಚಿಗೆ ಸೇರಿ

ವಾಯುಪಾಶಗಳನ್ನು ಬಿಟ್ಟಾಗ ರಥವು ಕೆಳಕ್ಕಿಳಿದು ರಾಶಿಮಂಡಲದಿಂದ ಹೊರಕ್ಕೆ ಬರುವುದು. ಈ ಕಾರಣದಿಂದ ದಕ್ಷಿಣಾಯನದಲ್ಲಿ ರಾತ್ರಿಯು ಹೆಚ್ಚುವುದು ಮತ್ತು ದಿನವು ಕಡಿಮೆಯಾಗುವುದು. ಮೇಷರಾಶಿ-ತುಲಾರಾಶಿಗಳಲ್ಲಿ ಧ್ರುವನು ವಾಯುಪಾಶಗಳನ್ನು ಸಮವಾಗಿ ಹಿಡಿಯುತ್ತಾನೆ. ಅದರಿಂದ ಸೂರ್ಯನ ರಥವು ಸಮಗತಿಯಿಂದ ಮಧ್ಯಮಂಡಲದಲ್ಲಿರುವುದು ಮತ್ತು ಹಗಲು-ರಾತ್ರಿಗಳು ಸಮನಾಗುವುವು.

(ಭಾವಾರ್ಥದೀಪಿಕಾ)

ಈ ವಿಷಯಗಳು ಉತ್ತರಾರ್ಧಗೋಳದಲ್ಲಿರುವವರಿಗೆ ಮಾತ್ರ ಅನ್ವಯವಾಗು ವುವು. ದಕ್ಷಿಣಾರ್ಧಗೋಳದಲ್ಲಿರುವವರಿಗೆ ಇವು ತದ್ವಿರುದ್ಧವಾಗಿರುತ್ತವೆ. ಅವರಿಗೆ ಮೇಷ ಸಂಕ್ರಮಣದಿಂದ ತುಲಾಸಂಕ್ರಮಣದವರೆಗೆ ರಾತ್ರಿ ಹೆಚ್ಚು, ಹಗಲು ಕಮ್ಮಿ ಮತ್ತು ತುಲಾಸಂಕ್ರಮಣದಿಂದ ಮೇಷಸಂಕ್ರಮಣದವರೆಗೆ ಹಗಲು ಹೆಚ್ಚು. ರಾತ್ರಿ ಕಮ್ಮಿ.

* ಸದಾ ಬೆಳಗುತ್ತಿರುವ ಸೂರ್ಯನಿಗೆ ಉದಯವೂ ಇಲ್ಲ ; ಅಸ್ತವೂ ಇಲ್ಲ. ಆದರೂ ಮೊದಲಿಗೆ ಸೂರ್ಯನನ್ನು ನೋಡುವುದಕ್ಕೆ ಉದಯವೆಂದೂ ಸೂರ್ಯನು ಕಾಣದೇ ಇರುವುದಕ್ಕೆ ಅಸ್ತವೆಂದೂ ವ್ಯವಹಾರವು.

ನೈವಾಸ್ತಮನಮರ್ಕಸ್ಯ ನೋದಯಸ್ಸರ್ವದಾ ಸತಃ ।
ಉದಯಾಸ್ತಮನಾಖ್ಯಂ ಹಿ ದರ್ಶನಾದರ್ಶನಂ ರವೇಃ ॥

(ಸಿದ್ಧಾಂತದೀಪಿಕಾ)

ಕೊಂಡಿರುವ ಈ ಚಕ್ರವು+ ಎಣ್ಣೆಯ ಗಾಣದ ಚಕ್ರದಂತೆ ಮಾನಸೋತ್ತರ ಪರ್ವತದ ಮೇಲೆ ತಿರುಗುತ್ತಿದೆ. ಈ ಅಚ್ಚಿನಲ್ಲಿ ಜೋಡಿಸಲ್ಪಟ್ಟ ಮೂಲಭಾಗವುಳ್ಳ ಮತ್ತೊಂದು ಅಚ್ಚು ಇದೆ. ಅದು ಉದ್ದದಲ್ಲಿ ಇದರ ನಾಲ್ಕನೇ ಒಂದು ಭಾಗದಷ್ಟಿದೆ. ಇದರ ಮೇಲ್ಭಾಗವು ಎಣ್ಣೆಯ ಗಾಣದ ಅಚ್ಚಿನಂತೆ ಧ್ರುವಲೋಕಕ್ಕೆ ಸಿಕ್ಕಿಸಲ್ಪಟ್ಟಿದೆ. (ಶ್ಲೋಕ 6-14)

ಈ ರಥದಲ್ಲಿ ಕೂರುವ ಜಾಗವು ಮೂವತ್ತಾರು ಲಕ್ಷಯೋಜನಗಳಷ್ಟು ಉದ್ದ ಮತ್ತು ಒಂಬತ್ತು ಲಕ್ಷ ಯೋಜನಗಳಷ್ಟು ಅಗಲವಾಗಿದೆ. ಈ ರಥಕ್ಕೆ ಹೂಡಲ್ಪಟ್ಟಿರುವ ನೊಗವೂ ಕೂಡ ಅಷ್ಟೇ ಉದ್ದ-ಅಗಲಗಳಿಂದ ಕೂಡಿದೆ. ಅರುಣನೆಂಬ ಸಾರಥಿಯು ಈ ರಥಕ್ಕೆ ಗಾಯತ್ರಿಯೇ ಮುಂತಾದ ಏಳು ಛಂದಸ್ಸುಗಳೆಂಬ* ಏಳು ಕುದುರೆಗಳನ್ನು ಹೂಡಿ ರಥವನ್ನು ನಡೆಸುತ್ತಿದ್ದಾನೆ. ಅವನು ಸೂರ್ಯದೇವನ ಮುಂದೆ ಹಿಮ್ಮೊಗನಾಗಿ ಕುಳಿತು ಸಾರಥ್ಯವನ್ನು ಮಾಡುತ್ತಿದ್ದಾನೆ. ಇದಲ್ಲದೇ ಸೂರ್ಯಭಗವಂತನ ಮುಂದೆ

+ ಮಾನಸೋತ್ತರಪರ್ವತದಲ್ಲಿರುವ ಸೂರ್ಯರಥದ ಅಚ್ಚು ಎರಡು ಕೋಟಿ ಐವತ್ತೇಳು ಲಕ್ಷ ಯೋಜನಗಳಷ್ಟು ಉದ್ದವಾಗಿದೆ.

'ಸಾರ್ಧಂ ಕೋಟಿದ್ವಯಂ ಪ್ರೋಕ್ತಂ ಸಪ್ತಲಕ್ಷಾಧಿಕಂ ತಥಾ ।
ರಥಾಕ್ಷಸ್ಯ ರವೇರ್ಮೇರೋರ್ಮಾನಸೋತ್ತರವರ್ತಿನಃ ॥'

(ವಿಜಯಧ್ವಜೀಯ)

* ಗಾಯತ್ರೀ, ಬೃಹತೀ, ಉಷ್ಣಿಕ್, ಜಗತೀ, ತ್ರಿಷ್ಟುಪ್, ಅನುಷ್ಟುಪ್ ಮತ್ತು ಪಂಕ್ತಿ–ಎಂಬ ಏಳು ಛಂದಸ್ಸುಗಳೂ ಸೂರ್ಯದೇವರ ರಥದ ಏಳು ಕುದುರೆಗಳು ಎಂದು ವಿಷ್ಣುಪುರಾಣ-ವಾಯುಪುರಾಣಗಳು ಹೇಳುತ್ತವೆ.

ಹಯಾಶ್ಚ ಸಪ್ತ ಚ್ಛನ್ದಾಂಸಿ ತೇಷಾಂ ನಾಮಾನಿ ಮೇ ಶೃಣು ।
ಗಾಯತ್ರೀ ಚ ಬೃಹತ್ಯುಷ್ಣಿಕ್ ಜಗತೀ ತ್ರಿಷ್ಟುಭೇವ ಚ ।
ಅನುಷ್ಟುಪ್ ಪಙ್ಕ್ತಿರಿತ್ಯುಕ್ತಃ ಛನ್ದಾಂಸಿ ಹರಯೋ ರವೇಃ ॥

(ವಿಷ್ಣುಪುರಾಣ)

ಸಪ್ತಾಶ್ವರೂಪಛನ್ದಾಂಸಿ ವಹನ್ತೇ ವಾಮತೋ ರವಿಮ್ ।
ಚಕ್ರಪಕ್ಷನಿಬದ್ಧಾನಿ ಚಕ್ರೇ ಚಾಕ್ಷಃ ಸಮಾಹಿತಃ ॥ (ವಾಯುಪುರಾಣ)

ಹೆಬ್ಬೆರಳಿನ ಗಿಣ್ಣಿನಷ್ಟು ಪ್ರಮಾಣವುಳ್ಳ ವಾಲಖಿಲ್ಯರೇ ಮುಂತಾದ ಅರುವತ್ತು ಸಾವಿರ ಮಂದಿ ಋಷಿಗಳು ಆ ರಥದಲ್ಲಿ ಕುಳಿತು ಸೂರ್ಯದೇವನಿಗೆ ಸ್ವಸ್ತಿವಾಚನಮಾಡಲು ನೇಮಿಸಲ್ಪಟ್ಟಿದ್ದಾರೆ. ಅವರು ವೇದಗಳಿಂದ ಆ ಸೂರ್ಯಭಗವಂತನನ್ನು ಸ್ತೋತ್ರಮಾಡುತ್ತಿರುವರು. ಇವರಲ್ಲದೇ ಋಷಿಗಳು, ಗಂಧರ್ವರು, ಅಪ್ಸರಸ್ಸುಗಳು, ನಾಗರು, ಯಕ್ಷರು, ರಾಕ್ಷಸರು ಮತ್ತು ದೇವತೆಗಳೂ ಕೂಡ ಆತನನ್ನು ಆರಾಧಿಸುತ್ತಿರುವರು. ಇವರ ಸಂಖ್ಯೆ ಒಟ್ಟು ಹದಿನಾಲ್ಕು. ಆದರೆ ಜೋಡಿಗಳಾಗಿರುವುದರಿಂದ ಏಳು ಗಣಗಳೆನಿಸುತ್ತಾರೆ. ಈ ಜೋಡಿಗಳು ಪ್ರತಿ ತಿಂಗಳಲ್ಲೂ ಬೇರೆ-ಬೇರೆ ಹೆಸರುಗಳುಳ್ಳವರಾಗಿ ಪ್ರತಿ ತಿಂಗಳಲ್ಲೂ ಬೇರೆ-ಬೇರೆ ಹೆಸರುಗಳನ್ನು ಪಡೆಯುವ ಆತ್ಮಸ್ವರೂಪ ನಾದ ಸೂರ್ಯದೇವನನ್ನು ಉಪಾಸನೆ ಮಾಡುವರು. ಹೀಗೆ ಭಗವಂತನಾದ ಸೂರ್ಯನು ಒಂದು ಕ್ಷಣದಲ್ಲಿ ಎರಡು ಸಾವಿರದ ಇನ್ನೂರು ಯೋಜನಗಳಷ್ಟು ದೂರದವರೆಗೆ ಸಂಚರಿಸುತ್ತಾ ಒಂದು ದಿನದಲ್ಲಿ (ಅರವತ್ತು ಘಳಿಗೆಗಳಲ್ಲಿ) ಒಂಬತ್ತು ಕೋಟಿ ಐವತ್ತೊಂದು ಲಕ್ಷ ಯೋಜನಗಳ ದೂರವನ್ನು ಸುತ್ತುವನು. (ಶ್ಲೋಕ 15-19)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಪಂಚಮಸ್ಕಂಧದ ೨೧ನೆಯ ಅಧ್ಯಾಯವು ಮುಗಿಯಿತು.

ಪಂಚಮಸ್ಕಂಧ ೨೨ನೆಯ ಅಧ್ಯಾಯ

ಬೇರೆ-ಬೇರೆ ಗ್ರಹಗಳ ಸ್ಥಿತಿ ಮತ್ತು ಗತಿಗಳ ವರ್ಣನೆ

ಪರೀಕ್ಷಿದ್ರಾಜನು ಶುಕಮುನಿಗಳಲ್ಲಿ ಹೀಗೆ ಪ್ರಾರ್ಥಿಸಿದನು :

ಯದೇತದ್ಭಗವತ ಆದಿತ್ಯಸ್ಯ ಮೇರುಂ ಧ್ರುವಂ ಚ ಪ್ರದಕ್ಷಿಣೇನ ಪರಿಕ್ರಾಮತೋ ರಾಶೀನಾಮಭಿಮುಖಂ ಪ್ರಚಲಿತಂ ಚಾಪ್ರದಕ್ಷಿಣಂ ಭಗವತೋಪವರ್ಣಿತಮಮುಷ್ಯ ವಯಂ ಕಥಮನುಮಿಮೀಮಹೀತಿ ॥

“ಮಹಾತ್ಮರೇ! ಭಗವಂತನಾದ ಆದಿತ್ಯನು ಮೇರುಗಿರಿಯನ್ನೂ ಮತ್ತು ಧ್ರುವನನ್ನೂ ಪ್ರದಕ್ಷಿಣಾಕಾರವಾಗಿ ಸುತ್ತುತ್ತಿದ್ದರೂ ರಾಶಿಗಳಿಗೆ

ಎದುರಾಗಿ ಅಪ್ರದಕ್ಷಿಣವಾಗಿಯೇ ಬಳಸುತ್ತಾನೆ–ಎಂದು ತಾವು ಹೇಳಿದಿರಿ. ಇದನ್ನು ನಾವು ಹೇಗೆ ಅರ್ಥೈಸಿಕೊಳ್ಳುವುದೆಂಬುದನ್ನು ತಿಳಿಸೋಣವಾಗಲಿ.''

ಶ್ರೀಶುಕಮಹರ್ಷಿಗಳು ಆತನಿಗೆ ಹೇಳುತ್ತಾರೆ :

''ಮಹಾರಾಜ! ಕುಂಬಾರನ ಚಕ್ರವು ತಿರುಗುವಾಗ ಅದರ ಮೇಲೆ ಇರುವ ಇರುವೆಯೇ ಮುಂತಾದ ಚಿಕ್ಕ ಪ್ರಾಣಿಗಳು ಅಲ್ಲಿಂದ ಹೊರಗೆ ಹೋಗದೇ ಅದನ್ನಾಶ್ರಯಿಸಿ ಅಲ್ಲಿಯೇ ಇದ್ದುಕೊಂಡು ಅದು ತಿರುಗುವ ಜೊತೆಯಲ್ಲಿಯೇ ತಾವೂ ಬೇರೆ ಗತಿಯಿಂದ ಸಂಚರಿಸುತ್ತವೆಯಲ್ಲವೇ? ಹಾಗೆಯೇ ನಕ್ಷತ್ರರಾಶಿಗಳೊಡನೆ ಕೂಡಿ ಮೇರುವನ್ನೂ–ಧ್ರುವನನ್ನೂ ಪ್ರದಕ್ಷಿಣವಾಗಿ ಬಳಸುತ್ತಿರುವ ಕಾಲಚಕ್ರವನ್ನು ಆಶ್ರಯಿಸಿಕೊಂಡು ಚಕ್ರಗತಿ ಯೊಡನೆ ಸಂಚರಿಸುತ್ತಿರುವ ಸೂರ್ಯಾದಿಗಳು ಮೇರುವಿಗೆ ಪ್ರದಕ್ಷಿಣೆ ಮಾಡುತ್ತಿರುವ ಕಾಲಚಕ್ರದ ಗತಿಗೆ ವಿರುದ್ಧವಾಗಿ ಅಪ್ರದಕ್ಷಿಣಾಕಾರವಾದ ಗತಿಯಿಂದ ಒಂದು ನಕ್ಷತ್ರದಿಂದ ಮತ್ತೊಂದು ನಕ್ಷತ್ರಕ್ಕೂ ಮತ್ತು ಒಂದು ರಾಶಿಯಿಂದ ಮತ್ತೊಂದು ರಾಶಿಗೂ ಸಂಚರಿಸುತ್ತಿವೆಯಪ್ಪಾ.

ಸ ಏಷ ಭಗವಾನಾದಿಪುರುಷ ಏವ ಸಾಕ್ಷಾನ್ನಾರಾಯಣೋ ಲೋಕಾನಾಂ ಸ್ವಸ್ತಯಂ ಆತ್ಮಾನಂ ತ್ರಯೀಮಯಂ ಕರ್ಮವಿಶುದ್ಧಿ-ನಿಮಿತ್ತಂ ಕವಿಭಿರಪಿ ಚ ವೇದೇನ ವಿಜಿಜ್ಞಾಸ್ಯಮಾನೋ ದ್ವಾದಶಧಾ ವಿಭಜ್ಯ ಷಟ್ಸು ವಸನ್ತಾದಿಷ್ವೃತುಷು ಯಥೋಪಜೋಷಮೃತು ಗುಣಾನ್ವಿದಧಾತಿ ॥೩॥

ಜಗತ್ತಿಗೆ ಕಾರಣನೂ, ಸಾಕ್ಷಾತ್ ನಾರಾಯಣಸ್ವರೂಪನೂ ಆಗಿರುವ ಆದಿಪುರುಷನಾದ ಭಗವಾನ್ ಸೂರ್ಯದೇವನು–ವೇದಮಂತ್ರದರ್ಶಿ ಗಳಾದ ಜ್ಞಾನಿಗಳೂ ಮತ್ತು ವೇದಗಳೂ ತಿಳಿಯಲು ಬಯಸುವ ಸ್ವರೂಪ ವುಳ್ಳವನು. ಆದರೂ ಆತನು ಲೋಕಗಳ ಕ್ಷೇಮಕ್ಕಾಗಿ ವೇದರೂಪಿಯಾದ ತನ್ನನ್ನು ಹನ್ನೆರಡು ಬಗೆಗಳನ್ನಾಗಿ ವಿಭಾಗಿಸಿಕೊಂಡು ಚೈತ್ರವೇ ಮುಂತಾದ ಹನ್ನೆರಡು ಮಾಸಗಳಲ್ಲಿ ಪ್ರತಿಯೊಂದರಲ್ಲೂ ಒಂದೊಂದು ಹೆಸರಿನಿಂದ ಕೂಡಿ ಜೀವಿಗಳು ಆಯಾ ಕರ್ಮಫಲಗಳನ್ನು ಬೋಗಿಸುವುದಕ್ಕಾಗಿ ವಸಂತವೇ

ಮುಂತಾದ ಆರು ಋತುಗಳಲ್ಲೂ ಸಮಧಾತು ಬಿಸಿ-ಚಳಿ-ಗಾಳಿಗಳೇ ಮುಂತಾದ ಋತುಧರ್ಮಗಳನ್ನುಂಟುಮಾಡುತ್ತಿದ್ದಾನೆ.

ಈ ಲೋಕದಲ್ಲಿ ವರ್ಣ, ಆಶ್ರಮ ಮತ್ತು ಆಚಾರಗಳೇ ಮುಂತಾದ ಧರ್ಮಗಳನ್ನು ಅನುಸರಿಸುವ ಮನುಷ್ಯರು ವೇದಗಳಿಂದ ಪ್ರತಿಪಾದಿತವಾದ ಸಣ್ಣ ಮತ್ತು ದೊಡ್ಡ ಕರ್ಮಗಳಿಂದಲೂ ಮತ್ತು ಯೋಗಸ್ಥಾನಗಳಿಂದಲೂ ಸೂರ್ಯನಾರಾಯಣನನ್ನು ಅಂತರ್ಯಾಮಿಯನ್ನಾಗಿ ಶ್ರದ್ಧೆಯಿಂದ ಆರಾಧನೆ ಮಾಡಿ ಸುಲಭವಾಗಿ ಸ್ವರ್ಗ-ಮೋಕ್ಷಗಳನ್ನು ಪಡೆಯುವರು.* ಈ ಸೂರ್ಯದೇವನು ಸಮಸ್ತಲೋಕಗಳಿಗೂ ಆತ್ಮವಾಗಿದ್ದಾನೆ. ಈತನು ಭೂಮಿ ಮತ್ತು ಸ್ವರ್ಗಗಳ ಮಧ್ಯದ ಆಕಾಶಮಂಡಲದಲ್ಲಿರುವ ಶಿಶುಮಾರವೆಂಬ ಕಾಲಚಕ್ರದಲ್ಲಿದ್ದು ಸಂವತ್ಸರಗಳ ಭಾಗಗಳಾಗಿ ರಾಶಿಗಳೆಂಬ ಹೆಸರುಗಳುಳ್ಳ ಮೇಷ-ವೃಷಭಗಳೇ ಮುಂತಾದ ಹನ್ನೆರಡು ತಿಂಗಳು ಗಳನ್ನುಂಟುಮಾಡುವನು. ಶುಕ್ಲಪಕ್ಷ ಮತ್ತು ಕೃಷ್ಣಪಕ್ಷಗಳೆಂಬ ಎರಡು ಪಕ್ಷಗಳ ಕಾಲಕ್ಕೆ ಚಾಂದ್ರಮಾನಮಾಸವೆಂದೂ, ಪಿತೃದೇವತೆಗಳ ಒಂದು ಹಗಲು ಮತ್ತು ರಾತ್ರಿಗಳ ಕಾಲಕ್ಕೆ ಪಿತೃಮಾನಮಾಸವೆಂದೂ, ಸೂರ್ಯನು ಒಂದು ರಾಶಿಯಲ್ಲಿ (ಎರಡೂಕಾಲು ನಕ್ಷತ್ರಗಳಲ್ಲಿ) ಸಂಚಾರಮಾಡುವಷ್ಟು ಕಾಲಕ್ಕೆ ಸೌರಮಾನಮಾಸವೆಂದೂ ಹೆಸರು. ಸೂರ್ಯನು ಸಂವತ್ಸರದ ಆರನೆಯ ಒಂದು ಭಾಗವನ್ನು ಭೋಗಿಸುವ ಕಾಲಕ್ಕೆ (ಎರಡು ರಾಶಿಗಳಲ್ಲಿ ಸಂಚರಿಸುವಷ್ಟು ಕಾಲಕ್ಕೆ) ಒಂದು ಋತುವೆಂದು ನಾಮಧೇಯ. ಸೂರ್ಯನು ಖಗೋಳದ ಅರ್ಧಭಾಗವಾಗಿರುವ ಆರು ರಾಶಿಗಳನ್ನು ದಾಟುವ ಕಾಲವನ್ನು 'ಅಯನ' ಎಂದು ಕರೆಯುತ್ತಾರೆ. ಹಾಗೆಯೇ ಸೂರ್ಯನು ತನ್ನ ಮಂದಗತಿ, ತೀವ್ರಗತಿ ಮತ್ತು ಸಮಾನಗತಿಗಳಿಂದ

---

* ಸೂರ್ಯದೇವನನ್ನು ಪ್ರಾತಃಕಾಲದಲ್ಲಿ ಋಗ್ವೇದವೂ, ಮಧ್ಯಾಹ್ನದಲ್ಲಿ ಯಜುರ್ವೇದವೂ, ಸಾಯಂಕಾಲದಲ್ಲಿ ಸಾಮವೇದವೂ ಸ್ತುತಿಸುತ್ತವೆ. 'ಋಚಃ ಸ್ತುವನ್ತಿ ಪೂರ್ವಾಹ್ಣೇ ಮಧ್ಯಾಹ್ನೇ ಚ ಯಜೂಂಷಿ ಚ । ಬೃಹದ್ರಥಂತರಾದೀನಿ ಸಾಮಾನ್ಯಾಹುಃ ಕ್ಷಯೇ ರವೇಃ ॥' (ವೀರರಾಘವೀಯ)

'ಋಗ್ಭಿಃ ಪೂರ್ವಾಹ್ಣೇ ದಿವ ದೇವ ಈಯತೇ' ಎಂಬ ಶ್ರುತಿಯೂ ಈ ಅರ್ಥಕ್ಕೆ ಪೋಷಕವಾಗಿದೆ.

ಸ್ವರ್ಗ ಮತ್ತು ಭೂಮಂಡಲಗಳಿಂದೊಡಗೂಡಿ ಇಡೀ ಆಕಾಶವನ್ನು ಸುತ್ತಿಬರುವ ಕಾಲವನ್ನು ಗತಿಭೇದಕ್ಕೆ ತಕ್ಕಂತೆ ಸಂವತ್ಸರ, ಪರಿವತ್ಸರ, ಇಡಾವತ್ಸರ, ಅನುವತ್ಸರ ಅಥವಾ ವತ್ಸರಗಳೆಂದು ಕರೆಯುತ್ತಾರೆ. ಹೀಗೆಯೇ ಚಂದ್ರನು ಸೂರ್ಯಕಿರಣಮಂಡಲಗಳಿಗಿಂತಲೂ ಒಂದು ಲಕ್ಷಯೋಜನ ಗಳಷ್ಟು ಎತ್ತರದಲ್ಲಿ ಇದ್ದು ಸಂಚಾರಮಾಡುತ್ತಾನೆ. ಆತನ ಗತಿಯು ಅತಿಶೀಘ್ರವಾಗಿರುವುದರಿಂದ ಆತನು ಎಲ್ಲ ನಕ್ಷತ್ರಗಳಿಗಿಂತಲೂ ಮುಂದೆ ಇದ್ದಾನೆ. ಆತನು ಸೂರ್ಯನ ಒಂದು ವರ್ಷದ ಮಾರ್ಗವನ್ನು ಒಂದು ತಿಂಗಳಿನಲ್ಲೂ, ಸೂರ್ಯನ ಒಂದು ತಿಂಗಳಿನ ಮಾರ್ಗವನ್ನು ಎರಡೂ ಕಾಲು ದಿವಸಗಳಲ್ಲೂ, ಸೂರ್ಯನ ಒಂದು ಪಕ್ಷದ ಮಾರ್ಗವನ್ನು ಒಂದೇ ದಿವಸದಲ್ಲೂ ಸಂಚರಿಸುವನು. ಚಂದ್ರನು ಅನ್ನಮಯನೂ, ಅಮೃತ ಮಯನೂ ಆಗಿರುವುದರಿಂದ ಸಮಸ್ತಜೀವಗಳಿಗೂ ಪ್ರಾಣಸ್ವರೂಪ ನಾಗಿದ್ದಾನೆ ; ಜೀವನವಾಗಿದ್ದಾನೆ. ಆತನು ಕೃಷ್ಣಪಕ್ಷದಲ್ಲಿ ತನ್ನ ಕ್ಷಯ ಹೊಂದುತ್ತಿರುವ ಕಲೆಗಳಿಂದ ಪಿತೃಗಣಗಳಿಗೂ ಮತ್ತು ಶುಕ್ಲಪಕ್ಷದಲ್ಲಿ ವೃದ್ಧಿಹೊಂದುತ್ತಿರುವ ಕಲೆಗಳಿಂದ ದೇವಗಣಗಳಿಗೂ ಹಗಲು-ರಾತ್ರಿಗಳ ವಿಭಾಗವನ್ನು ಮಾಡಿಕೊಡುತ್ತಾನೆ ಮತ್ತು ಮೂವತ್ತು ಮುಹೂರ್ತಗಳ ಕಾಲದಿಂದ ಒಂದೊಂದು ನಕ್ಷತ್ರವನ್ನು ದಾಟುವನು. ಹದಿನಾರು ಕಲೆಗಳಿಂದ ಕೂಡಿರುವ ಪುರುಷಸ್ವರೂಪನೂ, ಮನೋಮಯನೂ, ಅನ್ನಮಯನೂ ಆಗಿರುವ ಶ್ರೀಭಗವಂತನಾದ ಚಂದ್ರನು ದೇವತೆಗಳು, ಪಿತೃಗಳು, ಮನುಷ್ಯರು, ಭೂತಗಳು, ಪಶುಗಳು, ಪಕ್ಷಿಗಳು, ಸರ್ಪಜಾತಿಗಳು, ಗಿಡ-ಮರ-ಬಳ್ಳಿಗಳು—ಇವುಗಳೆಲ್ಲಕ್ಕೂ ಪ್ರಾಣಗಳನ್ನು ಕೊಟ್ಟು ತೃಪ್ತಿಯನ್ನುಂಟುಮಾಡುವುದರಿಂದ ಸರ್ವಾತ್ಮಕನೆಂದು ಕರೆಯಲ್ಪಡುತ್ತಾನೆ. ಚಂದ್ರನಿಗಿಂತಲೂ ಮೂರು ಲಕ್ಷ ಯೋಜನಗಳಷ್ಟು ಮೇಲೆ* ಅಭಿಜಿತ್ ನಕ್ಷತ್ರವೂ ಸೇರಿ ಇಪ್ಪತ್ತೆಂಟು ನಕ್ಷತ್ರಗಳಿವೆ. ಶ್ರೀಭಗವಂತನು ಅವುಗಳನ್ನು ಕಾಲಚಕ್ರದಲ್ಲಿ ನೇಮಿಸಿರುವುದರಿಂದ ಅವುಗಳು ಮೇರುವನ್ನು ಬಲಕ್ಕೆ

---

* ಈ ಅಭಿಜಿತ್ತೆಂಬ ನಕ್ಷತ್ರವು ಯಾವುದು? ಎಂಬುದರ ಬಗೆಗೆ ಈ ಕೆಳಗಿನ ಅಭಿಪ್ರಾಯಗಳನ್ನು ಗಮನಿಸಬಹುದು.

೧) ಉತ್ತರಾಷಾಢಾನಕ್ಷತ್ರ ಮತ್ತು ಶ್ರವಣನಕ್ಷತ್ರಗಳ ಸಂಧಿಯಲ್ಲಿ ಫಲವಿಶೇಷ

ಬಿಟ್ಟುಕೊಂಡು ಪ್ರದಕ್ಷಿಣೆಮಾಡುತ್ತಿವೆ. ಅವುಗಳಿಗಿಂತಲೂ ಎರಡು ಲಕ್ಷ ಯೋಜನಗಳಷ್ಟು ಎತ್ತರದಲ್ಲಿ ಶುಕ್ರಗ್ರಹವು ಕಾಣಿಸುತ್ತದೆ. ಅದು ಸೂರ್ಯನಂತೆಯೇ ಮಂದಗತಿ-ಶೀಘ್ರಗತಿ-ಸಮಗತಿಗಳಿಂದ ಕೂಡಿ ಕೆಲವೊಮ್ಮೆ ಆತನಿಗೆ ಹಿಂದೆಯೂ, ಕೆಲವೊಮ್ಮೆ ಆತನಿಗೆ ಮುಂದೆಯೂ ಇನ್ನು ಕೆಲವು ವೇಳೆಗಳಲ್ಲಿ ಆತನ ಜೊತೆ-ಜೊತೆಗೂ ಸಂಚರಿಸುವುದು. ಇದು ಬಹುಮಟ್ಟಿಗೆ ಪ್ರಾಣಿಗಳಿಗೆ ಅನುಕೂಲವನ್ನೇ ಉಂಟುಮಾಡುವ ಗ್ರಹವಾಗಿದ್ದು ಇದರ ಸಂಚಾರದಿಂದ ಮಳೆಯುಂಟಾಗುವುದು. ಮಳೆ ಬೀಳುವುದಕ್ಕೆ ಯಾವ ಯಾವ ಗ್ರಹಗಳಿಂದ ತಡೆಯುಂಟಾಗುವುದೋ-ಆ ಗ್ರಹಗಳನ್ನು ಇದು ಶಾಂತಿಗೊಳಿಸುವುದು ಎಂದು ಊಹಿಸಬಹುದು. ಶುಕ್ರಗ್ರಹವನ್ನು ವರ್ಣಿಸಿದ್ದರಿಂದ ಬುಧನನ್ನೂ ವರ್ಣಿಸಿದಂತೆಯೇ. ಶುಕ್ರನ ಗತಿಗೆ ಅನುಸಾರವಾಗಿಯೇ ಬುಧಗ್ರಹದ ಗತಿಯನ್ನೂ ತಿಳಿಯಬೇಕು. ಚಂದ್ರ ಪುತ್ರನಾದ ಬುಧನು ಶುಕ್ರಗ್ರಹಕ್ಕಿಂತಲೂ ಎರಡು ಲಕ್ಷಯೋಜನಗಳಷ್ಟು ಎತ್ತರದಲ್ಲಿದ್ದಾನೆ. ಈ ಗ್ರಹವೂ ಸಾಮಾನ್ಯವಾಗಿ ಮಂಗಲಕರವೇ ಆಗಿದೆ. ಆದರೆ ಈತನು ಸೂರ್ಯನ ಗತಿಯನ್ನು ಬಿಟ್ಟು ಮುಂದಕ್ಕೆ ಹೋದದ್ದೇ ಆದರೆ ಬಿರುಗಾಳಿ, ಒಣಮೋಡ ಮತ್ತು ಅನಾವೃಷ್ಟಿಗಳನ್ನು ಸೂಚಿಸುತ್ತಾನೆ. ಬುಧಗ್ರಹಕ್ಕೆ ಎರಡು ಲಕ್ಷ ಯೋಜನಗಳಷ್ಟು ಎತ್ತರದಲ್ಲಿ ಮಂಗಲಗ್ರಹ ವಿದೆ. ಅದು ವಕ್ರಗತಿಯಿಂದ ನಡೆಯದೇ ಇದ್ದರೆ ಒಂದೊಂದು ರಾಶಿ ಯನ್ನೂ ಮೂರು-ಮೂರು ಪಕ್ಷಗಳಲ್ಲಿ ಭೋಗಿಸುತ್ತಾ ಹನ್ನೆರಡು ರಾಶಿ ಗಳನ್ನು ದಾಟಿ ಹೋಗುತ್ತದೆ. ಅದು ಅಶುಭಗ್ರಹವಾಗಿದ್ದು ಸಾಮಾನ್ಯವಾಗಿ ಅಮಂಗಲವನ್ನೇ ಸೂಚಿಸುತ್ತದೆ. ಅದಕ್ಕೂ ಮೇಲೆ ಎರಡು ಲಕ್ಷ ಯೋಜನ ಗಳಷ್ಟು ಎತ್ತರದಲ್ಲಿ ಯಾವ ಶ್ರೀಭಗವಂತನಾದ ಬೃಹಸ್ಪತಿಯಿದ್ದಾನೋ–

ವನ್ನು ಪಡೆಯುವುದಕ್ಕಾಗಿ ಕಲ್ಪಿತವಾಗಿರುವ ನಕ್ಷತ್ರ. 'ಅಭಿಜಿನ್ನಾಮ ನಕ್ಷತ್ರಂ। ಉಪರಿಷ್ಟಾದಾಷಾಢಾನಾಂ। ಅವಸ್ತಾಚ್ಛ್ರೋಣಾಯೈ।' (ಭಾವಾರ್ಥದೀಪಿಕಾ)

೨) ಉತ್ತರಾಷಾಢಾ-ಶ್ರವಣನಕ್ಷತ್ರಗಳ ಸಂಯೋಗವೇ ಅಭಿಜಿನ್ನಕ್ಷತ್ರ-ಅಶ್ವಿನೀ ಮತ್ತು ರೇವತಿಗಳ ಸಂಧಿಯೇ ಅಭಿಜಿತ್ತೆಂದು ಕೆಲವರ ಮತ. (ವಿಜಯಧ್ವಜೀಯ)

೩) ಉತ್ತರಾಷಾಢನಕ್ಷತ್ರದ ಅರ್ಧಭಾಗದಿಂದ ಶ್ರವಣದ ಆದಿಯಲ್ಲಿ ನಾಲ್ಕು ಲಿಪ್ತಿಗಳವರೆಗೂ ಅಭಿಜಿತ್–ಎಂದು ಸಂಜ್ಞೆ. (ಸಾರಾರ್ಥದರ್ಶಿನೀ)

ಆತನು ವಕ್ರಗತಿಯಿಂದ ನಡೆಯದಿದ್ದರೆ ಒಂದೊಂದು ರಾಶಿಯನ್ನೂ ಒಂದೊಂದು ವರ್ಷದಲ್ಲಿ ಭೋಗಿಸುತ್ತಾನೆ. ಆತನು ಸಾಮಾನ್ಯವಾಗಿ ಬ್ರಾಹ್ಮಣಕುಲಕ್ಕೆ ಶುಭಕರನಾಗಿ ಅನುಕೂಲನಾಗಿರುವನು. ಬೃಹಸ್ಪತಿ ಗ್ರಹಕ್ಕೆ ಎರಡು ಲಕ್ಷಯೋಜನಗಳಷ್ಟು ಎತ್ತರದಲ್ಲಿ ಶನೈಶ್ಚರನನ್ನು (ಶನಿಯನ್ನು) ನೋಡುತ್ತೇವೆ. ಈತನು ಒಂದೊಂದು ರಾಶಿಯಲ್ಲಿ ಮೂವತ್ತು-ಮೂವತ್ತು ತಿಂಗಳುಗಳ ಕಾಲ ಇರುವನು. ಆದುದರಿಂದ ಈತನಿಗೆ ಎಲ್ಲ ರಾಶಿಗಳನ್ನೂ ದಾಟಿಹೋಗಲು ಮೂವತ್ತು ವರ್ಷಗಳಾಗುವುವು. ಈತನು ಸಾಮಾನ್ಯವಾಗಿ ಎಲ್ಲರಿಗೂ ಅಶುಭಪ್ರದನೇ ಆಗಿರುವನು. ಈ ಶನಿಗ್ರಹಕ್ಕೆ ಮೇಲೆ ಹನ್ನೊಂದು ಲಕ್ಷ ಯೋಜನಗಳಷ್ಟು ದೂರದಲ್ಲಿ ಕಶ್ಯಪರೇ ಮುಂತಾದ ಸಪ್ತರ್ಷಿಗಳು ಕಾಣಿಸುವರು. ಅವರು ಎಲ್ಲ ಲೋಕಗಳಿಗೂ ಮಂಗಳವನ್ನು ಬಯಸುತ್ತಾ ಶ್ರೀಭಗವಂತನಾದ ವಿಷ್ಣುವಿನ ಪರಮಪದವಾದ ಧ್ರುವಲೋಕವನ್ನು ಪ್ರದಕ್ಷಿಣೆ ಮಾಡುತ್ತಿರುವರು. (ಶ್ಲೋಕ 4-15)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಪಂಚಮಸ್ಕಂಧದ ೨೨ನೆಯ ಅಧ್ಯಾಯವು ಮುಗಿಯಿತು.

ಪಂಚಮಸ್ಕಂಧ ೨೩ನೆಯ ಅಧ್ಯಾಯ

ಶಿಶುಮಾರಚಕ್ರದ ವರ್ಣನೆ

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಅಥ ತಸ್ಮಾತ್ಪರತಸ್ತ್ರಯೋದಶಲಕ್ಷಯೋಜನಾನ್ತರತೋ ಯತ್ತ-ದ್ವಿಷ್ಣೋಃ ಪರಮಂ ಪದಮಭಿವದನ್ತಿ ಯತ್ರ ಹ ಮಹಾಭಾಗವತೋ ಧ್ರುವ ಔತ್ತಾನಪಾದಿರಗ್ನಿನೇನ್ದ್ರೇಣ ಪ್ರಜಾಪತಿನಾ ಕಶ್ಯಪೇನ ಧರ್ಮೇಣ ಚ ಸಮಕಾಲಯುಗ್ಭಿಃ ಸಬಹುಮಾನಂ ದಕ್ಷಿಣತಃ ಕ್ರಿಯಮಾಣ ಇದಾನೀಮಪಿ ಕಲ್ಪಜೀವಿನಾಮಾಜೀವ್ಯ ಉಪಾಸ್ತೇ ತಸ್ಯೇಹಾನುಭಾವ ಉಪವರ್ಣಿತಃ ||೧||

ಎಲೈ ರಾಜನೇ! ಸಪ್ತರ್ಷಿಮಂಡಲಕ್ಕಿಂತಲೂ ಹದಿಮೂರು ಲಕ್ಷ

ಯೋಜನಗಳಷ್ಟು ಎತ್ತರದಲ್ಲಿ ಧ್ರುವಲೋಕವಿದೆಯಪ್ಪಾ. ಅದನ್ನು ಶ್ರೀಭಗವಂತನಾದ ವಿಷ್ಣುವಿನ ಪರಮಪದವೆಂದು ಕರೆಯುತ್ತಾರೆ. ಅಲ್ಲಿ ಉತ್ತನಪಾದನ ಪುತ್ರರತ್ನನೂ ಪರಮಭಗವದ್ಭಕ್ತನೂ ಆದ ಧ್ರುವನು ಬೆಳಗುತ್ತಿದ್ದಾನೆ. ಅಗ್ನಿ, ಇಂದ್ರ, ಪ್ರಜಾಪತಿ ಕಶ್ಯಪರು, ಧರ್ಮ ಮತ್ತು ಪ್ರಜಾಪತಿ–ಇವರೆಲ್ಲರೂ ಒಟ್ಟಿಗೆ ಅತ್ಯಾದರಪೂರ್ವಕವಾಗಿ ಆ ಧ್ರುವನನ್ನು ಪ್ರದಕ್ಷಿಣೆಮಾಡುತ್ತಿದ್ದಾರೆ. ಈಗಲೂ ಕೂಡ ಕಲ್ಪಕಾಲದವರೆಗೂ ಜೀವಿಸಿ ರುವ ಚಿರಂಜೀವಿಗಳಿಗೆ ಆ ಧ್ರುವನೇ ಆಧಾರವಾಗಿದ್ದಾನೆ. ಧ್ರುವನ ಲೋಕದ ಪ್ರಭಾವವನ್ನು ನಾವು ಹಿಂದೆಯೇ (ನಾಲ್ಕನೆಯ ಸ್ಕಂಧದಲ್ಲಿಯೇ) ವರ್ಣಿಸಿಯಾಗಿದೆ.

ಆ ಧ್ರುವನು-ಯಾರಿಗೂ ತಿಳಿಯದಂತೆ ನಿರಂತರವಾಗಿ ಅತಿವೇಗ ದಿಂದ ತಿರುಗುತ್ತಿರುವ ಭಗವತ್ಸ್ವರೂಪವಾದ ಕಾಲಚಕ್ರದ ಬಲದಿಂದ ತಿರುಗುತ್ತಿರುವ ಸೂರ್ಯನೇ ಮುಂತಾದವರಿಗೂ, ಅಶ್ವಿನಿಯೇ ಮುಂತಾದ ನಕ್ಷತ್ರಗಳಿಗೂ ಮತ್ತು ಸಾಧಾರಣವಾದ ನಕ್ಷತ್ರಗಳ ಗಣಕ್ಕೂ ಆಧಾರವಾದ ದೊಡ್ಡ ಸ್ತಂಭದಂತೆ ಪರಮಾತ್ಮನಿಂದ ಸ್ಥಾಪಿಸಲ್ಪಟ್ಟು ಸದಾ ಪ್ರಕಾಶಿಸು ತ್ತಿರುವನು. ಧಾನ್ಯವನ್ನು ತುಳಿಸುವುದಕ್ಕೋಸ್ಕರ ಮೇಟಿಯ ಕಂಭಕ್ಕೆ ಹಗ್ಗಗಳಿಂದ ಬಿಗಿಯಲ್ಪಟ್ಟ ಎತ್ತುಗಳು ಎಂದಿಗೂ ಆ ನೆಲೆಯನ್ನು ಬಿಡದೇ ಮಂಡಲಾಕಾರವಾಗಿ ಆ ಕಂಭವನ್ನೇ ಪ್ರದಕ್ಷಿಣೆಮಾಡುವುದಿಲ್ಲವೇ? ಹಾಗೆಯೇ ಸೂರ್ಯನೇ ಮುಂತಾದ ಗ್ರಹಗಳೂ, ಅಶ್ವಿನಿಯೇ ಮುಂತಾದ ನಕ್ಷತ್ರಗಳೂ ಆ ಕಾಲಚಕ್ರದ ಒಳಗೂ-ಹೊರಗೂ ಆ ಕಾಲಚಕ್ರದಲ್ಲಿ ನೇಮಕ ಗೊಂಡು ಮೇಟಿಯಂತೆ ಆಕಾಶದ ಮಧ್ಯದಲ್ಲಿರುವ ಧ್ರುವನನ್ನು ಆಶ್ರಯಿಸಿ ವಾಯುಪಾಶದಿಂದ ಸೆಳೆಯಲ್ಪಟ್ಟು ಕಲ್ಪದ ಕೊನೆಯವರೆಗೂ ಆ ಧ್ರುವನನ್ನು ಸುತ್ತುತ್ತಿರುವುವು. ಆಕಾಶದಲ್ಲಿ ಸಂಚಾರಮಾಡುವ ಮೋಡಗಳೂ, ಹದ್ದೇ ಮೊದಲಾದ ಹಕ್ಕಿಗಳೂ ಕರ್ಮಗಳಿಗೆ ಅಧೀನವಾಗಿ ವಾಯುಪಾಶದಿಂದ ಕೆಳಗೆ ಬೀಳದೇ ಅಲ್ಲಿಯೇ ಸುತ್ತುತ್ತಿರುವಂತೆ–ಗ್ರಹ-ನಕ್ಷತ್ರಾದಿಗಳೂ ಕೂಡ ತಮ್ಮ-ತಮ್ಮ ಕರ್ಮಾನುಸಾರವಾಗಿ ಸಂಚಾರಶಕ್ತಿಯನ್ನು ಪಡೆದು ಭೂಮಿಗೆ ಬೀಳದೇ ಆ ಕಾಲಚಕ್ರದಲ್ಲೇ ಸುತ್ತುತ್ತಿರುವುವು. ಕೆಲವರು ಆ ಗ್ರಹ-ನಕ್ಷತ್ರಗಳೇ ಮುಂತಾದ ಜ್ಯೋತಿಗಳ ಮಂಡಲವು ಶಿಶುಮಾರಚಕ್ರದಲ್ಲಿ

ದೃಢವಾಗಿ ನೆಲೆಗೊಂಡಿರುವುದಕ್ಕೆ ಶ್ರೀಭಗವಂತನ ಯೋಗಶಕ್ತಿಯೇ ಕಾರಣ ವೆಂದು ಹೇಳಿ ಆ ಯೋಗಮಾಯೆಯೇ ಶಿಶುಮಾರಚಕ್ರರೂಪದಲ್ಲಿದೆ ಯೆಂದು ನಿರೂಪಿಸುತ್ತಾರೆ. ಆ ಶಿಶುಮಾರಚಕ್ರದ ಆಕಾರವನ್ನು ಹೀಗೆ ವರ್ಣಿ ಸುವರು. ಆ ಶಿಶುಮಾರವು ಕುಂಡಲದ ಆಕಾರದಲ್ಲಿ ಸುತ್ತಿಕೊಂಡಿರುವ ಸರ್ಪದಂತಿದೆ. ಅದು ತಲೆಕೆಳಗಾಗಿ ಬಾಲವನ್ನು ಮೇಲಿಟ್ಟುಕೊಂಡಿದೆ. ಅದರ ಬಾಲದ ತುದಿಯ ಭಾಗದಲ್ಲಿ ಧ್ರುವನು ಬೆಳಗುತ್ತಿದ್ದಾನೆ. ಬಾಲದ ಮಧ್ಯ ಭಾಗದಲ್ಲಿ ಪ್ರಜಾಪತಿ, ಅಗ್ನಿ, ಇಂದ್ರ ಮತ್ತು ಧರ್ಮಪುರುಷರು ಪ್ರಕಾಶಿಸು ತ್ತಿದ್ದಾರೆ. ಬಾಲದ ಬುಡವನ್ನು ಧಾತಾ, ವಿಧಾತಾ—ಎಂಬ ದೇವರುಗಳು ಅಲಂಕರಿಸಿದ್ದಾರೆ. ಅದರ ಕಟಿಪ್ರದೇಶದಲ್ಲಿ ಸಪ್ತರ್ಷಿಗಳು ನೆಲೆಗೊಂಡಿ ದ್ದಾರೆ. ಪ್ರದಕ್ಷಿಣಾಕಾರವಾಗಿ ಮಂಡಲದ ಆಕಾರದಲ್ಲಿ ದೇಹವನ್ನು ಸುತ್ತಿಕೊಂಡಿರುವ ಆ ಸರ್ಪದ ಬಲಗಡೆಯಲ್ಲಿ ಅಭಿಜಿತ್ತೆಂಬ ನಕ್ಷತ್ರದಿಂದ ಪ್ರಾರಂಭವಾಗಿ ಪುನರ್ವಸೂನಕ್ಷತ್ರದವರೆಗಿನ ಹದಿನಾಲ್ಕು ನಕ್ಷತ್ರಗಳಿವೆ. ಆ ಹದಿನಾಲ್ಕು ನಕ್ಷತ್ರಗಳಿಗೆ ಉತ್ತರಾಯಣವೆಂದು ಹೆಸರು. ಎಡಭಾಗ ದಲ್ಲಿ ಪುಷ್ಯನಕ್ಷತ್ರದಿಂದ ಪ್ರಾರಂಭವಾಗಿ ಉತ್ತರಾಷಾಢದವರೆಗೆ ಹದಿನಾಲ್ಕು ನಕ್ಷತ್ರಗಳಿವೆ. ಅವುಗಳನ್ನು ದಕ್ಷಿಣಾಯನವೆಂದು ಕರೆಯುತ್ತಾರೆ. ಹೀಗೆ ಆ ಶಿಶುಮಾರ ಚಕ್ರದ ಎರಡು ಪಕ್ಕಗಳಲ್ಲಿಯೂ ಅಶ್ವಿನಿಯೇ ಮುಂತಾದ ಇಪ್ಪತ್ತೆಂಟು ನಕ್ಷತ್ರಗಳೂ ಸಮಸಂಖ್ಯೆಯ ಅವಯವಗಳಾಗಿವೆ. ಕುಂಡಲಾಕಾರದ ರಚನೆಯಲ್ಲಿ ಎರಡೂ ಕಡೆಯ ಅಂಗಗಳು ಸಮನಾಗಿರುವಂತೆ ಇಲ್ಲಿ ನಕ್ಷತ್ರಗಳ ಸಂಖ್ಯೆಯೂ ಸಮವಾಗಿದೆ. ಅದರ ಬೆನ್ನಿನಲ್ಲಿ ಅಜವೀಥಿಯೂ, ಮೂಲಾ, ಪೂರ್ವಾಷಾಢಾ ಮತ್ತು ಉತ್ತರಾಷಾಢಗಳೆಂಬ ಮೂರು ನಕ್ಷತ್ರಗಳ ಸಮೂಹವೂ ಬೆಳಗುತ್ತಿದೆ. ಉದರದಲ್ಲಿ ಆಕಾಶಗಂಗೆಯು ಪ್ರಕಾಶಿಸುತ್ತಿದೆ. ಎಲೈ ರಾಜನೇ! ಅದರ ಬಲ ಮತ್ತು ಎಡಭಾಗಗಳ ಕಟಿಗಳಲ್ಲಿ ಕ್ರಮವಾಗಿ ಪುನರ್ವಸೂ ಮತ್ತು ಪುಷ್ಯನಕ್ಷತ್ರಗಳು ಹೊಳೆಯುತ್ತಿವೆ. ಹಿಂದುಗಡೆಯ ಬಲ ಮತ್ತು ಎಡಪಾದ ಗಳಲ್ಲಿ ಆರ್ದ್ರೆ ಮತ್ತು ಆಶ್ಲೇಷಾನಕ್ಷತ್ರಗಳು ಪ್ರಕಾಶಿಸುತ್ತಿವೆ ಮತ್ತು ಬಲ ಮತ್ತು ಎಡಭಾಗಗಳ ಮೂಗುಹೊಳ್ಳೆಗಳಲ್ಲಿ ಕ್ರಮವಾಗಿ ಅಭಿಜಿತ್ ಮತ್ತು ಉತ್ತರಾಷಾಢಾನಕ್ಷತ್ರಗಳನ್ನು ನೋಡುತ್ತೇವೆ. ಹಾಗೆಯೇ ಬಲಗಣ್ಣು-

ಎಡಗಣ್ಣುಗಳಲ್ಲಿ ಕ್ರಮವಾಗಿ ಶ್ರವಣ ಮತ್ತು ಪೂರ್ವಾಷಾಢಾನಕ್ಷತ್ರಗಳೂ, ಬಲ ಮತ್ತು ಎಡಕಿವಿಗಳಲ್ಲಿ ಧನಿಷ್ಠಾ ಮತ್ತು ಮೂಲಾನಕ್ಷತ್ರಗಳೂ ವಿರಾಜಿಸುತ್ತಿವೆ. ಮಖೆಯೇ ಮುಂತಾದ ದಕ್ಷಿಣಾಯನದ ಎಂಟು ನಕ್ಷತ್ರಗಳು ಎಡಗಡೆಯ ಪಾದದ ವಂಕ್ರಿಗಳೆಂಬ ಮೂಳೆಗಳಲ್ಲಿ ಬೆಳಗುತ್ತಿವೆ. ಎಡಪಾದದ ವಂಕ್ರಿಗಳೆಂಬ ಮೂಳೆಗಳಲ್ಲಿ ಉತ್ತರಾಯಣವೆಂಬ ನಾಮಧೇಯವುಳ್ಳ ಮೃಗಶಿರೆಯೇ ಮುಂತಾದ ಎಂಟು ನಕ್ಷತ್ರಗಳು ಹಿಂದು-ಮುಂದಾಗಿ ನೆಲೆಸಿವೆ. ಶತಭಿಷೆ ಮತ್ತು ಜ್ಯೇಷ್ಠೆ–ಎಂಬ ಎರಡು ನಕ್ಷತ್ರಗಳು ಕ್ರಮವಾಗಿ ಬಲ ಮತ್ತು ಎಡಹೆಗಲುಗಳಲ್ಲಿ ಪ್ರಕಾಶಿಸುತ್ತಿವೆ. ಅದರ ಮೇಲುಭಾಗದ ದವಡೆಯಲ್ಲಿ ನಕ್ಷತ್ರರೂಪರಾದ ಅಗಸ್ತ್ಯರೂ, ಕೆಳದವಡೆಯಲ್ಲಿ ನಕ್ಷತ್ರ ರೂಪನಾದ ಯಮನೂ, ಮುಖಗಳಲ್ಲಿ ಮಂಗಳನೂ, ಲಿಂಗಪ್ರದೇಶದಲ್ಲಿ ಶನಿಯೂ, ಕತ್ತಿನ ಹೆರಳಿನಲ್ಲಿ ಬೃಹಸ್ಪತಿಯೂ, ಎದೆಯಲ್ಲಿ ಸೂರ್ಯನೂ, ಹೃದಯದಲ್ಲಿ ನಾರಾಯಣನೂ, ಮನಸ್ಸಿನಲ್ಲಿ ಚಂದ್ರನೂ, ಹೊಕ್ಕಳಿನಲ್ಲಿ ಶುಕ್ರನೂ, ಸ್ತನಗಳಲ್ಲಿ ಅಶ್ವಿನೀಕುಮಾರರೂ, ಪ್ರಾಣಾಪಾನಗಳಲ್ಲಿ ಬುಧನೂ, ಕತ್ತಿನಲ್ಲಿ ರಾಹುವೂ, ಸಮಸ್ತ ಅಂಗಗಳಲ್ಲಿ ಕೇತುವೂ, ರೋಮಗಳಲ್ಲಿ ಸಮಸ್ತತಾರೆಗಳೂ ನೆಲೆಗೊಂಡಿವೆ.

ಎಲೈ ರಾಜನೇ! ಇದು ಶ್ರೀಭಗವಂತನಾದ ವಿಷ್ಣುವಿನ ಸರ್ವದೇವ ಮಯವಾದ ಸ್ವರೂಪವು. ಪ್ರತಿದಿನವೂ ಸಾಯಂಕಾಲದಲ್ಲಿ ಪವಿತ್ರನಾಗಿ ಮೌನಿಯಾಗಿದ್ದು ಇದನ್ನು ದರ್ಶನಮಾಡುತ್ತಾ ಶ್ರೀಭಗವಂತನನ್ನು ಚಿಂತಿಸ (ಧ್ಯಾನಿಸ) ಬೇಕು–ಮತ್ತು ಈ ಮಂತ್ರವನ್ನು ಜಪಿಸುತ್ತಾ ಶ್ರೀಭಗವಂತನನ್ನು ಸ್ತುತಿಸಬೇಕು. **'ನಮೋ ಜ್ಯೋತಿರ್ಲೋಕಾಯ ಕಾಲಾಯ–ನಾಯಾನಿಮಿಷಾಂ ಪತಯೇ ಮಹಾಪುರುಷಾಯಾಭಿ ಧೀಮಹೀತಿ ॥'** 'ಇಡೀ ಜ್ಯೋತಿರ್ಗಣಗಳಿಗೆಲ್ಲಾ ಆಶ್ರಯನೂ, ಕಾಲಚಕ್ರಸ್ವರೂಪಿಯೂ ಸರ್ವದೇವತಾಧಿಪತಿಯೂ ಆದ ಪರಮಪುರುಷಪರಮಾತ್ಮನನ್ನು ನಾವು ನಮಸ್ಕಾರಪೂರ್ವಕವಾಗಿ ಧ್ಯಾನಿಸುತ್ತೇವೆ.' (ಶ್ಲೋಕ 2-8)

ಗ್ರಹರ್ಕ್ಷತಾರಾಮಯಮಾಧಿದೈವಿಕಂ
ಪಾಪಾಪಹಂ ಮನ್ತ್ರಕೃತಾಂ ತ್ರಿಕಾಲಮ್ ।

ನಮಸ್ಯತಃ ಸ್ಮರತೋ ವಾ ತ್ರಿಕಾಲಂ
ನಶ್ಯೇತ ತತ್ಕಾಲಜಮಾಶು ಪಾಪಮ್ ॥೯॥

ಗ್ರಹಗಳು, ನಕ್ಷತ್ರಗಳು ಮತ್ತು ತಾರೆಗಳ ರೂಪದಲ್ಲಿ ಶ್ರೀಭಗವಂತನ ಅಧಿದೈವಿಕರೂಪವೇ ಪ್ರಕಾಶಪಡುತ್ತಿದೆ. ಮೇಲೆ ಹೇಳಿದ ಮಂತ್ರವನ್ನು ತ್ರಿಕಾಲಗಳಲ್ಲಿಯೂ ಜಪಮಾಡುವ ಮನುಷ್ಯರ ಎಲ್ಲ ಪಾಪಗಳೂ ನಾಶ ಹೊಂದುತ್ತವೆ. ಪ್ರಾತಃಕಾಲ, ಮಧ್ಯಾಹ್ನಕಾಲ ಮತ್ತು ಸಾಯಂಕಾಲಗಳೆಂಬ ತ್ರಿಕಾಲಗಳಲ್ಲಿ ಶ್ರೀಭಗವಂತನ ಈ ಅಧಿದೈವಿಕರೂಪವನ್ನು ಪ್ರತಿದಿನವೂ ಪೂಜಿಸುವವನಿಗೆ ಅಥವಾ ಸ್ಮರಣೆಮಾಡುವವನಿಗೆ ಆಯಾ ಸಮಯದಲ್ಲಿ ಮಾಡಿದ ಪಾಪವು ಆಗಲೇ ಕಳೆದುಹೋಗುವುದು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಪಂಚಮಸ್ಕಂಧದ ೨೩ನೆಯ ಅಧ್ಯಾಯವು ಮುಗಿಯಿತು.

ಪಂಚಮಸ್ಕಂಧ ೨೪ನೆಯ ಅಧ್ಯಾಯ

ರಾಹುವೇ ಮುಂತಾದವರ ಸ್ಥಿತಿ ಮತ್ತು ಅತಲವೇ ಮುಂತಾದ ಅಧೋಲೋಕಗಳ ವರ್ಣನೆ

ಶ್ರೀಶುಕಮಹರ್ಷಿಗಳು ಭುವನಕೋಶದ ವರ್ಣನೆಯನ್ನು ಮುಂದು ವರಿಸುತ್ತಾ ಹೇಳುತ್ತಾರೆ :

ಅಧಸ್ತಾತ್ಸವಿತುರ್ಯೋಜನಾಯುತೇ ಸ್ವರ್ಭಾನುರ್ನಕ್ಷತ್ರ-ವಚ್ಚರತೀತ್ಯೇಕೇ ಯೋಽಸಾವಮರತ್ವಂ ಗ್ರಹತ್ವಂ ಚಾಲಭತ ಭಗವದನುಕಮ್ಪಯಾ ಸ್ವಯಮಸುರಾಪಸದಃ ಸೈಂಹಿಕೇಯೋ ಹ್ಯತದರ್ಹಸ್ತಸ್ಯ ತಾತ ಜನ್ಮಕರ್ಮಾಣಿ ಚೋಪರಿಷ್ಟಾದ್ವಕ್ಷ್ಯಾಮಃ ॥

“ಮಹಾರಾಜನೇ! ಕೇಳು. ಸೂರ್ಯನಿಗಿಂತಲೂ ಹತ್ತು ಸಾವಿರ ಯೋಜನಗಳಷ್ಟು ಕೆಳಗೆ ರಾಹುವು ನಕ್ಷತ್ರಗಳಂತೆ ಸಂಚರಿಸುತ್ತಿದ್ದಾನೆಂದು ಕೆಲವರು ಹೇಳುತ್ತಾರೆ. ಸಿಂಹಿಕೆಯ ಪುತ್ರನಾದ ಈ ರಾಹುವು ರಾಕ್ಷಸಾಧಮ ನಾಗಿ ದೇವತ್ವಕ್ಕೆ ಅಯೋಗ್ಯನಾಗಿದ್ದರೂ ಕೂಡ ಶ್ರೀಭಗವಂತನ ಅನುಗ್ರಹ

ದಿಂದ ದೇವತ್ವವನ್ನೂ, ಗ್ರಹತ್ವವನ್ನೂ ಪಡೆದುಕೊಂಡನು. ಈತನ ಹುಟ್ಟು ಮತ್ತು ಕರ್ಮಗಳನ್ನು ಮುಂದೆ+ ವರ್ಣಿಸುವೆನು.

ಅತ್ಯಂತ ಉಜ್ಜ್ವಲವಾಗಿ ಬೆಳಗುತ್ತಿರುವ ಸೂರ್ಯಮಂಡಲವು ಹತ್ತು ಸಾವಿರ ಯೋಜನಗಳಷ್ಟು ವಿಸ್ತಾರವಾಗಿದೆಯೆಂದು ಹೇಳುತ್ತಾರೆ. ಹಾಗೆಯೇ ಚಂದ್ರಮಂಡಲವು ಹನ್ನೆರಡು ಸಾವಿರ ಯೋಜನಗಳಷ್ಟು ವಿಸ್ತಾರವಾಗಿದೆ ಯೆಂದೂ ಮತ್ತು ರಾಹುವಿನ ಮಂಡಲವು ಹದಿಮೂರು ಸಾವಿರ ಯೋಜನ ಗಳಷ್ಟು ವಿಸ್ತಾರವಾಗಿದೆಯೆಂದೂ ಹೇಳುತ್ತಾರೆ. ಈ ರಾಹುವು ಸೂರ್ಯ-ಚಂದ್ರರೊಡನೆ ತನಗೆ ಹಿಂದೆ ಉಂಟಾದ ದ್ವೇಷದ ಕಾರಣದಿಂದಾಗಿ ಅವರನ್ನು ಮರೆಸುವುದಕ್ಕಾಗಿ ಅಮಾವಾಸ್ಯೆ-ಹುಣ್ಣಿಮೆಗಳ ಪರ್ವಕಾಲಗಳಲ್ಲಿ ಅವರನ್ನು ಅಟ್ಟಿಸಿಕೊಂಡು ಹೋಗುವನು.* ಇದನ್ನು ಕಂಡು ಶ್ರೀಭಗವಂತನು ಸೂರ್ಯ-ಚಂದ್ರರನ್ನು ರಕ್ಷಿಸುವುದಕ್ಕಾಗಿ ಅವರಿಬ್ಬರ ಬಳಿಗೂ ತನ್ನ ಪ್ರಿಯವಾದ ಸುದರ್ಶನಚಕ್ರವೆಂಬ ಅಸ್ತ್ರವನ್ನು ಕಳುಹಿಸಿಕೊಡುವನು. ನಿರಂತರವಾಗಿ ಸುತ್ತುತ್ತಿರುವ ಆ ಅಸ್ತ್ರದ ಮಹಾತೇಜಸ್ಸನ್ನು ತಡೆಯಲಾರದೇ ಕಳವಳಗೊಂಡ ರಾಹುವು ಕೊಂಚಕಾಲ ಮಾತ್ರ ಸೂರ್ಯ-ಚಂದ್ರರ ಮುಂದೆ ಇದ್ದು ಹಿಂದಿರುಗಿಬಿಡುವನು. ಹಾಗೆ ಹಿಂದಿರುಗುವುದಕ್ಕೆ ಮೊದಲು ಆತನು ಅವರ ಮುಂದೆ ಇದ್ದು ಅವರನ್ನು ಮರೆಮಾಡುವ ಕಾಲವನ್ನು 'ಗ್ರಹಣ' ಎಂದು ಕರೆಯುತ್ತಾರೆ.

+ ಮುಂದೆ ಎಂಟನೆಯ ಸ್ಕಂಧದಲ್ಲಿ.

* ದೇವಾಸುರರು ಕ್ಷೀರಸಮುದ್ರವನ್ನು ಕಡೆದು ಅಮೃತವನ್ನು ಸಂಪಾದಿಸಿದರು. ಆಗ ಮಹಾವಿಷ್ಣುವು ಲೋಕಕಂಟಕರಾದ ಅಸುರರನ್ನು ಮರುಳುಮಾಡಿ ಅಮೃತವು ದೇವತೆಗಳಿಗೆ ಮಾತ್ರವೇ ದೊರೆಯುವಂತೆ ಮಾಡಲು ಮೋಹಿನೀವೇಷಧಾರಿಯಾಗಿ ಅವರ ಮುಂದೆ ಕಾಣಿಸಿಕೊಂಡನು. ದೇವತೆಗಳನ್ನೂ ಮತ್ತು ಅಸುರರನ್ನೂ ಬೇರೆ ಬೇರೆ ಸಾಲುಗಳಲ್ಲಿ ಕುಳ್ಳಿರಿಸಿ, ದೇವತೆಗಳ ಸಾಲಿಗೆ ಅಮೃತವನ್ನು ಬಡಿಸುತ್ತಿದ್ದನು. ಆಗ ಸಿಂಹಿಕಾಪುತ್ರನಾದ ರಾಹುವು ಮಾಯೆಯಿಂದ ದೇವತಾರೂಪಧಾರಿಯಾಗಿ ದೇವತೆಗಳ ಸಾಲಿನಲ್ಲಿ ಕುಳಿತಿದ್ದರಿಂದ ಆತನಿಗೂ ಅಮೃತದ ಭಾಗವು ದೊರೆಯಿತು. ಆಗ ಸೂರ್ಯ-ಚಂದ್ರರು ರಾಹುವಿನ ಈ ಮೋಸವನ್ನು ಸಂಕೇತಮಾಡಲು ವಿಷ್ಣುವು ತನ್ನ ಸುದರ್ಶನಚಕ್ರದಿಂದ ಆ ಅಸುರನ ತಲೆಯನ್ನು ಕತ್ತರಿಸಿದನು. ಆದರೆ ಆತನು ಅಮೃತವನ್ನು ಪಾನಮಾಡಿದ್ದರಿಂದ

ರಾಹುವಿನಿಂದ ಹತ್ತು ಸಾವಿರ ಯೋಜನಗಳಷ್ಟು ಕೆಳಗೆ ಸಿದ್ಧರು, ಚಾರಣರು, ವಿದ್ಯಾಧರರು ಮುಂತಾದವರ ಸ್ಥಾನಗಳಿವೆ. ಆ ಸ್ಥಾನಗಳ ಕೆಳಗಡೆ ವಾಯುವಿನ ಸಂಚಾರವು ಎಲ್ಲಿಯವರೆಗೆ ಇರುವುದೋ ಮತ್ತು ಮೋಡಗಳು ಕಾಣಿಸುತ್ತವೆಯೋ–ಅದು ಅಂತರಿಕ್ಷಲೋಕವೆನಿಸುವುದು. ಆ ಅಂತರಿಕ್ಷವು–ಯಕ್ಷರು, ರಾಕ್ಷಸರು, ಪಿಶಾಚಗಳು, ಪ್ರೇತಗಳು ಮತ್ತು ಭೂತಗಳು–ಇವರ ವಿಹಾರಭೂಮಿಯಾಗಿದೆ. ಅಲ್ಲಿಂದ ಕೆಳಗೆ ನೂರು ಯೋಜನಗಳಷ್ಟು ದೂರದಲ್ಲಿ ಈ ಭೂಮಿಯಿದೆ. ಈ ಭೂಮಿಗೆ ಮೇಲೆ ಎಲ್ಲಿಯವರೆಗೆ ಹಂಸಗಳು, ಹದ್ದುಗಳು ಗಿಡುಗಗಳು ಮತ್ತು ಗರಡುಗಳೇ ಮುಂತಾದ ಮುಖ್ಯಜಾತಿಗಳ ಹಕ್ಕಿಗಳು ಸಂಚರಿಸುತ್ತವೆಯೋ–ಅಲ್ಲಿಯ ವರೆಗಿನ ಜಾಗವನ್ನು ಭೂಮಿಯ ಎಲ್ಲೆಗೆ ಸೇರಿದ್ದೆಂದೇ ತಿಳಿಯಬೇಕು.

(ಶ್ಲೋಕ 2-6)

ಭೂಮಿಯ ವಿಸ್ತಾರ, ಗ್ರಹಾದಿಗಳ ಸನ್ನಿವೇಶ ಮುಂತಾದುವುಗಳನ್ನು ಈ ಹಿಂದೆಯೇ ವರ್ಣಿಸಿದ್ದೇನೆ. ಈಗ ಈ ಭೂಮಿಗೂ ಕೆಳಗಿರುವ ಲೋಕ ಗಳನ್ನು ವರ್ಣಿಸುತ್ತೇನೆ ; ಕೇಳು. ಭೂಮಿಯ ಕೆಳಗಡೆ ಅತಲ, ವಿತಲ, ಸುತಲ, ತಲಾತಲ, ಮಹಾತಲ, ರಸಾತಲ ಮತ್ತು ಪಾತಾಳಗಳೆಂಬ ಏಳು ಲೋಕಗಳಿವೆ. ಇವುಗಳು ಭೂಮಿಯ ಮಹಾಬಿಲಗಳ ರೂಪದಲ್ಲಿರುವ ಲೋಕಗಳು. ಇವು ಒಂದಕ್ಕೊಂದು ಹತ್ತು ಸಾವಿರ ಯೋಜನಗಳಷ್ಟು ದೂರ ದಲ್ಲಿದ್ದು ಅಷ್ಟೇ ವಿಸ್ತಾರವನ್ನೂ ಹೊಂದಿವೆ. ಈ ಬಿಲರೂಪದ ಲೋಕಗಳು ಸ್ವರ್ಗದಂತೆಯೇ ಭೋಗಭೂಮಿಗಳು. ಸ್ವರ್ಗದಲ್ಲಿರುವುದಕ್ಕಿಂತಲೂ ಮಿಗಿ ಲಾದ ವಿಷಯಭೋಗಗಳೂ, ಐಶ್ವರ್ಯವೂ, ಆನಂದವೂ, ಸಂತಾನಸುಖವೂ

ಮರಣಹೊಂದದೇ ಬದುಕಿಕೊಂಡನು. ಆತನ ತಲೆಯ ಭಾಗವು ರಾಹುವಾಗಿ, ಉಳಿದ ಭಾಗವು ಕೇತುವಾಗಿ ಎರಡು ಗ್ರಹದೇವತೆಗಳಾದುವು. ಸೂರ್ಯ-ಚಂದ್ರರು ತನ್ನ ರಹಸ್ಯವನ್ನು ಸೂಚಿಸಿದರೆಂಬ ಕಾರಣದಿಂದ ಅವರ ಮೇಲೆ ದ್ವೇಷವನ್ನಿಟ್ಟು ಈ ರಾಹು-ಕೇತುಗಳು ಪರ್ವಕಾಲಗಳಲ್ಲಿ ಸೂರ್ಯ-ಚಂದ್ರರನ್ನು ಆವರಿಸಲು ಹೋಗುತ್ತಾರೆ. ಇದು ಗ್ರಹಣವನ್ನು ಕುರಿತ ಪೌರಾಣಿಕವಾದ ಕಥೆ. ಸೂರ್ಯ-ಚಂದ್ರರು ಬುದ್ಧಿತತ್ತ್ವ ಮತ್ತು ಮನಸ್ತತ್ತ್ವಗಳು. ಗ್ರಹಣ-ಪರ್ವಕಾಲಗಳಲ್ಲಿ ಅವುಗಳ ಮೇಲೆ ಆವರಣವುಂಟಾಗಿ ಅವು ಅಂತರ್ಮುಖವಾಗುವುದನ್ನು ಈ ಕಥಾಭಾಗವು ಸೂಚಿಸುವುದು.

ಮತ್ತು ಧನಸಂಪತ್ತೂ ಇಲ್ಲಿ ತುಂಬಿವೆ. ಇಲ್ಲಿಯ ವೈಭವೋಪೇತವಾದ ಭವನಗಳಲ್ಲೂ, ಉದ್ಯಾನವನಗಳಲ್ಲೂ, ಕ್ರೀಡಾಸ್ಥಳಗಳಲ್ಲೂ ದೈತ್ಯರೂ, ದಾನವರೂ ಮತ್ತು ನಾಗರೂ ವಿಚಿತ್ರವಾದ ಶಕ್ತಿಗಳಿಂದ ವಿವಿಧವಾಗಿ ವಿಹರಿಸುತ್ತಾ ವಾಸವಾಗಿದ್ದಾರೆ. ತಮ್ಮೊಡನೆ ಅತ್ಯಂತ ಪ್ರೇಮದಿಂದಿರುವ ಹೆಂಡಿರು-ಮಕ್ಕಳು-ನೆಂಟರಿಷ್ಟರು, ಸೇವಕರೇ ಮುಂತಾದವರೊಡನೆ ಗೃಹಸ್ಥಧರ್ಮದ ಭೋಗಗಳನ್ನು ಅನುಭವಿಸುತ್ತಿರುತ್ತಾರೆ. ಸದಾ ಸಂತುಷ್ಟರಾಗಿರುತ್ತಾರೆ. ಅವರ ಭೋಗಗಳಿಗೆ ಆತಂಕವನ್ನುಂಟುಮಾಡಲು ದೇವತೆಗಳಿಗೂ ಸಾಧ್ಯವಿಲ್ಲ. ಮಹಾರಾಜ! ಆ ಬಿಲಗಳಲ್ಲಿ ಮಹಾಮಾಯಾವಿಯಾದ ಮಯಾಸುರನು ನಿರ್ಮಿಸಿರುವ ನಾನಾನಗರಿಗಳು ತೊಳ-ತೊಳಗಿ ಬೆಳಗುತ್ತಿವೆ. ನಾನಾ ಜಾತಿಗಳಿಗೆ ಸೇರಿದ ಸುಂದರವಾದ ಮಹಾಮಣಿಗಳಿಂದ ಖಚಿತವಾದ ಚಿತ್ರ-ವಿಚಿತ್ರವಾದ ಭವನಗಳೂ, ಕೋಟೆಗಳೂ, ನಗರದ್ವಾರ ಗಳೂ, ಸಭಾಭವನಗಳೂ, ಅಂಗಳಗಳೂ, ಅರಮನೆಗಳೂ ಅಲ್ಲಿ ಕಂಗೊಳಿಸುತ್ತಿವೆ. ಅಲ್ಲಿಯ ಕೃತ್ರಿಮವಾದ ಭೂಪ್ರದೇಶಗಳಲ್ಲಿ ನಾಗದಂಪತಿಗಳೂ, ಅಸುರದಂಪತಿಗಳೂ, ಪಾರಿವಾಳ, ಗಿಳಿ, ಸಾರಿಕೆಗಳೇ ಮುಂತಾದ ಹಕ್ಕಿಗಳ ಜೋಡಿಗಳೂ ನಲಿಯುತ್ತಿರುವುವು. ಅಲ್ಲಿಯ ಉದ್ಯಾನವನಗಳ ಕಾಂತಿಯೂ ವರ್ಣನಾತೀತವಾದುದು. ದೇವಲೋಕದ ಉದ್ಯಾನವನಗಳ ಕಾಂತಿಯನ್ನೂ ನಾಚಿಸುವಂತಹುದು. ಹೂ-ಹಣ್ಣುಗಳ ಗೊಂಚಲುಗಳು ಮತ್ತು ಕೋಮಲವಾದ ಚಿಗುರೆಲೆಗಳ ಭಾರದಿಂದ ಬಾಗಿ ಬಳುಕುತ್ತಾ ಸುಂದರವಾದ ಕೊಂಬೆಗಳಿಂದ ಕೂಡಿ ಬಗೆ-ಬಗೆಯ ಬಳ್ಳಿಗಳಿಂದ ಆಲಿಂಗಿತವಾಗಿರುವ ಅಲ್ಲಿನ ವೃಕ್ಷಗಳು ಕಣ್ಮನಗಳನ್ನು ಸೂರೆಗೊಳ್ಳುತ್ತವೆ. ತಿಳಿನೀರಿನ ಕೊಳಗಳೂ ಕಣ್ಮನಗಳನ್ನು ತಣಿಸುತ್ತವೆ. ಕಲ-ಕಲನಿನಾದಮಾಡುತ್ತಿರುವ ಹಕ್ಕಿಗಳ ಜೋಡಿಗಳು ಅವುಗಳ ಕಾಂತಿಯನ್ನು ಮತ್ತೂ ಹೆಚ್ಚಿಸಿವೆ. ನಯನಮನೋಹರವಾಗಿ ನೀರಾಟವಾಡುತ್ತಾ, ಚಿಮ್ಮುತ್ತಾ, ಮಿನುಗುತ್ತಾ ನೀರನ್ನು ಅಲುಗಿಸುತ್ತಿರುವ ಮೀನುಗಳ ಚೆಲ್ಲಾಟದ ಸೊಬಗೇನು! ಆ ಚಲಿಸುವ ನೀರಿನಲ್ಲಿ ಬೆಳೆದು ಅಲುಗಾಡುತ್ತಾ ಕಳ-ಕಳಿಸುತ್ತಿರುವ ಕನ್ನೈದಿಲೆ, ಕೆಂದಾವರೆ, ಬೆಳ್ದಾವರೆ, ನೂರು ದಳಗಳ ತಾವರೆಯೇ ಮುಂತಾದ ಕಂಪು-ತಂಪುಗಳುಳ್ಳ ಹೂವುಗಳ ಬೆಡಗೇನು! ಆ ತಾವರೆಕೊಳಗಳಲ್ಲಿ ಎಡೆ-ಬಿಡದೇ ಕ್ರೀಡಿಸುತ್ತಾ ಕಿವಿಗಿಂಪಾಗಿ

ಕಲ-ಕಲನಿನಾದಮಾಡುತ್ತಿರುವ ಹಕ್ಕಿಗಳ ಚೆಲುವೇನು! ಎಲ್ಲವೂ ಸೇರಿ ಎಲ್ಲ ಇಂದ್ರಿಯಗಳಿಗೂ ಹಬ್ಬದ ಔತಣವನ್ನು ಬೀರುತ್ತಿವೆ. ಸೂರ್ಯನ ಪ್ರಕಾಶವೇ ಬೀಳದಿರುವ ಜಾಗವಾದ್ದರಿಂದ ಅಲ್ಲಿ ಹಗಲು-ರಾತ್ರಿಗಳ ಅಡಚಣೆಯಿಲ್ಲ. ಹಾಗಾದರೆ ಬೆಳಕಿನ ಸುಖ-ಭೋಗಗಳು ಹೇಗೆ?—ಎಂದರೆ : ಅಲ್ಲಿರುವ ಮಹಾಸರ್ಪಗಳ ಹೆಡೆಗಳಲ್ಲಿ ಜಗಜಗಿಸುತ್ತಿರುವ ರತ್ನಗಳೇ ಅಲ್ಲಿಯ ಕತ್ತಲೆಯನ್ನು ತೊಲಗಿಸಿಬಿಡುತ್ತವೆ. ಅಲ್ಲಿ ವಾಸಿಸುವ ಜನರು ದಿವ್ಯವಾದ ಔಷಧಿಗಳನ್ನೂ, ರಸಾಯನಗಳನ್ನೂ, ರಸಗಳನ್ನೂ ಸೇವಿಸುತ್ತಾ ಅವು ಗಳಿಂದಲೇ ಅನ್ನ-ಪಾನ-ಸ್ನಾನಾದಿಗಳನ್ನೂ ಮಾಡುವರು. ಇದರಿಂದ ಅವರಿಗೆ ದೈಹಿಕ-ಮಾನಸಿಕವಾದ ರೋಗ-ರುಜಿನಗಳ ಸ್ಪರ್ಶವಿಲ್ಲ. ಸುಕ್ಕು, ನರೆ ಗೂದಲು, ಮುಪ್ಪು, ಮೈಬಣ್ಣ ಕುಂದುವಿಕೆ, ದುರ್ಗಂಧ, ಬೆವರು, ಬೇಸರ, ಆಯಾಸ, ವಯಸ್ಸಿನಿಂದುಂಟಾಗುವ ದೇಹವಿಕಾರ—ಯಾವುದೂ ಉಂಟಾಗು ವುದಿಲ್ಲ. ಅವರು ಸದಾಸುಂದರರಾಗಿ ಅರೋಗದೃಢಕಾಯರಾದ ತರುಣ-ತರುಣಿಯರೇ ಆಗಿರುವರು. ಆ ಪುಣ್ಯಾತ್ಮರಿಗೆ ಶ್ರೀಭಗವಂತನ ತೇಜೋ ರೂಪವಾದ ಸುದರ್ಶನಚಕ್ರವನ್ನು ಬಿಟ್ಟು ಬೇರಾವುದರಿಂದಲೂ ಮರಣ ವಿಲ್ಲ. ಆ ಚಕ್ರದ ತೇಜಸ್ಸು ಬಂದೊಡನೆಯೇ ಅಸುರರಮಣಿಯರಿಗೆ ಭಯದಿಂದ *ಗರ್ಭಸ್ರಾವ ; ಗರ್ಭಪಾತಗಳುಂಟಾಗುವುವು. ಆ ಏಳು ಕೆಳಗಿನ ಲೋಕಗಳಲ್ಲಿ ಅತಲವೆಂಬ ಲೋಕದಲ್ಲಿ ಮಾಯಾವಿಶಾರದ ನಾದ ಮಯದಾನವನ ಪುತ್ರನಾದ ಬಲಾಸುರನು ವಾಸವಾಗಿರುವನು. ಆತನು ತೊಂಬತ್ತಾರು ಬಗೆಯ ಮಾಯೆಗಳನ್ನೂ ಸೃಷ್ಟಿಮಾಡಿದ್ದಾನೆ. ಅವುಗಳಲ್ಲಿ ಕೆಲವನ್ನು ಇಂದಿಗೂ ಮಾಯಾವಿಗಳು ಪ್ರಯೋಗಿಸುವುದನ್ನು ನೋಡುತ್ತೇವೆ. ಆ ಬಲಾಸುರನು ಒಮ್ಮೆ ಆಕಳಿಸಿದಾಗ ಆತನ ಮುಖ ದಿಂದ ಸ್ವೈರಿಣೀ, ಕಾಮಿನೀ ಮತ್ತು ಪುಂಶ್ಚಲೀ—ಎಂಬ ಮೂರು ಬಗೆಯ

---

* ಗರ್ಭಸ್ರಾವ ಮತ್ತು ಗರ್ಭಪಾತಗಳಿಗೆ ವ್ಯತ್ಯಾಸವೇನೆಂದರೆ : 'ಆಚತುರ್ಥಾ ದ್ಭವೇತ್ಸ್ರಾವಃ ಪಾತಃ ಪಞ್ಚಮಷಷ್ಠಯೋಃ'—ಎಂಬಂತೆ ನಾಲ್ಕು ತಿಂಗಳೊಳಗೆ ಗರ್ಭವು ಇಳಿದುಹೋದರೆ ಅದಕ್ಕೆ ಗರ್ಭಸ್ರಾವವೆಂದು ಹೆಸರು. ಐದನೆಯ ಅಥವಾ ಆರನೆಯ ತಿಂಗಳುಗಳಲ್ಲಿ ಗರ್ಭವು ಇಳಿದುಹೋದರೆ ಅದನ್ನು ಗರ್ಭಪಾತವೆನ್ನುತ್ತಾರೆ.

ಗರತಿಯರಲ್ಲದ ಹೆಂಗಸರು ಜನಿಸಿದರು. (ಇವರಲ್ಲಿ ತನ್ನ ವರ್ಣಕ್ಕೆ ಸೇರಿದ ಪುರುಷನಲ್ಲಿ ಮಾತ್ರ ರಮಿಸುವ ಹೆಂಗಸಿಗೆ ಸ್ವೈರಿಣಿಯೆಂದು ಹೆಸರು. ಇತರ ವರ್ಣಗಳ ಪುರುಷರಲ್ಲೂ ರಮಿಸುವ ಸ್ತ್ರೀಯರಿಗೆ ಕಾಮಿನಿಯರೆಂದು ಹೆಸರು ಮತ್ತು ಈ ಇಬ್ಬರಿಗಿಂತಲೂ ಅತ್ಯಂತ ಚಪಲೆಯಾಗಿ ಸ್ವೇಚ್ಛೆಯಾಗಿ ಎಲ್ಲ ಪುರುಷರಲ್ಲೂ ರಮಿಸುವವಳಿಗೆ ಪುಂಶ್ಚಲಿಯೆಂದು ಹೆಸರು.) ಆ ಸ್ತ್ರೀಯರು ಈ ಅತಲಲೋಕದಲ್ಲಿ ವಾಸಮಾಡುವ ಪುರುಷನಿಗೆ ಹಾಟಕವೆಂಬ ರಸವನ್ನು ಕುಡಿಸಿ ಆತನನ್ನು ಸಂಭೋಗಸಮರ್ಥನನ್ನಾಗಿಸಿ, ವಶಪಡಿಸಿಕೊಳ್ಳುತ್ತಾರೆ ಮತ್ತು ತಮ್ಮ ಹಾವ-ಭಾವಗಳಿಂದಲೂ, ತುಂಬಿದ ನೋಟಗಳಿಂದಲೂ, ಕಿರುನಗೆಯಿಂದಲೂ, ಸವಿಮಾತು ಮತ್ತು ಆಲಿಂಗನೆಗಳಿಂದಲೂ ಆತನನ್ನು ಸೂರೆಗೊಂಡು ಯಥೇಷ್ಟವಾಗಿ ಆತನೊಡನೆ ರಮಿಸುತ್ತಾರೆ. ಆ ಹಾಟಕರಸವನ್ನು ಕುಡಿದ ಮನುಷ್ಯನು ಮತ್ತಿನಿಂದ ಕುರುಡನಂತಾಗಿ, ತಾನು ಹತ್ತು ಸಾವಿರ ಆನೆಗಳಷ್ಟು ಬಲವುಳ್ಳವನು ಎಂದು ಭಾವಿಸಿಕೊಂಡು 'ನಾನೇ ಈಶ್ವರನು! ನಾನೇ ಸಿದ್ಧನು!'—ಎಂದು ಬಡಬಡಿಸತೊಡಗುವನು.

(ಶ್ಲೋಕ 7-16)

ಅದರಿಂದ ಕೆಳಗಡೆಯದು ವಿತಲಲೋಕ. ಅಲ್ಲಿ ಭಗವಂತನಾದ ಹಾಟಕೇಶ್ವರರೆಂಬ ಹೆಸರಿನ ಮಹಾದೇವನು ತನ್ನ ಪರಿವಾರವಾದ ಭೂತಗಣ ಗಳೊಡನೆ ವಾಸಮಾಡುತ್ತಾ ಪ್ರಜಾಪತಿಯ ಸೃಷ್ಟಿಯನ್ನು ವೃದ್ಧಿಪಡಿಸು ವುದಕ್ಕೋಸ್ಕರ ಭವಾನೀದೇವಿಯೊಡನೆ ವಿಹರಿಸುತ್ತಾನೆ. ಅವರಿಬ್ಬರ ಸಮಾಗಮದ ತೇಜಸ್ಸಿನಿಂದ ಅಲ್ಲಿ 'ಹಾಟಕೀ' ಎಂಬ ಶ್ರೇಷ್ಠವಾದ ನದಿಯು ಹರಿದುಬರುವುದು. ಅದರ ನೀರನ್ನು ವಾಯುವಿನಿಂದ ಪ್ರೇರಿತನಾಗಿ ಅಗ್ನಿದೇವನು ಉತ್ಸಾಹದಿಂದ ಪಾನಮಾಡುವನು. ಅವನು ಕುಡಿದು ಉಗುಳುವ ಆ ರುದ್ರವೀರ್ಯಕ್ಕೆ ಹಾಟಕಸುವರ್ಣವೆಂದು ಹೆಸರು. ಆ ಸುವರ್ಣದಿಂದ ಮಾಡಿದ ಆಭರಣಗಳನ್ನು ದೈತ್ಯರಾಜರ ಅಂತಃಪುರದ ಸ್ತ್ರೀ-ಪುರುಷರೆಲ್ಲರೂ ಧರಿಸುವರು. ಈ ವಿತಲಲೋಕಕ್ಕೆ ಕೆಳಗಿನದು ಸುತಲ ಲೋಕ. ಮಹಾಯಶಸ್ವಿಯೂ ಪವಿತ್ರವಾದ ಕೀರ್ತಿಯಿಂದ ಸಂಪನ್ನನೂ ಆಗಿರುವ ವಿರೋಚನನ ಪುತ್ರನಾದ ಬಲಿಯು ಅಲ್ಲಿ ವಾಸವಾಗಿದ್ದಾನೆ. ಶ್ರೀಭಗವಂತನು ಇಂದ್ರನಿಗೆ ಪ್ರಿಯವನ್ನುಂಟುಮಾಡುವುದಕ್ಕಾಗಿ ಅದಿತಿ

ದೇವಿಯ ಗರ್ಭದಲ್ಲಿ ವಾಮನವಟುವಿನ ರೂಪದಲ್ಲಿ ಅವತಾರ ಮಾಡಿ ಬಲಿಚಕ್ರವರ್ತಿಯಿಂದ ಮೂರು ಲೋಕಗಳನ್ನೂ ಕಿತ್ತುಕೊಂಡನು. ಅನಂತರ ಶ್ರೀಭಗವಂತನ ಕರುಣೆಯಿಂದಲೇ ಆತನಿಗೆ ಸುತಲಲೋಕದಲ್ಲಿ ಪ್ರವೇಶವು ದೊರೆಯಿತು. ಇಂದ್ರನೇ ಮುಂತಾದವರಲ್ಲಿಯೂ ಇಲ್ಲದೇ ಇರುವ ಉತ್ಕೃಷ್ಟವಾದ ಸಂಪತ್ತನ್ನು ಭಗವದನುಗ್ರಹದಿಂದ ಅಲ್ಲಿ ಪಡೆದುಕೊಂಡು ಮಹಾತ್ಮನಾದ ಬಲಿಯು ತನ್ನ ಆ ಪೂಜ್ಯತಮನಾದ ಪ್ರಭುವನ್ನು ಧರ್ಮಾಚರಣೆಯ ಮೂಲಕ ಆರಾಧಿಸುತ್ತಾ ಇಂದಿಗೂ ಯಾವ ಭಯವೂ ಇಲ್ಲದೇ ಸುಖವಾಗಿ ಅಲ್ಲಿ ವಾಸಮಾಡುತ್ತಿದ್ದಾನೆ. ಎಲೈ ರಾಜೇಂದ್ರನೇ! ಸಮಸ್ತಜೀವಿಗಳಿಗೂ ನಿಯಾಮಕನಾಗಿ ಆತ್ಮಸ್ವರೂಪನೂ ಆಗಿರುವ ಪರಮಾತ್ಮನಾದ ಭಗವಾನ್ ಶ್ರೀ ವಾಸುದೇವನಂತಹ ಪೂಜ್ಯತಮನೂ ಪವಿತ್ರತಮನೂ ಆಗಿರುವ ಪಾತ್ರವಿಶೇಷಕ್ಕೆ ಅತ್ಯಂತ ಶ್ರದ್ಧೆ-ಆದರಗಳಿಂದ, ಸ್ಥಿರವಾದ ಚಿತ್ತದಿಂದ ಭೂಮಿದಾನವನ್ನು ಮಾಡಿದ್ದಕ್ಕಾಗಿ ಬಲೀಂದ್ರನಿಗೆ ಸುತಲಲೋಕದ ಐಶ್ವರ್ಯವು ದೊರಕಿದ್ದೇ ಮುಖ್ಯಫಲವಲ್ಲ. ಏಕೆಂದರೆ : ಇದು ಅನಿತ್ಯವಾದುದು. ಶ್ರೀಭಗವಂತನಿಗೆ ಸಮರ್ಪಿಸಿದ ಈ ಭೂಮಿ ಪ್ರದಾನವು ಸಾಕ್ಷಾತ್ ಮೋಕ್ಷಕ್ಕೇ ದ್ವಾರ. ಮೋಕ್ಷವನ್ನು ಬಯಸುವವರು ಯಾವ ಕರ್ಮಬಂಧನವನ್ನು ಕಷ್ಟಕರವಾದ ಅನೇಕ ಸಾಧನಗಳಿಂದ ಕತ್ತರಿಸಿಕೊಳ್ಳುವರೋ–ಆ ಕರ್ಮದ ಕಟ್ಟು ಶ್ರೀಭಗವಂತನ ದಿವ್ಯನಾಮ ವನ್ನು–ಕೆಮ್ಮುವುದು, ಬೀಳುವುದು, ಜಾರುವುದು–ಇವೇ ಮುಂತಾದ ಸಮಯಗಳಲ್ಲಿ ಆಕಸ್ಮಿಕವಾಗಿ ಉಚ್ಚರಿಸಿದಷ್ಟರಿಂದಲೇ ಕತ್ತರಿಸಿಹೋಗು ವುದು. ಆದುದರಿಂದ ಸಂಯಮಿಗಳಾದ ತನ್ನ ಭಕ್ತರಿಗೂ, ಜ್ಞಾನಿಗಳಿಗೂ ಸ್ವರೂಪವನ್ನೇ ದಯಪಾಲಿಸುವ ಸರ್ವಾತ್ಮನಾದ ಶ್ರೀಭಗವಂತನಿಗೆ ಮಾಡಿದ ಭೂಮಿದಾನಕ್ಕೆ ಈ ಸುತಲಲೋಕಪ್ರಾಪ್ತಿಯು ಮುಖ್ಯಫಲವಾಗಲಾರದು. ತನ್ನ ಸರ್ವಸ್ವವನ್ನೂ ಸಮರ್ಪಣೆಮಾಡಿದ ಭಕ್ತಶ್ರೇಷ್ಠನಾದ ಬಲೀಂದ್ರನಿಗೆ ಶ್ರೀಭಗವಂತನು ಆ ಸಮರ್ಪಣೆ ಬದಲಿಗೆ ತನ್ನನ್ನು ಮರೆಸುವಂತಹ ಈ ಮಾಯಾಮಯವಾದ ಐಶ್ವರ್ಯವಷ್ಟನ್ನೇ ಕೊಟ್ಟಿದ್ದ ಪಕ್ಷದಲ್ಲಿ ಅದು ದೊಡ್ಡ ಅನುಗ್ರಹವೇನೂ ಆಗುತ್ತಿರಲಿಲ್ಲ. ಬೇರಾವ ಉಪಾಯವನ್ನೂ

ಕಾಣದೇ ಶ್ರೀಭಗವಂತನು ಯಾಚನೆಮಾಡುವ ಕಪಟವ್ಯಾಜದಿಂದ ಆತನ ತ್ರೈಲೋಕ್ಯರಾಜ್ಯವನ್ನು ಕಿತ್ತುಕೊಂಡು, ಶರೀರವು ಮಾತ್ರವೇ ಉಳಿಯು ವಂತೆ ಮಾಡಿ, ವರುಣಪಾಶಗಳಿಂದಲೂ ಕಟ್ಟಿಹಾಕಿ ಪರ್ವತದ ಗುಹೆಯಲ್ಲಿ ಹಾಕಿದ ಸಮಯದಲ್ಲಿ ಮಹಾತ್ಮನಾದ ಬಲೀಂದ್ರನು ಸ್ವಾಮಿಯಲ್ಲಿ ಏನು ಅರಿಕೆ ಮಾಡಿದನೆಂಬುದನ್ನು ಗಮನಿಸು : “ಈ ಇಂದ್ರನು ವಿದ್ವಾಂಸ ನಾಗಿದ್ದರೂ ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುವ ವಿಷಯದಲ್ಲಿ ಕುಶಲ ನಲ್ಲ. ಈತನು ತನ್ನ ಸಂಪತ್ತನ್ನು ಪಡೆದುಕೊಳ್ಳುವುದಕ್ಕಾಗಿ ಇತರರನ್ನು ಬಿಟ್ಟು ಮಹಾಬುದ್ಧಿಶಾಲಿಯಾದ ಬೃಹಸ್ಪತಿಯನ್ನೇ ತನ್ನ ಮಂತ್ರಿ ಯನ್ನಾಗಿ ಮಾಡಿಕೊಂಡನು. ಆದರೂ ಅವಿವೇಕದಿಂದ ಆತನನ್ನು ಅನಾದರಿಸಿ ಶ್ರೀಭಗವಂತನಿಂದ ಭಗವಂತನ ದಾಸ್ಯವನ್ನು ಕೇಳಿಕೊಳ್ಳದೇ ಹೋದನು. ಆತನ ಮೂಲಕ ತನಗೋಸ್ಕರ ನನ್ನ ಕಡೆಯಿಂದ ಈ ಭೋಗಗಳನ್ನೇ ಬೇಡಿದನು. ಈ ತ್ರೈಲೋಕ್ಯರಾಜ್ಯವೇನೂ ಸ್ಥಿರವಲ್ಲ. ಅನಂತವಾದ ಕಾಲದ ಒಂದು ಅವಯವವಾಗಿರುವ ಒಂದು ಮನ್ವಂತರ ಕಾಲ ಮಾತ್ರ ಇರುವುದು. ಶ್ರೀಭಗವಂತನ ಕೈಂಕರ್ಯದ ಮುಂದೆ ಈ ತುಚ್ಛವಾದ ಭೋಗಗಳಿಗೆ ಏನು ತಾನೇ ಬೆಲೆಯಿದ್ದೀತು! ನಮ್ಮ ತಾತ ನಾದ ಪ್ರಹ್ಲಾದನಾದರೋ ಶ್ರೀಭಗವಂತನಿಂದ ತನ್ನ ತಂದೆಯಾದ ಹಿರಣ್ಯಕಶಿಪುವು ಸಂಹರಿಸಲ್ಪಟ್ಟಾಗ–ಆ ಶ್ರೀಭಗವಂತನಿಂದ ಭಗವತ್ಸೇವೆಯ ವರವನ್ನು ಮಾತ್ರವೇ ಬೇಡಿದನು. ಶ್ರೀಭಗವಂತನು ತನಗೆ ನಿಷ್ಕಂಟಕವಾದ ತಂದೆಯ ರಾಜ್ಯಸಂಪತ್ತನ್ನು ಕೊಡುವವನಾಗಿದ್ದರೂ ‘ಅದು ಶ್ರೀಭಗವಂತನಿ ಗಿಂತಲೂ ಬೇರೆಯಾದುದು. ಶ್ರೀಭಗವಂತನಿಂದ ದೂರಮಾಡುವುದು’– ಎಂದರಿತು ಅದನ್ನು ಯಾಚಿಸಲಿಲ್ಲ. ಇನ್ನೂ ಮನಸ್ಸಿನ ಕಲ್ಮಷಗಳನ್ನು ತೊಳೆದುಕೊಳ್ಳದೇ ಇರುವ, ಶ್ರೀಭಗವಂತನ ಅನುಗ್ರಹವನ್ನು ಪಡೆಯದೇ ಇರುವ ನನ್ನಂತಹವನು ಆ ಮಹಾನುಭಾವನ ಮಟ್ಟಕ್ಕೆ ಏರಲಾದೀತೇ?”– ಎಂದು ಆತನು ಉದ್ಗರಿಸಿದನು. ಎಲೈ ರಾಜೇಂದ್ರನೇ! ಈ ಬಲೀಂದ್ರನ ಚರಿತ್ರವನ್ನು ನಾನು ಮುಂದೆ* ವಿಸ್ತಾರವಾಗಿ ತಿಳಿಸುವೆನು. ಶ್ರೀಭಗವಂತನ ಹೃದಯವು ಭಕ್ತರ ವಿಷಯದಲ್ಲಿ ಸದಾ ದಯಾಪೂರ್ಣವಾಗಿರುವುದು.

---

* ಮುಂದೆ ಎಂಟನೆಯ ಸ್ಕಂಧದಲ್ಲಿ

ಅದಕ್ಕೇ ಸಮಸ್ತಲೋಕಗಳಿಗೂ ಗುರುವಾಗಿರುವ ಆ ಶ್ರೀಭಗವಂತನಾದ ನಾರಾಯಣನು ಕೈಯಲ್ಲಿ ಗದೆಯನ್ನು ಹಿಡಿದುಕೊಂಡು ಸುತಲಲೋಕದ ರಾಜನಾಗಿರುವ ಈ ಬಲಿಚಕ್ರವರ್ತಿಯ ಮನೆಯ ಬಾಗಿಲಿನಲ್ಲಿ ಸದಾ ಇರುತ್ತಿದ್ದಾನೆ. ದುರಹಂಕಾರಿಯಾದ ರಾವಣನು ಒಮ್ಮೆ ದಿಗ್ವಿಜಯ ಮಾಡುತ್ತಾ ಸುತಲಲೋಕಕ್ಕೆ ಬಂದಾಗ ಶ್ರೀಭಗವಂತನು ಆತನನ್ನು ತನ್ನ ಕಾಲ ಹೆಬ್ಬೆರಳಿನಿಂದಲೇ ಲಕ್ಷಾಂತರ ಯೋಜನಗಳಷ್ಟು ದೂರಕ್ಕೆ ಹೋಗಿ ಬೀಳುವಂತೆ ಚಿಮ್ಮಿಸಿಬಿಟ್ಟನು. ಅಂತಹ ಜಗತ್ಪ್ರಭುವು ಭಕ್ತವಾತ್ಸಲ್ಯದಿಂದ ಬಲಿಯ ದ್ವಾರಪಾಲಕನಾಗಿದ್ದಾನೆ. (ಶ್ಲೋಕ 17-27)

ಸುತಲಲೋಕದ ಕೆಳಗೆ ತಲಾತಲಲೋಕವಿದೆ. ಅಲ್ಲಿ ತ್ರಿಪುರಗಳಿಗೆ ಅಧಿಪತಿಯಾಗಿ ಮಾಯಾವಿಗಳಿಗೆ ಪರಮಾಚಾರ್ಯನಾಗಿರುವ ದಾನವರಾಜನಾದ ಮಯನು ವಾಸವಾಗಿದ್ದಾನೆ. ಹಿಂದೆ ಶ್ರೀಭಗವಂತನಾದ ಪುರಾರಿ ಯಾದ ಶ್ರೀಮಹಾದೇವನು ಮೂರು ಲೋಕಗಳಿಗೂ ಮಂಗಳವನ್ನುಂಟು ಮಾಡುವುದಕ್ಕಾಗಿ ಆತನ ಮೂರು ಪುರಗಳನ್ನು ಸುಟ್ಟು ಬೂದಿಮಾಡಿ ಹಾಕಿದನು. ಅನಂತರ ಅವನಲ್ಲಿ ದಯೆತೋರಿ ಪುನಃ ಆ ಸ್ಥಾನವನ್ನು ಆತನಿಗೇ ದಯಪಾಲಿಸಿದನು. ಅಲ್ಲಿ ಈತನು ಆ ಮಹಾದೇವನಿಂದ ಸುರಕ್ಷಿತನಾಗಿ ಸುದರ್ಶನಚಕ್ರದ ಭಯವಿಲ್ಲದೇ ನೆಮ್ಮದಿಯಾಗಿದ್ದು ಅಲ್ಲಿನ ಜನರಿಂದ ಪೂಜಿಸಲ್ಪಡುತ್ತಿದ್ದಾನೆ. ತಲಾತಲಲೋಕದ ಕೆಳಗೆ ಕದ್ರುಪುತ್ರರಾದ, ಅನೇಕ ಹೆಡೆಗಳಿಂದ ಕೂಡಿರುವ, 'ಕ್ರೋಧವಶ'ರೆಂಬ ಹೆಸರುಳ್ಳ ಮಹಾ ಕೋಪಿಷ್ಠಪ್ರಕೃತಿಯ ಸ್ವಭಾವಗಳುಳ್ಳ ಸರ್ಪಗಳ ಗುಂಪು ವಾಸಮಾಡುತ್ತಿದೆ. ಕುಹಕ, ತಕ್ಷಕ, ಕಾಲಿಯ, ಸುಷೇಣನೇ ಮುಂತಾದವರು ಆ ಸರ್ಪಗಳಲ್ಲಿ ಪ್ರಮುಖರು. ದೊಡ್ಡ-ದೊಡ್ಡ ಹೆಡೆಗಳುಳ್ಳ ಆ ಮಹಾಸರ್ಪಗಳು ಶ್ರೀಭಗವಂತನ ವಾಹನವಾದ ಪಕ್ಷಿರಾಜ ಶ್ರೀ ಗರುಡನಿಗೆ ನಿರಂತರವಾಗಿ ಹೆದರುತ್ತಿದ್ದರೂ ಕೆಲವೊಮ್ಮೆ ತಮ್ಮ ಹೆಂಡಿರು, ಮಕ್ಕಳು, ಮಿತ್ರರು ಮತ್ತು ಕುಟುಂಬದವರ ಸಂಗದಲ್ಲಿ ಮತ್ತೇರಿ ಸಂತೋಷದಿಂದ ವಿಹರಿಸುತ್ತಿರುವರು.

ಅದರ ಕೆಳಗಿರುವ ರಸಾತಲವೆಂಬ ಲೋಕದಲ್ಲಿ 'ಪಣಿ' ಎಂಬ ಹೆಸರುಳ್ಳ ದೈತ್ಯರೂ–ದಾನವರೂ ವಾಸವಾಗಿದ್ದಾರೆ. ಅವರಲ್ಲಿ ನಿವಾತ

ಕವಚರು, ಕಾಲೇಯರು ಮತ್ತು ಹಿರಣ್ಯಪುರವಾಸಿಗಳು–ಎಂದು ಕರೆಯಲ್ಪಡುವ ಮೂರು ಪಂಗಡಗಳುಂಟು. ದೇವತೆಗಳಿಗೆ ಸಹಜವಾಗಿಯೇ ಶತ್ರುಗಳಾಗಿರುವ ಇವರು ಹುಟ್ಟಿನಿಂದಲೇ ಮಹಾಬಲಶಾಲಿಗಳು ಮತ್ತು ಸಾಹಸಿಗಳು. ಆದರೂ ಸರ್ವಲೋಕಗಳಲ್ಲಿಯೂ ವಿಖ್ಯಾತವಾದ ಪ್ರಭಾವವುಳ್ಳ ಶ್ರೀಹರಿಯ ತೇಜಸ್ಸಿನಿಂದ ಬಲಾಭಿಮಾನಗಳು ಉಡುಗಿದವರಾಗಿ ಬಿಲದಲ್ಲಿ ಅಡಗಿಕೊಳ್ಳುವ ಹಾವುಗಳಂತೆ ಈ ರಸಾತಲದಲ್ಲಿ ಅಡಗಿಕೊಂಡಿರುತ್ತಾರೆ ಮತ್ತು ಇಂದ್ರನ ದೂತಿಯಾದ ಸರಮೆಯೆಂಬ ದೇವಶುನಿಯು (ದೇವತೆಗಳ ಹೆಣ್ಣುನಾಯಿ) ನುಡಿದ ಮಂತ್ರರೂಪವಾದ ಶಾಪಕ್ಕೆ ಹೆದರಿ ಇಂದ್ರನಿಗೆ ಭಯಪಡುತ್ತಿರುವರು.*

ರಸಾತಲಲೋಕದ ಕೆಳಗಿರುವುದು ಪಾತಾಳವೆಂಬ ಲೋಕ. ಅಲ್ಲಿಯೇ ಶಂಖ, ಕುಲಿಕ, ಮಹಾಶಂಖ, ಶ್ವೇತ, ಧನಂಜಯ, ಧೃತರಾಷ್ಟ್ರ, ಶಂಖಚೂಡ, ಕಂಬಲ, ಅಶ್ವತರ ಮತ್ತು ದೇವದತ್ತರೇ ಮುಂತಾದ ಅತಿ ಕೋಪಿಷ್ಠರೂ, ದೊಡ್ಡ-ದೊಡ್ಡ ಹೆಡೆಗಳುಳ್ಳವರೂ ಆಗಿರುವ ನಾಗಸರ್ಪ ಗಳು ವಾಸವಾಗಿರುತ್ತವೆ. ಅವುಗಳಿಗೆ ಪ್ರಮುಖನಾದವನು ವಾಸುಕಿ. ಆ ಸರ್ಪಗಳಲ್ಲಿ ಕೆಲವಕ್ಕೆ ಐದು ಹೆಡೆಗಳು, ಕೆಲವಕ್ಕೆ ಏಳು ಹೆಡೆಗಳು, ಕೆಲವಕ್ಕೆ ಹತ್ತು, ಕೆಲವಕ್ಕೆ ನೂರು ಮತ್ತು ಕೆಲವಕ್ಕೆ ಸಾವಿರ ಹೆಡೆಗಳುಂಟು. ಆ ಹೆಡೆಗಳಲ್ಲಿ ಹೊಳೆ-ಹೊಳೆಯುತ್ತಿರುವ ಮಣಿಗಳು ತಮ್ಮ ಪ್ರಕಾಶದಿಂದ ಪಾತಾಳಲೋಕದಲ್ಲಿರುವ ಇಡೀ ಕಗ್ಗತ್ತಲೆಯನ್ನು ನುಂಗಿಹಾಕುತ್ತಿವೆ.

(ಶ್ಲೋಕ 28-31)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಪಂಚಮಸ್ಕಂಧದ ೨೪ನೆಯ ಅಧ್ಯಾಯವು ಮುಗಿಯಿತು.

---

* ಪಣಿಗಳೆಂಬ ದೈತ್ಯರು ಪೃಥ್ವಿಯನ್ನು ಅಪಹರಿಸಿ ರಸಾತಲದಲ್ಲಿ ಬಚ್ಚಿಟ್ಟುಕೊಂಡರು. ಆಗ ಅದನ್ನು ಕಂಡುಹಿಡಿಯುವುದಕ್ಕಾಗಿ ಇಂದ್ರದೇವನು ಸರಮೆಯೆಂಬ ತನ್ನ ನಾಯಿಯನ್ನು ದೂತಿಯನ್ನಾಗಿ ಅಲ್ಲಿಗೆ ಕಳುಹಿಸಿದನು. ದೈತ್ಯರು ಆ ಸರಮೆಗೆ ಸವಿಮಾತುಗಳನ್ನಾಡಿ ಸಂಧಿಮಾಡಿಕೊಳ್ಳಲು ಪ್ರಯತ್ನಿಸಿದರು. ಆದರೆ ಸರಮೆಯು ಆ ಕಳ್ಳರೊಡನೆ ಸಂಧಿಗೆ ಒಪ್ಪದೇ ಇಂದ್ರದೇವರನ್ನು ಸ್ತುತಿಸುತ್ತಾ **'ಹತಾ ಇನ್ದ್ರೇಣ ಪಣಯಃ ಶಯಧ್ವಂ'**–'ಎಲೈ ಮೋಸಗಾರರೇ! ನೀವು ಇಂದ್ರ

ಪಂಚಮಸ್ಕಂಧ ೨೫ನೆಯ ಅಧ್ಯಾಯ

ಶ್ರೀಸಂಕರ್ಷಣಭಗವಂತನ ವರ್ಣನೆ ಮತ್ತು ಸ್ತೋತ್ರ

ಹೀಗೆ ಅತಲವೇ ಮುಂತಾದ ಕೆಳಗಿನ ಲೋಕಗಳನ್ನು ವರ್ಣಿಸಿದ ಬಳಿಕ ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

ತಸ್ಯ ಮೂಲದೇಶೇ ತ್ರಿಂಶದ್ಯೋಜನಸಹಸ್ರಾನ್ತರ ಆಸ್ತೇ ಯಾ ವೈ ಕಲಾ ಭಗವತಸ್ತಾಮಸೀ ಸಮಾಖ್ಯಾತಾನನ್ತ ಇತಿ ಸಾತ್ವತೀಯಾ ದ್ರಷ್ಟೃದೃಶ್ಯಯೋಃ ಸಙ್ಕರ್ಷಣಮಹಮಿತ್ಯಭಿಮಾನಲಕ್ಷಣಂ ಯಂ ಸಙ್ಕರ್ಷಣಮಿತ್ಯಾಚಕ್ಷತೇ ॥೧॥

ಮಹಾರಾಜ! ಆ ಪಾತಾಳಲೋಕದ ಕೆಳಗೆ ಮೂವತ್ತು ಸಾವಿರ ಯೋಜನಗಳ ದೂರದಲ್ಲಿ ಶ್ರೀಭಗವಂತನಾದ ನಾರಾಯಣನ ಕಲಾಮೂರ್ತಿಯಾಗಿ ತಾಮಸಾಹಂಕಾರಕ್ಕೆ ಅಭಿಮಾನಿಯಾಗಿರುವ 'ಅನಂತ' ಎಂದು ಪ್ರಸಿದ್ಧವಾದ ಆದಿಶೇಷನು ವಾಸವಾಗಿದ್ದಾನೆ. ಆತನು ಅಹಂಕಾರಕ್ಕೆ ಅಭಿಮಾನಿಯಾಗಿ ದೃಶ್ಯವಾದ ದೇಹ-ಇಂದ್ರಿಯಾದಿಗಳನ್ನೂ ಮತ್ತು ಅವುಗಳನ್ನು ನೋಡುವ ದ್ರಷ್ಟೃವಾದ ಜೀವಗಳನ್ನೂ ಸೆಳೆದು ಒಂದುಗೂಡಿಸುವುದರಿಂದ ಶ್ರೀಪಾಂಚರಾತ್ರಾಗಮವನ್ನು ಅನುಸರಿಸುವ ಭಕ್ತರು ಆತನನ್ನು 'ಸಂಕರ್ಷಣ' ನೆಂದು ಕರೆಯುತ್ತಾರೆ.

ಆತನ ಮಹಿಮೆಯು ಅಪಾರವಾದುದು.

ಯಸ್ಯೇದಂ ಕ್ಷಿತಿಮಣ್ಡಲಂ ಭಗವತೋಽನನ್ತಮೂರ್ತೇಃ ಸಹಸ್ರಶಿರಸ ಏಕಸ್ಮಿನ್ನೇವ ಶೀರ್ಷಣಿ ಧ್ರಿಯಮಾಣಂ ಸಿದ್ಧಾರ್ಥ ಇವ ಲಕ್ಷ್ಯತೇ ॥೨॥

ಶ್ರೀಭವಂತನಾದ ಆ ಅನಂತನಿಗೆ ಸಾವಿರ ತಲೆಗಳು. ಆ ಮಹಾ

ದೇವರಿಂದ ಕೊಲ್ಲಲ್ಪಟ್ಟು ನೆಲದ ಮೇಲೆ ಬೀಳಿರಿ'–ಎಂದು ಶಾಪವನ್ನಿತ್ತಳು. ಆ ಶಾಪದ ಕಾರಣ ಪಣಿಗಳನ್ನು ಸದಾ ಇಂದ್ರನ ಭಯವು ಪೀಡಿಸುತ್ತಿರುವುದು–ಎಂಬ ವೈದಿಕ ಉಪಾಖ್ಯಾನವನ್ನು ಇಲ್ಲಿ ಸ್ಮರಿಸಬಹುದು. ಸರಮೆಯೆಂಬ ಆ ದಿವ್ಯವಾದ ನಾಯಿಯು ನಾಯಿಗಳ ಜಾತಿಗೇ ತಾಯಿಯಾದ್ದರಿಂದ ನಾಯನ್ನು 'ಸಾರಮೇಯ' ಎಂದು ಕರೆಯುತ್ತಾರೆ.

ಫಣಾಮಂಡಲದಲ್ಲಿ ಈ ಇಡೀ ಭೂಮಂಡಲವು ಒಂದೇ ಹೆಡೆಯ ಮೇಲೆ ಧರಿಸಲ್ಪಟ್ಟು ಒಂದು ಸಾಸಿವೆಯ ಕಾಳಿನಂತೆ ಕಾಣುತ್ತಿದೆ.

ಏಕಾದಶರುದ್ರರೂ ಆತನಿಂದಲೇ ಪ್ರಕಟಗೊಳ್ಳುವರು. ಪ್ರಳಯ ಕಾಲವು ಬಂದಾಗ ಆತನಿಗೆ ಈ ಇಡೀ ವಿಶ್ವವನ್ನು ಸಂಹಾರಮಾಡಬೇಕೆಂಬ ಇಚ್ಛೆಯುಂಟಾಗುವುದು. ಆಗ ಕ್ರೋಧದಿಂದ ಹುಬ್ಬುಗಂಟಿಕ್ಕುವ ಆತನ ರುದ್ರಸೌಂದರ್ಯದಿಂದ ಬೆಳಗುತ್ತಾ ಸುತ್ತತ್ತಿರುವ ಹುಬ್ಬುಗಳ ಮಧ್ಯದಿಂದ ಹನ್ನೊಂದು ಸಂಖ್ಯೆಯ ವ್ಯೂಹವುಳ್ಳ ಸಂಕರ್ಷಣರೆಂಬ ರುದ್ರರು ಪ್ರಕಟ ಗೊಳ್ಳುವರು. ಅವರೆಲ್ಲರೂ ಮುಕ್ಕಣ್ಣರಾಗಿ ಕೈಯ್ಯಲ್ಲಿ ತ್ರಿಶೂಲಾಯುಧವನ್ನು ಹಿಡಿದಿರುತ್ತಾರೆ. ಆ ಸಂಕರ್ಷಣಭಗವಂತನ ಸ್ವಚ್ಛವಾಗಿರುವ ಕೆಂಪು ಬಣ್ಣದ ಅಡಿದಾವರೆಗಳ ನಖಮಣಿಗಳ ಸಾಲುಗಳಿಗೆ ಅನೇಕ ಮಂದಿ ನಾಗರಾಜರು ಶ್ರೀಪಾಂಚರಾತ್ರಾಗಮದಿಂದ ಉಪಾಸನೆಮಾಡುವ ಭಕ್ತಾಗ್ರೇಸರರೊಡನೆ ಕೂಡಿ ಅನನ್ಯಭಕ್ತಿಯಿಂದ ನಮಸ್ಕರಿಸುತ್ತಿರುತ್ತಾರೆ. ಆಗ ಆ ನಖಮಣಿಗಳಲ್ಲಿ ಥಳ-ಥಳಿಸುತ್ತಿರುವ ಕುಂಡಲಗಳ ಕಾಂತಿಯಿಂದ ಕೂಡಿದ ರಮಣೀಯ ವಾದ ಕಪೋಲಗಳುಳ್ಳ ತಮ್ಮ ಸುಂದರವಾದ ಮುಖಾರವಿಂದಗಳು ಕಂಗೊಳಿಸುವುದನ್ನು ಕಂಡು ಅವರ ಮನಸ್ಸು ಆನಂಧಭರಿತವಾಗುತ್ತದೆ. ಆ ಶ್ರೀಭಗವಂತನ ಸೌಂದರ್ಯವು ವರ್ಣನಾತೀತವಾದುದು. ಅನೇಕ ಮಂದಿ ನಾಗರಾಜರ ಕನ್ಯೆಯರು ತಮ್ಮ ಬಗೆ-ಬಗೆಯ ಬಯಕೆಗಳು ಈಡೇರಲೆಂಬ ಆಶೆಯಿಂದ ಆತನ ಚೆಲುವಾದ ಅಂಗಮಂಡಲದಲ್ಲಿ ಬೆಳ್ಳಿಯ ಕಂಬಗಳಂತೆ ಬೆಳ್ಳಗೆ ಹೊಳೆಯುತ್ತಾ, ತೋಳ್ಬಳೆಗಳಿಂದ ಮಿರುಗುತ್ತಾ, ದುಂಡು-ದುಂಡಾಗಿ ನೀಳವಾಗಿರುವ ತೋಳುಗಳಿಗೆ ಅಗರು, ಚಂದನ ಮತ್ತು ಕುಂಕುಮ-ಕೇಸರಿ ಗಳ ಲೇಪವನ್ನು ಹಚ್ಚುತ್ತಿರುವರು. ಆತನ ದೇಹಸ್ಪರ್ಶದಿಂದ ಅವರಲ್ಲಿ ಪ್ರೇಮಭಾವವು ಹರಿಯತೊಡಗುವುದು. ಆಗ ಅವರು ಕರುಣಾಪೂರ್ಣವಾಗಿ ಕೆಂದಾವರೆಯಂತೆ ಕಂಗೊಳಿಸುತ್ತಿರುವ ಕಣ್ಣುಗಳಿಂದ ಕೂಡಿ ಪ್ರೇಮೋನ್ಮಾದ ದಿಂದ ಆನಂದಗೊಂಡಿರುವ ಆತನ ಮುಖಕಮಲವನ್ನು ಮಧುರವೂ– ಮನೋಹರವೂ ಆದ ಕಿರುನಗೆಯೊಡನೆ ಲಜ್ಜಾಭಾವಸಹಿತವಾದ ಅನುರಾಗ ದಿಂದ ನೋಡುತ್ತಿರುವರು. ಆದಿದೇವನಾಗಿ ಅನಂತಕಲ್ಯಾಣಗುಣಗಳಿಗೆ ಕಡಲಾಗಿರುವ ಆ ಅನಂತಪ್ರಭುವು ಪ್ರಳಯಕಾಲದಲ್ಲಿ ಪ್ರಕಟಗೊಳ್ಳುವ ತನ್ನ

ಅಸಹನೆ-ಕ್ರೋಧಗಳನ್ನು ಉಪಸಂಹಾರಮಾಡಿಕೊಂಡು ಪ್ರಶಾಂತನಾಗಿ ಸಮಸ್ತಲೋಕಗಳ ಕಲ್ಯಾಣಕ್ಕಾಗಿ ಆ ಸ್ಥಾನದಲ್ಲಿ ರಾರಾಜಿಸುತ್ತಿರುವನು. ದೇವತೆಗಳೂ, ದೈತ್ಯ-ದಾನವರೂ, ನಾಗರೂ, ಸಿದ್ಧರೂ, ಗಂಧರ್ವರೂ, ವಿದ್ಯಾಧರರೂ ಮತ್ತು ಮುನಿಗಣಗಳೂ ಆ ಶ್ರೀಭವಂತನನ್ನು ಧ್ಯಾನ ಮಾಡುತ್ತಿರುವರು. ನಿರಂತರವಾದ ಆನಂದಾನುಭಾವದಿಂದ ಮದಿಸಿರುವ ಆತನ ಕಣ್ಣುಗಳು ಚಾಂಚಲ್ಯದಿಂದ ತಿರುಗುತ್ತಿರುವಂತೆ ಕಾಣುತ್ತವೆ. ಉದಾರವಾದ ಲೀಲೆಗಳುಳ್ಳ ಸ್ವಾಮಿಯು ಮಧುರವಾದ ವಚನಾಮೃತದಿಂದ ತನ್ನ ಪರಿವಾರವನ್ನೂ ಮತ್ತು ದೇವತಾಗಣಗಳ ನಾಯಕರನ್ನೂ ತಣಿಸು ತ್ತಿದ್ದಾನೆ. ಆತನ ಮೈಯ್ಯಲ್ಲಿ ನಯನಮನೋಹರವಾದ ನೀಲವರ್ಣದ ಉಡುಗೆ ಒಪ್ಪುತ್ತಿದೆ. ಕಿವಿಯಲ್ಲಿ ಥಳ-ಥಳಿಸುತ್ತಿರುವ ಒಂದೇ ಒಂದು ಕುಂಡಲವು ಮೆರೆಯುತ್ತಿದೆ. ಎಂದೆಂದಿಗೂ ಬಾಡದೇ ಇರುವ ಹೊಸ ತುಳಸೀ ದಳಗಳ ಸುವಾಸನೆ ಮತ್ತು ರಸಗಳ ಸೇವನೆಯಿಂದ ಮತ್ತೇರಿ ಝೇಂಕಾರಮಾಡುತ್ತಿರುವ ದುಂಬಿಗಳ ಸಂಗೀತದಿಂದ ಶೋಭಿಸುತ್ತಿರುವ ವೈಜಯಂತಿಯೆಂಬ ಎಣೆಯಿಲ್ಲದ ವನಮಾಲೆಯಿಂದ ಅಲಂಕೃತನಾಗಿರುವ ಸ್ವಾಮಿಯು ಸುವರ್ಣಮಾಲೆಯಿಂದ ಅಲಂಕೃತವಾದ ಐರಾವತದಂತೆ ರಾರಾಜಿಸುತ್ತಿದ್ದಾನೆ. ತನ್ನ ಸುಭಗವೂ ಸುಂದರವೂ ಆದ ಭುಜವನ್ನು ನೇಗಿಲಿನ ಹಿಡಿಯ ಮೇಲೆ ಇರಿಸಿಕೊಂಡು ಮೆರೆಯುತ್ತಿದ್ದಾನೆ. ಮಹಾರಾಜ! ಈ ರೀತಿಯಲ್ಲಿ ಆತನ ಮಾಹಾತ್ಮ್ಯವನ್ನು ಶ್ರವಣಮಾಡಿ ಧ್ಯಾನಮಾಡು ತ್ತಿದ್ದರೆ ಆ ಶ್ರೀಭಗವಂತನಾದ ಅನಂತನು ಮುಮುಕ್ಷುಗಳ ಹೃದಯದಲ್ಲಿ ಪ್ರಕಟಗೊಂಡು ಅವರ ಅನಾದಿಕಾಲದ ಕರ್ಮವಾಸನೆಗಳಿಂದ ಕಗ್ಗಂಟಾಗಿ ರುವ ಸತ್ತ್ವ, ರಜಸ್ಸು ಮತ್ತು ತಮೋಗುಣರೂಪವಾದ ಅವಿದ್ಯಾಮಯವಾದ ಹೃದಯದ ಗಂಟನ್ನು ಒಡನೆಯೇ ಕತ್ತರಿಸಿ ಹಾಕುವನು. ಶ್ರೀಭಗವಂತರಾದ ಬ್ರಹ್ಮಪುತ್ರರಾದ ನಾರದರೂ ಮತ್ತು ತುಂಬುರರೂ ಗಂಧರ್ವರೊಡನೆ ಒಮ್ಮೆ ಬ್ರಹ್ಮದೇವರ ಸಭೆಯಲ್ಲಿ ಆ ಸಂಕರ್ಷಣದೇವರ ಗುಣಗಳನ್ನು ಹೀಗೆ ಗಾನಮಾಡಿದರು. (ಶ್ಲೋಕ 3-8)

ಉತ್ಪತ್ತಿಸ್ಥಿತಿಲಯಹೇತವೋಽಸ್ಯ ಕಲ್ಪಾಃ
ಸತ್ತ್ವಾದ್ಯಾಃ ಪ್ರಕೃತಿಗುಣಾ ಯದೀಕ್ಷಯಾಸನ್ ।

ಯದ್ರೂಪಂ ಧ್ರುವಮಕೃತಂ ಯದೇಕಮಾತ್ಮ-
ನ್ನಾನಾಧಾತ್ಕಥಮು ಹ ವೇದ ತಸ್ಯ ವರ್ತ್ಮ ॥೯॥

"ಶ್ರೀಭಗವಂತನಾದ ಸಂಕರ್ಷಣನ ಆ ತತ್ತ್ವವನ್ನು ಯಾರಿಗಾದರೂ ಹೇಗೆ ತಾನೇ ತಿಳಿಯಲು ಸಾಧ್ಯ? ಜಗತ್ತಿನ ಉತ್ಪತ್ತಿ-ಸ್ಥಿತಿ-ಲಯಗಳಿಗೆ ಕಾರಣಳಾಗಿರುವ ಸತ್ತ್ವವೇ ಮುಂತಾದ ಪ್ರಾಕೃತಗುಣಗಳು ಆತನ ದೃಷ್ಟಿ (ಸಂಕಲ್ಪ) ಮಾತ್ರದಿಂದಲೇ ತಮ್ಮ-ತಮ್ಮ ಕಾರ್ಯಗಳನ್ನು ಮಾಡಲು ಸಮರ್ಥವಾಗುವುವು. ಆತನ ಸ್ವರೂಪವಾದರೋ ಅನಂತವೂ, ಅನಾದಿಯೂ, ಸ್ವತಃಸಿದ್ಧವೂ ಆಗಿದೆ. ಒಬ್ಬಂಟಿಗನಾಗಿಯೇ ಈ ನಾನಾತ್ಮಕವಾದ ಇಡೀ ಪ್ರಪಂಚವನ್ನು ತನ್ನಲ್ಲಿ ಧಾರಣೆಮಾಡಿಕೊಂಡಿರುವ ಪ್ರಭು ಅವನು.

ಮೂರ್ತಿಂ ನಃ ಪುರುಕೃಪಯಾ ಬಭಾರ ಸತ್ತ್ವಂ
ಸಂಶುದ್ಧಂ ಸದಸದಿದಂ ವಿಭಾತಿ ಯತ್ರ ।
ಯಲ್ಲೀಲಾಂ ಮೃಗಪತಿರಾದದೇಽನವದ್ಯಾ-
ಮಾದಾತುಂ ಸ್ವಜನಮನಾಂಸ್ಯುದಾರವೀರ್ಯಃ ॥೧೦॥

ಚಿದಚಿದಾತ್ಮಕವಾದ ಈ ಜಗತ್ತೆಲ್ಲವೂ ಆತನಲ್ಲಿ ಬೆಳಗುತ್ತಿದೆ. ಆತನು ಪರಸ್ವರೂಪನು. ತಿಳಿಯಲು ದುಸ್ಸಾಧ್ಯನಾದವನು. ಆದರೂ ನಮ್ಮ ಮೇಲಿನ ಪರಮಕೃಪೆಯಿಂದ ಅತ್ಯಂತಪರಿಶುದ್ಧವಾದ ಸತ್ತ್ವಮಯವಾದ ಈ ದೇಹ ವನ್ನು ಧರಿಸಿದ್ದಾನೆ. ಜೀವಿಗಳಿಗೆ ಅಧಿಪತಿಯಾಗಿ ಉದಾರವಾದ ಪರಾಕ್ರಮವುಳ್ಳ ಆತನು ತನ್ನ ಜನರ ಮನಸ್ಸನ್ನು ವಶಪಡಿಸಿಕೊಳ್ಳು ವುದಕ್ಕಾಗಿಯೇ ದೋಷರಹಿತವೂ, ಅಪಾಯರಹಿತವೂ, ಕುಂದು-ಕೊರತೆ ಗಳಿಲ್ಲದುದೂ ಆಗಿರುವ ಸಂಕರ್ಷಣರೂಪವಾದ ಈ ಲೀಲಾಶರೀರವನ್ನು ಪ್ರಕಟಪಡಿಸಿದ್ದಾನೆ.*

---

* ತನ್ನ ಜನರ ಮನಸ್ಸುಗಳನ್ನು ವಶಪಡಿಸಿಕೊಳ್ಳುವುದಕ್ಕೋಸ್ಕರವೇ ಆತನು ಮಾಡಿರುವ ಲೀಲೆಯನ್ನು ಸಿಂಹವು ಆತನಿಂದ ಕಲಿತುಕೊಂಡಿದೆ. ಏಕೆಂದರೆ : ಆತನ ವೀರ್ಯಗಳು ಉದಾರವಾದುವು. ಇಂತಹವನನ್ನು ಬಿಟ್ಟು ಬೇರೆ ಯಾವನನ್ನು ತಾನೇ ಮುಮುಕ್ಷುವು ಆಶ್ರಯಿಸಬೇಕು? ಅಥವಾ ಉದಾರವಾದ ವೀರ್ಯವುಳ್ಳ ಸಿಂಹ ದಂತೆ ಆತನು ತನ್ನ ಜನರ ಮನಸ್ಸನ್ನು ವಶಪಡಿಸಿಕೊಳ್ಳಲು ಲೀಲೆಯನ್ನು ಸ್ವೀಕರಿಸಿದ್ದಾನೆ. ಅಥವಾ ಮೃಗಾಃ ಎಂದರೆ : (ಮೃಗ್ಯನ್ತ ಇತಿ ಮೃಗಾಃ ಎಂಬ ವ್ಯುತ್ಪತ್ತಿಯಂತೆ) ಇಷ್ಟಾರ್ಥಪ್ರದರಾದ ಉದಾರಿಗಳು. ಅವರಿಗೆಲ್ಲಾ ಪತಿಯಾದವನು

ಯನ್ನಾಮ ಶ್ರುತಮನುಕೀರ್ತಯೇದಕಸ್ಮಾ-
ದಾರ್ತೋ ವಾ ಯದಿ ಪತಿತಃ ಪ್ರಲಮ್ಭನಾದ್ವಾ ।
ಹನ್ತ್ಯಂಹಃ ಸಪದಿ ನೃಣಾಮಶೇಷಮನ್ಯಂ
ಕಂ ಶೇಷಾದ್ಭಗವತ ಆಶ್ರಯೇನ್ಮುಮುಕ್ಷುಃ ॥೧೧॥

ಆತನ ನಾಮಮಹಿಮೆಯೂ ಅಪಾರವಾದುದು. ಪೀಡೆಗೆ ಒಳಗಾಗಿರುವನಾಗಲೀ, ಕಡುಪಾಪಿಯೇ ಆಗಲೀ, ಆಕಸ್ಮಿಕವಾಗಿಯಾದರೂ–ವಿನೋದಕ್ಕಾದರೂ ಮತ್ತೊಬ್ಬರು ಹೇಳಿದುದನ್ನು ಕೇಳಿ ಅಣಕಿಸುವುದಕ್ಕಾದರೂ ಯಾವುದೇ ಕಾರಣದಿಂದಲಾದರೂ ಆತನ ದಿವ್ಯನಾಮವನ್ನು ಉಚ್ಚರಿಸಿದರೆ ತಾನು ಪಾಪಗಳಿಂದ ಬಿಡುಗಡೆಹೊಂದುವನು. ಅಷ್ಟೇ ಅಲ್ಲದೇ ಇತರರ ಎಲ್ಲ ಪಾತಕಗಳನ್ನೂ ಒಡನೆಯೇ ಧ್ವಂಸಮಾಡುವನು. ಮೋಕ್ಷವನ್ನು ಬಯಸುವವನು ಇಂತಹ ಶ್ರೀಭಗವಂತನನ್ನಲ್ಲದೇ ಬೇರೆ ಯಾರನ್ನು ತಾನೇ ಆಶ್ರಯಿಸಬೇಕು ?

ಮೂರ್ಧನ್ಯರ್ಪಿತಮಣುವತ್ಸಹಸ್ರಮೂರ್ಧ್ನೋ
ಭೂಗೋಲಂ ಸಗಿರಿಸರಿತ್ಸಮುದ್ರಸತ್ತ್ವಮ್ ।
ಆನನ್ತ್ಯಾದನಿಮಿತವಿಕ್ರಮಸ್ಯ ಭೂಮ್ನಃ
ಕೋ ವೀರ್ಯಾಣ್ಯಧಿಗಣಯೇತ್ಸಹಸ್ರಜಿಹ್ವಃ ॥೧೨॥

(ಮುಖ್ಯನಾದವನು) ಮೃಗಪತಿ–ಎಂದರೆ ಭಗವಂತ. ಆತನು ಈ ಲೀಲಾವಿಗ್ರಹವನ್ನು ಪ್ರಕಟಪಡಿಸಿದ್ದಾನೆ. (ಸ್ವಜನಾನಾಂ ಮನಾಂಸ್ಯಾದಾತುಂ ಮೃಗಪತಿರಿವ ಉದಾರ ವೀರ್ಯಂ. ಯದ್ವಾ ಮೃಗ್ಯನ್ತ ಇತಿ ಮೃಗಾಃ ಕಾಮಪ್ರದಾಃ ತೇಷಾಂ ಮುಖ್ಯಃ..... ಯಸ್ಯ ಲೀಲಾಂ ಮೃಗಪತಿಃ ಸಿಂಹ ಅಶಿಕ್ಷತ್ ಯತಃ ಉದಾರಾಣಿ ವೀರ್ಯಾಣಿ ಯಸ್ಯ)
(ಶ್ರೀಧರೀಯ)

ಹೀಗೆ ಆತನ ಸ್ವರೂಪವು ತಿಳಿಯಲು ದುಸ್ಸಾಧ್ಯವಾದರೂ ಭಕ್ತರ ಅನುಗ್ರಹಕ್ಕಾಗಿಯೇ ಆತನು ಈ ಸಂಕರ್ಷಣರೂಪವನ್ನು ಧರಿಸಿದ್ದಾನೆ–ಎಂದು ವರ್ಣಿಸಲು ಈ ಶ್ಲೋಕವು ಹೊರಟಿದೆ. ಕಣ್ಣಿಗೆ ಕಾಣುವ ಚಿದಚಿದಾತ್ಮಕವಾದ ಈ ಜಗತ್ತು ಯಾವನಲ್ಲಿ ಪ್ರಕಾಶಿಸುತ್ತಿದೆಯೋ ಆ ಭಗವಂತನು ನಮ್ಮ ಮೇಲಿನ ಕೃಪೆಯಿಂದಲೇ ಈ ರಜಸ್ತಮೋಮಿಶ್ರಣವಿಲ್ಲದ ಶುದ್ಧಸತ್ತ್ವಮಯವಾಗಿರುವ ದಿವ್ಯಮಂಗಳ ವಿಗ್ರಹವನ್ನು ಧರಿಸಿದ್ದಾನೆ. ಏಕೆಂದರೆ : ಆತನು ಸಿಂಹದಂತೆ ಉದಾರವಾದ ವೀರ್ಯವುಳ್ಳವನು. ಅಥವಾ (ಮೃಗ್ಯನ್ತೇ ಅನ್ವಿಷ್ಯನ್ತೇ ಇತಿ ಮೃಗಾಃ ಎಂಬ

ಬೆಟ್ಟಗಳಿಂದಲೂ, ನದಿಗಳಿಂದಲೂ, ಸಮುದ್ರಗಳಿಂದಲೂ, ಪ್ರಾಣಿಗಳಿಂದಲೂ ಕೂಡಿರುವ ಈ ಇಡೀ ಭೂಮಂಡಲವೆಲ್ಲವೂ ಸಾವಿರ ತಲೆಗಳಿಂದ ಕೂಡಿದ ಯಾವನ ಒಂದೇ ಒಂದು ತಲೆಯಲ್ಲಿ ಪರಮಾಣುವಿನಂತೆ ನೆಲೆಗೊಂಡಿದೆಯೋ-ಅಂತಹ ಅನಂತಸ್ವಾಮಿಯ ಅನಂತವಾದ ಮಹಿಮೆಯನ್ನು ಯಾರೂ ತಿಳಿಯರು. ಸಾವಿರ ನಾಲಿಗೆಗಳಿದ್ದರೂ ಅದನ್ನು ಯಾವನು ತಾನೇ ಲೆಕ್ಕಿಸಬಲ್ಲನು!

ಏವಂಪ್ರಭಾವೋ ಭಗವಾನನನ್ತೋ
ದುರನ್ತವೀರ್ಯೋರುಗುಣಾನುಭಾವಃ ।
ಮೂಲೇ ರಸಾಯಾಃ ಸ್ಥಿತ ಆತ್ಮತನ್ತ್ರೋ
ಯೋ ಲೀಲಯಾ ಕ್ಷ್ಮಾಂ ಸ್ಥಿತಯೇ ಬಿಭರ್ತಿ ॥೧೩॥

ಹೀಗೆ ಭೂಮಿಯ ಕೆಳಭಾಗದಲ್ಲಿ ಇರುತ್ತಾ ಲೋಕಗಳ ಕ್ಷೇಮಕ್ಕಾಗಿ ಈ ಭೂಮಿಯನ್ನು ಹೊತ್ತುಕೊಂಡಿರುವ ಶ್ರೀಭಗವಂತನಾದ ಅನಂತನ ಮಹಿಮೆಯು ಅಪಾರವಾದುದು. ಆತನು ಸಂಪೂರ್ಣವಾಗಿ ಸ್ವತಂತ್ರನು.

ವ್ಯುತ್ಪತ್ತಿಯಂತೆ) ಭಕ್ತರಿಂದ ಅರಸಲ್ಪಡುವ ಬ್ರಹ್ಮಾದಿಗಳಿಗೂ ಅಧಿಪತಿಯಾದವನು. ('ತಂ ದೈವತಾನಾಂ ಪರಮಂ ಚ ದೈವತಂ' 'ಪತಿಂ ಪತೀನಾಂ ಪರಮಂ ಪರಸ್ತಾತ್') ಜಗನ್ನಿರ್ಮಾಣವೇ ಮುಂತಾದ ಉದಾರವಾದ ವೀರ್ಯವುಳ್ಳವನಿವನು. ಹೀಗಿದ್ದರೂ ನಮ್ಮ ಮನಸ್ಸನ್ನು ವಶಪಡಿಸಿಕೊಳ್ಳಲು ಅನವದ್ಯವಾದ ಅಂದರೆ–ಕರ್ಮಜನ್ಯವಲ್ಲದೇ ಇರುವ ಈ ಸಂಕರ್ಷಣರೂಪವನ್ನು ತಾಳಿದ್ದಾನೆ. ಸರ್ವರಾಜರು, ಸಾತ್ವತಶ್ರೇಷ್ಠರು, ನಾಗರಾಜ ಕುಮಾರಿಯರು ಮುಂತಾದವರು ಸುಖವಾಗಿ ಆರಾಧಿಸಲು ಯೋಗ್ಯವಾಗಿರುವ ಮತ್ತು ಪಾಂಚರಾತ್ರಶಾಸ್ತ್ರ ರಚನೆ ಮತ್ತು ಭೂಮಂಡಲಧಾರಣೆ ಮುಂತಾದುವುಗಳನ್ನು ಮಾಡಿ ರುವ ಲೀಲಾವಿಗ್ರಹವಿದು. 'ಸಾತ್ವತಂ ವಿಧಿಮಾಸ್ಥಾಯ ಗೀತಸ್ಸಂಕರ್ಷಣೇನ ಯಃ । ಅಸ್ಮಾತ್ಪ್ರವಕ್ಷ್ಯತೇ ಧರ್ಮಾನ್ ಮನುಃ ಸ್ವಾಯಮುಮ್ಭುವಸ್ತಥಾ ॥' ಎಂದು ಮಹಾಭಾರತವು ಆತನು ಶ್ರೀಪಾಂಚರಾತ್ರಾಗಮದ ಕರ್ತೃವೆಂಬುದನ್ನು ಪ್ರಮಾಣಿಸುತ್ತದೆ. ಮೃಗಪತಿಃ = ಸಿಂಹಸದೃಶನಾದ ಅಥವಾ ಜೀವಗಳಿಗೆ ಅಧಿಪತಿಯಾದ ಅಥವಾ ಉದಾರಿಗಳಿಗೆ ಅಧಿಪತಿಯಾದ–ಎಂದು ಅನೇಕ ಅರ್ಥಗಳು ಈ ಶಬ್ದಕ್ಕೆ ಹೇಳಲ್ಪಟ್ಟಿವೆ.

(ವೀರರಾಘವೀಯ)

ಯಾವನು ಪರಮಕರುಣೆಯಿಂದ ಪರಿಶುದ್ಧವಾಗಿ ಬಲಜ್ಞಾನಸಮಾಹಾರರೂಪ

ಅನಂತವಾದ ವೀರ್ಯ, ಅತಿಶಯವಾದ ಗುಣ ಮತ್ತು ಪ್ರಭಾವಗಳುಳ್ಳವನು. (ಅನಂತ ಎಂಬ ಅನ್ವರ್ಥವಾದ ಹೆಸರುಳ್ಳವನು ಆ ಸಂಕರ್ಷಣ ಮೂರ್ತಿ.)

ಎಲೈ ಪರೀಕ್ಷಿದ್ರಾಜನೇ! ಭೋಗಗಳನ್ನು ಬಯಸುವ ಮನುಷ್ಯರು ಹೊಂದಲು ಸಾಧ್ಯವಾಗುವಂತೆ ಶ್ರೀಭಗವಂತನು ಅವರ ಕರ್ಮಗಳಿಗೆ ಅನುಗುಣವಾಗಿ ನಿರ್ಮಿಸಿರುವ ಗತಿಗಳು ಇಷ್ಟೇ. ನಾನು ಗುರುಮುಖದಿಂದ ಕೇಳಿರುವ ರೀತಿಯಲ್ಲೇ ಇದನ್ನು ನಿನಗೆ ತಿಳಿಸಿದ್ದೇನೆ. ಮನುಷ್ಯನು ಪ್ರವೃತ್ತಿರೂಪವಾದ ಧರ್ಮದ ಪರಿಣಾಮವಾಗಿ ಪರಸ್ಪರ ವಿಲಕ್ಷಣಗಳಾಗಿರುವ ಯಾವ ಉಚ್ಚ ಮತ್ತು ನೀಚಗತಿಗಳನ್ನು ಹೊಂದುವನೋ–ಅವು ಇಷ್ಟೇ ಸರಿ. ನಿನ್ನ ಪ್ರಶ್ನೆಗೆ ತಕ್ಕಂತೆ ಅವುಗಳನ್ನು ವರ್ಣಿಸಿಯಾಯಿತು. ಮತ್ತೇನು ಹೇಳಲಿ? ಕೇಳು." (ಶ್ಲೋಕ 14-15)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಪಂಚಮಸ್ಕಂಧದ ೨೫ನೆಯ ಅಧ್ಯಾಯವು ಮುಗಿಯಿತು.

ಪಂಚಮಸ್ಕಂಧ ೨೬ನೆಯ ಅಧ್ಯಾಯ

ನರಕಗಳ ಬೇರೆ ಬೇರೆ ಗತಿಗಳ ವರ್ಣನೆ

ಆಗ ಪರೀಕ್ಷಿದ್ರಾಜನು ಶ್ರೀಶುಕಮಹರ್ಷಿಗಳನ್ನು ಹೀಗೆ ಪ್ರಶ್ನಿಸಿದನು :

ಮಹರ್ಷ ಏತದ್ವೈಚಿತ್ರ್ಯಂ ಲೋಕಸ್ಯ ಕಥಮಿತಿ ॥೧॥

"ಮಹರ್ಷಿಗಳೇ! ಲೋಕಗಳಲ್ಲಿರುವ ಜೀವಗಳಲ್ಲಿ ಕೆಲವರಿಗೆ ಸುಖ, ಕೆಲವರಿಗೆ ದುಃಖ, ಕೆಲವರಿಗೆ ಸುಖ-ದುಃಖಗಳ ಮಿಶ್ರಣ, ಕೆಲವರಿಗೆ

ವಾಗಿ ಲೋಕದೃಷ್ಟಿಯಿಂದ ಪರಿಮಿತವಾಗಿರುವ ಈ ರೂಪವನ್ನು ಧರಿಸಿದನೋ, ಯಾವನ ರೂಪದಲ್ಲಿ ಕಾರ್ಯಕಾರಣಾತ್ಮಕವಾದ ಇವೆಲ್ಲವೂ ಬೆಳಗುತ್ತಿದೆಯೋ, ಸಿಂಹವು ಯಾವನ ಶೌರ್ಯವೇ ಮುಂತಾದ ಲಕ್ಷಣವುಳ್ಳ ಅನವದ್ಯವಾದ ಲೀಲೆಯನ್ನು ಕಲಿತುಕೊಂಡಿತೋ, ಆ ಭಗವಂತನ ಮಹಾಮಹಿಮೆಯುಳ್ಳ ಮಾರ್ಗವನ್ನು ಯಾರು ತಾನೇ ಬಲ್ಲರು? ತನ್ನ ಜನರ ಮನಸ್ಸುಗಳನ್ನು ವಶಪಡಿಸಿಕೊಳ್ಳುವುದನ್ನು ಕೇಳಿ ಉದಾರಬುದ್ಧಿಯುಳ್ಳ ಆ ಸ್ವಾಮಿಯು ಈ ಲೀಲೆಯನ್ನು ಕೈಗೊಂಡನು. (ವಿಜಯಧ್ವಜೀಯ)

ಉತ್ತಮಗತಿ, ಕೆಲವರಿಗೆ ಅಧಮಗತಿ–ಹೀಗೆ ವೈವಿಧ್ಯ-ವೈಚಿತ್ರ್ಯಗಳು ಉಂಟಾಗುವುದಕ್ಕೆ ಕಾರಣವೇನು?"

ಮಹರ್ಷಿಗಳು ಆತನಿಗೆ ಹೇಳುತ್ತಾರೆ :

"ಮಹಾರಾಜ! ಕರ್ಮಗಳನ್ನು ಮಾಡುವ ಮನುಷ್ಯರಲ್ಲಿ ಸಾತ್ತ್ವಿಕರು, ರಾಜಸರು ಮತ್ತು ತಾಮಸರು–ಎಂದು ಮೂರು ಪ್ರಕಾರಗಳಿವೆ. ಅವರ ಶ್ರದ್ಧೆಗಳಲ್ಲಿಯೂ ಸಾತ್ತ್ವಿಕಶ್ರದ್ಧೆ, ರಾಜಸಶ್ರದ್ಧೆ ಮತ್ತು ತಾಮಸ ಶ್ರದ್ಧೆಗಳೆಂಬ ಭೇದಗಳಿವೆ. ಹೀಗೆ ಅವರ ಸ್ವಭಾವ ಮತ್ತು ಶ್ರದ್ಧೆಗಳ ಭೇದಕ್ಕೆ ತಕ್ಕಂತೆ ಅವರ ಕರ್ಮಗಳ ಗತಿಗಳೂ ಬೇರೆ-ಬೇರೆಯಾಗುತ್ತವೆ ಮತ್ತು ಹೆಚ್ಚು-ಕಡಿಮೆ ರೂಪದಲ್ಲಿ ಈ ಎಲ್ಲ ಗತಿಗಳೂ ಜೀವಗಳಿಗೆ ಉಂಟಾಗುವುವು. ಸಾತ್ತ್ವಿಕ ಶ್ರದ್ಧೆಯಿಂದ ಸುಖವೂ, ರಾಜಸಶ್ರದ್ಧೆಯಿಂದ ಸುಖ-ದುಃಖಗಳೂ ಮತ್ತು ತಾಮಸಶ್ರದ್ಧೆಯಿಂದ ದುಃಖವೂ-ಉಂಟಾಗುವುವು. ಹೀಗೆಯೇ ನಿಷಿದ್ಧಕರ್ಮ ವಾದ ಪಾಪಗಳನ್ನು ಮಾಡುವವರಿಗೂ ಅವರ ಶ್ರದ್ಧೆಗಳು ಬೇರೆ-ಬೇರೆ ಯಾಗಿರುವುದರಿಂದ ಅವರಿಗೆ ದೊರೆಯುವ ಫಲಗಳೂ ಬೇರೆ-ಬೇರೆ ಯಾಗುವುವು. ಆದುದರಿಂದ ಅನಾದಿಯಾದ ಅವಿದ್ಯೆಗೆ ವಶರಾಗಿ ಜೀವರು ಕಾಮನಾಪೂರ್ವಕವಾಗಿ ಆಚರಿಸುವ ನಿಷಿದ್ಧಕರ್ಮಗಳಿಂದ ಸಾವಿರಾರು ಬಗೆಯ ನರಕಗತಿಗಳು ಫಲಿಸುವುವು. ಅವುಗಳನ್ನು ವಿಸ್ತಾರವಾಗಿ ವರ್ಣಿಸುವೆನು ಕೇಳು."

ಆಗ ರಾಜನು ಮಹರ್ಷಿಗಳನ್ನು ಕುರಿತು–"ಶ್ರೀಭಗವಂತರೇ! ತಾವು ವರ್ಣಿಸುವುದಾಗಿ ಹೇಳಿದ ಈ ನರಕಗಳು ಭೂಮಿಯಲ್ಲೇ ಇರುವ ಕೆಲವು ದೇಶವಿಶೇಷಗಳೇ ಅಥವಾ ಅವು ಬ್ರಹ್ಮಾಂಡಕ್ಕಿಂತಲೂ ಹೊರಗೆ ಇವೆಯೇ? ಬ್ರಹ್ಮಾಂಡದೊಳಗೆ ಇರುವ ಜಾಗಗಳೇ? ಎಂಬುದನ್ನು ತಿಳಿಸಬೇಕು"– ಎಂದು ಪ್ರಾರ್ಥಿಸಲು ಮಹರ್ಷಿಗಳು ಆತನಿಗೆ ಹೀಗೆ ವಿವರಣೆನೀಡಿದರು :

(ಶ್ಲೋಕ 2-4)

"ರಾಜೇಂದ್ರ! ಆ ನರಕಗಳು ತ್ರಿಲೋಕಗಳ ಮಧ್ಯದಲ್ಲೇ ದಕ್ಷಿಣ ದಿಕ್ಕಿನಲ್ಲಿ ಭೂಮಿಗೆ ಕೆಳಗೂ ಮತ್ತು ಜಲರಾಶಿಯ ಮೇಲುಗಡೆಯೂ ಇವೆಯಪ್ಪಾ. ಅದೇ ದಿಕ್ಕಿನಲ್ಲೇ ಅಗ್ನಿಷ್ವಾತ್ತರೇ ಮುಂತಾದ ಪಿತೃಗಣ

ಗಳು ತಮ್ಮ-ತಮ್ಮ ವಂಶಗಳಲ್ಲಿ ಜನಿಸಿದ ಜನರಿಗೆ 'ಮಂಗಳವುಂಟಾಗಲಿ, ಉತ್ತರೋತ್ತರ ಅಭಿವೃದ್ಧಿಯುಂಟಾಗಲಿ'–ಎಂದು ಏಕಾಗ್ರವಾದ ಮನಸ್ಸಿನಿಂದ ಆಶಂಸನೆಮಾಡುತ್ತಾ ನೆಲೆಸಿದ್ದಾರೆ. ಸೂರ್ಯದೇವನ ಸುಪುತ್ರನೂ, ಪಿತೃಗಳ ಅಧಿಪತಿಯೂ ಆದ ಯಮಧರ್ಮರಾಜನು ತನ್ನ ಸೇವಕರೊಡನೆ ಆ ನರಕಲೋಕದಲ್ಲೇ ವಾಸಿಸುತ್ತಾ ಶ್ರೀಭಗವಂತನ ಶಾಸನವನ್ನು ಮೀರದಂತೆ ತನ್ನ ಆಧಿಪತ್ಯವನ್ನು ನಡೆಸುತ್ತಾನೆ. ತನ್ನ ದೂತರು ಅಲ್ಲಿಗೆ ಕರೆದು ತಂದ ಮೃತರಾದ ಪ್ರಾಣಿಗಳಿಗೆ ಅವರವರ ದುಷ್ಟಕರ್ಮಗಳಿಗೆ ತಕ್ಕಫಲವನ್ನು ಅಲ್ಲಿ ಅವನು ಕೊಡುವನು. ಆ ನರಕಗಳ ಸಂಖ್ಯೆಯೇನು? ಎಂದರೆ : ಕೆಲವರು ಅವುಗಳಲ್ಲಿ ಇಪ್ಪತ್ತೊಂದು ವರ್ಗಗಳುಂಟು ಎನ್ನುತ್ತಾರೆ. ಅವುಗಳ ನಾಮಧೇಯಗಳನ್ನೂ, ರೂಪಗಳನ್ನೂ, ಲಕ್ಷಣಗಳನ್ನೂ ಕ್ರಮವಾಗಿ ವರ್ಣಿಸುತ್ತೇನೆ ; ಕೇಳು. ತಾಮಿಸ್ರ, ಅಂಧತಾಮಿಸ್ರ, ರೌರವ, ಮಹಾರೌರವ, ಕುಂಭೀಪಾಕ, ಕಾಲಸೂತ್ರ, ಅಸಿಪತ್ರವನ, ಸೂಕರಮುಖ, ಅಂಧಕೂಪ, ಕೃಮಿಭೋಜನ, ಸದಂಶ, ತಪ್ತಸೂರ್ಮಿ, ವಜ್ರಕಂಟಕಶಾಲ್ಮಲೀ, ವೈತರಣೀ, ಪೂಯೋದ, ಪ್ರಾಣರೋಧ, ವಿಶಸನ, ಲಾಲಾಭಕ್ಷ, ಸಾರಮೇಯಾದನ, ಅವೀಚಿ ಮತ್ತು ಅಯಃಪಾನ–ಎಂಬಿವೇ ಆ ಇಪ್ಪತ್ತೊಂದು ನರಕವರ್ಗಗಳು. ಇವುಗಳಲ್ಲದೇ ಕ್ಷಾರಕರ್ದಮ, ರಕ್ಷೋಗಣಭೋಜನ, ಶೂಲಪ್ರೋತ, ದಂದಶೂಕ, ಅವಟನಿರೋಧನ, ಪರ್ಯಾವರ್ತನ ಮತ್ತು ಸೂಚೀಮುಖ–ಎಂಬ ಏಳೂ ಸೇರಿ ಒಟ್ಟು ಇಪ್ಪತ್ತೆಂಟು ನರಕಗಳು ಬಗೆ-ಬಗೆಯ ಯಾತನೆಗಳನ್ನು ಜೀವಿಗಳು ಅನುಭವಿಸುವ ಜಾಗಗಳಾಗಿವೆ. ಯಾವನು ಮತ್ತೊಬ್ಬರ ಹಣ, ಹೆಂಡತಿ ಅಥವಾ ಮಕ್ಕಳನ್ನು ಅಪಹರಣಮಾಡುತ್ತಾನೆಯೋ–ಅಂತಹ ಪಾಪಿಯನ್ನು ಅತಿಭಯಂಕರರಾದ ಯಮದೂತರು ಕಾಲಪಾಶದಿಂದ ಬಿಗಿದು ಬಲಾತ್ಕಾರವಾಗಿ ತಾಮಿಸ್ರವೆಂಬ ನರಕದಲ್ಲಿ ಕೆಡಹುವರು. ಆ ಕಗ್ಗತ್ತಲೆಯ ಲೋಕದಲ್ಲಿ ಆತನು ಅನ್ನ-ನೀರುಗಳನ್ನು ಪಡೆಯದೇ, ದೊಣ್ಣೆಗಳಿಂದ ಬಡಿತ, ಭಯ-ಹೆದರಿಕೆ–ಮುಂತಾದ ಯಾತನೆಗಳಿಗೆ ತುತ್ತಾಗಿ ಪೀಡೆಯನ್ನು ತಡೆಯಲಾರದೇ ತಟ್ಟನೆ ಮೂರ್ಛೆಗೊಳ್ಳುವನು. ಹೀಗೆಯೇ ಮತ್ತೊಬ್ಬರಿಗೆ ಮೋಸಮಾಡಿ ಅವರ ಹೆಂಡಿರು-ಮಕ್ಕಳು ಮುಂತಾದವರನ್ನು ಅನುಭವಿಸುವ ಪಾಪಿಯು

ಮರಣಾನಂತರ ಅಂಧತಾಮಿಸ್ರವೆಂಬ ನರಕದಲ್ಲಿ ಬೀಳುತ್ತಾನೆ. ಅಲ್ಲಿಯ ಯಾತನೆಗಳನ್ನು ಸಹಿಸಲಾರದೇ ಆತನು ಬೇರು ಕತ್ತರಿಸಿದ ಮರದಂತೆ ತತ್ತರಿಸುತ್ತಾ ಮತಿಗೆಟ್ಟು ಕುರುಡನಾಗುವನು. ಇದು ಅತ್ಯಂತ ಕುರುಡುಕತ್ತಲೆಯ ನರಕ. ಹಾಗೆಯೇ ಈ ಲೋಕದಲ್ಲಿ ಯಾವನು–'ಈ ದೇಹವೇ ನಾನು. ಈ ಹೆಂಡತಿ, ಹಣ–ಇತ್ಯಾದಿಗಳೆಲ್ಲಾ ನನ್ನವು'–ಎಂಬ ಬುದ್ಧಿಯಿಂದ ಕೂಡಿ ಇತರ ಭೂತಗಳಿಗೆ ದ್ರೋಹಮಾಡುತ್ತಾ ನಿರಂತರವಾಗಿ ತನ್ನ ಕುಟುಂಬದ ಪಾಲನೆ-ಪೋಷಣೆಗಳಲ್ಲಿಯೇ ಆಸಕ್ತನಾಗಿರುವನೋ–ಆತನು ದೇಹವನ್ನು ತೊರೆದ ಬಳಿಕ ತನ್ನ ಪಾಪದ ಫಲವಾಗಿ ರೌರವವೆಂಬ ನರಕದಲ್ಲಿ ತಾನೇ ಬೀಳುವನು. ಆತನು ಈ ಲೋಕದಲ್ಲಿದ್ದಾಗ ಯಾವ ಜೀವಗಳಿಗೆ ಯಾವ ಬಗೆಯ ಕಷ್ಟಗಳನ್ನು ಕೊಡುತ್ತಿದ್ದನೋ–ಅದೇ ಬಗೆಯ ಕಷ್ಟಗಳನ್ನೇ ಪರಲೋಕದಲ್ಲಿ ಆ ಜೀವಗಳಿಂದಲೇ ಪಡೆಯುವನು. ಆತನಿಂದ ಹಿಂಸೆಗೆ ಒಳಗಾಗಿದ್ದ ಜೀವಗಳೇ ಆತನಿಗೆ ಯಮಯಾತನೆಯ ಸಮಯವು ಬಂದಾಗ 'ರುರು' ಎಂಬ ಘಾತಕಪ್ರಾಣಿಗಳಾಗಿ ಆತನನ್ನು ಮತ್ತೂ ಹೆಚ್ಚಾಗಿ ಪೀಡಿಸುವುವು. ಆದ್ದರಿಂದ ಈ ನರಕವನ್ನು 'ರೌರವ' ವೆಂದು ಕರೆಯುವರು. 'ರುರು' ಎಂಬುದು ಸರ್ಪಕ್ಕಿಂತಲೂ ಹೆಚ್ಚು ಭಯಂಕರವಾದ ಕ್ರೂರಜಂತು. ಹಾಗೆಯೇ ಬೇರೆ ಯಾವುದನ್ನೂ ಗಮನಿಸದೇ ತನ್ನ ಶರೀರದ ಪೋಷಣೆಯಲ್ಲಿಯೇ ತೊಡಗಿದ ಪಾಪಿಯು ಮಹಾರೌರವವೆಂಬ ನರಕದಲ್ಲಿ ಬೀಳುವನು. ಅಲ್ಲಿ ಹಸೀಮಾಂಸವನ್ನು ಭಕ್ಷಿಸುವ ರುರುಗಳು ಮಾಂಸದ ಆಸೆಯಿಂದ ಆತನನ್ನು ಕಿತ್ತುತಿನ್ನುವುವು. ಯಾವ ಕ್ರೂರಿಯು ತನ್ನ ಹೊಟ್ಟೆ ಹೊರೆದುಕೊಳ್ಳುವುದಕ್ಕಾಗಿ ಬದುಕಿರುವ ಪಶು-ಪಕ್ಷಿಗಳನ್ನು ಬೇಯಿಸುತ್ತಾನೆಯೋ–ಅಂತಹ ಹೃದಯಹೀನನಾದ, ರಾಕ್ಷಸರಿಗಿಂತಲೂ ನೀಚನೆನಿಸಿದ ನರಾಧಮನನ್ನು ಯಮದೂತರು ಕುಂಭೀಪಾಕವೆಂಬ ನರಕಕ್ಕೆ ಸೆಳೆದು ಕೊಂಡು ಹೋಗಿ ಅಲ್ಲಿ ಆತನನ್ನು ಕುದಿಯುತ್ತಿರುವ ಎಣ್ಣೆಯ ಕಡಾಯಿಯಲ್ಲಿ ಹಾಕಿ ಬೇಯಿಸುವರು. (ಹೀಗೆ ಕಡಾಯಿಯಲ್ಲಿ ಹಾಕಿ ಬೇಯಿಸುವ ನರಕವಾದ್ದರಿಂದ ಅದನ್ನು ಕುಂಭೀಪಾಕವೆನ್ನುತ್ತಾರೆ.) ಈ ಲೋಕದಲ್ಲಿ ತಂದೆ-ತಾಯಿಗಳಿಗೂ, ಬ್ರಾಹ್ಮಣರಿಗೂ, ವೇದಕ್ಕೂ ದ್ರೋಹಮಾಡುವ ಪಾತಕಿಯನ್ನು ಯಮಭಟರು ಕಾಲಸೂತ್ರವೆಂಬ ನರಕಕ್ಕೆ ಸೆಳೆದೊಯ್ಯು

ವರು. ಆ ನರಕಲೋಕದ ವಿಸ್ತಾರ ಹತ್ತು ಸಾವಿರ ಯೋಜನಗಳು. ಅಲ್ಲಿ ಆ ಪಾಪಿಯನ್ನು ತಾಮ್ರದ ಕಾದ ಕಾವಲಿಯಲ್ಲಿ ಅಥವಾ ತಾಮ್ರಮಯವಾದ ಕಾದ ನೆಲದಲ್ಲಿ ಕೂರಿಸಲಾಗುವುದು. ಮೇಲೆ ಸೂರ್ಯನಿಂದಲೂ ಕೆಳಗೆ ಅಗ್ನಿಯಿಂದಲೂ ಕಡುಸುಡುತ್ತಿರುವ ಆ ಜಾಗದಲ್ಲಿ ಹಸಿವು-ಬಾಯಾರಿಕೆ ಗಳಿಂದ ಸುಟ್ಟುಹೋಗುತ್ತಿರುವ ಆ ಜೀವವು ಒಳಗೂ-ಹೊರಗೂ ಹೆಚ್ಚು ತ್ತಿರುವ ಕಾವನ್ನು ತಾಳಲಾರದೇ ಶಾಂತಿಯನ್ನು ಕಳೆದುಕೊಂಡು ಕೆಲವೊಮ್ಮೆ ಕೂರುವುದು, ಕೆಲವೊಮ್ಮೆ ಮಲಗುವುದು, ಕೆಲವೊಮ್ಮೆ ಒದ್ದಾಡುವುದು, ಕೆಲವೊಮ್ಮೆ ಎದ್ದು ನಿಲ್ಲುವುದು, ಕೆಲವೊಮ್ಮೆ ಅಲ್ಲಲ್ಲಿ ಓಡುವುದು–ಹೀಗೆ ಪಶುವಿನ ದೇಹದಲ್ಲಿ ಎಷ್ಟು ರೋಮಗಳಿವೆಯೋ–ಅಷ್ಟು ಸಾವಿರ ವರ್ಷಗಳ ಕಾಲ ಆ ಮಹಾಸಂಕಟವನ್ನು ಆ ಜೀವವು ಅನುಭವಿಸಬೇಕಾಗುವುದು. ಯಾವುದೇ ಬಗೆಯ ಆಪತ್ತು ಇಲ್ಲದೇ ಇದ್ದರೂ ತನ್ನ ವೈದಿಕಮಾರ್ಗವನ್ನು ಬಿಟ್ಟು ಪಾಷಂಡಧರ್ಮವನ್ನು ಅನುಸರಿಸುವ ಜೀವನನ್ನು ಯಮದೂತರು ಅಸಿಪತ್ರವನವೆಂಬ ನರಕಕ್ಕೆ ಸೆಳೆದೊಯ್ದು ಅಲ್ಲಿ ಆತನನ್ನು ಚಾವಟಿಯಿಂದ ಬಡಿಯುವರು. ಆ ಏಟುಗಳಿಂದ ತಪ್ಪಿಸಿಕೊಳ್ಳಲು ಆತನು ಅಲ್ಲಲ್ಲಿ ಓಡ ತೊಡಗಿದಾಗ ಅಲ್ಲಿ ಆತನ ಎಲ್ಲ ಅಂಗಗಳೂ ಎರಡೂ ಕಡೆಗಳಲ್ಲೂ ಅಲಗು ಗಳಿಂದ ಕೂಡಿದ ಕತ್ತಿಯಂತೆ ತೀಕ್ಷ್ಣವಾದ ತಾಳೆಯ ಮರಗಳ ಪತ್ರೆಗಳಿಂದ ಕತ್ತರಿಸಲ್ಪಡುತ್ತಿರುವುವು. ಆ ವೇದನೆಯಿಂದ–'ಅಯ್ಯೋ ಸತ್ತೆನು! ಸತ್ತೆನು!'– ಎಂದು ಕಿರುಚಿಕೊಳ್ಳುತ್ತಾ ಹೆಜ್ಜೆ-ಹೆಜ್ಜೆಗಳಲ್ಲೂ ಮೂರ್ಛಿತನಾಗಿ ಬೀಳ ತೊಡಗುವನು. ತನ್ನ ಧರ್ಮಕ್ಕೆ ದ್ರೋಹಮಾಡಿ ಪಾಷಂಡಧರ್ಮವನ್ನು ಅನುಸರಿಸುವವನು–ಹೀಗೆ ತನ್ನ ಕುಕರ್ಮದ ಫಲವನ್ನು ಅನುಭವಿಸಬೇಕಾಗು ವುದು. ಈ ಲೋಕದಲ್ಲಿ ಯಾವನಾದರೂ ರಾಜನಾಗಲೀ, ಆತನ ಅಧಿಕಾರಿ ಯಾಗಲೀ ನಿರಪರಾಧಿಯಾದ ಮನುಷ್ಯನಿಗೆ ದಂಡನೆಯನ್ನು ಕೊಟ್ಟರೆ ಅಥವಾ ಬ್ರಾಹ್ಮಣನಿಗೆ ಶರೀರದಂಡನೆಯನ್ನು ವಿಧಿಸಿದರೆ* ಆ ಮಹಾಪಾಪಿಯು ಸತ್ತು ಸೂಕರಮುಖವೆಂಬ ನರಕದಲ್ಲಿ ಬೀಳುವನು. ಅಲ್ಲಿ ಮಹಾಬಲಶಾಲಿ ಗಳಾದ ಯಮದೂತರು ಆತನನ್ನು ತುಳಿದುಹಾಕುವರು. ಆಗ ಅಂಗಾಂಗ

---

* ಬ್ರಾಹ್ಮಣರು ಅಪರಾಧಮಾಡಿದರೆ ಆ ನೀಚಬ್ರಾಹ್ಮಣನಿಗೆ ಶರೀರದಂಡನೆ ಯನ್ನು ವಿಧಿಸಬಾರದು. ಬೇರೆ ರೀತಿಯ ಶಿಕ್ಷೆಗಳನ್ನು ಕೊಡಬೇಕು. ಆತನ ತಲೆಯನ್ನು

ಗಳೆಲ್ಲಾ ಜಜ್ಜಿಹೋಗಿ ಗಾಣದಲ್ಲಿ ಸಿಕ್ಕಿದ ಕಬ್ಬಿನ ತುಂಡಿನಂತೆ ಅರೆಯಲ್ಪಡುತ್ತಾ ನೋವಿನಿಂದ ನರಳುತ್ತಾ ಆತನು ತಾನು ಹಿಂದೆ ಪೀಡಿಸಿದ್ದ ನಿರಪರಾಧಿಗಳಾದ ಜೀವಗಳು ಹೇಗೆ ಕೂಗಿಕೊಳ್ಳುತ್ತಿದ್ದುವೋ–ಹಾಗೆಯೇ ತಾನೂ ಅರಚಿಕೊಳ್ಳುತ್ತಾ ಕೆಲವೊಮ್ಮೆ ಮೂರ್ಛೆಬೀಳುವನು. (ಶ್ಲೋಕ 5-16)

ಯಸ್ತ್ವಿಹ ವೈ ಭೂತಾನಾಮೀಶ್ವರೋಪಕಲ್ಪಿತವೃತ್ತೀನಾಮವಿವಿಕ್ತಪರವ್ಯಥಾನಾಂ ಸ್ವಯಂ ಪುರುಷೋಪಕಲ್ಪಿತವೃತ್ತಿರ್ವಿವಿಕ್ತಪರ- ವ್ಯಥೋ ವ್ಯಥಾಮಾಚರತಿ ಸ ಪರತ್ರಾನ್ಧಕೂಪೇ ತದಭಿದ್ರೋಹೇಣ ನಿಪತತಿ ತತ್ರ ಹಾಸೌ ತೈರ್ಜನ್ತುಭಿಃ ಪಶುಮೃಗಪಕ್ಷಿಸರೀಸೃಪೈರ್ಮಶಕಯೂಕಾಮತ್ಕುಣಮಕ್ಷಿಕಾದಿಭಿರ್ಯೇ ಕೇ ಚಾಭಿದ್ರುಗ್ಧಾಸ್ತೈಃ ಸರ್ವತೋಽಭಿದ್ರುಹ್ಯಮಾಣಸ್ತಮಸಿ ವಿಹತನಿದ್ರಾನಿರ್ವೃತಿರಲಬ್ಧಾವ - ಸ್ಥಾನಃ ಪರಿಕ್ರಾಮತಿ ಯಥಾ ಕುಶರೀರೇ ಜೀವಃ ॥೧೭॥

ಶ್ರೀಭಗವಂತನು ಮನುಷ್ಯನಿಗೆ–'ಇದು ವಿಹಿತವಾದುದು, ಇದು ನಿಷಿದ್ಧವಾದುದು'–ಎಂಬ ವಿವೇಕದಿಂದ ಜೀವನದ ವೃತ್ತಿಯನ್ನು ಆರಿಸಿಕೊಂಡು ಅವಲಂಬಿಸಲು ನಿಯಮಿಸಿದ್ದಾನೆ. ಇತರರಿಗೆ ಉಂಟಾಗುವ ಕಷ್ಟಗಳ ಅರಿವನ್ನೂ ಅವನಿಗೆ ಕೊಟ್ಟಿದ್ದಾನೆ. ಆದರೆ ತಿಗಣೆಯೇ ಮುಂತಾದ ಜೀವಿಗಳಿಗೆ ಈ ಅರಿವು ಇರುವುದಿಲ್ಲ. ತಮ್ಮಿಂದ ಇತರ ಜೀವಿಗಳಿಗೆ ಸಂಕಟವುಂಟಾಗುತ್ತದೆ ಎಂಬುದನ್ನರಿಯದೇ ತಮ್ಮ ಜೀವನಕ್ಕಾಗಿ ಅವು ಇತರರ ರಕ್ತವನ್ನು ಹೀರುತ್ತವೆ. ಆದುದರಿಂದ ತಿಳಿವಳಿಕೆಯುಳ್ಳ ಮನುಷ್ಯನು ಅವುಗಳಿಗೆ ಹಿಂಸೆಮಾಡಬಾರದು.* ಹಾಗೆ ಹಿಂಸೆಮಾಡಿದ್ದೇ

ಬೋಳಿಸುವುದು, ಆಸ್ತಿಯನ್ನು ಕಿತ್ತುಕೊಳ್ಳುವುದು, ಆತನನ್ನು ದೇಶದಿಂದ ಓಡಿಸುವುದು–ಇವೇ ಮುಂತಾದ ಶಿಕ್ಷೆಗಳನ್ನು ಆ ಬ್ರಾಹ್ಮಣಾಧಮನಿಗೆ ಕೊಡಬೇಕು.

ವಪನಂ ದ್ರವಿಣಾದಾನಂ ಸ್ಥಾನಾನ್ನಿರ್ಯಾಪಣಂ ತಥಾ ।
ಏಷ ಹಿ ಬ್ರಹ್ಮಬನ್ಧೂನಾಂ ವಧೋ ನಾನ್ಯೋಽಸ್ತಿ ವೈದಿಕಃ ॥

(ವೀರರಾಘವೀಯ)

* ರಕ್ತ-ಮಾಂಸಗಳಿಂದಲೇ ಬದುಕುವ ದುಷ್ಟಪ್ರಾಣಿಗಳಿಗೆ ತನ್ನ ದೇಹವನ್ನು ಸಮರ್ಪಿಸಿ ಅವುಗಳನ್ನು ಸಂತೋಷಪಡಿಸಬೇಕು–ಎಂದು ಇದಕ್ಕೆ ಅರ್ಥವಲ್ಲ. ಅವುಗಳ ಉಪದ್ರವವು ಇಲ್ಲದೇ ಇರುವ, ಸುರಕ್ಷಿತವಾಗಿ–ಶುಚಿಯಾಗಿರುವ ಜಾಗದಲ್ಲಿ

ಆದರೆ ಆತನು ಅಂಧಕೂಪವೆಂಬ ನರಕದಲ್ಲಿ ಬೀಳುತ್ತಾನೆ. ಅಲ್ಲಿ ಅವನಿಂದ ಹಿಂದೆ ದ್ರೋಹಕ್ಕೆ ಒಳಗಾಗಿದ್ದ ಆ ಪಶು-ಪಕ್ಷಿ-ಮೃಗಗಳೂ, ಸರ್ಪವೇ ಮುಂತಾದ ಜಂತುಗಳೂ, ಸೊಳ್ಳೆ-ಹೇನು-ತಿಗಣೆ-ನೊಣಗಳೇ ಮುಂತಾದ ಕ್ರಿಮಿ-ಕೀಟಾದಿ ಜೀವಿಗಳೂ ಆತನನ್ನು ಎಲ್ಲ ಕಡೆಗಳಿಂದಲೂ ಕಚ್ಚಿ ನೋಯಿಸುವುವು. ಅದರಿಂದ ಆತನಿಗೆ ನಿದ್ರಾಭಂಗವಾಗುವುದು. ಅಲ್ಲಿ ನೆಲೆಗಾಣದೇ ನೆಮ್ಮದಿಯನ್ನು ಕಳೆದುಕೊಂಡ ಆತನು ನರಕದ ಕಗ್ಗತ್ತಲೆಯಲ್ಲಿ ಕಡುರೋಗವುಳ್ಳ ದೇಹದಲ್ಲಿ ಹೇಗೋ ಹಾಗೆ ಮಿಲ-ಮಿಲನೆ ಒದ್ದಾಡುತ್ತಾನೆ.

ಯಾವನು ಪಂಚಮಹಾಯಜ್ಞಗಳನ್ನು ಆಚರಿಸದೇ ತನಗೆ ದೊರಕುವ ಪದಾರ್ಥಗಳನ್ನು ಇತರರೊಡನೆ ಹಂಚಿಕೊಳ್ಳದೇ ತಾನು ಮಾತ್ರವೇ ತಿನ್ನು

ಮನುಷ್ಯನು ವಾಸಮಾಡಬೇಕು. ಹಾಗೂ ಅವುಗಳು ತನ್ನನ್ನು ಪೀಡಿಸಲು ಬಂದರೆ ಅನಿವಾರ್ಯವಾಗಿ ಅವುಗಳನ್ನು ಸಂಹರಿಸಿದರೆ ದೋಷವಿಲ್ಲ. ಅವುಗಳ ಸಂಹಾರವನ್ನೇ ವೃತ್ತಿಯನ್ನಾಗಿ ಇಟ್ಟುಕೊಳ್ಳಬಾರದು. ತನ್ನ ರಕ್ಷಣೆಗಾಗಿ ಹೊರತು ಇತರೇ ಕಾರಣಗಳಿಗಾಗಿ ಅವುಗಳನ್ನು ಸಂಹರಿಸಬಾರದು—ಎಂದೇ ಅರ್ಥಮಾಡಬೇಕು. ಏಕೆಂದರೆ : ಮುಂದೆ ಸಪ್ತಮಸ್ಕಂಧದಲ್ಲಿ ಪ್ರಹ್ಲಾದನು—'ಚೇಳು-ಹಾವುಗಳನ್ನು ಕೊಂದರೆ ಅದರಿಂದ ಸಾಧುಗಳಿಗೂ ಸಂತೋಷವುಂಟಾಗುವುದು'—ಎಂದು ಹೇಳುತ್ತಾನೆ. '**ಮೋದೇತ ಸಾಧುರಪಿ ವೃಶ್ಚಿಕಸರ್ಪಹತ್ಯಾ**'—ಎಂದು ಹೇಳುತ್ತಾನೆ. '**ಮೋದೇತ ಸಾಧುರಪಿ ವೃಶ್ಚಿಕಸರ್ಪಹತ್ಯಾ**'—ಈ ಸಂದರ್ಭದಲ್ಲಿ ಪರಮಹಂಸಮಹಾತ್ಮರ ಜೀವನದ ಒಂದು ಘಟನೆಯನ್ನು ಉದಾಹರಣೆಯನ್ನಾಗಿ ಕೊಡಬಹುದು : 'ತಿಗಣೆ, ಸೊಳ್ಳೆಗಳೇ ಮುಂತಾದ ಪ್ರಾಣಿಗಳನ್ನು ಕೊಲ್ಲಬಹುದೇ? ಕೊಂದರೆ ಜೀವಹಿಂಸೆಯ ಪಾಪವು ಬರುವುದಿಲ್ಲವೇ?'—ಎಂಬ ಸಂದೇಹವನ್ನು ಪರಿಹರಿಸಿಕೊಳ್ಳಲು ಒಬ್ಬ ಭಕ್ತನು ಆ ಮಹಾತ್ಮರ ಬಳಿಗೆ ಹೋದನು. ಆಗ ಆ ಮಹಾತ್ಮರು ತನ್ನನ್ನು ಪೀಡಿಸುತ್ತಿದ್ದ ಸೊಳ್ಳೆಗಳನ್ನು ಬಡಿದು ಕೊಲ್ಲುತ್ತಿದ್ದರು. 'ಏನು ಸಾಧುಮಹಾತ್ಮರೇ! ತಾವೇ ಹೀಗೆ ಪ್ರಾಣಿಹಿಂಸೆಮಾಡಬಹುದೇ?'—ಎಂದು ಅವರನ್ನು ಆ ಭಕ್ತನು ಆಶ್ಚರ್ಯದಿಂದ ಪ್ರಶ್ನೆಮಾಡಿದನು. 'ಈ ಪ್ರಾಣಿಗಳು ನನ್ನ ಧ್ಯಾನಕ್ಕೆ ಭಂಗವನ್ನುಂಟುಮಾಡುತ್ತಿವೆ. ಆದುದರಿಂದ ಇವುಗಳನ್ನು ಶಿಕ್ಷಿಸುತ್ತಿದ್ದೇನೆ. ನನಗೆ ಇವುಗಳ ಮೇಲೆ ದ್ವೇಷವೇನೂ ಇಲ್ಲ'—ಎಂದು ಮಹಾತ್ಮರು ಉತ್ತರನೀಡಿದರು. ಭಕ್ತನ ಸಂದೇಹವು ಪರಿಹಾರವಾಯಿತು. ಆತನು ಅವರಿಗೆ ನಮಸ್ಕಾರಮಾಡಿ ಹಿಂದಿರುಗಿದನು.

ತ್ತಾನೆಯೋ*–ಆತನು ಕಾಗೆಗೆ ಸಮಾನನು. ಅಥವಾ ಕಾಗೆಗಿಂತಲೂ ಕಡೆಯಾದವನು. ಆತನು ಪರಲೋಕದಲ್ಲಿ ಕೃಮಿಭೋಜನವೆಂಬ ಕೆಟ್ಟ ನರಕದಲ್ಲಿ ಬೀಳುವನು. ಅಲ್ಲಿ ಒಂದು ಲಕ್ಷ ಯೋಜನ ವಿಸ್ತಾರವುಳ್ಳ ಹುಳು-ಹುಪ್ಪಟೆಗಳ ಒಂದು ಕುಂಡವುಂಟು. ಹಿಂದೆ ಹೇಳಿದ ಸ್ವಾರ್ಥಿಯು ಹುಳು-ಹುಪ್ಪಟೆಗಳ ರೂಪವನ್ನು ತಾಳಿ ಆ ಕುಂಡದಲ್ಲಿ ಬಿದ್ದು ಒದ್ದಾಡುತ್ತಾ ಚೆನ್ನಾಗಿ ಶುದ್ಧಿಯಾಗುವವರೆಗೂ ತನ್ನ ಆ ಪ್ರಾಯಶ್ಚಿತ್ತವಿಲ್ಲದ ಪಾತಕದ ಫಲವನ್ನು ಅನುಭವಿಸುತ್ತಿರುವನು. ಅಲ್ಲಿ ಹುಳುಗಳು ಆತನನ್ನು ಕಿತ್ತುಹಾಕುತ್ತಿರುತ್ತವೆ ಮತ್ತು ಆತನೂ ಕ್ರಿಮಿ-ಕೀಟಗಳನ್ನು ತಿನ್ನುತ್ತಿರಬೇಕಾಗುವುದು.

ಎಲೈ ರಾಜೇಂದ್ರನೇ! ಈ ಲೋಕದಲ್ಲಿ ಯಾವನು ಆಪತ್ಕಾಲವಿಲ್ಲದಿದ್ದರೂ ಬ್ರಾಹ್ಮಣನಿಗೆ ಸೇರಿದ ಅಥವಾ ಇತರರಿಗೆ ಸೇರಿದ ಚಿನ್ನ-ರನ್ನ ಮುಂತಾದುವುಗಳನ್ನು ಕಳ್ಳತನದಿಂದಾಗಲೀ, ಬಲಾತ್ಕಾರದಿಂದಾಗಲೀ ಕೊಂಡೊಯ್ಯುವನೋ–ಅಂತಹ ಮನುಷ್ಯನು ಸತ್ತಾಗ ಯಮದೂತರು ಆತನನ್ನು ಸಂದಂಶವೆಂಬ ನರಕಕ್ಕೆ ಸೆಳೆದೊಯ್ಯುವರು. ಅಲ್ಲಿ ಕಾದ ಕಬ್ಬಿಣದ ಗುಂಡುಗಳಿಂದಲೂ, ಸಂದಂಶಗಳೆಂಬ ಮುಳ್ಳುಗಳಿಂದಲೂ ಆತನ ಚರ್ಮಗಳನ್ನು ಚುಚ್ಚುವರು. ಯಾವನಾದರೂ ಪುರುಷನು ರಮಿಸಬಾರದ ಹೆಂಗಸಿನೊಡನೆ ರಮಿಸಿದರೆ ಅಥವಾ ಯಾವಳಾದರೂ ಹೆಂಗಸು ರಮಿಸಬಾರದ ಪುರುಷನೊಡನೆ ರಮಿಸಿದರೆ–ಯಮದೂತರು ಆ ವ್ಯಭಿಚಾರಿ- ವ್ಯಭಿಚಾರಿಣಿಯರನ್ನು ತಪ್ತಸೂರ್ಮಿಯೆಂಬ ನರಕಕ್ಕೆ ಒಯ್ದು ಅಲ್ಲಿ ಅವರನ್ನು ಚಾವಟಿಗಳಿಂದ ಬಡಿಯುತ್ತಾರೆ. ಆ ಪುರುಷನು ಕಾದ ಕಬ್ಬಿಣದ ಸ್ತ್ರೀಮೂರ್ತಿಯನ್ನೂ ಮತ್ತು ಆ ಹೆಂಗಸು ಕಾದ ಕಬ್ಬಿಣದ ಪುರುಷವಿಗ್ರಹವನ್ನೂ ಆಲಿಂಗಿಸುವಂತೆ ಮಾಡುವರು. ಈ ಲೋಕದಲ್ಲಿ ಕಾಮಾತುರನಾಗಿ ಪಶುವೇ ಮೊದಲಾದ ಪ್ರಾಣಿಗಳೊಡನೆ ರಮಿಸುವವನನ್ನು

---

* ಇಲ್ಲಿ 'ಕೇವಲಾಘೋ ಭವತಿ ಕೇವಲಾದೀ' ಎಂದರೆ : ಇತರರೊಡನೆ ಹಂಚಿಕೊಳ್ಳದೇ, ಪಂಚಮಹಾಯಜ್ಞಗಳನ್ನು ಆಚರಿಸದೇ ತಾನು ಮಾತ್ರ ತಿನ್ನುವವನು ಕೇವಲ ಪಾಪಿಯೇ ಆಗುವನು–ಎಂಬ ಅನ್ನಸೂಕ್ತದ ವಚನವನ್ನು ಸ್ಮರಿಸಬಹುದು.

ಯಮದೂತರು ವಜ್ರಕಂಟಕಶಾಲ್ಮಲಿಯೆಂಬ ನರಕದಲ್ಲಿ ಕೆಡಹುವರು. ಅಲ್ಲಿ ಆತನನ್ನು ವಜ್ರದಂತೆ ಕಠೋರವಾಗಿ ಹರಿತವಾಗಿರುವ ಬೂರುಗದ ಮರದ ಮೇಲಕ್ಕೆ ಏರಿಸಿ ಅಲ್ಲಿಂದ ಕೆಳಕ್ಕೆ ಸೆಳೆದಾಡುವರು. ಈ ಲೋಕದಲ್ಲಿ ಧರ್ಮಿಷ್ಠವಾದ ಸತ್ಕುಲದಲ್ಲಿ ಜನಿಸಿದರೂ ನಾಸ್ತಿಕರಾಗಿ ಧರ್ಮ ಮರ್ಯಾದೆಯನ್ನು ಮೀರಿ ನಡೆಯುವ ರಾಜರೂ ಮತ್ತು ರಾಜರ ಅಧಿಕಾರಿ ಗಳೂ ಆ ಪಾಪದ ಫಲವಾಗಿ ಮರಣಾನಂತರ ನರಕದ ವೈತರಣೀನದಿಯಲ್ಲಿ ಹೋಗಿ ಬೀಳುವರು. ಮಲ, ಮೂತ್ರ, ಕೀವು, ರಕ್ತ, ಕೂದಲು, ಉಗುರು, ಮೂಳೆ, ಕೊಬ್ಬು, ಮಾಂಸ, ಮಜ್ಜೆಗಳೇ ಮುಂತಾದ ಕೊಳಕು ಪದಾರ್ಥಗಳಿಂದ ತುಂಬಿ ನರಕಗಳ ಕೂಪದಂತೆ ಇರುವ ಆ ನದಿಯಲ್ಲಿ ಮುಳುಗಿದ ಅವರನ್ನು ಅಲ್ಲಿರುವ ಜಲಚರಪ್ರಾಣಿಗಳು ಕಚ್ಚಿತಿನ್ನುತ್ತವೆ. ಅದರಿಂದ ಎಷ್ಟೇ ಹಿಂಸೆಯುಂಟಾಗುತ್ತಿದ್ದರೂ ಅವರಿಗೆ ದೇಹವು ಹೋಗು ವುದಿಲ್ಲ ; ಪ್ರಾಣವಿಯೋಗವುಂಟಾಗುವುದಿಲ್ಲ. ನಿರಂತರವಾಗಿ ಕಷ್ಟಪಡುತ್ತಾ ಅದನ್ನು ತಮ್ಮ ಪಾಪದ ಫಲವೆಂದು ತಿಳಿದು ಮನಸ್ಸಿನಲ್ಲೇ ಕೊರಗು ತ್ತಿರುವರು. ಯಾರು ಶೌಚ ಮತ್ತು ಆಚಾರಗಳ ನಿಯಮಗಳನ್ನು ತೊರೆದು ನಾಚಿಕೆಯನ್ನು ಬಿಟ್ಟು ಈ ಲೋಕದಲ್ಲಿ ಅಧಮವರ್ಣದ ಸ್ತ್ರೀಯನ್ನು ಮದುವೆ ಯಾಗಿ ಪಶುಗಳಂತೆ ನಡೆಯುವರೋ–ಅವರೂ ಕೂಡ ಮರಣಾನಂತರ ಕೀವು, ಮಲ, ಮೂತ್ರ ಮತ್ತು ಶ್ಲೇಷ್ಮಗಳಿಂದ ತುಂಬಿರುವ ಪೂಯೋದ ವೆಂಬ ಸಮುದ್ರದಲ್ಲಿ ಬಿದ್ದು ಆ ಹೇವರಿಕೆಯ ಪದಾರ್ಥಗಳನ್ನೇ ತಿನ್ನುತ್ತಿರು ವರು. ಇಲ್ಲಿ ಯಾರು ಬ್ರಾಹ್ಮಣಾದಿ ಉಚ್ಚವರ್ಣಗಳಲ್ಲಿ ಜನಿಸಿದ್ದರೂ ನಾಯಿ ಮತ್ತು ಕತ್ತೆಗಳನ್ನು ಸಾಕುತ್ತಾ ಪಶು-ಪಕ್ಷಿಗಳ ಬೇಟೆಯೇ ಮುಂತಾದುವು ಗಳಲ್ಲಿ ತೊಡಗಿ ಶಾಸ್ತ್ರಕ್ಕೆ ವಿರುದ್ಧವಾಗಿ ಪಶುಗಳನ್ನು ಕೊಲ್ಲುವರೋ–ಅವರು ಮರಣಾನಂತರ ಪ್ರಾಣನಿರೋಧವೆಂಬ ನರಕದಲ್ಲಿ ಹೋಗಿ ಬೀಳುವರು. ಅಲ್ಲಿ ಯಮದೂತರು ಅವರ ಮೇಲೆ ಗುರಿಯಿಟ್ಟು ಬಾಣಗಳನ್ನು ಹೊಡೆ ಯುವರು. ಈ ಲೋಕದಲ್ಲಿ ದಾಂಭಿಕರಾಗಿ ಬೂಟಾಟಿಕೆಯ ಯಜ್ಞಗಳನ್ನು ಮಾಡಿ ಅವುಗಳಲ್ಲಿ ಪಶುವಧೆಯನ್ನು ಮಾಡುವ ಜನರನ್ನು ಯಮಲೋಕದ ಅಧಿಕಾರಿಗಳು ಪರಲೋಕದಲ್ಲಿ ವೈಶಸ (ವಿಶಸನ) ವೆಂಬ ನರಕದಲ್ಲಿ ಬೀಳಿಸಿ ಬಗೆ-ಬಗೆಯಾಗಿ ಹಿಂಸೆಪಡಿಸುವರು. ಯಾವ ದ್ವಿಜನು ಕಾಮಾತುರನಾಗಿ

ತನ್ನ ಸವರ್ಣಳಾದ ಹೆಂಡತಿಗೆ ತನ್ನ ರೇತಸ್ಸನ್ನು ಕುಡಿಸುವನೋ–ಆ ಪಾಪಿಯು ಮೃತನಾದ ಬಳಿಕ ಯಮದೂತರು ಆತನನ್ನು ರೇತಸ್ಸಿನಿಂದ ತುಂಬಿದ ಲಾಲಭಕ್ಷವೆಂಬ ನದಿಯಲ್ಲಿ ಕೆಡಹಿ ಅವನಿಗೆ ರೇತಸ್ಸನ್ನೇ ಕುಡಿಸುವರು. ಯಾವನಾದರೂ ರಾಜನಾಗಲೀ ಆತನ ಅಧಿಕಾರಿಯಾಗಲೀ ಈ ಲೋಕದಲ್ಲಿ ಕಳ್ಳ-ಕಾಕರರಾಗಿ, ದರೋಡೆಗಾರರಾಗಿ ಮನೆಗೆ ಬೆಂಕಿ ಹಚ್ಚು ವುದು, ಮತ್ತೊಬ್ಬರಿಗೆ ವಿಷವನ್ನಿಕ್ಕುವುದು, ಗ್ರಾಮಗಳನ್ನು ಅಥವಾ ವ್ಯಾಪಾರಿಗಳನ್ನು ಲೂಟಿ ಮಾಡುವುದು–ಎಂಬೀ ಪಾತಕಗಳನ್ನು ಮಾಡಿದರೆ ಅವರನ್ನು ಮರಣಾನಂತರ ಸಾರಮೇಯಾದನವೆಂಬ ನರಕದಲ್ಲಿ ಬೀಳಿಸ ಲಾಗುವುದು. ಅಲ್ಲಿ ಯಮನ ಕಿಂಕರಗಳಾದ, ವಜ್ರದಂತಹ ಕೋರೆದಾಡೆ ಗಳುಳ್ಳ ಏಳುನೂರು ಇಪ್ಪತ್ತು ಸೀಳುನಾಯಿಗಳು ಅವರನ್ನು ಕಿತ್ತು ತಿನ್ನುವುವು. ಸುಳ್ಳುಸಾಕ್ಷಿ ಹೇಳುವವನು ಮತ್ತು ವ್ಯಾಪಾರದಲ್ಲಾಗಲೀ, ದಾನದಲ್ಲಾಗಲೀ ಸುಳ್ಳುಹೇಳುವವನು–ಸತ್ತನಂತರ ಆಧಾರರಹಿತವಾದ ಅವೀಚಿಮಾನ್ ಎಂಬ ಹೆಸರಿನ ನರಕದಲ್ಲಿ ಹೋಗಿ ಬೀಳುವನು. ಅಲ್ಲಿ ಆತನನ್ನು ನೂರು ಯೋಜನದಷ್ಟು ಎತ್ತರವಾಗಿರುವ ಪರ್ವತದ ಶಿಖರದಿಂದ ತಲೆಕೆಳಗಾಗಿ ಕೆಳಕ್ಕೆ ಬೀಳಿಸಲಾಗುವುದು. ಆ ನರಕದಲ್ಲಿ ಕಲ್ಲುಬಂಡೆಗಳ ನೆಲವು ನೀರಿನಂತೆ ಕಾಣುವುದರಿಂದ ಅದನ್ನು ಅವೀಚಿಮಾನ್ ಎಂದು ಕರೆಯುತ್ತಾರೆ. ಅಲ್ಲಿ ಪರ್ವತದಿಂದ ಕೆಳಗೆ ಬೀಳಿಸಿದಾಗ ಆ ಪಾಪಿಜೀವನ ದೇಹವು ಚೂರು-ಚೂರಾದರೂ ಪ್ರಾಣವು ಹೋಗುವುದಿಲ್ಲ. ಆದ್ದರಿಂದ ಆತನು ಮತ್ತೆ ಮತ್ತೆ ಮೇಲಕ್ಕೆ ಒಯ್ಯಲ್ಪಟ್ಟು ಅಲ್ಲಿಂದ ಕೆಳಕ್ಕೆ ನೂಕಲ್ಪಡುವನು. ಯಾವನಾದರೂ ಬ್ರಾಹ್ಮಣನಾಗಲೀ, ಬ್ರಾಹ್ಮಣಿಯಾಗಲೀ ಅಥವಾ ವ್ರತದಲ್ಲಿ ರುವ ಯಾವನೇ ಆಗಲೀ–ಪ್ರಮಾದವಶದಿಂದ ಮದ್ಯಪಾನವನ್ನು ಮಾಡಿದ್ದೇ ಆದರೆ ಅಥವಾ ಕ್ಷತ್ರಿಯನಾಗಲೀ, ವೈಶ್ಯನಾಗಲೀ ಸೋಮಪಾನವನ್ನು*

---

* ಕ್ಷತ್ರಿಯ-ವೈಶ್ಯರಿಗೆ ಸೋಮಪಾನವು ನಿಷಿದ್ಧ. ಸೋಮಪಾನದ ಜಾಗದಲ್ಲಿ ಅವರಿಗೆ ಆಲದ ಹಣ್ಣುಗಳನ್ನು ಹಿಂಡಿದ ರಸವನ್ನು ಮೊಸರಿನಲ್ಲಿ ಕಲಸಿಕೊಡಬೇಕು. **'ನ್ಯಗ್ರೋಧಸ್ತೇಮಣೀರಾಹೃತ್ಯ ತಾಃ ಸಮ್ಪಿಷ್ಯ ದಧಿನ್ಯುಪಮೃಜ್ಯ ತಮಸ್ಮೈ ಭಕ್ಷ್ಯಂ ಪ್ರಯಚ್ಛೇನ್ನ ಸೋಮಮ್'** ಎಂದು ಶ್ರುತಿಯು ಹೇಳುವುದು.

ಬ್ರಾಹ್ಮಣನು ಎಂದಿಗೂ ಮದ್ಯಪಾನಮಾಡಬಾರದು. **'ಯೋ ಬ್ರಾಹ್ಮಣೋऽದ್ಯ**

ಮಾಡಿದ್ದೇ ಆದರೆ ಅವರನ್ನು ಯಮದೂತರು ಅಯಃಪಾನವೆಂಬ ನರಕಕ್ಕೆ ಸೆಳೆದೊಯ್ಯುವರು. ಅಲ್ಲಿ ಅವರ ಎದೆಯನ್ನು ಕಾಲಿನಿಂದ ಮೆಟ್ಟಿಕೊಂಡು ಬೆಂಕಿಯಲ್ಲಿ ಕರಗಿದ ಕಬ್ಬಿಣವನ್ನು ಅವರ ಬಾಯೊಳಗೆ ಸುರಿಯುವರು. ಯಾವನು ತಾನು ಅಧಮನಾಗಿದ್ದರೂ ತನ್ನನ್ನು ಉತ್ತಮನೆಂದು ಭಾವಿಸಿಕೊಂಡು ಹುಟ್ಟು, ತಪಸ್ಸು, ವಿದ್ಯೆ, ಆಚಾರ, ವರ್ಣ ಅಥವಾ ಆಶ್ರಮಗಳಲ್ಲಿ ತನಗಿಂತಲೂ ಉತ್ತಮರಾದವರನ್ನು ವಿಶೇಷವಾಗಿ ಗೌರವಿಸುವುದಿಲ್ಲವೋ–ಆತನು ಬದುಕಿದ್ದರೂ ಸತ್ತವನಿಗೆ ಸಮಾನನೆಂದೇ ತಿಳಿಯಬೇಕು. ಸತ್ತ ನಂತರ ಆತನನ್ನು ಕ್ಷಾರಕರ್ದಮವೆಂಬ ನರಕದಲ್ಲಿ ತಲೆಕೆಳಗಾಗಿ ಬೀಳಿಸಲಾಗುವುದು. ಅಲ್ಲಿ ಆತನು ಅನಂತವಾದ ಪೀಡೆಗಳನ್ನು ಅನುಭವಿಸಬೇಕಾಗುವುದು. ಯಾವನಾದರೂ ಪುರುಷನು ಈ ಲೋಕದಲ್ಲಿ ನರಮೇಧವೇ ಮುಂತಾದ (ಮನುಷ್ಯನನ್ನು ಬಲಿಕೊಡುವ) ಯಜ್ಞಗಳ ಮೂಲಕ ಭೈರವ-ಯಕ್ಷ-ರಾಕ್ಷಸರೇ ಮುಂತಾದವರನ್ನು ಕುರಿತು ಯಜ್ಞ ಮಾಡಿದ್ದೇ ಆದರೆ ಅಥವಾ ಯಾವಳಾದರೂ ಹೆಂಗಸು ಪಶುಗಳಂತೆ ಪುರುಷರನ್ನು ತಿಂದುಹಾಕಿದ್ದೇ ಆದರೆ–ಅವರಿಂದ ಪಶುಗಳಂತೆ ಸಂಹರಿಸಲ್ಪಟ್ಟಿದ್ದ ಮನುಷ್ಯರು ಯಮಲೋಕದಲ್ಲಿ ರಾಕ್ಷಸರಾಗಿ, ತಮ್ಮನ್ನು ಕೊಂದುಹಾಕಿದ ಆ ಮನುಷ್ಯರಿಗೆ ಬಗೆ-ಬಗೆಯ ಯಾತನೆಗಳನ್ನು ಕೊಡುವರು. ರಕ್ಷೋಗಣಭೋಜನವೆಂಬ ನರಕದಲ್ಲಿ ಕಟುಕರಂತೆ ಅವರನ್ನು ಕೊಡಲಿಯಿಂದ ತುಂಡರಿಸಿ-ತುಂಡರಿಸಿ ಅವರ ರಕ್ತವನ್ನು ಹೀರುವರು. ಈ ಲೋಕದಲ್ಲಿ ಮನುಷ್ಯಮಾಂಸವನ್ನು ತಿಂದು ಆ ಪಾಪಿಗಳು ಆನಂದಿಸಿದಂತೆ–ನರಕದಲ್ಲಿ ಆ ರಾಕ್ಷಸರು ಅವರ ರಕ್ತವನ್ನು ಹೀರಿ ಹಿಗ್ಗುತ್ತಾ ಹಾಡುವರು ; ಕುಣಿದಾಡುವರು. ಯಾರು ಈ ಲೋಕದಲ್ಲಿ ಬದುಕಿರಬೇಕೆಂದಿರುವ

ಪ್ರಭೃತೀಹ ಕಶ್ಚಿನ್ಮೋಹಾತ್ಸುರಾಂ ಪಾಸ್ಯತಿ ಮನ್ದಬುದ್ಧಿಃ । ಅಪೇತಧರ್ಮೋ ಬ್ರಹ್ಮಹಾ ಚೈವ ಸ ಸ್ಯಾದಸ್ಮಿನ್‌ಲೋಕೇ ಗರ್ಹಿತಸ್ಸ್ಯಾತ್ಪರೇ ಚ ॥' (ಮಹಾಭಾರತ-ಆದಿಪರ್ವ) ಅವಿವೇಕಿಯಾಗಿ ಮದ್ಯವನ್ನು ಕುಡಿದಾಗ ಆತನು ಧರ್ಮಭ್ರಷ್ಟನಾಗುವನು. ಬ್ರಹ್ಮಹತ್ಯೆಯ ಪಾತಕಕ್ಕೆ ಗುರಿಯಾಗುವನು. ಇಹ-ಪರಲೋಕಗಳೆರಡರಲ್ಲೂ ನಿಂದ್ಯನಾಗುವನು.

ಬ್ರಾಹ್ಮಣರಲ್ಲದವರೂ ಕೂಡ ವ್ರತದಲ್ಲಿರುವಾಗ ಮದ್ಯಪಾನಮಾಡಕೂಡದು.

ಅರಣ್ಯದ ಅಥವಾ ಹಳ್ಳಿಯ ನಿರಪರಾಧಿಗಳಾದ ಪ್ರಾಣಿಗಳನ್ನು ಬಗೆ-ಬಗೆಯ ಉಪಾಯಗಳಿಂದ ತಮ್ಮ ಬಳಿಗೆ ಬರಮಾಡಿಕೊಂಡು ಆ ಪ್ರಾಣಿಗಳನ್ನು ಶೂಲಕ್ಕೇರಿಸಿ ಅಥವಾ ಹಗ್ಗದಿಂದ ಬಿಗಿದು ಆಟವಾಡುತ್ತಾ ಅವುಗಳಿಗೆ ಬಗೆ-ಬಗೆಯ ಪೀಡೆಗಳನ್ನುಂಟುಮಾಡುತ್ತಾರೆಯೋ–ಅವರನ್ನೂ ಕೂಡ ಮರಣಾನಂತರ ಯಮಯಾತನೆಗಳನ್ನು ಕೊಡುವ 'ಶೂಲಪ್ರೋತ' ವೆಂಬ ನರಕದಲ್ಲಿ ಶೂಲವೇ ಮುಂತಾದುವುಗಳಿಗೆ ಪೋಣಿಸಿ ಅವರಿಗೆ ಚಿತ್ರಹಿಂಸೆಗಳನ್ನು ಕೊಡುವರು. ಹಸಿವು-ಬಾಯಾರಿಕೆಗಳಿಂದಲೂ ಸಂಕಟ ಪಡುವ ಅವರು ಹದ್ದು-ಗಿಡಗಗಳೇ ಮುಂತಾದ ಹರಿತವಾದ ಕೊಕ್ಕುಗಳುಳ್ಳ ಭೀಕರವಾದ ನರಕದ ಹಕ್ಕಿಗಳಿಂದ ಕಚ್ಚಿತಿನ್ನಲ್ಪಡುತ್ತಾ ತಾವು ಮಾಡಿದ ಪಾಪಗಳನ್ನು ಸ್ಮರಿಸುವರು. (ಶ್ಲೋಕ 18-32)

ಎಲೈ ರಾಜೇಂದ್ರನೇ! ಯಾರು ಈ ಲೋಕದಲ್ಲಿ ಸರ್ಪಗಳಂತೆ ಕ್ರೂರ ಸ್ವಭಾವವುಳ್ಳವರಾಗಿ ಇತರ ಜೀವಿಗಳಿಗೆ ಪೀಡೆಯನ್ನುಂಟುಮಾಡುತ್ತಾರೆಯೋ ಅವರು ಮರಣಾನಂತರ ದಂದಶೂಕವೆಂಬ ನರಕಕ್ಕೆ ಹೋಗಿ ಬೀಳುವರು. ಅಲ್ಲಿ ಐದೈದು, ಏಳು-ಏಳು ಹೆಡೆಗಳುಳ್ಳ ಹಾವುಗಳು ಅವರ ಬಳಿಗೆ ಬಂದು ಇಲಿಗಳನ್ನು ನುಂಗುವಂತೆ ಅವರನ್ನು ನುಂಗಿಹಾಕುವುವು. ಇಲ್ಲಿ ಯಾರು ಇತರ ಪ್ರಾಣಿಗಳನ್ನು ಕತ್ತಲೆಯ ಹಳ್ಳ, ಹಗೇವು, ಗುಹೆಯೇ ಮುಂತಾದುವುಗಳಲ್ಲಿ ಕೂಡಿಹಾಕಿ ಹಿಂಸೆಪಡಿಸುವರೋ–ಅವರನ್ನು ನರಕದಲ್ಲಿ ಯಮದೂತರು ಅಂತಹುದೇ ಆದ ಜಾಗಗಳಲ್ಲಿ ಕೂಡಿಹಾಕಿ ವಿಷದ ಹೊಗೆಯನ್ನು ಬಿಟ್ಟು ಪೀಡಿಸುವರು. ಆದುದರಿಂದ ಆ ನರಕವನ್ನು ಅವಟನಿರೋಧನವೆಂದು ಕರೆಯುತ್ತಾರೆ. ಯಾವ ಗೃಹಸ್ಥನು ಮನೆಗೆ ಬಂದ ಅತಿಥಿ-ಅಭ್ಯಾಗತರನ್ನು ಕೋಪದಿಂದ–ಸುಟ್ಟುಹಾಕಿಬಿಡುವಂತೆ ಕಟುವಾದ ದೃಷ್ಟಿಗಳಿಂದ ಮತ್ತೆ-ಮತ್ತೆ ನೋಡುತ್ತಿರುವನೋ–ಆತನೇ ಪರ್ಯಾವರ್ತನ ವೆಂಬ ನರಕಕ್ಕೆ ಒಯ್ಯಲ್ಪಡುವನು. ಅಲ್ಲಿ ಆ ಪಾಪದೃಷ್ಟಿಯ ಕಣ್ಣುಗಳನ್ನು ಹದ್ದು-ಗಿಡಗ-ಕಾಗೆಗಳೇ ಮುಂತಾದ ವಜ್ರದಂತೆ ಕಠಿನವಾದ ಕೊಕ್ಕುಗಳುಳ್ಳ ಹಕ್ಕಿಗಳು ಬಲಾತ್ಕಾರದಿಂದ ಕಿತ್ತುಹಾಕುವುವು. ಲೋಕದಲ್ಲಿ ಕೆಲವು ವ್ಯಕ್ತಿಗಳು ತಮ್ಮನ್ನು ದೊಡ್ಡ ಹಣಗಾರರೆಂದು ಭಾವಿಸಿಕೊಂಡು ದುರಹಂಕಾರದಿಂದ ಎಲ್ಲರನ್ನೂ ವಕ್ರದೃಷ್ಟಿಯಿಂದ ನೋಡುತ್ತಾರೆ. ಎಲ್ಲರ ಮೇಲೂ ಸಂಶಯ

ಪಡುತ್ತಾರೆ. 'ಹಣವು ಖರ್ಚಾಯಿತಲ್ಲಾ! ನಾಶವಾಗುವುದಲ್ಲಾ!' ಎಂಬ ಚಿಂತೆಯಿಂದ ಮನಸ್ಸು-ಮುಖಗಳು ಒಣಗಿಹೋದವರಾಗಿ ಸ್ವಲ್ಪವೂ ನೆಮ್ಮದಿಯಿಲ್ಲದೆ ಯಕ್ಷರಂತೆ ಹಣದ ರಕ್ಷಣೆಯಲ್ಲೇ ಆಸಕ್ತರಾಗಿರುತ್ತಾರೆ. ಹಣದ ಸಂಪಾದನ, ಹಣವನ್ನು ಹೆಚ್ಚಿಸುವಿಕೆ, ಉಳಿಸುವಿಕೆ–ಇತ್ಯಾದಿಗಳಿಗಾಗಿ ಬಗೆ-ಬಗೆಯ ಪಾಪಗಳನ್ನು ಆಚರಿಸುತ್ತಾರೆ. ಅಂತಹ ನರಾಧಮರು ಸತ್ತ ನಂತರ ಸೂಚೀಮುಖವೆಂಬ ನರಕಕ್ಕೆ ಹೋಗಿ ಬೀಳುವರು. ಅಲ್ಲಿ ಯಮದೂತರು ಆ ಪಾಪಿಗಳ ಸರ್ವಾಂಗಗಳನ್ನೂ ನೇಯಿಗೆಯವರಂತೆ (ದರ್ಜಿಗಳಂತೆ) ಸೂಜಿಗಳಿಂದ ಚುಚ್ಚಿ ದಾರಗಳಿಂದ ಹೊಲಿಯುವರು.

ರಾಜೇಂದ್ರನೇ! ಯಮಲೋಕದಲ್ಲಿ ಇದೇ ಪ್ರಕಾರದ ನೂರಾರು ಸಾವಿರಾರು ನರಕಗಳಿವೆ. ಅವುಗಳಲ್ಲಿ ನಾನು ಈಗ ಹೇಳಿರುವ ಮತ್ತು ಹೇಳದೆ ಇರುವ ಎಲ್ಲ ನರಕಗಳಿಗೂ ಅಧರ್ಮಪರಾಯಣರಾದ ಎಲ್ಲ ಜೀವಗಳೂ ತಮ್ಮ-ತಮ್ಮ ಕರ್ಮಗಳಿಗೆ ಅನುಸಾರವಾಗಿ ಮತ್ತೆ-ಮತ್ತೆ ಹೋಗುತ್ತಿರುವವು. ಅಂತೆಯೇ ಧರ್ಮಾತ್ಮರಾದ ಜೀವರು ಸ್ವರ್ಗಾದಿಗಳಿಗೆ ಹೋಗುವರು. ಹೀಗೆ ಸ್ವರ್ಗ ಮತ್ತು ನರಕಗಳಲ್ಲಿ ತಮ್ಮ ಪುಣ್ಯ ಮತ್ತು ಪಾಪಗಳ ಹೆಚ್ಚು ಭಾಗವನ್ನು ಅನುಭವಿಸಿಯಾದ ಬಳಿಕ ಉಳಿಕೆಯ ಪುಣ್ಯ-ಪಾಪಗಳಿಂದ ಜನ್ಮವನ್ನು ಪಡೆಯಲು ಈ ಲೋಕಕ್ಕೆ ಜೀವರು ಹಿಂದಿರುಗುವರು. ಈ ಧರ್ಮ ಮತ್ತು ಅಧರ್ಮ–ಇವೆರಡಕ್ಕಿಂತಲೂ ವಿಲಕ್ಷಣವಾದ ಯಾವ ನಿವೃತ್ತಿಮಾರ್ಗವುಂಟೋ ಅದನ್ನು ಈ ಮೊದಲೇ* ವರ್ಣನೆಮಾಡಿಯಾಗಿದೆ. ಪುರಾಣಗಳಲ್ಲಿ ಹದಿನಾಲ್ಕು ಲೋಕಗಳೆಂದು ವರ್ಣಿಸಲ್ಪಟ್ಟಿರುವ ಬ್ರಹ್ಮಾಂಡ ಕೋಶವು ಇಷ್ಟೇಪ್ಪಾ ಇರುವುದು. ಇದು ಪರಮಪುರುಷನಾದ ಸಾಕ್ಷಾತ್ ಶ್ರೀಮನ್ನಾರಾಯಣನ ಮಾಯಾಗುಣದಿಂದ ಮಾಡಿರುವ ಅತ್ಯಂತ ಸ್ಥೂಲ ಸ್ವರೂಪವು. ನಿನ್ನ ಕೇಳಿಕೆಯಂತೆ ಅದನ್ನು ವರ್ಣಿಸಿದ್ದೇನೆ. ಉಪನಿಷತ್ತುಗಳಲ್ಲಿ ವರ್ಣಿಸಲ್ಪಟ್ಟಿರುವ ಶ್ರೀಭಗವಂತನಾದ ಪರಮಾತ್ಮನ ನಿಜಸ್ವರೂಪವು ಮನಸ್ಸು-ಬುದ್ಧಿಗಳಿಗೆ ಎಟುಕುವುದಿಲ್ಲ. ಆದರೂ ಶ್ರೀಭಗವಂತನ ಈ ಸ್ಥೂಲ ರೂಪದ ವರ್ಣನೆಯನ್ನು ಯಾವನು ಆದರದಿಂದ ಕೇಳುತ್ತಾನೆಯೋ ಅಥವಾ ಓದುತ್ತಾನೆಯೋ–ಆತನ ಬುದ್ಧಿಯೂ ಕೂಡ ಶ್ರದ್ಧೆ ಮತ್ತು ಭಕ್ತಿಗಳಿಂದ

---

* ಎರಡನೆಯ ಸ್ಕಂಧದಲ್ಲಿ ವಿವರಿಸಲಾಗಿದೆ.

ಶುದ್ಧವಾಗಿ ಆತನು ಶ್ರೀಭಗವಂತನ ಸೂಕ್ಷ್ಮವಾದ ಆ ಪರಸ್ವರೂಪವನ್ನು ಅನುಭವಿಸುವನು. (ಶ್ಲೋಕ 33-38)

ಶ್ರುತ್ವಾ ಸ್ಥೂಲಂ ತಥಾ ಸೂಕ್ಷ್ಮಂ ರೂಪಂ ಭಗವತೋ ಮತಿಃ ।
ಸ್ಥೂಲೇ ನಿರ್ಜಿತಮಾತ್ಮಾನಂ ಶನೈಃ ಸೂಕ್ಷ್ಮಂ ಧಿಯಾ ನಯೇದಿತಿ ॥

ಸಂಯಮಿಯಾದ ಸಾಧಕನು ಶ್ರೀಭಗವಂತನ ಸ್ಥೂಲರೂಪ ಮತ್ತು ಸೂಕ್ಷ್ಮರೂಪಗಳೆರಡನ್ನೂ ಶ್ರವಣಮಾಡಿ ಮೊದಲು ಸ್ಥೂಲರೂಪದಲ್ಲಿ ಮನಸ್ಸನ್ನು ಸ್ಥಿರಗೊಳಿಸಬೇಕು. ಅನಂತರ ಮೆಲ್ಲ-ಮೆಲ್ಲನೆ ಅಲ್ಲಿಂದ ಅದನ್ನು ಸೂಕ್ಷ್ಮರೂಪಕ್ಕೆ ಒಯ್ಯಬೇಕು.

ಭೂದ್ವೀಪವರ್ಷಸರಿದದ್ರಿನಭಃಸಮುದ್ರ-
ಪಾತಾಲದಿಙ್ನರಕಭಾಗಣಲೋಕಸಂಸ್ಥಾ ।
ಗೀತಾ ಮಯಾ ತವ ನೃಪಾದ್ಭುತಮೀಶ್ವರಸ್ಯ
ಸ್ಥೂಲಂ ವಪುಃ ಸಕಲಜೀವಕಾಯಧಾಮ ॥೪೦॥

ಪರೀಕ್ಷಿತಮಹಾರಾಜ! ನಾನು ನಿನಗೆ ಭೂಮಿ ಮತ್ತು ಅದರಲ್ಲಿರುವ ದ್ವೀಪಗಳು, ವರ್ಷಗಳು, ನದಿಗಳು, ಪರ್ವತಗಳು, ಆಕಾಶ, ಸಮುದ್ರ, ಪಾತಾಳ, ದಿಕ್ಕುಗಳು ಮತ್ತು ನರಕಗಳು, ಗ್ರಹ-ನಕ್ಷತ್ರಗಣಗಳು ಮುಂತಾದ ಲೋಕಗಳ ಸನ್ನಿವೇಶಗಳನ್ನು ನಿರೂಪಣೆಮಾಡಿಯಾಯಿತು. ಇದೇ ಸಮಸ್ತ ಜೀವಗಣಗಳಿಗೂ ಆಶ್ರಯವಾಗಿರುವ ಶ್ರೀಭಗವಂತನ ಅತ್ಯಂತ ಅದ್ಭುತವಾದ ಸ್ಥೂಲರೂಪವು.”

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಪಂಚಮಸ್ಕಂಧದ ೨೬ನೆಯ ಅಧ್ಯಾಯವು ಮುಗಿಯಿತು.

ಐದನೆಯ ಸ್ಕಂಧವು ಮುಗಿಯಿತು

ಶ್ರೀಮಹಾಗಣಪತಯೇ ನಮಃ   ಶ್ರೀಮಹಾಸರಸ್ವತ್ಯೈ ನಮಃ   ಶ್ರೀಸದ್ಗುರವೇ ನಮಃ

ಶ್ರೀಮದ್ಭಾಗವತ

ಷಷ್ಠಸ್ಕಂಧ ೧ನೆಯ ಅಧ್ಯಾಯ

ಜನ್ಮಾದ್ಯಸ್ಯ ಯತೋಽನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃ ದಾ ಯ ಆದಿಕವಯೇ ಮುಹ್ಯನ್ತಿ ಯತ್ಸೂರಯಃ |
ತೇಜೋವಾರಿಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋಽಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ||

ಅಜಾಮಿಳನ ಉಪಾಖ್ಯಾನದ ಪ್ರಾರಂಭ

ರಾಜೋವಾಚ :

ನಿವೃತ್ತಿಮಾರ್ಗಃ ಕಥಿತ ಆದೌ ಭಗವತಾ ಯಥಾ |
ಕ್ರಮಯೋಗೋಪಲಬ್ಧೇನ ಬ್ರಹ್ಮಣಾ ಯದಸಂಸೃತಿಃ ||೧||

ಅನಂತರ ಪರೀಕ್ಷಿದ್ರಾಜನು ಶುಕಮಹರ್ಷಿಗಳಲ್ಲಿ ಹೀಗೆ ವಿಜ್ಞಾಪಿಸಿದನು.

"ಎಲೈ ಭಗವಂತರಾದ ಶುಕಮುನೀಂದ್ರರೇ! ತಾವು ನನಗೆ ಈ ಮೊದಲೇ ನಿವೃತ್ತಿಮಾರ್ಗವನ್ನು* ವರ್ಣಿಸಿದ್ದೀರಿ. ಆ ದಾರಿಯಲ್ಲಿ ನಡೆಯುವವರು ಹೇಗೆ ಕ್ರಮವಾಗಿ ಯೋಗವನ್ನು ಅನುಷ್ಠಾನಮಾಡಿ ಪರಬ್ರಹ್ಮವನ್ನು ಸಂದರ್ಶಿಸಿ ಮುಕ್ತರಾಗುವರು, ಸಂಸಾರಕ್ಕೆ ಮರಳುವುದಿಲ್ಲ– ಎಂಬುದನ್ನೂ ತಿಳಿಸಿದ್ದೀರಿ.

---

* ನಿವೃತ್ತಿಮಾರ್ಗದ ವಿಷಯವನ್ನು ಎರಡನೆಯ ಸ್ಕಂಧದಲ್ಲಿಯೂ, ಪ್ರವೃತ್ತಿಮಾರ್ಗದ ವಿಷಯವನ್ನು ಮೂರನೆಯ ಸ್ಕಂಧದಲ್ಲಿಯೂ, ಅಧರ್ಮದ ಫಲವಾದ ನರಕಗತಿಯ ವಿಷಯವನ್ನು ಐದನೆಯ ಸ್ಕಂಧದಲ್ಲಿಯೂ, ಪ್ರಿಯವ್ರತ-ಉತ್ತಾನಪಾದರ ವಂಶಗಳನ್ನೂ ಭೂಗೋಳ-ಖಗೋಳ ಇತ್ಯಾದಿಗಳ ವರ್ಣನೆಯನ್ನು ನಾಲ್ಕನೆಯ ಮತ್ತು ಐದನೆಯ ಸ್ಕಂಧಗಳಲ್ಲಿಯೂ ಶುಕಮುನಿಗಳು ವರ್ಣಿಸಿಯಾಗಿದೆ.

ಭಗವಂತರಾದ ತಾವು ನಿವೃತ್ತಿಮಾರ್ಗವನ್ನು ದ್ವಿತೀಯಸ್ಕಂಧದಲ್ಲಿ ವರ್ಣಿಸಿದಿರಿ. ಆ ದಾರಿಯಲ್ಲಿ ನಡೆದವರು ಕ್ರಮವಾಗಿ ಅರ್ಚಿರಾದಿಗತಿಯನ್ನು ಹಿಡಿದು ಅದರಲ್ಲಿ

ಹಾಗೆಯೇ ಪ್ರವೃತ್ತಿಮಾರ್ಗವನ್ನೂ ವರ್ಣಿಸಿ ಹೇಳಿದ್ದೀರಿ. ಆ ದಾರಿಯಲ್ಲಿ ನಡೆಯುವವರು ತ್ರಿಗುಣಗಳಿಗೆ ವಿಷಯವಾದ ಸ್ವರ್ಗವೇ ಮುಂತಾದ ಲೋಕಗಳನ್ನು ಪಡೆಯುವರು. ಆ ಲೋಕಗಳನ್ನು ಸೇರಿದ ಜೀವರು ಪ್ರಕೃತಿಸಂಬಂಧವನ್ನು ನೀಗದೇ ಇರುವುದರಿಂದ ಮತ್ತೆ-ಮತ್ತೆ ಹುಟ್ಟು-ಸಾವುಗಳ ಸುಳಿಯಲ್ಲಿ ಸಿಲುಕಿಕೊಳ್ಳುವರು–ಎಂಬುದನ್ನೂ ನಿರೂಪಿಸಿದಿರಿ. ಹಾಗೆಯೇ ಯಾವ ದಾರಿಯಿಂದ ತ್ರಿಗುಣಮಯವಾದ ಸ್ವರ್ಗವೇ ಮುಂತಾದ ಲೋಕಗಳು ದೊರೆಯುತ್ತವೆಯೋ ಮತ್ತು ಪ್ರಕೃತಿ ಸಂಬಂಧವು ಕಳೆಯದೇ ಇರುವುದರಿಂದ ಜೀವಿಗಳು ಮತ್ತೆ-ಮತ್ತೆ ಹುಟ್ಟು-ಸಾವುಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತವೆಯೋ–ಅಂತಹ ಪ್ರವೃತ್ತಿ ಮಾರ್ಗವನ್ನೂ ವರ್ಣಿಸಿ ಹೇಳಿದಿರಿ.[1] ಇದಲ್ಲದೇ ಅಧರ್ಮವನ್ನು ಆಚರಿಸಿ ದರೆ ಬಗೆ-ಬಗೆಯ ನರಕಗಳನ್ನು ಹೊಂದಬೇಕಾಗುವುದೆಂಬುದನ್ನು ತಿಳಿಸಿ ಅವುಗಳ ವಿಸ್ತಾರವಾದ ವರ್ಣನೆಯನ್ನೂ ಮಾಡಿದಿರಿ.[2] ಸ್ವಾಯಂಭುವ ಮನುವಿನ ಆಧಿಪತ್ಯಕ್ಕೆ ಸೇರಿದ ಮೊದಲನೆಯ ಮನ್ವಂತರವನ್ನೂ ವಿಸ್ತಾರ ವಾಗಿ ತಿಳಿಸಿದಿರಿ.[3] ಜೊತೆಗೆ ಪ್ರಿಯವ್ರತನ ಮತ್ತು ಉತ್ತಾನಪಾದನ ವಂಶ ಗಳನ್ನೂ, ಚರಿತ್ರೆಗಳನ್ನೂ, ಅಂತೆಯೇ ದ್ವೀಪಗಳು, ವರ್ಷಗಳು, ಸಮುದ್ರ ಗಳು, ಪರ್ವತಗಳು, ನದಿಗಳು, ಉದ್ಯಾನಗಳು ಮತ್ತು ಬೇರೆ ಬೇರೆ ದ್ವೀಪ ಗಳು, ವೃಕ್ಷಗಳು–ಇವುಗಳನ್ನೂ ನಿರೂಪಣೆಮಾಡಿದಿರಿ.[4] ಭೂಮಂಡಲದ

ದೊರಕುವ ಬ್ರಹ್ಮದೇವರೊಡನೆ ಮೋಕ್ಷವನ್ನು ಪಡೆಯುವರು–ಎಂಬುದನ್ನೂ ತಿಳಿಸಿದಿರಿ. 'ಬ್ರಹ್ಮಣಾ ಸಹ ತೇ ಸರ್ವೇ ಸಮ್ಪ್ರಾಪ್ತೇ ಪ್ರತಿಸಞ್ಚರೇ । ಪರಸ್ಯಾನ್ತೇ ಕೃತಾತ್ಮಾನಃ ಪ್ರವಿಶನ್ತಿ ಪರಂ ಪದಮ್ ॥' (ಶ್ರೀಧರೀಯ)

ಈ ನಿವೃತ್ತಿಮಾರ್ಗವನ್ನು ಅನುಷ್ಠಾನಮಾಡಿ ಅರಿಯಲ್ಪಟ್ಟ ಪರಬ್ರಹ್ಮ ಸರ್ವ ಗುಣ ಪರಿಪೂರ್ಣ ಶ್ರೀಮನ್ನಾರಾಯಣನಿಂದ ಜೀವರಿಗೆ ಸಂಸಾರಕ್ಕೆ ಮರಳದೇ ಇರುವಿಕೆಯೆಂಬ ಫಲವು ದೊರೆಯುವುದು. ವೈರಾಗ್ಯ, ಭಕ್ತಿ, ನಿರಂತರಧ್ಯಾನ ಮತ್ತು ಜ್ಞಾನಗಳೆಂಬ ಉಪಾಯಗಳನ್ನು ಕ್ರಮವಾಗಿ ಅನುಷ್ಠಾನಮಾಡಿ ಸಂದರ್ಶಿಸಲ್ಪಟ್ಟ ಶ್ರೀಮನ್ನಾರಾಯಣನಿಂದ ಆ ಮೋಕ್ಷಪದವು ದೊರಕುವುದು ಅಥವಾ ಕ್ರಮಯೋಗ ವೆಂದರೆ–ಮೊದಲು ಆತನ ಸ್ಮರಣೆ, ಅನಂತರ ಆತನ ಪ್ರತಿಯೊಂದು ಅವಯವದ

---

೧ ಮೂರನೆಯ ಸ್ಕಂಧದಲ್ಲಿ ; ೨ ಐದನೆಯ ಸ್ಕಂಧದಲ್ಲಿ
೩ ನಾಲ್ಕನೆಯ ಸ್ಕಂಧದಲ್ಲಿ ೪ ನಾಲ್ಕು ಮತ್ತು ಐದನೆಯ ಸ್ಕಂಧಗಳಲ್ಲಿ

ಸ್ಥಿತಿ, ಅದರ ದ್ವೀಪ-ವರ್ಷಾದಿಗಳ ವಿಭಾಗ, ಅವುಗಳ ಲಕ್ಷಣ ಮತ್ತು ಪರಿಮಾಣಗಳು, ನಕ್ಷತ್ರಗಳ ಸ್ಥಿತಿ, ಅತಲ-ವಿತಲಗಳೇ ಮುಂತಾದ ಭೂ ವಿವರಗಳು–ಇವುಗಳನ್ನೂ ವರ್ಣಿಸಿ ಶ್ರೀಭಗವಂತನು ಇವೆಲ್ಲವನ್ನೂ ಹೇಗೆ ಸೃಷ್ಟಿಮಾಡಿದನು–ಎಂಬುದನ್ನೂ ತಿಳಿಸಿದಿರಿ. ಯಾವುದನ್ನು ಅನುಷ್ಠಾನ ಮಾಡಿದರೆ ಮನುಷ್ಯರು ಬಗೆ-ಬಗೆಯ ಭಯಂಕರವಾದ ಯಾತನೆಗಳಿಂದ ತುಂಬಿರುವ ನರಕಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತದೆಯೋ–ಆ ಉಪಾಯವನ್ನು ಈಗ ತಾವು ನನಗೆ ಕೃಪೆಯಿಟ್ಟು ಉಪದೇಶಿಸಬೇಕು."

(ಶ್ಲೋಕ 2-6)

ಪರಿಕ್ಷಿದ್ರಾಜನ ಈ ವಿಜ್ಞಾಪನೆಯನ್ನು ಕೇಳಿ ಶುಕಮಹರ್ಷಿಗಳು ಆತನಿಗೆ ಹೇಳತೊಡಗಿದರು :

ನ ಚೇದಿಹೈವಾಪಚಿತಿಂ ಯತಾಂಹಸಃ
ಕೃತಸ್ಯ ಕುರ್ಯಾನ್ಮನಉಕ್ತಪಾಣಿಭಿಃ ।
ಧ್ರುವಂ ಸ ವೈ ಪ್ರೇತ್ಯ ನರಕಾನುಪೈತಿ
ಯೇ ಕೀರ್ತಿತಾ ಮೇ ಭವತಸ್ತಿಗ್ಮಯಾತನಾಃ ॥೭॥

ತಸ್ಮಾತ್ಪುರೈವಾಶ್ವಿಹ ಪಾಪನಿಷ್ಕೃತೌ
ಯತೇತ ಮೃತ್ಯೋರವಿಪದ್ಯತಾಽತ್ಮನಾ ।
ದೋಷಸ್ಯ ದೃಷ್ಟ್ವಾ ಗುರುಲಾಘವಂ ಯಥಾ
ಭಿಷಕ್ಚಿಕಿತ್ಸೇತ ರುಜಾಂ ನಿದಾನವಿತ್ ॥೮॥

"ಮಹಾರಾಜ! ಮನುಷ್ಯನು ಮನಸ್ಸು, ಮಾತು ಮತ್ತು ಶರೀರ ಗಳಿಂದ ತಾನು ಮಾಡಿದ ಪಾಪಗಳಿಗೆ ಈ ಜನ್ಮದಲ್ಲಿಯೇ ಪ್ರಾಯಶ್ಚಿತ್ತವನ್ನು

ಧ್ಯಾನ ಮತ್ತು ಅದರ ಅನಂತರ ಆತನ ಸಮಗ್ರಾಂಗಗಳ ಧ್ಯಾನ ಎಂಬ ಕ್ರಮದ ಯೋಗ. ಬ್ರಹ್ಮ ಎಂದರೆ : ಬೃಹತ್ತಾದ ಗುಣಗಳುಳ್ಳ ಸರ್ವಗುಣಪರಿಪೂರ್ಣನಾದ ಶ್ರೀಮನ್ನಾರಾಯಣನು. * ಅಥ ಕಸ್ಮಾದುಚ್ಯತೇ ಬ್ರಹ್ಮೇತಿ ಬೃಹನ್ತೋ ಹ್ಯಸ್ಮಿನ್ ಗುಣಾಃ । ಕ್ರಮೇಣ ಅನುಷ್ಠಿತೇನ ಯೋಗೇನ ವೈರಾಗ್ಯಭಕ್ತಿನಿರಂತರಧ್ಯಾನಜ್ಞಾನ ಲಕ್ಷಣೇನೋಪಾಯೇನ ಉಪಲಬ್ಧೇನ ದೃಷ್ಟೇನ, ಪ್ರಥಮಂ ಸ್ಮರಣಂ, ಪಶ್ಚಾದೇಕೈ ಕಾವಯವಧ್ಯಾನಂ, ತದನನ್ತರಂ ಸಮಗ್ರಾಙ್ಗಧ್ಯಾನಮಿತಿ ವಾ ಕ್ರಮಯೋಗಃ'

(ವಿಜಯಧ್ವಜೀಯ)

ಮಾಡಿಕೊಂಡುಬಿಡಬೇಕು. ಇಲ್ಲದಿದ್ದರೆ ಆತನು ಸತ್ತನಂತರ ಅವಶ್ಯವಾಗಿ ಆ ಯಾತನೆಗಳಿಂದ ತುಂಬಿದ ನರಕಗಳನ್ನು ಅನುಭವಿಸಬೇಕಾಗುವುದು. ಆ ನರಕಗಳ ವಿಷಯವನ್ನು ನಾನು ನಿನಗೆ ಈ ಹಿಂದೆಯೇ ವರ್ಣಿಸಿಯಾಗಿದೆ. ಆದುದರಿಂದ ಮನುಷ್ಯನು ತನ್ನನ್ನು ರೋಗವೂ–ಮೃತ್ಯುವೂ ಆಕ್ರಮಿಸುವುದಕ್ಕೆ ಮೊದಲೇ ಬಹಳ ಎಚ್ಚರಿಕೆಯಿಂದ ಮತ್ತು ಸಾವಧಾನತೆಯಿಂದ ತನ್ನ ಪಾಪಗಳಲ್ಲಿ ಯಾವುದು ದೊಡ್ಡದು, ಯಾವುದು ಚಿಕ್ಕದು–ಎಂಬುದನ್ನು ವಿಚಾರಮಾಡಿ ಅವುಗಳಿಗೆ ಪ್ರಾಯಶ್ಚಿತ್ತವನ್ನು ಮಾಡಿಕೊಂಡುಬಿಡಬೇಕು. ರೋಗದ ಕಾರಣವನ್ನು ಬಲ್ಲ ಕುಶಲನಾದ ವೈದ್ಯನು ರೋಗಗಳಲ್ಲಿ ಯಾವುದು ಪ್ರಬಲ, ಯಾವುದು ಪ್ರಬಲವಲ್ಲ ಎಂದು ಅವುಗಳ ಗುರು- ಲಾಘವಗಳನ್ನು ಮೊದಲೇ ವಿಚಾರಮಾಡಿ ಒಡನೆಯೇ ಅವುಗಳಿಗೆ ಚಿಕಿತ್ಸೆಮಾಡಿಕೊಳ್ಳುವುದಿಲ್ಲವೇ? ಹಾಗೆಯೇ ತಿಳಿವಳಿಕೆಯುಳ್ಳ ಮನುಷ್ಯನು ತನ್ನ ಆ ಪಾಪಗಳ ಬಗೆಗೆ ವಿಚಾರಮಾಡಿ ಅವುಗಳಿಗೆ ಶೀಘ್ರವಾಗಿ ಪ್ರಾಯಶ್ಚಿತ್ತ ಗಳನ್ನು ಮಾಡಿಕೊಂಡುಬಿಡಬೇಕು."

ಮಹರ್ಷಿಗಳ ಉತ್ತರವನ್ನು ಕೇಳಿದ ಮಹಾರಾಜನು ಅವರಿಗೆ ಹೀಗೆ ಮರುಪ್ರಶ್ನೆಯನ್ನು ಹಾಕಿದನು : "ಮಹಾತ್ಮರೇ! ಮನುಷ್ಯನು ಈ ಲೋಕ ದಲ್ಲಿ ಪಾಪಗಳನ್ನು ಆಚರಿಸಿದರೆ ರಾಜನು ವಿಧಿಸುವ ದಂಡನೆ, ಸಮಾಜವು ವಿಧಿಸುವ ದಂಡನೆ ಮತ್ತು ಶಾಸ್ತ್ರಗಳು ಹೇಳಿರುವ ನರಕ ದಂಡನೆಗಳೇ ಮುಂತಾದ ಪರಲೋಕಕ್ಕೆ ಸಂಬಂಧಪಟ್ಟ ಕಷ್ಟಗಳು ಒದಗುವುದರಿಂದ, ಪಾಪವು ತನಗೆ ಶತ್ರುವು ಎಂದು ತಿಳಿದಿದ್ದರೂ ಕೂಡ ಪಾಪವಾಸನೆ ಗಳಿಗೆ ಅಧೀನನಾಗಿ ಮತ್ತೆ-ಮತ್ತೆ ಆ ಪಾಪಕರ್ಮಗಳಲ್ಲಿಯೇ ತೊಡಗು ತ್ತಾನೆ. ಹೀಗಿರುವಾಗ ಆತನ ಪಾಪಗಳಿಗೆ ಪ್ರಾಯಶ್ಚಿತ್ತವಾದರೂ ಹೇಗೆ? ಆತನು ಕೆಲವೊಮ್ಮೆ ಪ್ರಾಯಶ್ಚಿತ್ತವೇ ಮುಂತಾದುವುಗಳನ್ನು ಆಚರಿಸಿ ಪಾಪಗಳಿಂದ ಬಿಡುಗಡೆ ಹೊಂದಿದರೂ ಮತ್ತೆ ಆ ಪಾಪಗಳಲ್ಲೇ ತೊಡಗುವನು. ಹೀಗಿರುವುದರಿಂದ ಮನುಷ್ಯನು ಮಾಡಿಕೊಳ್ಳುವ ಪ್ರಾಯಶ್ಚಿತ್ತಗಳು ಆನೆಯ ಸ್ನಾನದಂತೆಯೇ ವ್ಯರ್ಥವಾಗಿಬಿಡುವುದಲ್ಲವೇ? ಆನೆಯು ತಾನು ಸ್ನಾನಮಾಡಿದನಂತರ ಮೈಮೇಲೆ ಧೂಳನ್ನು ಎರಚಿ ಕೊಳ್ಳುವುದರಿಂದ ಅದು ಮಾಡುವ ಸ್ನಾನವೆಲ್ಲ ವ್ಯರ್ಥವೇ ಆಗುವುದು.

ಮನುಷ್ಯನು ಮಾಡಿಕೊಳ್ಳಬಹುದಾದ ಪ್ರಾಯಶ್ಚಿತ್ತಗಳಿಗೂ ಇದೇ ಗತಿ ಯಾಗುವುದಿಲ್ಲವೇ?" (ಶ್ಲೋಕ 9-10)

ಮಹರ್ಷಿಗಳು ಮಹಾರಾಜನ ಪ್ರಶ್ನೆಗಳಿಗೆ ಉತ್ತರ ನೀಡುತ್ತಾ ಹೀಗೆಂದರು :

ಕರ್ಮಣಾ ಕರ್ಮನಿರ್ಹಾರೋ ನ ಹ್ಯಾತ್ಯನ್ತಿಕ ಇಷ್ಯತೇ ।
ಅವಿದ್ವದಧಿಕಾರಿತ್ವಾತ್ಪ್ರಾಯಶ್ಚಿತ್ತಂ ವಿಮರ್ಶನಮ್ ॥೧೧॥

"ಎಲೈ ರಾಜೇಂದ್ರನೇ! ಪ್ರಾಯಶ್ಚಿತ್ತರೂಪವಾದ ಕರ್ಮದಿಂದ ಕರ್ಮವು ನಿಶ್ಶೇಷವಾಗಿ ನಾಶವಾಗುವುದಿಲ್ಲ. ಏಕೆಂದರೆ : ಅಜ್ಞಾನಿಗಳಾದ ಪಾಮರರೇ ಆ ಕರ್ಮಕಾಂಡಕ್ಕೆ ಅಧಿಕಾರಿಗಳು. ಅಜ್ಞಾನವು ಇರುವವರೆಗೂ ಪಾಪವಾಸನೆಗಳು ಖಂಡಿತವಾಗಿಯೂ ತೊಲಗುವುದಿಲ್ಲ. ಆ ಪ್ರಾಯಶ್ಚಿತ್ತ ಕರ್ಮಗಳು* ಪಾಪಪರಿಹಾರಕ್ಕೆ ಸಾಧನಗಳಾಗಿದ್ದರೂ ಸಮೂಲವಾಗಿ ಪಾಪಗಳನ್ನು ನಾಶಗೊಳಿಸಲಾರವು. ಪಾಪಗಳನ್ನು ಬುಡಸಹಿತ ಧ್ವಂಸಮಾಡು ವುದಕ್ಕೆ ಬ್ರಹ್ಮಜ್ಞಾನವೇ ಮುಖ್ಯವಾದ ಪ್ರಾಯಶ್ಚಿತ್ತವು.

ನಾಶ್ನತಃ ಪಥ್ಯಮೇವಾನ್ನಂ ವ್ಯಾಧಯೋಽಭಿಭವನ್ತಿ ಹಿ ।
ಏವಂ ನಿಯಮಕೃದ್ರಾಜನ್ ಶನೈಃ ಕ್ಷೇಮಾಯ ಕಲ್ಪತೇ ॥೧೨॥

ಆದರೂ ಸರಿಯಾದ ಪ್ರಾಯಶ್ಚಿತ್ತವನ್ನು ಮಾಡಿಕೊಂಡರೆ ನಿಧಾನ ವಾಗಿ ಕ್ಷೇಮವುಂಟಾಗುವುದು. ಒಳ್ಳೆಯ ಪಥ್ಯವಾದ ಆಹಾರವನ್ನೇ

---

* ಪ್ರಾಯಶ್ಚಿತ್ತರೂಪವಾದ ಕರ್ಮದಿಂದ ಕರ್ಮಗಳು ಸಮೂಲವಾಗಿ ನಾಶವಾಗುವು ದೆಂದು ಪ್ರಾಮಾಣಿಕರು ಅಭಿಪ್ರಾಯಪಡುವುದೇ ಇಲ್ಲ. ಏಕೆಂದರೆ : ಕರ್ಮಗಳನ್ನು ನಿಶ್ಶೇಷವಾಗಿ ನಾಶಪಡಿಸಿಕೊಳ್ಳಲು ಅವಿದ್ವಾಂಸರೇ ಎಂದರೆ : ಬ್ರಹ್ಮಾಪರೋಕ್ಷಜ್ಞಾನಿಗಳೇ ಅಧಿಕಾರಿಗಳು. ಹಾಗಾದರೆ ಪ್ರಾಯಶ್ಚಿತ್ತಾನುಷ್ಠಾನವು ವ್ಯರ್ಥವೇ? ಎಂದರೆ–ಹಾಗಲ್ಲ. ಅದರಿಂದ (ಪ್ರಾಯಶ್ಚಿತ್ತದಿಂದ) ವಿಮರ್ಶನವು ಪರಬ್ರಹ್ಮದ ಅಪರೋಕ್ಷಜ್ಞಾನವು ಉಂಟಾಗುವುದು. 'ಅವಿದ್ವದಿತ್ಯತ್ರ ವಿದ್ಯಮಾನಃ ಆಕಾರಃ ಬ್ರಹ್ಮವಾಚಕಃ'

(ಸತ್ಯಾಭಿನವತೀರ್ಥರ ವ್ಯಾಖ್ಯಾನ)

ಪ್ರಾಯಶ್ಚಿತ್ತರೂಪವಾದ ಕರ್ಮದಿಂದ ಕರ್ಮಗಳು ಬುಡಸಹಿತ ನಾಶವಾಗು ವುದಿಲ್ಲ. ಏಕೆಂದರೆ : ಎರಡಕ್ಕೂ ಅಜ್ಞಾನಮೂಲದಿಂದಲೇ ಅಧಿಕಾರವುಂಟಾಗುವುದು. ಆದರೆ ಎರಡನೆಯದು ವ್ಯರ್ಥವಲ್ಲ. ಜ್ಞಾನಿಗಳು ಅಜ್ಞಾನಿಗಳನ್ನು ಅಧಿಕರಿಸಿ ಕರ್ಮವಿಮರ್ಶೆಮಾಡಿ ವಿಧಾನಮಾಡಿರುವ ಕರ್ಮವು ವ್ಯರ್ಥವಾಗುವುದಿಲ್ಲ.

(ವಿಜಯಧ್ವಜೀಯ)

ಸೇವಿಸುತ್ತಿರುವವನು ರೋಗಗಳಿಗೆ ತುತ್ತಾಗುವುದಿಲ್ಲ. ಒಂದು ವೇಳೆ ರೋಗ ಗ್ರಸ್ತನಾದರೂ ಕಾಲಕ್ರಮದಲ್ಲಿ ಆತನು ಗುಣಹೊಂದುವನು. ಹಾಗೇಯೇ ನಿಯಮಗಳನ್ನು ಪಾಲನೆಮಾಡುವವನು ಸ್ವಲ್ಪ-ಸ್ವಲ್ಪವಾಗಿ ಪಾಪದ ವಾಸನೆ ಗಳನ್ನು ಕಳೆದುಕೊಂಡು ಕ್ಷೇಮವನ್ನು ಹೊಂದುವನು. ತತ್ತ್ವಜ್ಞಾನವನ್ನು ಪಡೆಯಲು ಸಮರ್ಥನಾಗುವನು.

ಬಿದಿರುಮೆಳೆಗಳಿಗೆ ತಗುಲಿದ ಅಗ್ನಿಯು ಇಡೀ ಬಿದಿರುಪೊದೆಯನ್ನೇ ಸುಟ್ಟುಹಾಕುವುದಿಲ್ಲವೇ? ಹಾಗೆಯೇ ಧರ್ಮಜ್ಞನೂ, ಶ್ರದ್ಧಾಳುವೂ ಆದ ಮನುಷ್ಯನು ತಪಸ್ಸು, ಬ್ರಹ್ಮಚರ್ಯ, ಇಂದ್ರಿಯಗಳ ದಮನ, ಮನಸ್ಸಿನ ಸ್ಥೈರ್ಯ, ದಾನ, ಸತ್ಯ ಮತ್ತು ಒಳ-ಹೊರಗಿನ ಪವಿತ್ರತೆ ಮತ್ತು ಯಮ-ನಿಯಮಗಳು–ಎಂಬ ಎಂಟು ಸಾಧನಗಳಿಂದ ಮನಸ್ಸು, ಮಾತು ಮತ್ತು ಶರೀರಗಳಿಂದ ಮಾಡಲ್ಪಟ್ಟ ಅತಿ ದೊಡ್ಡ ಪಾಪಗಳನ್ನೂ ಸುಟ್ಟುಹಾಕು ವನು. ಇಷ್ಟೆಲ್ಲಾ ನಿಯಮಗಳನ್ನು ಆಚರಿಸುತ್ತಾ ಸಾಧಿಸಬೇಕಾಗಿರುವ ಪ್ರಾಯಶ್ಚಿತ್ತವು ತುಂಬಾ ಕಷ್ಟಕರವಾಗಿರುವುದರಿಂದ ಕೆಲವು ಮಹನೀಯರು ವಾಸುದೇವನನ್ನು ಶರಣುಹೊಂದಿ ಕೇವಲ ಭಕ್ತಿಯೋಗದಿಂದಲೇ ಪಾಪ ಗಳನ್ನು ಪರಿಹಾರಮಾಡಿಕೊಳ್ಳುತ್ತಾರೆ. ಸೂರ್ಯನು ಇಬ್ಬನಿಯನ್ನು ಕಳೆಯು ವಂತೆ–ತಮ್ಮ ಇಡೀ ಪಾಪದ ರಾಶಿಯನ್ನು ನಿರ್ಮೂಲಗೊಳಿಸಿಕೊಳ್ಳುತ್ತಾರೆ. (ಶ್ಲೋಕ 13-15)

ಎಲೈ ಮಹಾರಾಜನೇ! ಪಾಪಿಯಾದ ಮನುಷ್ಯನಿಗೆ ತನ್ನನ್ನು ಶ್ರೀಕೃಷ್ಣನಿಗೆ ಸಮರ್ಪಣೆಮಾಡಿಕೊಂಡು ಆತನನ್ನೂ ಮತ್ತು ಆತನ ಭಕ್ತ ರನ್ನೂ ಸೇವಿಸುವುದರಿಂದ ಎಷ್ಟು ಶುದ್ಧಿಯುಂಟಾಗುವುದೋ–ಅಷ್ಟು ಶುದ್ಧಿಯು ಆತನಿಗೆ ತಪಸ್ಸು ಮುಂತಾದುವುಗಳಿಂದ ಉಂಟಾಗುವುದಿಲ್ಲ. ಜಗತ್ತಿನಲ್ಲಿ ಈ ಭಕ್ತಿಯ ಪಂಥವೇ ಸರ್ವಶ್ರೇಷ್ಠವಾದುದು ; ಭಯರಹಿತ ವಾದುದು ಮತ್ತು ಮಂಗಳಸ್ವರೂಪವಾದುದು. ಏಕೆಂದರೆ : ಭಗವದ್ಭಕ್ತಿ ಪರಾಯಣರಾದ ಶೀಲವಂತರಾದ ಸಾಧು-ಸಂತರು ಈ ಮಾರ್ಗದಲ್ಲಿ ನಡೆಯುತ್ತಾರೆ. ಎಲೈ ರಾಜಶ್ರೇಷ್ಠನೇ! ಹೇಗೆ ಮದ್ಯದಿಂದ ತುಂಬಿರುವ ಮಡಕೆಯನ್ನು ನದಿಗಳು ಪವಿತ್ರಗೊಳಿಸಲಾರವೋ–ಹಾಗೆಯೇ ಶ್ರೀಭಗವಂತ ನಿಗೆ ವಿಮುಖರಾಗಿರುವ ಮನುಷ್ಯರು ದೊಡ್ಡ-ದೊಡ್ಡ ಪ್ರಾಯಶ್ಚಿತ್ತಗಳನ್ನೇ

ಮತ್ತೆ-ಮತ್ತೆ ಮಾಡಿಕೊಳ್ಳುತ್ತಿದ್ದರೂ ಅವು ಅವರನ್ನು ಪವಿತ್ರಗೊಳಿಸ ಲಾರವು. ಶ್ರೀಭಗವಂತನ ಗುಣಗಳ ಸೇವನೆಯಲ್ಲಿ ಅನುರಾಗವುಳ್ಳ ತಮ್ಮ ಮನಸ್ಸೆಂಬ ದುಂಬಿಗೆ ಯಾವನಾದರೂ ಭಗವಂತನಾದ ಶ್ರೀಕೃಷ್ಣನ ಅಡಿದಾವರೆಗಳ ಮಕರಂದರಸವನ್ನು ಒಂದು ಬಾರಿ ಪಾನಮಾಡಿಸಿದರೂ– ಆತನು ಎಲ್ಲ ಪ್ರಾಯಶ್ಚಿತ್ತಗಳನ್ನೂ ಮಾಡಿಕಂಡಂತೆಯೇ ಸರಿ. ಅಂತಹವರು ಯಮರಾಜನನ್ನೂ ಮತ್ತು ಆತನ ಪಾಶಧಾರಿಗಳಾದ ದೂತರನ್ನೂ ಕನಸಿನಲ್ಲಿಯೂ ಕಾಣುವುದಿಲ್ಲ. ಹೀಗಿರುವಾಗ ಅವರು ನಕಕ್ಕೆ ಹೋಗು ವುದಿಲ್ಲವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. (ಶ್ಲೋಕ 16-19)

ಪರೀಕ್ಷಿತನೇ! ಈ ವಿಷಯದ ಬಗೆಗೆ ಮಹಾತ್ಮರು ಒಂದು ಪುರಾತನ ವಾದ ಇತಿಹಾಸವನ್ನು ಹೇಳುತ್ತಾರೆ. ಭಗವಂತನಾದ ಮಹಾವಿಷ್ಣುವಿನ ಮತ್ತು ಯಮರಾಜನ ದೂತರ ಸಂಭಾಷಣೆಯು ಅದರಲ್ಲಿದೆ. ಅದನ್ನು ನಿನಗೆ ಹೇಳುತ್ತೇನೆ ; ಕೇಳು. ಕಾನ್ಯಕುಬ್ಜದೇಶದಲ್ಲಿ ಅಜಾಮಿಳನೆಂಬ ಒಬ್ಬ ಬ್ರಾಹ್ಮಣ ನಿದ್ದನು. ಆತನು ಒಬ್ಬ ದಾಸಸ್ತ್ರೀಯನ್ನು ಹೆಂಡತಿಯನ್ನಾಗಿ ಮಾಡಿಕೊಂಡು ಆಕೆಯ ಸಹವಾಸದಿಂದ ದೂಷಿತನಾಗಿ ಸದಾಚಾರವನ್ನು ಸಂಪೂರ್ಣವಾಗಿ ತೊರೆದು ಭ್ರಷ್ಟನಾಗಿದ್ದನು. ಆ ಪತಿತನು ಕೆಲವೊಮ್ಮೆ ಲೂಟಿಮಾಡುವುದು, ಕೆಲವೊಮ್ಮೆ ಕಳ್ಳತನ ಮಾಡುವುದು–ಇವೇ ಮುಂತಾದ ನೀಚವಾದ ವೃತ್ತಿಗಳಿಂದ ತನ್ನ ಕುಟುಂಬವನ್ನು ಸಾಕುತ್ತಿದ್ದನು. ಪ್ರಾಣಿಗಳಿಗೆ ತುಂಬಾ ಪೀಡೆಯನ್ನುಂಟುಮಾಡುತ್ತಿದ್ದನು. ಮಹಾರಾಜ! ಹೀಗೆ ಆ ದಾಸಿಯ ಸಹವಾಸದಲ್ಲಿರುತ್ತಾ ಆಕೆಯ ಮಕ್ಕಳನ್ನು ಲಾಲಿಸಿ-ಪೋಷಿಸುತ್ತಾ ಆತನಿಗೆ ಆಯುಸ್ಸಿನ ಬಹುಭಾಗವು ಅಂದರೆ ಎಂಭತ್ತು ವರ್ಷಗಳು ಕಳೆದು ಹೋದುವು. ಆ ಮುದುಕನಿಗೆ ಹತ್ತು ಮಂದಿ ಪುತ್ರರಿದ್ದರು. ಅವರಲ್ಲಿ ಎಲ್ಲರಿಗಿಂತಲೂ ಕಿರಿಯನಾದ 'ನಾರಾಯಣ' ಎಂಬುವನು ತಂದೆ-ತಾಯಿ ಗಳಿಗೆ ತುಂಬಾ ಮುದ್ದಿನ ಮಗನಾಗಿದ್ದನು. ಮುದುಕ ಅಜಾಮಿಳನು ಕಡುಮೋಹದಿಂದ ತನ್ನ ಪೂರ್ಣವಾದ ಮನಸ್ಸನ್ನೂ ಆ ಪುತ್ರನಲ್ಲಿಟ್ಟು ಆತನ ತೊದಲುನುಡಿಗಳನ್ನು ಕೇಳುತ್ತಾ ಆತನ ಆಟ-ಪಾಟಗಳನ್ನು ನೋಡುತ್ತಾ ಆನಂದಪಡುತ್ತಿದ್ದನು. ಆ ಹುಡುಗನ ಸ್ನೇಹದ ಕಟ್ಟಿಗೆ ಸಿಲುಕಿ ತಾನು ತಿನ್ನುವಾಗ–ಕುಡಿಯುವಾಗ ಆತನಿಗೂ ತಿನ್ನಿಸುತ್ತಾ–ಕುಡಿಸುತ್ತಾ

ಕಾಲ ಕಳೆಯುತ್ತಿದ್ದ ಆ ಮೂಢನಿಗೆ ಮೃತ್ಯುವು ತಲೆಯ ಮೇಲೆ ಬಂದು ಕುಳಿತುಕೊಂಡಿದ್ದು ತಿಳಿಯದೇ ಹೋಯಿತು. (ಶ್ಲೋಕ 20-26)

ಹೀಗೆ ಮೋಹಪರವಶನಾಗಿದ್ದ ಆ ಮೂರ್ಖನಿಗೆ ಕೊನೆಗಾಲವು ಬಂದೇ ಬಿಟ್ಟಿತು. ಆಗಲೂ ಆತನ ಮನಸ್ಸು ತನ್ನ ಪ್ರಿಯಪುತ್ರನನ್ನೇ ಕುರಿತು ಚಿಂತಿಸುತ್ತಿತ್ತು. ಅಷ್ಟರಲ್ಲೇ ತನ್ನನ್ನು ಸೆಳೆದೊಯ್ಯಲು ಭಯಂಕರವಾದ ರೂಪ-ಗುಣಗಳುಳ್ಳ ಮೂವರು ಯಮದೂತರು ಅಲ್ಲಿಗೆ ಬಂದದ್ದು ಆತನಿಗೆ ಕಾಣಿಸಿತು. ಸೊಟ್ಟಮೋರೆಗಳಿಂದಲೂ ಮೇಲೆದ್ದು ಕೂದಲುಗಳಿಂದಲೂ ಕೂಡಿದ್ದ, ಕೈಯಲ್ಲಿ ಪಾಶಗಳನ್ನು ಹಿಡಿದಿದ್ದ ಆ ಭೀಕರ ವ್ಯಕ್ತಿಗಳು ಆತನನ್ನು ದುರು-ದುರನೆ ನೋಡುತ್ತಿದ್ದರು. ಅವರನ್ನು ಕಂಡೊಡನೆಯೇ ಭಯಭೀತನಾದ ಅಜಾಮಿಳನು ದೂರದಲ್ಲಿ ಆಟವಾಡುತ್ತಿದ್ದ ತನ್ನ ಕಂದನನ್ನು ಕರೆಯುವುದಕ್ಕಾಗಿ ಗಟ್ಟಿಯಾಗಿ ಉದ್ದವಾದ ಸ್ವರದಿಂದ 'ನಾರಾಯಣ!' ಎಂದು ಕೂಗಿಕೊಂಡನು. ಹೀಗೆ ಆತನು ಸಾಯುವ ಸಮಯದಲ್ಲಿ ಯಾವುದೋ ನೆಪದಿಂದ 'ನಾರಾಯಣ' ಎಂದು ತಮ್ಮ ಪ್ರಭುವಿನ ನಾಮಕೀರ್ತನೆ ಮಾಡಿದ್ದನ್ನು ಕೇಳಿ ಭಗವಂತನಾದ ಶ್ರೀಮನ್ನಾರಾಯಣನ ಪಾರ್ಷದರು ತಟ್ಟನೆ ಅಲ್ಲಿಗೆ ಬಂದು ತಲುಪಿದರು. ಆಗ ಯಮಕಿಂಕರರು ಆ ದಾಸೀಪತಿಯಾದ ಅಜಾಮಿಳನ ಶರೀರದಿಂದ ಆತನ ಜೀವವನ್ನು ಸೆಳೆಯುತ್ತಿದ್ದರು. ವಿಷ್ಣುದೂತರು ಅವರನ್ನು ತಮ್ಮ ಪರಾಕ್ರಮದಿಂದ ಬಲಾತ್ಕಾರವಾಗಿ ತಡೆದುಬಿಟ್ಟರು. ಹಾಗೆ ತಡೆಗಟ್ಟಲ್ಪಟ್ಟ ಯಮದೂತರು ಅವರನ್ನು ಹೀಗೆ ಪ್ರಶ್ನಿಸಿದರು : "ಎಲೈ! ಯಮಧರ್ಮ ರಾಜನ ಶಾಸವವನ್ನು ತಡೆಯುತ್ತಿರುವ ನೀವು ಯಾರು? ಯಾರ ದೂತರು? ಎಲ್ಲಿಂದ ಬಂದಿದ್ದೀರಿ? ನೀವು ಯಾರಾದರೂ ದೇವತೆಗಳೋ, ಉಪದೇವತೆಗಳೋ ಅಥವಾ ಸಿದ್ಧಶ್ರೇಷ್ಠರೋ ಆಗಿದ್ದೀರಾ? ನಿಮ್ಮೆಲ್ಲರ ಕಣ್ಣುಗಳೂ ತಾವರೆಯ ದಳಗಳಂತೆ ಸುಂದರಸುಕುಮಾರವಾಗಿವೆ. ಹಳದೀಬಣ್ಣದ ರೇಷ್ಮೆಯ ವಸ್ತ್ರಗಳನ್ನು ಧರಿಸಿರುವಿರಿ. ನಿಮ್ಮ ತಲೆಯಲ್ಲಿ ಕಿರೀಟವೂ, ಕಿವಿಗಳಲ್ಲಿ ಕುಂಡಲಗಳೂ ಮತ್ತು ಕತ್ತುಗಳಲ್ಲಿ ಕಮಲದ ಮಾಲೆಗಳೂ ಬೆಳಗುತ್ತಿವೆ. ಎಲ್ಲರೂ ತರುಣಾವಸ್ಥೆಯಲ್ಲಿ ಕಂಗೊಳಿಸುತ್ತಿರುವಿರಿ. ಸುಂದರವಾದ ನಾಲ್ಕು ನಿಡುದೋಳುಗಳಿಂದ ಮೆರೆಯುತ್ತಿರುವಿರಿ. ನಿಮ್ಮೆಲ್ಲರ ಕೈಗಳಲ್ಲೂ

ಬಿಲ್ಲು, ಬತ್ತಳಿಕೆ, ಕತ್ತಿ, ಗದೆ, ಶಂಖ, ಚಕ್ರ ಮತ್ತು ಕಮಲಗಳೇ ಮುಂತಾದುವು ರಾರಾಜಿಸುತ್ತಿವೆ. ನಿಮ್ಮ ಅವಯವಗಳ ಕಾಂತಿಯಿಂದ ಎಲ್ಲ ದಿಕ್ಕುಗಳ ಕತ್ತಲೆಯೂ ಗುಡಿಸಿಹಾಕಲ್ಪಟ್ಟಿದೆ ಮತ್ತು ಪ್ರಕೃತಿಯ ಪ್ರಕಾಶವೂ ಮಂಕಾಗಿಬಿಟ್ಟಿದೆ. ನಾವು ಯಮಧರ್ಮರಾಜನ ಕಿಂಕರರು. ನಮ್ಮನ್ನು ನೀವು ಏಕೆ ತಡೆಯುತ್ತಿದ್ದೀರಿ? ಹೇಳಿ ಮಹಾಶಯರೇ!" (ಶ್ಲೋಕ 27-36)

ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

ರಾಜೇಂದ್ರ! ಯಮದೂತರು ಹೀಗೆ ಕೇಳಲು ವಾಸುದೇವನಿಗೆ ವಿಧೇಯ ದೂತರಾಗಿದ್ದ ಆ ಮಹಾತ್ಮರು ಅವರನ್ನು ಹೀಗೆ ಪ್ರಶ್ನೆ ಮಾಡಿದರು : "ನೀವು ನಿಜವಾಗಿಯೂ ಧರ್ಮರಾಜನ ಆಜ್ಞೆಯನ್ನು ಪಾಲಿಸುವ ದೂತರೇ ಆಗಿದ್ದರೆ ಧರ್ಮದ ಲಕ್ಷಣವೇನು? ತತ್ತ್ವವೇನು?–ಎಂಬುದನ್ನು ತಿಳಿಸಿರಿ. ದಂಡನೆಯನ್ನು ಹೇಗೆ ಕೊಡಬೇಕು? ಅದಕ್ಕೆ ಯಾವನು ಪಾತ್ರನು? ಮನುಷ್ಯರಲ್ಲಿ ಪಾಪವನ್ನು ಆಚರಿಸಿದ ಎಲ್ಲರೂ ದಂಡನೆಗೆ ಅರ್ಹರೋ ಅಥವಾ ಕೆಲವರು ಮಾತ್ರವೋ?–ಎಂಬುದನ್ನು ತಿಳಿಸಿರಿ ; ನೋಡೋಣ!"

(ಶ್ಲೋಕ 37-39)

ಅದಕ್ಕೆ ಯಮದೂತರು ಹೀಗೆ ಉತ್ತರಿಸಿದರು : "ಧರ್ಮವೆಂದರೆ ವೇದವು ಯಾವುದನ್ನು ಮಾಡಬೇಕೆಂದು ವಿಧಿಸಿದೆಯೋ ಆ ಕರ್ಮಗಳು. ಅಧರ್ಮವೆಂದರೆ ಯಾವುದನ್ನು ವೇದವು ನಿಷೇಧಮಾಡಿದೆಯೋ ಆ ಕರ್ಮಗಳು. 'ವೇದಪ್ರಣಿಹಿತೋ ಧರ್ಮೋ ಹ್ಯಧರ್ಮಸ್ತದ್ವಿಪರ್ಯಯಃ' ಆ ವೇದವೆಂಬುದು ಸಾಕ್ಷಾತ್ ನಾರಾಯಣಸ್ವರೂಪವೇ ಆಗಿದೆ. ಅದು ಅಕೃತಕ; ಸ್ವಯಂಪ್ರಕಾಶವಾದುದು ಎಂದು ನಾವು ಕೇಳಿದ್ದೇವೆ. ಜಗತ್ತಿನಲ್ಲಿ ರಜೋಮಯವೂ, ಸತ್ತ್ವಮಯವೂ, ತಮೋಮಯವೂ ಆಗಿರುವ ಯಾವ-ಯಾವ ಪದಾರ್ಥಗಳುಂಟೋ–ಅವೆಲ್ಲವೂ, ಎಲ್ಲ ಪ್ರಾಣಿಗಳೂ–ತಮಗೆ ಪರಮಾಶ್ರಯವಾಗಿರುವ ವೇದರೂಪಿಯಾದ ಭಗವಂತನಲ್ಲಿಯೇ ನೆಲೆಸಿವೆ. ಜಗತ್ತಿನಲ್ಲಿರುವ ಆ ಎಲ್ಲ ಪದಾರ್ಥಗಳನ್ನೂ ಅವುಗಳ ಗುಣಗಳು, ನಾಮಧೇಯಗಳು, ಕರ್ಮಗಳು ಮತ್ತು ರೂಪಗಳು–ಮುಂತಾದುವುಗಳಿಗೆ

ಅನುಗುಣವಾಗಿ ಯಥೋಚಿತವಾಗಿ ವಿಭಾಗಮಾಡಿರುವುದೂ ವೇದವೇ. ಜೀವನು ತನ್ನ ಶರೀರ ಮತ್ತು ಮನೋವೃತ್ತಿಗಳಿಂದ ಮಾಡುವ ಎಲ್ಲ ಕರ್ಮಗಳಿಗೂ ಸೂರ್ಯ, ಅಗ್ನಿ, ಆಕಾಶ, ವಾಯು, ಇಂದ್ರಿಯಗಳು, ಚಂದ್ರ, ಸಂಧ್ಯೆಗಳು, ರಾತ್ರಿ-ಹಗಲುಗಳು, ದಿಕ್ಕುಗಳು, ನೀರು, ನೆಲ, ಕಾಲ ಮತ್ತು ಧರ್ಮಗಳು ಸಾಕ್ಷಿಗಳಾಗಿವೆ. ಅವುಗಳ ಮೂಲಕ ಅಧರ್ಮವು ಯಾವುದು ಎಂಬುದನ್ನು ಪತ್ತೆಮಾಡಿ ದಂಡನೆಗೆ ಪಾತ್ರರಾರೆಂಬುದನ್ನು ನಿರ್ಣಯಿಸಲಾಗುವುದು. ಪಾಪಮಾಡುವ ಎಲ್ಲ ಮನುಷ್ಯರೂ ತಮ್ಮ-ತಮ್ಮ ಕರ್ಮಗಳಿಗೆ ಅನುಗುಣವಾಗಿ ದಂಡನೆಗೆ ಯೋಗ್ಯರಾಗುವರು. ಎಲೈ ಶುದ್ಧಾತ್ಮರೇ! ಕರ್ಮಮಾಡುವ ಎಲ್ಲ ಪ್ರಾಣಿಗಳೂ ಗುಣಗಳಿಗೆ ಸಂಬಂಧ ಪಟ್ಟಿರುತ್ತವೆ. ಆದುದರಿಂದ ಎಲ್ಲ ಪ್ರಾಣಿಗಳ ಕರ್ಮಗಳಲ್ಲಿಯೂ ಕೆಲವು ಪಾಪರೂಪಗಳು ಮತ್ತು ಕೆಲವು ಪುಣ್ಯರೂಪಗಳಾಗಿರುತ್ತವೆ. ದೇಹವನ್ನು ಹೊತ್ತ ಯಾವ ಪುರುಷನೂ ಕರ್ಮಗಳನ್ನು ಮಾಡದೇ ಇರಲಾರನು. ಈ ಲೋಕದಲ್ಲಿ ಮನುಷ್ಯನು ಎಂತಹ ಮತ್ತು ಎಷ್ಟು ಧರ್ಮಕಾರ್ಯಗಳನ್ನು ಅಥವಾ ಅಧರ್ಮಕಾರ್ಯಗಳನ್ನು ಮಾಡುವನೋ–ಅಂತಹ ಮತ್ತು ಅಷ್ಟು ಫಲಗಳನ್ನೇ ಆತನು ಪರಲೋಕದಲ್ಲಿ ಅನುಭವಿಸುವನು. ಎಲೈ ದೇವ ಶಿಖಾಮಣಿಗಳೇ! ಸತ್ತ್ವ-ರಜಸ್ಸು ಮತ್ತು ತಮಸ್ಸುಗಳೆಂಬ ಮೂರು ಗುಣಗಳ ಬೇದವಿರುವುದರಿಂದ ಅದಕ್ಕೆ ತಕ್ಕಂತೆ ಈ ಲೋಕದಲ್ಲೂ ಪುಣ್ಯಾತ್ಮರು, ಪಾಪಾತ್ಮರು ಮತ್ತು ಪುಣ್ಯ-ಪಾಪಗಳೆರಡರಿಂದಲೂ ಕೂಡಿದವರು ಅಥವಾ ಸುಖಿಗಳು-ದುಃಖಿಗಳು, ಸುಖ-ದುಃಖಗಳೆರಡರಿಂದಲೂ ಕೂಡಿದವರು–ಎಂಬುದಾಗಿ ಮುಬ್ಬಗೆಯಾಗಿ ಪ್ರಾಣಿಗಳು ಕಂಡುಬರುತ್ತಿವೆ. ಅದರಂತೆಯೇ ಪರಲೋಕದಲ್ಲೂ ಅವರಲ್ಲಿ ಮೂರು ಬಗೆಗಳಿವೆಯೆಂದು ಊಹಿಸಬಹುದಾಗಿದೆ. ವರ್ತಮಾನಕಾಲದಿಂದ ಭೂತವನ್ನೂ ಮತ್ತು ಭವಿಷ್ಯತ್ತನ್ನೂ ಊಹೆಮಾಡಬಹುದು. ಹಾಗೆಯೇ ಈಗಿನ ಜನ್ಮದ ಪುಣ್ಯ-ಪಾಪಗಳಿಂದ ಕಳೆದ ಜನ್ಮದ ಮತ್ತು ಮುಂದಿನ ಜನ್ಮದ ಪುಣ್ಯ-ಪಾಪಗಳನ್ನೂ ಊಹಿಸಬಹುದು.

(ಶ್ಲೋಕ 40-47)

ಮನಸೈವ ಪುರೇ ದೇವಃ ಪೂರ್ವರೂಪಂ ವಿಪಶ್ಯತಿ ।
ಅನುಮೀಮಾಂಸತೇಽಪೂರ್ವಂ ಮನಸಾ ಭಗವಾನಜಃ ॥೪೮॥

ಜನ್ಮರಹಿತನೂ, ಸರ್ವಜ್ಞನೂ ಆಗಿರುವ ನಮ್ಮ ಪ್ರಭುವಾದ ಶ್ರೀಭಗವಂತನಾದ ಯಮಧರ್ಮರಾಜನಾದರೋ ತನ್ನ ರಾಜಧಾನಿಯಾದ ಸಂಯಮಿನೀಪುರದಲ್ಲಿ ಅಥವಾ ಜೀವಿಗಳ ಶರೀರವೆಂಬ ಪುರದಲ್ಲಿ ಇರುತ್ತಾ ಎಲ್ಲ ಜೀವಿಗಳ ಹಿಂದಿನ ರೂಪಗಳನ್ನೂ ತನ್ನ ಮನಸ್ಸಿನಿಂದಲೇ ಸ್ಪಷ್ಟವಾಗಿ ನೋಡುತ್ತಾನೆ. ಅಂತೆಯೇ ಅವುಗಳ ಮುಂದಿನ ರೂಪಗಳನ್ನು ಕುರಿತೂ ಮನಸ್ಸಿನಿಂದ ವಿಚಾರಮಾಡುತ್ತಾನೆ.* (ಶ್ಲೋಕ 48)

ನಿದ್ರೆಮಾಡುತ್ತಿರುವ ಅಜ್ಞಾನಿಯಾದ ಮನುಷ್ಯನು ಕನಸಿನಲ್ಲಿ ಕಾಣುವ ಶರೀರವನ್ನೇ ತನ್ನ ವಾಸ್ತವಿಕಶರೀರವೆಂದು ತಿಳಿದು ನಿದ್ರೆಯಲ್ಲಿರುವ ಅಥವಾ ಎಚ್ಚರದಲ್ಲಿರುವ ಶರೀರವನ್ನು ಮರೆತು ಬಿಡುವುದಿಲ್ಲವೇ? ಹಾಗೆಯೇ ಜೀವನೂ ಕೂಡ ತನ್ನ ಹಿಂದಿನ ಜನ್ಮಗಳ ವಿಷಯಗಳನ್ನು

---

* ತಮ್ಮ ಪ್ರಭುವಾದ ಯಮಧರ್ಮರಾಜನ ಅಸಾಧಾರಣವಾದ ಮಹಿಮೆಯನ್ನು ಇಲ್ಲಿ ಯಮದೂತರು ಹೊಗಳುತ್ತಿದ್ದಾರೆ. ಆತನು ಜನ್ಮರಹಿತನಾದ ಸರ್ವಜ್ಞನಾದ ಭಗವಂತನು. ಸಾಮಾನ್ಯಜೀವಿಗಳಿಗೆ ತಮ್ಮ ವರ್ತಮಾನವು ಮಾತ್ರ ಸ್ಪಷ್ಟವಾಗಿ ತಿಳಿಯುತ್ತದೆ. ತಮ್ಮ ಭೂತ-ಭವಿಷ್ಯತ್ತುಗಳನ್ನು ಅವರು ಊಹಿಸಿ ತಿಳಿಯಬೇಕು. ಧರ್ಮರಾಜನಾದರೋ ತನ್ನ ಸಂಯಮಿನೀಪುರದಲ್ಲಿದ್ದರೂ ತನ್ನ ಮನೋಬಲದಿಂದಲೇ ಜೀವಗಳ ಭೂತ-ಭವಿಷ್ಯತ್ತುಗಳನ್ನು ತಿಳಿಯುತ್ತಾನೆ. ಕರ್ಮಾನುಗುಣವಾಗಿ ಅವುಗಳು ಮುಂದೆ ಯಾವ ರೂಪವನ್ನು ತಾಳುತ್ತವೆಯೆಂಬುದನ್ನೂ ವಿಚಾರಮಾಡುತ್ತಾನೆ. ಅಥವಾ ಧರ್ಮರಾಜನು ಧರ್ಮರೂಪಿಯಾಗಿ ಎಲ್ಲ ಜೀವಿಗಳ ಶರೀರವೆಂಬ ಪುರದಲ್ಲಿ ವಾಸಮಾಡುತ್ತಾ ಇರುವುದರಿಂದ ತನ್ನ ಮನಸ್ಸಿನಿಂದಲೇ ಜೀವಿಗಳ ಭೂತ- ಭವಿಷ್ಯತ್ತುಗಳನ್ನೂ ಅರಿಯುತ್ತಾನೆ. ಅವನ ಕಣ್ಣಿನಿಂದ ಯಾವುದೂ ತಪ್ಪಿಸಿಕೊಳ್ಳಲಾರದು. 'ಯಮೋ ವೈಶ್ರವಮೋ ರಾಜಾ ಯಸ್ತವೈಷ ಹೃದಿ ಸ್ಥಿತಃ । ತೇನ ಚೇದವಿವಾದಸ್ತೇ ಮಾ ಗಙ್ಗಾಂ ಮಾ ಕುರೂನ್ಗಮಃ ॥' ಎಂಬ ಶ್ಲೋಕವೂ ಯಮನು ಜೀವಿಗಳ ಹೃದಯಸಾಕ್ಷಿಯೆಂದು ಸಾರುತ್ತದೆ. ಧರ್ಮವು ಎಲ್ಲಕ್ಕೂ ಸಾಕ್ಷಿಯಾಗಿರುವುದರಿಂದ ಇದು ಹೊಂದಿಕೆಯಾಗುತ್ತದೆ. ಸೂರ್ಯಪುತ್ರನೂ ಧರ್ಮದೇವತೆಯೂ ಆಗಿರುವ ಯಮನು ತನ್ನಲ್ಲಿ ಅಂತರ್ಯಾಮಿಯಾಗಿರುವ ಪರಮಾತ್ಮನ ಶಕ್ತಿಯಿಂದ ಎಲ್ಲಕ್ಕೂ ಸಾಕ್ಷಿಯಾಗಿದ್ದಾನೆ ಅಥವಾ ಯಮಧರ್ಮರಾಜನಲ್ಲಿ ಅಂತರ್ಯಾಮಿಯಾಗಿರುವ ಪರಮಾತ್ಮನು ಎಲ್ಲರ ಹೃದಯಸಾಕ್ಷಿಯಾಗಿದ್ದಾನೆ. ಎಂದೂ ಅರ್ಥಮಾಡುವುದುಂಟು.

ಸಂಯಮಿನೀಪುರದಲ್ಲಿ ಇದ್ದುಕೊಂಡೇ ಯಮಧರ್ಮರಾಜನು ಅಥವಾ ದೇಹ

ಮರೆತುಬಿಡುತ್ತಾನೆ. ತಾನು ಅನುಭವಿಸುತ್ತಿರುವ ವರ್ತಮಾನದ ಶರೀರ ವನ್ನು ಬಿಟ್ಟು ಉಳಿದ ಶರೀರಗಳ ಅಂದರೆ ಹಿಂದಿನ ಮತ್ತು ಮುಂದಿನ ಶರೀರಗಳ ಬಗೆಗೆ ಏನನ್ನೂ ತಿಳಿಯುವುದಿಲ್ಲ. ಎಲೈ ಸಿದ್ಧಪುರುಷರೇ! ಅವನು ಈ ಶರೀರದಲ್ಲಿ ಐದು ಕರ್ಮೇಂದ್ರಿಯಗಳಿಂದ–ಕೊಡುವುದು, ತೆಗೆದು ಕೊಳ್ಳುವುದು, ನಡೆದಾಡುವುದು–ಇವೇ ಮುಂತಾದ ಕೆಲಸಗಳನ್ನು ಮಾಡು ತ್ತಾನೆ. ಐದು ಜ್ಞಾನೇಂದ್ರಿಯಗಳಿಂದ ರೂಪ-ರಸಗಳೇ ಮುಂತಾದ ಐದು ವಿಷಯಗಳನ್ನು ಅನುಭವಿಸುತ್ತಾನೆ ಮತ್ತು ಹದಿನಾರನೆಯದಾದ ಮನಸ್ಸಿ ನೊಡನೆ ಹದಿನೇಳನೆಯವನಾದ ತಾನೂ ಸೇರಿಕೊಂಡು ಒಬ್ಬಂಟಿಗನಾಗಿಯೇ ಮನಸ್ಸು, ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳು–ಈ ಮೂರರ ವಿಷಯಗಳನ್ನೂ ಭೋಗಿಸುತ್ತಾನೆ. ಹದಿನಾರು ಕಲೆಗಳಿಂದಲೂ ಸತ್ತ್ವವೇ ಮೊದಲಾದ ತ್ರಿಗುಣಗಳಿಂದಲೂ ಕೂಡಿರುವ ಜೀವನ ಈ ಲಿಂಗಶರೀರವು ಅನಾದಿಯಾದುದು. ಇದೇ ಜೀವನನ್ನು ಮತ್ತೆ ಮತ್ತೆ ಹರ್ಷ, ಶೋಕ, ಭಯ

ದಲ್ಲಿಯೇ ಇರುವ ಜೀವಾಂತರ್ಯಾಮಿಯು ಧರ್ಮಾಧರ್ಮಗಳಿಂದ ಕೂಡಿರುವ ಜೀವದ ಹಿಂದಿನ ರೂಪವನ್ನು ಮನಸ್ಸಿನಿಂದಲೇ ಚೆನ್ನಾಗಿ ನೋಡುತ್ತಾನೆ. ಅನಂತರ ಅದಕ್ಕೆ ಅನುರೂಪವಾಗಿ ಆ ಜೀವಕ್ಕೆ ಏನಾಗಬೇಕೆಂಬುದನ್ನು ವಿಚಾರಮಾಡುತ್ತಾನೆ. ಏಕೆಂದರೆ : ಆತನು ಭಗವಂತನು ; ಜನ್ಮರಹಿತನು. (ಶ್ರೀಧರೀಯ)

ಜೀವಶರೀರದಲ್ಲಿರುವ ದೇವನಾದ ಶ್ರೀನಾರಾಯಣನು ಜೀವದ ಪೂರ್ವರೂಪವನ್ನೂ ಮತ್ತು ಅನಂತರದ ರೂಪವನ್ನೂ ಅವುಗಳಿಗೆ ಸೇರಿದ ಧರ್ಮಾಧರ್ಮಗಳನ್ನೂ ತನ್ನ ಮನಸ್ಸಿನಿಂದಲೇ ಪ್ರತ್ಯಕ್ಷವಾಗಿ ನೋಡುತ್ತಾನೆ. ಆತನ ಈ ದರ್ಶನಕ್ಕೆ ಯಾವ ಅಡ್ಡಿ-ಆತಂಕಗಳೂ ಇಲ್ಲ. ಹಾಗಾದರೆ ಇತರರಿಗೆ ಅವುಗಳ ದರ್ಶನವಾಗುವುದಿಲ್ಲವೇ? ಎಂದರೆ : ಪರಮೇಷ್ಠಿಯಾದ ಅಜ (ಬ್ರಹ್ಮ) ದೇವರು ಆ ಭಗವಂತನ ಅನುಗ್ರಹದಿಂದ ಎಲ್ಲವನ್ನೂ ಆಲೋಚಿಸಿ ತಿಳಿಯುತ್ತಾರೆ. ಅಜರಾದ ಇತರ ದೇವತೆಗಳೂ ಕೂಡ ಯಥಾಯೋಗ್ಯವಾಗಿ ಅವುಗಳನ್ನು ತಿಳಿಯುತ್ತಾರೆ. ಅಥವಾ ಸುಜನರತಿರ್ಯಗಾದಿ ರೂಪವಾದ ಶರೀರವೆಂಬ ಪುರದಲ್ಲಿ ಆಡುತ್ತಿರುವ ಭಗವಂತ (ಭಾಗ್ಯಗುಣಸಂಪನ್ನ)ನಾದ ಜೀವನೂ ಕೂಡ ಪೂರ್ವಾನುಭವಸಂಸ್ಕಾರದಿಂದ ಸಂಸ್ಕೃತವಾದ ಮನಸ್ಸಿನಿಂದಲೇ ಧರ್ಮಾಧರ್ಮಸಮವಾಯರೂಪವಾದ ಪೂರ್ವರೂಪವನ್ನು ಮನಸ್ಸಿನಿಂದಲೇ ತಿಳಿಯು ತ್ತಾನೆ. 'ಅಜೋ ಹ್ಯೇಕೋ ಜುಷ ಮಾಣೋಽನುಶೇತೇ' ಎಂಬ ಶ್ರುತಿವಚನವು ಇದನ್ನು ಪ್ರಮಾಣಿಸುತ್ತದೆ. (ವಿಜಯಧ್ವಜೀಯ)

ಮತ್ತು ಪೀಡೆಗಳನ್ನುಂಟುಮಾಡುವ ಹುಟ್ಟು-ಸಾವುಗಳ ಸುಳಿಯಲ್ಲಿ ಬೀಳಿಸುವುದು. ಅಜ್ಞಾನಕ್ಕೆ ವಶನಾಗಿ ಕಾಮ-ಕ್ರೋಧ-ಲೋಭ-ಮೋಹ-ಮದ-ಮಾತ್ಸರ್ಯಗಳೆಂಬ ಆರು ಶತ್ರುಗಳನ್ನು ಗೆಲ್ಲದೇ ಇರುವಂತಹ ಜೀವನು ತನಗೆ ಇಷ್ಟವಿಲ್ಲದಿದ್ದರೂ ಬಗೆ-ಬಗೆಯ ವಾಸನೆಗಳಿಗೆ ಅನುಸಾರ ವಾಗಿ ಬಗೆ-ಬಗೆಯ ಕರ್ಮಗಳನ್ನು ಮಾಡಬೇಕಾಗುವುದು. ಇಂತಹ ಸ್ಥಿತಿಯಲ್ಲಿ ಆತನು ರೇಷ್ಮೆಹುಳುವಿನಂತೆ ಅನೇಕಕರ್ಮಗಳ ಬಲೆಗೆ ಸಿಕ್ಕಿಹಾಕಿಕೊಂಡು ತನ್ನ ಕೈಯಿಂದಲೇ ಮೋಹಕ್ಕೆ ಬಲಿಯಾಗುತ್ತಾನೆ. ಶರೀರವನ್ನು ಹೊತ್ತ ಯಾವುದೇ ಜೀವಿಯೂ ಯಾವುದಾದರೂ ಕರ್ಮವನ್ನು ಆಚರಿಸದೇ ಒಂದು ಕ್ಷಣವೂ ಇರಲಾರನು. ಪ್ರತಿಯೊಂದು ಪ್ರಾಣಿಯ ಸ್ವಾಭಾವಿಕ ವಾಗಿರುವ ಗುಣಗಳು ಬಲಾತ್ಕಾರದಿಂದ ಆತನನ್ನು ವಶಪಡಿಸಿಕೊಂಡು ಆತನಿಂದ ಕರ್ಮಗಳನ್ನು ಮಾಡಿಸುತ್ತವೆ.* ಜೀವನು ತನ್ನ ಹಿಂದಿನ ಜನ್ಮಗಳ ಪಾಪ-ಪುಣ್ಯಮಯವಾದ ಸಂಸ್ಕಾರಗಳಿಗೆ ಅನುಗುಣವಾಗಿ ಸ್ಥೂಲ ಮತ್ತು ಸೂಕ್ಷ್ಮಶರೀರಗಳನ್ನು ಪಡೆಯುವನು. ಆತನಿಗೆ ಸ್ವಭಾವದಿಂದ ಬಂದಿರುವ ಮತ್ತು ಪ್ರಬಲವಾಗಿರುವ ವಾಸನೆಗಳು ಆತನನ್ನು ಕೆಲವೊಮ್ಮೆ ತಾಯಿಯಂತೆ ಅಂದರೆ ಸ್ತ್ರೀರೂಪವನ್ನು ತಳೆಯುವಂತೆ ಮಾಡುವುವು ಮತ್ತು ಕೆಲವೊಮ್ಮೆ ತಂದೆಯಂತೆ ಅಂದರೆ ಪುರುಷರೂಪವನ್ನು ತಳೆಯುವಂತೆ ಮಾಡುವುವು. (ಶ್ಲೋಕ 49-54)

ಏಷ ಪ್ರಕೃತಿಸಙ್ಗೇನ ಪುರುಷಸ್ಯ ವಿಪರ್ಯಯಃ ।
ಆಸೀತ್ಸ ಏವ ನಚಿರಾದೀಶಸಙ್ಗಾದ್ವಿಲೀಯತೇ ॥೫೫॥

ಜೀವನು ತನ್ನ ವಾಸ್ತವಿಕಸ್ವರೂಪವನ್ನು ಮರೆತು ಅದಕ್ಕೆ ವಿರುದ್ಧವಾಗಿ ತಾನು ಲಿಂಗಶರೀರವೇ ಎಂದು ತಿಳಿಯುವುದಕ್ಕೆ ಕಾರಣ–ಆತನ ಪ್ರಕೃತಿಸಂಬಂಧವೇ ಆಗಿದೆ. ಭಗವಂತನ ಸಹವಾಸದಿಂದ ಭಗವಂತನ ಭಜನೆಮಾಡುವುದರಿಂದ ಈ ವಿರುದ್ಧವಾದ ಬುದ್ಧಿಯು ಶೀಘ್ರವಾಗಿಯೇ ಹೊರಟುಹೋಗುವುದು.

---

* ಹೋಲಿಕೆ : ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।
ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ ॥

(ಶ್ರೀಗೀತಾ)

ಎಲೈ ಮಹಾತ್ಮರೇ! ನಿಮಗೆ ತಿಳಿದೇ ಇರುವಂತೆ ಈ ಅಜಾಮಿಳನು ದೊಡ್ಡ ಶಾಸ್ತ್ರಜ್ಞನಾಗಿದ್ದನು. ಶೀಲ, ಸದಾಚಾರ ಮತ್ತು ಸದ್ಗುಣಗಳ ನಿಧಿಯೂ ಆಗಿದ್ದನು. ಧರ್ಮವ್ರತನಿಷ್ಠನಾಗಿ, ವಿನಯಶಾಲಿಯಾಗಿ, ಜಿತೇಂದ್ರಿಯನಾಗಿ, ಸತ್ಯನಿಷ್ಠನಾಗಿ, ಮಂತ್ರಜ್ಞನಾಗಿ, ಪವಿತ್ರಾತ್ಮನೂ ಆಗಿದ್ದನು. ಗುರುಜನರ, ಅಗ್ನಿಯ, ಅತಿಥಿಗಳ ಮತ್ತು ಹಿರಿಯರ ಸೇವೆಯನ್ನು ಮಾಡುತ್ತಿದ್ದನು. ಅಹಂಕಾರದ ಲವಲೇಶವೂ ಈತನಲ್ಲಿರಲಿಲ್ಲ. ಎಲ್ಲ ಪ್ರಾಣಿಗಳಿಗೂ ಹಿತವನ್ನೇ ಬಯಸುತ್ತಾ ಉಪಕಾರಮಾಡುತ್ತಿದ್ದನು. ಅವಶ್ಯಕತೆಗೆ ಎಷ್ಟೋ ಅಷ್ಟು ಮಾತ್ರ ಮಿತವಾಗಿ ಮಾತನಾಡುತ್ತಿದ್ದನು. ಯಾರ ಗುಣಗಳಲ್ಲಿಯೂ ದೋಷವನ್ನು ಕಾಣುತ್ತಿರಲಿಲ್ಲ. ಒಂದು ದಿನ ಈ ಸದ್ಬ್ರಾಹ್ಮಣನು ತಂದೆಯ ಅಪ್ಪಣೆಯಂತೆ ಅರಣ್ಯಕ್ಕೆ ಹೋಗಿ ಅಲ್ಲಿಂದ ಹಣ್ಣು, ಹೂವು, ಸಮಿತ್ತು ಮತ್ತು ದರ್ಭೆಗಳನ್ನು ಸಂಗ್ರಹಿಸಿಕೊಂಡು ಮನೆಗೆ ಹಿಂತಿರುಗುತ್ತಿದ್ದನು. ದಾರಿಯಲ್ಲಿ ಅತಿಕಾಮಿಯೂ ನಾಚಿಕೆಗೆಟ್ಟವನೂ ಆದ ಒಬ್ಬ ಭ್ರಷ್ಟವೃಷಲನು ಹೆಂಡವನ್ನು ಕುಡಿದು ಯಾವಳೋ ವೇಶ್ಯೆಯೊಡನೆ ವಿಹರಿಸುತ್ತಿರುವುದು ಈತನ ದೃಷ್ಟಿಗೆ ಬಿದ್ದಿತು. ಆ ವೇಶ್ಯೆಯೂ ಸುರಾಪಾನ ಮಾಡಿ ಮತ್ತೇರಿದ್ದಳು. ಅದರಿಂದ ಮೈಮರೆತ ಆಕೆಯು ಕಣ್ಣುಗಳನ್ನು ತಿರುಗಿಸುತ್ತಾ ಉಟ್ಟಿದ್ದ ಸೀರೆಯ ಗಂಟು ಬಿಚ್ಚಿಹೋಗಿರುವ ಸ್ಥಿತಿಯಲ್ಲಿ (ಅರೆಬೆತ್ತಲೆಯಾಗಿ) ಕಂಡಾಬಟ್ಟೆಯಾಗಿ ಕುಣಿದಾಡುತ್ತಿದ್ದಳು. ಆ ವೃಷಲನು ಆಕೆಯೊಡನೆ ಹಾಡುತ್ತಾ ನಗುತ್ತಾ, ಬಗೆ-ಬಗೆಯ ಚೇಷ್ಟೆಗಳಿಂದ ಆಕೆಯನ್ನು ಪ್ರಸನ್ನಗೊಳಿಸುತ್ತಿದ್ದನು.

(ಶ್ಲೋಕ 56-60)

ಎಲೈ ಶುದ್ಧಾತ್ಮರೇ! ಕಾಮವನ್ನು ಕೆರಳಿಸುವ ಅಂಗರಾಗಗಳಿಂದ ಬಳಿಯಲ್ಪಟ್ಟ ತೋಳುಗಳಿಂದ ಆಕೆಯನ್ನು ಆಲಿಂಗಿಸುತ್ತಿದ್ದನು. ಆ ಸ್ಥಿತಿಯಲ್ಲಿದ್ದ ವೇಶ್ಯೆಯನ್ನು ಕಂಡು ಈ ಬ್ರಾಹ್ಮಣನ ಮನಸ್ಸು ಇದ್ದಕ್ಕಿದ್ದಂತೆ ಮೋಹಗೊಂಡು ಕಾಮಪರವಶವಾಗಿಬಿಟ್ಟಿತು. ಅಜಾಮಿಳನು ತನ್ನ ಧೈರ್ಯ ಮತ್ತು ತಿಳಿವಳಿಕೆಗಳಿಗೆ ಅನುಗುಣವಾಗಿ, ತನ್ನ ಆ ಕಾಮಪರವಶವಾಗಿದ್ದ ಮನಸ್ಸನ್ನು ತಡೆಗಟ್ಟಲು ಬಹಳಮಟ್ಟಿಗೆ ಪ್ರಯತ್ನಮಾಡಿದನು. ಆದರೆ ಸರ್ವಶಕ್ತಿಗಳಿಂದ ಪ್ರಯತ್ನಮಾಡಿದರೂ ಇವನಿಗೆ ಮನಸ್ಸನ್ನು

ಹತೋಟಿಗೆ ತಂದುಕೊಳ್ಳಲು ಸಾಧ್ಯವಾಗಲಿಲ್ಲ. ಆಕೆಯನ್ನು ಕುರಿತ ಕಾಮಪಿಶಾಚಿಯು ಅಜಾಮಿಳನ ಮನಸ್ಸನ್ನು ಆಕ್ರಮಿಸಿಕೊಂಡಿತು. ಈತನ ಸದಾಚಾರ ಮತ್ತು ಶಾಸ್ತ್ರಜ್ಞಾನವೆಲ್ಲವೂ ಕರಗಿಹೋಯಿತು. ತನ್ನ ಮನಸ್ಸಿನಲ್ಲಿ ಆ ಬಜಾರಿಯನ್ನೇ ಸದಾಚಿಂತಿಸುತ್ತಾ ಈತನು ಧರ್ಮಭ್ರಷ್ಟನಾಗಿ ಬಿಟ್ಟನು. ಈತನು ಆಕೆಯನ್ನು ಪ್ರಸನ್ನಗೊಳಿಸುವುದಕ್ಕಾಗಿ ಅತಿಸುಂದರವಾದ ವಸ್ತ್ರ, ಒಡವೆ ಮುಂತಾದುವುಗಳನ್ನು ತಂದುಕೊಡತೊಡಗಿದನು. ತನ್ನ ತಂದೆಯ ಇಡೀ ಸಂಪತ್ತನ್ನೂ ವೆಚ್ಚಮಾಡುತ್ತಾ ಆ ಕುಲಟೆಯನ್ನು ಸಂತೋಷಪಡಿಸ ತೊಡಗಿದನು. ಆಕೆಯನ್ನು ಪ್ರಸನ್ನಗೊಳಿಸುವಂತಹ ಗ್ರಾಮ್ಯವಾದ ಕಾಮಚೇಷ್ಟೆಗಳನ್ನೇ ಮಾಡತೊಡಗಿದನು. ಆ ಕುಲಟೆಯ ಕಡೆಗಣ್ಣಿನ ನೋಟ ಗಳು ಈತನನ್ನು ಎಷ್ಟರಮಟ್ಟಿಗೆ ಸೂರೆಗೊಂಡವೆಂದರೆ ಈ ಪಾಪಿಯು-ಕುಲೀನೆಯೂ ನವಯುವತಿಯೂ ಆಗಿದ್ದ ತನ್ನ ಬ್ರಾಹ್ಮಣೀ ಪತ್ನಿಯನ್ನೂ ಆಕೆಗಾಗಿ ತೊರೆದುಬಿಟ್ಟನು. ಇನ್ನು ಈತನ ಪಾಪಕ್ಕೆ ಎಲ್ಲೆಯೇನು ಬಂತು? ನ್ಯಾಯದಿಂದಲೋ, ಅನ್ಯಾಯದಿಂದಲೋ ಯಾವುದೋ ರೀತಿಯಲ್ಲಿ ಹಣವನ್ನು ಸಂಪಾದಿಸಿ ಕುಟುಂಬವನ್ನು ಸಾಕುವುದರಲ್ಲಿ ಆಸಕ್ತನಾದನು. ಈ ಪಾಪಿಷ್ಠನು ಶಾಸ್ತ್ರಗಳ ಆಜ್ಞೆಯನ್ನು ಮೀರಿ ಸದಾಚಾರಕ್ಕೆ ತಿಲಾಂಜಲಿಯನ್ನು ಕೊಟ್ಟು ಯಥೇಚ್ಛವಾಗಿ ನಡೆಯತೊಡಗಿದನು. ಸತ್ಪುರುಷರ ಧಿಕ್ಕಾರಕ್ಕೆ ಪಾತ್ರನಾದನು. ಅತ್ಯಂತ ಅಶುಚಿಯಾಗಿ ಮಲಕ್ಕೆ ಸಮಾನವಾದ ದೇಹಾದಿ ಗಳಿಂದ ತನ್ನ ಪಾಪತುಂಬಿದ ಆಯುಸ್ಸನ್ನು ಬಹಳ ಕಾಲ ಕಳೆದನು. ತನ್ನ ಪಾತಕಗಳಿಗೆ ಇಲ್ಲಿಯವರೆಗೂ ಯಾವ ಪ್ರಾಯಶ್ಚಿತ್ತವನ್ನೂ ಮಾಡಿಕೊಳ್ಳದೇ ಇರುವ ಈ ಕಡುಪಾಪಿಯನ್ನು ನಾವು ದಂಡಪಾಣಿಯಾದ ಭಗವಂತನಾದ ಯಮಧರ್ಮರಾಜನ ಬಳಿಗೆ ಕೊಂಡೊಯ್ಯುವೆವು. ಅಲ್ಲಿ ಈತನು ತನ್ನ ಪಾಪಗಳಿಗೆ ದಂಡನೆಯನ್ನು ಅನುಭವಿಸಿ ಶುದ್ಧನಾಗುವನು.”

(ಶ್ಲೋಕ 61-68)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಷಷ್ಠಸ್ಕಂಧದ ೧ನೆಯ ಅಧ್ಯಾಯವು ಮುಗಿಯಿತು.

ವಿಷ್ಣುದೂತರು ಯಮದೂತರಿಗೆ ಭಾಗವತಧರ್ಮವನ್ನು ನಿರೂಪಿಸಿದುದು ಮತ್ತು ಅಜಾಮಿಳನು ಪರಂಧಾಮವನ್ನು ಹೊಂದಿದುದು

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಏವಂ ತೇ ಭಗವದ್ದೂತಾ ಯಮದೂತಾಭಿಭಾಷಿತಮ್ ।
ಉಪಧಾರ್ಯಾಥ ತಾನ್ರಾಜನ್ಪ್ರತ್ಯಾಹುರ್ನಯಕೋವಿದಾಃ ॥೧॥

ಎಲೈ ರಾಜೇಂದ್ರನೇ! ಕೇಳು. ಭಗವಂತನ ನೀತಿಯಲ್ಲಿ ನಿಪುಣರಾಗಿ ಧರ್ಮದ ಮರ್ಮವನ್ನರಿತಿದ್ದ ಭಗವಂತನ ದೂತರು ಯಮದೂತರ ಆ ಮಾತನ್ನು ಕೇಳಿ ಪ್ರತಿಯಾಗಿ ಅವರಿಗೆ ಹೀಗೆ ಹೇಳಿದರು :

ಅಹೋ ಕಷ್ಟಂ ಧರ್ಮದೃಶಾಮಧರ್ಮಃ ಸ್ಪೃಶತೇ ಸಭಾಮ್ ।
ಯತ್ರಾದಣ್ಡ್ಯೇಷ್ವಪಾಪೇಷು ದಣ್ಡೋ ಯೈರ್ಧ್ರಿಯತೇ ವೃಥಾ ॥೨॥

ಪ್ರಜಾನಾಂ ಪಿತರೋ ಯೇ ಚ ಶಾಸ್ತಾರಃ ಸಾಧವಃ ಸಮಾಃ ।
ಯದಿ ಸ್ಯಾತ್ತೇಷು ವೈಷಮ್ಯಂ ಕಂ ಯಾನ್ತಿ ಶರಣಂ ಪ್ರಜಾಃ ॥೩॥

ಯದ್ಯದಾಚರತಿ ಶ್ರೇಯಾನಿತರಸ್ತತ್ತದೀಹತೇ ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ* ॥೪॥

ಯಸ್ಯಾಙ್ಕೇ ಶಿರ ಆಧಾಯ ಲೋಕಃ ಸ್ವಪಿತಿ ನಿರ್ವೃತಃ ।
ಸ್ವಯಂ ಧರ್ಮಮಧರ್ಮಂ ವಾ ನ ಹಿ ವೇದ ಯಥಾ ಪಶುಃ ॥೫॥

ಸ ಕಥಂ ನ್ಯರ್ಪಿತಾತ್ಮಾನಂ ಕೃತಮೈತ್ರಮಚೇತನಮ್ ।
ವಿಸ್ರಮ್ಭಣೀಯೋ ಭೂತಾನಾಂ ಸಘೃಣೋ ದ್ರೋಗ್ಧುಮರ್ಹತಿ ॥೬॥

---

* ಹೋಲಿಕೆ : ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥

(ಶ್ರೀಗೀತಾ)

ವಿಷ್ಣುದೂತರು ಹೇಳುತ್ತಾರೆ :

"ಆಹಾ! ಎಂತಹ ಆಶ್ಚರ್ಯದ ಮತ್ತು ಖೇದದ ವಿಷಯ! ಧರ್ಮಜ್ಞರ ಸಭೆಗೂ ಅಧರ್ಮದ ಪ್ರವೇಶವಾಗಿದೆಯಲ್ಲಾ! ಏಕೆಂದರೆ : ಇಲ್ಲಿ ಪಾಪರಹಿತರಾಗಿರುವ ಕಾರಣ ಯಾರು ದಂಡನೆಗೆ ಯೋಗ್ಯರಲ್ಲವೋ ಅಂತಹವರಿಗೂ ದಂಡನೆಯು ವಿಧಿಸಲ್ಪಡುತ್ತಿದೆ. ಯಾರು ಪ್ರಜೆಗಳಿಗೆ ರಕ್ಷಕರಾಗಿ ತಂದೆಯಂತಿದ್ದು ಅವರನ್ನಾಳುತ್ತಿದ್ದಾರೆಯೋ, ಸಮದರ್ಶಿಗಳಾಗಿ ಸಾಧುಗಳಾಗಿದ್ದಾರೆಯೋ–ಅವರೇ ಪ್ರಜೆಗಳ ವಿಷಯದಲ್ಲಿ ಪಕ್ಷಪಾತವನ್ನು ತೋರಿದರೆ ಆ ಪ್ರಜೆಗಳು ಯಾರನ್ನು ಶರಣುಹೊಂದಿಯಾರು? ಲೋಕದಲ್ಲಿ ಶ್ರೇಷ್ಠರಾದವರು ಯಾವುದನ್ನು ಆಚರಿಸುತ್ತಾರೆಯೋ ಸಾಧಾರಣ ಜನರೂ ಅದನ್ನೇ ಆಚರಿಸುತ್ತಾರೆ. ಅವರು ತಮ್ಮ ಆಚರಣೆಯಿಂದ ಯಾವುದನ್ನು ಧರ್ಮಕ್ಕೆ ಅನುಕೂಲವೆಂದು ಪ್ರಮಾಣಿಸುತ್ತಾರೆಯೋ– ಅದನ್ನೇ ಜನರೂ ಅನುಕರಿಸುತ್ತಾರೆ. ಆ ಸಾಧಾರಣಜನರು ಪಶುಗಳಂತಿದ್ದು, ಅವರಿಗೆ ಧರ್ಮ-ಅಧರ್ಮಗಳ ಸ್ವರೂಪದ ಅರಿವು ಇರುವುದಿಲ್ಲವಾದ್ದರಿಂದ ಯಾವನಾದರೂ ಸತ್ಪುರುಷನ ಮೇಲೆ ನಂಬಿಕೆಯನ್ನಿಟ್ಟು ಆತನ ತೊಡೆಯ ಮೇಲೆ ತಲೆಯನ್ನಿರಿಸಿಕೊಂಡು ನೆಮ್ಮದಿಯಾಗಿ ನಿದ್ರೆಮಾಡುತ್ತಾರೆ. ಹೀಗೆ ಪ್ರಾಣಿಗಳಿಗೆ ಅತ್ಯಂತವಿಶ್ವಾಸಪಾತ್ರನಾಗಿರುವುದರಿಂದ ಅವು ಆತನನ್ನು ನಂಬಿಕೆಗೆ ಯೋಗ್ಯನಾದ ಹಿತೈಷಿಯೆಂದು ಭಾವಿಸಿ ಆತನಲ್ಲಿ ಆತ್ಮಸಮರ್ಪಣೆಯನ್ನು ಮಾಡಿರುತ್ತವೆ. ಅಂತಹವನೇ ಜೀವಿಗಳ ವಿಷಯದಲ್ಲಿ ನಂಬಿಕೆಯ ದ್ರೋಹಮಾಡುವುದು ಉಚಿತವೇ? (ಶ್ಲೋಕ 2-6)

ಎಲೈ ಯಮದೂತರೇ! ಈ ಅಜಾಮಿಳನು ಕೋಟಿ ಕೋಟಿ ಜನ್ಮಗಳಲ್ಲಿ ಮಾಡಿದ ಪಾಪಗಳಿಗೂ ಪೂರ್ಣವಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಂಡುಬಿಟ್ಟಿದ್ದಾನೆ. ಏಕೆಂದರೆ : ಬೇರಾವುದೋ ವ್ಯಾಮೋಹದಿಂದಲೇ ಆದರೂ ಈತನು ಶ್ರೀಹರಿಯ ಪರಮಕಲ್ಯಾಣಮಯವಾದ ನಾಮವನ್ನು ಉಚ್ಚಾರಣೆ ಮಾಡಿದ್ದಾನೆ.* 'ನಾರಾಯಣ' ಎಂಬ ನಾಲ್ಕು ಅಕ್ಷರಗಳನ್ನು

---

* ಶ್ರೀಭಗವಂತನ ನಾಮೋಚ್ಚಾರಣೆಯ ಮಹಿಮೆಯನ್ನು ಸಾರುವ ಈ ಕೆಲವು ಶ್ಲೋಕಗಳನ್ನು ಗಮನಿಸಬಹುದು :

ಉಚ್ಚಾರಣೆ ಮಾಡಿದಷ್ಟರಿಂದಲೇ ಈತನು ಮಾಡಿದ್ದ ಎಲ್ಲ ಪಾಪಗಳಿಗೂ ಪ್ರಾಯಶ್ಚಿತ್ತವು ಆಗಿಹೋಯಿತು. (ಶ್ಲೋಕ 7-8)

ಸ್ತೇನಃ ಸುರಾಪೋ ಮಿತ್ರಧ್ರುಗ್ಬ್ರಹ್ಮಹಾ ಗುರುತಲ್ಪಗಃ ।
ಸ್ತ್ರೀರಾಜಪಿತೃಗೋಹನ್ತಾ ಯೇ ಚ ಪಾತಕಿನೋಽಪರೇ ॥೯॥

ಸರ್ವೇಷಾಮಪ್ಯಘವತಾಮಿದಮೇವ ಸುನಿಷ್ಕೃತಮ್ ।
ನಾಮವ್ಯಾಹರಣಂ ವಿಷ್ಣೋರ್ಯತಸ್ತದ್ವಿಷಯಾ ಮತಿಃ ॥೧೦॥

ಕಳ್ಳನಾಗಲೀ, ಹೆಂಡಕುಡಕನಾಗಲೀ, ಮಿತ್ರದ್ರೋಹಿಯಾಗಲೀ, ಬ್ರಹ್ಮಹತ್ಯಾಪಾತಕಿಯಾಗಲೀ, ಗುರುಪತ್ನೀಗಮನಮಾಡಿದ ಪರಮಪಾಪಿ

ಹರಿರ್ಹರತಿ ಪಾಪಾನಿ ದುಷ್ಟಚಿತ್ತೈರಪಿ ಸ್ಮೃತಃ ।
ಅನಿಚ್ಛಯಾಪಿ ಸಂಸ್ಪೃಷ್ಟೋ ದಹತ್ಯೇವ ಹಿ ಪಾವಕಃ ॥
ಬದ್ಧಃ ಪರಿಕರಸ್ತೇನ ಮೋಕ್ಷಾಯ ಗಮನಂ ಪ್ರತಿ ।
ಸಕೃದುಚ್ಚರಿತಂ ಯೇನ ಹರಿರಿತ್ಯಕ್ಷರದ್ವಯಮ್ ॥

ಕೆಟ್ಟಮನಸ್ಸಿನಿಂದ ಸ್ಮರಣೆಮಾಡಿದರೂ ಶ್ರೀಹರಿಯು ಪಾಪಗಳನ್ನು ಪರಿಹರಿಸುತ್ತಾನೆ. ಬೆಂಕಿಯನ್ನು ಇಷ್ಟವಿಲ್ಲದೇ ಮುಟ್ಟಿದರೂ ಅದು ಸುಟ್ಟೇಸುಡುತ್ತದೆಯಲ್ಲವೇ! ಯಾವನು 'ಹರಿ' ಎಂಬ ಎರಡು ಅಕ್ಷರಗಳನ್ನು ಉಚ್ಚಾರಣೆ ಮಾಡುವನೋ–ಆತನು ಮೋಕ್ಷವನ್ನು ಹೊಂದಲು ನಡುಕಟ್ಟಿದಂತೆಯೇ ಸರಿ. (ಪ್ರಹ್ಲಾದಕೃತಹರಿಸ್ತುತಿ)

ಯಸ್ಯ ಸ್ಮೃತ್ಯಾ ಚ ನಾಮೋಕ್ತ್ಯಾ ತಪೋಯಜ್ಞಕ್ರಿಯಾದಿಷು । ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋ ವನ್ದೇ ತಮಚ್ಯುತಮ್ ॥ (ಯಾವನ ಸ್ಮರಣೆ ಮಾಡಿದರೆ ಅಥವಾ (ಮತ್ತು) ನಾಮವನ್ನು ಉಚ್ಚಾರಣೆಮಾಡಿದರೂ ಕೂಡ ತಪಸ್ಸು, ಯಜ್ಞ ಮುಂತಾದ ಕರ್ಮಗಳಲ್ಲಿ ಊನವಾಗಿದ್ದುದೆಲ್ಲಾ ಒಡನೆಯೇ ಪೂರ್ಣವಾಗುವುದೋ–ಅಂತಹ ಅಚ್ಯುತನನ್ನು ವಂದಿಸುವೆನು. 'ಅವಶೇನಾಪಿ ಯನ್ನಾಮ್ನಿ ಕೀರ್ತಿತೇ ಸರ್ವಪಾತಕೈಃ । ಪುಮಾನ್ ವಿಮುಚ್ಯತೇ ಸದ್ಯಃ ಸಿಂಹತ್ರಸ್ತೈರ್ಮೃಗೈರಿವ ॥' ಶ್ರೀಭಗವಂತನ ವಿಷಯವಾದ ಇಚ್ಛೆಯಿಲ್ಲದೇ ಇದ್ದರೂ ಬೇರೆ ಯಾವುದೋ

---

* ಇಲ್ಲಿ ನಾಮವ್ಯಾಹರಣ–ಎಂದರೆ 'ನಾಮವನ್ನು ಉಚ್ಚರಿಸುವುದು' ಎಂದಷ್ಟೇ ಅರ್ಥ. ಏಕೆಂದರೆ : ಭಗವಂತನಾದ ಶ್ರೀಕೃಷ್ಣನು–"ನಾನು ದೂರದಲ್ಲಿದ್ದ ಕಾರಣ ದ್ರೌಪದಿಯು 'ಗೋವಿಂದ! ಗೋವಿಂದ!'–ಎಂದು ನನ್ನನ್ನು ಕುರಿತು ರೋದಿಸುತ್ತಾ ಕೂಗಿಕೊಂಡಳು. ಆಕೆಯ ಆ ಕೂಗು ನನ್ನ ಹೃದಯವನ್ನು ಎಂದಿಗೂ ಬಿಟ್ಟುಹೋಗುವುದಿಲ್ಲ. ಹೆಚ್ಚಾಗಿ ಬೆಳೆದ ಸಾಲವು ಹೃದಯದ ಮೇಲೆ ಭಾರವಾಗಿ

ಯಾಗಲೀ, ಸ್ತ್ರೀಹತ್ಯೆ, ರಾಜಹತ್ಯೆ, ಪಿತೃಹತ್ಯೆ, ಗೋಹತ್ಯೆಗಳನ್ನು ಮಾಡಿದವನಾಗಲೀ, ಇತರ ಯಾವುದೇ ಪಾಪಗಳನ್ನು ಮಾಡಿದವನಾಗಲೀ, ಎಲ್ಲ ಪಾತಕಗಳಿಗೂ ನಾರಾಯಣನಾಮವನ್ನು ಉಚ್ಚರಿಸುವುದೇ ಮುಖ್ಯವಾದ ಪ್ರಾಯಶ್ಚಿತ್ತವು. ಏಕೆಂದರೆ : ಭಗವಂತನ ನಾಮವನ್ನು ಉಚ್ಚರಿಸಿದರೆ ಮನಸ್ಸಿಗೆ ಭಗವಂತನು ವಿಷಯವಾಗುವನು. ಬ್ರಹ್ಮಜ್ಞಾನಿಗಳಾಗಿ ಬ್ರಹ್ಮದ ವಿಷಯವಾಗಿ ಮಾತನಾಡಿರುವ ಮಹಾತ್ಮರು ಪಾತಕಗಳ ಪರಿಹಾರಕ್ಕಾಗಿ ಕೃಚ್ಛ್ರ-ಚಾಂದ್ರಾಯಣಗಳೇ ಮುಂತಾದ ಅನೇಕವ್ರತಗಳನ್ನು ವಿಧಿಸಿದ್ದಾರೆ. ಆದರೆ ಭಗವಂತನ ನಾಮಗಳನ್ನು, ಭಗವಂತನ ನಾಮಗಳಿಂದ ಕೂಡಿದ ಪದಗಳನ್ನು ಉಚ್ಚಾರಣೆ ಮಾಡುವುದರಿಂದ ಆ ಪಾಪಗಳು ಎಷ್ಟರಮಟ್ಟಿಗೆ ನಿರ್ಮೂಲವಾಗುವುವೋ–ಅಷ್ಟರಮಟ್ಟಿಗೆ ಆ ಪ್ರಾಯಶ್ಚಿತ್ತಗಳಿಂದ* ಅವು ನಿರ್ಮೂಲವಾಗುವುದಿಲ್ಲ. (ಶ್ಲೋಕ 9-10)

ಕಾರಣದಿಂದ ಆಕಸ್ಮಿಕವಾಗಿ ಶ್ರೀಹರಿಯ ನಾಮವನ್ನು ಉಚ್ಚರಿಸಿದರೂ ಎಲ್ಲ ಪಾಪಗಳೂ ಕಳೆದುಹೋಗುವುವು. ಸಿಂಹಕ್ಕೆ ಹೆದರಿ ಮೃಗಗಳು ಓಡಿಹೋಗುವಂತೆ ಎಲ್ಲ ಪಾಪಗಳೂ ಆತನನ್ನು ಬಿಟ್ಟು ಪಲಾಯನಮಾಡುವುವು.

ನಾಮ್ನೋ ಹಿ ಯಾವತೀ ಶಕ್ತಿಃ ಪಾಪನಿರ್ಹರಣೇ ಹರೇಃ ।
ತಾವತ್ಕರ್ತುಂ ನ ಶಕ್ನೋತಿ ಪಾತಕಂ ಪಾತಕೀ ನರಃ ॥

ಶ್ರೀಭಗವಂತನ ನಾಮಗಳಿಗೆ ಪಾಪಗಳನ್ನು ನಾಶಮಾಡುವ ಎಷ್ಟು ಶಕ್ತಿ ಇರುವುದೋ ಅಷ್ಟು ಪಾಪಗಳನ್ನೂ ಯಾವ ಪಾತಕಿಯೂ ಮಾಡಲಾರನು.

"ಇವೆಲ್ಲವೂ ಹೊಗಳಿಕೆಯ ಮಾತುಗಳು. ಹೇಗಾದರೂ ಭಗವನ್ನಾಮವನ್ನು ಉಚ್ಚರಿಸಲಿ–ಎಂದು ಜನರಿಗೆ ಪ್ರೋತ್ಸಾಹನೀಡಲು ಹೇಳಿರುವ ಪ್ರಶಂಸೆಯ ಮಾತುಗಳು, ಅರ್ಥವಾದಗಳು"–ಎಂದು ತಿಳಿಯಕೂಡದು. ಇವು ಸತ್ಯದ ಸಾರಿಕೆಯೇ ಆಗಿವೆ. ಇವು ಗಳಿಗೆ ಅರ್ಥವಾದವೆಂದು ವ್ಯಾಖ್ಯಾನಮಾಡುವುದು ಕೂಡ ದುರ್ಗತಿಗೆ ಕಾರಣವಾಗುವುದು. **'ಅರ್ಥವಾದಂ ಹರೇರ್ನಾಮ್ನಿ ಸಂಭಾವಯತಿ ಯೋ ನರಃ । ಸ ಪಾಪಿಷ್ಠೋ ಮನುಷ್ಯಾಣಾಂ ನಿರಯೇ ಪತತಿ ಸ್ಫುಟಮ್ ॥'**

ಆಕ್ರಮಿಸಿರುವಂತೆ ಅದು ನನ್ನ ಹೃದಯದಿಂದ ಕ್ಷಣಕಾಲವೂ ಹೊರಗೆ ಹೋಗು ತ್ತಿಲ್ಲ"–ಎಂದು ಹೇಳುತ್ತಾರೆ. **'ಗೋವಿಂದೇತಿ ಯದಾಕ್ರಂದತ್ ಕೃಷ್ಣಾ ಮಾಂ ದೂರವಾಸಿನಮ್ । ಋಣಂ ಪ್ರವೃದ್ಧಮಿವ ಮೇ ಹೃದಯಾನ್ನಾಪಸರ್ಪತಿ'**

---

* ಆ ಪ್ರಾಯಶ್ಚಿತ್ತಗಳನ್ನು ಸರಿಯಾಗಿ ಮಾಡಿದರೆ ಆಯಾ ಪಾಪಗಳು ಮಾತ್ರ

ಪ್ರಾಯಶ್ಚಿತ್ತವನ್ನು ಮಾಡಿದನಂತರವೂ ಮನಸ್ಸು ಮತ್ತೆ ದುರ್ಮಾರ್ಗದ ಕಡೆಗೆ ಓಡಿಬರುವುದಾದರೆ ಅದು ಹೇಗೆ ಪೂರ್ಣವಾದ ಪ್ರಾಯಶ್ಚಿತ್ತವಾದೀತು? ಆದುದರಿಂದ ಪಾಪಗಳು ಬುಡಸಹಿತವಾಗಿ ನಾಶಹೊಂದುವಂತಹ ಪ್ರಾಯಶ್ಚಿತ್ತಗಳನ್ನು ಮಾಡಿಕೊಳ್ಳಬೇಕೆಂಬ ಬಯಕೆ ಇರುವವರು ಶ್ರೀಭಗವಂತನ ಗುಣಗಳನ್ನು ಗಾನಮಾಡಬೇಕು. ಏಕೆಂದರೆ : ಅದರಿಂದ ಚಿತ್ತವು ಸಂಪೂರ್ಣವಾಗಿ ಶುದ್ಧಿಯನ್ನು ಹೊಂದುವುದು. ಆದುದ ರಿಂದ, ಎಲೈ ಯಮದೂತರೇ! ನೀವು ಅಜಾಮಿಳನನ್ನು ಸೆಳೆದುಕೊಂಡು ಹೋಗಬೇಡಿರಿ. ಏಕೆಂದರೆ : ಈತನು ಮರಣಸಮಯದಲ್ಲಿ ಶ್ರೀಭಗವಂತನ ನಾಮವನ್ನು ಉಚ್ಚರಿಸಿ ಅದರಿಂದಲೇ ತನ್ನ ಎಲ್ಲ ಪಾಪಗಳಿಗೂ ಪ್ರಾಯಶ್ಚಿತ್ತ ವನ್ನು ಮಾಡಿಕೊಂಡಾಗಿದೆ. (ಶ್ಲೋಕ 11-13)

ಸಾಙ್ಕೇತ್ಯಂ ಪಾರಿಹಾಸ್ಯಂ ವಾ ಸ್ತೋಭಂ ಹೇಲನಮೇವ ವಾ ।
ವೈಕುಣ್ಠನಾಮಗ್ರಹಣಮಶೇಷಾಘಹರಂ ವಿದುಃ ॥೧೪॥

ಪತಿತಃ ಸ್ಖಲಿತೋ ಭಗ್ನಃ ಸನ್ದಷ್ಟಸ್ತಪ್ತ ಆಹತಃ ।
ಹರಿರಿತ್ಯವಶೇನಾಹ ಪುಮಾನ್ನಾರ್ಹತಿ ಯಾತನಾಮ್ ॥೧೫॥

ತಾತ್ಕಾಲಿಕವಾಗಿ ತೊಲಗುವುವು. ಆ ಪಾಪಗಳು ಮತ್ತೆ ಬಂದು ಆಕ್ರಮಿಸಬಹುದು. ಆದರೆ ಶ್ರೀಭಗವಂತನ ನಾಮೋಚ್ಚಾರಣೆಯನ್ನು ಯಾವುದೇ ರೀತಿಯಲ್ಲಿ ಯಾವುದೇ ಕಾರಣಕ್ಕಾಗಿ ಒಮ್ಮೆ ಮಾಡಿದರೂ–ಸಕಲ ಪಾತಕಗಳೂ ಸಂಪೂರ್ಣವಾಗಿ ತೊಲಗಿ ಹೋಗುವುವು. ಯಾವುದೇ ಕಾಲದಲ್ಲೂ ಮತ್ತೆ ಹಿಂದಿರುಗುವುದಿಲ್ಲ–ಎಂದು ಭಗವನ್ನಾಮದ ಮಹಿಮೆಯನ್ನು ಭಕ್ತರು ವಿವರಿಸುತ್ತಾರೆ. 'ನಾಮಪದೈಃ' ಎಂಬ ಪದದ ಪ್ರಯೋಗವು ಅರ್ಥಪೂರ್ಣವಾಗಿದೆ. 'ನಾರಾಯಣ' ಎಂಬ ಹೆಸರಿನ ಪದಗಳೇ ಪಾಪಶುದ್ಧಿಗೆ ಸಾಕು. ಆ ಪದಗಳೊಡನೆ 'ನಮಃ' 'ಭಜಾಮಿ' (ನಮಸ್ಕರಿಸುತ್ತೇನೆ ; ಭಜಿಸುತ್ತೇನೆ) ಇತ್ಯಾದಿ ಕ್ರಿಯಾಪದಗಳನ್ನು ಜೋಡಿಸುವ ಅವಶ್ಯಕತೆಯೂ ಇರುವುದಿಲ್ಲ. 'ನಾಮಪದೈಃ' ಎಂದು ಬಹುವಚನವನ್ನು ಏಕೆ ಹಾಕಿದೆ? ಎಂದರೆ : ಭಗವಂತನಿಗೆ ನೂರಾರು ನಾಮಗಳುಂಟು. ಅವು ಗಳೆಲ್ಲವನ್ನೂ ಉಚ್ಚರಿಸುವ ಅವಶ್ಯಕತೆಯಿಲ್ಲ. ಅವುಗಳಲ್ಲಿ ಯಾವುದಾದರೂ ಒಂದನ್ನು ಉಚ್ಚರಿಸಿದರೂ ಸಾಕು. ಆ ಹೆಸರಿನಿಂದ ಕೂಡಿದ ಯಾವುದೇ ಪದ ವನ್ನು ಉಚ್ಚರಿಸಿ'ರೂ ಸಾಕು–ಎಂಬ ಅಭಿಪ್ರಾಯವನ್ನೂ ಕೆಲವರು ಹೇಳುವರು. ಭಗವನ್ನಾಮದ ಒಂದು ಅಂಶವನ್ನು ಹೇಳಿದರೂ ಪಾಪನಿವೃತ್ತಿಯಾಗುವುದು. ಅದನ್ನು

ಈ ಅಜಾಮಿಳನು 'ಭಗವಂತನ ಹೆಸರು' ಎಂಬ ಭಾವನೆಯಿಂದ 'ನಾರಾಯಣ'–ಎಂಬ ಹೆಸರನ್ನು ಉಚ್ಚರಿಸಲಿಲ್ಲ. ತನ್ನ ಮಗನಿಗೆ ಆ ಹೆಸರು ಇದ್ದುದರಿಂದ ಆತನನ್ನು ಕರೆಯುವುದಕ್ಕೆ ಆ ಶಬ್ದವನ್ನು ಉಚ್ಚರಿಸಿದನು. ಅದರಿಂದ ಈತನಿಗೆ ಹೇಗೆ ಪಾಪಪರಿಹಾರವಾದೀತು?–ಎಂದರೆ : ಪರಮಾತ್ಮನ ಉದ್ದೇಶವಿಲ್ಲದೇ ಬೇರೊಬ್ಬರ ಸಂಕೇತದ ಹೆಸರೆಂಬ ಕಾರಣ ದಿಂದಗಾಲೀ, ಪರಿಹಾಸ್ಯಕ್ಕಾಗಲೀ, ರಾಗದ ಆಲಾಪನೆ ಮುಂತಾದುವುಗಳನ್ನು ತುಂಬುವುದಕ್ಕಾಗಲೀ, ಅಣಕಿಸುವುದಕ್ಕಾಗಲೀ–ಯಾವುದೇ ಕಾರಣದಿಂದ ಉಚ್ಚರಿಸಿದರೂ–ಭಗವಂತನ ನಾಮವು ಪಾಪವನ್ನು ತೊಲಗಿಸುತ್ತದೆ. ಮೇಲಿನಿಂದ ಬಿದ್ದ ಸಮಯದಲ್ಲಾಗಲೀ, ಕಾಲು ಜಾರಿ ಎಡವಿದ ಸಮಯ ದಲ್ಲಾಗಲೀ, ಮೈಮುರಿಯುವ ಕಾಲದಲ್ಲಾಗಲೀ, ಹಾವು ಮುಂತಾದುವು ಕಚ್ಚಿದ ಸಂದರ್ಭದಲ್ಲಾಗಲೀ, ಬಿಸಿಲು-ಬೆಂಕಿ ಮುಂತಾದುವುಗಳ ಕಾವು ಮುಟ್ಟಿದ ಸಮಯದಲ್ಲಾಗಲೀ, ಏಟು ಬಿದ್ದ ಸಮಯದಲ್ಲಾಗಲೀ–ಯಾವನಾದರೂ ತನ್ನ ಇಚ್ಛೆ-ಪ್ರಯತ್ನಗಳಿಲ್ಲದೇ 'ಹರಿ' ಎಂದು ಉಚ್ಚರಿ ಸಿದರೂ ಸಾಕು. ಆತನು ಯಮನ ಯಾತನೆಗೆ ಪಾತ್ರನಾಗುವುದಿಲ್ಲ.

(ಶ್ಲೋಕ 14-15)

ಮಹರ್ಷಿಗಳು ಪಾಪಗಳ ಸ್ವರೂಪವನ್ನು ಪರಿಶೀಲನೆಮಾಡಿ ದೊಡ್ಡ ಪಾಪಗಳಿಗೆ ದೊಡ್ಡ ಪ್ರಾಯಶ್ಚಿತ್ತವನ್ನೂ ಚಿಕ್ಕ ಪಾಪಗಳಿಗೆ ಚಿಕ್ಕ ಪ್ರಾಯಶ್ಚಿತ್ತವನ್ನೂ ವಿಧಿಸಿದ್ದಾರೆ. ಆದರೆ ತಪಸ್ಸು, ದಾನ, ಜಪ ಮುಂತಾದ ಪ್ರಾಯಶ್ಚಿತ್ತಗಳು ಆಯಾ ಪಾಪವನ್ನು ಕಳೆದುಹಾಕುತ್ತವೆ. ಪಾಪಗಳಿಂದ ಮಲಿನವಾದ ಹೃದಯವನ್ನು ಅವು ಶುದ್ಧಪಡಿಸಲಾರವು. ಆದರೆ ಭಗವಂತನ ಚರಣಗಳ ಸೇವೆಯು ಅಂತಹ ಹೃದಯವನ್ನೂ ಶುದ್ಧಿ ಪಡಿಸುವುದು.* ತಿಳಿದೋ ಅಥವಾ ತಿಳಿಯದೆಯೋ ಹೇಗೆ ಹೊತ್ತಿಸಿದರೂ

ಪೂರ್ಣವಾಗಿ ಉಚ್ಚರಿಸಲೇಬೇಕೆಂಬ ನಿಯಮವಿಲ್ಲ. ಸಾಯುವ ಸಮಯದಲ್ಲಿ ನಾಮವನ್ನು ಪೂರ್ಣವಾಗಿ ಉಚ್ಚರಿಸುವುದಕ್ಕೆ, ಕ್ರಿಯಾಪದದ ಸಹಿತವಾಗಿ ಉಚ್ಚರಿಸುವುದಕ್ಕೆ, ಭಾವಹಸಿತವಾಗಿ ಉಚ್ಚರಿಸುವುದಕ್ಕೆ, ವ್ಯಾಕರಣಬದ್ಧವಾಗಿ ಉಚ್ಚರಿಸುವುದಕ್ಕೆ–ಇತ್ಯಾದಿ ನಿಬಂಧನೆಗಳಿಗೆ ಅವಕಾಶವಿರಬೇಕೆಂಬ ನಿಯಮವಿಲ್ಲ.

* ಹದಿನೇಳನೆಯ ಶ್ಲೋಕದ ನಂತರ ಈ ಎರಡು ವಿಶೇಷಶ್ಲೋಕಗಳು ವಿಜಯಧ್ವಜೀಯ

ಬೆಂಕಿಯು ಕಟ್ಟಿಗೆಯನ್ನು ಸುಟ್ಟು ಹಾಕುವಂತೆ–ಭಗವಂತನ ನಾಮವನ್ನು ತಿಳಿದೋ ತಿಳಿಯದೆಯೋ–ಹೇಗೆ ಉಚ್ಚಾರಮಾಡಿದರೂ ಅದು ಎಲ್ಲ ಪಾಪ ಗಳನ್ನೂ ಸುಟ್ಟು ಬೂದಿ ಮಾಡುವುದು ಎಂಬುದರಲ್ಲಿ ಸಂಶಯವಿಲ್ಲ ಮಹಾ ಶಕ್ತಿಯಿಂದ ಕೂಡಿದ ಅಮೃತವನ್ನು ಒಬ್ಬಾತನು ಅದರ ಗುಣ-ವೀರ್ಯ ಗಳನ್ನು ಅರಿಯದೇ ಸೇವಿಸಿದರೂ ಆ ಅಮೃತವನ್ನು ಕುಡಿದವನನ್ನು ಅವಶ್ಯ ವಾಗಿಯೂ ಅಮರರನನ್ನಾಗಿಸುವುದಲ್ಲವೇ! ಹಾಗೆಯೇ ಅದರ ಗುಣ-ವೀರ್ಯ ಗಳನ್ನು ತಿಳಿಯದೇ ಉಚ್ಚಾರಮಾಡಿದರೂ ಭಗವನ್ನಾಮವು ಪಾಪಗಳನ್ನು ನಿರ್ಮೂಲಗೊಳಿಸುವುದೆಂಬುದು ನಿಜ. ಹೇಗೇ ಸೇವಿಸಿದರೂ ವಸ್ತುವಿನ ಸಹಜವಾದ ಶಕ್ತಿಯು ತನ್ನ ಕೆಲಸವನ್ನು ಮಾಡಿಯೇ ಮಾಡುತ್ತದೆ.*

ವ್ಯಾಖ್ಯಾನದಲ್ಲಿ ಕಂಡುಬರುತ್ತವೆ : **‘ಧರ್ಮೋ ಯೋಽಯಮುಪ ನ್ಯಸ್ತಃ ಪರಮಸ್ತು ಸನಾತನಃ । ಕ್ರಿಯತೇಽಹರಹಶ್ಶುದ್ಧಿಮಾತ್ಮನೋ ವಾಸಸೋ ಯಥಾ ॥ ನೈಕಾನ್ತಶುದ್ಧಿಸ್ಸ್ಯಾತ್ಕರ್ತುಃ ಕ್ರಿಯಯಾ ಕರ್ತೃತಾ ಯತಃ । ಅಕರ್ತುರಾತ್ಮನಸ್ತಸ್ಮಾತ್ ಭಜೇತಾನೀಹಯಾ ಹರಿಮ್ ।’** (ಈಗ ನಾವು ಹೇಳಿದ ಶ್ರೇಷ್ಠವೂ ಸನಾತನವೂ ಆದ ಭಾಗವತಧರ್ಮವು–ಪ್ರತಿದಿನವೂ ನೀರು ಬಟ್ಟೆಯನ್ನು ತೊಳೆದು ಶುಚಿಪಡಿಸುವಂತೆ– ಭಜಿಸುವವನ ಮನಸ್ಸನ್ನು ಶುದ್ಧಿಪಡಿಸುವುದು. ಪ್ರಾಯಶ್ಚಿತ್ತಕರ್ಮಗಳನ್ನು ಮಾಡಿದರೂ ಸ್ವತಂತ್ರವಾದ ಕರ್ತೃತ್ವವಿಲ್ಲದ ಜೀವನಿಗೆ ಮನಶ್ಶುದ್ಧಿಯುಂಟಾಗುವುದಿಲ್ಲ. ಆದುದರಿಂದ ನಿಷಿದ್ಧವಾದ ಕರ್ಮಗಳನ್ನು ಬಿಟ್ಟು ಹರಿನಾಮಕೀರ್ತನೆಯನ್ನು ನಿರಂತರವಾಗಿ ಮಾಡುತ್ತಿರಬೇಕು.) ಶ್ರೀಭಗವಂತನ ನಾಮಸಂಕೀರ್ತನೆಗೆ ವರ್ಣಾಶ್ರಮಲಿಂಗಾದಿ ನಿಯಮಗಳೂ ಇಲ್ಲ ; ದೇಶ-ಕಾಲಾದಿ ನಿಬಂಧನೆಗಳೂ ಇಲ್ಲ. **‘ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಸ್ತ್ರಿಯಃ ಶೂದ್ರಾನ್ತ್ಯ ಜಾತಯಃ । ಯತ್ರ ತತ್ರಾನುಕುರ್ವನ್ತಿ ವಿಷ್ಣೋರ್ನಾಮಾನುಕೀರ್ತನಮ್ ॥**

ನ ದೇಶಕಾಲನಿಯಮಃ ಶೌಚಾಶೌಚವಿನಿರ್ಣಯಃ । ಪರಂ ಸಂಕೀರ್ತನಾದೇವರಾಮ ರಾಮೇತಿ ಮುಚ್ಯತೇ ॥

‘ನ ದೇಶನಿಯಮೋ ರಾಜನ್ನ ಕಾಲನಿಯಮಸ್ತಥಾ । ವಿದ್ಯತೇ ನಾತ್ರ ಸಂದೇಹೋ

---

* ೧೯ನೆಯ ಶ್ಲೋಕದನಂತರ ವೀರರಾಘವೀಯ ಮತ್ತು ವಿಜಯಧ್ವಜೀಯದಲ್ಲಿ ಈ ಹೆಚ್ಚು ಶ್ಲೋಕವನ್ನು ನೋಡುತ್ತೇವೆ :

ಪತಿಂ ವೋ ಪೃಚ್ಛತ ಭಟಾ ಧರ್ಮೇಽಸ್ಮಿನ್ಯದಿ ಸಂಶಯಃ ।
ಸ ವೇದ ಪರಮಂ ಸತ್ಯಂ ಧರ್ಮಸ್ಯ ಭಗವಾನ್ ಯಮಃ ॥

ಆದರೂ ಭಗವದ್ಭಕ್ತರು ಪಾಪನಾಶದ ಕಡೆಗೆ ಹೆಚ್ಚು ಗಮನಕೊಡದೆ ಭಕ್ತಿ ಭಾವವು

ಎಲೈ ರಾಜೇಂದ್ರನೇ! ಆ ವಿಷ್ಣುದೂತರು ಹೀಗೆ ಭಗವನ್ನಾಮದ ಕೊಂಡಾಟದಿಂದ ಭಾಗವತಧರ್ಮವನ್ನು ನಿರೂಪಿಸಿ ಆ ಬ್ರಾಹ್ಮಣನನ್ನು ಯಮಪಾಶಗಳಿಂದ ಬಿಡಿಸಿ ಅವನ ಮೃತ್ಯುಭಯವನ್ನು ಹೋಗಲಾಡಿಸಿದರು. ವಿಷ್ಣುದೂತರಿಂದ ಹೀಗೆ ಪ್ರತ್ಯುತ್ತರವನ್ನು ಪಡೆದ ಯಮದೂತರು ತಮ್ಮ ಪ್ರಭುವಿನ ಬಳಿಗೆ ಹೋಗಿ ಆ ಎಲ್ಲ ಸಮಾಚಾರಗಳನ್ನೂ ಆತನಲ್ಲಿ ಅರಿಕೆ ಮಾಡಿಕೊಂಡರು. (ಶ್ಲೋಕ 16-21)

ಯಮದೂತರ ಪಾಶಗಳಿಂದ ಬಿಡುಗಡೆ ಹೊಂದಿದ ಅಜಾಮಿಳನು ಭಯರಹಿತನಾಗಿ ಸ್ವಸ್ಥನಾದನು. ಆತನು ಆ ವಿಷ್ಣುಕಿಂತರರ ದರ್ಶನದ ಆನಂದದಲ್ಲಿ ಮುಳುಗಿ ಅವರಿಗೆ ತಲೆ ಬಗ್ಗಿಸಿ ನಮಸ್ಕಾರವನ್ನು ಮಾಡಿದನು. ಎಲೈ ಪಾಪರಹಿತನಾದ ಪರೀಕ್ಷಿತನೇ! ಆತನು ಏನೋ ಮಾತನಾಡಲು ಬಯಸಿರುವುದನ್ನು ಕಂಡು ಪರಮಪುರುಷನ ದೂತರು ಆತನು ನೋಡು

ಸಂದೇಹೋ ವಿಷ್ಣೋರ್ನಾಮಾನುಕೀರ್ತನೇ ॥ ಕಾಲೋಽಸ್ತಿ ಯಜ್ಞೇ ದಾನೇ ವಾ ಸ್ನಾನೇ ಕಾಲೋಽಸ್ತಿ ಸಜ್ಜತೇ । ವಿಷ್ಣುಸಂಕೀರ್ತನೇ ಕಾಲೋ ನಾಸ್ತ್ಯರ್ಥಃ ಪೃಥಿವೀಪತೇ ॥ ಗಚ್ಛಂಸ್ತಿಷ್ಠನ್ ಸ್ವಪನ್ವಾಪಿ ಪಿಬನ್ಭುಞ್ಜಞ್ಸ್ತಥಾ । ಕೃಷ್ಣ ಕೃಷ್ಣೇಕತಿ ಸಂಕೀರ್ತ್ಯ ಮುಚ್ಯತೇ ಪಾಪಕಂಚುಕಾತ್ ॥'

ಅಪವಿತ್ರಃ ಪವಿತೋ ವಾ ಸರ್ವಾವಸ್ಥಾಂ ಗತೋಽಪಿ ವಾ ।
ಯಃಸ್ಮರೇತ್ಪುಂಡರೀಕಾಕ್ಷಂ ಸ ಬಾಹ್ಯಾಭ್ಯನ್ತರಃ ಶುಚಿಃ ॥

ಕೃಷ್ಣೇತಿ ಮಂಗಲಂ ನಾಮ ಯಸ್ಯ ವಾಯಿ ಪ್ರವರ್ತತೇ । ಭಸ್ಮೀ ಭವನ್ತಿ ಸದ್ಯಸ್ತು ಮಹಾಪಾತಕಕೋಟಯಃ । ಸರ್ವೇಷಾಮಪಿ ಯಜ್ಞಾನಾಂ ಲಕ್ಷಣಾನಿ ವ್ರತಾನಿ ಚ । ತೀರ್ಥಸ್ನಾನಾನಿ ಸರ್ವಾಣಿ ತಪಾಂಸ್ಯನಶನಾನಿ ಚ । ವೇದಪಾಠಸಹಸ್ರಾಣಿ ಪ್ರಾದಕ್ಷಿಣ್ಯಂ ಭುವಃ ಶತಮ್ । ಕೃಷ್ಣನಾಮಜಪಸ್ಯಾಸ್ಯ ಕಲಾಂ ನಾರ್ಹನ್ತಿ ಷೋಡಶೀಮ್ ॥

ದೃಢವಾಗಲಿ, ಭಗವತ್ಪ್ರೇಮವು ಹೆಚ್ಚುತ್ತಿರಲಿ–ಎಂಬ ಆಶಯದಿಂದಲೇ ಹೆಚ್ಚು ಹೆಚ್ಚಾಗಿ ಭಗವಂತನ ಮಧುರವಾದ ನಾಮಗಳನ್ನು ಉಚ್ಚರಿಸುತ್ತಿರಬೇಕು.

ಭಗವನ್ನಾಮದ ಮೇಲ್ಕಂಡ ಮಹಿಮೆಯು ವಾಸ್ತವವಲ್ಲ. ಕೇವಲ ಅರ್ಥವಾದ (ಹೊಗಳಿಕೆ) ಎಂದು ಅನೇಕ ತಾರ್ಕಿಕರು ಭಾವಿಸುತ್ತಾರೆ. ಮದ್ಯದ ಒಂದು ತೊಟ್ಟನ್ನು ಕುಡಿದರೂ ಪಾತಿತ್ಯವುಂಟಾಗುವುದು–ಎಂದು ತಿಳಿಯುವ ಜನರಿಗೆ ಭಗವನ್ನಾಮವನ್ನು ಸ್ವಲ್ಪ ಉಚ್ಚರಿಸಿದರೂ ಜೀವಿಗಳ ಉದ್ಧಾರವಾಗುವುದು–ಎಂದು ಏಕೆ ನಂಬಿಕೆಯುಂಟಾಗುವುದಿಲ್ಲ? ಹೇಗೂ ಭಗವನ್ನಾಮದ ಮಹಿಮೆ

ತ್ತಿರುವಂತೆಯೇ ಅಲ್ಲಿಯೇ ಕಣ್ಮರೆಯಾಗಿಬಿಟ್ಟರು. ಆ ಸಂದರ್ಭದಲ್ಲಿ ಅಜಾಮಿಳನು ಶ್ರೀಭಗವಂತನ ಪಾರ್ಷದರಿಂದ ಪರಿಶುದ್ಧವಾದ ಭಾಗವತ ಧರ್ಮವನ್ನೂ ಮತ್ತು ಯಮದೂತರ ಬಾಯಿಂದ ವೇದೋಕ್ತವಾದ ಪ್ರವೃತ್ತಿಧರ್ಮವನ್ನೂ ಕೇಳಿದನು. ಸಮಸ್ತಪಾಪಪರಿಹಾರಕವಾದ ಶ್ರೀಭಗವಂತನ ಮಹಿಮೆಯನ್ನು ಕೇಳಿದ್ದರಿಂದ ಅಜಾಮಿಳನ ಹೃದಯ ದಲ್ಲಿ ಒಡನೆಯೇ ಭಕ್ತಿಯು ತುಂಬಿಕೊಂಡಿತು. ಆಗ ಆತನಿಗೆ ತಾನು ಮಾಡಿದ ಪಾಪಗಳನ್ನು ನೆನೆದು ಬಹಳ ಪಶ್ಚಾತ್ತಾಪವುಂಟಾಯಿತು. "ಅಯ್ಯೋ! ನಾನು ಇಂದ್ರಿಯಗಳಿಗೆ ಎಂತಹ ಗುಲಾಮನಾಗಿಬಿಟ್ಟೆನು! ಈ ದಾಸಿಯ ಗರ್ಭದಲ್ಲಿ ಪುತ್ರರನ್ನು ಪಡೆದು ನನ್ನ ಬ್ರಾಹ್ಮಣ್ಯವನ್ನು ಕಳೆದುಕೊಂಡೆನು. ಇಂತಹ ಕಡುಪಾಪಿಯಾದ ನನಗೆ ಧಿಕ್ಕಾರವು!

ಭಗವನ್ನಾಮದ ಕೀರ್ತನೆಯಿಂದ ಮಾತ್ರವಲ್ಲದೇ ಶ್ರವಣ-ಸ್ಮರಣಗಳಿಂದಲೂ ಅದೇ ಮಹಾಫಲವು ದೊರೆಯುವುದು.

ಆಶ್ಚರ್ಯೇ ವಾ ಭಯೇ ಶೋಕೇ ಕ್ಷತೇ ವಾ ಮಮ ನಾಮ ಯಃ ।
ವ್ಯಾಜೇನ ವಾ ಸ್ಮರೇದ್ಯಸ್ತು ಸ ಯಾತಿ ಪರಮಾಂ ಗತಿಮ್ ॥
ಪ್ರಯಾಣೇ ಚಾಪ್ರಯಾಣೇ ಚ ಯನ್ನಾಮ ಸ್ಮರತಾಂ ನೃಣಾಮ್ ।
ಸದ್ಯೋ ನಶ್ಯತಿ ಪಾಪೌಘೋ ನಮಸ್ತಸ್ಮೈ ಚಿದಾತ್ಮನೇ ॥

(ಶಿವಗೀತಾ-ಪದ್ಮಪುರಾಣ)

ಶ್ರುತ್ವಾ ನಾಮಾನಿ ತತ್ರಸ್ಥಾ ಸ್ತೇನೋಕ್ತಾನಿ ಹರೇರ್ದ್ವಿಜ ।
ನಾರಕಾ ನರಕಾನ್ಮುಕ್ತಾಃ ಸದ್ಯ ಏವ ಮಹಾಮುನೇ ॥ (ಮಹಾಭಾರತ)

ಯಜ್ಞಾದಿಗಳಿಗೆ ಪ್ರಶಸ್ತವಾದ ದೇಶ-ಕಾಲ-ಶಕ್ತಿ ಮುಂತಾದುವು ಕಲಿಯುಗದಲ್ಲಿ

ಯನ್ನು 'ಅರ್ಥವಾದ'ವೆಂದು ಭಾವಿಸುವುದು ಪಾಪಕರವೆಂದು ಶಾಸ್ತ್ರಗಳಲ್ಲಿ ಹಲವು ಕಡೆಗಳಲ್ಲಿ ಹೇಳಿದೆ.

'ಪುರಾಣೇಷ್ವರ್ಥವಾದತ್ವಂ ಯೇ ವದನ್ತಿ ನರಾಧಮಾಃ ।
ತೈರರ್ಜಿತಾನಿ ಪುಣ್ಯಾನಿ ತದ್ವದೇವ ಭವನ್ತಿ ಹಿ ॥'

ಮನ್ನಾಮಕೀರ್ತನಫಲಂ ವಿವಿಧಂ ನಿಶಮ್ಯ ನ ಶ್ರದ್ಧಧಾತಿ ಮನುತೇ ಯದುತಾರ್ಥವಾದಮ್ । ಯೋ ಮಾನುಷಸ್ತಮಿಹ ದುಃಖಚಯೇ ಕ್ಷಿಪಾಮಿ ಸಂಸಾರ ಘೋರವಿವಿಧಾರ್ತಿನಿಪೀಡಿತಾಙ್ಗಮ್ ॥

ಅರ್ಥವಾದಂ ಹರೇರ್ನಾಮ್ನಿ ಸಂಭಾವಯತಿ ಯೋ ನರಃ ।
ಸ ಪಾಪಿಷ್ಠೋ ಮನುಷ್ಯಾಣಾಂ ನರಕೇ ಪತತಿ ಸ್ಫುಟಮ್ ॥

ಧಿಕ್ಕಾರವು! ಸತ್ಪುರುಷರ ನಿಂದೆಗೆ ಪಾತ್ರನಾದ ಪಾಪಾತ್ಮನು ನಾನು. ನನ್ನ ಕುಲಕ್ಕೇ ಕಳಂಕವನ್ನು ತಂದ ಪಾತಕಿಯು ನಾನು. ಅಯ್ಯೋ! ಅಯ್ಯೋ! ಕಿರುವಯಸ್ಸಿನಲ್ಲಿದ್ದ ಸಾಧ್ವಿಯಾದ ಪತ್ನಿಯನ್ನು ತೊರೆದು ಹೆಂಡ ಕುಡಿಯುವ ಕುಲಟೆಯ ಸಹವಾಸಮಾಡಿ ಭ್ರಷ್ಟನಾಗಿಬಿಟ್ಟೆನು. ಎಂತಹ ನೀಚನು ನಾನು! ಮುದುಕರಾಗಿ, ಅಸಹಾಯಕರಾಗಿ, ಸೇವೆ-ಶುಶ್ರೂಷೆ ಮಾಡಲು ಬೇರಾರೂ ಇಲ್ಲದೇ ಇದ್ದ, ತಪಸ್ವಿಗಳಾದ ತಂದೆ-ತಾಯಿಗಳನ್ನು ತಿರಸ್ಕಾರದಿಂದ ತೊರೆದುಬಿಟ್ಟೆನಲ್ಲಾ! ಎಂತಹ ಕೃತಘ್ನನು ನಾನು? ಈಗ ನಾನು–ಧರ್ಮಘಾತಕರಾದ ಪಾಪಾತ್ಮರು ಯಮಯಾತನೆಗಳನ್ನು ಅನುಭವಿಸುವ ಭಯಂಕರವಾದ ನರಕದಲ್ಲಿ ಹೋಗಿ ಬೀಳಬೇಕಾಗುವುದು. ಅದು ಸರಿ! ನಾನು ಈಗ ಒಂದು ಅದ್ಭುತವಾದ ದೃಶ್ಯವನ್ನು ಕಂಡೆನಲ್ಲಾ! ಅದು ಕನಸೋ ಅಥವಾ ಎಚ್ಚರದ ಸ್ಥಿತಿಯ ಪ್ರತ್ಯಕ್ಷವಾದ ಅನುಭವವೋ? ಈಗ ತಾನೇ ಕೈಯಲ್ಲಿ ಪಾಶಗಳನ್ನು ಹಿಡಿದುಕೊಂಡು ನನ್ನನ್ನು ಸೆಳೆಯುತ್ತಿದ್ದ ಆ ಜನರು ಎಲ್ಲಿ ಹೋದರು? ಅವರು ನನ್ನನ್ನು ತಮ್ಮ ಪಾಶಗಳಿಗೆ ಸಿಕ್ಕಿಸಿಕೊಂಡು ಭೂಮಿಯ ಕೆಳಗಡೆಗೆ ಸೆಳೆದುಕೊಂಡು ಹೋಗುತ್ತಿದ್ದರು.

ದುರ್ಲಭವಾಗಿರುವುದರಿಂದ ಭಗವನ್ನಾಮಸಂಕೀರ್ತನೆಯಿಂದಲೇ ಅನಾಯಾಸವಾಗಿ ಅವುಗಳ ಫಲವನ್ನು ಪಡೆದುಕೊಳ್ಳಬಹುದು.

ಈಶೋಽಹಂ ಸರ್ವಜಗತಾಂ ನಾಮ್ನಾಂ ವಿಷ್ಣೋರ್ಹಿ ಜಾಪಕಃ ।
ಸತ್ಯಂ ಸತ್ಯಂ ವದಾಮ್ಯೇವ ಹರೇರ್ನಾಮ್ನಾ ಗತಿರ್ನೃಣಾಮ್ ॥
ಧ್ಯಾಯನ್ಕೃತೇ ಯಜನ್ಯಜ್ಞೈಸ್ತ್ರೇತಾಯಾಂ ದ್ವಾಪರೇಽರ್ಚಯನ್ ।
ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಮ್ ॥

'ಏಕದಾಪಿ' 'ಸಕೃದುಚ್ಚಾರಿತಂ' ಎಂಬಂತೆ ಭಗವನ್ನಾಮವನ್ನು ಒಂದು ಬಾರಿ ಉಚ್ಚರಿಸಿದರೂ ಪಾಪಪರಿಹಾರವಾಗುವುದು. ಹೀಗಿರುವಾಗ ಮತ್ತೆ ಮತ್ತೆ ನಾಮ ಸಂಕೀರ್ತನೆಯನ್ನು ಏಕೆ ಮಾಡಬೇಕು? ಎಂದರೆ : 'ಮುಂದೆ ಪಾಪಗಳು ಉಂಟಾಗದಿರಲೆಂದು.'

ಭಗವನ್ನಾಮವನ್ನು ಉಚ್ಚರಿಸುವುದರಿಂದ ಮೂರು ಕಾಲಗಳ ಎಲ್ಲ ಪಾಪಗಳೂ ತೊಳೆದುಹೋಗುವುವು.

ವರ್ತಮಾನಂ ಚ ಯತ್ಪಾಪಂ ಯದ್ ಭೂತಂ ಯದ್ಭವಿಷ್ಯತಿ ।
ತತ್ಸರ್ವಂ ನಿರ್ದಹತ್ಯಾಶು ಗೋವಿಂದಾಮಲಕೀರ್ತನಮ್ ॥

ಆಗ ಅತ್ಯಂತ ಸುಂದರವಾದ ನಾಲ್ಕು ಮಂದಿ ಸಿದ್ಧರು ಬಂದು ನನ್ನನ್ನು ಬಿಡುಗಡೆ ಮಾಡಿದರು. ಈಗ ಅವರು ಎಲ್ಲಿ ಹೋದರು? ನಾನು ಈ ಜನ್ಮದಲ್ಲಿ ಮಹಾಪಾಪಿಯಾಗಿದ್ದರೂ ಹಿಂದಿನ ಜನ್ಮಗಳಲ್ಲಿ ನಿಜವಾಗಿಯೂ ಶುಭಕರ್ಮಗಳನ್ನು ಮಾಡಿರಲೇಬೇಕು. ಅದಕ್ಕೇ ನನಗೆ ಶ್ರೇಷ್ಠರಾದ ಆ ದೇವತೆಗಳ ದರ್ಶನವಾಯಿತು. ಅವರನ್ನು ನೆನೆದು ನನ್ನ ಮನಸ್ಸು ಈಗಲೂ ಆನಂದದಿಂದ ತುಂಬಿಹೋಗುತ್ತಿದೆ. ನಾನು ಕುಲಟೆಯ ಸಂಗವನ್ನು ಮಾಡಿದವನು. ಮಹಾಪಾಪಿಷ್ಠನು. ಅತ್ಯಂತ ಅಪವಿತ್ರನು. ಆದರೂ ಸಾಯುತ್ತಿರುವ ಸಮಯದಲ್ಲಿ ನನ್ನ ನಾಲಿಗೆಯಿಂದ ಪವಿತ್ರವೂ ಮಧುರವೂ ಆದ ಶ್ರೀಭಗವಂತನ ನಾಮದ ಉಚ್ಚಾರಣೆಯಾಯಿತು. ಹಿಂದಿನ ಜನ್ಮದಲ್ಲಿ ಪುಣ್ಯವನ್ನು ಆಚರಿಸದೇ ಇದ್ದಿದ್ದರೆ ಹೀಗಾಗುತ್ತಿತ್ತೇ? ಮಹಾಕಪಟಿಯೂ, ಪಾಪಿಯೂ, ನಾಚಿಕೆಗೆಟ್ಟವನೂ ಮತ್ತು ಬ್ರಹ್ಮಹತ್ಯೆಯನ್ನು ಮಾಡಿದವನೂ ಆದ ನಾನೆಲ್ಲಿ? ಶ್ರೀಭಗವಂತನ ಪರಮಮಂಗಳಕರವಾದ 'ನಾರಾಯಣ'– ಎಂಬ ನಾಮಧೇಯವೆಲ್ಲಿ? ನಿಜಕ್ಕೂ ನಾನು ಧನ್ಯನಾದೆನು. ಈಗ ನಾನು ನನ್ನ ಮನಸ್ಸು, ಇಂದ್ರಿಯ ಮತ್ತು ಪ್ರಾಣಗಳನ್ನು ವಶಕ್ಕೆ ತಂದುಕೊಂಡು ಮತ್ತೆ ಘೋರವಾದ ಕಗ್ಗತ್ತಲೆಯ ನರಕದಲ್ಲಿ ಬೀಳದಿರುವಂತೆ ಮಾಡಲು ಪ್ರಯತ್ನಿಸುವೆನು. ಅಜ್ಞಾನಕ್ಕೆ ತುತ್ತಾದ ನಾನು ನನ್ನ ದೇಹವನ್ನೇ ಆತ್ಮವೆಂದು ಭಾವಿಸಿ ಅದಕ್ಕಾಗಿ ಕಾಮನೆಗಳನ್ನು ತಂದುಕೊಂಡು ಅವುಗಳನ್ನು ಈಡೇರಿಸುವುದಕ್ಕಾಗಿ ಅನೇಕ ಕುತ್ಸಿತಕರ್ಮಗಳನ್ನು ಮಾಡಿದೆನು. ಅವುಗಳ ಫಲವೇ ಈ ಬಂಧನವು. ಈಗ ನಾನು ಈ ಕಟ್ಟುಗಳನ್ನು ಕಳಚಿಕೊಂಡು ಆತ್ಮಗುಣಸಂಪನ್ನನಾಗುವೆನು. ಸಮಸ್ತ ಪ್ರಾಣಿಗಳಿಗೂ ಹಿತವನ್ನು ಆಚರಿಸುವೆನು. ವಾಸನೆಗಳನ್ನು ಶಮನಗೊಳಿಸುವೆನು. ಎಲ್ಲರೊಡನೆಯೂ ಮೈತ್ರಿಯಿಂದಿರುವೆನು. ದುಃಖಿಗಳಲ್ಲಿ ದಯೆತೋರುವೆನು ಮತ್ತು ಪೂರ್ಣವಾದ ಸಂಯಮವನ್ನು ತಂದುಕೊಳ್ಳುವೆನು. ಶ್ರೀಭಗವಂತನ ಮಾಯೆಯು ಹೆಣ್ಣಿನ ರೂಪವನ್ನು ತಾಳಿ ಅಧಮನಾದ ನನ್ನನ್ನು ಬಂಧನಕ್ಕೆ ಸಿಕ್ಕಿಸಿತು. ಆಟದ ಗೊಂಬೆಯನ್ನು ಕುಣಿಸುವಂತೆ ಬಗೆ-ಬಗೆಯಾಗಿ ಕುಣಿದಾಡಿಸಿತು. ಈಗ ನನ್ನನ್ನು ಈ ಮಾಯೆಯಿಂದ ಬಿಡಿಸಿಕೊಳ್ಳುವೆನು. ಈಗ ನಾನು ಶರೀರ ಮುಂತಾದುವುಗಳಲ್ಲಿ 'ನಾನು'

'ನನ್ನದು' ಎಂಬ ಬುದ್ಧಿಯನ್ನು ತೊರೆದು ಶ್ರೀಭಗವಂತನ ದಿವ್ಯನಾಮ ಕೀರ್ತನಾದಿಗಳಿಂದ ಮನಸ್ಸನ್ನು ಶುದ್ಧಿಗೊಳಿಸಿ ಅದನ್ನು ಶ್ರೀಭಗವಂತನಲ್ಲಿ ನೆಲೆಗೊಳಿಸುವೆನು"–ಎಂದು ಆತನು ಅಂದುಕೊಂಡನು. (ಶ್ಲೋಕ 22-38)

ಶ್ರೀಶುಕಮಹರ್ಷಿಗಳು ಪರೀಕ್ಷಿತನಿಗೆ ಹೇಳುತ್ತಾರೆ :

ಎಲೈ ರಾಜಶಿರೋಮಣಿಯೇ ಕೇಳು! ಹೀಗೆ ಆ ಅಜಾಮಿಳನು ಕ್ಷಣಕಾಲ ಒದಗಿದ ಸತ್ಸಂಗದಿಂದಲೇ ತೀವ್ರವಾದ ವೈರಾಗ್ಯವನ್ನು ಪಡೆದು ಸಂಸಾರದ ಎಲ್ಲ ಸಂಬಂಧಗಳನ್ನೂ ಮತ್ತು ಮೋಹವನ್ನೂ ತೊರೆದವನಾಗಿ ಹರಿದ್ವಾರಕ್ಕೆ ತೆರಳಿದನು. ದೇವಗೃಹವಾದ ಆ ಸ್ಥಾನದಲ್ಲಿ ಆತನು ಒಂದು ದೇವಮಂದಿರದಲ್ಲಿ ಯೋಗಾಸನದಲ್ಲಿ ಕುಳಿತು ಯೋಗವನ್ನು ಆಚರಿಸುತ್ತಾ ಎಲ್ಲ ಇಂದ್ರಿಯಗಳನ್ನೂ ಒಳಕ್ಕೆ ಸೆಳೆದುಕೊಂಡು ಮನಸ್ಸನ್ನು ಬುದ್ಧಿಯಲ್ಲಿ ಸೇರಿಸಿದನು. ಆತ್ಮಚಿಂತನೆಮಾಡುತ್ತಾ ಬುದ್ಧಿಯನ್ನು ವಿಷಯಗಳಿಂದ ಬೇರ್ಪಡಿಸಿ ಶ್ರೀಭಗವಂತನ ಧಾಮದಲ್ಲಿ ಅನುಭವಸ್ವರೂಪಿಯಾದ ಪರಮಾತ್ಮನಲ್ಲಿ ಸೇರ್ಪಡಿಸಿದನು. ಹೀಗೆ ಆ ಅಜಾಮಿಳನ ಬುದ್ಧಿಯು ತ್ರಿಗುಣಮಯವಾದ ಪ್ರಕೃತಿಯನ್ನು ದಾಟಿ ಪರಮಾತ್ಮನಲ್ಲಿ ನೆಲೆಗೊಳ್ಳಲು ಆಗ ಆತನಿಗೆ ಹಿಂದೆ ನೋಡಿದ್ದ ಶ್ರೀಭಗವಂತನ ನಾಲ್ಕು ಮಂದಿ ಪಾರ್ಷದರು ತನ್ನ ಮುಂದೆಯೇ ನಿಂತಿರುವುದು ಕಾಣಿಸಿತು. ಆತನು ಅವರಿಗೆ ತಲೆ ಬಗ್ಗಿಸಿ ನಮಸ್ಕಾರಮಾಡಿದನು. ಹಾಗೆ ಅವರ ದರ್ಶನ ಪಡೆದನಂತರ ಆತನು ಆ ತೀರ್ಥಸ್ಥಾನದಲ್ಲಿ ಗಂಗೆಯ ದಡದಲ್ಲಿ ತನ್ನ ಶರೀರವನ್ನು ತ್ಯಜಿಸಿ ಒಡನೆಯೇ ಶ್ರೀಭಗವಂತನ ಪಾರ್ಷದರ ಸ್ವರೂಪವನ್ನು ಪಡೆದುಕೊಂಡನು. ಆ ಪಾರ್ಷದರೊಡನೆ ಆತನು ಸ್ವರ್ಣಮಯವಾದ ವಿಮಾನವನ್ನೇರಿ ಆಕಾಶ ಮಾರ್ಗದಿಂದ ಶ್ರೀಭಗವಂತನಾದ ಶ್ರೀಪತಿ ಶ್ರೀಮನ್ನಾರಾಯಣನ ಧಾಮ ವನ್ನು ಸೇರಿಕೊಂಡುಬಿಟ್ಟನು. (ಶ್ಲೋಕ 39-44)

ಪರೀಕ್ಷಿತಮಹಾರಾಜ! ಹೀಗೆ ವರ್ಣಾಶ್ರಮೋಚಿತವಾದ ಸಕಲ ಧರ್ಮಗಳನ್ನೂ ಪರಿತ್ಯಜಿಸಿ, ದಾಸೀಪತಿಯೂ ಆಗಿ, ಪತಿತನಾಗಿ, ನಿಂದ್ಯ ವಾದ ಕರ್ಮಗಳನ್ನು ಮಾಡುತ್ತಾ ಭ್ರಷ್ಟನಾಗಿ ನರಕಕ್ಕೆ ಬೀಳಲು ಸಿದ್ಧನಾಗಿದ್ದ ಮಹಾಪಾಪಿಯಾದ ಅಜಾಮಿಳನು ಒಂದು ಬಾರಿ ವ್ಯಾಜಾಂತರದಿಂದ ಭಗವ

ನ್ನಾಮವನ್ನು ಉಚ್ಚರಿಸಿದೊಡನೆಯೇ ಮುಕ್ತನಾಗಿಬಿಟ್ಟನು. ಆದುದರಿಂದ ಈ ಜಗತ್ತಿನಲ್ಲಿ ಮುಕ್ತಿಯನ್ನು ಪಡೆಯಲು ಅಪೇಕ್ಷಿಸುವವರಿಗೆ ಭಗವನ್ನಾಮ ಕೀರ್ತನಕ್ಕಿಂತಲೂ ಕರ್ಮಮೂಲವಾದ ಪಾಪವನ್ನು ನಾಶಗೊಳಿಸುವುದು ಮತ್ತಾ ವುದೂ ಇಲ್ಲ . ರಜಸ್ತ ಮೋಗುಣಗಳಿಂದ ಕೊಳೆಯಾದಮನಸ್ಸೆಂಬುದು ಸಂಸಾರಕ್ಕೆ ಕಾರಣವಾದ ಕರ್ಮಗಳಲ್ಲಿ ತೊಡಗದೇ ಇರಬೇಕಾದರೆ ಶ್ರೀಹರಿ ಸಂಕೀರ್ತನವು ಹೊರತಾಗಿ ಬೇರಾವ ಸಾಧನವೂ ಇಲ್ಲ. (ಶ್ಲೋಕ 45-46)

ಎಲೈ ಪಾಂಡವಕುಲಲಲಾಮನೇ! ಈ ಇತಿಹಾಸವು ಅತ್ಯಂತ ಗೋಪ್ಯವಾದುದು ; ಸಮಸ್ತಪಾಪಗಳನ್ನೂ ನಾಶಪಡಿಸುವುದು. ಶ್ರದ್ಧಾ-ಭಕ್ತಿಗಳೊಡನೆ ಇದರ ಶ್ರವಣ-ಕೀರ್ತನೆಗಳನ್ನು ಮಾಡುವ ಸುಕೃತಿಗೆ ಎಂದಿಗೂ ನರಕಪ್ರವೇಶವಿಲ್ಲ. ಯಮರಾಜನ ಕಿಂಕರರಾದರೋ ಆತನನ್ನು ಕಣ್ಣೆತ್ತಿಯೂ ನೋಡಲಾರರು. ಆತನ ಜೀವನವು ಪಾಪಮಯವೇ ಆಗಿದ್ದರೂ ಆತನು ವಿಷ್ಣುಲೋಕದಲ್ಲಿ ಪೂಜಿತನಾಗುವನು. (ಶ್ಲೋಕ 47-48)

ಆಜಮೀಢನೇ ನೋಡು! ಅಜಾಮಿಳನಂತಹ ಪಾಪಿಯು ಸಾವಿನ ಸಮಯದಲ್ಲಿ ತನ್ನ ಮಗನನ್ನು ಕೂಗುವ ನೆಪದಲ್ಲಿ ಶ್ರೀಭಗವಂತನ ನಾಮಧೇಯವನ್ನು ಉಚ್ಚಾರಣೆ ಮಾಡಿದನು. ಆದರೂ ಆತನಿಗೆ ವೈಕುಂಠವು ದೊರಕಿತು. ಇನ್ನು ಶ್ರದ್ಧೆಯಿಂದ ಭಗವನ್ನಾಮವನ್ನು ಉಚ್ಚರಿಸುವವರ ವಿಷಯದಲ್ಲಿ ಹೇಳತಕ್ಕದ್ದೇನಿದೆ?"*

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಷಷ್ಠಸ್ಕಂಧದ ೨ನೆಯ ಅಧ್ಯಾಯವು ಮುಗಿಯಿತು.

---

* ಭಕ್ತರಿಗೆ ಅತ್ಯಂತಪ್ರಿಯವಾಗಿರುವ ಈ ಅಜಾಮಿಳೋಪಾಖ್ಯಾನವು ಭಗವನ್ನಾಮದ ಮಹಿಮೆಯನ್ನು ಕಥೆಯ ಮೂಲಕವೂ, ದೃಷ್ಟಾಂತ–ಉದಾಹರಣೆಗಳೊಡನೆಯೂ ಹೃದಯಂಗಮವಾಗಿ ವಿವರಿಸುತ್ತದೆ.

ಯಾರನ್ನೋ ಕರೆಯುವ ಉದ್ದೇಶದಿಂದ ಭಕ್ತಿ-ಶ್ರದ್ಧೆಗಳಿಲ್ಲದೇ ಭಗವನ್ನಾಮವನ್ನು ಉಚ್ಚರಿಸಿದರೂ ಅದರಿಂದ ಪಾಪಪರಿಹಾರವಾಗುವುದೆಂದು ಈ ಕಥೆಯು ಸಾರುತ್ತದೆ. ಹಾಗಾದರೆ ಭಕ್ತಿ-ಶ್ರದ್ಧೆಗಳಿಂದ ಏನು ಪ್ರಯೋಜನ? ಜ್ಞಾನ-ಯೋಗಾದಿಗಳಿಂದ ಏನು ಪ್ರಯೋಜನ? ಭಕ್ತಿ-ಶ್ರದ್ಧೆಗಳುಳ್ಳವರಿಗೆ ಮತ್ತು ಭಕ್ತಿ-ಶ್ರದ್ಧೆಗಳಿಲ್ಲದವರಿಗೆ–ಇಬ್ಬರಿಗೂ ವೈಕುಂಠವು ದೊರೆಯುವುದಾದರೆ ಭಕ್ತಿ-ಶ್ರದ್ಧೆಗಳನ್ನು

ಷಷ್ಠಸ್ಕಂಧ ೩ನೆಯ ಅಧ್ಯಾಯ

ಯಮ-ಯಮದೂತರ ಸಂವಾದ

ಪರೀಕ್ಷಿದ್ರಾಜನು ಶ್ರೀಶುಕಮಹರ್ಷಿಗಳಿಂದ ಅಜಾಮಿಳನ ಉಪಾಖ್ಯಾನವನ್ನು ಪೂರ್ತಿಯಾಗಿ ಕೇಳಿಯಾದ ಬಳಿಕ ಮಹರ್ಷಿಗಳಲ್ಲಿ ಹೀಗೆ ಬಿನ್ನವಿಸಿದನು :

ನಿಶಮ್ಯ ದೇವಃ ಸ್ವಭಟೋಪವರ್ಣಿತಂ
ಪ್ರತ್ಯಾಹ ಕಿಂ ತಾನ್ಪ್ರತಿ ಧರ್ಮರಾಜಃ ।
ಏವಂ ಹತಾಜ್ಞೋ ವಿಹತಾನ್ಮುರಾರೇ-
ರ್ನೈರ್ದೇಶಿಕೈರ್ಯಸ್ಯ ವಶೇ ಜನೋಽಯಮ್ ॥೧॥

ಏಕೆ ಇಟ್ಟುಕೊಳ್ಳಬೇಕು? ಭಕ್ತಿ-ಶ್ರದ್ಧೆ ಇರುವವನಿಗಿಂತಲೂ ಇಲ್ಲದವನೇ ಜಾಣ– ಎಂದು ಕೆಲವರು ಆಕ್ಷೇಪಮಾಡುತ್ತಾರೆ. ಅವರು ಕಥೆಯನ್ನು ಪೂರ್ತಿಯಾಗಿ ಗಮನಿಸ ಬೇಕು.

ಅಜಾಮಿಳನಿಗೆ–ತನ್ನ ಪುತ್ರನನ್ನು ಉದ್ದೇಶಿಸಿ 'ನಾರಾಯಣ' ಎಂದು ಹೇಳಿದ್ದ ರಿಂದಲೇ ಆತನಿಗೆ ವೈಕುಂಠಪ್ರಾಪ್ತಿಯಾಯಿತು–ಎಂದು ಇಲ್ಲಿ ಹೇಳಲಿಲ್ಲ. ನಾಮೋ ಚ್ಚಾರಣೆಯಿಂದ ಆತನ ಪಾಪಪರಿಹಾರವಾಯಿತು. ಅನಂತರ ಆತನು ತನ್ನ ಪಾಪ ಗಳಿಗಾಗಿ ಪಶ್ಚಾತ್ತಾಪಗೊಂಡು ಭಕ್ತಿ-ಶ್ರದ್ಧೆಗಳಿಂದ ಯೋಗಸಮಾಧಿಯನ್ನು ಪಡೆದು ಗಂಗಾದ್ವಾರದಲ್ಲಿ ಮುಕ್ತಿಯನ್ನು ಪಡೆದನು–ಎಂದು ತಾನೇ ಕಥೆಯಲ್ಲಿರುವುದು! ಹಾಗೆ ಆತನು ಯೋಗಸಮಾಧಿಯನ್ನು ಪಡೆದಾಗಲೇ ವಿಷ್ಣುದೂತರು ಆತನಿಗೆ ಮತ್ತೆ ಕಾಣಿಸಿಕೊಳ್ಳುವರು. ಹಾಗಾದರೆ ನಾಮಸ್ಮರಣೆಗೆ ಪ್ರಯೋಜನವೇನು? ಎಂದರೆ : ಅದರಿಂದ ಸಂಸ್ಕಾರಿಗೆ ಚಿತ್ತಶುದ್ಧಿಯಾಗುವುದು. ಅಜಾಮಿಳನು ಹಿಂದೆ ಸದಾ ಚಾರಸಂಪನ್ನನಾದ ಭಕ್ತನೇ ಆಗಿದ್ದನು. ಪ್ರಾರಬ್ಧಕರ್ಮವಶದಿಂದ ದುರ್ಮಾರ್ಗಕ್ಕೆ ಇಳಿದು ಭ್ರಷ್ಟನಾದನು. ಆತನು ಅಂತ್ಯಕಾಲದಲ್ಲಿ ಯಾವುದೋ ಕಾರಣದಿಂದ ನಾರಾಯಣನಾಮವನ್ನು ಉಚ್ಚರಿಸಿದರೂ ಅದು ಆತನಿಗೇ ತಿಳಿಯದಂತೆ ನಿಜವಾದ ನಾರಾಯಣನ ಸ್ಥಾನವನ್ನೇ ಸೇರಿ ಅದಕ್ಕೆ ತಕ್ಕ ಪ್ರತಿಕ್ರಿಯೆಯನ್ನು ಉಂಟು ಮಾಡಿತು. ಆದುದರಿಂದ ಹೇಗೂ ನಾರಾಯಣನಾಮಸ್ಮರಣೆಮಾಡುವುದು ಒಳ್ಳೆಯದೇ. ಸೀನುವಾಗ, ಕೆಮ್ಮುವಾಗ, ಎದ್ದಾಗ, ಬಿದ್ದಾಗ, ಮೈ-ಕೈ-ಕಾಲು ನೋವಾದಾಗ, ಇತರರನ್ನು ಕರೆಯುವಾಗ, ಯಾವುದೇ ಕಾರಣಕ್ಕಾಗಲೀ–ಭಗವಂತನ ನಾಮವನ್ನು ಉಚ್ಚರಿಸುವುದು ಒಳ್ಳೆಯದು. ಅದು ಶ್ರೀಭಗವಂತನನ್ನೇ ವಿಷಯೀ

ಯಮಸ್ಯ ದೇವಸ್ಯ ನ ದಣ್ಡಭಙ್ಗಃ
ಕುತಶ್ಚನರ್ಷೇ ಶ್ರುತಪೂರ್ವ ಆಸೀತ್ ।
ಏತನ್ಮುನೇ ವೃಶ್ಚತಿ ಲೋಕಸಂಶಯಂ
ನ ಹಿ ತ್ವದನ್ಯ ಇತಿ ಮೇ ವಿನಿಶ್ಚಿತಮ್ ॥೨॥

"ಮಹರ್ಷಿಗಳೇ! ದೇವನಾದ ಯಮಧರ್ಮರಾಜನು ತನ್ನ ದೂತರು ಯಮಪುರಿಗೆ ಹಿಂದಿರುಗಿ ಅಜಾಮಿಳನ ಬಗೆಗೆ ನಡೆದ ವೃತ್ತಾಂತವನ್ನು ಪೂರ್ಣವಾಗಿ ಅರಿಕೆಮಾಡಿದಾಗ ಆತನು ಅವರಿಗೆ ಏನು ಹೇಳಿದನು? ದೇವಾಧಿದೇವನಾದ ಧರ್ಮರಾಜನಿಗೆ ಎಲ್ಲ ಜೀವಗಳು ಅಧೀನವಾಗಿವೆ. ವಿಷ್ಣುವಿನ ಕಿಂಕರರು ಅಂತಹವನ ಆಜ್ಞೆಯನ್ನು ಮುರಿದು ಆತನ ದೂತ

ಕರಿಸಿ ಚಿತ್ತಶುದ್ಧಿಯನ್ನು ಮಾಡುವುದಕ್ಕೆ ತಕ್ಕ ಮಹಾಪ್ರಾಯಶ್ಚಿತ್ತವಾಗುತ್ತದೆ. ಅನಂತರ ಭಕ್ತಿ-ಶ್ರದ್ಧೆಗಳಿಂದ ಸಾಧನೆಯನ್ನು ಮಾಡಿ ಭಗವಲ್ಲೋಕವನ್ನು ಪಡೆದುಕೊಳ್ಳಬಹುದು. **'ನಾಮವ್ಯಾಹರಣಂ ವಿಷ್ಣೋಃ ಯತಸ್ತದ್ವಿಷಯಾ ಮತಿಃ'**–ಎಂದು ಶ್ರೀಮದ್ಭಾಗವತವು ಸಾರುವಂತೆ ಭಗವನ್ನಾಮೋಚ್ಚಾರಣೆಯನ್ನು ಮಾಡಿದರೆ ಅದು ಭಗವಂತನನ್ನು ವಿಷಯೀಕರಿಸಿ ಭಗವಂತನ ಆ ನಾಮೋಚ್ಚಾರಣೆಯನ್ನು ಮಾಡಿದವನಲ್ಲಿ ಆತ್ಮೀಯ ಬುದ್ಧಿಯನ್ನು ಹೊಂದುವಂತೆ ಮಾಡುವುದು.

ಒಳ್ಳೆಯ ಔಷಧಿಯನ್ನು ನಂಬಿಕೆಯಿಂದ ಸೇವಿಸಲಿ ಅಥವಾ ಅಪನಂಬಿಕೆಯಿಂದ ಸೇವಿಸಲಿ ಅದು ರೋಗವನ್ನು ವಾಸಿಮಾಡುತ್ತದೆಯೆಂಬುದು ನಿಜ. ಆದರೆ **'ದೈವೇ ಚ ವೇದೇ ಚ ಗುರೌ ಚ ಮಂತ್ರೇ ತೀರ್ಥೇ ಮಹಾತ್ಮನ್ಯಪಿ ಭೇಷಜೇ ಚ । ಶ್ರದ್ಧಾ ಭವೇದ್ಯಸ್ಯ ಯಥಾ ಯಥಾನ್ತಃ ತಥಾ ತಥಾ ಸಿದ್ಧಿರುದೇತಿ ಪುಂಸಾಮ್ ॥'** ಎಂಬಂತೆ ಶ್ರದ್ಧೆಯುಳ್ಳವನಿಗೆ ಔಷಧಿಯು ಶೀಘ್ರವಾಗಿ ಫಲಕಾರಿಯಾಗುವುದು.

ಶ್ರದ್ಧಾ-ಭಕ್ತಿಗಳಿಂದ ಮನಃಪೂರ್ವಕವಾಗಿ ಅರ್ಥಪೂರ್ಣವಾಗಿ ಭಗವನ್ನಾಮೋಚ್ಚಾರಣೆಮಾಡುವುದರಲ್ಲಿಯೇ ಶಾಸ್ತ್ರಕ್ಕೆ ತಾತ್ಪರ್ಯ. ಆದರೆ ಹಾಗೆ ಮಾಡುವುದಕ್ಕೆ ಸಹಾಯವಾಗಲೆಂದು ಹೇಗಾದರೂ ಭಗವನ್ನಾಮವನ್ನು ಉಚ್ಚಾರಣೆ ಮಾಡಿಸುವುದಕ್ಕಾಗಿ ಈ ಇತಿಹಾಸವನ್ನು ಹೀಗೆ ಹೇಳಿದೆ : ಔಷಧಿಯನ್ನು ಸೇವಿಸದೇ ಅದರ ಹೆಸರನ್ನುಚ್ಚರಿಸಿದಷ್ಟರಿಂದಲೇ ರೋಗವು ವಾಸಿಯಾಗುವುದಿಲ್ಲ. ಹಾಗೆಯೇ ಬ್ರಹ್ಮ ಸಾಕ್ಷಾತ್ಕಾರದ ಅನುಭವವಿಲ್ಲದೇ ಸುಮ್ಮನೆ ಬ್ರಹ್ಮದ ಹೆಸರನ್ನು ಸಾರುವುದರಿಂದ ಮೋಕ್ಷವು ದೊರೆಯದು.

ನ ಗಚ್ಛತಿ ವಿನಾ ಪಾನಂ ವ್ಯಾಧಿರೌಷಧಶಬ್ದತಃ ।
ವಿನಾಽಪರೋಕ್ಷಾನುಭವಂ ಬ್ರಹ್ಮಶಬ್ದೈರ್ನ ಮುಚ್ಯತೇ ॥

ರಿಗೆ ಅಪಮಾನವನ್ನು ಮಾಡಿದರು. ಆ ಘಟನೆಯನ್ನು ಕೇಳಿದಾಗ ಯಮಧರ್ಮರಾಜನ ಪ್ರತಿಕ್ರಿಯೆ ಏನಾಯಿತು? ಅವನು ತನ್ನ ಭಟರಿಗೆ ಏನು ಉಪದೇಶಮಾಡಿದನು?—ಎಂಬುದನ್ನು ತಾವು ಕೃಪೆಯಿಟ್ಟು ನನಗೆ ತಿಳಿಸಬೇಕು.”

ಶ್ರೀಶುಕಮುನಿಗಳು ಆತನಿಗೆ ಹೀಗೆ ಉತ್ತರಿಸಿದರು : “ಶ್ರೀಭಗವಂತನ ದೂತರಿಂದ ತಮ್ಮ ಪ್ರಯತ್ನವು ವಿಫಲಗೊಳಿಸಲ್ಪಟ್ಟಿದ್ದನ್ನು ಗಮನಿಸಿದ ಯಮಭಟರು ತಮ್ಮ ಪ್ರಭುವಿನ ಬಳಿಗೆ ಹಿಂದಿರುಗಿ ಆತನಲ್ಲಿ ಹೀಗೆ ವಿಜ್ಞಾಪನೆ ಮಾಡಿದರು. (ಶ್ಲೋಕ 1-2)

“ಜೀಯಾ! ಜಗತ್ತಿನಲ್ಲಿರುವ ಜೀವಿಗಳು ಸಾತ್ತ್ವಿಕ, ರಾಜಸ, ತಾಮಸ ಅಥವಾ ಪುಣ್ಯ-ಪಾಪ ಮತ್ತು ಪುಣ್ಯ-ಪಾಪಗಳ ಬೆರಕೆ—ಎಂಬ ಮೂರು ಬಗೆಯ ಕರ್ಮಗಳನ್ನು ಆಚರಿಸುತ್ತಾರೆ. ಜೀವಿಗಳಿಗೆ ಆ ಕರ್ಮಗಳ ಫಲಗಳನ್ನು ಕೊಡುವ ಶಾಸಕರು ಈ ಪ್ರಪಂಚದಲ್ಲಿ ಎಷ್ಟು ಮಂದಿ ಇದ್ದಾರೆ? (ಶ್ಲೋಕ 3-4)

ಯದಿ ಸ್ಯುರ್ಬಹವೋ ಲೋಕೇ ಶಾಸ್ತಾರೋ ದಣ್ಡಧಾರಿಣಃ ।
ಕಸ್ಯ ಸ್ಯಾತಾಂ ನ ವಾ ಕಸ್ಯ ಮೃತ್ಯುಶ್ಚಾಮೃತಮೇವ ವಾ ॥೫॥

ಕಿಂತು ಶಾಸ್ತೃಬಹುತ್ವೇ ಸ್ಯಾದ್ಬಹೂನಾಮಿಹ ಕರ್ಮಿಣಾಮ್ ।
ಶಾಸ್ತೃತ್ವಮುಪಚಾರೋ ಹಿ ಯಥಾ ಮಣ್ಡಲವರ್ತಿನಾಮ್ ॥೬॥

ಶಿಕ್ಷೆಯನ್ನು ನೀಡುವ ಶಾಸಕರು ಬಹುಮಂದಿ ಇದ್ದಾರೆ—ಎಂದು ಹೇಳುವ ಪಕ್ಷದಲ್ಲಿ ಸುಖ ಯಾರಿಗೆ? ದುಃಖವು ಯಾರಿಗೆ? ಮೃತ್ಯುವು ಯಾರಿಗೆ? ಅಮೃತತ್ವವು ಯಾರಿಗೆ?—ಎಂಬ ವಿಷಯದಲ್ಲಿ ಏಕರೀತಿಯಾದ ವ್ಯವಸ್ಥೆಯೇ ಇಲ್ಲದೇ ಹೋಗುವುದು.* ಪ್ರಪಂಚದಲ್ಲಿ ಕರ್ಮಮಾಡು

---

* ಕೆಲವು ಶಾಸಕರು ‘ಈ ಜೀವಗಳಿಗೆ ಸುಖವುಂಟಾಗಲಿ’—ಎಂದು ವಿಧಾನ ಮಾಡಿದರೆ ಇನ್ನು ಕೆಲವರು ಶಾಸಕರು ‘ಅದೇ ಜೀವಗಳಿಗೆ ದುಃಖವುಂಟಾಗಲಿ’—ಎಂದು ವಿಧಾನಮಾಡಬಹುದು. ಆಗ ಶಾಸನದಲ್ಲಿ ಏಕರೂಪತೆ ಹೊರಟುಹೋಗುವುದು. ಎಲ್ಲ ಶಾಸಕರೂ ಐಕಮತ್ಯದಿಂದ ವರ್ತಿಸುತ್ತಾರೆ. ಒಬ್ಬರು ಹೇಳಿದುದನ್ನು ಮತ್ತೊಬ್ಬರು ವಿರೋಧಿಸುವುದಿಲ್ಲ—ಎಂದರೂ ಶಾಸನವು ನ್ಯಾಯಬದ್ಧವಾಗುವುದಿಲ್ಲ.

ವವರು ಬಹಳ ಮಂದಿ ಇರುವುದರಿಂದ ಅದಕ್ಕೆ ತಕ್ಕಂತೆ ಅವರ ಶಾಸಕರು ಹಲವು ಮಂದಿ ಇರಬೇಕು–ಎನ್ನುವುದಾದರೆ ಅದು ಸರಿಹೊಂದುವುದಿಲ್ಲ. ಸಮಾನವಾದ ಅಧಿಕಾರವುಳ್ಳ ಬಹುಮಂದಿ ಶಾಸಕರು ಇದ್ದರೆ ಅವ್ಯವಸ್ಥೆ ತಪ್ಪುವುದೇ ಇಲ್ಲ. ಆ ಶಾಸಕರಲ್ಲಿ ಅಧಿಕಾರಭೇದ ಇರುವ ಪಕ್ಷದಲ್ಲಿ ಅವರಲ್ಲಿ ಕೆಲವರ ಶಾಸಕತ್ವವು ಕೇವಲ ಔಪಚಾರಿಕವಾಗುವುದು. ಅವರು ಹೆಸರಿಗೆ ಮಾತ್ರ ಶಾಸಕರಾಗಿರುವರು. ಒಬ್ಬ ಸಾರ್ವಭೌಮನು ಇರುವಾಗ ಅವನ ಸಾಮಂತರಾಜರನ್ನು 'ಮಹಾಪ್ರಭುಗಳು, ಸಾರ್ವಭೌಮರು'–ಎಂದು ಕರೆದರೆ ಅದು ಕೇವಲ ಉಪಚಾರದ ಮಾತಾಗುವುದಲ್ಲವೇ?

ಆದುದರಿಂದ, ಪ್ರಭುವೇ! ನೀನೊಬ್ಬನೇ ಎಲ್ಲ ಪ್ರಾಣಿಗಳಿಗೂ ಮತ್ತು ಅವುಗಳ ಸ್ವಾಮಿಗಳಾದ ದೇವಾದಿಗಳಿಗೂ ಎಲ್ಲರಿಗೂ ಅಧೀಶ್ವರನಾಗಿರುವೆ ಯೆಂದು ನಾವು ತಿಳಿಯುತ್ತೇವೆ. ಜೀಯಾ! ಇಲ್ಲಿಯವರೆಗೂ ಪ್ರಪಂಚದಲ್ಲಿ ನೀನು ವಿಧಿಸಿದ ದಂಡನೆಯನ್ನು ಯಾರೂ ಅವಹೇಳನಮಾಡಿರಲಿಲ್ಲ. ಆದರೆ ಈಗ ತಾನೇ ನಾಲ್ಕು ಮಂದಿ ಅದ್ಭುತಶಕ್ತಿಯುಳ್ಳ ಸಿದ್ಧಪುರುಷರು ನಿನ್ನ ಆಜ್ಞೆಯನ್ನು ಉಲ್ಲಂಘಿಸಿಬಿಟ್ಟಿದ್ದಾರೆ. ನಿನ್ನ ಆಜ್ಞೆಗೆ ಅನುಸಾರವಾಗಿ ನಾವು ಒಬ್ಬ ಪಾಪಿಯನ್ನು ಯಾತನಾಗೃಹಕ್ಕೆ ಕರೆದುಕೊಂಡು ಬರುತ್ತಿದ್ದೆವು. ಆದರೆ ಅವರು ಬಲಾತ್ಕಾರದಿಂದ ನಿನ್ನ ಪಾಶಗಳನ್ನು ಕತ್ತರಿಸಿ ಹಾಕಿ ಆತನನ್ನು ಬಿಡುಗಡೆ ಮಾಡಿಬಿಟ್ಟರು. ಇದರ ರಹಸ್ಯವೇನೆಂಬುದನ್ನು ತಿಳಿಯ ಬಯಸುತ್ತೇವೆ. ಅದನ್ನು ಕೇಳುವ ಯೋಗ್ಯತೆ ಮತ್ತು ಅಧಿಕಾರಗಳು ನಮಗೆ ಇದ್ದ ಪಕ್ಷದಲ್ಲಿ ಅದನ್ನು ಹೇಳುವವನಾಗು. ನಾವು ಸೆಳೆದು ತರುತ್ತಿದ್ದ ಆ ಪಾತಕಿಯ ಬಾಯಿಂದ 'ನಾರಾಯಣ' ಎಂಬ ಶಬ್ದವು ಹೊರಬಂದಿತು. ಒಡನೆಯೇ ಆ ಸಿದ್ಧಪುರುಷರು 'ಹೆದರಬೇಡ! ಹೆದರಬೇಡ!' ಎನ್ನುತ್ತಾ ಅಲ್ಲಿಗೆ ಬಂದುಬಿಟ್ಟರು."

(ಶ್ಲೋಕ 7-10)

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

"ಎಲೈ ಭಾಗವತ ಶಿರೋಮಣಿಯೇ! ಕೇಳು. ತನ್ನ ದೂತರ ಪ್ರಶ್ನೆ

ಏಕೆಂದರೆ : ಕೆಲವು ಶಾಸಕರು ಅನ್ಯಾಯದ ಶಾಸನವನ್ನು ಮಾಡಿದರೂ ಉಳಿದ ಶಾಸಕರು ಅದನ್ನು ಒಪ್ಪಿಕೊಳ್ಳಬೇಕಾಗುವುದು. ಆಗ ನ್ಯಾಯದ ಏಕರೂಪತೆ ಹೊರಟುಹೋಗುವುದು. ಬಹುರಾಜಕತೆಯಲ್ಲಿ ಇರುವ ದೋಷಗಳು ಇವು.

ಯನ್ನು ಕೇಳಿ ದೇವಶಿರೋಮಣಿಯೂ ಲೋಕಪಾಲಕನೂ ಆದ ಶ್ರೀಭಗವಂತ ನಾದ ಯಮಧರ್ಮರಾಜನು ಪ್ರಸನ್ನನಾಗಿ ಶ್ರೀಹರಿಯ ಅಡಿದಾವರೆಗಳನ್ನು ಸ್ಮರಿಸುತ್ತಾ ಅವರಿಗೆ ಹೀಗೆಂದನು. (ಶ್ಲೋಕ 11)

ಯಮಧರ್ಮರಾಜನ ಉತ್ತರ :

ಪರೋ ಮದನ್ಯೋ ಜಗತಸ್ತಸ್ಥುಷಶ್ಚ
ಓಂ ಪ್ರೋತಂ ಪಟವದ್ಯತ್ರ ವಿಶ್ವಮ್ ।
ಯದಂಶತೋಽಸ್ಯ ಸ್ಥಿತಿಜನ್ಮನಾಶಾ
ನಸ್ಯೋತವದ್ಯಸ್ಯ ವಶೇ ಚ ಲೋಕಃ ॥೧೨॥

"ಎಲೈ ದೂತರೇ! ಈ ಚರಾಚರ ಜಗತ್ತಿಗೆಲ್ಲಾ ಮಹಾಪ್ರಭು ವಾದವನು ನನಗಿಂತಲೂ ಬೇರೊಬ್ಬನಿದ್ದಾನೆ. ಆತನಲ್ಲಿಯೇ ಈ ಇಡೀ ಜಗತ್ತು ದಾರವು ವಸ್ತ್ರದಲ್ಲಿ ಹಾಸು-ಹೊಕ್ಕಾಗಿ ಪೋಣಿಸಲ್ಪಟ್ಟಿರುವಂತೆ ಪೋಣಿಸಲ್ಪಟ್ಟಿದೆ. ಆತನ ವಶವರ್ತಿಗಳಾಗಿಯೇ ಇದರ ಸೃಷ್ಟಿ-ಸ್ಥಿತಿ-ಲಯ ಗಳನ್ನು ಮಹಾದೇವತೆಗಳು ನಡೆಸುತ್ತಿದ್ದಾರೆ. ಇಡೀ ಜಗತ್ತು ಮೂಗು ದಾರಹಾಕಲ್ಪಟ್ಟ ಗೂಳಿಯಂತೆ ಆತನ ಅಧೀನದಲ್ಲಿದೆ.

ನನ್ನ ಪ್ರೀತಿಯದೂತರೇ! ರೈತನು ತನ್ನ ಎತ್ತುಗಳನ್ನು ಮೊದಲು ಸಣ್ಣ ಸಣ್ಣ ಹಗ್ಗಗಳಲ್ಲಿ ಕಟ್ಟಿ ಆ ಹಗ್ಗಗಳನ್ನು ಒಂದು ದೊಡ್ಡ ಹಗ್ಗಕ್ಕೆ ಕಟ್ಟುವುದಿಲ್ಲವೇ? ಹಾಗೆಯೇ ಆ ಜಗದೀಶ್ವರನಾದ ಶ್ರೀಭಗವಂತನು ಬ್ರಾಹ್ಮಣಾದಿ ವರ್ಣಗಳನ್ನೂ ಬ್ರಹ್ಮಚರ್ಯವೇ ಮುಂತಾದ ಆಶ್ರಮಗಳನ್ನೂ ಅವರ ನಾಮಧೇಯಗಳೆಂಬ ಸಣ್ಣ ಸಣ್ಣ ಹಗ್ಗಗಳಲ್ಲಿ ಕಟ್ಟಿ ಮತ್ತೆ ಆ ಎಲ್ಲ ನಾಮಧೇಯಗಳನ್ನೂ ವೇದವಾಣಿಯೆಂಬ ದೊಡ್ಡ ಹಗ್ಗದಲ್ಲಿ ಕಟ್ಟಿಹಾಕಿರುತ್ತಾನೆ. ಹೀಗೆ ಸಮಸ್ತಜೀವಗಳೂ ನಾಮ ಮತ್ತು ಕರ್ಮಗಳೆಂಬ ಬಂಧನದಲ್ಲಿ ಕಟ್ಟಲ್ಪಟ್ಟು ಭಯಗ್ರಸ್ತರಾಗಿ ಆ ಮಹಾಪ್ರಭುವಿಗೇ ತಮ್ಮ ಸರ್ವಸ್ವವನ್ನೂ ಪೂಜಾಕಾಣಿಕೆಯನ್ನಾಗಿ ಸಮರ್ಪಿಸುತ್ತಿದ್ದಾರೆ. ನಾನು, ಮಹೇಂದ್ರನು, ನಿರ್ಋತಿಯು, ವರುಣನು, ಚಂದ್ರನು, ಅಗ್ನಿಯು, ಸ್ವಾಮಿ ಶ್ರೀಶಂಕರನು, ವಾಯುವು, ಸೂರ್ಯನು, ಶ್ರೀಬ್ರಹ್ಮದೇವರು, ಹನ್ನೆರಡು ಮಂದಿ ಆದಿತ್ಯರು, ವಿಶ್ವೇದೇವರು, ಅಷ್ಟವಸುಗಳು, ಸಾಧ್ಯರು, ನಲವ

ತ್ತೊಂಬತ್ತು ಮಂದಿ ಮರುದ್ದೇವತೆಗಳು, ಸಿದ್ಧರು, ಏಕಾದಶರುದ್ರರು, ಭೃಗುವೇ ಮುಂತಾದ ಸಪ್ತರ್ಷಿಗಳು–ಇವರೆಲ್ಲರೂ ಸತ್ತ್ವಗುಣಪ್ರಧಾನರಾದ ವರು. ರಜೋಗುಣ-ತಮೋಗುಣಗಳಿಂದ ರಹಿತರಾದವರು. ಹೀಗಿದ್ದರೂ ಇವರೆಲ್ಲರೂ ಆ ಶ್ರೀಭಗವಂತನ ಮಾಯೆಗೆ ಅಧೀನರಾಗಿರುವರು. ಆ ಶ್ರೀಭಗವಂತನು ಯಾವಾಗ ಯಾವ ರೂಪದಿಂದ, ಯಾವ ಕಾರ್ಯವನ್ನು ಮಾಡುತ್ತಾನೆಂಬುದನ್ನು ಅರಿಯರು. ಹೀಗಿರುವಾಗ ಇತರರ ಮಾತೇನು?

ಎಲೈ ದೂತರೇ! ಮಡಕೆ, ಕುಡಿಕೆ, ಬಟ್ಟೆಗಳೇ ಮುಂತಾದ ರೂಪ ವುಳ್ಳ ಪದಾರ್ಥಗಳನ್ನು ಪ್ರಕಾಶಪಡಿಸುವುದು ಕಣ್ಣು. ಆದರೆ ಆ ಪದಾರ್ಥ ಗಳು ಆ ಕಣ್ಣನ್ನು ನೋಡಲಾರವಲ್ಲವೇ? ಹಾಗೆಯೇ ಅಂತಃಕರಣದಲ್ಲಿ ತಮಗೆ ಸಾಕ್ಷಿಯಾಗಿರುವ ಆ ಪರಮಾತ್ಮನನ್ನು ಯಾವುದೇ ಪ್ರಾಣಿಯೂ ಇಂದ್ರಿಯ, ಮನಸ್ಸು, ಪ್ರಾಣ, ಹೃದಯ ಅಥವಾ ವಾಣಿಯೇ ಮುಂತಾದ ಯಾವುದೇ ಸಾಧನದಿಂದಲೂ ತಿಳಿಯಲಾರದು. ಸರ್ವರಿಗೂ ಸ್ವಾಮಿಯಾಗಿ ಸರ್ವಸ್ವತಂತ್ರನಾಗಿ ಮಾಯೆಗೆ ಅಧಿಪತಿಯಾಗಿರುವ ಆ ಪುರುಷೋತ್ತಮನ ದೂತರೂ ಆತನಂತೆಯೇ ಪರಮಸುಂದರವಾದ ರೂಪ, ಗುಣ ಮತ್ತು ಸ್ವಭಾವಗಳಿಂದ ಸಂಪನ್ನರಾಗಿ ಈ ಲೋಕದಲ್ಲಿ ಸಾಮಾನ್ಯವಾಗಿ ಸಂಚರಿಸು ತ್ತಿರುವರು. ಆ ಶ್ರೀಭಗವಂತನಾದ ವಿಷ್ಣುವಿನ, ದೇವಪೂಜಿತರೂ ಪರಮಾ ದ್ಭುತರೂ ಆದ ಪಾರ್ಷದರ ದರ್ಶನವು ಅತ್ಯಂತದುರ್ಲಭವಾದುದು. ಅವರು ಶ್ರೀಭಗವಂತನ ಭಕ್ತಜನರನ್ನು–ಅವರ ಶತ್ರುಗಳ ದೆಸೆಯಿಂದಲೂ, ನನ್ನ ದೆಸೆ ಯಿಂದಲೂ ಮತ್ತು ಅಗ್ನಿಯೇ ಮುಂತಾದ ಸಮಸ್ತವಿಪತ್ತುಗಳ ದೆಸೆ ಯಿಂದಲೂ ಸದಾ ಸಂರಕ್ಷಣೆಮಾಡುತ್ತಿರುತ್ತಾರೆ. ಸಾಕ್ಷಾತ್ ಶ್ರೀಭಗವಂತನೇ ನಿರ್ಮಾಣಮಾಡಿರುವ ಧರ್ಮದ ಮರ್ಯಾದೆಯನ್ನು ಋಷಿಗಳಾಗಲೀ, ದೇವತೆಗಳಾಗಲೀ, ಸಿದ್ಧಗಣಗಳಾಗಲೀ–ಯಾರೂ ಅರಿಯಲಾರರು. ಹೀಗಿರು ವಾಗ ಮನುಷ್ಯರು, ವಿದ್ಯಾಧರರು, ಚಾರಣರು ಮತ್ತು ಅಸುರರೇ ಮುಂತಾ ದವರು ಹೇಗೆ ಅರಿತಾರು? ಶ್ರೀಭಗವಂತನು ನಿರ್ಮಿಸಿರುವ ಭಾಗವತ ಧರ್ಮವು ಅತ್ಯಂತಪರಿಶುದ್ಧವಾದುದು ಮತ್ತು ಅತ್ಯಂತ ಗೋಪ್ಯವಾದುದು. ತಿಳಿಯಲು ಅತಿಕಷ್ಟವಾದುದು. ಆದರೆ ಅದನ್ನು ತಿಳಿದುಕೊಂಡವರು ಶ್ರೀಭಗವದ್ರೂಪವನ್ನೇ ಹೊಂದುವರು. ಭಾಗವತಧರ್ಮದ ರಹಸ್ಯವನ್ನು

ಬ್ರಹ್ಮದೇವರು, ದೇವರ್ಷಿನಾರದರು, ಶ್ರೀಭಗವಂತನಾದ ಶಂಕರನು, ಸನತ್ಕುಮಾರನು, ಕಪಿಲದೇವರು, ಸ್ವಾಯಂಭುವಮನುವು, ಪ್ರಹ್ಲಾದನು, ಜನಕಮಹಾರಾಜನು, ಭೀಷ್ಮಪಿತಾಮಹರು, ಬಲಿಚಕ್ರವರ್ತಿಯು, ಶುಕ ಮಹರ್ಷಿಗಳು ಮತ್ತು ಯಮಧರ್ಮರಾಜನಾದ ನಾನು–ಈ ಹನ್ನೆರಡು ಮಂದಿ ಮಾತ್ರವೇ ತಿಳಿದಿರುವೆವು. ಈ ಜಗತ್ತಿನಲ್ಲಿ ಜೀವಗಳ ಪರಮ ಕರ್ತವ್ಯವೂ, ಪರಮಧರ್ಮವೂ ಯಾವುದು?–ಎಂದರೆ : ನಾಮಸಂಕೀರ್ತನೆಯೇ ಮುಂತಾದ ಉಪಾಯಗಳಿಂದ ಶ್ರೀಭಗವಂತನ ಪಾದಾರವಿಂದಗಳಲ್ಲಿ ಭಕ್ತಿಯನ್ನು ಪಡೆಯುವುದು. ಶ್ರೀಭಗವಂತನ ನಾಮದ ಉಚ್ಚಾರಣೆಯ ಮಹಿಮೆಯು ಎಂತಹುದು?–ಎಂಬುದನ್ನು ನೋಡಿರಿ. ಅಜಾಮಿಳನಂತಹ ಪಾಪಿಯು ಒಂದು ಬಾರಿ ನಮೋಚ್ಚಾರಣೆಯನ್ನು ಮಾಡಿದಷ್ಟರಿಂದಲೇ ಮೃತ್ಯುಪಾಶದಿಂದ ಬಿಡುಗಡೆ ಹೊಂದಿಬಿಟ್ಟನು. ಏಕೆಂದರೆ : ಆ ಮಹಾ ಪಾಪಿಯು ಮರಣಕಾಲದಲ್ಲಿ ತನ್ನ ಚಂಚಲವಾದ ಚಿತ್ತದಿಂದ 'ನಾರಾಯಣ' ಎಂದು ತನ್ನ ಪುತ್ರನ ಹೆಸರನ್ನು ಮಾತ್ರವೇ ಉಚ್ಚರಿಸಿದನು. ಆ ನಾಮಾಭ್ಯಾಸ ಮಾತ್ರದಿಂದಲೇ ಆತನ ಪಾಪಗಳೆಲ್ಲವೂ ಕ್ಷೀಣಿಸಿ ಹೋಗಿ ಆತನು ಮುಕ್ತಿಯನ್ನೇ ಪಡೆದುಬಿಟ್ಟನು. ದೊಡ್ಡ-ದೊಡ್ಡ ವಿದ್ವಾಂಸರ ಮನಸ್ಸೂ ಕೆಲವೊಮ್ಮೆ ಶ್ರೀಭಗವಂತನ ಮಾಯೆಗೆ ಮರುಳಾಗಿಬಿಡುವುದಲ್ಲಾ? ಎಂತಹ ಖೇದದ ವಿಷಯ! ಪರಿಪಕ್ವವಾದ ಫಲದ ಕಡೆಗೆ ಮನಸ್ಸನ್ನು ಒಯ್ಯದೇ ಆಕರ್ಷಕವಾದ ಹೂವಿನಂತಿರುವ ಅರ್ಥವಾದ ರೂಪವಾದ ವೇದವಾಣಿಯ ಮೋಹಕ್ಕೆ ಒಳಗಾಗಿ, ಅವರು ಯಜ್ಞ-ಯಾಗಾದಿ ರೂಪವಾದ ದೊಡ್ಡ- ದೊಡ್ಡ ಕರ್ಮಗಳಲ್ಲಿಯೇ ಆಸಕ್ತರಾಗಿರುತ್ತಾರೆ. ಪರಮಫಲವನ್ನು ಕೊಡುವ ಅತ್ಯಂತಸುಗಮವಾಗಿರುವ ಈ ಭಗವನ್ನಾಮದ ಮಹಿಮೆಯ ಕಡೆಗೆ ಗಮನವನ್ನೇ ಕೊಡುವುದಿಲ್ಲ.* (ಶ್ಲೋಕ 13-25)

---

* 'ತ್ರಯ್ಯಾಂ ಜಡೀಕೃತಮತಿರ್ಮಧುಪುಷ್ಪಿತಯಾಂ ವೈತಾನಿಕೇ ಮಹತಿ ಕರ್ಮಣಿ ಯುಜ್ಯಮಾನಃ–ಇಲ್ಲಿ ವೇದವಾಣಿಯನ್ನು ಆಕರ್ಷಕವಾದ ಪುಷ್ಪಕ್ಕೆ ಮಾತ್ರ ಸದೃಶವೆಂದು ಹೇಳಿ ವೇದವನ್ನು ನಿಂದಿಸಿದೆಯೆಂದು ತಿಳಿಯಬಾರದು. ವೇದವಾಕ್ಯಗಳ ಪರಮತಾತ್ಪರ್ಯವನ್ನು ಅರಿಯದೇ ಇರುವ ಜನರನ್ನು ಮಾತ್ರ ನಿಂದಿಸಿದೆ. ತ್ರಿಗುಣಾತ್ಮಕವಾದ ಫಲಗಳನ್ನು ಹೇಳುವ ವಾಕ್ಯಗಳಿಗೆ ಮರುಳಾಗಿ ತ್ರಿಗುಣಾತೀತ

ಏವಂ ವಿಮೃಶ್ಯ ಸುಧಿಯೋ ಭಗವತ್ಯನನ್ತೇ
ಸರ್ವಾತ್ಮನಾ ವಿದಧತೇ ಖಲು ಭಾವಯೋಗಮ್ ।
ತೇ ಮೇ ನ ದಣ್ಡಮರ್ಹನ್ತ್ಯಥ ಯದ್ಯಮೀಷಾಂ
ಸ್ಯಾತ್ಪಾತಕಂ ತದಪಿ ಹನ್ತ್ಯುರುಗಾಯವಾದಃ ॥೨೬॥

ನನ್ನ ಪ್ರಿಯರಾದ ಸೇವಕರೇ! ಭಗವನ್ನಾಮದ ಅವಲಂಬನೆಯೇ ಪರಮಪುರುಷಾರ್ಥವನ್ನು ಪಡೆಯುವುದಕ್ಕೆ ಸುಲಭತಮವಾದ ಮಾರ್ಗವು. ಅಲ್ಪಫಲಗಳನ್ನು ಕೊಡುವ ಕರ್ಮಗಳ ಮಹಿಮೆಯನ್ನು ಹೊಗಳುವ ಮಾತುಗಳಿಗೆ ಮೋಸ ಹೋಗಬಾರದು–ಎಂದು ವಿಚಾರಮಾಡಿ ಬುದ್ಧಿವಂತರು ಶ್ರೀಭಗವಂತನಾದ ಅನಂತನಲ್ಲಿಯೇ ತಮ್ಮ ಸಂಪೂರ್ಣವಾದ ಮನಸ್ಸನ್ನು ಭಕ್ತಿಯಿಂದ ನೆಲೆಗೊಳಿಸುತ್ತಾರೆ. ಇವರು ನನ್ನ ದಂಡನೆಗೆ ಪಾತ್ರರಾಗುವುದಿಲ್ಲ. ಇಂತಹವರು ಪಾಪವನ್ನು ಮಾಡುವುದೇ ಇಲ್ಲ. ಇವರಿಂದ ಕೆಲವು ವೇಳೆ ಅಕಸ್ಮಾತ್ತಾಗಿ ಯಾವುದಾದರೂ ಪಾತಕವು ನಡೆದರೂ ಇವರು ಮಾಡಿದ ನಾರಾಯಣನ ಗುಣಗಾನವು ಆ ಪಾಪವನ್ನು ಒಡನೆಯೇ ನಾಶಪಡಿಸಿಬಿಡುವುದು.

ಯಾವ ಸಮದರ್ಶಿಗಳಾದ ಸಾಧುಗಳು ಶ್ರೀಭಗವಂತನಲ್ಲಿಯೇ ಸಂಪೂರ್ಣವಾಗಿ ಶರಣಾಗತರಾಗಿ 'ಆತನೇ ಸಾಧ್ಯ ಮತ್ತು ಸಾಧನ ಎರಡೂ ಆಗಿದ್ದಾನೆ. ಆತನ್ನು ಬಿಟ್ಟು ಬೇರೆ ಯಾವ ಗತಿಯೂ ಇಲ್ಲ'–ಎಂದು ಆತನಲ್ಲಿ ಮಹಾವಿಶ್ವಾಸವನ್ನಿಟ್ಟು ನಿರ್ಭಯರಾಗಿರುತ್ತಾರೆಯೋ–ಅಂತಹ ಮಹಾತ್ಮರ ಪವಿತ್ರವಾದ ಚರಿತ್ರೆಯನ್ನು ದೊಡ್ಡ-ದೊಡ್ಡ ದೇವತೆಗಳೂ ಮತ್ತು ಸಿದ್ಧರೂ ಕೂಡ ಪ್ರೇಮದಿಂದ ಹಾಡುತ್ತಾರೆ. ಶ್ರೀಭಗವಂತನ ಗದಾಯುಧವು ಅವರನ್ನು ಸದಾ ರಕ್ಷಿಸುತ್ತಿರುವುದು. ನೀವು ಎಂದಿಗೂ ಯಾವ ಕಾರಣದಿಂದಲೂ ಅವರ ಬಳಿಗೆ ಸುಳಿಯಬಾರದು. ಅವರಿಗೆ ದಂಡನೆಯನ್ನು ನೀಡುವ ಅಧಿಕಾರವು ನಿಮಗೂ ಇಲ್ಲ. ಸಾಕ್ಷಾತ್ ಕಾಲ

ವಾದ ಪರಮಾತ್ಮವೆಂಬ ಪರಮಫಲವನ್ನು ಹೇಳುವ ವೇದದ ಪರಮಾರ್ಥವನ್ನು ಮರೆಯಬಾರದು. ಹೋಲಿಕೆ : 'ಯಾಮಿಮಾಂ ಪುಷ್ಪಿತಾಂ ವಾಚಂ ಪ್ರವದನ್ತ್ಯವಿಪಶ್ಚಿತಃ' 'ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋಭವಾರ್ಜುನ' (ಶ್ರೀಗೀತಾ)

ಪುರುಷನಿಗೂ ಇಲ್ಲ. ಮಹಾಪರಮಹಂಸರು ಇಡೀ ಜಗತ್ತಿನ ಮತ್ತು ತಮ್ಮ ಶರೀರದ ವಿಷಯದಲ್ಲಿಯೂ ಅಹಂಕಾರ-ಮಮಕಾರಗಳನ್ನು ತೊರೆದು ಅಕಿಂಚನರಾಗಿ ರಸವನ್ನು ಸವಿಯುವ ಲೋಭದಿಂದ ಮುಕುಂದನ ಅಡಿದಾವರೆಗಳ ಮಕರಂದವನ್ನು ಪಾನಮಾಡುತ್ತಿರುವರು. ಆ ದಿವ್ಯರಸಕ್ಕೆ ವಿಮುಖರಾಗಿ ನರಕದ ಮಾರ್ಗದಲ್ಲಿ ಪ್ರಯಾಣಮಾಡಲು ಆಸೆಯಿಂದ ತೊಡಗಿರುವ ಯಾವ ಮನುಷ್ಯರುಂಟೋ–ಅವರನ್ನು ಮಾತ್ರ ನನ್ನ ಬಳಿಗೆ ಅಡಿಗಡಿಗೆ ಕರೆತನ್ನಿರಿ. ಯಾರ ನಾಲಿಗೆಯು ಶ್ರೀಭಗವಂತನ ದಿವ್ಯವಾದ ಗುಣಗಳನ್ನೂ ಮತ್ತು ನಾಮಗಳನ್ನೂ ಉಚ್ಚರಿಸುವುದಿಲ್ಲವೋ, ಯಾರ ಚಿತ್ತವು ಆ ಶ್ರೀಭಗವಂತನ ಅಡಿದಾವರೆಗಳ ಚಿಂತನೆಮಾಡುವುದಿಲ್ಲವೋ ಮತ್ತು ಯಾರ ತಲೆಯು ಆ ಶ್ರೀಕೃಷ್ಣಪರಮಾತ್ಮನ ಪಾದಾರವಿಂದಗಳಿಗೆ ನಮಸ್ಕಾರಮಾಡುವುದಿಲ್ಲವೋ–ಅಂತಹ ಭಗವತ್ಸೇವೆಗೆ ವಿಮುಖರಾದ ಪಾಪಿಗಳನ್ನು ಮಾತ್ರ ಇಲ್ಲಿಗೆ ಕರೆತನ್ನಿರಿ. ನಮ್ಮ ಪಾರ್ಷದರು ಇಂದು ಶ್ರೀಭಗವಂತನ ಪಾರ್ಷದರಲ್ಲಿ ಅಪರಾಧವನ್ನೆಸಗಿ ಶ್ರೀಭಗವಂತನಲ್ಲಿಯೇ ಅಪಚಾರಮಾಡಿದ್ದಾರೆ. ನನ್ನ ದೂತರ ಈ ಅಪರಾಧವು ನನ್ನ ಅಪರಾಧವೇ ಆಗಿದೆ. ಪುರಾಣಪುರುಷನಾದ ಆ ಭಗವಾನ್ ಶ್ರೀಮನ್ನಾರಾಯಣನು ನಮ್ಮ ಈ ಅಪರಾಧವನ್ನು ಕ್ಷಮಿಸಲಿ. ನಾವು ಅಜ್ಞಾನಿಗಳಾಗಿದ್ದರೂ ಅವನ ಸ್ವಜನರಾಗಿ ಅವನ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸಲು ಸದಾ ಕೈಜೋಡಿಸಿಕೊಂಡು ಸಿದ್ಧರಾಗಿರುವ ಸೇವಕರಲ್ಲವೇ! ಆದುದರಿಂದ ಮಹಾಮಹಿಮನಾದ ಶ್ರೀಭಗವಂತನು ನಮ್ಮನ್ನು ಕ್ಷಮಿಸುವುದೇ ಉಚಿತವು. ಸರ್ವಾಂತರ್ಯಾಮಿಯೂ ಸದಾ ಏಕರಸನೂ ಆಗಿರುವ ಆ ಶ್ರೀಭಗವಂತ ನಾದ ಮಹಾಪ್ರಭು ಅನಂತನಿಗೆ ನಮ್ಮ ನಮಸ್ಕಾರಗಳು.” (ಶ್ಲೋಕ 27-30)

ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಿದ್ದಾರೆ :

“ಎಲೈ ರಾಜೇಂದ್ರನೇ! ಶ್ರೀಭಗವಂತನ ಗುಣಗಳನ್ನೂ, ಲೀಲೆ ಗಳನ್ನೂ ಮತ್ತು ನಾಮಗಳನ್ನೂ ಕೀರ್ತನೆಮಾಡುತ್ತಿರುವುದೇ ಸಮಸ್ತಮಹಾ ಪಾತಕಗಳಿಗೂ ಸರ್ವೋತ್ತಮವಾದ ಪ್ರಾಯಶ್ಚಿತ್ತವು. ಸಮಸ್ತಪಾಪವಾಸನೆ ಗಳನ್ನೂ ನಿರ್ಮೂಲಗೊಳಿಸುವ ಕಟ್ಟಕಡೆಯ ಪ್ರಾಯಶ್ಚಿತ್ತವು. ಅದರಿಂದಲೇ

ಸಮಸ್ತಜಗತ್ತಿಗೂ ಕಲ್ಯಾಣವುಂಟಾಗುವುದು—ಎಂದು ತಿಳಿಯಪ್ಪಾ, ಶ್ರೀಭಗವಂತನ ಉದಾರವೂ ಕೃಪಾಪೂರ್ಣವೂ ಆಗಿರುವ ಚರಿತ್ರೆಗಳ ಶ್ರವಣ-ಸಂಕೀರ್ತನೆಗಳನ್ನು ಮತ್ತೆ ಮತ್ತೆ ಮಾಡುತ್ತಿರುವ ಮಹಾತ್ಮರ ಹೃದಯಗಳಲ್ಲಿ ಪರಮಪ್ರೇಮರೂಪವಾದ ಭಕ್ತಿಯು ಜನಿಸುವುದು. ಆ ಭಕ್ತಿಯಿಂದ ಉಂಟಾಗುವಷ್ಟು ಆತ್ಮಶುದ್ಧಿಯು ಕೃಚ್ಛ್ರ-ಚಾಂದ್ರಾಯಣಗಳೇ ಮುಂತಾದ ವ್ರತಗಳಿಂದಲೂ ಉಂಟಾಗುವುದಿಲ್ಲ. ಭಗವಂತನಾದ ಶ್ರೀಕೃಷ್ಣನ ಪಾದಾರವಿಂದಗಳ ರಸವನ್ನು ಸವಿಯುವುದರಲ್ಲಿಯೇ ಆಸಕ್ತಿಯುಳ್ಳ ದುಂಬಿ ಯಂತಿರುವ ಜನರು—ಆರಂಭದಲ್ಲಿ ಮಾತ್ರ ರಮಣೀಯವಾಗಿ, ಅನಂತರ ದುಃಖವನ್ನೇ ಉಂಟುಮಾಡುವ ವಿಷಯಗಳಲ್ಲಿ ರಮಿಸಲು ಮರಳಿ ಬರುವುದಿಲ್ಲ. ಅವುಗಳ ಕಹಿಯ ಅನುಭವವು ಈ ಹಿಂದೆಯೇ ಅವರಿಗೆ ಆಗಿರುವುದಷ್ಟೇ! ಶ್ರೀಭಗವತ್ಪಾದಾರವಿಂದಗಳ ಆ ದಿವ್ಯರಸಕ್ಕೆ ವಿಮುಖರಾಗಿ ವಾಸನೆಗಳಿಂದ ವಿವೇಕಬುದ್ಧಿಯನ್ನು ಕಳೆದುಕೊಂಡಿರುವ ಜನರು ತಾನೇ ಪಾಪಪರಿಹಾರಕ್ಕೋಸ್ಕರ ಮತ್ತೆ ಮತ್ತೆ ಇತರ ಪ್ರಾಯಶ್ಚಿತ್ತಗಳನ್ನೂ ಮಾಡಿಕೊಳ್ಳುವರು! ಇದರಿಂದ ಆಗುವುದಾದರೂ ಏನು?—ಎಂದರೆ ಅವರ ಕರ್ಮವಾಸನೆಯೂ ಹೋಗುವುದಿಲ್ಲ ಮತ್ತು ಅದೇ ದೋಷವೇ ಅವರಿಂದ ಮತ್ತೆ ಮತ್ತೆ ಆಗುತ್ತಿರುವುದು.''

ಶ್ರೀಶುಕಮುನಿಗಳು ಹೇಳುತ್ತಾರೆ :

ಮಹಾರಾಜ! ತಮ್ಮ ಪ್ರಭುವಾದ ಯಮಧರ್ಮರಾಜನ ಬಾಯಿಂದ ಹೀಗೆ ಶ್ರೀಭಗವಂತನ ಮಹಿಮೆಯನ್ನು ಕೇಳಿ ಅದನ್ನು ಸ್ಮರಣೆಮಾಡಿದ ಯಮದೂತರಿಗೆ ಎಣೆಯಿಲ್ಲದ ಆಶ್ಚರ್ಯವುಂಟಾಯಿತು. ಅಂದಿನಿಂದ ಅವರು ಅವನ ಮಾತುಗಳಲ್ಲಿ ನಂಬಿಕೆಯನ್ನಿಟ್ಟು, ತಮಗೆ ಎಲ್ಲಿ ನಾಶವುಂಟಾ ಗುವುದೋ—ಎಂಬ ಶಂಕೆಯಿಂದ ಶ್ರೀಭಗವಂತನನ್ನು ಆಶ್ರಯಿಸಿರುವ ಭಕ್ತರ ಬಳಿಗೆ ಸುಳಿಯಲು ಹಿಂಜರಿಯುತ್ತಿದ್ದಾರೆ. ಆ ಮಹಾತ್ಮರ ಮೇಲೆ ದೃಷ್ಟಿ ಯನ್ನು ಬೀರುವುದಕ್ಕೂ ಅವರು ಹೆದರುತ್ತಾರೆ. ಈ ಇತಿಹಾಸವು ಅತ್ಯಂತ ಗೋಪ್ಯವಾದ ಮಹಾರಹಸ್ಯವು. ಮಲಯಪರ್ವತದಲ್ಲಿ ಬೆಳಗುತ್ತಿರುವ ಶ್ರೀಭಗವಂತರಾದ ಅಗಸ್ತ್ಯಮಹಾಮುನಿಗಳು ಅಲ್ಲಿ ಶ್ರೀಮನ್ನಾರಾಯಣ

ನನ್ನು ಪೂಜಿಸುತ್ತಿರುವಾಗ ಇದನ್ನು ನನಗೆ ಹೇಳಿದ್ದರು. ಅದನ್ನೇ ನಿನಗೆ ನಾನು ವರ್ಣಿಸಿರುವೆನು.” (ಶ್ಲೋಕ 31-15)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಷಷ್ಠಸ್ಕಂಧದ ೩ನೆಯ ಅಧ್ಯಾಯವು ಮುಗಿಯಿತು.

ಷಷ್ಠಸ್ಕಂಧ ೪ನೆಯ ಅಧ್ಯಾಯ

ದಕ್ಷನಿಂದ ಶ್ರೀಭಗವಂತನ ಸ್ತುತಿ ಮತ್ತು ಭಗವಂತನು ಆವಿರ್ಭವಿಸಿದುದು

ಅಜಾಮಿಳನ ಕಥೆಯನ್ನು ಕೇಳಿ ಸಂತುಷ್ಟನಾದ ಪರೀಕ್ಷಿದ್ರಾಜನು ಶುಕಮುನಿಗಳಲ್ಲಿ ಹೀಗೆ ಪ್ರಾರ್ಥನೆ ಮಾಡಿದನು :

ದೇವಾಸುರನೃಣಾಂ ಸರ್ಗೋ ನಾಗಾನಾಂ ಮೃಗಪಕ್ಷಿಣಾಮ್ ।
ಸಮಾಸಿಕಸ್ತ್ವಯಾ ಪ್ರೋಕ್ತೋ ಯಸ್ತು ಸ್ವಾಯಮ್ಭುವೇಽನ್ತರೇ ॥೧॥

ತಸ್ಯೈವ ವ್ಯಾಸಮಿಚ್ಛಾಮಿ ಜ್ಞಾತುಂ ತೇ ಭಗವನ್ಯಥಾ ।
ಅನುಸರ್ಗಂ ಯಯಾ ಶಕ್ತ್ಯಾ ಸಸರ್ಜ ಭಗವಾನ್ಪರಃ ॥೨॥

“ಮಹಾತ್ಮರೇ! ಸ್ವಾಯಂಭುವಮನ್ವಂತರದಲ್ಲಿ ದೇವತೆಗಳು, ಅಸುರರು, ಮನುಷ್ಯರು, ಸರ್ಪಗಳು ಮತ್ತು ಪಶು-ಪಕ್ಷಿಗಳು ಇವರೇ ಮುಂತಾದವರ ಸೃಷ್ಟಿಯು ಹೇಗೆ ಆಯಿತೆಂಬುದನ್ನು ಈ ಹಿಂದೆ ಸಂಕ್ಷೇಪ ವಾಗಿ ತಿಳಿಸಿದ್ದೀರಿ. ಅದನ್ನೇ ವಿಸ್ತಾರವಾಗಿ ತಿಳಿಯಲು ಬಯಸುತ್ತಿದ್ದೇನೆ. ಪ್ರಕೃತಿಯೇ ಮುಂತಾದ ಕಾರಣಗಳಿಗೂ ಪರಮಕಾರಣನಾಗಿರುವ ಶ್ರೀಭಗವಂತನು ತನ್ನ ಯಾವ ಶಕ್ತಿಯಿಂದ ಯಾವ ರೀತಿಯಲ್ಲಿ ಅನಂತರದ ಸೃಷ್ಟಿಯನ್ನು ಮಾಡಿದನು?–ಎಂಬುದನ್ನು ತಿಳಿಯಬಯಸುತ್ತೇನೆ, ಪೂಜ್ಯರೇ!”

ಸೂತಪುರಾಣಿಕರು ಶೌನಕಾದಿ ಮುನಿಗಳಿಗೆ ಹೇಳುತ್ತಾರೆ :

ಮಹರ್ಷಿಗಳೇ! ಮಹಾಯೋಗಿವರ್ಯರಾದ ವ್ಯಾಸಪುತ್ರರಾದ ಶ್ರೀಶುಕಮುನಿಗಳು ಪರೀಕ್ಷಿದ್ರಾಜನ ಆ ಪ್ರಶ್ನೆಯನ್ನು ಅಭಿನಂದಿಸುತ್ತಾ ಅದಕ್ಕೆ ಉತ್ತರವನ್ನು ಹೀಗೆ ಅಪ್ಪಣೆಕೊಡಿಸಿದರು :

ಶ್ರೀಶುಕಮಹರ್ಷಿಗಳು ಉತ್ತರ :

“ಎಲೈ ರಾಜೇಂದ್ರನೇ! ಪ್ರಾಚೀನಬರ್ಹಿಮಹಾರಾಜನ ಹತ್ತು ಮಂದಿ ಪುತ್ರರಾದ ಪ್ರಚೇತಸರು ಸಮುದ್ರದಿಂದ ಹೊರಕ್ಕೆ ಬಂದಾಗ ಇಡೀ ಭೂಮಂಡಲವನ್ನು ವೃಕ್ಷಗಳು ಆವರಿಸಿಕೊಂಡಿದ್ದನ್ನು ಕಂಡರು. ಆಗ ಅವರಿಗೆ ವೃಕ್ಷಗಳ ಮೇಲೆ ತುಂಬಾ ಕೋಪವುಂಟಾಯಿತು. ಅವರು ಆಚರಿಸಿದ್ದ ತಪಸ್ಸಿನ ಬಲವು ಆ ಕ್ರೋಧದ ಅಗ್ನಿಯನ್ನು ಹವಿಸ್ಸಿನಂತೆ ಭುಗಿಲೆಬ್ಬಿಸಿತು. ಒಡನೆಯೇ ಅವರು ಆ ವೃಕ್ಷಗಳನ್ನು ಸುಟ್ಟುಹಾಕುವುದಕ್ಕಾಗಿ ತಮ್ಮ ಬಾಯಿಂದ ಗಾಳಿಯನ್ನೂ, ಬೆಂಕಿಯನ್ನೂ ಸೃಷ್ಟಿಮಾಡಿದರು. ಅವರು ಸೃಷ್ಟಿಸಿದ ಆ ಅಗ್ನಿ-ವಾಯುಗಳು ಆ ವೃಕ್ಷಗಳನ್ನು ಸುಟ್ಟುಹಾಕತೊಡಗಿದುವು. ಆಗ ವೃಕ್ಷಗಳ ರಾಜಾಧಿರಾಜನಾದ ಚಂದ್ರದೇವನು ಅವರ ಕೋಪವನ್ನು ಶಮನಗೊಳಿಸುತ್ತಾ ಹೀಗೆಂದನು : “ಎಲೈ ಮಹಾಭಾಗ್ಯಶಾಲಿಗಳಾದ ಪ್ರಚೇತಸರೇ! ಈ ವೃಕ್ಷಗಳು ಅತ್ಯಂತ ಶೋಚನೀಯವಾದ ಸ್ಥಿತಿಯಲ್ಲಿವೆ. ನೀವು ಈ ಗಿಡ-ಮರಗಳಿಗೆ ದ್ರೋಹವನ್ನು ಮಾಡುವುದು ಉಚಿತವಲ್ಲ. ಏಕೆಂದರೆ : ನೀವು ಪ್ರಜಾಪತಿಗಳು. ಪ್ರಜೆಗಳನ್ನು ಅಭಿವೃದ್ಧಿಪಡಿಸಬೇಕೆಂದು ಬಯಸುವವರು. ಎಲೈ ಮಹಾತ್ಮರೇ! ಪ್ರಜಾಪತಿಗಳಿಗೆಲ್ಲಾ ಅಧಿಪತಿಯೂ ಅವಿನಾಶಿಯೂ ಆಗಿರುವ ಶ್ರೀಹರಿಯು ಈ ಸಮಸ್ತ ವನಸ್ಪತಿಗಳನ್ನೂ ಮತ್ತು ಔಷಧಿಗಳನ್ನೂ ಪ್ರಜೆಗಳ ಹಿತಕೋಸ್ಕರ ಅವರ ಆಹಾರಕ್ಕಾಗಿ ಆದಿಯಲ್ಲಿ ಸೃಷ್ಟಿಮಾಡಿರುವನಲ್ಲವೇ? ಲೋಕದಲ್ಲಿ ಮನುಷ್ಯರೇ ಮುಂತಾದ ಸಂಚಾರ ಮಾಡುವ ಪ್ರಾಣಿಗಳಿಗೆ ವೃಕ್ಷವೇ ಮುಂತಾದ ಸ್ಥಾವರಜೀವಿಗಳು ಆಹಾರವು. ಪಾದಗಳಿಂದ ಸಂಚಾರಮಾಡುವ ಭೂತಗಳಿಗೆ ಪಾದರಹಿತವಾದ ಪ್ರಾಣಿಗಳು ಭೋಜನವು. ಕೈಯನ್ನು ಹೊಂದಿರುವ ಪ್ರಾಣಿಗಳಿಗೆ ಕೈಯ್ಯಿಲ್ಲದ ಪ್ರಾಣಿಗಳು ಆಹಾರವು ಮತ್ತು ಎರಡು ಪಾದಗಳುಳ್ಳ ಜೀವಿಗಳಿಗೆ ನಾಲ್ಕು ಪಾದಗಳುಳ್ಳ ಪಶುಗಳೇ ಮುಂತಾದುವು ಆಹಾರವೆನಿಸುತ್ತವೆ–ಎಂಬುದು ನಿಮಗೆ ತಿಳಿದೇ ಇದೆ. ನಿಮ್ಮ ಪೂಜ್ಯ ತಂದೆಯಾದ ಪ್ರಾಚೀನಬರ್ಹಿ ಮಹಾರಾಜನೂ ಮತ್ತು ದೇವದೇವನಾದ ಬ್ರಹ್ಮನು ‘ಪ್ರಾಣಿಗಳನ್ನು ಸೃಷ್ಟಿಮಾಡಿರಿ’–ಎಂದು ನಿಮಗೆ ಆದೇಶ ನೀಡಿದ್ದಾನೆ. ಹೀಗಿರುವಾಗ ನೀವು ಪ್ರಜೆಗಳಿಗೆ ಆಹಾರವೇ ಆಗಿರುವ ವೃಕ್ಷಗಳನ್ನು ಸುಟ್ಟಹಾಕುತ್ತಿರುವುದು

ಯಾವ ನ್ಯಾಯ? ಕೆರಳಿರುವ ಕೋಪವನ್ನು ಶಮನಗೊಳಿಸಿಕೊಂಡು ತಂದೆ-ತಾತ-ಮುತ್ತಾತಂದಿರು ಸೇವಿಸಿದ ಸತ್ಪುರುಷರ ಮಾರ್ಗವನ್ನು ಅನುಸರಿಸಿರಿ.

(ಶ್ಲೋಕ 3-11)

ತೋಕಾನಾಂ ಪಿತರೌ ಬನ್ಧೂ ದೃಶಃ ಪಕ್ಷ್ಮ ಸ್ತ್ರಿಯಾಃ ಪತಿಃ ।
ಪತಿಃ ಪ್ರಜಾನಾಂ ಭಿಕ್ಷೂಣಾಂ ಗೃಹ್ಯಜ್ಞಾನಾಂ ಬುಧಃ ಸುಹೃತ್ ॥

ಶಿಶುಗಳಿಗೆ ತಂದೆ-ತಾಯಿಗಳು ಹಿತವನ್ನು ಬಯಸುವ ರಕ್ಷಕ ಬಂಧುಗಳು. ಕಣ್ಣುಗಳಿಗೆ ರೆಪ್ಪೆಗಳೂ, ಪತ್ನಿಗೆ ಪತಿಯೂ, ಭಿಕ್ಷುಕರಿಗೆ ಗೃಹಸ್ಥರೂ ರಕ್ಷಣೆಯನ್ನು ನೀಡುವ ಹಿತಕಾರಿಗಳಾದ ಬಂಧುಗಳು. ಹಾಗೆಯೇ ಪ್ರಜಾಪತಿಗಳಾದ ನೀವು ಪ್ರಜೆಗಳೆಲ್ಲರಿಗೂ ಹಿತವನ್ನುಂಟುಮಾಡುವ ರಕ್ಷಕ ಬಂಧುಗಳಾಗಿರಬೇಕು.

ಸಮಸ್ತ ಭೂತಗಳಲ್ಲಿಯೂ ಶ್ರೀಭಗವಂತನಾದ ಶ್ರೀಹರಿಯುಆತ್ಮರೂಪದಲ್ಲಿ ಬೆಳಗುತ್ತಿರುವುದರಿಂದ ಎಲ್ಲ ಭೂತಗಳೂ ಆತನಿಗೆ ನೆಲೆ-ನಿವಾಸಸ್ಥಾನ ಎಂದು ತಿಳಿಯಬೇಕು. ಹೀಗೆ ತಿಳಿದು ಆಚರಣೆಯನ್ನು ಮಾಡಿದರೆ ಆ ಭಗವಂತನು ನಿಮ್ಮಲ್ಲಿ ಪ್ರಸನ್ನನಾಗುವನು. ಯಾವನು ಉಕ್ಕಿಬರುತ್ತಿರುವ ಕ್ರೋಧವನ್ನು ಆತ್ಮವಿಚಾರದಿಂದ ಶರೀರದೊಳಗೇ ಶಮನಗೊಳಿಸುತ್ತಾನೆಯೋ–ಆತನು ತ್ರಿಗುಣಗಳನ್ನೂ ಮತ್ತು ಅವುಗಳ ವಿಷಯಗಳನ್ನೂ ದಾಟಿ ಹೋಗಲು ಸಮರ್ಥನಾಗುತ್ತಾನೆ. ಆದುದರಿಂದ ನೀವು ಈ ಬಡಗಿಡ-ಮರಗಳನ್ನು ಇನ್ನು ಮುಂದೆ ಸುಟ್ಟುಹಾಕಬೇಡಿರಿ. (ಇವುಗಳಲ್ಲಿ) ಯಾವುವು ಉಳಿದಿವೆಯೋ–ಅವುಗಳನ್ನಾದರೂ ಸಂರಕ್ಷಿಸಿರಿ. ಇದರಿಂದ ನಿಮಗೆ ಕಲ್ಯಾಣವುಂಟಾಗುವುದು. ಈ ವೃಕ್ಷಗಳು 'ವಾರ್ಕ್ಷೀ' ಎಂಬ ಕನ್ಯಾಮಣಿಯನ್ನು ಸಂರಕ್ಷಣೆಮಾಡಿವೆ. ನೀವು ಆಕೆಯನ್ನು ಪತ್ನಿಯನ್ನಾಗಿ ಸ್ವೀಕರಿಸಿರಿ."

ಪರೀಕ್ಷಿತನೇ! ವನಸ್ಪತಿಗಳ ರಾಜನಾದ ಚಂದ್ರದೇವನು ಪ್ರಚೇತಸರಿಗೆ ಹೀಗೆ ತಿಳಿವಳಿಕೆ ನೀಡಿ ಸಮಾಧಾನಪಡಿಸಿ ಪ್ರಮ್ಲೋಚೆಯೆಂಬ ಅಪ್ಸರೆಯ ಪುತ್ರಿಯಾದ ಆ ಕನ್ಯಾರತ್ನವನ್ನು ಅವರಿಗೆ ಒಪ್ಪಿಸಿ ಹೊರಟುಹೋದನು. ಪ್ರಚೇತಸರು ಆಕೆಯನ್ನು ಧರ್ಮಾನುಸಾರವಾಗಿ ಮದುವೆಯಾದರು.

ಪ್ರಚೇತಸರಿಂದ ಆಕೆಯ ಗರ್ಭದಲ್ಲಿಯೇ ಪ್ರಾಚೇತಸನಾದ ದಕ್ಷನು ಜನಿಸಿದನು. ಬಳಿಕ ಆ ದಕ್ಷಪ್ರಜಾಪತಿಯ ಪ್ರಜಾಸೃಷ್ಟಿಯಿಂದ ಮೂರು ಲೋಕಗಳೂ ತುಂಬಿಹೋದುವು. ದಕ್ಷನಿಗೆ ತನ್ನ ಹೆಣ್ಣುಮಕ್ಕಳಲ್ಲಿ ತುಂಬಾ ವಾತ್ಸಲ್ಯ. ಆತನು ತನ್ನ ಸಂಕಲ್ಪದಿಂದಲೂ ಮತ್ತು ವೀರ್ಯದಿಂದಲೂ ಹೇಗೆ ಬಗೆ-ಬಗೆಯ ಪ್ರಾಣಿಗಳನ್ನು ಸೃಷ್ಟಿಮಾಡಿದನು?–ಎಂಬುದನ್ನು ಹೇಳುವೆನು. ಸಾವಧಾನವಾಗಿ ಕೇಳು.

ಆ ದಕ್ಷನು ಮೊದಲಿಗೆ ನೀರು, ನೆಲ ಮತ್ತು ದೇವಾಸುರ-ಮನುಷ್ಯರೇ ಮುಂತಾದ ಪ್ರಜೆಗಳನ್ನು ತನ್ನ ಸಂಕಲ್ಪದಿಂದಲೇ ಸೃಷ್ಟಿಮಾಡಿದನು. ಹೀಗೆ ಮಾಡಿದ್ದರಿಂದ ಸೃಷ್ಟಿಯು ವೃದ್ಧಿಹೊಂದದೇ ಇರುವುದನ್ನು ಕಂಡು ಆತನು ವಿಂಧ್ಯಮಹಾಪರ್ವತದ ಬಳಿ ಇರುವ ಒಂದು ಗಿರಿಗೆ ಹೋಗಿ ಅಲ್ಲಿ ತೀವ್ರವಾದ ತಪಸ್ಸನ್ನಾಚರಿಸಿದನು. ಅಲ್ಲಿ ಸಮಸ್ತವಾದ ಪಾಪಗಳನ್ನೂ ತೊಳೆದು ಹಾಕುವ 'ಅಘಮರ್ಷಣ' ಎಂಬ ಒಂದು ತೀರ್ಥದಲ್ಲಿ ಮೂರು ಕಾಲಗಳಲ್ಲಿಯೂ ಸ್ನಾನಮಾಡುತ್ತಾ ದಕ್ಷನು ತಪಸ್ಸಿನ ಮೂಲಕ ಭಗವಂತ ನನ್ನು ಆರಾಧಿಸಿದನು. ಆತನು ಇಂದ್ರಿಯಾತೀತನಾದ ಶ್ರೀಭಗವಂತನನ್ನು 'ಹಂಸಗುಹ್ಯ'ವೆಂಬ ಸ್ತೋತ್ರದಿಂದ ಸ್ತುತಿಸಿದನು. ಅದರಿಂದ ಸ್ವಾಮಿಯು ಆತನಲ್ಲಿ ಪ್ರಸನ್ನನಾದನು. ಆ ಹಂಸಗುಹ್ಯಸ್ತೋತ್ರವನ್ನು ಹೇಳುತ್ತೇನೆ, ಕೇಳು : (ಶ್ಲೋಕ 13-22)

ದಕ್ಷಪ್ರಜಾಪತಿಯು ಮಾಡಿದ ಹಂಸಗುಹ್ಯಸ್ತುತಿ :

ನಮಃ ಪರಾಯಾವಿತಥಾನುಭೂತಯೇ
ಗುಣತ್ರಯಾಭಾಸನಿಮಿತ್ತಬನ್ಧವೇ ।
ಅದೃಷ್ಟಧಾಮ್ನೇ ಗುಣತತ್ತ್ವಬುದ್ಧಿಭಿ-
ರ್ನಿವೃತ್ತಮಾನಾಯ ದಧೇ ಸ್ವಯಮ್ಭುವೇ ॥೨೩॥

"ಪ್ರಭೋ! ನೀನು ಸತ್ಯವಾದ ಅನುಭವಸ್ವರೂಪಿಯಾಗಿ ಸರ್ವೋತ್ತಮನಾಗಿರುವೆ. ಜೀವನನ್ನೂ ಪ್ರಕೃತಿಯನ್ನೂ ಮೀರಿದವನಾಗಿ ಅವುಗಳಿಗೆ ನಿಯಾಮಕನಾಗಿ ಅವುಗಳಿಗೆ ಇರುವಿಕೆಯನ್ನೂ ಸ್ಫೂರ್ತಿಯನ್ನೂ ನೀಡುತ್ತಿರುವೆ. ಆದರೂ ನೀನು ಪ್ರಮಾಣಾತೀತನಾಗಿರುವುದರಿಂದ–ತ್ರಿಗುಣಾತ್ಮಕ

ವಾದ ಸೃಷ್ಟಿಯಲ್ಲಿಯೇ ತತ್ತ್ವಬುದ್ಧಿಯನ್ನಿಟ್ಟಿರುವ ಆ ಜೀವಿಗಳು–ನಿನ್ನ ನಿಜಸ್ವರೂಪವನ್ನು ಅರಿಯಲಾರರು. ಇಂತಹ ಸ್ವಯಂಪ್ರಕಾಶನೂ ಪರಾತ್ಪರನೂ ಆದ ನಿನಗೆ ನಮೋ ನಮಃ.

ನ ಯಸ್ಯ ಸಖ್ಯಂ ಪುರುಷೋಽವೈತಿ ಸಖ್ಯುಃ
ಸಖಾ ವಸನ್ಸಂವಸತಃ ಪುರೇಽಸ್ಮಿನ್ ।
ಗುಣೋ ಯಥಾ ಗುಣಿನೋ ವ್ಯಕ್ತದೃಷ್ಟೇ-
ಸ್ತಸ್ಮೈ ಮಹೇಶಾಯ ನಮಸ್ಕರೋಮಿ ॥೨೪॥

ನೀನು ಜೀವಿಗಳಿಗೆ ಗೆಳೆಯನಾಗಿ ಜೀವಿಗಳೊಡನೆ ಅವುಗಳ ಎಲ್ಲ ಕರ್ಮಗಳಿಗೂ ಸಾಕ್ಷಿಯಾಗಿ ಪ್ರಕಾಶಕನಾಗಿದ್ದರೂ–ಆ ಜೀವಿಗಳು ನಿನ್ನನ್ನು ತಿಳಿಯಲಾರವು. ರೂಪ-ರಸ-ಗಂಧಗಳೇ ಮುಂತಾದ ವಿಷಯಗಳು ಕಣ್ಣು, ನಾಲಿಗೆ ಮತ್ತು ಮೂಗು ಮುಂತಾದ ಇಂದ್ರಿಯವೃತ್ತಿಗಳು ತಮ್ಮನ್ನು ಪ್ರಕಾಶಪಡಿಸುತ್ತಿದ್ದರೂ ಅವುಗಳನ್ನು ಹೇಗೆ ನೋಡಲಾರವೋ–ಹಾಗೆಯೇ ಜೀವಿಗಳು ತಮ್ಮನ್ನು ಪ್ರಕಾಶಪಡಿಸುತ್ತಿರುವ ಮತ್ತು ಸಾಕ್ಷಿಯೇ ಆಗಿರುವ ನಿನ್ನನ್ನು ಕಾಣಲಾರವು. ಇಂತಹ ಮಹೇಶ್ವರನಾದ ನಿನಗೆ ನಮಸ್ಕರಿಸುತ್ತೇನೆ.

ದೇಹೋಽಸವೋಽಕ್ಷಾ ಮನವೋ ಭೂತಮಾತ್ರಾ
ನಾತ್ಮಾನಮನ್ಯಂ ಚ ವಿದುಃ ಪರಂ ಯತ್ ।
ಸರ್ವಂ ಪುಮಾನ್ವೇದ ಗುಣಾಂಶ್ಚ ತಜ್ಜ್ಞೋ
ನ ವೇದ ಸರ್ವಜ್ಞಮನನ್ತಮೀಡೇ ॥೨೫॥

ದೇಹವೇನು, ಪ್ರಾಣಗಳೇನು, ಇಂದ್ರಿಯಗಳೇನು, ಮನಸ್ಸಿನ ವೃತ್ತಿಗಳೇನು, ಪಂಚಮಹಾಭೂತಗಳೇನು ಮತ್ತು ಭೂತತನ್ಮಾತ್ರಗಳೇನು–ಇವೆಲ್ಲವೂ ಜಡದ್ರವ್ಯಗಳಾದ್ದರಿಂದ ತಮ್ಮನ್ನು ತಿಳಿಯಲಾರವು ಮತ್ತು ತಮಗೆ ಬೇರೆಯಾದುದನ್ನೂ ತಿಳಿಯಲಾರವು. ಜೀವನಾದರೋ ಇವೆಲ್ಲವನ್ನೂ ಮತ್ತು ಇವುಗಳಿಗೆ ಕಾರಣಗಳಾದ ಸತ್ತ್ವ-ರಜಸ್ಸು ಮತ್ತು ತಮಸ್ಸು ಎಂಬ ತ್ರಿಗುಣಗಳನ್ನೂ ಅರಿಯುತ್ತಾನೆ. ಆತನೂ ಕೂಡ ಸರ್ವಜ್ಞನೂ ಅನಂತನೂ ಆಗಿರುವ ನಿನ್ನನ್ನು ತಿಳಿಯಲಾರನು.

ಯದೋಪರಾಮೋ ಮನಸೋ ನಾಮರೂಪ-
ರೂಪಸ್ಯ ದೃಷ್ಟಸ್ಮೃತಿಸಮ್ಪ್ರಮೋಷಾತ್ ।
ಯ ಈಯತೇ ಕೇವಲಯಾ ಸ್ವಸಂಸ್ಥಯಾ
ಹಂಸಾಯ ತಸ್ಮೈ ಶುಚಿಸದ್ಮನೇ ನಮಃ ॥೨೬॥

ನಿನ್ನ ನೆಲೆಯನ್ನು ಯಾರೂ ಅರಿಯಲಾರರು. ಆದರೆ ನೀನು ಸ್ವಯಂಪ್ರಕಾಶನು. ಸಮಾಧಿಯಲ್ಲಿ ಪ್ರಮಾಣ, ವಿಕಲ್ಪ ಮತ್ತು ವಿಪರ್ಯಯಗಳೆಂಬ ಬಗೆ-ಬಗೆಯ ಜ್ಞಾನಗಳೂ ಮತ್ತು ಸ್ಮರಣಶಕ್ತಿಯೂ ಲೋಪಹೊಂದುವುದರಿಂದ ನಾಮ-ರೂಪಾತ್ಮಕವಾದ ಜಗತ್ತನ್ನು ನಿರೂಪಣೆ ಮಾಡುವ ಮನಸ್ಸೂ ಶಾಂತವಾಗಿ ಬಿಡುವುದು. ಹಾಗೆ ಮನಸ್ಸೇ ಲಯ ಗೊಂಡರೂ ನೀನು ಕೇವಲ ಸ್ವಸ್ವರೂಪದಿಂದ ಪ್ರಕಾಶಿಸುತ್ತಿರುವೆ. ಅಂತಹ ಶುದ್ಧನೂ ಶುದ್ಧಹೃದಯಮಂದಿರನಿವಾಸಿಯೂ ಆದ ನಿನಗೆ ನಮೋ ನಮಃ.

ಮನೀಷಿಣೋಽನ್ತರ್ಹೃದಿ ಸಂನಿವೇಶಿತಂ
ಸ್ವಶಕ್ತಿಭಿರ್ನವಭಿಶ್ಚ ತ್ರಿವೃದ್ಭಿಃ ।
ವಹ್ನಿಂ ಯಥಾ ದಾರಣಿ ಪಾಞ್ಚದಶ್ಯಂ
ಮನೀಷಯಾ ನಿಷ್ಕರ್ಷನ್ತಿ ಗೂಢಮ್ ॥೨೭॥

ಹಾಗಾದರೆ ನೀನು ಯಾರಿಗೂ ಕಾಣುವುದೇ ಇಲ್ಲವೇ?–ಎಂದರೆ : ವಿವೇಕಿಗಳು ನಿನ್ನನ್ನು ತಮ್ಮೊಳಗೇ ಕಂಡುಕೊಳ್ಳುವರು. ಯಜ್ಞದಲ್ಲಿ ಋತ್ವಿಜರು ಯಜ್ಞದ ಅರಣಿಯ ಕಟ್ಟಿಗೆಯಲ್ಲಿ ಅಡಗಿರುವ ಅಗ್ನಿಯನ್ನು 'ಸಾಮಿಧೇನೀ' ಎಂಬ ಹದಿನೈದು ಮಂತ್ರಗಳಿಂದ ಪ್ರಕಟಪಡಿಸುವಂತೆ– ಜ್ಞಾನಿಗಳು ತಮ್ಮ ಇಪ್ಪತ್ತೇಳು ಶಕ್ತಿಗಳ ಒಳಗೆ ಗೂಢವಾಗಿ ಅಡಗಿರುವ ನಿನ್ನನ್ನು ತಮ್ಮ ಶುದ್ಧವಾದ ಬುದ್ಧಿಯ ಮೂಲಕ ತಮ್ಮ ಹೃದಯದಲ್ಲಿಯೇ ವಿಶ್ಲೇಷಿಸಿ ಸಾಕ್ಷಾತ್ಕರಿಸಿಕೊಳ್ಳುವರು.

ಸ ವೈ ಮಮಾಶೇಷವಿಶೇಷಮಾಯಾ-
ನಿಷೇಧನಿರ್ವಾಣಸುಖಾನುಭೂತಿಃ ।
ಸ ಸರ್ವನಾಮಾ ಸ ಚ ವಿಶ್ವರೂಪಃ
ಪ್ರಸೀದತಾಮನಿರುಕ್ತಾತ್ಮಶಕ್ತಿಃ ॥೨೮॥

ನಾನಾವೃತ್ತಿಗಳುಳ್ಳ ಸಮಸ್ತಮಾಯೆಗಳನ್ನೂ ದೂರಮಾಡಿ ದೊರೆಯುವ ಪರಮಮೋಕ್ಷಸುಖಸ್ವರೂಪನು ಆ ಪರಮಾತ್ಮ. ಸರ್ವಾಂತಯಾಮಿಯಾಗಿ ಸರ್ವನಾಮ-ಸರ್ವರೂಪಗಳುಳ್ಳ ಸ್ವಾಮಿ ಆತ. ಅಪ್ರಕಾಶಿತವಾಗಿ ಅರಿಯಲಾಗದೇ ವರ್ಣಿಸಲಾಗದೇ ಇರುವ ಮಾಯಾಶಕ್ತಿಯುಳ್ಳ ಮಹಾಪ್ರಭು. ಆತನು ನನ್ನಲ್ಲಿ ಪ್ರಸನ್ನನಾಗಲಿ.

ಯದ್ಯನ್ನಿರುಕ್ತಂ ವಚಸಾ ನಿರೂಪಿತಂ
ಧಿಯಾಕ್ಷಭಿರ್ವಾ ಮನಸಾ ವೋತ ಯಸ್ಯ ।
ಮಾ ಭೂತ್ಸ್ವರೂಪಂ ಗುಣರೂಪಂ ಹಿ ತತ್ತ-
ತ್ಸ ವೈ ಗುಣಾಪಾಯವಿಸರ್ಗಲಕ್ಷಣಃ ॥೨೯॥

ಯಾವುದನ್ನು ಮಾತಿನಿಂದ ಹೇಳಲು ಸಾಧ್ಯವಾಗುತ್ತದೆಯೋ ಅಥವಾ ಮನಸ್ಸು, ಬುದ್ಧಿ ಮತ್ತು ಇಂದ್ರಿಗಳಿಂದ ಗ್ರಹಿಸಲು ಸಾಧ್ಯವಾಗುತ್ತದೆಯೋ–ಅದು ಯಾವುದೂ ಆತನ ಸ್ವರೂಪವಾಗಲಾರದು. ಏಕೆಂದರೆ : ಅದೆಲ್ಲಾ ಗುಣರೂಪವಾದುದು. ಆತನಾದರೋ ಗುಣಗಳ ಉತ್ಪತ್ತಿ ಮತ್ತು ಪ್ರಳಯಗಳ ಅಧಿಷ್ಠಾನವಾಗಿದ್ದಾನೆ. ತ್ರಿಗುಣಗಳ ತೋರಿಕೆಗೆ ಮಾತ್ರ ಇರುವವನು ಅವನು. ಅಂತಹ ಸರ್ವಾತೀತನಿಗೆ ನಮಸ್ಕಾರವು.

ಯಸ್ಮಿನ್ಯತೋ ಯೇನ ಚ ಯಸ್ಯ ಯಸ್ಮೈ
ಯದ್ಯೋ ಯಥಾ ಕುರುತೇ ಕಾರ್ಯತೇ ಚ ।
ಪರಾವರೇಷಾಂ ಪರಮಂ ಪ್ರಾಕ್ಪ್ರಸಿದ್ಧಂ
ತದ್ಬ್ರಹ್ಮ ತದ್ಧೇತುರನನ್ಯದೇಕಮ್ ॥೩೦॥

ಓ ಭಗವಂತನೇ! ಈ ಇಡೀ ಜಗತ್ತೂ ನಿನ್ನಲ್ಲಿಯೇ ನೆಲೆಸಿದೆ. ನಿನ್ನಿಂದಲೇ ಹೊರಬಂದಿದೆ. ಬೇರೆ ಯಾವುದರ ಸಹಾಯ-ಆಧಾರಗಳೂ ಇಲ್ಲದೇ ನಿನ್ನಿಂದಲೇ ಈ ವಿಶ್ವವನ್ನು ನಿರ್ಮಾಣಮಾಡಿದ್ದೀಯೆ. ಇದೆಲ್ಲವೂ ನಿನ್ನದು ಮತ್ತು ನಿನಗೋಸ್ಕರವೇ ಇರುವುದು. ಈ ರೂಪವನ್ನು ತಾಳುವವನೂ ಮತ್ತು ರಚಿಸುವವನೂ ನೀನೇ. ಎಲ್ಲರಿಂದಲೂ ಕಾರ್ಯ ಮಾಡಿಸುವವನೂ ನೀನೇ. ಕಾರ್ಯವಿಧಿಯೂ ನೀನೇ. ಕಾರ್ಯಕಾರಣ ಭೇದವಿಲ್ಲದೇ ಇದ್ದಾಗಲೂ ಪ್ರಕಾಶಿಸುತ್ತಿದ್ದ ಸ್ವಯಂಸಿದ್ಧಸ್ವರೂಪನೂ

ನೀನೇ. ಆದುದರಿಂದ ನೀನೇ ಸರ್ವಕಾರಣನು. ಅದ್ವಿತೀಯನಾದ ಪರಬ್ರಹ್ಮನು ನೀನು. ಪ್ರಭುವೇ! ನನ್ನಲ್ಲಿ ಪ್ರಸನ್ನನಾಗು.

ಯಚ್ಛಕ್ತಯೋ ವದತಾಂ ವಾದಿನಾಂ ವೈ
ವಿವಾದಸಂವಾದಭುವೋ ಭವನ್ತಿ ।
ಕುರ್ವನ್ತಿ ಚೈಷಾಂ ಮುಹುರಾತ್ಮಮೋಹಂ
ತಸ್ಮೈ ನಮೋಽನನ್ತಗುಣಾಯ ಭೂಮ್ನೇ ॥೩೧॥

ವಾದಿಗಳೂ ಮತ್ತು ಪ್ರತಿವಾದಿಗಳೂ ವಾದ-ವಿವಾದಗಳನ್ನು ಮಾಡುವಾಗ ಕಾಣುವ ವಿವಾದದ ವಿಷಯವೂ ಮತ್ತು ಐಕಮತ್ಯದ ವಿಷಯವೂ ಆಗಿ ನಿನ್ನ ಮಾಯಾಶಕ್ತಿಗಳೇ ಅವರನ್ನು ಮತ್ತೆ ಮತ್ತೆ ಮೋಹಕ್ಕೆ ತಳ್ಳುವುವು. ಅಪ್ರಾಕೃತವಾದ ಅನಂತಕಲ್ಯಾಣಗುಣಗಳಿಂದ ಪೂರ್ಣನಾಗಿರುವ ಅನಂತನಾದ ನಿನಗೆ ನಮೋ ನಮಃ.

ಅಸ್ತೀತಿ ನಾಸ್ತೀತಿ ಚ ವಸ್ತುನಿಷ್ಠಯೋ-
ರೇಕಸ್ಥಯೋರ್ಭಿನ್ನವಿರುದ್ಧಧರ್ಮಯೋಃ ।
ಅವೇಕ್ಷಿತಂ ಕಿಞ್ಚನ ಯೋಗಸಾಂಖ್ಯಯೋಃ
ಸಮಂ ಪರಂ ಹ್ಯನುಕೂಲಂ ಬೃಹತ್ತತ್ ॥೩೨॥

ನಿನಗೆ ಆಕಾರ ಮುಂತಾದುವುಗಳು ಉಂಟೆಂದು ಕೆಲವರು ಹೇಳುತ್ತಾರೆ. ಇಲ್ಲವೆಂದು ಹೇಳುವವರೂ ಇದ್ದಾರೆ. ಒಂದೇ ವಸ್ತುವನ್ನೇ ಕುರಿತು ಅವರು ಹೀಗೆ ವಿರುದ್ಧವಾದ ಧರ್ಮಗಳನ್ನು ಹೇಳುತ್ತಿದ್ದರೂ–ಅವರಲ್ಲಿ ವಾಸ್ತವವಾದ ವಿರೋಧವೇನೂ ಇಲ್ಲ. ಏಕೆಂದರೆ : ಅವೆರಡೂ ಒಂದೇ. ಪರಮವಸ್ತುವಿನಲ್ಲಿವೆ. ಆಧಾರವಿಲ್ಲದೇ ಇದೆಯೆಂಬ ವಿಧಿಯೂ ಸಾಧ್ಯವಿಲ್ಲ. ಇಲ್ಲವೆಂಬ ನಿಷೇಧವೂ ಸಾಧ್ಯವಿಲ್ಲ. ನೀನಾದರೋ ಆ ವಿಧಿ-ನಿಷೇಧಗಳೆರಡಕ್ಕೂ ಅವಧಿಯಾಗಿರುವೆ. ಹೀಗೆ ಸರ್ವಾಧಾರನಾಗಿರುವ ನಿನಗೆ ನಮಸ್ಕಾರವು.*

---

* ಹೋಲಿಕೆ : 'ನ ತೇ ರೂಪಂ ನ ಚಾಕಾರೋ ನಾಯುಧಾನಿ ನ ಚಾಸ್ಪದಮ್ ।
ತಥಾಪಿ ಪುರುಷಾಕಾರೋ ಭಕ್ತಾನಾಂ ತ್ವಂ ಪ್ರಕಾಶಸೇ ॥'
(ಜಿತಂತಾಸ್ತೋತ್ರ)

ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ ।
ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಮ್ ॥

ಯೋಽನುಗ್ರಹಾರ್ಥಂ ಭಜತಾಂ ಪಾದಮೂಲ-
ಮನಾಮರೂಪೋ ಭಗರಾನನನ್ತಃ ।
ನಾಮಾನಿ ರೂಪಾಣಿ ಚ ಜನ್ಮಕರ್ಮಭಿ-
ರ್ಭೇಜೇ ಸ ಮಹ್ಯಂ ಪರಮಃ ಪ್ರಸೀದತು ॥೩೩॥

ಪ್ರಭೋ! ನೀನು ಅನಂತನು. ಪ್ರಾಕೃತವಾದ ನಾಮ-ರೂಪಗಳಿಲ್ಲದವನು. ಆದರೂ ನಿನ್ನ ಚರಣಕಮಲಗಳನ್ನು ಭಜಿಸುವ ಜನರನ್ನು ಅನುಗ್ರಹಿಸುವುದಕ್ಕಾಗಿ ಅನೇಕರೂಪಗಳಲ್ಲಿ ಪ್ರಕಟಗೊಂಡು ನಾನಾಲೀಲೆಗಳನ್ನು ತೋರಿಸುತ್ತಾ ಅವುಗಳಿಗೆ ಅನುಗುಣವಾಗಿ ಅನೇಕನಾಮಗಳನ್ನು ಧರಿಸುತ್ತಿರುವೆ. ಪರಮಾತ್ಮನೇ! ನನ್ನಲ್ಲಿ ಕೃಪಾಪ್ರಸಾದವನ್ನು ತೋರು.

ಯಃ ಪ್ರಾಕೃತೈರ್ಜ್ಞಾನಪಥೈರ್ಜನಾನಾಂ
ಯಥಾಶಯಂ ದೇಹಗತೋ ವಿಭಾತಿ ।
ಯಥಾನಿಲಃ ಪಾರ್ಥಿವಮಾಶ್ರಿತೋ ಗುಣಂ
ಸ ಈಶ್ವರೋ ಮೇ ಕುರುತಾನ್ಮನೋರಥಮ್ ॥೩೪॥

ಸಾಧಾರಣಮಟ್ಟದಲ್ಲಿ ಉಪಾಸನೆಮಾಡುವ ಪ್ರಾಕೃತಜನರೇ ಹೆಚ್ಚು ಮಂದಿ ಇದ್ದಾರೆ. ಆದುದರಿಂದ ಎಲ್ಲರ ಹೃದಯಗಳಲ್ಲಿಯೂ ಇರುವ ನೀನು ಅವರವರ ಭಾವನೆಗಳಿಗೆ ಅನುಗುಣವಾಗಿ ನಾನಾದೇವತೆಗಳ ರೂಪದಲ್ಲಿ ಕಾಣಿಸಿಕೊಳ್ಳುವೆ. (ತನ್ನಲ್ಲಿ ವಾಸ್ತವವಾಗಿ ಯಾವ ಗಂಧವೂ ಇಲ್ಲದಿದ್ದರೂ) ಗಾಳಿಯು ಗಂಧದ ಆಸರೆಯಿಂದ ಸುಗಂಧಿತವಾಗಿರುವಂತೆ ನೀನು ಆಯಾ ಭಾವನೆಯ ಆಸರೆಯಿಂದ ಆಯಾ ದೇವತಾಕಾರವಾಗಿ ಕಾಣಿಸಿ ಕೊಳ್ಳುತ್ತೀಯೆ. ಹೀಗೆ ಭಕ್ತರಿಗಾಗಿ ಸರ್ವಶುಭಭಾವನೆಗಳಿಗೂ ಆಶ್ರಯ ನಾಗುವ ಸರ್ವೇಶ್ವರನು ನನ್ನ ಅಭಿಲಾಷೆಯನ್ನು ಪೂರ್ಣಗೊಳಿಸಲಿ.”

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಮಹಾರಾಜ! ವಿಂಧ್ಯಪರ್ವತದ ಅಘಮರ್ಷಣತೀರ್ಥದಲ್ಲಿ ದಕ್ಷ

ಸ ತಯಾ ಶ್ರದ್ಧಯಾ ಯುಕ್ತಃ ತಸ್ಯಾರಾಧನಮೀಹತೇ ।
ಲಭತೇ ಚ ತತಃ ಕಾಮಾನ್ ಮಯ್ಯೈವ ವಿಹಿತಾನ್ ಹಿ ತಾನ್ ।
ಯೇ ಯಥಾ ಮಾಂ ಪ್ರಪದ್ಯನ್ತೇ ತಾಂಸ್ತಥೈವ ಭಜಾಮ್ಯಹಮ್ ॥
(ಶ್ರೀಗೀತಾ)

ಪ್ರಜಾಪತಿಯು ಹೀಗೆ ತನ್ನನ್ನು ಸ್ತೋತ್ರಮಾಡಲು–ಆಗ ಭಕ್ತವತ್ಸಲನಾದ ಶ್ರೀಭಗವಂತನು ಆತನ ಮುಂದೆ ಪ್ರಕಟವಾದನು. ಹಾಗೆ ಅಲ್ಲಿ ಕಾಣಿಸಿ ಕೊಂಡ ಸ್ವಾಮಿಯ ಸೊಬಗು-ಸೌಂದರ್ಯ-ವೈಭವಗಳನ್ನು ಕೇಳಬೇಕೇ! ಗರುಡದೇವರ ಹೆಗಲುಗಳ ಮೇಲೆ ಸ್ವಾಮಿಯ ಎರಡು ಪಾದಗಳು ಮೆರೆಯು ತ್ತಿವೆ. ಹೃಷ್ಟ-ಪುಷ್ಟವಾಗಿ ವಿಶಾಲವೂ ಆಗಿರುವ ಎಂಟು ಭುಜಗಳಿಂದ ದೇವನು ಕಂಗೊಳಿಸುತ್ತಿದ್ದಾನೆ. ಚಕ್ರ, ಶಂಖ, ಖಡ್ಗ, ಗುರಾಣಿ, ಬಾಣ, ಬಿಲ್ಲು, ಪಾಶ ಮತ್ತು ಗದೆಗಳು ಆ ದಿವ್ಯವಾದ ಭುಜಗಳನ್ನು ಅಲಂಕರಿಸಿವೆ. ಮಳೆಗಾಲದ ಮೋಡದಂತೆ ಶ್ಯಾಮಲವಾದ ಶರೀರದಲ್ಲಿ ಪೀತಾಂಬರವು ಪ್ರಕಾಶಿಸುತ್ತಿದೆ. ಅರಳಿರುವ ಪ್ರಸನ್ನವಾದ ಮುಖ ಮತ್ತು ನೇತ್ರಗಳು, ಮಂಡಿಯವರೆಗೂ ಕಂಠದಿಂದ ಜೋಲಿರುವ ತುಳಸೀವನಮಾಲೆ, ವಕ್ಷಃಸ್ಥಳ ದಲ್ಲಿ ಶ್ರೀವತ್ಸದ ಚಿಹ್ನೆ ಮತ್ತು ಥಳ-ಥಳಿಸುತ್ತಿರುವ ಕೌಸ್ತುಭಮಣಿ, ಅಮೂಲ್ಯವಾದ ಕಿರೀಟ, ಕಂಕಣ, ಮಕರಾಕೃತಿಯ ಕುಂಡಲಗಳು, ಒಡ್ಯಾಣ, ಉಂಗುರ, ತೋಳ್ಬಳೆಗಳು, ಕಾಲಂದುಗೆ–ಭುಜಕೀರ್ತಿಗಳು ಹೊಳೆ-ಹೊಳೆಯುತ್ತಿವೆ. ಮೂರು ಲೋಕಗಳನ್ನೂ ಮರುಳುಮಾಡುವ ಚೆಲುವಿನ ಗಣಿಯಾದ ಶ್ರೀಮೂರ್ತಿ ಮೂಲೋಕದೊಡೆಯನು ರಾರಾಜಿಸು ತ್ತಿದ್ದಾನೆ. ನಾರದ, ನಂದ, ಸುನಂದರೇ ಮುಂತಾದ ಭಕ್ತರೂ ಪಾರ್ಷದರೂ ಸ್ವಾಮಿಯ ಸುತ್ತಲೂ ನಿಂತಿದ್ದಾರೆ. ಇಂದ್ರನೇ ಮುಂತಾದ ದೇವೇಶ್ವರರ ಸಮೂಹಗಳು ಸ್ತುತಿಸುತ್ತಿರಲು ಸಿದ್ಧರೂ, ಗಂಧರ್ವರೂ, ಚಾರಣರೂ ಶ್ರೀಭಗವಂತನ ಗುಣಸಂಪತ್ತನ್ನು ಕುರಿತು ಹಾಡುತ್ತಿದ್ದಾರೆ. ಇಂತಹ ಅತ್ಯಂತ ಆಶ್ಚರ್ಯಕರವೂ ಅಪ್ರಾಕೃತವೂ ಆದ ರೂಪವನ್ನು ಕಂಡು ದಕ್ಷಪ್ರಜಾ ಪತಿಯು ಸ್ವಲ್ಪ ಭಯಚಕಿತನಾದನು. (ಶ್ಲೋಕ 35-40)

ದಕ್ಷಪ್ರಜಾಪತಿಯು ಪರಮಾನಂದಭರಿತನಾಗಿ ಶ್ರೀಭಗವಂತನ ಅಡಿದಾವರೆಗಳಿಗೆ ದೀರ್ಘದಂಡಪ್ರಣಾಮಮಾಡಿದನು. ಗಿರಿಗಳಿಂದ ಹರಿದು ಬರುವ ಝರಿಗಳ ಪ್ರವಾಹಗಳಿಂದ ನದಿಗಳು ತುಂಬಿಹೋಗುವಂತೆ–ಉಕ್ಕೇರಿ ಬಂದ ಪರಮಾನಂದಪ್ರವಾಹದಿಂದ ದಕ್ಷನ ಪ್ರತಿಯೊಂದು ಇಂದ್ರಿಯವೂ ತುಂಬಿಹೋಯಿತು. ಅತ್ಯಂತವಾದ ಆನಂದಪರವಶತೆಯ ಕಾರಣದಿಂದ ಆತನ ಮಾತು ಸ್ತಬ್ಧವಾಗಿ ಬಿಟ್ಟಿತು. ಆತನು ಅತ್ಯಂತವಿನೀತನಾಗಿ

ಶ್ರೀಭಗವಂತನ ಮುಂದೆ ಹೋಗಿ ನಿಂತುಕೊಂಡನು. ಎಲ್ಲರ ಹೃದಯಗಳಲ್ಲಿ ಕುಳಿತು ಅವರ ಚಿತ್ತಗಳಲ್ಲಿ ಏನಿದೆಯೆಂಬುದನ್ನು ಅರಿತಿರುವ ಶ್ರೀಭಗವಂತನು ದಕ್ಷಪ್ರಜಾಪತಿಯ ಭಕ್ತಿಯನ್ನೂ ಮತ್ತು ಆತನ ಮನೋ ಗತವಾಗಿದ್ದ ಪ್ರಜಾವೃದ್ಧಿಯ ಕಾಮನೆಯನ್ನೂ ತಿಳಿದುಕೊಂಡು ಆತನಿಗೆ ಹೀಗೆಂದನು.
(ಶ್ಲೋಕ 41-42)

ಶ್ರೀಭಗವಂತನ ಅನುಗ್ರಹವಾಣಿ :

"ಎಲೈ ಪರಮಭಾಗ್ಯಶಾಲಿಯಾದ ದಕ್ಷಪ್ರಜಾಪತಿಯೇ! ಈಗ ನಿನ್ನ ತಪಸ್ಸು ಪೂರ್ಣವಾಗಿದೆ. ಏಕೆಂದರೆ : ನನ್ನಲ್ಲಿ ಶ್ರದ್ಧೆಯನ್ನು ತೋರಿದ್ದರಿಂದ ನಿನ್ನ ಹೃದಯದಲ್ಲಿ ನನ್ನನ್ನು ಕುರಿತು ಪ್ರೇಮಭಾವವು ಜಿನುಗುತ್ತಿದೆ. ಪ್ರಜಾಪತಿಯೇ! ನೀನು ಈಗ ವಿಶ್ವದ ವೃದ್ಧಿಗೋಸ್ಕರ ತಪಸ್ಸನ್ನು ಮಾಡಿರುವೆ. ಆದುದರಿಂದ ನಿನ್ನಲ್ಲಿ ಪ್ರಸನ್ನನಾಗಿದ್ದೇನೆ. ಏಕೆಂದರೆ : ಜಗತ್ತಿನ ಸಮಸ್ತಪ್ರಾಣಿಗಳೂ ಏಳಿಗೆಯನ್ನು ಹೊಂದಬೇಕು ಮತ್ತು ಸಮೃದ್ಧವಾಗ ಬೇಕು–ಎಂಬುದೇ ನನ್ನ ಇಚ್ಛೆಯೂ ಆಗಿದೆ. ಬ್ರಹ್ಮದೇವರೇನು, ಶಂಕರ ನೇನು, ನಿನ್ನಂತಹ ಪ್ರಜಾಪತಿಗಳೇನು, ಸ್ವಾಯಂಭುವನೇ ಮುಂತಾದ ಮನುಗಳೇನು, ಇಂದ್ರಾದಿ ದೇವೇಶ್ವರರೇನು–ಇವರೆಲ್ಲರೂ ನನ್ನ ವಿಭೂತಿ ಗಳೇ ಆಗಿ ಸಮಸ್ತಪ್ರಾಣಿಗಳಿಗೂ ಏಳಿಗೆಯನ್ನು ಉಂಟುಮಾಡುತ್ತಿದ್ದಾರೆ.
(ಶ್ಲೋಕ 43-45)

ತಪೋ ಮೇ ಹೃದಯಂ ಬ್ರಹ್ಮಂಸ್ತನುರ್ವಿದ್ಯಾ ಕ್ರಿಯಾಽಕೃತಿಃ ।
ಅಙ್ಗಾನಿ ಕ್ರತವೋ ಜಾತಾ ಧರ್ಮ ಆತ್ಮಾಸವಃ ಸುರಾಃ ॥೪೬॥

ಬ್ರಾಹ್ಮಣೋತ್ತಮನೇ! ದಕ್ಷಬ್ರಹ್ಮನೇ! ತಪಸ್ಸು ನನ್ನ ಹೃದಯವು. ವಿದ್ಯೆಯು ನನ್ನ ಶರೀರವೆನಿಸುತ್ತದೆ. ಕರ್ಮವು ನನ್ನ ಆಕೃತಿಯು. ಯಜ್ಞವು ನನಗೆ ಅಂಗಗಳಾಗಿವೆ. ಧರ್ಮವು ನನ್ನ ಮನಸ್ಸು ಮತ್ತು ದೇವತೆಗಳು ನನ್ನ ಪ್ರಾಣವಾಗಿದ್ದಾರೆ.

ಅಹಮೇವಾಸಮೇವಾಗ್ರೇ ನಾನ್ಯತ್ಕಿಞ್ಚಾನ್ತರಂ ಬಹಿಃ ।
ಸಂಜ್ಞಾನಮಾತ್ರಮವ್ಯಕ್ತಂ ಪ್ರಸುಪ್ತಮಿವ ವಿಶ್ವತಃ ॥೪೭॥

ಈ ಸೃಷ್ಟಿಯು ಪ್ರಾರಂಭವಾಗುವುದಕ್ಕೆ ಮೊದಲು ಕೇವಲನಾದ

ನಾನೊಬ್ಬನೇ ಇದ್ದೆನು. ಒಳಗಾಗಲೀ, ಹೊರಗಾಗಲೀ ನನ್ನನ್ನು ಬಿಟ್ಟು ಬೇರೇನೂ ಇರಲಿಲ್ಲ. ಜ್ಞಾನಸ್ವರೂಪನಾಗಿ ಅವ್ಯಕ್ತನಾಗಿ ನಾನೊಬ್ಬನೇ ಇದ್ದೆನು. ಎಲ್ಲೆಲ್ಲಿಯೂ ನಿದ್ರೆಯಲ್ಲಿರುವಂತೆ ಗಾಢವಾದ ತಮಸ್ಸೇ ಆವರಿಸಿತ್ತು–ಎಂದು ತಿಳಿದುಕೋ.

ನಾನು ಅನಂತವಾದ ಕಲ್ಯಾಣಗುಣಗಳಿಗೆ ಆಧಾರವಾಗಿ ಅನಂತನಾಗಿದ್ದೇನೆ. ಇಂತಹ ನನ್ನಲ್ಲಿ ತ್ರಿಗುಣಗಳ ಕಾರಣದಿಂದ ಪ್ರಕೃತಿಯಲ್ಲಿ ಕ್ಷೋಭೆಯುಂಟಾಗಲು–ಆಗ ಅದರಲ್ಲಿ ಸ್ವಯಂಭು (ಅಯೋನಿಜ) ಎನಿಸಿದ ಆದಿಪುರುಷರಾದ ಬ್ರಹ್ಮದೇವರು ಜನಿಸಿದರು. ನಾನು ಅವರಲ್ಲಿ ಶಕ್ತಿ ಮತ್ತು ಚೈತನ್ಯಗಳನ್ನು ಸಂಚಾರಗೊಳಿಸಿದಾಗ ಆ ದೇವಶಿರೋಮಣಿ ಬ್ರಹ್ಮದೇವರು ಸೃಷ್ಟಿಯನ್ನು ಮಾಡಲು ತೊಡಗಿದರು. ಆದರೆ ತಮಗೆ ಸೃಷ್ಟಿಮಾಡುವ ಸಾಮರ್ಥ್ಯವೇ ಇಲ್ಲವೆಂದು ಅವರಿಗೆ ಅನ್ನಿಸಿತು. ಆಗ ನಾನು ಅವರಿಗೆ 'ತಪಸ್ಸನ್ನಾಚರಿಸಿ'–ಎಂದು ಆಜ್ಞೆಯನ್ನು ನೀಡಿದೆನು. ಅದರಂತೆ ಅವರು ಘೋರವಾದ ತಪಸ್ಸನ್ನಾಚರಿಸಿದರು. ಆ ತಪಸ್ಸಿನ ಪ್ರಭಾವದಿಂದ ಮೊಟ್ಟಮೊದಲಿಗೆ ಒಂಬತ್ತು ಮಂದಿ ಪ್ರಜಾಪತಿಗಳಾದ ನಿಮ್ಮನ್ನು ಸೃಷ್ಟಿ ಮಾಡಿದರು. (ಶ್ಲೋಕ 48-50)

ಎಲೈ ಪ್ರಜಾಪತಿಯೇ! ಇಲ್ಲಿ ನೋಡು. ಈಕೆಯು ಪಂಚಜನನೆಂಬ ಪ್ರಜಾಪತಿಯ ಕನ್ಯೆಯಾದ ಅಸಿಕ್ನಿಯು. ನೀನು ಈಕೆಯನ್ನು ಧರ್ಮಪತ್ನಿಯನ್ನಾಗಿ ಸ್ವೀಕರಿಸು. ಗೃಹಸ್ಥರಿಗೆ ಯೋಗ್ಯವಾದ ಸ್ತ್ರೀಸಹವಾಸಧರ್ಮವನ್ನು ಸ್ವೀಕರಿಸು. ಈ ಅಸಿಕ್ನಿಯೂ ಗೃಹಿಣಿಗೆ ಯೋಗ್ಯವಾದ ಪುರುಷ ಸಹವಾಸ ಧರ್ಮವನ್ನು ಸ್ವೀಕರಿಸುವಳು. ಆಗ ನೀನು ಈಕೆಯ ಮೂಲಕ ಬಹಳ ಮಂದಿ ಪ್ರಜೆಗಳನ್ನು ಪಡೆಯಲು ಸಮರ್ಥನಾಗುವೆ.

ದಕ್ಷಬ್ರಹ್ಮನೇ! ಇಲ್ಲಿಯವರೆಗೂ ಮಾನಸಿಕವಾದ ಸೃಷ್ಟಿಯು ಆಗುತ್ತಿತ್ತು. ಆದರೆ ಈಗ ನಿನ್ನ ಅನಂತರ ಎಲ್ಲ ಪ್ರಜೆಗಳೂ ನನ್ನ ಮಾಯೆಯಿಂದ ಸ್ತ್ರೀ-ಪುರುಷಸಂಯೋಗದ ಮೂಲಕವೇ ಉಂಟಾಗುವರು ಮತ್ತು ನನಗೆ ಕಾಣಿಕೆಯನ್ನು ಒಪ್ಪಿಸುವರು. ಆ ಧರ್ಮದ ಮೂಲಕ ನನ್ನ ಸೇವೆಯನ್ನು ಮಾಡುವರು."

ಶ್ರೀಶುಕಮಹರ್ಷಿಗಳು ಹೇಳುತ್ತಿದ್ದಾರೆ :

ಮಹಾರಾಜ ಪರೀಕ್ಷಿತ! ವಿಶ್ವಕ್ಕೆಲ್ಲಾ ಜೀವನಪ್ರದನಾದ ಶ್ರೀಭಗವಂತನಾದ ಶ್ರೀಹರಿಯು ಹೀಗೆ ಹೇಳಿ ದಕ್ಷನ ಮುಂದುಗಡೆಯೇ ಕನಸಿನಲ್ಲಿ ಕಂಡ ವಸ್ತುವು ಕನಸು ಮುಗಿದೊಡನೆಯೇ ಲೋಪಹೊಂದುವಂತೆ ಅಂತರ್ಧಾನ ಹೊಂದಿಬಿಟ್ಟನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಷಷ್ಠಸ್ಕಂಧದ ೪ನೆಯ ಅಧ್ಯಾಯವು ಮುಗಿಯಿತು.

ಷಷ್ಠಸ್ಕಂಧ ೫ನೆಯ ಅಧ್ಯಾಯ

ಶ್ರೀನಾರದರ ಉಪದೇಶದಿಂದ ದಕ್ಷಪುತ್ರರು ವಿರಕ್ತರಾದುದು : ದಕ್ಷನಿಂದ ಶ್ರೀನಾರದರಿಗೆ ಶಾಪ

ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

ತಸ್ಯಾಂ ಪಾಞ್ಚಜನ್ಯಾಂ ವೈ ವಿಷ್ಣುಮಾಯೋಪಬೃಂಹಿತಃ ।
ಹರ್ಯಶ್ವಸಂಜ್ಞಾನಯುತಂ ಪುತ್ರಾನಜನಯದ್ವಿಭುಃ ॥೧॥

ಎಲೈ ರಾಜೇಂದ್ರನೇ! ಕೇಳು. ಶ್ರೀಭಗವಂತನಾದ ನಾರಾಯಣ ಅದ್ಭುತವಾದ ಶಕ್ತಿಯ ಸಂಚಾರದಿಂದ ಪ್ರೇರಣೆ-ಸಾಮರ್ಥ್ಯ-ವಿಸ್ತಾರಗಳನ್ನು ಪಡೆದ ದಕ್ಷಪ್ರಜಾಪತಿಯು ಪಂಚಜನಪುತ್ರಿಯಾದ ಆ ಅಸಿಕ್ನೀದೇವಿಯಲ್ಲಿ ಹರ್ಯಶ್ವರೆಂದು ಹೆಸರು ಪಡೆದ ಹತ್ತು ಸಾವಿರ ಮಂದಿ ಪುತ್ರರನ್ನು ಪಡೆದನು.

ದಕ್ಷನಂದನರೆಲ್ಲರೂ ಒಂದೇ ಸ್ವಭಾವ, ಧರ್ಮ, ಆಚರಣೆಗಳುಳ್ಳವರಾಗಿದ್ದರು. 'ಸಂತಾನವನ್ನು ಪಡೆಯಿರಿ'–ಎಂದು ತಂದೆಯು ಆಜ್ಞೆಯನ್ನೀಯಲು ಅವರೆಲ್ಲರೂ ತಪಸ್ಸನ್ನು ಮಾಡುವುದಕ್ಕೋಸ್ಕರ ಪಶ್ಚಿಮಕ್ಕೆ ಪ್ರಯಾಣ ಬೆಳೆಸಿದರು. ಪಶ್ಚಿಮದಿಕ್ಕಿನಲ್ಲಿ ಸಿಂಧೂನದಿ ಮತ್ತು ಸಮುದ್ರಗಳ ಸಂಗಮಸ್ಥಾನದಲ್ಲಿ ನಾರಾಯಣಸರೋವರವೆಂಬ ದೊಡ್ಡ ತೀರ್ಥವುಂಟು. ಬಹಳ ದೊಡ್ಡ ಮುನಿಗಳೂ ಸಿದ್ಧಪುರುಷರೂ ವಾಸಮಾಡುತ್ತಿರುವ ಪವಿತ್ರ

ವಾದ ಸ್ಥಳವದು. ಹರ್ಯಶ್ವರು ಆ ನಾರಾಯಣಸರೋವರದಲ್ಲಿ ಸ್ನಾನ ಮಾಡಲು ಒಡನೆಯೇ ಅವರ ಅಂತಃಕರಣಗಳು ಎಲ್ಲ ಕಲ್ಮಷಗಳನ್ನೂ ಕಳೆದು ಕೊಂಡು ಪರಿಶುದ್ಧವಾದುವು. ಅವರ ಬುದ್ಧಿಯು ಭಕ್ತಿ-ವೈರಾಗ್ಯಮಯ ವಾದ ಪರಮಹಂಸಭಾಗವತಧರ್ಮದಲ್ಲಿ ನೆಲೆಗೊಂಡಿತು. ಆದರೂ ತಂದೆಯ ಆಜ್ಞೆಗೆ ಒಳಪಟ್ಟಿದ್ದರಿಂದ ಅವರು ಸಂತಾನಾರ್ಥವಾಗಿ ಉಗ್ರವಾದ ತಪಸ್ಸನ್ನು ಕೈಗೊಂಡು ಆಚರಿಸುತ್ತಿದ್ದರು. ಹೀಗೆ ಪರಮಹಂಸಭಾಗವತ ಧರ್ಮದಲ್ಲಿ ಅಭಿರುಚಿಯನ್ನು ಹೊಂದಿದ್ದರೂ ಅವರು ಪ್ರಜಾವೃದ್ಧಿಯಲ್ಲಿ ಆಸಕ್ತರಾಗಿದ್ದುದನ್ನು ಕಂಡು ದೇವರ್ಷಿಗಳಾದ ನಾರದರು ಅವರ ಬಳಿಗೆ ಬಂದು ಹೀಗೆ ಉಪದೇಶಮಾಡಿದರು : (ಶ್ಲೋಕ 2-5)

ಉವಾಚ ಚಾಥ ಹರ್ಯಶ್ವಾಃ ಕಥಂ ಸ್ರಕ್ಷ್ಯಥ ವೈ ಪ್ರಜಾಃ ।
ಅದೃಷ್ಟ್ವಾನ್ತಂ ಭುವೋ ಯೂಯಂ ಬಾಲಿಶಾ ಬತ ಪಾಲಕಾಃ ॥೬॥

ತಥೈಕಪುರುಷಂ ರಾಷ್ಟ್ರಂ ಬಿಲಂ ಚಾದೃಷ್ಟನಿರ್ಗಮಮ್ ।
ಬಹುರೂಪಾಂ ಸ್ತ್ರಿಯಂ ಚಾಪಿ ಪುಮಾಂಸಂ ಪುಂಶ್ಚಲೀಪತಿಮ್ ॥೭॥

ನದೀಮುಭಯತೋವಾಹಾಂ ಪಞ್ಚಪಞ್ಚಾದ್ಭುತಂ ಗೃಹಮ್ ।
ಕ್ವಚಿದ್ಧಂಸಂ ಚಿತ್ರಕಥಂ ಕ್ಷೌರಪವ್ಯಂ ಸ್ವಯಂ ಭ್ರಮಿಮ್ ॥೮॥

ಕಥಂ ಸ್ವಪಿತುರಾದೇಶಮವಿದ್ವಾಂಸೋ ವಿಪಶ್ಚಿತಃ ।
ಅನುರೂಪಮವಿಜ್ಞಾಯ ಅಹೋ ಸರ್ಗಂ ಕರಿಷ್ಯಥ ॥೯॥

"ಎಲೈ ಹರ್ಯಶ್ವರೇ! ನೀವು ಪ್ರಜಾಪತಿಗಳೇ ಆಗಿದ್ದರೂ ಮೂರ್ಖ ರಾಗಿದ್ದೀರಲ್ಲಾ! ಭೂಮಿಯ ಕೊನೆಯನ್ನೇ ನೀವು ಕಂಡಿಲ್ಲ. ಹೀಗಿರುವಾಗ ಸೃಷ್ಟಿಯನ್ನು ಹೇಗೆ ಮಾಡುವಿರಿ? ಒಬ್ಬನೇ ಪುರುಷನು ಇರುವ ದೇಶ ವೊಂದುಂಟು. ಹೊರಕ್ಕೆ ಬರಲು ಮಾರ್ಗವೇ ಇಲ್ಲದೇ ಇರುವ ಒಂದು ಬಿಲವೂ ಉಂಟು. ಬಹುರೂಪಗಳುಳ್ಳ ಒಬ್ಬ ಹೆಂಗಸೂ ಇದ್ದಾಳೆ. ವ್ಯಭಿಚಾರಿಣಿಯಾದ ಆ ಹೆಂಗಸಿಗೆ ಪತಿಯಾಗಿರುವ ಪುರುಷನೂ ಇದ್ದಾನೆ. ಹಿಂದುಗಡೆ ಮತ್ತು ಮುಂದುಗಡೆ ಎರಡೂ ಕಡೆಗಳಿಗೂ ಹರಿಯುತ್ತಿರುವ ಒಂದು ನದಿಯೂ ಇದೆ. ಇಪ್ಪತ್ತೈದು ಪದಾರ್ಥಗಳಿಂದ ನಿರ್ಮಿತವಾಗಿರುವ ಒಂದು ವಿಚಿತ್ರವಾದ ಮನೆಯುಂಟು. ಅತಿವಿಚಿತ್ರವಾದ ಕಥೆಯುಳ್ಳ

ಒಂದು ಹಂಸವೂ ಇದೆ. ಕತ್ತರಿ ಮತ್ತು ವಜ್ರ ಇವೆರಡರಿಂದಲೂ ಮಾಡಲ್ಪಟ್ಟು ತನಗೆ ತಾನೇ ಸುತ್ತುತ್ತಿರುವ ಒಂದು ಚಕ್ರವೂ ಉಂಟು. ಮೂರ್ಖರಾದ ನೀವು ಸರ್ವಜ್ಞನಾದ ತಂದೆಯ ಉಚಿತವಾದ ಆದೇಶವನ್ನು ಅರ್ಥಮಾಡಿಕೊಂಡಿಲ್ಲ. ನಾನು ಈಗ ಹೇಳಿದ ವಸ್ತುಗಳನ್ನು ಕಂಡಿಲ್ಲ. ಆ ಅರಿವನ್ನು ಪಡೆದು ಆ ವಸ್ತುಗಳನ್ನು ನೋಡುವವರೆಗೂ ನೀವು ತಂದೆಯ ಅಣತಿಯಂತೆ ಸೃಷ್ಟಿಯನ್ನು ಮಾಡಲು ಹೇಗೆ ಸಮರ್ಥರಾಗುವಿರಿ?"

ಶ್ರೀಶುಕಮರ್ಷಿಗಳು ಹೇಳುತ್ತಾರೆ :

ಮಹಾರಾಜ ಪರೀಕ್ಷಿತ! ಹುಟ್ಟಿನಿಂದಲೇ ಮಹಾಬುದ್ಧಿಶಾಲಿಗಳಾಗಿದ್ದ ಹರ್ಯಶ್ವರು ದೇವರ್ಷಿಯ ಆ ಒಗಟೆಯ ಮಾತುಗಳನ್ನು ಕೇಳಿ ತಾವೇ ತಮ್ಮ ಬುದ್ಧಿಯಲ್ಲಿ ಹೀಗೆ ವಿಚಾರಮಾಡಿದರು : 'ದೇವರ್ಷಿಗಳು ಹೇಳಿರುವ ಮಾತುಗಳು ನಿಜವೇ ಆಗಿವೆ. ಇವರು ಹೇಳಿರುವ ಭೂಮಿಯೆಂಬುದು ಆತ್ಮನಿಗೆ ಅನಾದಿಕಾಲದಿಂದ ಬಂಧವಾಗಿರುವ ಈ ಲಿಂಗ ಶರೀರವು. ಇದು ನಾಶಹೊಂದುವುದನ್ನು ನೋಡದೇ ಮೋಕ್ಷಕ್ಕೆ ಉಪಯೋಗಪಡದೇ ಇರುವ ಕರ್ಮಗಳಲ್ಲಿಯೇ ಆಸಕ್ತರಾಗಿರುವುದರಿಂದ ಏನು ಲಾಭ? ಅವರು ನಿರ್ದೇಶಿಸಿದ ಒಬ್ಬನೇ ಪುರುಷನು ಈಶ್ವರನೇ. ಅವನು ಜಾಗೃತ್, ಸ್ವಪ್ನ, ಸುಷುಪ್ತಿಗಳೆಂಬ ಮೂರು ಅವಸ್ಥೆಗಳಿಗಿಂತಲೂ ಮತ್ತು ಅವುಗಳ ಅಭಿಮಾನಿದೇವತೆಗಳಿಗಿಂತಲೂ ಮೇಲಾಗಿ 'ತುರೀಯ' ನಾಲ್ಕನೆಯವನು ಎನಿಸುತ್ತಾನೆ. ಆತನು ತನಗೆ ಬೇರೆ ಯಾವ ಆಶ್ರಯವೂ ಇಲ್ಲದೆ ತಾನು ಎಲ್ಲಕ್ಕೂ ಆಶ್ರಯನಾಗಿದ್ದಾನೆ. ಪ್ರಕೃತಿ ಮುಂತಾದುವುಗಳನ್ನು ಮೀರಿರುವ ಆ ನಿತ್ಯಮುಕ್ತನಾದ ಪರಮಾತ್ಮನನ್ನು ಕಾಣದೇ ಶ್ರೀಭಗವಂತನಿಗೆ ಸಮರ್ಪಣೆಯಾಗದ ಕರ್ಮಗಳನ್ನೇ ಮಾಡುತ್ತಿರುವುದರಿಂದ ಜೀವನಿಗೆ ಏನುತಾನೇ ಲಾಭವಾದೀತು? ಹಿಂದಿರುಗಲು ಬಾಗಿಲಿಲ್ಲದ ಬಿಲವೆಂದು ಅವರು ಹೇಳಿದ್ದು ಅಂತರ್ಜ್ಯೋತಿಸ್ವರೂಪನಾದ ಪರಮಾತ್ಮನ ಧಾಮವೇ ಆಗಿದೆ. ಅಲ್ಲಿಗೆ ಹೋದವನು ಸಂಸಾರಕ್ಕೆ ಮರಳುವುದಿಲ್ಲ. ಆ ಪರಮಾತ್ಮ ಧಾಮವನ್ನು ತಿಳಿಯದೇ ವಿನಾಶಹೊಂದುವ ಸ್ವಭಾವವುಳ್ಳ ಸ್ವರ್ಗವೇ ಮುಂತಾದ ಫಲಗಳನ್ನು ಕೊಡುವ ಕರ್ಮಗಳನ್ನು ಮಾಡುತ್ತಿರುವುದರಿಂದ ಏನು ಪ್ರಯೋಜನ? ನಾರದಮಹರ್ಷಿಗಳ ಹೇಳಿಕೆಯಲ್ಲಿ ಬಂದಿರುವ

ಬಹುರೂಪಿಣಿಯಾದ ಹೆಂಗಸು ನಮ್ಮ ಬುದ್ಧಿಯೇ ಆಗಿದೆ. ಅದು ಸತ್ತ್ವ, ರಜಸ್ಸು, ತಮಸ್ಸು–ಎಂಬ ಗುಣಗಳನ್ನು ಭಿನ್ನ-ಭಿನ್ನಪ್ರಮಾಣಗಳಲ್ಲಿ ಧರಿಸಿ ನಾನಾಸ್ಥಳಗಳಲ್ಲಿ ಸಂಚರಿಸುವುದರಿಂದ ವ್ಯಭಿಚಾರಿಣಿಯಾದ ಹೆಂಗಸನ್ನೂ ಹೋಲುವುದು. ಈ ಜೀವನದಲ್ಲಿ ಇದರ ಅಂತವನ್ನು ತಿಳಿಯದೇ ಇದ್ದರೆ ಅಂದರೆ : ವಿವೇಕವನ್ನು ಪಡೆಯದೇ ಇದ್ದರೆ–ಅಶಾಂತಿಯನ್ನು ವೃದ್ಧಿ ಪಡಿಸುವ ಕರ್ಮಗಳನ್ನೇ ಆಚರಿಸುತ್ತಿದ್ದರೆ–ಉಪಯೋಗವೇನು? ಈ ಬುದ್ಧಿಯು ಕುಲಟೆಯಾದ ಹೆಂಗಸಿಗೆ ಸಮಾನವಾಗಿದೆ. ಅದರ ಸಹವಾಸಮಾಡಿ ಅದರ ಹಿಂದೆ ಕಂಡ-ಕಂಡಲ್ಲಿ ಅಲೆದಾಡುವ ಪುರುಷನು ಯಾರು? ಎಂದರೆ : ಈ ದುರ್ಬುದ್ಧಿಗೆ ವಶನಾಗಿರುವ ಜೀವನು. ಈ ಜೀವನ ಭಿನ್ನ-ಭಿನ್ನವಾದ ಗತಿಗಳನ್ನು ತಿಳಿದುಕೊಳ್ಳದೇ ವಿವೇಕರಹಿತವಾದ ಕರ್ಮಗಳನ್ನು ಆಚರಿಸುತ್ತಿದ್ದರೆ ಏನು ಸಿದ್ಧಿ ದೊರಕೀತು? ಹಿಂದುಗಡೆಗೆ ಮತ್ತು ಮುಂದುಗಡೆಗೆ–ಎರಡೂ ಕಡೆಗಳಿಗೂ ಹರಿಯುವ ನದಿಯೆಂದರೆ ಮಾಯೆ. ಇದು ಸೃಷ್ಟಿಯನ್ನೂ ಮಾಡುವುದು. ಇದರ ಪ್ರವಾಹದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ತಪಸ್ಸು, ವಿದ್ಯೆ ಮುಂತಾದ ತೀರಗಳನ್ನು ಯಾರಾದರೂ ಆಶ್ರಯಿಸಿದರೆ ಅವರನ್ನು ತಡೆಗಟ್ಟುವುದಕ್ಕಾಗಿ ಮಾಯೆಯು ಕ್ರೋಧ ಮತ್ತು ಅಹಂಕಾರಗಳೇ ಮುಂತಾದ ರೂಪಗಳಲ್ಲಿ ಮತ್ತೂ ವೇಗದಿಂದ ಹರಿಯತೊಡಗುವುದು. ಮನುಷ್ಯನು ಇದರ ವೇಗಕ್ಕೆ ಸಿಕ್ಕಿಹಾಕಿಕೊಂಡು ಪರವಶನಾಗಿ ಅವಿವೇಕಿಯಾದ ಪಕ್ಷದಲ್ಲಿ ಆತನು ಮಾಯಾಮಯವಾದ ಕರ್ಮಗಳನ್ನು ಆಚರಿಸಿ ಏನು ಲಾಭವನ್ನು ಪಡೆದಾನು? ಇಪ್ಪತ್ತೈದುತತ್ತ್ವಗಳೇ ದೇವರ್ಷಿಗಳು ಸೂಚಿಸಿದ ಅದ್ಭುತವಾದ ಮನೆಯು. ಅದಕ್ಕೆ ಆಶ್ಚರ್ಯಮಯವಾದ ಆಶ್ರಯವಾಗಿರುವವನು ಪುರುಷನು. ಕಾರ್ಯ-ಕಾರಣಾತ್ಮಕವಾದ ಜಗತ್ತಿಗೆಲ್ಲಾ ಆತನೇ ಅಧಿಷ್ಠಾನವು. ಈ ಮಾತನ್ನರಿಯದೇ ನಿಜವಾದ ಸ್ವಾತಂತ್ರ್ಯವನ್ನು ಗಳಿಸದೇ ಸುಳ್ಳು-ಸುಳ್ಳಾದ ಸ್ವಾತಂತ್ರ್ಯದಿಂದ ಮಾಡಲ್ಪಡುವ ಕರ್ಮಗಳು ವ್ಯರ್ಥವೇ ಆಗುತ್ತವೆ. ಶ್ರೀಭಗವಂತನ ಸ್ವರೂಪವನ್ನು ತಿಳಿಸುವ ಶಾಸ್ತ್ರವೇ ಹಂಸವು. ಹಂಸವು ನೀರು-ಹಾಲುಗಳ ವಿವೇಕವನ್ನು ತೋರಿಸುವಂತೆ ಶಾಸ್ತ್ರವು ಬಂಧ-ಮೋಕ್ಷ, ಜಡ-ಚೇತನಗಳನ್ನು ಪ್ರತ್ಯೇಕಿಸಿ ವಿವೇಕವನ್ನು ಬೋಧಿಸುತ್ತದೆ.

ಇಂತಹ ಅಧ್ಯಾತ್ಮಶಾಸ್ತ್ರವೆಂಬ ಹಂಸದ ಆಸರೆಯನ್ನು ಪಡೆಯದೇ ನಮ್ಮನ್ನು ಹೊರಮುಖರನ್ನಾಗಿಯೇ ಮಾಡುವ ಕರ್ಮಗಳನ್ನು ಆಚರಿಸಿ ಲಾಭವೇನು? ಶ್ರೀನಾರದರು ತಿಳಿಸಿದ ಚಕ್ರವು ಯಾವುದು?–ಎಂದರೆ : ಕಾಲಚಕ್ರ. ಇದು ನಿರಂತರವಾಗಿ ಸುತ್ತುತ್ತಿರುವ ಚಕ್ರ. ಚೂರಿ ಮತ್ತು ವಜ್ರಗಳಂತೆ ತೀಕ್ಷ್ಣವಾದ ಅಲಗುಗಳುಳ್ಳ ಈ ಚಕ್ರವು ಇಡೀ ಜಗತ್ತನ್ನೂ ತನ್ನ ಕಡೆಗೇ ಸೆಳೆಯುತ್ತಿದೆ. ಯಾರಿಂದಲೂ ತಡೆಯಲಾಗದೆ ಸ್ವತಂತ್ರವಾಗಿ ಸುತ್ತುತ್ತಿರುವ ಚಕ್ರವಿದು. ಇದನ್ನರಿಯದೇ ಕರ್ಮಗಳ ಫಲವನ್ನೇ ನಿತ್ಯವೆಂದು ತಿಳಿದು ಮೂರ್ಖರು ಸಕಾಮರಾಗಿ ಕರ್ಮಗಳನ್ನು ಅನುಷ್ಠಾನಮಾಡುತ್ತಾರೆ. ಅವರಿಗೆ ಈ ಅನಿತ್ಯವಾದ ಕರ್ಮಗಳಿಂದ ಏನುತಾನೇ ಪ್ರಯೋಜನವಾದೀತು? ದೇವರ್ಷಿಗಳು ನಿರ್ದೇಶನಮಾಡಿರುವ 'ತಂದೆಯು' ಶಾಸ್ತ್ರವು. ಏಕೆಂದರೆ : ವಿದ್ಯಾಮಯವಾದ ಎರಡನೆಯ ಜನ್ಮವುಂಟಾಗುವುದು ಇದರಿಂದಲೇ. ಇದು ಕರ್ಮಗಳಿಂದ ನಿವೃತ್ತರಾಗಬೇಕೆಂದು ಉಪದೇಶಮಾಡುತ್ತದೆಯೇ ಹೊರತು ಕರ್ಮಗಳಲ್ಲಿ ಪ್ರವೃತ್ತರಾಗಬೇಕೆಂದಲ್ಲವು. ಇದನ್ನರಿಯದವನು ಗುಣಮಯ ವಾದ ಶಬ್ದವೇ ಮುಂತಾದ ವಿಷಯಗಳಲ್ಲಿಯೇ ನಂಬಿಕೆಯನ್ನಿಡುತ್ತಾನೆ. ಇಂತಹವನು ಕರ್ಮಗಳಿಂದ ನಿವೃತ್ತಿಹೊಂದಬೇಕೆಂಬ ಆಜ್ಞೆಯನ್ನು ಹೇಗೆ ತಾನೇ ಪಾಲನೆಮಾಡುವನು?"

ಹರ್ಯಶ್ವರು ಐಕಮತ್ಯದಿಂದ ಹೀಗೆ ನಿಶ್ಚಯಿಸಿಕೊಂಡು ನಾರದರಿಗೆ ಪ್ರದಕ್ಷಿಣೆಯನ್ನು ಮಾಡಿ, ಎಲ್ಲಿಗೆ ಪ್ರಯಾಣಮಾಡಿದರೆ ಸಂಸಾರಕ್ಕೆ ಹಿಂದಿರುಗಬೇಕಾಗುವುದಿಲ್ಲವೋ–ಅಂತಹ ಮೋಕ್ಷಮಾರ್ಗದ ಪಥಿಕರಾಗಿ ಬಿಟ್ಟರು. ಅನಂತರ ದೇವರ್ಷಿನಾರದರು ಸಂಗೀತಲಹರಿಯ ಸ್ವರಬ್ರಹ್ಮದಲ್ಲಿ ಅಭಿವ್ಯಕ್ತವಾಗುವ ಶ್ರೀಭಗವಂತನಾದ ಶ್ರೀಕೃಷ್ಣನ ಅಡಿದಾವರೆಗಳಲ್ಲಿ ತಮ್ಮ ಚಿತ್ತವನ್ನು ಅಖಂಡವಾಗಿ ಸ್ಥಿರಗೊಳಿಸಿ ಲೋಕ-ಲೋಕಾಂತರಗಳಲ್ಲಿ ಸಂಚಾರಮಾಡತೊಡಗಿದರು. (ಶ್ಲೋಕ 10-22)

ಮಹಾರಾಜ! ತನ್ನ ಶೀಲಸಂಪನ್ನರಾದ ಸುಪುತ್ರರು ನಾರದರ ಉಪದೇಶದಿಂದ (ಇಹಲೋಕದಿಂದ) ನಷ್ಟರಾಗಿಬಿಟ್ಟರೆಂಬ ಸಮಾಚಾರವನ್ನು ತಿಳಿದು ದಕ್ಷನಿಗೆ ತುಂಬಾ ಸಂಕಟವಾಯಿತು. ಪಶ್ಚಾತ್ತಾಪವಾಯಿತು. ಒಳ್ಳೆಯ ಸಂತಾನವನ್ನು ಪಡೆಯುವುದೂ ಒಂದು ದೃಷ್ಟಿಯಿಂದ ದುಃಖಕ್ಕೆ

ಕಾರಣವೇ ಆಗುತ್ತದೆಯಷ್ಟೆ! ಆಗ ಬ್ರಹ್ಮದೇವರು ಆತನನ್ನು ಬಹಳವಾಗಿ ಸಮಾಧಾನಪಡಿಸಿದರು. ಅನಂತರ ದಕ್ಷಪ್ರಜಾಪತಿಯು ಪತ್ನಿಯಾದ ಪಂಚಜನನ ಪುತ್ರಿ ಅಸಿಕ್ನಿಯ ಗರ್ಭದಲ್ಲಿ ಮತ್ತೆ ಒಂದು ಸಾವಿರ ಮಂದಿ ಪುತ್ರರನ್ನು ಪಡೆದನು. ಅವರಿಗೆ ಶಬಲಾಶ್ವರೆಂದು ಹೆಸರು. ಅವರೂ ಕೂಡ ತಂದೆಯ ಆಣತಿಯನ್ನು ಶಿರಸಾವಹಿಸಿ ಪ್ರಜಾಸೃಷ್ಟಿಯನ್ನು ಮಾಡುವ ಉದ್ದೇಶದಿಂದ ತಪಸ್ಸನ್ನಾಚರಿಸುವುದಕ್ಕಾಗಿ ತಮ್ಮ ಅಣ್ಣಂದಿರು ಸಿದ್ಧಿಯನ್ನು ಪಡೆದ ನಾರಾಯಣಸರೋವರಕ್ಕೇ ಹೋದರು. ಅಲ್ಲಿ ಆ ಸರೋವರದಲ್ಲಿ ಸ್ನಾನಮಾಡಿದೊಡನೆಯೇ ಅವರ ಅಂತಃಕರಣದ ಕೊಳೆಯೆಲ್ಲಾ ತೊಳೆದು ಹೋಗಿ ಅವರು ಪರಿಶುದ್ಧರಾಗಿಬಿಟ್ಟರು. ಆಗ ಅವರು ಪರಬ್ರಹ್ಮಸ್ವರೂಪ ವಾದ ಪ್ರಣವವನ್ನು ಜಪಿಸುತ್ತಾ ಘೋರವಾದ ತಪಸ್ಸನ್ನು ಆಚರಿಸ ತೊಡ ಗಿದರು. ಅವರು ಕೆಲವು ತಿಂಗಳುಗಳ ಕಾಲ ಕೇವಲ ಜಲದ ಆಹಾರವನ್ನೂ ಮತ್ತೆ ಕೆಲವು ಮಾಸಗಳ ಕಾಲ ಕೇವಲ ವಾಯುವಿನ ರೂಪವಾದ ಆಹಾರ ವನ್ನೂ ಸೇವಿಸುತ್ತಾ–'ವಿಶುದ್ಧಚಿತ್ತದಲ್ಲಿ ನಿವಾಸಮಾಡುವವನೂ, ಸರ್ವಾಂತ ರ್ಯಾಮಿಯೂ, ಸರ್ವವ್ಯಾಪಕನೂ, ಪರಮಹಂಸಸ್ವರೂಪಿಯೂ, ಓಂಕಾರಸ್ವರೂಪನೂ ಆಗಿರುವ ಪರಮಪುರುಷನಾದ ನಾರಾಯಣನನ್ನು ನಮಸ್ಕಾರಸಹಿತವಾಗಿ ಧ್ಯಾನಮಾಡುವೆವು'–ಎಂಬ ಅರ್ಥವುಳ್ಳ–

ಓಂ ನಮೋ ನಾರಾಯಣಾಯ ಪುರುಷಾಯ ಮಹಾತ್ಮನೇ ।
ವಿಶುದ್ಧಸತ್ತ್ವಧಿಷ್ಣ್ಯಾಯ ಮಹಾಹಂಸಾಯ ಧೀಮಹಿ ॥೨೮॥

ಎಂಬ ಮಂತ್ರವನ್ನು ಜಪಿಸುತ್ತಾ ಮಂತ್ರಾಧಿಪತಿಯಾದ ಶ್ರೀಭಗವಂತ ನನ್ನು ಆರಾಧನೆಮಾಡಿದರು ಮತ್ತು ಪ್ರಜಾಸೃಷ್ಟಿಯ ಉದ್ದೇಶವುಳ್ಳ ತಪಸ್ಸಿ ನಲ್ಲಿ ಮಗ್ನರಾದರು. ದೇವರ್ಷಿನಾರದರು ಹಿಂದಿನಂತೆಯೇ ಅವರ ಬಳಿಗೂ ಬಂದು ಅವರ ಅಣ್ಣಂದಿರಿಗೆ ಹೇಳಿದ್ದ ಒಗಟೆಯ ಮಾತುಗಳನ್ನೇ ಅವರಿಗೂ ಉಪದೇಶಿಸಿದರು. "ಎಲೈ ದಕ್ಷಪ್ರಜಾಪತಿಯ ಪುತ್ರರೇ! ನನ್ನ ಉಪದೇಶ ವನ್ನು ಕೇಳಿರಿ. ನಿಮಗೆ ನಿಮ್ಮ ಅಣ್ಣಂದಿರ ಮೇಲೆ ತುಂಬಾ ಪ್ರೇಮವಿದೆ ಯಲ್ಲವೇ? ಆದುದರಿಂದ ಅವರು ಹಿಡಿದ ಮಾರ್ಗವನ್ನೇ ನೀವೂ ಅನುಸರಿ ಸಿರಿ. ಧರ್ಮಜ್ಞರಾದ ಯಾವ ತಮ್ಮಂದಿರು–ತಮ್ಮ ಅಣ್ಣಂದಿರು ಹಿಡಿದ ಶ್ರೇಷ್ಠ

ವಾದ ದಾರಿಯನ್ನೇ ಅನುಸರಿಸುವವರೋ–ಅವರು ತಾನೇ ನಿಜವಾದ ಒಡಹುಟ್ಟಿದವರೆನಿಸುವರು? ಅಂತಹ ಪುಣ್ಯಶಾಲಿಗಳು ಪರಲೋಕದಲ್ಲಿ ಮರುದ್ಗಣಗಳೊಡನೆ ಆನಂದವನ್ನು ಅನುಭವಿಸುವರು"–ಎಂದೂ ಅವರಿಗೆ ಉಪದೇಶಮಾಡಿ ನಾರದರು ಅಲ್ಲಿಂದ ಹೊರಟುಹೋದರು. ಅಂತೆಯೇ ಶಬಲಾಶ್ವರು ತಮ್ಮ ಅಣ್ಣಂದಿರ ಮಾರ್ಗವನ್ನೇ ಅನುಸರಿಸಿಬಿಟ್ಟರು. ನಾರದರ ದರ್ಶನವು ಎಂದಿಗೂ ವ್ಯರ್ಥವಾಗುವುದಿಲ್ಲವಷ್ಟೇ! ಆ ಶಬಲಾಶ್ವರು ಒಳಮುಖವಾದ ವೃತ್ತಿಗೆ ಮಾತ್ರವೇ ದೊರೆಯಲು ಯೋಗ್ಯವಾಗಿ, ಶ್ರೀಭಗವಂತನ ಪ್ರಾಪ್ತಿಗೆ ಅನುಕೂಲವಾಗಿ, ಅತ್ಯಂತಸುಂದರ ವಾಗಿರುವ ಮಾರ್ಗದ ಪಥಿಕರಾದರು. ಅಲ್ಲಿ ಪ್ರಯಾಣಮಾಡಿದವರ ಸ್ಥಿತಿಯು ಕಳೆದುಹೋದ ರಾತ್ರಿಗೆ ಸಮವಾದುದು. ಅಲ್ಲಿಗೆ ಹೋದವರು ಯಾರೂ ಅಲ್ಲಿಂದ ಹಿಂದಿರುಗಿಯೂ ಇಲ್ಲ ; ಮುಂದೆ ಹಿಂದಿರುಗುವುದೂ ಇಲ್ಲ.

ಅದೇ ಸಮಯದಲ್ಲಿ ದಕ್ಷಪ್ರಜಾಪತಿಯ ಮುಂದೆ ಬಹಳ ಅಪಶಕುನ ಗಳೂ ಉತ್ಪಾತಗಳೂ ಕಾಣಿಸತೊಡಗಿದುವು. ತನ್ನ ಪುತ್ರರಿಗೆ ಅನಿಷ್ಟ ವಾಗಿರಬಹುದೋ ಏನೋ–ಎಂಬ ಶಂಕೆಯು ಆತನ ಮನಸ್ಸನ್ನು ಆವರಿ ಸಿತು. ಅಷ್ಟರಲ್ಲೇ ಆತನಿಗೆ ನಾರದರು ಹಿಂದಿನಂತೆಯೇ ಆಗಮಿಸಿ ಈಗಲೂ ತನ್ನ ಪುತ್ರರು ಇಹಲೋಕದಿಂದ ನಷ್ಟರಾಗುವಂತೆ ಮಾಡಿಬಿಟ್ಟಿದ್ದಾರೆಂಬ ಸುದ್ದಿ ತಿಳಿಯಿತು. ಪುತ್ರಶೋಕದಿಂದ ಅತ್ಯಂತವ್ಯಥೆಗೊಂಡ ಆ ಪ್ರಜಾಪತಿಗೆ ನಾರದರ ಮೇಲೆ ಮಿತಿಮೀರಿದ ಕ್ರೋಧವುಂಟಾಯಿತು. ಅವರ ಭೇಟಿಯು ಒದಗಿದಾಗ ಕೋಪದಿಂದ ತುಟಿಗಳು ಅದುರುತ್ತಿರಲು ಆವೇಶಭರಿತನಾಗಿ ಅವರನ್ನು ಕುರಿತು ಹೀಗೆಂದನು : (ಶ್ಲೋಕ 28-35)

ನಾರದರಿಗೆ ದಕ್ಷನ ಶಾಪವಚನ :

"ಎಲವೋ ದುಷ್ಟನೇ! ನೀನು ಸುಳ್ಳು-ಸುಳ್ಳಾಗಿ ಸಾಧುವೇಷವನ್ನು ಧರಿಸಿರುವವನು. ಸರಳಹೃದಯರಾದ ನನ್ನ ಮಕ್ಕಳಿಗೆ ಭಿಕ್ಷುಗಳ ದಾರಿ ಯನ್ನು ಉಪದೇಶಮಾಡಿ ನನಗೆ ಎಂತಹ ಅಪಕಾರವನ್ನೆಸಗಿದೆ? ಅವರು ಇನ್ನೂ ಬ್ರಹ್ಮಚರ್ಯದಿಂದ ಋಷಿಋಣವನ್ನೂ, ಯಜ್ಞಗಳಿಂದ ದೇವಋಣ

ವನ್ನೂ, ಸಂತಾನವನ್ನು ಪಡೆಯುವುದರಿಂದ ಪಿತೃಋಣವನ್ನೂ ತೀರಿಸಲೇ ಬೇಕಾಗಿತ್ತು. ಕರ್ಮಗಳ ವಿಷಯದ ವಿಚಾರವನ್ನೇ ಅವರು ಇನ್ನೂ ಮಾಡಿರಲಿಲ್ಲ. ಹೀಗಿರುವಾಗ ಪಾಪಿಯಾದ ನೀನು ಅವರಿಗೆ ಈಗಲೇ ಬ್ರಹ್ಮವಿದ್ಯೆಯನ್ನು ಉಪದೇಶಮಾಡಿ ಅವರ ಎರಡು ಲೋಕಗಳ ಸುಖಗಳನ್ನೂ ನಾಶಪಡಿಸಿಬಿಟ್ಟೆ.* ನಿಜವಾಗಿಯೂ ನಿನ್ನ ಹೃದಯದಲ್ಲಿ ಎಳ್ಳನಿತೂ ದಯೆಯೆಂಬುದಿಲ್ಲ. ಹೀಗೆಯೇ ಅರಿಯದ ಮಕ್ಕಳ ಬುದ್ಧಿಯನ್ನು ಕೆಡಿಸುತ್ತಾ ಅಲೆದಾಡುತ್ತಿರುವವನು ನೀನು. ಶ್ರೀಭಗವಂತನ ಭಕ್ತರ ವರ್ಗದಲ್ಲಿ ಸೇರಿಕೊಂಡು ನೀನು ಅವರ ಹೆಸರಿಗೆ ಕಳಂಕವನ್ನು ತಂದಿರುವೆ. ನಿಸ್ಸಂಶಯವಾಗಿಯೂ ನಾಚಿಕೆಗೆಟ್ಟವನು ನೀನು. ಶ್ರೀಭಗವಂತನ ಭಕ್ತರು ದುಃಖಪಡುವ ಪ್ರಾಣಿಗಳ ಮೇಲೆ ಸದಾ ದಯೆಯನ್ನು ಹರಿಸುವುದರಲ್ಲಿ ಆಸಕ್ತರಾಗಿರುತ್ತಾರೆ. ಆದರೆ ನೀನು ಮಾತ್ರ ಅವರ ಗುಂಪಿನಲ್ಲಿದ್ದರೂ ಆ ಪ್ರೇಮಭಾವವನ್ನು ನಾಶಪಡಿಸುತ್ತಿರುವೆ. ಯಾವ ವಿಷಯದಲ್ಲಿಯೂ ಯಾರಿಗೆ ವೈರವಿಲ್ಲವೋ ಅಂತಹವರ ಮೇಲೂ ವೈರವನ್ನು ಸಾಧಿಸುವವನು ನೀನು. ವೈರಾಗ್ಯದಿಂದಲೇ ಸ್ನೇಹಪಾಶ-ವಿಷಯಾಸಕ್ತಿಗಳು ಕಡಿದುಹೋಗುತ್ತವೆಯೆಂದು ನೀನು ತಿಳಿದಿದ್ದರೆ–ಅದು ಶುದ್ಧ ತಪ್ಪು. ನಿನ್ನಂತಹ ಮೋಸದ ವೈರಾಗ್ಯವೇಷಧಾರಿಯಿಂದ ಯಾರಿಗೂ ನಿಜವಾದ ವೈರಾಗ್ಯವುಂಟಾಗುವುದಿಲ್ಲ. ವಿಷಯಗಳನ್ನು ತಾನೇ ಅನುಭವಿಸಿ ನೋಡುವವರೆಗೂ ಮನುಷ್ಯನಿಗೆ ಅವುಗಳ ತೀಕ್ಷ್ಣತೆಯೇನೆಂಬುದು ಮನವರಿಕೆಯಾಗುವುದಿಲ್ಲ. ವಿಷಯಗಳನ್ನು ನೇರವಾಗಿ ಅನುಭವಿಸಿ ಅವುಗಳು ದುಃಖಸ್ವರೂಪವಾಗಿವೆಯೆಂಬುದು ಮನವರಿಕೆಯಾದನಂತರ ಉಂಟಾಗುವಂತಹ ವೈರಾಗ್ಯವು ಇತರರ ಪ್ರಚೋದನೆಯಿಂದುಂಟಾಗುವುದಿಲ್ಲ. ನಾವು ಧರ್ಮದ ಮರ್ಯಾದೆಯನ್ನು ಪಾಲನೆಮಾಡುತ್ತಿರುವ ಒಳ್ಳೆಯ ಗೃಹಸ್ಥರು. ನಮಗೆ ನೀನು ಹಿಂದೆಯೂ ಸಹಿಸಲು ಅಸಾಧ್ಯವಾದ

---

* 'ಜಾಯಮಾನೋ ವೈ ಬ್ರಾಹ್ಮಣಸ್ತ್ರಿಭಿರ್ಋಣವಾಜಾಯತೇ । ಬ್ರಹ್ಮಚರ್ಯೇಣ ಋಷಿಭ್ಯೋ ಯಜ್ಞೇನ ದೇವೇಭ್ಯಃ ಪ್ರಜಯಾ ಪಿತೃಭ್ಯಃ । ಏಷ ವಾ ಅನೃಣೋ ಯಃ ಪುತ್ರೀ ಯಜ್ವಾ ಬ್ರಹ್ಮಚಾರಿ ವಾಸೀ ॥'

ಋಣಾನಿ ತ್ರೀಣ್ಯಪಾಕೃತ್ಯ ಮನೋ ಮೋಕ್ಷೇ ನಿವೇಶಯೇತ್ ।
ಅನಪಾಕೃತ್ಯ ಮೋಕ್ಷಂ ತು ಸೇವಮಾನಃ ಪತತ್ಯಧಃ ॥

ಬಹಳ ದೊಡ್ಡ ಅಪಕಾರವನ್ನು ಮಾಡಿದ್ದೆ. ಆದರೂ ಅದನ್ನು ನಾವು ಸಹಿಸಿಕೊಂಡೆವು. ಈಗ ನೋಡಿದರೆ ನೀನು ನಮ್ಮ ವಂಶಪರಂಪರೆಯನ್ನು ಕಡಿದು ಹಾಕುವುದಕ್ಕಾಗಿಯೇ ದೀಕ್ಷೆತೊಟ್ಟಿರುವುದು ಕಂಡುಬರುತ್ತಿದೆ. ಅದಕ್ಕಾಗಿಯೇ ನೀನು ನಮಗೆ ಎರಡನೆಯ ಬಾರಿಯೂ ಅಪಕಾರವನ್ನೆಸಗಿದ್ದೀಯೇ. ಆದುದರಿಂದ, ಎಲೈ ಮೂಢನೇ! ತೊಲಗು ಇಲ್ಲಿಂದ. ಇನ್ನು ಮುಂದೆ ಲೋಕ ಲೋಕಾಂತರಗಳಲ್ಲಿ ಸದಾ ಅಲೆದಾಡುತ್ತಿರು. ಎಲ್ಲಿಯೂ ನೆಲೆಯ ಜಾಗವು ಸಿಕ್ಕದೇ ನೀನು ಸರ್ವದಾ ಸಂಚಾರದಲ್ಲಿಯೇ ಇರುವೆ.” (ಶ್ಲೋಕ 36-43)

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಪ್ರತಿಜಗ್ರಾಹ ತದ್ಬಾಢಂ ನಾರದಃ ಸಾಧುಸಮ್ಮತಃ ।
ಏತಾವಾನ್ಸಾಧುವಾದೋ ಹಿ ತಿತಿಕ್ಷೇತೇಶ್ವರಃ ಸ್ವಯಮ್ ॥೪೪॥

ಭಾಗವತಶಿರೋಮಣಿಯೇ! ಸಾಧುಶಿರೋಮಣಿಗಳಾದ ನಾರದ ಮಹರ್ಷಿಗಳು ದಕ್ಷನ ಆ ಶಾಪವಚನವನ್ನು–‘ಬಹಳ ಒಳ್ಳೆಯದು. ಹಾಗೆಯೇ ಆಗಲಿ’–ಎಂದು ಸ್ವೀಕಾರಮಾಡಿದರು. ಪ್ರಪಂಚದಲ್ಲಿ ‘ಸಾಧುತನ’ ಎಂದರೆ ಇದೇ, ಮಹಾರಾಜ! ಪ್ರತಿಯಾಗಿ ಅಪಕಾರಮಾಡುವ ಶಕ್ತಿ- ಸಾಮರ್ಥ್ಯಗಳು ಇದ್ದರೂ ಅದನ್ನು ಮಾಡದೇ ಇತರರು ಮಾಡಿದ ಅಪಕಾರವನ್ನು ಸಹಿಸಿಕೊಳ್ಳುವುದೇ ನಿಜವಾದ ಸಾಧುತನವು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಷಷ್ಠಸ್ಕಂಧದ ೫ನೆಯ ಅಧ್ಯಾಯವು ಮುಗಿಯಿತು.

ಷಷ್ಠಸ್ಕಂಧ ೬ನೆಯ ಅಧ್ಯಾಯ

ದಕ್ಷಪ್ರಜಾಪತಿಯ ಅರುವತ್ತು ಮಂದಿ ಕನ್ಯೆಯರ ವಂಶವಿಸ್ತಾರ

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ತತಃ ಪ್ರಾಚೇತಸೋಽಸಿಕ್ನ್ಯಾಮನುನೀತಃ ಸ್ವಯಮ್ಭುವಾ ।
ಷಷ್ಟಿಂ ಸಞ್ಜನಯಾಮಾಸ ದುಹಿತೄಃ ಪಿತೃವತ್ಸಲಾಃ ॥೧॥

ಹಾಗೆ ಪುತ್ರಶೋಕದಿಂದ ಬೆಂದು–ನೊಂದಿದ್ದ ದಕ್ಷಪ್ರಜಾಪತಿಯನ್ನು

ಬ್ರಹ್ಮದೇವರು ಸಂತೈಸಿದರು. ಬಳಿಕ ದಕ್ಷನು ಅಸಿಕ್ನಿಯಲ್ಲಿ ಅರುವತ್ತು ಮಂದಿ ಪುತ್ರಿಯರನ್ನು ಪಡೆದನು. ಅವರಿಗೆ ತಂದೆಯಲ್ಲಿ ಎಣೆಯಿಲ್ಲದ ಪ್ರೀತಿಯಿತ್ತು. ದಕ್ಷನು ಅವರಲ್ಲಿ ಹತ್ತು ಮಂದಿಯನ್ನು ಧರ್ಮನಿಗೂ, ಹದಿಮೂರು ಮಂದಿಯನ್ನು ಕಶ್ಯಪರಿಗೂ, ಇಪ್ಪತ್ತೇಳು ಮಂದಿಯನ್ನು ಚಂದ್ರನಿಗೂ, ಇಬ್ಬರನ್ನು ಭೂತಕ್ಕೂ, ಇಬ್ಬರನ್ನು ಅಂಗಿರಸರಿಗೂ, ಇಬ್ಬರನ್ನು ಕೃಶಾಶ್ವನಿಗೂ ಮತ್ತು ಉಳಿದ ನಾಲ್ವರನ್ನು ತಾರ್ಕ್ಷ್ಯನೆಂಬ ಹೆಸರುಳ್ಳ ಕಶ್ಯಪನಿಗೂ ಕೊಟ್ಟು ವಿವಾಹವನ್ನು ಬೆಳೆಸಿದನು. ಈಗ ಆ ಕನ್ಯೆಯರ ಹೆಸರನ್ನೂ ಮತ್ತು ಅವರ ಸಂತಾನಗಳನ್ನೂ ತಿಳಿಸುವೆನು ; ಕೇಳು. ಅವರ ವಂಶಪರಂಪರೆಯ ಮೂರು ಲೋಕಗಳಲ್ಲಿಯೂ ಹರಡಿಕೊಂಡಿದೆ. (ಶ್ಲೋಕ 1-3)

ಧರ್ಮನನ್ನು ಮದುವೆಯಾದ ಹತ್ತು ಮಂದಿ ಕನ್ಯೆಯರು ಭಾನು, ಲಂಬಾ, ಕಕುಭ್, ಜಾಮಿ, ವಿಶ್ವಾ, ಸಾಧ್ಯಾ, ಮರುತ್ವತೀ, ವಸು, ಮುಹೂರ್ತಾ ಮತ್ತು ಸಂಕಲ್ಪಾ ಎಂಬುವರು. ಅವರ ಪುತ್ರರ ಹೆಸರು ಗಳನ್ನು ಈಗ ಹೇಳುತ್ತೇನೆ. ಇವರಲ್ಲಿ ಭಾನುವಿನ ಪುತ್ರನು ದೇವಋಷಭನು ಮತ್ತು ಆತನ ಪುತ್ರನು ಇಂದ್ರಸೇನ. ಲಂಬೆಯ ಪುತ್ರನು ವಿದ್ಯತನೆನಿಸಿ ದನು. ಆತನ ಪುತ್ರರೇ ಮೇಘಗಣಗಳು. ಕಕುಭೆಯು ಪುತ್ರನು ಸಂಕಟ. ಆತನಿಗೆ ಭೂಮಿಯ ಸಮಸ್ತದುರ್ಗಗಳಿಗೂ ಅಭಿಮಾನಿದೇವತೆಯಾದ ಕೀಕಟನೆಂಬುವನು ಪುತ್ರನಾಗಿ ಜನಿಸಿದನು. ಜಾಮಿಯ ಪುತ್ರನಿಗೆ ಸ್ವರ್ಗನೆಂದು ಹೆಸರು. ನಂದಿ ಎಂಬುವನು ಸ್ವರ್ಗನ ಪುತ್ರನು. ವಿಶ್ವಾ ಎಂಬುವಳ ಪುತ್ರರೇ ವಿಶ್ವೇದೇವತೆಗಳು. ಆ ವಿಶ್ವೇದೇವತೆಗಳಿಗೆ ಸಂತಾ ನವೇ ಆಗಲಿಲ್ಲ. ಸಾಧ್ಯೆಯ ಪುತ್ರರು ಸಾಧ್ಯರೆಂಬ ದೇವಗಣಗಳು. ಅರ್ಥಸಿದ್ಧಿಯು ಆ ಸಾಧ್ಯರ ಸುಪುತ್ರನು. ಮರುತ್ವತಿಗೆ ಮರುತ್ವಂತ ಮತ್ತು ಜಯಂತ–ಎಂಬ ಇಬ್ಬರು ಪುತ್ರರು ಹುಟ್ಟಿದರು. ಅವರಲ್ಲಿ ಜಯಂತನು ಶ್ರೀಭಗವಂತನಾದ ವಾಸುದೇವನ ಅಂಶವು. ಆತನನ್ನು ಉಪೇಂದ್ರನೆಂದೂ ಕರೆಯುತ್ತಾರೆ. ಮುಹೂರ್ತಾ ಎಂಬ ದಕ್ಷಪುತ್ರಿಗೆ ಮುಹೂರ್ತಕ್ಕೆ ಅಭಿಮಾನಿಗಳಾದ ದೇವತೆಗಳು ಪುತ್ರರಾಗಿ ಜನಿಸಿದರು. ಅವರು ತಮ್ಮ-ತಮ್ಮ ಮುಹೂರ್ತಗಳಲ್ಲಿ ಜೀವರಿಗೆ ಅವರವರ ಕರ್ಮಗಳಿಗೆ ಅನುಗುಣ ವಾದ ಫಲಗಳನ್ನು ಕೊಡುವರು. ಸಂಕಲ್ಪೆಯ ಪುತ್ರನೇ ಸಂಕಲ್ಪನು. ಕಾಮನು

ಸಂಕಲ್ಪನ ಪುತ್ರನಾದನು. ವಸುವಿನ ಪುತ್ರರೇ ಎಂಟು ಮಂದಿ ವಸು ದೇವತೆಗಳು. ದ್ರೋಣ, ಪ್ರಾಣ, ಧ್ರುವ, ಅರ್ಕ, ಅಗ್ನಿ, ದೋಷ, ವಸು ಮತ್ತು ವಿಭಾವಸು ಎಂಬುವರೇ ಆ ಅಷ್ಟವಸುಗಳು. ಅವರಲ್ಲಿ ದ್ರೋಣನ ಪತ್ನಿಯು ಅಭಿಮತಿ. ಆ ಅಭಿಮತಿಯಲ್ಲಿ ಆತನು ಹರ್ಷ, ಶೋಕ, ಭಯ ಮುಂತಾದುವುಗಳ ಅಭಿಮಾನಿದೇವತೆಗಳನ್ನು ಪುತ್ರರನ್ನಾಗಿ ಪಡೆದನು. ಪ್ರಾಣನ ಪತ್ನಿಯಾದ ಊರ್ಜಸ್ವತಿಯ ಗರ್ಭದಲ್ಲಿ ಸಹ, ಆಯು ಮತ್ತು ಪುರೋಜವ ಎಂಬ ಮೂವರು ಪುತ್ರರು ಜನಿಸಿದರು. ಧ್ರುವನ ಪತ್ನಿಯಾದ ಧರಣಿಯು ಅನೇಕನಗರಗಳ ಅಭಿಮಾನಿದೇವತೆಗಳನ್ನು ಪುತ್ರರನ್ನಾಗಿ ಪಡೆದಳು. ಅರ್ಕನು ತನ್ನ ಪತ್ನಿಯಾದ ವಾಸನಾ ಎಂಬುವಳ ಗರ್ಭದಿಂದ ತರ್ಷನೇ ಮುಂತಾದ ಪುತ್ರರನ್ನು ಪಡೆದನು. ಅಗ್ನಿಯೆಂಬ ವಸುವಿಗೆ ಅವನ ಪತ್ನಿಯಾದ ಧಾರಾದೇವಿಯಲ್ಲಿ ದ್ರವಿಣಕನೇ ಮುಂತಾದ ಬಹುಮಂದಿ ಪುತ್ರರು ಹುಟ್ಟಿದರು. ಕೃತ್ತಿಕೆಯರ ಪುತ್ರನಾದ ಸ್ಕಂದನೂ ಕೂಡ ಅಗ್ನಿ ಯಿಂದಲೇ ಹುಟ್ಟಿದನು. ವಿಶಾಖನೇ ಮುಂತಾದವರು ಆತನ ಪುತ್ರರು. ದೋಷನ ಪತ್ನಿಯಾದ ಶರ್ವರಿಯ ಗರ್ಭದಲ್ಲಿ ಶಿಶುಮಾರನೆಂಬುವನು ಜನಿಸಿದನು. ಈ ಶಿಶುಮಾರನನ್ನು ಶ್ರೀಭಗವಂತನ ಕಲಾವತಾರವೆಂದು ತಿಳಿಯಬೇಕು. ವಸುವಿನ ಪತ್ನಿಯಾದ ಅಂಗಿರಸಿಗೆ ಶಿಲ್ಪಕಲೆಗೆ ಅಧಿಪತಿ ಯಾದ ವಿಶ್ವಕರ್ಮನು ಪುತ್ರನಾಗಿ ಜನಿಸಿದನು. ಆ ವಿಶ್ವಕರ್ಮನಿಗೆ ಅವನ ಭಾರ್ಯೆಯಾದ ಆಕೃತಿಯ ಗರ್ಭದಿಂದ ಚಾಕ್ಷುಷಮನುವು ಜನಿಸಿದನು ಮತ್ತು ವಿಶ್ವೇದೇವರು ಮತ್ತು ಸಾಧ್ಯಗಣಗಳು ಚಾಕ್ಷುಷಮನುವಿನ ಪುತ್ರರು. ವಿಭಾವಸುವಿನ ಪತ್ನಿಯಾದ ಉಷಾ ಎಂಬಾಕೆಗೆ ವ್ಯುಷ್ಟ, ರೋಚಿಷ ಮತ್ತು ಆತಪ–ಎಂಬ ಮೂವರು ಪುತ್ರರು ಹುಟ್ಟಿದರು. ಅವರಲ್ಲಿ ಆತಪನಿಗೆ ಪಂಚಯಾಮ (ದಿವಸ) ನೆಂಬ ಪುತ್ರನು ಜನಿಸಿದನು. ಈ ಪಂಚಯಾಮ ನಿಂದಲೇ ಲೋಕದಲ್ಲಿ ಎಲ್ಲ ಜೀವಿಗಳೂ ತಮ್ಮ-ತಮ್ಮ ಕಾರ್ಯಗಳಲ್ಲಿ ಆಸಕ್ತವಾಗಿವೆ. (ಶ್ಲೋಕ 4-16)

ಭೂತನ ಪತ್ನಿಯಾದ ದಕ್ಷಪುತ್ರೀ ಸರೂಪೆಯು ಕೋಟಿ ಕೋಟಿ ರುದ್ರಗಣಗಳನ್ನು ಪುತ್ರರನ್ನಾಗಿ ಪಡೆದಳು. ಅವರಲ್ಲಿ ರೈವತ, ಅಜ, ಭವ, ಭೀಮ, ವಾಮ, ಉಗ್ರ, ವೃಷಾಕಪಿ, ಅಜೈಕಪಾದ, ಅಹಿರ್ಬುಧ್ನ್ಯ,

ಬಹುರೂಪ ಮತ್ತು ಮಹಾನ್ ಎಂಬ ಹನ್ನೊಂದು ಮಂದಿ ಮುಖ್ಯರಾದವರು. ಭೂತನ ಮತ್ತೊಬ್ಬಳು ಪತ್ನಿಯಾದ 'ಭೂತಾ' ಎಂಬಾಕೆಗೆ ಭಯಂಕರರಾದ ಭೂತಗಳೂ ಮತ್ತು ವಿನಾಯಕನೇ ಮುಂತಾದವರೂ ಪುತ್ರರಾದರು. ಅವರೆಲ್ಲರೂ ಪ್ರಧಾನರುದ್ರರಲ್ಲಿ ಹನ್ನೊಂದನೆಯವನಾದ 'ಮಹಾನ್' ಎಂಬ ರುದ್ರನಿಗೆ ಪಾರ್ಷದರಾದರು. (ಶ್ಲೋಕ 17-18)

ಅಂಗಿರಸ ಮತ್ತು ಪ್ರಜಾಪತಿಯ ಮೊದಲನೆಯ ಪತ್ನಿಯಾದ ಸ್ವಧೆಯಿಂದ ಪಿತೃಗಣಗಳು ಉತ್ಪನ್ನರಾದರು. ದ್ವಿತೀಯಪತ್ನಿಯಾದ ಸತಿಯು ಅಥರ್ವಾಂಗಿರಸವೆಂಬ ವೇದವನ್ನೇ ತನ್ನ ಪುತ್ರನನ್ನಾಗಿ ಸ್ವೀಕಾರಮಾಡಿದಳು. ಕೃಶಾಶ್ವನ ಪತ್ನಿಯಾದ ಅರ್ಚಿಗೆ ಧೂಮ್ರಕೇಶನೆಂಬ ಪುತ್ರನು ಹುಟ್ಟಿದನು. ಧಿಷಣ ಎಂಬುವಳಿಗೆ ವೇದಶಿರಸ, ದೇವಲ, ವಯುನ ಮತ್ತು ಮನು ಎಂಬ ನಾಲ್ವರು ಪುತ್ರರು ಜನಿಸಿದರು. ತಾರ್ಕ್ಷ್ಯನೆಂಬ ಹೆಸರುಳ್ಳ ಕಶ್ಯಪನಿಗೆ ವಿನತಾ, ಕದ್ರೂ, ಪತಂಗೀ ಮತ್ತು ಯಾಮಿನೀ ಎಂಬ ನಾಲ್ವರು ಪತ್ನಿಯರು. ಅವರಲ್ಲಿ ಪತಂಗಿಯಿಂದ ಪಕ್ಷಿಗಳೂ ಮತ್ತು ಯಾಮಿನಿಯಿಂದ ಶಲಭ (ಮಿಡತೆ)ಗಳೂ ಉತ್ಪನ್ನವಾದುವು. ವಿನತಾದೇವಿಯು ಸಾಕ್ಷಾನ್ಮಹಾ ವಿಷ್ಣುವಿಗೆ ವಾಹನವಾದ ಗರುಡನನ್ನು ಪುತ್ರನನ್ನಾಗಿ ಪಡೆದಳು. ಸೂರ್ಯಭಗವಂತನ ಸಾರಥಿಯಾದ ಅರುಣನು ವಿನತಾದೇವಿಯ ಮತ್ತೊಬ್ಬಪುತ್ರನು ಕದ್ರುವಿನಿಂದ ಅನೇಕ ನಾಗಸರ್ಪಗಳ ಜನನವಾಯಿತು.

ಭರತಕುಲಶಿರೋಮಣಿಯೇ! ಕೃತ್ತಿಕೆಯೇ ಮುಂತಾದ ಇಪ್ಪತ್ತೇಳು ಮಂದಿ ನಕ್ಷತ್ರಾಭಿಮಾನಿದೇವಿಯರೂ ಚಂದ್ರನ ಪತ್ನಿಯರಾದರು. ಚಂದ್ರನು ಅವರಲ್ಲಿ ರೋಹಿಣೀ ಎಂಬುವಳಲ್ಲಿ ವಿಶೇಷಪ್ರೇಮವನ್ನು ತೋರಿದ್ದರಿಂದ ದಕ್ಷನ ಶಾಪಕ್ಕೆ ಗುರಿಯಾಗಿ ಕ್ಷಯರೋಗಕ್ಕೆ ತುತ್ತಾದನು. ಅದರಿಂದ ಆತನಿಗೆ ಅವರಲ್ಲಿ ಯಾವ ಸಂತಾನವೂ ಜನಿಸಲಿಲ್ಲ. ಅನಂತರ ಆತನು ದಕ್ಷನನ್ನು ಪ್ರಸನ್ನಗೊಳಿಸಿ ಕೃಷ್ಣಪಕ್ಷದಲ್ಲಿ ಕ್ಷೀಣಹೊಂದಿದ ಕಲೆಗಳು ಶುಕ್ಲಪಕ್ಷದಲ್ಲಿ ಪೂರ್ಣಹೊಂದುವ ವರವನ್ನೇನೋ ಪಡೆದನು. ಆದರೂ ನಕ್ಷತ್ರಾಭಿಮಾನಿದೇವಿಯರಿಂದ ಈತನಿಗೆ ಯಾವ ಸಂತತಿಯೂ ಉಂಟಾಗಲಿಲ್ಲ. ಪರೀಕ್ಷಿತ! ಈಗ ನಿನಗೆ ಕಶ್ಯಪಪತ್ನಿಯರ ಶುಭವಾದ ನಾಮಧೇಯಗಳನ್ನು ಹೇಳುತ್ತೇನೆ ; ಕೇಳು : ಅವರು ಲೋಕಮಾತೆಯರು. ಈ ಇಡೀ ಸೃಷ್ಟಿಯು

ಉಂಟಾಗಿರುವುದು ಅವರಿಂದಲೇ. ಅದಿತಿ, ದಿತಿ, ದನು, ಕಾಷ್ಠಾ, ಅರಿಷ್ಟಾ, ಸುರಸಾ, ಇಲಾ, ಮುನಿ, ಕ್ರೋಧವಶಾ, ತಾಮ್ರಾ, ಸುರಭಿ, ಸರಮಾ ಮತ್ತು ತಿಮಿ–ಎಂಬಿವು ಅವರ ಹೆಸರುಗಳು. ಅವರಲ್ಲಿ ತಿಮಿಯ ಪುತ್ರರು ಎಲ್ಲ ಜಲಚರಪ್ರಾಣಿಗಳು. ಹುಲಿಯೇ ಮುಂತಾದ ಕ್ರೂರಪ್ರಾಣಿಗಳು ಸರಮೆಯ ಸಂತಾನಗಳು. ಎಮ್ಮೆ, ಹಸು ಮತ್ತು ಇತರ ಎರಡು ಗೊರಸಿನ ಪಶುಗಳೆಲ್ಲವೂ ಸುರಭಿಯ ಸಂತಾನಗಳು. ತಾಮ್ರೆಯ ಸಂತಾನಗಳು ಗಿಡಗ, ಹದ್ದು ಮುಂತಾದ ಬೇಟೆಯಾಡುವ ಪಕ್ಷಿಗಳು. ಮುನಿಯಿಂದ ಅಪ್ಸರಸೆಯರು ಜನಿಸಿದರು. ಸರ್ಪ, ಚೇಳು ಮುಂತಾದ ವಿಷವುಳ್ಳ ಜಂತುಗಳು ಕ್ರೋಧವಶೆಯ ಸಂತಾನಗಳು. ಇಳಾದೇವಿಯಿಂದ ಮರಗಳು, ಬಳ್ಳಿಗಳು ಮುಂತಾದ ಭೂಮಿಯ ವನಸ್ಪತಿಗಳು ಹುಟ್ಟಿದುವು. ಸುರಸೆಯಿಂದ ಯಾತುಧಾನ (ರಾಕ್ಷಸರು) ಜನಿಸಿದರು. ಅರಿಷ್ಟೆಯಿಂದ ಗಂಧರ್ವರು ಜನಿಸಿದರು. ಕಾಷ್ಠೆಯಿಂದ ಕುದುರೆಯೇ ಮುಂತಾದ ಒಂದು ಗೊರಸಿನ ಪಶುಗಳು ಉತ್ಪನ್ನವಾದುವು. ದನುವಿಗೆ ಅರುವತ್ತೊಂದು ಮಂದಿ ಪುತ್ರರಾದರು. ಅವರಲ್ಲಿ ಅತ್ಯಂತ ಪ್ರಧಾನರಾದವರು–ದ್ವಿಮೂರ್ಧಾ, ಶಂಬರ, ಅರಿಷ್ಟ, ಹಯಗ್ರೀವ, ವಿಭಾವಸು, ಅಯೋಮುಖ, ಶಂಕುಶಿರಸ, ಸ್ವರ್ಭಾನು, ಕಪಿಲ, ಅರುಣ, ಪುಲೋಮಾ, ವೃಷಪರ್ವಾ, ಏಕಚಕ್ರ, ಅನುತಾಪನ, ಧೂಮ್ರಕೇಶ, ವಿರೂಪಾಕ್ಷ, ವಿಪ್ರಚಿತ್ತಿ ಮತ್ತು ದುರ್ಜಯ–ಎಂಬುವರು. ಸ್ವರ್ಭಾನುವಿನ ಕನ್ಯೆಯಾದ ಸುಪ್ರಭೆಯನ್ನು ನಮುಚಿಯೂ ಮತ್ತು ವೃಷಪರ್ವನ ಪುತ್ರಿಯಾದ ಶರ್ಮಿಷ್ಠೆಯನ್ನು ಮಹಾಬಲಶಾಲಿಯಾದ ನಹುಷಪುತ್ರನಾದ ಯಯಾತಿಯೂ ಮದುವೆಯಾದರು. ದನುವಿನ ಪುತ್ರನಾದ ವೈಶ್ವಾನರನಿಗೆ ನಾಲ್ಕು ಮಂದಿ ಸುಂದರಿಯರಾದ ಕನ್ಯೆಯರಿದ್ದರು. ಉಪದಾನವೀ, ಹಯಶಿರಾ, ಪುಲೋಮಾ ಮತ್ತು ಕಾಲಕಾ ಎಂಬುವು ಅವರ ಹೆಸರುಗಳು. ಅವರಲ್ಲಿ ಉಪದಾನವಿಯನ್ನು ಹಿರಣ್ಯಾಕ್ಷನೂ–ಹಯಶಿರೆಯನ್ನು ಕ್ರತುವೂ ವಿವಾಹಮಾಡಿಕೊಂಡರು. ಬ್ರಹ್ಮದೇವರ ಆಜ್ಞೆಯಂತೆ ಭಗವಂತರಾದ ಕಶ್ಯಪಪ್ರಜಾಪತಿಗಳೇ ವೈಶ್ವಾನರನ ಉಳಿದೆರಡು ಕನ್ಯೆಯರಾದ ಪುಲೋಮೆ ಮತ್ತು ಕಾಲಕೆಯನ್ನು ವಿವಾಹಮಾಡಿಕೊಂಡರು. ಅವರಲ್ಲಿ ಪೌಲೋಮ ಮತ್ತು ಕಾಲಕೇಯರೆಂಬ ಅರುವತ್ತು

ಸಾವಿರ ಮಂದಿ ರಣವೀರರಾದ ದಾನವರು ಜನಿಸಿದರು. ನಿವಾತಕವಚರು–ಎಂಬುದು ಅವರಿಗೇ ಮತ್ತೊಂದು ಹೆಸರು. ಅವರು ಯಜ್ಞಕರ್ಮಗಳಿಗೆ ವಿಘ್ನವನ್ನು ಉಂಟುಮಾಡುತ್ತಿದ್ದುದರಿಂದ ಇಂದ್ರನನ್ನು ಪ್ರಸನ್ನಗೊಳಿಸಲು ನಿನ್ನ ಪಿತಾಮಹನಾದ ಅರ್ಜುನನು ಒಬ್ಬಂಟಿಗನಾಗಿಯೇ ಅವರೆಲ್ಲರನ್ನೂ ಸಂಹಾರಮಾಡಿಬಿಟ್ಟನು. ಅರ್ಜುನನು ಸ್ವರ್ಗಕ್ಕೆ ಹೋಗಿದ್ದಾಗ ನಡೆದ ಘಟನೆಯಿದು. ವಿಪ್ರಚಿತ್ತಿಯ ಪತ್ನಿಯಾದ ಸಿಂಹಿಕೆಯ ಗರ್ಭದಿಂದ ನೂರೊಂದು ಮಂದಿ ಪುತ್ರರು ಉತ್ಪನ್ನರಾದರು. ಅವರಲ್ಲಿ ಎಲ್ಲರಿಗಿಂತಲೂ ಹಿರಿಯವನೇ ರಾಹುವು. ಆತನು ಗ್ರಹಗಳಲ್ಲಿ ಲೆಕ್ಕಿಸಲ್ಪಡುತ್ತಾನೆ. ಉಳಿದ ನೂರು ಮಂದಿ ಪುತ್ರರಿಗೂ ಕೇತುಗಳೆಂದು ಹೆಸರು. (ಶ್ಲೋಕ 19-37)

ಈಗ ಕ್ರಮವಾಗಿ ಅದಿತಿದೇವಿಯ ವಂಶಪರಂಪರೆಯನ್ನು ಹೇಳುತ್ತೇನೆ ; ಕೇಳು : ಆ ವಂಶದಲ್ಲಿಯೇ ಸರ್ವವ್ಯಾಪಕನಾದ ದೇವಾಧಿದೇವನಾದ ನಾರಾಯಣನು ತನ್ನ ಅಂಶದಿಂದ ವಾಮನರೂಪದಲ್ಲಿ ಅವತಾರಮಾಡಿದನು. ವಿವಸ್ವಂತ, ಅರ್ಯಮಾ, ಪೂಷಾ, ತ್ವಷ್ಟಾ, ಸವಿತಾ, ಭಗ, ಧಾತಾ, ವಿಧಾತಾ, ವರುಣ, ಮಿತ್ರ, ಶಕ್ರ ಮತ್ತು ಉರುಕ್ರಮ (ವಾಮನ)–ಎಂಬುವರು ಅದಿತಿದೇವಿಯ ಪುತ್ರರು. ಆ ಹನ್ನೆರಡು ಮಂದಿಯೂ ದ್ವಾದಶಾದಿತ್ಯರೆಂದು ಕರೆಯಲ್ಪಟ್ಟರು. ವಿವಸ್ವಂತನ ಪತ್ನಿಯಾದ ಮಹಾಭಾಗ್ಯಶಾಲಿನಿಯಾದ ಸಂಜ್ಞಾದೇವಿಯ ಗರ್ಭದಿಂದ ಶ್ರಾದ್ಧದೇವನಾದ ವೈವಸ್ವತಮನುವೂ ಮತ್ತು ಯಮ-ಯಮಿಯರೆಂಬ ಅವಳೀಮಕ್ಕಳೂ ಹುಟ್ಟಿದರು. ಸಂಜ್ಞಾದೇವಿಯೇ ಹೆಣ್ಣುಕುದುರೆಯ ರೂಪವನ್ನು ತಾಳಿ ಶ್ರೀಭಗವಂತನಾದ ಸೂರ್ಯನ ಮೂಲಕ ಭೂಲೋಕದಲ್ಲಿ ಅಶ್ವಿನೀದೇವತೆಗಳಿಬ್ಬರಿಗೂ ಜನ್ಮವನ್ನಿತ್ತಳು. ಛಾಯಾ ಎಂಬುವಳು ವಿವಸ್ವಂತನ ಮತ್ತೊಬ್ಬ ಮಡದಿಯು ಆಕೆಗೆ ಶನೈಶ್ಚರ ಮತ್ತು ಸಾವರ್ಣಿಮನುವೆಂಬ ಇಬ್ಬರು ಪುತ್ರರೂ ಮತ್ತು ತಪತಿಯೆಂಬ ಒಬ್ಬ ಕನ್ಯೆಯೂ ಜನಿಸಿದರು. ತಪತಿಯು ಸಂವರಣನನ್ನು ತನ್ನ ಪತಿಯನ್ನಾಗಿ ವರಿಸಿದಳು. ಅರ್ಯಮನ ಪತ್ನಿಯು ಮಾತೃಕೆ. ಆಕೆಯ ಗರ್ಭದಿಂದ ಚರ್ಷಣಿಗಳೆಂಬ ಪುತ್ರರು ಹುಟ್ಟಿದರು. ಅವರು ಕರ್ತವ್ಯ ಮತ್ತು ಅಕರ್ತವ್ಯಜ್ಞಾನಗಳಿಂದ ಕೂಡಿದವರಾಗಿದ್ದರು. ಆದುದರಿಂದ ಬ್ರಹ್ಮದೇವರು ಅವರನ್ನು ಆಧರಿಸಿಯೇ ಮನುಷ್ಯಜಾತಿಯನ್ನು ಕಲ್ಪಿಸಿದರು. ಪೂಷನಿಗೆ

ಯಾವುದೇ ಸಂತಾನವೂ ಆಗಲಿಲ್ಲ. ಹಿಂದೆ ಶಿವಮಹಾದೇವನು ದಕ್ಷನ ಮೇಲೆ ಕೋಪಗೊಂಡಾಗ ಪೂಷನು ಹಲ್ಲುಕಿರಿಯುತ್ತಾ ನಗತೊಡಗಿದನು. ಅದರಿಂದ ಕುಪಿತನಾದ ವೀರಭದ್ರನು ಆತನ ಹಲ್ಲುಗಳನ್ನು ಉದುರಿಸಿಬಿಟ್ಟನು. ಮುಂದೆ ಪೂಷನು ಹಿಟ್ಟಿನ ರೂಪದ ಅನ್ನವನ್ನೇ ಸೇವಿಸತೊಡಗಿದನು. ದೈತ್ಯರ ತಂಗಿಯಾದ ಕುಮಾರೀ ರಚನೆಯು ತ್ವಷ್ಟನ ಪತ್ನಿಯಾದಳು. ಆಕೆಯ ಗರ್ಭದಿಂದ ಸಂನಿವೇಶ ಮತ್ತು ವೀರ್ಯಶಾಲಿಯಾದ ವಿಶ್ವರೂಪ–ಎಂಬ ಇಬ್ಬರು ಪುತ್ರರು ಹುಟ್ಟಿದರು. ಹೀಗೆ ವಿಶ್ವರೂಪನು ಶತ್ರುಗಳಾದ ದೈತ್ಯರ ಸೋದರಳಿಯನಾಗಿದ್ದರೂ ದೇವತೆಗಳು ಆತನನ್ನು ತಮ್ಮ ಪುರೋಹಿತನನ್ನಾಗಿ ಮಾಡಿಕೊಂಡರು. ದೇವಗುರುವಾದ ಬೃಹಸ್ಪತಿಯು ಇಂದ್ರನಿಂದ ಅಪಮಾನಗೊಂಡು ದೇವತೆಗಳನ್ನು ತೊರೆದುಹೋದಾಗ ದೇವತೆಗಳು ಆತನನ್ನು ತಮ್ಮ ಪುರೋಹಿತನನ್ನಾಗಿ ವರಿಸಿದರು. (ಶ್ಲೋಕ 38-45)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಷಷ್ಠಸ್ಕಂಧದ ೬ನೆಯ ಅಧ್ಯಾಯವು ಮುಗಿಯಿತು.

ಷಷ್ಠಸ್ಕಂಧ ೭ನೆಯ ಅಧ್ಯಾಯ

ಬೃಹಸ್ಪತಿಯು ಇಂದ್ರನನ್ನು ತೊರೆದುಹೋದುದು : ವಿಶ್ವರೂಪನು ದೇವತೆಗಳಿಂದ ಆಚಾರ್ಯನಾಗಿ ವರಿಸಲ್ಪಟ್ಟುದು

'ಬೃಹಸ್ಪತ್ಯಾಚಾರ್ಯರು ದೇವತೆಗಳನ್ನು ತೊರೆದುಹೋದರು'– ಎಂಬ ಮಾತನ್ನು ಕೇಳಿ ಪರೀಕ್ಷಿದ್ರಾಜನು ಶುಕಮಹರ್ಷಿಗಳನ್ನು ಕೇಳಿದನು :

ಕಸ್ಯ ಹೇತೋಃ ಪರಿತ್ಯಕ್ತಾ ಆಚಾರ್ಯೇಣಾತ್ಮನಃ ಸುರಾಃ ।
ಏತದಾಚಕ್ಷ್ವ ಭಗವಾನ್ ಶಿಷ್ಯಾಣಾಮಕ್ರಮಂ ಗುರೌ ॥೧॥

"ಮಹಾತ್ಮರೇ! ಆಚಾರ್ಯರಾದ ಬೃಹಸ್ಪತಿಗಳು ತಮ್ಮ ಪ್ರಿಯಶಿಷ್ಯರಾದ ದೇವತೆಗಳನ್ನು ಏಕೆ ತೊರೆದುಹೋದರು? ದೇವತೆಗಳು ತಮ್ಮ ಆಚಾರ್ಯರಿಗೆ ಮಾಡಿದ ಅಪರಾಧವಾದರೂ ಏನು? ಕೃಪೆಯಿಟ್ಟು ತಿಳಿಸಿರಿ."

ಶ್ರೀಶುಕಮಹರ್ಷಿಗಳು ಆತನಿಗೆ ಹೀಗೆಂದರು :

"ಮೂರು ಲೋಕಗಳ ಮೇಲಿನ ಐಶ್ವರ್ಯ-ಅಧಿಕಾರಗಳನ್ನು ಪಡೆದು ಇಂದ್ರನು ಗರ್ವಾಂಧನಾದನು. ಆ ಅಹಂಕಾರದಿಂದ ಆತನು ಧರ್ಮ, ಮರ್ಯಾದೆ, ಸದಾಚಾರಗಳನ್ನು ಮೀರಿ ನಡೆಯತೊಡಗಿದನು. ಆಗ ಒಂದು ದಿನ ಈ ಘಟನೆಯು ಒದಗಿತು : ಮಹೇಂದ್ರನು ತುಂಬಿದ ಸಭೆಯಲ್ಲಿ ಪತ್ನಿಯಾದ ಶಚೀದೇವಿಯೊಡನೆ ಉನ್ನತವಾದ ಸಿಂಹಾಸನದಲ್ಲಿ ಮಂಡಿಸಿದ್ದನು. ಆಗ ನಲವತ್ತೊಂಬತ್ತು ಮಂದಿ ಮರುದ್ದೇವತೆಗಳ ಗಣಗಳೂ, ಅಷ್ಟವಸುಗಳೂ, ಏಕಾದಶರುದ್ರರೂ, ದ್ವಾದಶಾದಿತ್ಯರೂ, ಋಭುಗಣಗಳೂ, ವಿಶ್ವೇದೇವರೂ, ಸಾಧ್ಯಗಣಗಳೂ ಮತ್ತು ಇಬ್ಬರು ಅಶ್ವಿನೀಕುಮಾರರು ಒಡ್ಡೋಲಗದಲ್ಲಿ ಆತನ ಸೇವೆಮಾಡುತ್ತಿದ್ದರು. ಸಿದ್ಧರೂ, ಚಾರಣರೂ, ಗಂಧರ್ವರೂ, ಬ್ರಹ್ಮವಾದಿಗಳಾದ ಮುನಿಗಳೂ, ವಿದ್ಯಾಧರರೂ, ಅಪ್ಸರೆಯರೂ, ಕಿನ್ನರರೂ, ಪಕ್ಷಿಗಳೂ ಮತ್ತು ನಾಗರೂ ಸೇವೆಮಾಡುತ್ತಾ ಆತ ನನ್ನು ಸ್ತುತಿಸುತ್ತಿದ್ದರು. ಎಲ್ಲ ಕಡೆಗಳಲ್ಲಿಯೂ ಲಲಿತಸ್ವರದಿಂದ ದೇವರಾಜ ನಾದ ಇಂದ್ರನ ಕೀರ್ತಿಯು ಗಾನಮಾಡಲ್ಪಡುತ್ತಿತ್ತು. ಆತನ ಮೇಲುಗಡೆ ಯಲ್ಲಿ ಚಂದ್ರಮಂಡಲದಂತೆ ಶುಭ್ರವೂ ಸುಂದರವೂ ಆದ ಬೆಳ್ಗೊಡೆಯು ಶೋಭಿಸುತ್ತಿತ್ತು. ಚಾಮರ, ಬೀಸಣಿಗೆ ಮುಂತಾದ ರಾಜಾಧಿರಾಜರಿಗೆ ಯೋಗ್ಯವಾದ ಮರ್ಯಾದೆಯ ಪದಾರ್ಥಗಳು ಆಯಾಜಾಗಗಳಲ್ಲಿ ಅಲಂಕೃತವಾಗಿ ಅಳವಡಿಸಲ್ಪಟ್ಟಿದ್ದುವು. ಅಂತಹ ದಿವ್ಯವಾದ ವೈಭವದ ಸಭೆಯಲ್ಲಿ ದೇವರಾಜನಾದ ಮಹೇಂದ್ರನು ಮಂಡಿಸಿ ರಾರಾಜಿಸುತ್ತಿದ್ದನು. ಅದೇ ಸಮಯಕ್ಕೆ ಸರಿಯಾಗಿ ಅಲ್ಲಿಗೆ, ದೇವರಾಜನಾದ ಇಂದ್ರನಿಗೂ ಮತ್ತು ಸಮಸ್ತದೇವತೆಗಳಿಗೂ ಪರಮಾಚಾರ್ಯರಾದ ಬೃಹಸ್ಪತಿಗಳು ಬಿಜಯಮಾಡಿದರು. ಸುರರು ಮತ್ತು ಅಸುರರು ಎಲ್ಲರಿಂದಲೂ ನಮಸ್ಕರಿಸಲ್ಪಡುವ ಪೂಜ್ಯರಾದ ಆಚಾರ್ಯವರ್ಯರು ಅವರು. ಅವರು ಸಭೆಗೆ ದಯಮಾಡಿಸಿದ್ದನ್ನು ಇಂದ್ರನು ನೋಡಿದನು. ಆದರೆ ಆತನು ಅವರನ್ನು ಗೌರವಿಸಲು ಎದ್ದು ನಿಲ್ಲಲಿಲ್ಲ. ಅವರಿಗೆ ನಮಸ್ಕಾರವೇ ಮುಂತಾದ ಸತ್ಕಾರಗಳನ್ನೂ ಮಾಡಲಿಲ್ಲ. ಆಸನದಿಂದ ಕೂಡ ಅಲ್ಲಾಡಲಿಲ್ಲ. ಆಗ ಮಹಾತ್ಮರಾದ ಬೃಹಸ್ಪತ್ಯಾಚಾರ್ಯರು ಸಾಮ್ರಾಜ್ಯದ ಮದದಿಂದ ಉಂಟಾದ

ದುರಹಂಕಾರವೇ ಇಂದ್ರನ ಈ ಅಸಭ್ಯವರ್ತನೆಗೆ ಕಾರಣವೆಂದು ತಿಳಿದು ಸುಮ್ಮನೆ ತಮ್ಮ ಮನೆಗೆ ಹೊರಟುಹೋದರು. (ಶ್ಲೋಕ 2-9)

ಆಗ ತಾನೇ ದೇವರಾಜನಿಗೆ ಎಚ್ಚರವಾಯಿತು. 'ತಾನು ಗುರುಗಳಿಗೆ ಎಂತಹ ಅವಹೇಳನ ಮಾಡಿದ್ದೇನೆ?'—ಎಂಬುದರ ಅರಿವಾಯಿತು. ಆಗ ಆತನು ಸಭೆಯಲ್ಲಿಯೂ ತನ್ನನ್ನು ಹೀಗೆ ನಿಂದಿಸಿಕೊಂಡನು : "ಅಯ್ಯೋ! ನಾನು ಎಂತಹ ಅನ್ಯಾಯಮಾಡಿದೆನು? ಮೂರ್ಖತನದಿಂದ ಐಶ್ವರ್ಯದ ಮತ್ತೇರಿದವನಾಗಿ ಈ ತುಂಬಿದ ಸಭೆಯಲ್ಲಿ ಗುರುದೇವನಿಗೆ ತಿರಸ್ಕಾರಮಾಡಿ ಬಿಟ್ಟೆನಲ್ಲಾ! ಎಂತಹ ನಿಂದನೀಯವಾದ ಕರ್ಮವನ್ನು ಆಚರಿಸಿದೆನು? ಈ ಸ್ವರ್ಗದ ರಾಜ್ಯಲಕ್ಷ್ಮಿಯನ್ನು ಯಾವ ವಿವೇಕಿಯು ತಾನೇ ಬಯಸಿಯಾನು? ಈ ಸಾಮ್ರಾಜ್ಯದ ಮದದಿಂದಲೇ ಅಲ್ಲವೇ ಸತ್ತ್ವಗುಣಪ್ರಧಾನರಾದ ದೇವತೆಗಳ ರಾಜನಾದ ನನ್ನನ್ನೂ ಕೂಡ ಅಸುರರ ಗುಣವಾದ ರಜೋಗುಣದ ಭಾವವು ಆಕ್ರಮಿಸಿಕೊಂಡಿತು? ಚಕ್ರವರ್ತಿಸಿಂಹಾಸನದಲ್ಲಿ ಕುಳಿತಿರುವ ಸಮ್ರಾಜನು ಯಾರು ಬಂದರೂ ಸಿಂಹಾಸನದಿಂದ ಎದ್ದೇಳಬಾರದು ಎಂದು ಯಾರಾದರೂ ಭಾವಿಸಿಕೊಂಡರೆ—ಅವರಿಗೆ ಧರ್ಮದ ವಾಸ್ತವಿಕವಾದ ಸ್ವರೂಪವು ತಿಳಿದಿಲ್ಲವೆಂದೇ ಹೇಳಬೇಕು. ಆತನು ಯಾರು ಬಂದರೂ ಸಿಂಹಾಸನದಿಂದ ಎದ್ದೇಳಬಾರದು—ಎಂದು ಉಪದೇಶ ಮಾಡುವವರು ಜನರನ್ನು ಕೆಟ್ಟದಾರಿಗೆ ಒಯ್ಯುತ್ತಾರೆ. ಅವರು ತಾವು ಘೋರವಾದ ನರಕದಲ್ಲಿ ಬೀಳುವುದಲ್ಲದೇ ಇತರರಿಗೂ ಕೆಟ್ಟ ಆದರ್ಶ ವಾಗುವರು. ಅವರ ಮಾತನ್ನು ನಂಬುವವರು ಕಲ್ಲಿನ ದೋಣಿಯಂತೆ ಮುಳುಗಿಹೋಗುವರು. ನನ್ನ ಗುರುಗಳಾದ ಬೃಹಸ್ಪತಿಗಳಾದರೋ ಆಳ ವಾದ ಜ್ಞಾನದ ಕಡಲಾಗಿದ್ದಾರೆ. ಅವರಲ್ಲಿ ಕಪಟವನ್ನೂ, ಅವಿನಯವನ್ನೂ ತೋರಿದ ನಾನು ಈಗ ಅವರ ಪಾದಾರವಿಂದಗಳಿಗೆ ತಲೆಯನ್ನು ಮುಟ್ಟಿಸಿ ನಮಸ್ಕಾರಮಾಡಿ ಅವರನ್ನು ಪ್ರಸನ್ನಗೊಳಿಸುವೆನು." (ಶ್ಲೋಕ 101-15)

ಎಲೈ ಭರತಕುಲತಿಲಕನೇ! ದೇವರಾಜನು ಹೀಗೆ ಯೋಚನೆಯನ್ನು ಮಾಡುತ್ತಿರುವಾಗಲೇ ಭಗವಂತರಾದ ಬೃಹಸ್ಪತ್ಯಾಚಾರ್ಯರು ತಮ್ಮ ಮನೆ ಯಿಂದ ಹೊರಹೊರಟು ಯೋಗಬಲದಿಂದ ಅಂತರ್ಧಾನಹೊಂದಿಬಿಟ್ಟರು.

ಇಂದ್ರನು ಎಷ್ಟು ಹುಡುಕಿದರೂ ಮತ್ತು ಎಷ್ಟು ಹುಡುಕಿಸಿದರೂ ಆತನಿಗೆ ಅವರ ಸುಳಿವು ಸಿಕ್ಕಲಿಲ್ಲ. ಗುರುಗಳು ಇಲ್ಲದೇ ಇದ್ದರೆ ತನ್ನ ಸ್ಥಾನವು ಸುರಕ್ಷಿತವಾಗಿ ಉಳಿಯುವುದಿಲ್ಲ–ಎಂದರಿತ ಆತನು ದೇವತೆಗಳೊಡನೆ ಕಲೆತು ಸ್ವರ್ಗವನ್ನು ಕಾಪಾಡಿಕೊಳ್ಳುವ ಉಪಾಯವೇನೆಂಬುದನ್ನು ಗಾಢವಾಗಿ ಯೋಚನೆಮಾಡಿದನು. ಅವನ ಬುದ್ಧಿಗೆ ಏನೂ ಹೊಳೆಯಲೇ ಇಲ್ಲ. ಬುದ್ಧಿಯು ನೆಮ್ಮದಿಯನ್ನು ಕಳೆದುಕೊಂಡಿತು. ಇಂದ್ರನಿಗೆ ಅಂತಹ ಶೋಚನೀಯಸ್ಥಿತಿ ಬಂದಿರುವುದನ್ನು ತಿಳಿದೊಡನೆಯೇ ದೈತ್ಯರು–'ದೇವತೆ ಗಳನ್ನು ಆಕ್ರಮಿಸಲು ಇದೇ ಒಳ್ಳೆಯ ಕಾಲ'–ಎಂದುಕೊಂಡರು. ಅವರೆ ಲ್ಲರೂ ತಮ್ಮ ಗುರುಗಳಾದ ಶುಕ್ರಾಚಾರ್ಯರ ಆದೇಶವನ್ನನುಸರಿಸಿ ದುರಂಹಕಾರದಿಂದ ಕೊಬ್ಬಿದವರಾಗಿ ದೇವತೆಗಳನ್ನು ಬಡಿದುಹಾಕುವ ಇಚ್ಛೆ ಯಿಂದ ಅವರ ಮೇಲೆ ಯುದ್ಧಮಾಡಲು ಸಿದ್ಧರಾದರು. ಅವರು ಯುದ್ಧದಲ್ಲಿ ಪ್ರಯೋಗಿಸಿದ ತೀಕ್ಷ್ಣವಾದ ಬಾಣಗಳು ದೇವತೆಗಳ ಅಂಗಗಳನ್ನು ಕತ್ತರಿಸಿ ಹಾಕಿದುವು. ಆಗ ಅವರೆಲ್ಲರೂ ಇಂದ್ರನೊಡನೆ ಬ್ರಹ್ಮದೇವರ ಬಳಿಗೆ ಓಡಿಹೋಗಿ ತಲೆತಗ್ಗಿಸಿಕೊಂಡು ಅವರಲ್ಲಿ ಮರೆಹೊಕ್ಕರು. ಹೀಗೆ ಏಟು ತಿಂದು ಬಂದವರಾಗಿ ಅತಿದುರ್ದೆಸೆಯಲ್ಲಿದ್ದ ದೇವತೆಗಳನ್ನು ಕಂಡು ಬ್ರಹ್ಮದೇವರ ಹೃದಯವು ಕರುಣೆಯಿಂದ ಕರಗಿತು. ಅವರು ದೇವತೆಗಳನ್ನು ಸಂತೈಸುತ್ತಾ ಹೀಗೆಂದರು :

ದೇವತೆಗಳಿಗೆ ಬ್ರಹ್ಮದೇವರ ಉಪದೇಶ :

"ಎಲೈ ದೇವಶ್ರೇಷ್ಠರೇ! ನೀವು ಎಂತಹ ಕೆಟ್ಟಕೆಲಸವನ್ನು ಮಾಡಿದಿರಿ? ಅಯ್ಯೋ! ನಿಮ್ಮ ಸಭೆಗೆ ದಯಮಾಡಿಸಿದ ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರೂ, ವೇದವಿದರಲ್ಲಿ ಅಗ್ರಗಣ್ಯರೂ, ಜಿತೇಂದ್ರಿಯರೂ ಆದ ಬ್ರಾಹ್ಮಣ ಶ್ರೇಷ್ಠರಾದ ಆಚಾರ್ಯವರ್ಯರಿಗೆ ಸತ್ಕಾರವನ್ನು ಮಾಡದೇ ಕಡೆಗಣಿಸಿದಿ ರಲ್ಲಾ! ಇದೇ ನಿಮಗೆ ಉಂಟಾಗಿರುವ ಈ ಪರಾಭವಕ್ಕೆ ಕಾರಣವು. ಐಶ್ವರ್ಯ ಮತ್ತು ಪರಾಕ್ರಮಗಳಲ್ಲಿ ನಿಮಗಿಂತಲೂ ಕೆಳಮಟ್ಟದಲ್ಲಿದ್ದ ಅಸುರರು ಈಗ ಭಕ್ತಿಯಿಂದ ತಮ್ಮ ಗುರುವರ್ಯರಾದ ಶುಕ್ರಾಚಾರ್ಯರನ್ನು ಆರಾಧನೆಮಾಡಿ ಎಷ್ಟು ಪುಷ್ಟರಾಗಿಬಿಟ್ಟಿದ್ದಾರೆ ; ನೋಡಿರಿ. ಆಚಾರ್ಯ ನಿಷ್ಠರಾದ ಆ ಅಸುರರು ಕೆಲವು ದಿನಗಳಲ್ಲಿ ನನ್ನ ಲೋಕವನ್ನೂ ಕಿತ್ತುಕೊಳ್ಳ

ಬಹುದು–ಎಂದು ನನಗೆ ಅನ್ನಿಸುತ್ತಿದೆ. ಭೃಗುವಂಶದ ಋಷಿಗಳು ಅವರಿಗೆ ಅರ್ಥಶಾಸ್ತ್ರಾದಿ ವಿದ್ಯೆಗಳಲ್ಲಿ ಅದ್ಭುತವಾದ ಶಿಕ್ಷಣವನ್ನು ಕೊಡುತ್ತಿದ್ದಾರೆ. ಅವರ ರಹಸ್ಯಗಳು ಯಾವುವೂ ನಿಮಗೆ ತಿಳಿಯುವುದಿಲ್ಲ. ಅವರ ಸಲಹೆಗಳೂ ಗುಟ್ಟಾಗಿರುತ್ತವೆ. ಇಂತಹ ಸ್ಥಿತಿಯಲ್ಲಿ ಅವರು ಸ್ವರ್ಗವನ್ನೇ ಏಕೆ? ತಮಗೆ ಇಷ್ಟವಾದ ಯಾವುದೇ ಲೋಕವನ್ನಾದರೂ ಜಯಿಸಬಲ್ಲರು. ಆದರೆ ಒಂದು ವಿಷಯವು ಮಾತ್ರ ನಿಜ. ಅದೇನೆಂದರೆ :

ನ ವಿಪ್ರಗೋವಿನ್ದಗವೀಶ್ವರಾಣಾಂ ।
ಭವನ್ತ್ಯಭದ್ರಾಣಿ ನರೇಶ್ವರಾಣಾಮ್ ॥೨೪॥

ಬ್ರಾಹ್ಮಣರನ್ನೂ, ಗೋವಿಂದನನ್ನೂ ಮತ್ತು ಗೋವುಗಳನ್ನೂ ತಮ್ಮ ಸರ್ವಸ್ವವೆಂದು ಯಾರು ಭಾವಿಸುತ್ತಾ ಅವರ ಕೃಪೆಗೆ ಪಾತ್ರರಾಗಿದ್ದಾರೆಯೋ–ಅವರಿಗೆ ಎಂದಿಗೂ ಅಮಂಗಳವುಂಟಾಗುವುದಿಲ್ಲ. ಆದುದರಿಂದ ಈಗ ನೀವು ಶೀಘ್ರದಲ್ಲಿಯೇ ತ್ವಷ್ಟನ ಪುತ್ರನಾದ ವಿಶ್ವರೂಪನ ಬಳಿಗೆ ಹೋಗಿ ಅವನ ಸೇವೆಯನ್ನು ಮಾಡಿರಿ. ಆತನು ಬ್ರಾಹ್ಮಣೋತ್ತಮನು, ತಪಸ್ವಿಯು ಮತ್ತು ಸಂಯಮಿಯು. ಆತನಿಗೆ ಅಸುರರ ವಿಷಯದಲ್ಲಿಯೂ ಪ್ರೇಮವೇ. ಆ ಪ್ರೇಮದಿಂದ ಆತನು ಮಾಡಬಹುದಾದ ಕರ್ಮವನ್ನು ನೀವು ಸಹಿಸಿಕೊಂಡು ಆತನನ್ನು ಗೌರವಿಸುವುದಾದರೆ ಆತನು ನಿಮ್ಮ ಕೆಲಸವನ್ನು ಮಾಡಿಕೊಡುವನು."

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಬ್ರಹ್ಮದೇವರು ಹೀಗೆ ಹೇಳಲು ದೇವತೆಗಳು ಚಿಂತಾಜ್ವರವನ್ನು ಬಿಟ್ಟು ತ್ವಷ್ಟನ ಪುತ್ರನಾದ ವಿಶ್ವರೂಪನ ಬಳಿಗೆ ಹೋಗಿ ಆತನನ್ನು ಆಲಿಂಗಿಸಿಕೊಂಡು ಹೀಗೆ ಪ್ರಾರ್ಥನೆ ಮಾಡಿದರು :

"ಮಗು, ವಿಶ್ವರೂಪ! ನಾವು ಅತಿಥಿಗಳಾಗಿ ನಿನ್ನ ಆಶ್ರಮಕ್ಕೆ ಬಂದಿರುವೆವು. ನಿನಗೆ ಮಂಗಳವಾಗಲಿ. ನಾವು ಒಂದು ರೀತಿಯಲ್ಲಿ ನಿನ್ನ ತಂದೆಯ ಸ್ಥಾನದಲ್ಲಿರುವುದರಿಂದ ನಾವು ಹೇಳುವ ನಮ್ಮ ಸಮಯೋಚಿತವಾದ ಅಭಿಲಾಷೆಯನ್ನು ನೀನು ಈಡೇರಿಸಿಕೊಡಲೇಬೇಕು. (ಶ್ಲೋಕ 26-27)

ಪುತ್ರಾಣಾಂ ಹಿ ಪರೋ ಧರ್ಮಃ ಪಿತೃಶುಶ್ರೂಷಣಂ ಸತಾಮ್ ।
ಅಪಿ ಪುತ್ರವತಾಂ ಬ್ರಹ್ಮನ್ಕಿಮುತ ಬ್ರಹ್ಮಚಾರಿಣಾಮ್ ॥೨೮॥

ಎಲೈ ಬ್ರಾಹ್ಮಣೋತ್ತಮನೇ! ತಂದೆಯ ಮತ್ತು ಗುರು-ಹಿರಿಯರ ಸೇವೆ-ಶುಶ್ರೂಷೆಗಳನ್ನು ಮಾಡುವುದು ಸಂತಾನವಂತರಾದ ಸತ್ಪುತ್ರರಿಗೂ ಕೂಡ ಪರಮಧರ್ಮವಾಗಿದೆ. ಹೀಗಿರುವಾಗ ಬ್ರಹ್ಮಚಾರಿಗಳಾದ ಸತ್ಪುರುಷರ ವಿಷಯದಲ್ಲಿ ಅದನ್ನು ಹೇಳಲೇಬೇಕಾಗಿಲ್ಲ.

ಆಚಾರ್ಯೋ ಬ್ರಹ್ಮಣೋ ಮೂರ್ತಿಃ ಪಿತಾ ಮೂರ್ತಿಃ ಪ್ರಜಾಪತೇಃ ।
ಭ್ರಾತಾ ಮರುತ್ಪತೇಮೂರ್ತಿರ್ಮಾತಾ ಸಾಕ್ಷಾತ್ಕ್ಷಿತೇಸ್ತನುಃ ॥

ಎಲೈ ವತ್ಸನೇ! ಆಚಾರ್ಯನು ಪರಬ್ರಹ್ಮದ ಅಥವಾ ವೇದದ ಮೂರ್ತಿಯು. ತಂದೆಯು ಪ್ರಜಾಪತಿಬ್ರಹ್ಮನ ಮೂರ್ತಿಯು. ಅಣ್ಣನು ಇಂದ್ರನ ಮೂರ್ತಿಯು ಮತ್ತು ತಾಯಿಯು ಸಾಕ್ಷಾತ್ ಪೃಥಿವೀಮಾತೆಯ ಮೂರ್ತಿಯೇ ಆಗಿರುವಳು.

ದಯಾಯಾ ಭಗಿನೀ ಮೂರ್ತಿರ್ಧರ್ಮಸ್ಯಾತ್ಮಾತಿಥಿಃ ಸ್ವಯಮ್ ।
ಅಗ್ನೇರಭ್ಯಾಗತೋ ಮೂರ್ತಿಃ ಸರ್ವಭೂತಾನಿ ಚಾತ್ಮನಃ ॥೩೦॥

ಹಾಗೆಯೇ ಸಹೋದರಿಯು ದಯೆಯ ಮೂರ್ತಿಯು. ಅತಿಥಿಯು ಧರ್ಮದೇವತೆಯ ಮೂರ್ತಿಯು. ಅಭ್ಯಾಗತನು ಅಗ್ನಿದೇವರ ಮೂರ್ತಿಯು. ಅಂತೆಯೇ ಜಗತ್ತಿನ ಸಕಲಪ್ರಾಣಿಗಳೂ ತನ್ನ ಆತ್ಮನ ಮೂರ್ತಿಗಳು ಅಂದರೆ–ಆತ್ಮಸ್ವರೂಪರೇ ಆಗಿರುವರು.

ಎಲೈ ಪುತ್ರನೇ! ನಾವು ನಿನಗೆ ತಂದೆಯ ಸ್ಥಾನದಲ್ಲಿದ್ದೇವೆ. ಇಂತಹ ಪೂಜ್ಯಸ್ಥಾನದಲ್ಲಿರುವ ನಾವು ಶತ್ರುಗಳಿಂದ ಪರಾಜಿತರಾಗಿ ಬಹಳ ದುಃಖ ದಲ್ಲಿದ್ದೇವೆ. ನೀನು ನಿನ್ನ ತಪೋಬಲದಿಂದ ನಮ್ಮ ಈ ದುಃಖ, ದಾರಿದ್ರ್ಯ ಮತ್ತು ಪರಾಜಯಗಳನ್ನು ಹೋಗಲಾಡಿಸು. ನಮ್ಮ ಈ ಆಜ್ಞೆಯನ್ನು ನೀನು ನಡೆಸಿಕೊಡಬೇಕು. ನೀನು ಬ್ರಹ್ಮನಿಷ್ಠನಾದ ಬ್ರಾಹ್ಮಣನಾಗಿರುವುದರಿಂದ ಹುಟ್ಟಿನಿಂದಲೇ ನಮಗೆ ಗುರುವಾಗಿರುವೆ. ನಾವು ನಿನ್ನನ್ನು ಆಚಾರ್ಯನನ್ನಾಗಿ ವರಣಮಾಡಿ ನಿನ್ನ ಶಕ್ತಿಯಿಂದ ಅನಾಯಾಸವಾಗಿಯೇ ಶತ್ರುಗಳ ಮೇಲೆ ಜಯಗಳಿಸುವೆವು.

ನ ಗರ್ಹಯನ್ತಿ ಹ್ಯರ್ಥೇಷು ಯವಿಷ್ಠಾಙ್ಘ್ರ್ಯಭಿವಾದನಮ್ ।
ಛನ್ದೋಭ್ಯೋಽನ್ಯತ್ರ ನ ಬ್ರಹ್ಮನ್ವಯೋ ಜ್ಯೈಷ್ಠ್ಯಸ್ಯ ಕಾರಣಮ್ ॥

ಎಲೈ ಬ್ರಾಹ್ಮಣೋತ್ತಮನೇ! ಅವಶ್ಯಕತೆ ಒದಗಿದಾಗ ವಯಸ್ಸಿನಲ್ಲಿ ಚಿಕ್ಕವರಾದವರಿಗೆ ನಮಸ್ಕಾರಮಾಡುವುದು ನಿಂದ್ಯವಾಗುವುದಿಲ್ಲ. ಹಿರಿತನಕ್ಕೆ ಕಾರಣ ವೇದಗಳ ಜ್ಞಾನವೇ ಹೊರತು ವಯಸ್ಸಲ್ಲ."

ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

ಮಹಾರಾಜನೇ! ದೇವತೆಗಳು ಈ ರೀತಿಯಲ್ಲಿ ವಿಶ್ವರೂಪನನ್ನು ತಮಗೆ ಪೌರೋಹಿತ್ಯವನ್ನು ವಹಿಸಿಕೊಳ್ಳಲು ಪ್ರಾರ್ಥನೆಮಾಡಿದಾಗ–ಆ ಮಹಾತಪಸ್ವಿಯು ಪ್ರಸನ್ನನಾಗಿ ಅತ್ಯಂತಪ್ರಿಯವೂ ಮಧುರವೂ ಆದ ಮಾತುಗಳಿಂದ ಅವರಿಗೆ ಹೀಗೆ ಹೇಳಿದನು :

ವಿಶ್ವರೂಪನು ದೇವತೆಗಳಿಗೆ ಕೊಟ್ಟ ಉತ್ತರ :

ವಿಗರ್ಹಿತಂ ಧರ್ಮಶೀಲೈರ್ಬ್ರಹ್ಮವರ್ಚಉಪವ್ಯಯಮ್ ।
ಕಥಂ ನು ಮದ್ವಿಧೋ ನಾಥಾ ಲೋಕೇಶೈರಭಿಯಾಚಿತಮ್ ।
ಪ್ರತ್ಯಾಖ್ಯಾಸ್ಯತಿ ತಚ್ಛಿಷ್ಯಃ ಸ ಏವ ಸ್ವಾರ್ಥ ಉಚ್ಯತೇ ॥೩೫॥

"ಎಲೈ ಒಡೆಯರೇ! ಧರ್ಮಶೀಲರಾದ ಮಹಾತ್ಮರು ಪೌರೋಹಿತ್ಯ ವೃತ್ತಿಯನ್ನು ನಿಂದಿಸುತ್ತಾರೆ.* ಏಕೆಂದರೆ : ಅದರಿಂದ ಬ್ರಹ್ಮವರ್ಚಸ್ಸು ಕ್ಷಯಹೊಂದುತ್ತದೆ. ಆದರೆ ನೀವು ನನಗೆ ಒಡೆಯರಾಗಿ ಲೋಕೇಶ್ವರರೂಪ ರಾಗಿ ಅದನ್ನು ವಹಿಸಿಕೊಳ್ಳಬೇಕೆಂದು ನನ್ನನ್ನು ಪ್ರಾರ್ಥಿಸುತ್ತಿದ್ದೀರಿ. ಹಿರಿಯರ ಆಜ್ಞೆಯನ್ನು ಪಾಲನೆಮಾಡುವುದು ಕಿರಿಯರ ಕರ್ತವ್ಯ. ನೀವು ನನಗೆ ಪಿತೃಸ್ಥಾನದಲ್ಲಿಯೂ ಇದ್ದು ಲೋಕಪಾಲಕರೂ ಆಗಿರುವಿರಿ. ಆದುದ

---

* (ಸಂಬಳ-ಸಂಭಾವನೆಗಳ ಆಸೆಯಿಂದ) ಪೌರೋಹಿತ್ಯವನ್ನೂ, ದೇವತಾಪೂಜೆಯನ್ನೂ, ಮಠದ ಆಧಿಪತ್ಯವನ್ನೂ ಯಾವನು ಮಾಡುತ್ತಾನೆಯೋ–ಆತನು ದೇವತಾ ಪುರುಷನೇ ಆದರೂ ಮುಂದೆ ನಾಯಿಯ ಜನ್ಮವನ್ನು ಪಡೆಯುವನು–ಎಂದು ಕರ್ಮ ವಿಪಾಕಗ್ರಂಥವು ಹೇಳುತ್ತದೆ.

ಪೌರೋಹಿತ್ಯಂ ಚಾರ್ಚಕತ್ವಂ ಮಾಠಾಪತ್ಯಂ ತಥೈವ ಚ ।
ಯಃ ಕರೋತಿ ಸ ದೇವೋಽಪಿ ಶ್ವಾನಯೋನಿಂ ಸಮಶ್ನುತೇ ॥

ರಿಂದ ಶಿಷ್ಯಸ್ಥಾನದಲ್ಲಿರುವ ನಾನು ನಿಮ್ಮ ಪ್ರಾರ್ಥನೆಯನ್ನು ಹೇಗೆ ತಾನೇ ತಿರಸ್ಕರಿಸಲಿ? ಅದನ್ನು ಈಡೇರಿಸುವುದೇ ನನ್ನ ಸ್ವಾರ್ಥವು. ಆದರಿಂದ ನನ್ನ ಪ್ರಯೋಜನವೂ ಸಾಧಿತವಾಗುವುದು.

ಎಲೈ ದೇವತೆಗಳೇ! ವಿರಕ್ತರಾಗಿರುವ ದರಿದ್ರರಿಗೆ ಶಿಲಾವೃತ್ತಿ. ಉಂಛವೃತ್ತಿಗಳೇ* ಜೀವನಧರ್ಮವು. ಆ ವೃತ್ತಿಗಳಿಂದ ದೇವಕಾರ್ಯ-ಪಿತೃ ಕಾರ್ಯಗಳೇ ಮುಂತಾದ ಧರ್ಮಕಾರ್ಯಗಳನ್ನು ನೆರವೇರಿಸುತ್ತಿರುವ ನಾನು ನಿಂದೆಗೆ ಯೋಗ್ಯವಾದ ಪುರೋಹಿತವೃತ್ತಿಯನ್ನು ಏಕೆ ಕೈಗೊಳ್ಳಲಿ? ಬುದ್ಧಿಕೆಟ್ಟು ಹೋದವರು ತಾನೇ ಈ ವೃತ್ತಿಯಿಂದ ಪ್ರಸನ್ನರಾಗುವರು?

(ಶ್ಲೋಕ 36)

ತಥಾಪಿ ನ ಪ್ರತಿಬ್ರೂಯಾಂ ಗುರುಭಿಃ ಪ್ರಾರ್ಥಿತಂ ಕಿಯತ್ ।
ಭವತಾಂ ಪ್ರಾರ್ಥಿತಂ ಸರ್ವಂ ಪ್ರಾಣೈರರ್ಥೈಶ್ಚ ಸಾಧಯೇ ॥೩೬॥

ಹಾಗಿದ್ದರೂ ನಾನು ಗುರು-ಹಿರಿಯರಾದ ನಿಮ್ಮ ಪ್ರಾರ್ಥನೆಯನ್ನು ತಳ್ಳಿಹಾಕುವುದಿಲ್ಲ. ಅದಕ್ಕೆ ಎದುರಾಡುವುದಿಲ್ಲ. ನನ್ನ ತನು-ಮನ-ಧನ ಗಳಿಂದಲೂ ನೀವು ಹೇಳಿರುವುದನ್ನೆಲ್ಲಾ ನಡೆಸಿಕೊಡುವೆನು."

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ರಾಜೇಂದ್ರನೇ! ಮಹಾತಪಸ್ವಿಯಾದ ಆ ವಿಶ್ವರೂಪನು ದೇವತೆಗಳ ಮುಂದೇ ಹೀಗೆ ಪ್ರತಿಜ್ಞೆಮಾಡಿ ಅವರಿಂದ ಪೌರೋಹಿತ್ಯಕ್ಕಾಗಿ ವರಿಸಲ್ಪಟ್ಟು ಆ ಕಾರ್ಯವನ್ನು ಅತ್ಯಂತಶ್ರದ್ಧಾಸಕ್ತಿಗಳಿಂದ ನಡೆಸತೊಡಗಿದನು. ಶುಕ್ರಾಚಾರ್ಯರು ತಮ್ಮ ವಿದ್ಯಾಬಲದಿಂದ ಅಸುರರ ಸಂಪತ್ತನ್ನು ಭದ್ರ ಪಡಿಸಿ ರಕ್ಷಣೆಮಾಡುತ್ತಿದ್ದರು. ದಕ್ಷನಾದ ವಿಶ್ವರೂಪನು ವೈಷ್ಣವೀ ವಿದ್ಯೆಯ ಬಲದಿಂದ ಆ ಸಂಪತ್ತನ್ನು ಕಿತ್ತುಕೊಂಡು ದೇವರಾಜನಾದ

---

* 'ಭಿಕ್ಷೆಯನ್ನು ನೀಡಿರಿ'–ಎಂದು ಯಾಚನೆಮಾಡದೇ ತಾವಾಗಿಯೇ ತನ್ನ ಪಾತ್ರೆಯಲ್ಲಿ ಎಷ್ಟನ್ನು ತಂದು ಸಮರ್ಪಿಸುತ್ತಾರೆಯೋ ಅಷ್ಟರಿಂದಲೇ ಜೀವನವನ್ನು ಧಾರ್ಮಿಕವಾಗಿ ನಿರ್ವಹಿಸುವುದು ಶಿಲಾವೃತ್ತಿ. ಹೊಲ-ಗದ್ದೆಗಳಲ್ಲಿ ಜನರು ಅಸಡ್ಡೆಯಿಂದ ಬಿಟ್ಟುಹೋಗಿರುವ ಧಾನ್ಯಗಳನ್ನು ಆರಿಸಿಕೊಂಡು ಅಷ್ಟರಿಂದಲೇ ಧಾರ್ಮಿಕವಾದ ಜೀವನಯಾತ್ರೆಯನ್ನು ನಡೆಸುವುದು ಉಂಛವೃತ್ತಿ.

ಮಹೇಂದ್ರನಿಗೆ ಕೊಟ್ಟುಬಿಟ್ಟನು. ಯಾವ ವಿದ್ಯೆಯ ಬಲದಿಂದ ಇಂದ್ರನು ಸಂರಕ್ಷಿತನಾಗಿ ಅಸುರರ ಸಮೂಹಗಳನ್ನು ಗೆದ್ದು ಜಯವನ್ನು ಗಳಿಸಿದನೋ ಆ ವೈಷ್ಣವಮಹಾವಿದ್ಯೆಯನ್ನು ಉದಾರವಾದ ಬುದ್ಧಿಯುಳ್ಳ ಆ ವಿಶ್ವರೂಪನೇ ಇಂದ್ರನಿಗೆ ಉಪದೇಶಮಾಡಿದನು." (ಶ್ಲೋಕ 36-40)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಷಷ್ಠಸ್ಕಂಧದ ೭ನೆಯ ಅಧ್ಯಾಯವು ಮುಗಿಯಿತು.

ಷಷ್ಠಸ್ಕಂಧ ೮ನೆಯ ಅಧ್ಯಾಯ

ವಿಶ್ವರೂಪನು ಇಂದ್ರನಿಗೆ ನಾರಾಯಣಕವಚವನ್ನು ಉಪದೇಶಿಸಿದುದು

ಪರೀಕ್ಷಿತನು ಹೇಳುತ್ತಾನೆ :

ಯಯಾ ಗುಪ್ತಃ ಸಹಸ್ರಾಕ್ಷಃ ಸವಾಹಾನ್ರಿಪುಸೈನಿಕಾನ್ ।
ಕ್ರೀಡನ್ನಿವ ವಿನಿರ್ಜಿತ್ಯ ತ್ರಿಲೋಕ್ಯಾ ಬುಭುಜೇ ಶ್ರಿಯಮ್ ॥೧॥

ಭಗವಂಸ್ತನ್ಮಮಾಖ್ಯಾಹಿ ವರ್ಮ ನಾರಾಯಣಾತ್ಮಕಮ್ ।
ಯಥಾತತಾಯಿನಃ ಶತ್ರೂನ್ಯೇನ ಗುಪ್ತೋಽಜಯನ್ಮೃಧೇ ॥೨॥

"ಮಹಾತ್ಮರೇ! ಮಹೇಂದ್ರನು ಯಾವ ವಿದ್ಯೆಯಿಂದ ಸಂರಕ್ಷಿತನಾಗಿ ಚತುರಂಗಬಲಸಮೇತವಾದ ಶತ್ರುಸೈನ್ಯವನ್ನು ಆಟಗಾರಿಕೆಯೋ ಎಂಬಂತೆ ಅನಾಯಾಸವಾಗಿ ಸೋಲಿಸಿ ಮೂರು ಲೋಕಗಳ ಮೇಲಿನ ಐಶ್ವರ್ಯವನ್ನು ಅನುಭವಿಸಿದನೋ–ಆ ನಾರಾಯಣಕವಚವೆಂಬ ಮಹಾಮಂತ್ರವನ್ನು ನನಗೆ ತಿಳಿಸಿರಿ. ಅದರಿಂದ ಸಂರಕ್ಷಿತನಾಗಿ ಆತನು ರಣಭೂಮಿಯಲ್ಲಿ ತನ್ನನ್ನು ಸಂಹರಿಸಲು ಬಂದ ಶತ್ರುಗಳ ಮೇಲೆ ಹೇಗೆ ವಿಜಯವನ್ನು ಗಳಿಸಿದನು?– ಎಂಬುದನ್ನೂ ನಿರೂಪಿಸಿರಿ."

ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನ ಪ್ರಾರ್ಥನೆಗೆ ಹೀಗೆ ಉತ್ತರಿಸಿದರು :

"ಎಲೈ ನೃಪತಿಯೇ! ದೇವತೆಗಳು ವಿಶ್ವರೂಪನನ್ನು ಪುರೋಹಿತನ

ನ್ನಾಗಿ ಮಾಡಿಕೊಂಡ ಬಳಿಕ ದೇವರಾಜನಾದ ಮಹೇಂದ್ರನ ಪ್ರಾರ್ಥನೆಯಂತೆ ವಿಶ್ವರೂಪನು ಆತನಿಗೆ ನಾರಾಯಣಕವಚಮಹಾಮಂತ್ರವನ್ನು ಉಪದೇಶ ಮಾಡಿದನು. ಅದನ್ನು ನಾನು ನಿನಗೆ ಉಪದೇಶಿಸುತ್ತೇನೆ. ಏಕಾಗ್ರವಾದ ಚಿತ್ತದಿಂದ ಕೇಳುವವನಾಗು.

ಇಂದ್ರನಿಗೆ ವಿಶ್ವರೂಪನ ಉಪದೇಶ :

"ಭಯವು ಏನಾದರೂ ಒದಗಿದರೆ ಆಗ ಈ ನಾರಾಯಣಕವಚವನ್ನು ಧರಿಸಿಕೊಂಡು ತನ್ನನ್ನು ರಕ್ಷಿಸಿಕೊಳ್ಳಬೇಕು. ಅದರ ವಿಧಾನವೇನೆಂದರೆ : ಮೊದಲು ಕೈಕಾಲುಗಳನ್ನು ತೊಳೆದುಕೊಂಡು ಆಚಮನಮಾಡಬೇಕು. ದರ್ಭ ಪವಿತ್ರವನ್ನು ಧರಿಸಿಕೊಂಡು ಉತ್ತರಾಭಿಮುಖವಾಗಿ ಕುಳಿತು ಮಂತ್ರಾನುಷ್ಠಾನವು ಮುಗಿಯುವವರೆಗೂ ಮೌನವಾಗಿರಲು ನಿಶ್ಚಯಿಸಿ, ಶುಚಿಯಾಗಿ '**ಓಂ ನಮೋ ನಾರಾಯಣಾಯ**' ಮತ್ತು '**ಓಂ ನಮೋ ಭಗವತೇ ವಾಸುದೇವಾಯ**' ಎಂಬ ಮಹಾಮಂತ್ರಗಳಿಂದ ಹೃದಯವೇ ಮುಂತಾದ ಅಂಗಗಳಲ್ಲಿ ಅಂಗನ್ಯಾಸವನ್ನೂ ಮತ್ತು ಅಂಗುಷ್ಠವೇ ಮುಂತಾದ ಕೈಬೆರಳುಗಳಲ್ಲಿ ಕರನ್ಯಾಸವನ್ನೂ ಮಾಡಬೇಕು. ಮೊದಲು **ಓಂ ನಮೋ ನಾರಾಯಣಾಯ** ಎಂಬ ಅಷ್ಟಾಕ್ಷರಮಂತ್ರದ 'ಓಂ' ಇತ್ಯಾದಿ ಎಂಟು ಅಕ್ಷರ ಗಳನ್ನೂ ಕ್ರಮವಾಗಿ ಪಾದಗಳು, ಮೊಣಕಾಲುಗಳು, ತೊಡೆಗಳು, ಹೊಟ್ಟೆ, ಹೃದಯ, ವಕ್ಷಃಸ್ಥಳ, ಬಾಯಿ ಮತ್ತು ತಲೆಗಳಲ್ಲಿ ಇರಿಸಬೇಕು. ಅಥವಾ ಇದಕ್ಕೆ ತಲೆಕೆಳಗಾಗಿ–ಆ ಮಂತ್ರದ ಯಕಾರದಿಂದ ಪ್ರಾರಂಭಿಸಿ ಓಂಕಾರದವರೆಗಿನ ಎಂಟು ಅಕ್ಷರಗಳನ್ನು ತಲೆಯಿಂದಾರಂಭಿಸಿ ಪಾದಗಳವರೆ ಗಿನ ಎಂಟು ಅಂಗಗಳಲ್ಲಿ ಇರಿಸಬೇಕು. ಇದಾದನಂತರ '**ಓಂ ನಮೋ ಭಗವತೇ ವಾಸುದೇವಾಯ**' ಎಂಬ ದ್ವಾದಶಾಕ್ಷರಮಂತ್ರದ ಓಂಕಾರ ದಿಂದಾರಂಭಿಸಿದ ಹನ್ನೆರಡು ಅಕ್ಷರಗಳನ್ನು ಬಲಗಡೆಯ ತರ್ಜನಿಯಿಂದ ಎಡಗಡೆಯ ತರ್ಜನಿಯವರೆಗೆ ಎರಡು ಕೈಗಳ ಬೆರಳುಗಳಲ್ಲೂ ಮತ್ತು ಎರಡು ಅಂಗುಷ್ಠಗಳ ಗಂಟುಗಳಲ್ಲೂ ಇರಿಸಬೇಕು. ಅನಂತರ '**ಓಂ ವಿಷ್ಣವೇ ನಮಃ**' ಎಂಬ ಷಡಕ್ಷರಮಹಾಮಂತ್ರದ ಮೊದಲನೆಯ ಅಕ್ಷರ ವಾದ 'ಓಂ' ಕಾರವನ್ನು ಹೃದಯದಲ್ಲಿಯೂ 'ವಿ' ಎಂಬುದನ್ನು ಬ್ರಹ್ಮರಂಧ್ರ ದಲ್ಲಿಯೂ 'ಷ' ಕಾರವನ್ನು ಹುಬ್ಬುಗಳ ಮಧ್ಯದಲ್ಲಿಯೂ 'ಣ' ಕಾರ

ವನ್ನು ಶಿಖೆಯಲ್ಲಿಯೂ 'ವೇ' ಕಾರವನ್ನು ಎರಡು ಕಣ್ಣುಗಳಲ್ಲಿಯೂ ಮತ್ತು 'ನ' ಕಾರವನ್ನು ಶರೀರದ ಎಲ್ಲ ಗಂಟುಗಳಲ್ಲಿಯೂ ಇರಿಸಬೇಕು. ಇದಾದನಂತರ 'ಓಂ ಮಃ ಅಸ್ತ್ರಾಯ ಫಟ್' ಎಂಬ ಮಂತ್ರದಿಂದ ದಿಗ್ಬಂಧನವನ್ನು ಮಾಡಬೇಕು. ಈ ರೀತಿಯಲ್ಲಿ ನ್ಯಾಸಮಾಡುವುದರಿಂದ ಈ ವಿಧಿಯನ್ನು ತಿಳಿದ ಮನುಷ್ಯನು ಮಂತ್ರಸ್ವರೂಪನಾಗಿಬಿಡುತ್ತಾನೆ. ಇದಾದನಂತರ ಸಮಗ್ರವಾದ ಐಶ್ವರ್ಯ, ಧರ್ಮ, ಯಶಸ್ಸು, ಸಂಪತ್ತು, ಜ್ಞಾನ ಮತ್ತು ವೈರಾಗ್ಯಗಳೆಂಬ ಆರು ಶಕ್ತಿಗಳಿಂದ ಸಂಪನ್ನನಾಗಿರುವ ಪರಮಾತ್ಮನನ್ನು ತನ್ಮಯತೆಯಿಂದ ಧ್ಯಾನಿಸಬೇಕು. ಅನಂತರ ವಿದ್ಯೆ, ತೇಜಸ್ಸು ಮತ್ತು ತಪಃಸ್ವರೂಪವಾದ ಈ ಮಂತ್ರ (ನಾರಾಯಣಕವಚ) ವನ್ನು ಪಠಿಸಬೇಕು. (ಶ್ಲೋಕ 4-11)

ಓಂ ಹರಿರ್ವಿದಧ್ಯಾನ್ಮಮ ಸರ್ವರಕ್ಷಾಂ
ನ್ಯಸ್ತಾಙ್ಘ್ರಿಪದ್ಮಃ ಪತಗೇನ್ದ್ರಪೃಷ್ಠೇ ।
ದರಾರಿಚರ್ಮಾಸಿಗದೇಷುಚಾಪ-
ಪಾಶಾನ್ದಧಾನೋಽಷ್ಟಗುಣೋಽಷ್ಟಬಾಹುಃ ॥೧೨॥

"ಗರುಡದೇವರ ಬೆನ್ನಿನ ಮೇಲೆ ತನ್ನ ಪಾದಾರವಿಂದಗಳನ್ನು ಇರಿಸಿಕೊಂಡವನಾಗಿ, ತನ್ನ ಎಂಟು ಹಸ್ತಗಳಲ್ಲಿ ಶಂಖ, ಚಕ್ರ, ಗುರಾಣಿ, ಖಡ್ಗ, ಗದೆ, ಬಾಣ, ಧನುಸ್ಸು ಮತ್ತು ಪಾಶಗಳೆಂಬ ಆಯುಧಗಳನ್ನು ಧರಿಸಿ ಅಷ್ಟಸಿದ್ಧಿಗಳಿಂದ ಸೇವಿಸಲ್ಪಡುತ್ತಿರುವ ಓಂಕಾರಸ್ವರೂಪಿಯಾದ ಶ್ರೀಹರಿಯು ಎಲ್ಲ ಪ್ರಕಾರಗಳಿಂದಲೂ ಎಲ್ಲ ಕಡೆಗಳಿಂದಲೂ ನನ್ನನ್ನು ರಕ್ಷಿಸಲಿ.

ಜಲೇಷು ಮಾಂ ರಕ್ಷತು ಮತ್ಸ್ಯಮೂರ್ತಿ-
ರ್ಯಾದೋಗಣೇಭ್ಯೋ ವರುಣಸ್ಯ ಪಾಶಾತ್ ।
ಸ್ಥಲೇಷು ಮಾಯಾವಟುವಾಮನೋಽವ್ಯಾ-
ತ್ತ್ರಿವಿಕ್ರಮಃ ಖೇಽವತು ವಿಶ್ವರೂಪಃ ॥೧೩॥

ಮತ್ಸ್ಯಮೂರ್ತಿಯಾದ ಭಗವಂತನು ನನ್ನನ್ನು ಜಲದಲ್ಲಿ ಜಲಜಂತುಗಳ ದೆಸೆಯಿಂದಲೂ–ವರುಣದೇವರ ಪಾಶಗಳ ದೆಸೆಯಿಂದಲೂ ಕಾಪಾಡಲಿ. ಮಾಯೆಯಿಂದ ಬ್ರಹ್ಮಚಾರಿಯ ರೂಪವನ್ನು ಧರಿಸಿ ಶ್ರೀಭಗವಂತನಾದ

ವಾಮನಮೂರ್ತಿಯು ನೆಲದ ಮೇಲೂ ಮತ್ತು ವಿಶ್ವರೂಪಿಯಾದ ಭಗವಾನ್ ತ್ರಿವಿಕ್ರಮಮೂರ್ತಿಯು ಆಕಾಶದಲ್ಲಿಯೂ ನನ್ನನ್ನು ರಕ್ಷಣೆಮಾಡಲಿ.

ದುರ್ಗೇಷ್ವಟವ್ಯಾಜಿಮುಖಾದಿಷು ಪ್ರಭುಃ
ಪಾಯಾನ್ನೃಸಿಂಹೋಽಸುರಯೂಥಪಾರಿಃ ।
ವಿಮುಞ್ಚತೋ ಯಸ್ಯ ಮಹಾಟ್ಟಹಾಸಂ
ದಿಶೋ ವಿನೇದುರ್ನ್ಯಪತಂಶ್ಚ ಗರ್ಭಾಃ ॥೧೪॥

ಯಾವನು ಘೋರವಾಗಿ ಅಟ್ಟಹಾಸವನ್ನು ಮಾಡಿದಾಗ ದಿಕ್ಕು-ದಿಗಂತಗಳಲ್ಲೆಲ್ಲಾ ಪ್ರತಿಧ್ವನಿಸಿ ದೈತ್ಯಸ್ತ್ರೀಯರಿಗೆ ಗರ್ಭಪಾತವುಂಟಾಯಿತೋ–ಅಂತಹ ದೈತ್ಯರ ಹಿಂಡಿಗೆ ಶತ್ರುವಾದ ಶ್ರೀಭಗವಂತನಾದ ಶ್ರೀನೃಸಿಂಹಪ್ರಭುವು ಅರಣ್ಯ, ರಣಭೂಮಿ ಇವೇ ಮುಂತಾದ ವಿಕಟವಾದ ಸ್ಥಾನಗಳಲ್ಲಿ ನನ್ನನ್ನು ಕಾಪಾಡಲಿ.

ರಕ್ಷತ್ವಸೌ ಮಾಧ್ವನಿ ಯಜ್ಞಕಲ್ಪಃ
ಸ್ವದಂಷ್ಟ್ರಯೋನ್ನೀತಧರೋ ವರಾಹಃ ।
ರಾಮೋಽದ್ರಿಕೂಟೇಷ್ವಥ ವಿಪ್ರವಾಸೇ
ಸಲಕ್ಷ್ಮಣೋಽವ್ಯಾದ್ಭರತಾಗ್ರಜೋಽಸ್ಮಾನ್ ॥೧೫॥

ತನ್ನ ಕೋರೆದಾಡೆಗಳ ಮೇಲೆ ಭೂದೇವಿಯನ್ನು ಮೇಲೆತ್ತಿ ಹಿಡಿದುಕೊಂಡು ಯಜ್ಞಮೂರ್ತಿಯಾದ ವರಾಹಭಗವಂತನು ಮಾರ್ಗಗಳ ಲ್ಲಿಯೂ, ಪರಶುರಾಮದೇವರು ಪರ್ವತಗಳ ಶಿಖರಗಳಲ್ಲಿಯೂ ಮತ್ತು ಲಕ್ಷ್ಮಣಸಹಿತನಾದ ಭರತಾಗ್ರಜನಾದ ಶ್ರೀರಾಮಚಂದ್ರಪ್ರಭುವು ಪ್ರವಾಸ ಸಮಯಗಳಲ್ಲಿಯೂ ನನ್ನನ್ನು ಕಾಪಾಡಲಿ.

ಮಾಮುಗ್ರಧರ್ಮಾದಖಿಲಾತ್ಪ್ರಮಾದಾ-
ನ್ನಾರಾಯಣಃ ಪಾತು ನರಶ್ಚ ಹಾಸಾತ್ ।
ದತ್ತಸ್ತ್ವಯೋಗಾದಥ ಯೋಗನಾಥಃ
ಪಾಯಾದ್ಗುಣೇಶಃ ಕಪಿಲಃ ಕರ್ಮಬನ್ಧಾತ್ ॥೧೬॥

ಶ್ರೀಭಗವಂತನಾದ ನಾರಾಯಣಮುನಿಯು ಮಾರಣ-ಮೋಹನ-ಮದ್ದು-ಮಾಟಗಳೇ ಮುಂತಾದ ಭಯಂಕರವಾದ ಪ್ರಯೋಗಗಳ ದೆಸೆ

ಯಿಂದಲೂ ಮತ್ತು ಎಲ್ಲ ಬಗೆಯ ಪ್ರಮಾದಗಳ ದೆಸೆಯಿಂದಲೂ ನನ್ನನ್ನು ಕಾಪಾಡಲಿ. ಯೋಗೇಶ್ವರನಾದ ಭಗವಂತನಾದ ಶ್ರೀದತ್ತಾತ್ರೇಯ ಮೂರ್ತಿಯು ಯೋಗವಿಘ್ನಗಳ ದೆಸೆಯಿಂದಲೂ ಮತ್ತು ತ್ರಿಗುಣಾಧಿಪತಿ ಯಾದ ಶ್ರೀಭಗವಂತನಾದ ಕಪಿಲಸ್ವಾಮಿಯು ಕರ್ಮಬಂಧನದ ದೆಸೆ ಯಿಂದಲೂ ನನ್ನನ್ನು ಸಂರಕ್ಷಿಸಲಿ.

ಸನತ್ಕುಮಾರೋಽವತು ಕಾಮದೇವಾ-
ದ್ಧಯಶೀರ್ಷಾ ಮಾಂ ಪಥಿ ದೇವಹೇಲನಾತ್ ।
ದೇವರ್ಷಿವರ್ಯಃ ಪುರುಷಾರ್ಚನಾನ್ತರಾ-
ತ್ಕೂರ್ಮೋ ಹರಿರ್ಮಾಂ ನಿರಯಾದಶೇಷಾತ್ ॥೧೭॥

ಶ್ರೀಭಗವಂತನಾದ ಸನತ್ಕುಮಾರಮುನಿಯು ಮನ್ಮಥನ ಪೀಡೆಯಿಂದ ನನ್ನನ್ನು ರಕ್ಷಿಸಲಿ. ಶ್ರೀಭಗವಂತನಾದ ಶ್ರೀಹಯಗ್ರೀವಸ್ವಾಮಿಯು ಮಾರ್ಗ ದಲ್ಲಿ ದೇವಮೂರ್ತಿಗಳಿಗೆ ಅಪಚಾರಮಾಡಿದ ಅಪರಾಧದಿಂದ ನನ್ನನ್ನು ಕಾಪಾಡಲಿ. ದೇವರ್ಷಿಶ್ರೇಷ್ಠರಾದ ನಾರದರು ದೇವರ ಸೇವೆಯಲ್ಲಿ ಒದಗಿದ ಅಪರಾಧಗಳ ದೆಸೆಯಿಂದ ಎನ್ನನ್ನು ಪೊರೆಯಲಿ. ಹಾಗೆಯೇ ಕೂರ್ಮಾವ ತಾರೀ ಶ್ರೀಹರಿಯು ಎಲ್ಲ ನರಕಗಳ ದೆಸೆಯಿಂದಲೂ ನನ್ನನ್ನು ಕಾಪಾಡಲಿ.*

---

* 'ಪುರುಷಾರ್ಚನಾಂತರಾತ್' ಎಂಬುದರ ಜಾಗದಲ್ಲಿ 'ಪುರುಷಾಣಾಂತರಾರ್ಚ ನಾತ್' ಎಂಬ ಪಾಠಾಂತರವಿದೆ. ಅದರ ಪ್ರಕಾರ ಪರಮಪುರುಷನನ್ನು ಬಿಟ್ಟು ಇತರ ಪುರುಷರನ್ನು ಸೇವೆಮಾಡಿದ ಅಪಚಾರದ ದೆಸೆಯಿಂದ–ಎಂದು ಅರ್ಥವಾಗುತ್ತದೆ.

ಶ್ರೀಭಗವಂತನ ಸೇವೆಯಲ್ಲಿ ಒದಗಬಹುದಾದ ಮೂವತ್ತೆರಡು ಅಪಚಾರಗಳನ್ನು ಹೀಗೆ ಪರಿಗಣಿಸಲಾಗಿದೆ : 1) ವಾಹನಾರೂಢನಾಗಿ ಅಥವಾ ಪಾದರಕ್ಷೆಗಳನ್ನು ಹಾಕಿ ಕೊಂಡು ಶ್ರೀಭಗವಂತನ ದೇವಾಲಯಕ್ಕೆ ಹೋಗುವುದು. 2) ರಥೋತ್ಸವ ಮತ್ತು ಜನ್ಮಾಷ್ಟಮಿಗಳೇ ಮುಂತಾದ ಭಗವಂತನ ಅವತಾರದಿನೋತ್ಸವಗಳನ್ನು ಆಚರಿಸದೇ ಇರುವುದು ಅಥವಾ ಅವುಗಳ ದರ್ಶನ ಮಾಡದೇ ಇರುವುದು. 3) ಶ್ರೀಭಗವನ್ಮೂರ್ತಿಗಳ ದರ್ಶನಮಾಡಿ ನಮಸ್ಕಾರಮಾಡದೇ ಇರುವುದು. 4) ಅಶುಚಿಯಾಗಿರುವಾಗ ಭಗವಂತನ ದರ್ಶನವನ್ನು ಮಾಡುವುದು. 5) ಒಂದು ಕೈಯಿಂದ ದೇವರಿಗೆ ನಮಸ್ಕಾರಮಾಡುವುದು. 6) ಪ್ರದಕ್ಷಿಣೆಮಾಡುವಾಗ ಭಗವಂತನ ಮುಂಭಾಗಕ್ಕೆ ಬಂದಾಗ ಸ್ವಲ್ಪ ತಡೆದು ಅನಂತರ ಪ್ರದಕ್ಷಿಣೆಯನ್ನು ಮುಂದುವರಿ

ಧನ್ವನ್ತರಿರ್ಭಗವಾನ್ಪಾತ್ವಪಥ್ಯಾ-
ದ್ವನ್ದ್ವಾದ್ಭಯಾದೃಷಭೋ ನಿರ್ಜಿತಾತ್ಮಾ ।
ಯಜ್ಞಶ್ಚ ಲೋಕಾದವತಾಜ್ಜನಾನ್ತಾ-
ದ್ಬಲೋ ಗಣಾತ್ಕ್ರೋಧವಶಾದಹೀನ್ದ್ರಃ ॥೧೮॥

ಶ್ರೀಭಗವಂತನಾದ ಧನ್ವಂತರಿಯು ಅಪಥ್ಯಸೇವನೆಯ ದೆಸೆಯಿಂದಲೂ, ಜಿತೇಂದ್ರಿಯನಾದ ಶ್ರೀಋಷಭದೇವನು ಸುಖ-ದುಃಖಾದಿ ಭಯಂಕರವಾದ ದ್ವಂದ್ವಗಳ ದೆಸೆಯಿಂದಲೂ, ಶ್ರೀಭಗವಂತನಾದ ಯಜ್ಞಮೂರ್ತಿಯು ಲೋಕಾಪವಾದದ ದೆಸೆಯಿಂದಲೂ, ಬಲರಾಮದೇವರು ಮನುಷ್ಯಕೃತವಾದ ಕಷ್ಟಗಳ ದೆಸೆಯಿಂದಲೂ ಮತ್ತು ಆದಿಶೇಷದೇವರು ಕ್ರೋಧವಶರೆಂಬ ಗಣಕ್ಕೆ ಸೇರಿದ ಸರ್ಪಗಳ ದೆಸೆಯಿಂದಲೂ ನನ್ನನ್ನು ಕಾಪಾಡಲಿ.

ದ್ವೈಪಾಯನೋ ಭಗವಾನಪ್ರಬೋಧಾ-
ದ್ಬುದ್ಧಸ್ತು ಪಾಖಣ್ಡಗಣಾತ್ಪ್ರಮಾದಾತ್ ।
ಕಲ್ಕಿಃ ಕಲೇಃ ಕಾಲಮಲಾತ್ಪ್ರಪಾತು
ಧರ್ಮಾವನಾಯೋರುಕೃತಾವತಾರಃ ॥೧೯॥

ಸದೇ ಇರುವುದು ಅಥವಾ ಕೇವಲ ಮುಂದುಗಡೆಯೇ ಪ್ರದಕ್ಷಿಣೆಮಾಡುತ್ತಿರುವುದು. 7) ಭಗವಂತನ ವಿಗ್ರಹದ ಮುಂದೆ ಕಾಲುಚಾಚಿ ಕುಳಿತುಕೊಳ್ಳುವುದು. 8) ಭಗವಂತನ ಮೂರ್ತಿಯ ಮುಂದೆ ಎರಡು ಮಂಡಿಗಳನ್ನೂ ಮೇಲಕ್ಕೆತ್ತಿ ಅವುಗಳನ್ನು ಕೈಗಳಿಂದ ಸುತ್ತಿಕೊಂಡು ಕುಳಿತುಕೊಳ್ಳುವುದು. 9) ಭಗವಂತನ ಶ್ರೀಮೂರ್ತಿಯ ಮುಂದುಗಡೆ ನಿದ್ರೆಮಾಡುವುದು. 10) ಶ್ರೀಭಗವಂತನ ದಿವ್ಯವಿಗ್ರಹದ ಮುಂದೆ ಭೋಜನಮಾಡುವುದು. 11) ಭಗವಂತನ ಶ್ರೀಮೂರ್ತಿಯ ಮುಂದೆ ಸುಳ್ಳುಹೇಳುವುದು. 12) ಶ್ರೀಭಗವದ್ವಿಗ್ರಹದ ಮುಂದೆ ಗಟ್ಟಿಯಾಗಿ ಮಾತನಾಡುವುದು. 13) ಶ್ರೀಭಗವಂತನ ವಿಗ್ರಹದ ಮುಂದೆ ಪರಸ್ಪರ ಮಾತನಾಡುವುದು-ಹರಟೆಹೊಡೆಯುವುದು. 14) ಶ್ರೀಭಗವಂತನ ವಿಗ್ರಹದ ಮುಂದೆ ಕೂಗಿಕೊಳ್ಳುವುದು. 15) ಶ್ರೀಭಗವಂತನ ಮೂರ್ತಿಯ ಮುಂದೆ ಜಗಳವಾಡುವುದು. 16) ಶ್ರೀಭಗವಂತನ ವಿಗ್ರಹದ ಮುಂದೆ ಯಾರಿಗಾದರೂ ಪೀಡೆಯನ್ನುಂಟುಮಾಡುವುದು. 17) ಶ್ರೀಭಗವಂತನ ವಿಗ್ರಹದ ಮುಂದೆ ಯಾರಿಗಾದರೂ ಅನುಗ್ರಹಮಾಡುವುದು. 18) ಶ್ರೀಭಗವಂತನ ಮೂರ್ತಿಯ ಮುಂದೆ ಯಾರನ್ನಾದರೂ ಕುರಿತು ನಿಷ್ಠುರವಾದ

ಶ್ರೀಭಗವಂತನಾದ ಶ್ರೀಕೃಷ್ಣದ್ವೈಪಾಯನವ್ಯಾಸರು ಅಜ್ಞಾನದ ದೆಸೆಯಿಂದಲೂ, ಶ್ರೀಭಗವಾನ್ ಬುದ್ಧದೇವನು ಪಾಷಂಡಿಗಳ ತಂಡದ ದೆಸೆಯಿಂದಲೂ–ಪ್ರಮಾದಗಳ ದೆಸೆಯಿಂದಲೂ ನನ್ನನ್ನು ರಕ್ಷಿಸಲಿ. ಧರ್ಮರಕ್ಷಣೆಗೋಸ್ಕರ ಅವತಾರಮಾಡುವ ಶ್ರೀಭಗವಂತನಾದ ಕಲ್ಕಿಯು ಕಲಿಕಾಲದ ದೋಷಗಳ ದೆಸೆಯಿಂದ ನನ್ನನ್ನು ಕಾಪಾಡಲಿ.

ಮಾಂ ಕೇಶವೋ ಗದಯಾ ಪ್ರಾತರವ್ಯಾ-
ದ್ಗೋವಿನ್ದ ಆಸಙ್ಗವಮಾತ್ತವೇಣುಃ ।
ನಾರಾಯಣಃ ಪ್ರಾಹ್ಣ ಉದಾತ್ತಶಕ್ತಿ-
ರ್ಮಧ್ಯನ್ದಿನೇ ವಿಷ್ಣುರರೀನ್ದ್ರಪಾಣಿಃ ॥೨೦॥

ಪ್ರಾತಃಕಾಲದಲ್ಲಿ ಶ್ರೀಭಗವಂತನಾದ ಕೇಶವನು ಗದಾಹಸ್ತನಾಗಿಯೂ, ಹಗಲು ಸ್ವಲ್ಪ ಹತ್ತಿದ ಬಳಿಕ ಶ್ರೀಭಗವಂತನಾದ ಗೋವಿಂದನು ಕೈಯಲ್ಲಿ ಕೊಳಲನ್ನು ಹಿಡಿದುಕೊಂಡವನಾಗಿಯೂ, ಮಧ್ಯಾಹ್ನಕ್ಕೆ ಕೊಂಚ ಮೊದಲು ಶ್ರೀಭಗವಂತನಾದ ನಾರಾಯಣನು ತೀಕ್ಷ್ಣವಾದ ಶಕ್ತ್ಯಾಯುಧಧಾರಿಯಾಗಿಯೂ, ಮಧ್ಯಾಹ್ನದಲ್ಲಿ ಶ್ರೀಭಗವಂತನಾದ ವಿಷ್ಣುವು ಸುದರ್ಶನ ಚಕ್ರಪಾಣಿಯಾಗಿಯೂ ನನ್ನನ್ನು ಸಂರಕ್ಷಿಸಲಿ.

ಮಾತುಗಳನ್ನಾಡುವುದು. 19) ಶ್ರೀಭಗವಂತನ ವಿಗ್ರಹದ ಮುಂದೆ ಕಂಬಳಿಯಿಂದ ಇಡೀ ದೇಹವನ್ನು ಹೊದ್ದುಕೊಳ್ಳುವುದು. 20) ಶ್ರೀಭಗವಂತನ ವಿಗ್ರಹದ ಮುಂದೆ ಇತರರನ್ನು ನಿಂದಿಸುವುದು. 21) ಶ್ರೀಭಗವಂತನ ಮೂರ್ತಿಯ ಮುಂದುಗಡೆ ಇತರ ಯಾರನ್ನಾದರೂ ಸ್ತುತಿಸುವುದು. 22) ಶ್ರೀಭಗವಂತನ ವಿಗ್ರಹದ ಮುಂದೆ ಅಶ್ಲೀಲವಾದ ಮಾತನ್ನಾಡುವುದು. 23) ಶ್ರೀಭಗವಂತನ ವಿಗ್ರಹದ ಮುಂದೆ ಅಪಾನವಾಯುವನ್ನು ಬಿಡುವುದು. 24) ಮುಖ್ಯವಾದ ಉಪಚಾರವನ್ನು ಮಾಡುವ ಶಕ್ತಿಯಿದ್ದರೂ–ಗೌಣವಾದ ಉಪಚಾರವನ್ನು ದೇವರಿಗೆ ಮಾಡುವುದು. 25) ಶ್ರೀಭಗವಂತನಿಗೆ ನಿವೇದನೆಮಾಡದೇ ಇರುವ ಯಾವುದೇ ಪದಾರ್ಥವನ್ನೂ ತಿನ್ನುವುದು, ಕುಡಿಯುವುದು. 26) ಯಾವುದಾದರೂ ಋತುವಿನಲ್ಲಿ ಯಾವ ಹಣ್ಣು-ಹೂವು ಇತ್ಯಾದಿಗಳು ಬಿಡುವುವೋ ಅವುಗಳನ್ನು ಮೊದಲು ಭಗವಂತನಿಗೆ ಅರ್ಪಣೆಮಾಡದೇ ಇರುವುದು. 27) ಯಾವುದಾದರೂ ಕಾಯಿಪಲ್ಯ ಅಥವಾ ಹಣ್ಣು ಮುಂತಾದುವುಗಳ ಮುಂಭಾಗವನ್ನು ಮುರಿದು ದೇವರ ವ್ಯಂಜನಾದಿಗಳಿಗಾಗಿ ಸಮರ್ಪಿಸುವುದು. 28) ಶ್ರೀಭಗವಂತನ ಮೂರ್ತಿಗೆ ಬೆನ್ನುಮಾಡಿಕೊಂಡು

ದೇವೋಽಪರಾಹ್ಣೇ ಮಧುಹೋಗ್ರಧನ್ವಾ
ಸಾಯಂ ತ್ರಿಧಾಮಾವತು ಮಾಧವೋ ಮಾಮ್ ।
ದೋಷೇ ಹೃಷಿಕೇಶ್ಯುತಾರ್ಧರಾತ್ರೇ
ನಿಶೀಥ ಏಕೋಽವತು ಪದ್ಮನಾಭಃ ॥೨೧॥

ಅಪರಾಹ್ಣಕಾಲದಲ್ಲಿ ದೇವನಾದ ಮಧುಸೂದನನು ತನ್ನ ಉಗ್ರವಾದ ಧನುಸ್ಸನ್ನು ಹಿಡಿದುಕೊಂಡು ನನ್ನನ್ನು ರಕ್ಷಿಸಲಿ. ಸಾಯಂಕಾಲದಲ್ಲಿ ತ್ರಿಮೂರ್ತಿಸ್ವರೂಪನಾದ ಮಾಧವನೂ, ಪ್ರದೋಷದಲ್ಲಿ ಇಂದ್ರಿಯಾಧೀಶನಾದ ಹೃಷೀಕೇಶನೂ, ಅರ್ಧರಾತ್ರಿಗೆ ಮೊದಲು ಮತ್ತು ಅರ್ಧರಾತ್ರಿಯ ನಂತರದ ರಾತ್ರಿಗಳಲ್ಲಿ ಶ್ರೀಭಗವಂತನಾದ ಪದ್ಮನಾಭನೊಬ್ಬನೂ ನನ್ನನ್ನು ಸಲಹಲಿ.

ಶ್ರೀವತ್ಸಧಾಮಾಪರರಾತ್ರ ಈಶಃ
ಪ್ರತ್ಯೂಷ ಈಶೋಽಸಿಧರೋ ಜನಾರ್ದನಃ ।
ದಾಮೋದರೋಽವ್ಯಾದನುಸನ್ಧ್ಯಂ ಪ್ರಭಾತೇ
ವಿಶ್ವೇಶ್ವರೋ ಭಗವಾನ್ಕಾಲಮೂರ್ತಿಃ ॥೨೨॥

ಶ್ರೀವತ್ಸವೆಂಬ ಚಿಹ್ನೆಯನ್ನು ಎದೆಯಲ್ಲಿ ಧರಿಸಿರುವ ಜಗತ್ಪತಿಯಾದ ಶ್ರೀಹರಿಯು ಅಪರರಾತ್ರಿಯಲ್ಲಿಯೂ, ಖಡ್ಗಹಸ್ತನಾದ ಶ್ರೀಭಗವಂತನಾದ ಜನಾರ್ದನನು ಬೆಳಗಿನ ಜಾವದಲ್ಲಿಯೂ, ಸ್ವಾಮೀ ದಾಮೋದರನು ಸೂರ್ಯೋದಯಕ್ಕೆ ಮೊದಲಿನ ಪ್ರಭಾತಸಮಯದಲ್ಲಿಯೂ ಮತ್ತು ವಿಶ್ವೇಶ್ವರನಾದ ಶ್ರೀಭಗವಂತನಾದ ಕಾಲಮೂರ್ತಿಯು ಸಂಪೂರ್ಣ ಸಂಧ್ಯಾಸಮಯದಲ್ಲಿಯೂ ನನ್ನನ್ನು ಕಾಪಾಡಲಿ.

ಚಕ್ರಂ ಯುಗಾನ್ತಾನಲತಿಗ್ಮನೇಮಿ
ಭ್ರಮತ್ಸಮನ್ತಾದ್ಭಗವತ್ಪ್ರಯುಕ್ತಮ್ ।

ಕುಳಿತುಕೊಳ್ಳುವುದು. 29) ಶ್ರೀಭಗವಂತನ ಮೂರ್ತಿಯ ಮುಂದೆ ಬೇರೆ ಯಾರಿಗಾದರೂ ನಮಸ್ಕಾರಮಾಡುವುದು. 30) ಶ್ರೀಗುರುದೇವರ ಪ್ರಾರ್ಥನೆ, ಕುಶಲಪ್ರಶ್ನೆ, ಸ್ತೋತ್ರ ಮುಂತಾದವುಗಳನ್ನು ಮಾಡದೇ ಇರುವುದು. 31) ತಾನೇ ತನ್ನ ಪ್ರಶಂಸೆಮಾಡಿಕೊಳ್ಳುವುದು. 32) ಯಾವುದೇ ದೇವತೆಯನ್ನಾಗಲೀ ನಿಂದೆಮಾಡುವುದು.

ದನ್ದಗ್ಧಿ ದನ್ದಗ್ಧ್ಯರಿಸೈನ್ಯಮಾಶು
ಕಕ್ಷಂ ಯಥಾ ವಾತಸಖೋ ಹುತಾಶಃ ॥೨೩॥

ಪ್ರಳಯಕಾಲದ ಅಗ್ನಿಯಂತೆ ತೀಕ್ಷ್ಣವಾದ ಅಲಗುಗಳಿಂದ ಕೂಡಿ, ಶ್ರೀಭಗವಂತನ ಪ್ರೇರಣೆಯಂತೆ ಸದಾ ಸುತ್ತುತ್ತಿರುವ ಚಕ್ರರಾಜನಾದ ಸುದರ್ಶನನು–ಗಾಳಿಯಿಂದೊಡಗೂಡಿದ ಬೆಂಕಿಯು ಹುಲ್ಲಿನ ಮೆದೆಯನ್ನೋ ಪಾದಿಯಲ್ಲಿ–ಶತ್ರುಸೈನ್ಯವನ್ನು ಶೀಘ್ರಾತಿಶೀಘ್ರವಾಗಿ ಸುಟ್ಟು ಹಾಕಲಿ, ಸುಟ್ಟುಹಾಕಲಿ.

ಗದೇಽಶನಿಸ್ಪರ್ಶನವಿಸ್ಫುಲಿಙ್ಗೇ
ನಿಷ್ಪಿಣ್ಢಿ ನಿಷ್ಪಿಣ್ಢ್ಯಜಿತಪ್ರಿಯಾಸಿ ।
ಕೂಷ್ಮಾಣ್ಡವೈನಾಯಕಯಕ್ಷರಕ್ಷೋ-
ಭೂತಗ್ರಹಾಂಶ್ಚೂರ್ಣಯ ಚೂರ್ಣಯಾರೀನ್ ॥೨೪॥

ಎಲೈ ಕೌಮುದಕೀಗದೆಯೇ! ನೀನು ವಜ್ರಾಯುಧಕ್ಕೆ ಎಣೆಯಾಗಿ ಮುಟ್ಟಲು ಅಸಾಧ್ಯವಾದ ಕಿಡಿಗಳನ್ನು ಉದುರಿಸುತ್ತಿರುವೆ. ಶ್ರೀಭಗವಂತ ನಾದ ಅಜಿತನಿಗೆ ಪ್ರಿಯಳಾದ ನೀನು ಆತನ ದಾಸನಾದ ನನ್ನನ್ನು ಸಲಹು. ನನಗೆ ವಿರೋಧಿಗಳಾದ ಕೂಷ್ಮಾಂಡ, ವೈನಾಯಕ, ಯಕ್ಷ, ರಾಕ್ಷಸ, ಭೂತ, ಗ್ರಹಾದಿ ಶತ್ರುಗಳನ್ನು ಕುಟ್ಟಿ ಪುಡಿಪುಡಿಮಾಡು, ಪುಡಿಪುಡಿಮಾಡು.

ತ್ವಂ ಯಾತುಧಾನಪ್ರಮಥಪ್ರೇತಮಾತೃ-
ಪಿಶಾಚವಿಪ್ರಗ್ರಹಘೋರದೃಷ್ಟೀನ್ ।
ದರೇನ್ದ್ರ ವಿದ್ರಾವಯ ಕೃಷ್ಣಪೂರಿತೋ
ಭೀಮಸ್ವನೋಽರೇರ್ಹೃದಯಾನಿ ಕಮ್ಪಯನ್ ॥೨೫॥

ಓ ಶಂಖಶ್ರೇಷ್ಠನಾದ ಪಾಂಚಜನ್ಯನೇ! ಶ್ರೀಕೃಷ್ಣನು ಉಸಿರುತುಂಬು ವಾಗ (ಊದುವಾಗ) ರಿಪುಭಯಂಕರವಾಗಿ ಶಬ್ದಮಾಡುತ್ತಾ ನೀನು ನನ್ನ ಶತ್ರುಗಳ ಹೃದಯವನ್ನು ನಡುಗಿಸು, ನಡುಗಿಸು. ಹಾಗೆಯೇ ಯಾತುಧಾನ, ಪ್ರಮಥ, ಪ್ರೇತ, ಮಾತೃಕೆ, ಪಿಶಾಚ, ಬ್ರಹ್ಮರಾಕ್ಷಸರೇ ಮುಂತಾದ ಭಯಂಕರವಾದ ಪ್ರಾಣಿಗಳನ್ನು ಇಲ್ಲಿಂದ ಒಡನೆಯೇ ಅಟ್ಟಿಬಿಡು, ಓಡಿಸಿಬಿಡು.

ತ್ವಂ ತಿಗ್ಮಧಾರಾಸಿವರಾರಿಸೈನ್ಯ-
ಮೀಶಪ್ರಯುಕ್ತೋ ಮಮ ಛಿನ್ಧಿ ಛಿನ್ಧಿ ।
ಚಕ್ಷೂಂಷಿ ಚರ್ಮಞ್ಛತಚನ್ದ್ರ ಛಾದಯ
ದ್ವಿಷಾಮಘೋನಾಂ ಹರ ಪಾಪಚಕ್ಷುಷಾಮ್ ॥೨೬॥

ಅತಿತೀಕ್ಷ್ಣವಾದ ಅಲಗುಳ್ಳ ಖಡ್ಗರಾಜನಾದ ನಂದಕನೇ! ಶ್ರೀಭಗವಂತನಿಂದ ಪ್ರೇರಿಸಲ್ಪಟ್ಟ ನೀನು ಶತ್ರುಗಳನ್ನು ಭೇದಿಸು, ಭೇದಿಸು. ಛಿನ್ನ-ಭಿನ್ನಮಾಡು. ಹಾಗೆಯೇ ನೂರಾರು ಚಂದ್ರಮಂಡಲಗಳ ಆಕಾರದಿಂದ ಬೆಳಗುತ್ತಿರುವ ಓ ಗುರಾಣಿಗಳ ರಾಣಿಯೇ! ನೀನು ಪಾಪದೃಷ್ಟಿಗಳಾಗಿ ಪಾಪಾತ್ಮರಾಗಿರುವ ಶತ್ರುಗಳ ಕಣ್ಣುಗಳನ್ನು ಮುಚ್ಚಿಕತ್ತಲಾಗಿಸಿ ಕುರುಡು ಮಾಡುವವಳಾಗು.

ಯನ್ನೋ ಭಯಂ ಗ್ರಹೇಭ್ಯೋಽಭೂತ್ಕೇತುಭ್ಯೋ ನೃಭ್ಯ ಏವ ಚ ।
ಸರೀಸೃಪೇಭ್ಯೋ ದಂಷ್ಟ್ರಿಭ್ಯೋ ಭೂತೇಭ್ಯೋಽಹೋಭ್ಯ ಏವ ವಾ ॥

ಸರ್ವಾಣ್ಯೇತಾನಿ ಭಗವನ್ನಾಮರೂಪಾಸ್ತ್ರಕೀರ್ತನಾತ್ ।
ಪ್ರಯಾನ್ತು ಸಂಕ್ಷಯಂ ಸದ್ಯೋ ಯೇ ನಃ ಶ್ರೇಯಃಪ್ರತೀಪಕಾಃ ॥

ಸೂರ್ಯಾದಿಗ್ರಹಗಳ ವಿರೋಧ, ಧೂಮಕೇತುಗಳು, ದುಷ್ಟ ಮನುಷ್ಯರು, ಸರ್ಪವೇ ಮುಂತಾದ ಹರಿದಾಡುವ ಪ್ರಾಣಿಗಳು ಕೋರೆದಾಡೆ ಗಳಿಂದ ಕೂಡಿದ ಹಿಂಸ್ರಕ ಪಶುಗಳು, ಭೂತಪ್ರೇತಾದಿಗಳು ಮತ್ತು ಪಾಪಿ ಗಳಾದ ಪ್ರಾಣಿಗಳು ಇವುಗಳಿಂದ ನಮಗೆ ಉಂಟಾಗಿರುವ ಮತ್ತು ಉಂಟಾ ಗುವ ಭಯಗಳೂ ಮತ್ತು ನಮ್ಮ ಶ್ರೇಯಸ್ಸಿಗೆ ಕೆಡುಕನ್ನುಂಟುಮಾಡುವ ವಸ್ತುಗಳು ಯಾವು-ಯಾವುವುಂಟೋ ಅವೆಲ್ಲವೂ ಶ್ರೀಭಗವಂತನ ನಾಮ, ರೂಪ ಮತ್ತು ಆಯುಧಗಳ ಕೀರ್ತನೆಮಾಡುವುದರಿಂದ ಒಡನೆಯೇ ನಾಶಹೊಂದಲಿ.

ಗರುಡೋ ಭಗವಾನ್ಸ್ತೋತ್ರಸ್ತೋಭಶ್ಛನ್ದೋಮಯಃ ಪ್ರಭುಃ ।
ರಕ್ಷತ್ವಶೇಷಕೃಚ್ಛ್ರೇಭ್ಯೋ ವಿಷ್ವಕ್ಸೇನಃ ಸ್ವನಾಮಭಿಃ ॥೨೯॥

ಬೃಹತ್ ರಥಂತರವೇ ಮೊದಲಾದ ಸಾಮವೇದದ ಸ್ತೋತ್ರಗಳಿಂದ ಸ್ತುತಿಸಲ್ಪಡುವ, ವೇದಮೂರ್ತಿಗಳಾದ ಭಗವಂತರಾದ ಶ್ರೀಗರುಡದೇವರೂ

ಮತ್ತು (ಭಗವಂತನ ಪಾರ್ಷದರಿಗೆ ಗಣನಾಯಕರಾದ) ವಿಷ್ವಕ್ಸೇನದೇವರೂ ತಮ್ಮ ನಾಮೋಚ್ಚಾರಣೆಯ ಪ್ರಭಾವದಿಂದ ನಮ್ಮನ್ನು ಎಲ್ಲ ಬಗೆಯ ವಿಪತ್ತುಗಳ ದೆಸೆಯಿಂದಲೂ ಕಾಪಾಡಲಿ.

ಸರ್ವಾಪದ್ಭ್ಯೋ ಹರೇರ್ನಾಮರೂಪಯಾನಾಯುಧಾನಿ ನಃ ।
ಬುದ್ಧೀನ್ದ್ರಿಯಮನಃಪ್ರಾಣಾನ್ಪಾನ್ತು ಪಾರ್ಷದಭೂಷಣಾಃ ॥೩೦॥

ಶ್ರೀಹರಿಯ ನಾಮ, ರೂಪ, ವಾಹನ, ಆಯುಧಗಳು ಮತ್ತು ಆತನ ಪಾರ್ಷದಶ್ರೇಷ್ಠರು–ನಮ್ಮ ಬುದ್ಧಿ, ಇಂದ್ರಿಯ, ಮನಸ್ಸು ಮತ್ತು ಪ್ರಾಣಗಳನ್ನು ಎಲ್ಲ ಬಗೆಯ ಆಪತ್ತುಗಳ ದೆಸೆಯಿಂದಲೂ ಕಾಪಾಡಲಿ.

ಯಥಾ ಹಿ ಭಗವಾನೇವ ವಸ್ತುತಃ ಸದಸಚ್ಚ ಯತ್ ।
ಸತ್ಯೇನಾನೇನ ನಃ ಸರ್ವೇ ಯಾನ್ತು ನಾಶಮುಪದ್ರವಾಃ ॥೩೧॥

ಸದಸದಾತ್ಮಕವಾದ ಈ ಜಗತ್ತೆಲ್ಲವೂ ವಾಸ್ತವವಾಗಿ ಭಗವಂತನೇ ಆಗಿದೆ; ಭಗವಂತನಿಗೆ ಶರೀರಭೂತವಾಗಿದೆ ; ಅವನಿಗೆ ಅಧೀನವಾಗಿದೆ– ಎಂಬ ಸತ್ಯದಿಂದ ನಮ್ಮ ಎಲ್ಲ ಉಪದ್ರವಗಳೂ ನಾಶಹೊಂದಲಿ.

ಯಥೈಕಾತ್ಮ್ಯಾನುಭಾವಾನಾಂ ವಿಕಲ್ಪರಹಿತಃ ಸ್ವಯಮ್ ।
ಭೂಷಣಾಯುಧಲಿಙ್ಗಾಖ್ಯಾ ಧತ್ತೇ ಶಕ್ತೀಃ ಸ್ವಮಾಯಯಾ ॥೩೨॥

ತೇನೈವ ಸತ್ಯಮಾನೇನ ಸರ್ವಜ್ಞೋ ಭಗವಾನ್ಹರಿಃ ।
ಪಾತು ಸರ್ವೈಃ ಸ್ವರೂಪೈರ್ನಃ ಸದಾ ಸರ್ವತ್ರ ಸರ್ವಗಃ ॥೩೩॥

ಶ್ರೀಭಗವಂತನೇ ಎಲ್ಲಕ್ಕೂ ಆತ್ಮಭೂತನಾಗಿದ್ದಾನೆ. ಆದುದರಿಂದ ಎಲ್ಲವೂ ಆತನೊಡನೆ ಐಕಾತ್ಮ್ಯವನ್ನು ಹೊಂದಿವೆಯೆಂಬುದನ್ನು ಯಾವ ಮಹಾತ್ಮರು ಅನುಭವದಿಂದ ಅರಿತಿರುವರೋ–ಅವರ ದೃಷ್ಟಿಯಲ್ಲಿ ಶ್ರೀಭಗವಂತನಲ್ಲಿ ಯಾವ ವಿಕಲ್ಪವೂ ಇರುವುದಿಲ್ಲ. ಹೀಗೆ ಯಾವ ವಿಕಲ್ಪವೂ ಇಲ್ಲದಿದ್ದರೂ ಅವನು ತನ್ನ ಮಾಯೆಯಿಂದ ದಿವ್ಯವಾದ ಭೂಷಣಗಳು, ದಿವ್ಯಾಯುಧಗಳು ಮತ್ತು ದಿವ್ಯರೂಪಗಳೆಂಬ ಶಕ್ತಿಗಳನ್ನು ಧರಿಸಿದ್ದಾನೆ. ಇದು ನಿಶ್ಚಿತವಾದ ಸತ್ಯವು. ಈ ಸತ್ಯದ ಪ್ರಮಾಣದಿಂದ ಸರ್ವಜ್ಞನೂ–ಸರ್ವವ್ಯಾಪಕನೂ ಆಗಿರುವ ಶ್ರೀಭಗವಂತನಾದ ಶ್ರೀಹರಿಯು

ಯಾವಾಗಲೂ ಎಲ್ಲೆಡೆಗಳಲ್ಲಿಯೂ ಎಲ್ಲ ಸ್ವರೂಪಗಳಿಂದಲೂ ನಮ್ಮನ್ನು ಕಾಪಾಡಲಿ.

ವಿದಿಕ್ಷು ದಿಕ್ಷೂರ್ಧ್ವಮಧಃ ಸಮನ್ತಾ-
ದನ್ತರ್ಬಹಿರ್ಭಗವಾನ್ನಾರಸಿಂಹಃ ।
ಪ್ರಹಾಪಯಲ್ಲೋಕಭಯಂ ಸ್ವನೇನ
ಸ್ವತೇಜಸಾ ಗ್ರಸ್ತಸಮಸ್ತತೇಜಾಃ ॥೩೪॥

ತನ್ನ ಭೀಕರವಾದ ಸಿಂಹನಾದ—ಅಟ್ಟಹಾಸಗಳಿಂದ ಸಮಸ್ತಲೋಕಗಳ ಭಯವನ್ನೂ ಹೊಡೆದಟ್ಟುವವನೂ, ತನ್ನ ತೇಜಸ್ಸಿನಿಂದ ಉಳಿದೆಲ್ಲ ತೇಜಸ್ಸುಗಳನ್ನೂ ನುಂಗಿಹಾಕುವವನೂ ಆಗಿರುವ ಸರ್ವಭಯನಿವಾರಕ, ಸರ್ವತೇಜೋನಿಧಿ, ಸ್ವಾಮಿ ಶ್ರೀನಾರಸಿಂಹ ಶ್ರೀಭಗವಂತನು—ದಿಕ್ಕುಗಳಲ್ಲೂ, ವಿದಿಕ್ಕುಗಳಲ್ಲೂ, ಲೋಕ-ಲೋಕಾಂತರಗಳ ಮೇಲೂ, ಕೆಳಗೂ, ಒಳಗೂ, ಹೊರಗೂ ಎಲ್ಲ ಕಡೆಗಳಲ್ಲಿಯೂ ನಮ್ಮನ್ನು ಪೊರೆಯಲಿ.

ಎಲೈ ದೇವರಾಜನೇ! ಈ ನಾರಾಯಣನಕವಚವನ್ನು ನಿನಗೆ ಉಪದೇಶಮಾಡಿಯಾಯಿತು. ಇದರಿಂದ ನೀನು ನಿನ್ನ ರಕ್ಷಣೆಯನ್ನು ಮಾಡಿಕೋ. ಇದರಿಂದ ನೀನು ಯಾವ ಆಯಾಸವೂ ಇಲ್ಲದೇ ಎಲ್ಲ ದೈತ್ಯ ಸೇನಾಪತಿಗಳನ್ನೂ ಜಯಿಸಿಬಿಡುವೆ. ಈ ನಾರಾಯಣಕವಚವನ್ನು ಧರಿಸಿರುವ ಮನುಷ್ಯನು ಯಾರನ್ನಾದರೂ ತನ್ನ ಕಣ್ಣುಗಳಿಂದ ನೋಡಿದರೆ ಅಥವಾ ಪಾದಗಳಿಂದ ಮುಟ್ಟಿದರೆ—ಆ ನೋಟ ಅಥವಾ ಸ್ಪರ್ಶವನ್ನು ಪಡೆದವನು ಒಡನೆಯೇ ಎಲ್ಲ ಭಯಗಳಿಂದಲೂ ಬಿಡುಗಡೆ ಹೊಂದುತ್ತಾನೆ. ಈ ವೈಷ್ಣವೀವಿದ್ಯೆಯನ್ನು ಧರಿಸಿದವನಿಗೆ ರಾಜರಿಂದಾಗಲೀ, ಕಳ್ಳ-ಕಾಕರರಿಂದಾಗಲೀ, ಪ್ರೇತ-ಪಿಶಾಚಾದಿಗಳಿಂದಾಗಲೀ, ಹುಲಿಯೇ ಮುಂತಾದ ಕ್ರೂರಪ್ರಾಣಿಗಳಿಂದಾಗಲೀ, ಯಾರಿಂದಲೂ ಯಾವ ಬಗೆಯ ಭಯವೂ ಉಂಟಾಗಲಾರದು. ಇದರ ಮಹಿಮೆಯನ್ನು ತಿಳಿಸುವ ಒಂದು ಘಟನೆಯನ್ನು ಹೇಳುವೆನು ಕೇಳು. ಹಿಂದೆ ಕೌಶಿಕಗೋತ್ರದ ಬ್ರಾಹ್ಮಣನೊಬ್ಬನು ಈ ವಿದ್ಯೆಯನ್ನು ಧರಿಸಿ ಯೋಗಧಾರಣೆಯಿಂದ ತನ್ನ ಶರೀರವನ್ನು ತ್ಯಜಿಸಿದನು. ಆತನ ಶರೀರವು ಬಿದ್ದ ಜಾಗದ ಬಳಿ ಮೇಲುಗಡೆ ಒಂದು ದಿನ

ಗಂಧರ್ವರಾಜನಾದ ಚಿತ್ರರಥನು ತನ್ನ ಹೆಂಗಸರೊಂದಿಗೆ ವಿಮಾನದಲ್ಲಿ ಸಂಚರಿಸುತ್ತಿದ್ದನು. ಆದರೆ ಆ ನಿರ್ದಿಷ್ಟಸ್ಥಳಕ್ಕೆ ಬಂದೊಡನೆಯೇ ಆತನು ತಲೆಕೆಳಗಾಗಿ ವಿಮಾನದಿಂದ ಭೂಮಿಗೆ ಬಿದ್ದುಬಿಟ್ಟನು. ಅದರಿಂದ ಆತನಿಗೆ ತುಂಬಾ ಆಶ್ಚರ್ಯವಾಯಿತು. ಆಗ ವಾಲಖಿಲ್ಯಮುನಿಗಳು ಆತನಿಗೆ–'ಇದು ನಾರಾಯಣಕವಚವನ್ನು ಧರಿಸಿದ ಪ್ರಭಾವವಪ್ಪಾ'–ಎಂದು ವಿವರಣೆ ನೀಡಿದರು. ಆಗ ಚಿತ್ರರಥನು ಆ ಮಹಾಬ್ರಾಹ್ಮಣನ ಮೂಳೆಗಳನ್ನು ತೆಗೆದುಕೊಂಡು ಪೂರ್ವದ ಕಡೆಗೆ ಹರಿಯುವ ಸರಸ್ವತೀನದಿಯಲ್ಲಿ ವಿಸರ್ಜನೆಮಾಡಿ ಸ್ನಾನಮಾಡಿದ ಬಳಿಕ ವಿಮಾನದಲ್ಲಿ ತನ್ನ ಲೋಕಕ್ಕೆ ಹೋಗಲು ಸಾಧ್ಯವಾಯಿತು." (ಶ್ಲೋಕ 38-40)

ಶ್ರೀಶುಕಮಹರ್ಷಿಗಳು ಹೇಳುತ್ತಿದ್ದಾರೆ :

ಮಹಾರಾಜಪರೀಕ್ಷಿತ! ಈ ನಾರಾಯಣಕವಚವನ್ನು ಯಾವನು ಸಕಾಲದಲ್ಲಿ ಕೇಳುತ್ತಾನೆಯೋ ಮತ್ತು ಯಾವನು ಇದನ್ನು ಆದರಪೂರ್ವಕ ವಾಗಿ ಧರಿಸುತ್ತಾನೆಯೋ–ಆತನ ಎದುರಿಗೆ ಎಲ್ಲ ಪ್ರಾಣಿಗಳೂ ತಲೆಬಾಗು ತ್ತವೆ. ಆತನು ಎಲ್ಲ ಭಯಗಳಿಂದಲೂ ಮುಕ್ತನಾಗುತ್ತಾನೆ. ಮಹೇಂದ್ರನು ವಿಶ್ವರೂಪಾಚಾರ್ಯರಿಂದ ಈ ವೈಷ್ಣವೀವಿದ್ಯೆಯನ್ನು ಪಡೆದು ರಣಭೂಮಿ ಯಲ್ಲಿ ಅಸುರರನ್ನು ಪರಾಜಯಗೊಳಿಸಿ, ಮೂರು ಲೋಕಗಳ ಸಾಮ್ರಾಜ್ಯ ಲಕ್ಷ್ಮಿಯನ್ನೂ ಅನುಭವಿಸತೊಡಗಿದನು." (ಶ್ಲೋಕ 41-42)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಷಷ್ಠಸ್ಕಂಧದ ೮ನೆಯ ಅಧ್ಯಾಯವು ಮುಗಿಯಿತು.

ಷಷ್ಠಸ್ಕಂಧ ೯ನೆಯ ಅಧ್ಯಾಯ

ವಿಶ್ವರೂಪನ ವಧೆ : ವೃತ್ರಾಸುರನು ದೇವತೆಗಳನ್ನು ಸೋಲಿಸಿದುದು ಮತ್ತು ಶ್ರೀಭಗವಂತನ ಪ್ರೇರಣೆಯಂತೆ ದೇವತೆಗಳು ದಧೀಚಿಋಷಿಯ ಬಳಿಗೆ ಹೋದುದು

ಶ್ರೀಶುಕಮುನಿಗಳು ಹೇಳುತ್ತಾರೆ :

ತಸ್ಯಾಸನ್ವಿಶ್ವರೂಪಸ್ಯ ಶಿರಾಂಸಿ ತ್ರೀಣಿ ಭಾರತ ।
ಸೋಮಪೀಥಂ ಸುರಾಪೀಥಮನ್ನಾದಮಿತಿ ಶುಶ್ರುಮ ॥೧॥

ಎಲೈ ಭರತಕುಲಶಿರೋಮಣಿಯೇ! ಕೇಳು. ಆ ವಿಶ್ವರೂಪನಿಗೆ ಒಂದು ಸೋಮವನ್ನು ಕುಡಿಯುವುದಕ್ಕೆ, ಮತ್ತೊಂದು ಸುರಾಪಾನಮಾಡು ವುದಕ್ಕೆ ಮತ್ತು ಇನ್ನೊಂದು ಅನ್ನವನ್ನು ಸೇವಿಸುವುದಕ್ಕೆ–ಹೀಗೆ ಮೂರು ತಲೆಗಳು ಇದ್ದುವೆಂದು ಕೇಳಿದ್ದೇವೆ.

ಅವನು ಯಜ್ಞ-ಯಾಗಾದಿಗಳನ್ನು ಮಾಡುವಾಗ ಪ್ರತ್ಯಕ್ಷವಾಗಿ ಉಚ್ಚಸ್ವರದಲ್ಲಿ ಮಂತ್ರವನ್ನು ಹೇಳಿ ದೇವತೆಗಳಿಗೆ ಅತ್ಯಂತವಿನಯದಿಂದ ಆಹುತಿಗಳನ್ನು ಅರ್ಪಿಸುತ್ತಿದ್ದನು. ಏಕೆಂದರೆ : ಅವರು ಅವನಿಗೆ ಪಿತೃಸ್ಥಾನ ದಲ್ಲಿದ್ದರು. ಹನ್ನೆರಡು ಮಂದಿ ಆದಿತ್ಯದೇವತೆಗಳಲ್ಲಿ ಒಬ್ಬನಾದ ತ್ವಷ್ಟನು ಆತನ ತಂದೆಯಾಗಿದ್ದನಷ್ಟೇ. ಹಾಗೆಯೇ ಆತನು ಯಾರಿಗೂ ತಿಳಿಯದಂತೆ ಅಸುರರಿಗೂ ಯಜ್ಞದಲ್ಲಿ ಆಹುತಿಗಳನ್ನು ಕೊಡುತ್ತಿದ್ದನು. ಏಕೆಂದರೆ : ಆತನ ತಾಯಿಯು ಅಸುರಕುಲದವಳಾಗಿದ್ದಳು. ಆದುದರಿಂದ ತಾಯಿಯ ಸ್ನೇಹಕ್ಕೆ ಒಳಪಟ್ಟು ಆತನು ಅಸುರರಿಗೂ ಯಜ್ಞಭಾಗಗಳನ್ನು ಸಲ್ಲಿಸುತ್ತಿದ್ದನು. ಆತನು ಹೀಗೆ ದೇವತೆಗಳಿಗೆ ಅಪಚಾರಮಾಡುತ್ತಿದ್ದುದು–ಧರ್ಮದ ಮರೆಯಲ್ಲಿ ಕಪಟವನ್ನು ಆಚರಿಸುತ್ತಿದ್ದುದು–ದೇವರಾಜ ಇಂದ್ರನಿಗೆ ತಿಳಿಯಬಂದಿತು. ಅದಕ್ಕೆ ಹೆದರಿದ ಇಂದ್ರನು ಕೋಪಗೊಂಡು ಅತಿವೇಗ ದಿಂದ ಆತನ ಮೂರು ತಲೆಗಳನ್ನೂ* ಕತ್ತರಿಸಿಹಾಕಿಬಿಟ್ಟನು. ಹಾಗೆ ಕತ್ತರಿಸಲ್ಪಟ್ಟ ತಲೆಗಳಲ್ಲಿ ಸೋಮರಸವನ್ನು ಪಾನಮಾಡುತ್ತಿದ್ದುದು ಕಪಿಂಜಲ ಪಕ್ಷಿಯ ರೂಪವನ್ನೂ, ಸುರಾಪಾನಮಾಡುತ್ತಿದ್ದ ತಲೆಯು ಕಲವಿಂಕ (ಗುಬ್ಬಚ್ಚಿ) ಪಕ್ಷಿಯ ರೂಪವನ್ನೂ ಮತ್ತು ಅನ್ನವನ್ನು ಉಣ್ಣುತ್ತಿದ್ದ ತಲೆಯು ತಿತ್ತಿರಿಪಕ್ಷಿಯ ರೂಪವನ್ನೂ ತಾಳಿಬಿಟ್ಟಿತು. ವಿಶ್ವರೂಪನ ವಧೆಯಿಂದ ತಗುಲಿಕೊಂಡಿದ್ದ ಬ್ರಹ್ಮಹತ್ಯೆಯ ದೋಷವನ್ನು ದೂರಮಾಡಿ ಕೊಳ್ಳುವ ಸಾಮರ್ಥ್ಯವು ಇಂದ್ರನಿಗೇ ಇದ್ದಿತೆಂಬುದು ನಿಜ. ಆದರೆ ಹಾಗೆ ಮಾಡುವುದು ಆತನಿಗೆ ಉಚಿತವೆನಿಸಲಿಲ್ಲ. ಆದ್ದರಿಂದ ಆತನು ಕೈ ಬೊಗಸೆ

---

* ವಿಶ್ವರೂಪನ ಈ ಮೂರು ತಲೆಗಳಿಗೆ ಶ್ರುತಿಪ್ರಮಾಣ :

ವಿಶ್ವರೂಪೋ ವೈ ತ್ವಾಷ್ಟ್ರಃ ಪುರೋಹಿತೋ ದೇವಾನಾಮಾಸೀತ್ ।
ಸ್ವಸ್ರೀಯೋಽಸುರಾಣಾಮ್ । ತಸ್ಯ ತ್ರೀಣಿ ಶೀರ್ಷಾಣ್ಯಾಸನ್ ಸೋಮ-
ಪಾನ ಸುರಾಪಾನಮನ್ನಾದಮಿತಿ ॥

ಯಲ್ಲಿ ಆ ದೋಷವನ್ನು ಸ್ವೀಕರಿಸಿಕೊಂಡನು. ಒಂದು ವರ್ಷಕಾಲ ಅದರಿಂದ ಬಿಡುಗಡೆಹೊಂದಲು ಆತನು ಯಾವ ಉಪಾಯವನ್ನೂ ಮಾಡಲಿಲ್ಲ. ಅನಂತರ ಎಲ್ಲರ ಎದುರಿಗೆ ಪರಿಶುದ್ಧಿಯನ್ನು ಪಡೆಯುವುದಕ್ಕಾಗಿ ಆತನು ತನಗೆ ತಗುಲಿದ್ದ ಬ್ರಹ್ಮಹತ್ಯೆಯನ್ನು ನಾಲ್ಕು ಪಾಲಾಗಿ ವಿಂಗಡಿಸಿ ಅದನ್ನು ಭೂಮಿಗೆ, ಜಲಕ್ಕೆ, ವೃಕ್ಷಕ್ಕೆ ಮತ್ತು ಸ್ತ್ರೀಯರಿಗೆ ಸಮವಾಗಿ ಹಂಚಿ ಕೊಟ್ಟುಬಿಟ್ಟನು.

(ಶ್ಲೋಕ 2-6)

'ನನ್ನಲ್ಲಿ ಕೆಲವು ಕಡೆಗಳಲ್ಲಿ ಕಂಡುಬರುವ ಹಳ್ಳ-ಕೊಳ್ಳಗಳು ಕಾಲ ಕಾಲಗಳಲ್ಲಿ ತಾವಾಗಿಯೇ ಭರ್ತಿಯಾಗಿ ನೆಲವು ಸಮಪ್ರದೇಶವಾಗಲಿ'– ಎಂಬ ವರವನ್ನು ಕೇಳಿ ಪಡೆದು, ಭೂಮಿಯು ಇಂದ್ರನ ಬ್ರಹ್ಮಹತ್ಯೆಯ ನಾಲ್ಕನೆಯ ಒಂದು ಭಾಗವನ್ನು ತೆಗೆದುಕೊಂಡಿತು. ಆ ಬ್ರಹ್ಮಹತ್ಯೆಯ ಅಂಶವೇ ಭೂಮಿಯು ಕೆಲವು ಕಡೆ ಮರುಭೂಮಿಯ ರೂಪದಲ್ಲಿ ಕಾಣಿಸಿಕೊಳ್ಳುತ್ತಿದೆ. ಇಂದ್ರನ ಬ್ರಹ್ಮಹತ್ಯಾಪಾತಕದ ಮತ್ತೊಂದು ನಾಲ್ಕನೆಯ ಒಂದು ಭಾಗವನ್ನು ವೃಕ್ಷಗಳು ಸ್ವೀಕರಿಸಿದುವು. 'ನಮ್ಮಲ್ಲಿ ಕಡಿದು ಹೋದ ಭಾಗಗಳು ತಾವಾಗಿಯೇ ಮತ್ತೆ ಬೆಳೆದುಕೊಳ್ಳಲಿ'–ಎಂಬ ವರ ವನ್ನು ಕೇಳಿ ವರಪಡೆದು ಅವು ಆ ಪಾತಕಾಂಶವನ್ನು ಸ್ವೀಕಾರಮಾಡಿದುವು. ಈ ಪಾತಕಾಂಶವನ್ನು ನಾವು ವೃಕ್ಷಗಳಲ್ಲಿ ಅಂಟಿನ ರೂಪದಲ್ಲಿ ನೋಡು ತ್ತೇವೆ. ಹಾಗೆಯೇ ಸ್ತ್ರೀಯರು–'ನಮಗೆ ಪ್ರಸವಕಾಲದವರೆಗೂ ಪುರುಷ ಸಹವಾಸದ ಕಾಮಸೌಖ್ಯರು ದೊರೆಯಲಿ. ಅದರಿಂದ ಗರ್ಭಕ್ಕೆ ತೊಂದರೆ ಯುಂಟಾಗದಿರಲಿ'–ಎಂಬ ವರವನ್ನು ಕೇಳಿ ಪಡೆದು ಇಂದ್ರನ ಆ ಪಾತಕದ ನಾಲ್ಕನೆಯ ಒಂದು ಭಾಗವನ್ನು ಸ್ವೀಕರಿಸಿದರು. ಸ್ತ್ರೀಯರಲ್ಲಿ ಪ್ರತಿತಿಂಗಳೂ ರಜೋದೋಷದ ರೂಪದಲ್ಲಿ ಈ ಪಾಪವು ಕಾಣಿಸಿಕೊಳ್ಳುತ್ತದೆ. ಹಾಗೆಯೇ ಜಲವು 'ನಾವು ವ್ಯಯಮಾಡಲ್ಪಡುತ್ತಿದ್ದರೂ ಪ್ರವಾಹಾದಿರೂಪಗಳಲ್ಲಿ ನಮ್ಮ ವೃದ್ಧಿಯು ಆಗುತ್ತಿರಲಿ ಅಥವಾ ನಾವು ಯಾವ ವಸ್ತುವಿನೊಡನೆ ಸೇರಿದರೂ ಆ ವಸ್ತುವು ವೃದ್ಧಿಹೊಂದಲಿ. ಅದರ ಪ್ರಮಾಣವು ಹೆಚ್ಚಲಿ'– ಎಂಬ ವರವನ್ನು ಇಂದ್ರನಿಂದ ಕೇಳಿ ಪಡೆದು ಬ್ರಹ್ಮಹತ್ಯೆಯ ಕೊನೆಯ ನಾಲ್ಕನೆಯ ಒಂದು ಪಾಲನ್ನು ಸ್ವೀಕಾರಮಾಡಿತು. ಈ ಅಂಶವೇ ನೀರಿನಲ್ಲಿ ನೊರೆ ಗುಳ್ಳೆ ಮುಂತಾದ ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ. ಆದ್ದರಿಂದಲೇ

ಮನುಷ್ಯರು ಅವುಗಳನ್ನು ಪರಿಹರಿಸಿ ಶುದ್ಧವಾದ ನೀರನ್ನು ಸೇವಿಸುತ್ತಾರೆ. ಇಂದ್ರನೇನೋ ಹೀಗೆ ಬ್ರಹ್ಮಹತ್ಯಾಪಾತಕವನ್ನು ಕಳೆದುಕೊಂಡನು. ಆದರೆ ವಿಶ್ವರೂಪನ ತಂದೆಯಾದ ತ್ವಷ್ಟನಿಗೆ ತನ್ನ ಪುತ್ರನನ್ನು ಸಂಹಾರಮಾಡಿ ತನ್ನನ್ನು ಪುತ್ರಹೀನನನ್ನಾಗಿ ಮಾಡಿದ್ದಕ್ಕಾಗಿ ಇಂದ್ರನ ಮೇಲೆ ಮಿತಿಮೀರಿದ ಕ್ರೋಧವುಂಟಾಯಿತು. ಆಗ ಆತನು ತನಗೆ ಇಂದ್ರನ ಶತ್ರುವಾಗಿ ಇಂದ್ರನನ್ನು ಸಂಹಾರಮಾಡುವ ಪುತ್ರನು ಉಂಟಾಗಲಿ–ಎಂಬ ಆಶಯದಿಂದ "ಇಂದ್ರಶತ್ರುವೇ! ವೃದ್ಧಿಹೊಂದಿ ಬಾ. ಶೀಘ್ರಾತಿಶೀಘ್ರದಲ್ಲಿ ಶತ್ರುವನ್ನು ಸಂಹರಿಸು. 'ಸ್ವಾಹೇನ್ದ್ರಶತ್ರುರ್ವರ್ಧಸ್ವ'–ಎಂಬ ಮಂತ್ರದಿಂದ ಅಗ್ನಿಯಲ್ಲಿ ಹೋಮಮಾಡಿದನು. ಆದರೆ ಮಂತ್ರಸ್ವರದಲ್ಲಿ ಆತನು ಅಪಚಾರ ಮಾಡಿದ್ದರಿಂದ ದೈವಸಂಕಲ್ಪದಂತೆ ಆತನಿಗೆ ಇಂದ್ರನನ್ನೇ ಶತ್ರುವನ್ನಾಗಿ ಹೊಂದಿರುವ ಅಂದರೆ ಇಂದ್ರನಿಂದ ಸಂಹರಿಸಲ್ಪಡುವ ಪುತ್ರನು ದೊರೆತನು. ಆತನ ದಕ್ಷಿಣಾಗ್ನಿಯಲ್ಲಿ (ಅನ್ವಾಹಾರ್ಯಪಚನವೆಂಬ ಅಗ್ನಿಯಲ್ಲಿ) ಅತಿಭಯಂಕರರೂಪದ ಒಬ್ಬ ದೈತ್ಯನು ಮೇಲೆದ್ದು ಬಂದನು. ಲೋಕಗಳನ್ನು ನಾಶಪಡಿಸುವುದಕ್ಕಾಗಿ ಪ್ರಕಟಗೊಂಡಿರುವ ಕಾಲಮೃತ್ಯುವಿನಂತೆಯೇ ಆತನು ಕಾಣುತ್ತಿದ್ದನು. ಆತನು ದಿನದಿನವೂ ತನ್ನ ದೇಹದ ಎಲ್ಲ ಕಡೆಗಳಲ್ಲೂ ಬಾಣವು ಓಡುವಷ್ಟು ದೂರ ಬೆಳೆಯುತ್ತಾ ಉರಿಯುತ್ತಿರುವ ಅಗ್ನಿಪರ್ವತದಂತೆ ಭೀಕರಾಕಾರವಿಕ್ರಮನಾಗಿ ಮೆರೆದನು. ಸಂಜೆಗಾಲದ ಮೋಡಗಳ ತಂಡದಂತೆ ಬೆಳಗತೊಡಗಿದನು. ಕೆಂಪಗೆ ಕಾದಿರುವ ತಾಮ್ರವನ್ನು ಹೋಲುವ ತಲೆಗೂದಲು, ಗಡ್ಡ-ಮೀಸೆಗಳಿಂದಲೂ–ನಡು ಹಗಲಿನ ಸೂರ್ಯನಿಗೆ ಸರಿಸಮನಾದ ಕಣ್ಣುಗಳಿಂದಲೂ ಹೊಳೆಯುತ್ತಿದ್ದ ಆ ಪ್ರಚಂಡರೂಪವು ಎಂತಹವರನ್ನಾದರೂ ಭಯದಿಂದ ನಡುಗಿಸುತ್ತಿತ್ತು. ಆ ಉಗ್ರಮೂರ್ತಿಯು ಥಳ-ಥಳಿಸುತ್ತಿದ್ದ ಮೂರು ಅಲಗುಗಳುಳ್ಳ ತ್ರಿಶೂಲ ವನ್ನು–ಭೂಮ್ಯಾಕಾಶಗಳೆಲ್ಲವನ್ನೂ ತುದಿಗೆ ಪೋಣಿಸಿಕೊಂಡವನಂತೆ ಮೇಲೆತ್ತಿ ಕುಣಿಯುತ್ತಾ ಕುಪ್ಪಳಿಸುತ್ತಾ ವಿಕಟಾಟ್ಟಹಾಸದೊಡನೆ ಅಬ್ಬರಿ ಸುತ್ತಾ ಭೂಮಿಯನ್ನು ಮೆಟ್ಟಿ ನಡುಗಿಸತೊಡಗಿದನು. ಗುಹೆಯಂತೆ ಆಳ ವಾಗಿ ತೆರೆದ ಬಾಯಿಂದ ಇಡೀ ಅಂತರಿಕ್ಷವನ್ನೇ ಕುಡಿಯುತ್ತಿರುವಂತೆಯೂ, ಅತಿವಿಶಾಲವಾಗಿದ್ದ ನಾಲಿಗೆಯಿಂದ ಇಡೀ ನಕ್ಷತ್ರಮಂಡಲವನ್ನೇ ನೆಕ್ಕುತ್ತಿರು

ವಂತೆಯೂ, ಮೂರು ಲೋಕಗಳನ್ನೂ ನುಂಗಿಹಾಕುತ್ತಿರುವಂತೆಯೂ ತನ್ನ ಭಯಂಕರವಾದ ಕೋರೆದಾಡೆಗಳನ್ನು ಪ್ರಕಟಿಸುತ್ತಾ ಅಡಿಗಡಿಗೆ ಆಕಳಿಸು ತ್ತಿದ್ದನು. ಆ ಭೀಷಣರೂಪವನ್ನು ಕಂಡು ಸಮಸ್ತಭೂತಗಳೂ ಅಂಜಿಕೆ ಗೊಂಡು ದಿಕ್ಕು-ವಿದಿಕ್ಕುಗಳಿಗೆ ಓಡಿಹೋದುವು. ಹೀಗೆ ಎಲ್ಲ ಲೋಕ ಗಳನ್ನೂ ತಮಸ್ಸಿನಂತೆ ಆವರಿಸಿಕೊಂಡ ಪಾಪಿಷ್ಠನೂ, ಪರಮದಾರುಣನೂ ಆದ ಆ ತಮೋಮೂರ್ತಿಯು 'ವೃತ್ರ'* ಎಂದು ಕರೆಯಲ್ಪಟ್ಟನು.

(ಶ್ಲೋಕ 7-18)

ಆತನನ್ನು ನಿಗ್ರಹಿಸಬೇಕೆಂದು ದೇವಶ್ರೇಷ್ಠರು ತಮ್ಮ ಗಣಗಳೊಡನೆ ಅವನಲ್ಲಿಗೆ ಓಡಿ ಬಂದು ಒಟ್ಟಿಗೆ ಆತನ ಮೇಲೆ ಬಿದ್ದು ತಮ್ಮ ದಿವ್ಯವಾದ ಅಸ್ತ್ರ-ಶಸ್ತ್ರಸಮೂಹಗಳನ್ನು ಪ್ರಯೋಗಿಸಿದರು. ಆದರೆ ಆದದ್ದೇನು? ಆ ಮಹಾಭೂತವು ಅವೆಲ್ಲವನ್ನೂ ನುಂಗಿಹಾಕಿಬಿಟ್ಟಿತು. ಆಗ ದೇವತೆಗಳಿಗೆ ಮಹಾಶ್ಚರ್ಯವಾಯಿತು. ಅವಮಾನವೂ ಆಯಿತು. ಅವರ ತೇಜಸ್ಸೆಲ್ಲವೂ ಉಡುಗಿಹೋಯಿತು. ಎಲ್ಲರೂ ಕಳವಳತುಂಬಿದವರಾಗಿ ಪೆಚ್ಚುಮೋರೆಹಾಕಿ ಕೊಂಡು ಅಂತರ್ಮುಖರಾಗಿ ಹೃದಯದೊಳಗೆ ಅಡಗಿರುವ ಆದಿಪುರುಷ ನನ್ನು ಶರಣುಹೊಂದಿ ಏಕಾಗ್ರವಾದ ಮನಸ್ಸಿನಿಂದ ಹೀಗೆ ಪ್ರಾರ್ಥನೆ ಮಾಡಿದರು :

ದೇವತೆಗಳು ಮಾಡಿದ ದೇವದೇವನ ಸ್ತುತಿ :

ವಾಯ್ವಮ್ಬರಾಗ್ನ್ಯಪ್ ಕ್ಷಿತಯಸ್ತ್ರಿಲೋಕಾ
ಬ್ರಹ್ಮಾದಯೋ ಯೇ ವಯಮುದ್ವಿಜನ್ತಃ ।
ಹರಾಮ ಯಸ್ಮೈ ಬಲಿಮನ್ತಕೋಽಸೌ
ಬಿಭೇತಿ ಯಸ್ಮಾದರಣಂ ತತೋ ನಃ ॥೨೦॥

"ವಾಯು, ಆಕಾಶ, ಅಗ್ನಿ, ಜಲ ಮತ್ತು ಭೂಮಿಗಳೆಂಬ, ಪಂಚ

---

* ಎಲ್ಲವನ್ನೂ ಆವರಿಸಿಕೊಂಡಿದ್ದರಿಂದ ಆತನಿಗೆ ವೃತ್ರನೆಂದು ಹೆಸರಾಯಿತು–ಎಂಬ ಅಭಿಪ್ರಾಯವನ್ನು ಶ್ರುತಿಯು ಹೇಳುತ್ತದೆ. 'ಯದಿಮಾನ್ ಲೋಕಾನವೃಣೋತ್ತದ್ವೃತ್ರಸ್ಯ ವೃತ್ರತ್ವಂ'

ಭೂತಗಳೂ, ಅವುಗಳಿಂದ ನಿರ್ಮಿತವಾಗಿರುವ ಮೂರು ಲೋಕಗಳೂ, ಅಂತೆಯೇ ಅವುಗಳಿಗೆ ಅಧಿಪತಿಗಳಾದ ಬ್ರಹ್ಮಾದಿಗಳೂ ಮತ್ತು ನಾವೂ ಯಾವನಿಗೆ ಹೆದರಿ ಕಾಣಿಕೆಗಳನ್ನು ಸಮರ್ಪಿಸುತ್ತಿದ್ದೇವೆಯೋ–ಅಂತಹ ಕಾಲಪುರುಷನೂ ಕೂಡ ಯಾವನಿಗೆ ಭಯಪಟ್ಟು ನಡೆಯುವನೋ ಅಂತಹ ಸರ್ವನಿಯಾಮಕನಾಗಿರುವ ಸ್ವಾಮಿಯನ್ನು ಶರಣುಹೊಂದುತ್ತೇವೆ.

ಅವಿಸ್ಮಿತಂ ತಂ ಪರಿಪೂರ್ಣಕಾಮಂ
ಸ್ವೇನೈವ ಲಾಭೇನ ಸಮಂ ಪ್ರಶಾನ್ತಮ್ ।
ವಿನೋಪಸರ್ಪತ್ಯಪರಂ ಹಿ ಬಾಲಿಶಃ
ಶ್ವಲಾಙ್ಗುಲೇನಾತಿತಿತರ್ತಿ ಸಿನ್ಧುಮ್ ॥೨೨॥

ಸರ್ವಜ್ಞನಾಗಿ ಸರ್ವಶಕ್ತನಾಗಿರುವುದರಿಂದ ಯಾವುದಕ್ಕೂ ಆಶ್ಚರ್ಯ ಪಡದಿರುವ ಪ್ರಭು ಆತನು ; ಪೂರ್ಣಕಾಮನು ; ಆತ್ಮಲಾಭದಿಂದಲೇ ಸಂತೃಪ್ತನಾಗಿರುವವನು ; ಸರ್ವಸಮನು ; ಪ್ರಶಾಂತನು. ಇಂತಹ ಪರಿ ಪೂರ್ಣನನ್ನು ಬಿಟ್ಟು ಬೇರೆ ಯಾರನ್ನಾದರೂ ಆಶ್ರಯಿಸಲು ಹೋಗುವವನು ಹುಡುಗಬುದ್ಧಿಯುಳ್ಳವನು ; ಅತಿಮೂರ್ಖನು. ನಾಯಿಯ ಬಾಲವನ್ನು ಹಿಡಿದುಕೊಂಡು ಸಮುದ್ರವನ್ನು ದಾಟಲು ಬಯಸುವ ಗಾಂಪನಿಗೆ ಹೋಲಿಸಲ್ಪಡಬೇಕಾದವನು.

ಯಸ್ಯೋರುಶೃಙ್ಗೇ ಜಗತೀಂ ಸ್ವನಾವಂ
ಮನುರ್ಯಥಾಬಧ್ಯ ತತಾರ ದುರ್ಗಮ್ ।
ಸ ಏವ ನಸ್ತ್ವಾಷ್ಟ್ರಭಯಾದ್ದುರನ್ತಾ-
ತ್ತ್ರಾತಾಶ್ರಿತಾನ್ವಾರಿಚರೋಽಪಿ ನೂನಮ್ ॥೨೩॥

ನೀರಿನಲ್ಲಿ ಸಂಚಾರಮಾಡುವ ಮೀನಿನ ಆಕಾರದಲ್ಲಿದ್ದರೂ ಆತನು ಆಶ್ರಿತರಕ್ಷಕನು. ವೈವಸ್ವತಮನುವು ಆತನ ವಿಶಾಲವಾದ ಶೃಂಗಕ್ಕೆ ಭೂಮಿ ಯೆಂಬ ನಾವೆಯನ್ನು ಕಟ್ಟಿ ಅನಾಯಾಸವಾಗಿಯೇ ಪ್ರಳಯಕಾಲದ ಪರಮ ಸಂಕಟವನ್ನು ದಾಟಿಬಿಡಲಿಲ್ಲವೇ? ಆ ಮಹಾಪುರುಷನೇ ಶರಣಾಗತರಾಗಿ ರುವ ನಮ್ಮನ್ನು ವೃತ್ರಾಸುರನ ದೆಸೆಯಿಂದುಂಟಾಗಿರುವ ಭಯದಿಂದ ನಿಜವಾಗಿಯೂ ದಾಟಿಸುವನು.

ಪುರಾ ಸ್ವಯಮ್ಭೂರಪಿ ಸಂಯಮಾಮ್ಭ-
ಸ್ಯುದೀರ್ಣವಾತೋರ್ಮಿರವೈಃ ಕರಾಲೇ ।
ಏಕೋಽರವಿನ್ದಾತ್ಪತಿತಸ್ತತಾರ
ತಸ್ಮಾದ್ಭಯಾದ್ಯೇನ ಸ ನೋಽಸ್ತು ಪಾರಃ ॥೨೪॥

ಹಿಂದೆ ಬ್ರಹ್ಮದೇವರು ತಾವು ಕುಳಿತಿದ್ದ ಪದ್ಮಪೀಠದಿಂದ–ಭೀಕರವಾದ ಬಿರುಗಾಳಿಯ ಹೊಡೆತಗಳಿಂದ ಮೇಲೆದ್ದ ಮಹಾತರಂಗಗಳಿಂದ ಭೋರ್ಗರೆಯುತ್ತಿದ್ದ ಪ್ರಳಯಮಹಾಸಾಗರದ ಜಲದಲ್ಲಿ ಬಿದ್ದುಬಿಟ್ಟರು. ಆಗ ಏಕಾಕಿಯಾಗಿ ಅಸಹಾಯಕರಾಗಿದ್ದ ಅವರನ್ನು ಆ ಮಹಾಭಯ ಸಂಕಟದಿಂದ ಯಾವನು ಪಾರು ಮಾಡಿಸಿದನೋ–ಆತನೇ ಈಗ ನಮ್ಮನ್ನು ಪಾರುಮಾಡಿಸಲಿ.

ಯ ಏಕ ಈಶೋ ನಿಜಮಾಯಯಾ ನಃ
ಸಸರ್ಜ ಯೇನಾನುಸೃಜಾಮ ವಿಶ್ವಮ್ ।
ವಯಂ ನ ಯಸ್ಯಾಪಿ ಪುರಃ ಸಮೀಹತಃ
ಪಶ್ಯಾಮ ಲಿಙ್ಗಂ ಪೃಥಗೀಶಮಾನಿನಃ ॥೨೫॥

ಆ ಅದ್ವಿತೀಯನಾದ ಪರಮಪ್ರಭುವೇ ತನ್ನ ಮಾಯಾಶಕ್ತಿಯಿಂದ ನಮ್ಮನ್ನು ಸೃಷ್ಟಿಮಾಡಿದ್ದಾನೆ. ಆತನ ಅನುಗ್ರಹದಿಂದಲೇ ನಾವು ಮುಂದಿನ ಸೃಷ್ಟಿಕಾರ್ಯವನ್ನು ನಡೆಸುತ್ತಿದ್ದೇವೆ. ನಾವು ಆತನ ಮುಂದೆಯೇ ಇದ್ದು ಆತನ ದಿವ್ಯವಾದ ವ್ಯಾಪಾರಗಳನ್ನು ನೋಡುತ್ತಿದ್ದೇವೆ. ಆದರೆ 'ನಾವೇ ಸ್ವತಂತ್ರರಾದ ಈಶ್ವರರು'–ಎಂದು ಅಹಂಕಾರದಿಂದ ದೂಷಿತರಾಗಿರುವುದರಿಂದ ನಾವು ಆತನ ಸ್ವರೂಪವನ್ನು ಕಾಣಲಾರದೇ ಇದ್ದೇವೆ.

ಯೋ ನಃ ಸಪತ್ನೈರ್ಭೃಶಮರ್ದ್ಯಮಾನಾ-
ನ್ದೇವರ್ಷಿತಿರ್ಯಙ್ನೃಷು ನಿತ್ಯ ಏವ ।
ಕೃತಾವತಾರಸ್ತನುಭಿಃ ಸ್ವಮಾಯಯಾ
ಕೃತ್ವಾತ್ಮಸಾತ್ಪಾತಿ ಯುಗೇ ಯುಗೇ ಚ ॥೨೬॥

ವಾಸ್ತವವಾಗಿ ನಿತ್ಯನಿರ್ವಿಕಾರನಾಗಿದ್ದರೂ–ಆ ಮಹಾಪ್ರಭುವು ಶತ್ರು ಗಳಿಂದ ತುಂಬಾ ಪೀಡಿಸಲ್ಪಡುತ್ತಿರುವ ನಮ್ಮನ್ನು ಕಂಡು, ನಮ್ಮನ್ನು

ಉದ್ಧರಿಸುವುದಕ್ಕೋಸ್ಕರ ತನ್ನ ಮಾಯೆಯಿಂದ ದೇವತೆಗಳು, ಋಷಿಗಳು, ತಿರ್ಯಕ್‌ಪ್ರಾಣಿಗಳು, ಮನುಷ್ಯರು–ಇವೇ ಮುಂತಾದ ಯೋನಿಗಳಲ್ಲಿ ಅವತಾರಮಾಡಿ ನಮ್ಮನ್ನು ತನ್ನವರೆಂದು ಸ್ವೀಕರಿಸಿ ಪ್ರತಿಯುಗಗಳಲ್ಲಿಯೂ ನಮ್ಮ ರಕ್ಷಣೆಯನ್ನು ಮಾಡುತ್ತಿದ್ದಾನೆ.

ತಮೇವ ದೇವಂ ವಯಮಾತ್ಮದೈವತಂ
ಪರಂ ಪ್ರಧಾನಂ ಪುರುಷಂ ವಿಶ್ವಮನ್ಯಮ್ ।
ವ್ರಜಾಮ ಸರ್ವೇ ಶರಣಂ ಶರಣ್ಯಂ
ಸ್ವಾನಾಂ ಸ ನೋ ಧಾಸ್ಯತಿ ಶಂ ಮಹಾತ್ಮಾ ॥೨೭॥

ಪ್ರಕೃತಿರೂಪನೂ, ಪುರುಷರೂಪನೂ, ಪ್ರಕೃತಿ-ಪುರುಷರಿಗೆ ನಿಯಾಮಕನಾದ ಪರಮಪುರುಷ-ಪುರುಷೋತ್ತಮನೂ, ವಿಶ್ವರೂಪಿಯೂ, ವಿಶ್ವಾತೀತನೂ, ನಮಗೆ ಆತ್ಮದೈವತವೂ ಆಗಿರುವ ಶರಣಾಗತಸಂರಕ್ಷಕನಾದ ಆ ದೇವದೇವನನ್ನೇ ನಾವೆಲ್ಲರೂ ಶರಣುಹೋಗುತ್ತೇವೆ. ಆ ಮಹಾತ್ಮನು, ತನ್ನವರೇ ಆಗಿರುವ ನಮಗೆ ಮಂಗಳವನ್ನುಂಟುಮಾಡುವನು.”

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಎಲೈ ಮಹಾರಾಜನೇ! ಕೇಳು. ದೇವತೆಗಳು ಹೀಗೆ ಸ್ತುತಿಸಲಾಗಿ ಪಶ್ಚಿಮದಿಕ್ಕಿನಲ್ಲಿ (ಅಂತಃಪ್ರಪಂಚದಲ್ಲಿ) ಅವರ ಮುಂದೆ ಶಂಖ-ಚಕ್ರ-ಗದಾಧರನಾದ ಶ್ರೀಭಗವಂತನು ಪ್ರಕಟವಾದನು. ಸ್ವಾಮಿಯ ಕಣ್ಣುಗಳು ಶರತ್ಕಾಲದ ಕಮಲದಂತೆ ಅರಳಿ ಅನುಗ್ರಹವನ್ನು ಸೂಸುತ್ತಿದ್ದುವು. ವಕ್ಷಃಸ್ಥಳದಲ್ಲಿ ಶ್ರೀವತ್ಸಚಿಹ್ನೆ ಮತ್ತು ಕತ್ತಿನಲ್ಲಿ ಕೌಸ್ತುಭಮಣಿ ಎಂಬೀ ಅಸಾಧಾರಣವಾದ ಲಕ್ಷಣಗಳನ್ನು ಬಿಟ್ಟು ಉಳಿದ ಎಲ್ಲ ವಿಷಯಗಳಲ್ಲಿಯೂ ಆತನಿಗೆ ಸಮಾನರಾಗಿದ್ದ ಹದಿನಾರು ಮಂದಿ ಪಾರ್ಷದರು ಆತನ ಸೇವೆ ಮಾಡುತ್ತಿದ್ದರು. ಆತನನ್ನು ಕಂಡೊಡನೆಯೇ ದೇವತೆಗಳೆಲ್ಲರೂ ಪರಮಾನಂದಭರಿತರಾಗಿ ಆತನಿಗೆ ಭೂಮಿಯಲ್ಲಿ ಸಾಷ್ಟಾಂಗಪ್ರಣಾಮವನ್ನು ಮಾಡಿದರು. ಅನಂತರ ಮೆಲ್ಲನೆ ಮೇಲೆದ್ದು ಆತನನ್ನು ಸ್ತುತಿಸತೊಡಗಿದರು: (ಶ್ಲೋಕ 28-30)

ದೇವತೆಗಳುಮಾಡಿದ ಭಗವತ್‌ಸ್ತುತಿ :

ನಮಸ್ತೇ ಯಜ್ಞವೀರ್ಯಾಯ ವಯಸೇ ಉತ ತೇ ನಮಃ ।
ನಮಸ್ತೇ ಹ್ಯಸ್ತಚಕ್ರಾಯ ನಮಃ ಸುಪುರುಹೂತಯೇ ॥೩೧॥

"ಯಜ್ಞಗಳ ಫಲವನ್ನು ಕೊಡುವ ಯಜ್ಞಶಕ್ತಿಯುಳ್ಳವನೂ–ಅದರ ಫಲದ ಎಲ್ಲೆಯನ್ನು ನಿರ್ಧರಿಸುವ ಕಾಲಸ್ವರೂಪನೂ ಆಗಿರುವ ನಿನಗೆ ನಮೋ ನಮಃ. ಅಸುರರ ಮೇಲೆ ಸುದರ್ಶನಚಕ್ರವನ್ನು ಪ್ರಯೋಗಿಸುವವನೂ–ಅನಂತವಾದ ನಾಮಗಳುಳ್ಳವನೂ ಆದ ನಿನಗೆ ನಮೋ ನಮಃ.

ಯತ್ತೇ ಗತೀನಾಂ ತಿಸೃಣಾಮೀಶಿತುಃ ಪರಮಂ ಪದಮ್ ।
ನಾರ್ವಾಚೀನೋ ವಿಸರ್ಗಸ್ಯ ಧಾತರ್ವೇದಿತುಮರ್ಹತಿ ॥೩೨॥

ಎಲೈ ವಿಧಾನಮಾಡುವ ಪ್ರಭುವೇ! ಸತ್ತ್ವಗುಣ, ರಜೋಗುಣ ಮತ್ತು ತಮೋಗುಣಗಳಿಗೆ ಅನುಸಾರವಾಗಿ ಉತ್ತಮಗತಿ, ಮಧ್ಯಮಗತಿ ಮತ್ತು ನಿಕೃಷ್ಟಗತಿಗಳನ್ನು ನಿಯಮಿಸುವವನು ನೀನೇ ಆಗಿರುವೆ. ಕಾರ್ಯ-ಕಾರಣಗಳನ್ನು ಮೀರಿರುವ ನಿನ್ನ ಪರಮಪದದ ಸ್ವರೂಪವನ್ನು ಈ ಕಾರ್ಯರೂಪವಾದ ಜಗತ್ತಿನಲ್ಲಿರುವ ಯಾವ ಆಧುನಿಕವಾದ ಪ್ರಾಣಿಯೂ ತಿಳಿಯಲಾರದು.

ಓಂ ನಿನಗೆ ನಮಸ್ಕಾರವು. ಶ್ರೀಭಗವಂತನಾದ ನಾರಾಯಣನೇ! ವಾಸುದೇವನೇ! ಆದಿಪುರುಷನೇ! ಮಹಾಪುರುಷನೇ! ಮಹಾನು ಭಾವನೇ! ಪರಮಮಂಗಳನೇ! ಪರಮಕಲ್ಯಾಣನೇ! ಪರಮಕಾರುಣಿ ಕನೇ! ಕೇವಲನೇ! ಜಗತ್ತಿಗೆ ಆಧಾರವಾದವನೇ! ಲೋಕೈಕನಾಥನೇ! ಸರ್ವೇಶ್ವರನೇ! ಲಕ್ಷ್ಮೀಪತಿಯೇ! ಪರಮಹಂಸಪರಿವ್ರಾಜಕರು ಪರಮ ಹಂಸಧರ್ಮವನ್ನು ಚೆನ್ನಾಗಿ ಸ್ಪಷ್ಟವಾಗಿ ಭಾವಿಸಿಕೊಳ್ಳುವಂತಹ ಪರಮಶ್ರೇಷ್ಠವಾದ ಆತ್ಮಯೋಗಸಮಾಧಿಯಿಂದ ಹೃದಯದ ಅಜ್ಞಾನವೆಂಬ ಬಾಗಿಲನ್ನು ತೆರೆದುಕೊಂಡಾಗ ಅವರ ಆತ್ಮಲೋಕದಲ್ಲಿ ಆತ್ಮಾನಂದರೂಪದಲ್ಲಿ ಯಾವ ಆವರಣವೂ ಇಲ್ಲದೇ ಪ್ರಕಟಗೊಳ್ಳುವವನು ಮತ್ತು ಆತ್ಮಸುಖಾನುಭವವನ್ನು ಸಹಜವಾಗಿಯೇ ಪಡೆದಿರುವವನು ನೀನು.

ಓ ಭಗವಂತನೇ! ನಿನ್ನ ಲೀಲೆಯ ರಹಸ್ಯವನ್ನು ತಿಳಿಯುವುದು ಅತಿಕಷ್ಟ. ಏಕೆಂದರೆ : ನೀನು ಯಾವ ಆಶ್ರಯವೂ ಇಲ್ಲದೇ ಪ್ರಾಕೃತ

ಶರೀರವೂ ಇಲ್ಲದೇ ಬೇರೆ ಯಾವ ಸಹಯೋಗವನ್ನೂ ಅಪೇಕ್ಷಿಸದೇ ನಿರ್ಗುಣನೂ ನಿರ್ವಿಕಾರನೂ ಆಗಿದ್ದರೂ ತಾನಾಗಿಯೇ ಈ ಸಗುಣವಾದ ಜಗತ್ತಿನ ಸೃಷ್ಟಿ-ಸ್ಥಿತಿ-ಸಂಹಾರಗಳನ್ನು ಮಾಡುತ್ತಿರುವೆ. (ಶ್ಲೋಕ 33-34)

ಓ ಭಗವಂತನೇ! ಸೃಷ್ಟಿಯೆಂಬ ಕಾರ್ಯದಲ್ಲಿ ನೀನು ದೇವದತ್ತನೇ ಮುಂತಾದ ಪ್ರಾಕೃತಜೀವರಂತೆ ಗುಣಗಳ ಕಾರ್ಯರೂಪವಾದ ಈ ಜಗತ್ತಿನಲ್ಲಿ ಪ್ರಕಟಗೊಂಡು ಕರ್ಮಾಧೀನನಾಗಿ ಪಾಪ-ಪುಣ್ಯಗಳ ಫಲವನ್ನು ಭೋಗಿಸುವವನೋ, ಅಥವಾ ಆತ್ಮಾರಾಮನಾಗಿ, ಶಾಂತಸ್ವಭಾವವುಳ್ಳವನಾಗಿ, ವಿಷಯಗಳಲ್ಲೂ ಉದಾಸೀನನಾಗಿ, ಸಾಕ್ಷಿಯಾಗಿ ಮಾತ್ರ ಇರುವವನೋ–ಎಂಬುದೂ ಕೂಡ ನಮಗೆ ತಿಳಿಯದು. ಒಂದು ಪಕ್ಷ ಇವೆರಡೂ ನಿನ್ನಲ್ಲಿದ್ದರೂ ಅದರಲ್ಲಿ ವಿರೋಧವೇನಿಲ್ಲ. ಏಕೆಂದರೆ : ನೀನು ಸ್ವಯಂ ಭಗವಂತನೇ ಆಗಿರುವೆ. ನಿನ್ನ ಗುಣಗಳು ಅಗಣಿತವಾಗಿವೆ ಮತ್ತು ಮಹಿಮೆಯು ಅಗಾಧವಾಗಿದೆ. ನೀನು ಸರ್ವಶಕ್ತಿಸಂಪನ್ನನು. ಆಧುನಿಕರು ಅನೇಕಪ್ರಕಾರವಾದ ವಿಕಲ್ಪ, ವಿತರ್ಕ, ವಿಚಾರ, ಸುಳ್ಳುಪ್ರಮಾಣಗಳು ಮತ್ತು ಕುತರ್ಕಪೂರ್ಣವಾದ ಶಾಸ್ತ್ರ–ಇವುಗಳನ್ನು ಅಧ್ಯಯನಮಾಡಿ ತಮ್ಮ ಹೃದಯವನ್ನು ಕೊಳಕುಮಾಡಿಕೊಳ್ಳುವರು. ಅವರು ದುರಾಗ್ರಹಿಗಳಾಗಿರುವುದಕ್ಕೂ ಇದೇ ಕಾರಣವು. ನಿನ್ನಲ್ಲಿ ಅವರ ಈ ವಾದ-ವಿವಾದಗಳಿಗೆ ಸಂದರ್ಭವೇ ಇಲ್ಲ. ನಿನ್ನ ವಾಸ್ತವಿಕಸ್ವರೂಪವಾದರೋ ಸಮಸ್ತ ಮಾಯಾಮಯಪದಾರ್ಥಗಳನ್ನೂ ಮೀರಿ ಕೇವಲವಾಗಿರುವುದು. ಅದರಲ್ಲೇ ನೀನು ನಿನ್ನ ಮಾಯಾಶಕ್ತಿಯನ್ನು ಮರೆಸಿಕೊಂಡೆಯಾದರೆ ನಿನ್ನಲ್ಲಿ ಯಾವುದು ತಾನೇ ಇರಲಾರದು? ಆದ್ದರಿಂದ ನೀನು ಸಾಮಾನ್ಯಮನುಷ್ಯ ರಂತೆ ಕರ್ತೃತ್ವ-ಭೋಕ್ತೃತ್ವಗಳು ಉಳ್ಳವನೂ ಆಗಿರಬಹುದು ಮತ್ತು ಮಹಾಪುರುಷರಂತೆ ಉದಾಸೀನನೂ ಆಗಿರಬಹುದು. ಇದಕ್ಕೆ ಕಾರಣವೇನೆಂದರೆ : ನಿನ್ನಲ್ಲಿ ಕರ್ತೃತ್ವ-ಭೋಕ್ತೃತ್ವಗಳೂ, ಉದಾಸೀನತೆಯೂ ಇಲ್ಲ. ನೀನು ಇವೆರಡರಿಂದಲೂ ವಿಲಕ್ಷಣನಾದವನು. ಅನಿರ್ವಚನೀಯನಾದವನು.

ಒಂದೇ ಹಗ್ಗದ ಚೂರು ಭ್ರಾಂತಿಯುಳ್ಳವರಿಗೆ ಒಂದು ತರಹದಲ್ಲಿ ತೋರುವುದು. ಭ್ರಾಂತಿಯಿಲ್ಲದ ತಿಳಿವಳಿಕೆಯುಳ್ಳವರಿಗೆ ಮತ್ತೊಂದು ತರಹ

ದಲ್ಲಿ ತೋರುವುದು. ಭ್ರಾಂತಿಯುಳ್ಳವರು ಅದನ್ನು ಹಾವಿನ ರೂಪ, ಮಾಲೆಯ ರೂಪ, ನೀರಿನ ಧಾರೆಯ ರೂಪ—ಮುಂತಾದ ನಾನಾರೂಪ ಗಳಲ್ಲಿ ಕಾಣುತ್ತಾರೆ. ಆದರೆ ಬುದ್ಧಿಯು ಸರಿಯಾಗಿರುವವರಿಗೆ ಅದು ಹಗ್ಗದ ಚೂರಿನಂತೆಯೇ ಕಂಡುಬರುವುದು. ಹಾಗೆಯೇ ಸಾಮ್ಯಮತಿಯುಳ್ಳ ಜನರು ನಿನ್ನನ್ನು ಸಚ್ಚಿದಾನಂದಮಯನನ್ನಾಗಿ ತಿಳಿಯುತ್ತಾರೆ. ಆದರೆ ವಿಷಮ ಮತಿಯುಳ್ಳ ಅವಿವೇಕಿಗಳು ನಿನ್ನನ್ನು ಸಂಸಾರಿಯೆಂದು ಭ್ರಮಿಸುತ್ತಾರೆ. ವಿಚಾರಪೂರ್ವಕವಾಗಿ ನೋಡಿದರೆ ಎಲ್ಲ ವಸ್ತುಗಳಲ್ಲಿಯೂ ವಸ್ತುಸ್ವರೂಪ ನಾಗಿ ಬೆಳಗುತ್ತಿರುವವನು ನೀನೇ. ನೀನೇ ಎಲ್ಲರ ಸ್ವಾಮಿಯು. ಇಡೀ ಜಗತ್ತಿಗೆ ಕಾರಣವಾದ ಬ್ರಹ್ಮದೇವರು ಮತ್ತು ಪ್ರಕೃತಿ—ಇವುಗಳಿಗೂ ಕಾರಣನು. ನೀನು ಎಲ್ಲರಿಗೂ ಅಂತರ್ಯಾಮಿಯೂ ಮತ್ತು ಅಂತರಾತ್ಮನೂ ಆಗಿರುವೆ. ಆದುದರಿಂದ ಜಗತ್ತಿನಲ್ಲಿ ಕಂಡುಬರುತ್ತಿರುವ ಯಾವ ಗುಣ-ದೋಷಗಳುಂಟೋ ಅವು ನಿನ್ನಲ್ಲಿ ಇಲ್ಲದಿದ್ದರೂ ಇರುವಂತೆ ಭ್ರಾಂತರಿಗೆ ತೋರುತ್ತದೆ. ಆ ಆಭಾಸಗಳು ಕಳೆದಮೇಲೆ ಉಳಿಯುವವನು ನೀನೊಬ್ಬನೇ. ಓ ಮಧುಸೂದನನೇ! ನಿನ್ನ ಮಹಿಮೆಯೆಂಬುದು ಅಮೃತಸಾಗರ ವಾಗಿದೆ. ಅದರ ಒಂದು ತೊಟ್ಟನ್ನೇ ಆದರೂ ಒಂದು ಬಾರಿಯಾದರೂ ಸವಿದರೆ ಹೃದಯದಲ್ಲಿ ನಿತ್ಯವಾಗಿ ನಿರಂತರವಾಗಿ ಪರಮಾನಂದದ ಧಾರೆಯು ಹರಿಯತೊಡಗುವುದು. ಆದುದರಿಂದ ನಿನ್ನ ಆ ಅನನ್ಯಪ್ರೇಮಿಗಳಾದ ಭಕ್ತ ಶ್ರೇಷ್ಠರು ಜಗತ್ತಿನ ವಿಷಯೋಪಭೋಗಗಳ ಸುಖವು ಲೇಶಮಾತ್ರ ಅನುಭವಕ್ಕೆ ಬಂದಿದ್ದರೂ ಅಥವಾ ಆ ಸುಖವು ತೋರಿಕೆಯ ಸುಖವೆಂದು ಅನುಭವಕ್ಕೆ ಬಂದಿದ್ದರೂ—ಅವುಗಳನ್ನೂ ಮತ್ತು ಪರಲೋಕವೇ ಮುಂತಾದುವುಗಳಲ್ಲಿ ಇರುವುದಾಗಿ ಕೇಳಿಬಂದಿರುವ ಯಾವ ಸುಖವುಂಟೋ ಅವೆಲ್ಲವನ್ನೂ ಮರೆತುಬಿಡುವರು. ಅವರು, ಸಮಸ್ತಪ್ರಾಣಿಗಳಿಗೂ ಪರಮಪ್ರಿಯತಮನೂ, ಹಿತೈಷಿಯೂ, ಸ್ನೇಹಿತನೂ, ಸರ್ವಾತ್ಮನೂ ಮತ್ತು ಐಶ್ವರ್ಯಗಳ ನಿಧಿಯೂ ಆಗಿರುವ ಪರಮಾತ್ಮನಲ್ಲಿ ತಮ್ಮ ಮನಸ್ಸನ್ನು ನಿರಂತರವಾಗಿ ನೆಲೆಗೊಳಿಸಿ, ಆತನ ಚಿಂತನೆಯ ಸುಖವನ್ನೇ ಸೂರೆಗೊಳ್ಳುವರು. ಅಂತಹ ಮನುಷ್ಯರೇ ಸ್ವಾರ್ಥಸಾಧನೆ ಮತ್ತು ಪರಮಾರ್ಥಸಾಧನೆ—ಎರಡರಲ್ಲೂ ನಿಪುಣರೆಂದು ತಿಳಿಯಬೇಕು. ಓ ಮಧುಸೂದನನೇ! ಜನನ-ಮರಣ

ರೂಪವಾದ ಭ್ರಮಣೆಯಿಂದ ಸರ್ವಕಾಲಕ್ಕೂ ಬಿಡುಗಡೆಯನ್ನುಂಟು ಮಾಡುವ ನಿನ್ನ ಅಡಿದಾವರೆಗಳ ಸೇವೆಯನ್ನು ನಿನಗೆ ಅತ್ಯಂತಪ್ರಿಯರೂ, ಮಿತ್ರರೂ ಆಗಿರುವ ಆ ಭಕ್ತಜನರು ಹೇಗೆತಾನೇ ಬಿಟ್ಟಾರು?, ಪ್ರಭೋ! ನೀನು ಮೂರು ಲೋಕಗಳಿಗೂ ಆತ್ಮನೂ, ಆಶ್ರಯನೂ ಆಗಿರುವೆ. ಮೂರು ಲೋಕಗಳನ್ನೂ ನಿನ್ನ ಮೂರು ಹೆಜ್ಜೆಗಳಿಂದ ಅಳೆದವನೂ ನೀನೇ. ಮೂರು ಲೋಕಗಳ ಸಂಚಾಲಕನೂ ನೀನೇ ಆಗಿರುವೆ. ನಿನ್ನ ಮಹಿಮೆಯು ಮೂರು ಲೋಕಗಳ ಮನಸ್ಸನ್ನೂ ಸೂರೆಗೊಳ್ಳುವುದು. ದೈತ್ಯ-ದಾನವರೇ ಮುಂತಾದ ಅಸುರರೂ ಕೂಡ ನಿನ್ನ ವಿಭೂತಿಗಳೇ ಆಗಿದ್ದಾರೆ–ಎಂಬುದರಲ್ಲಿ ಸಂಶಯವಿಲ್ಲ. ಆದರೂ ಇದು ಅವರ ಉನ್ನತಿಯ ಸಮಯವಲ್ಲ–ಎಂದು ಯೋಚಿಸಿ ನೀನು ನಿನ್ನ ಯೋಗಮಾಯೆಯಿಂದ ಸುರ, ನರ, ಪಶು, ನರ-ಮೃಗ ಮಿಶ್ರಣವಾದ ನಾರಸಿಂಹ, ಜಲಚರವಾದ ಮತ್ಸ್ಯ–ಇವೇ ಮುಂತಾದ ರೂಪಗಳಲ್ಲಿ ಅವತಾರಮಾಡಿ ಆ ದೈತ್ಯ-ದಾನವಾದಿಗಳಿಗೆ ಅವರ ಅಪರಾಧಕ್ಕೆ ತಕ್ಕದಂಡನೆಯನ್ನು ಕೊಡುತ್ತೀಯೆ. ಎಲೈ ದಂಡವನ್ನು ಧರಿಸಿರುವ ದಂಡವಿಧಾನಮಾಡುವ ಪ್ರಭುವೇ! ನಿನಗೆ ಸರಿಯೆಂದು ಎನ್ನಿಸಿದರೆ ಆ ಅಸುರರನ್ನು ಸಂಹರಿಸಿದಂತೆಯೇ ಈ ವೃತ್ರಾಸುರನನ್ನೂ ಸಂಹರಿಸುವವನಾಗು. ಓ ಭಗವಂತನೇ! ನೀನು ನಮಗೆ ತಂದೆ-ತಾತ ಎಲ್ಲವೂ ಆಗಿದ್ದೀಯೆ. ನಾವು ನಿನ್ನ ಸ್ವಜನರು. ನಿರಂತರವಾಗಿ ನಿನ್ನ ಎದುರಿಗೆ ವಿನಯದಿಂದ ತಲೆಯನ್ನು ಬಗ್ಗಿಸಿಕೊಂಡಿರುವವರು. ನಿನ್ನ ಚರಣಕಮಲಗಳ ಧ್ಯಾನವನ್ನು ಮಾಡುತ್ತಾ-ಮಾಡುತ್ತಾ ನಮ್ಮ ಹೃದಯವು ಅವುಗಳೊಡ ನೆಯೇ ಪ್ರೇಮಬಂಧನದಲ್ಲಿ ಕಟ್ಟಿಹಾಕಲ್ಪಟ್ಟಿದೆ. ನೀನು ನಮ್ಮ ಮುಂದೆ ನಿನ್ನ ದಿವ್ಯಗುಣಗಳಿಂದ ಕೂಡಿದ ಸಾಕಾರವಾದ ವಿಗ್ರಹವನ್ನು ಪ್ರಕಟಪಡಿಸಿಕೊಂಡಿ ದ್ದೀಯೆ. ಆದುದರಿಂದ, ಎಲೈ ಪ್ರಭುವೇ! ನಿನ್ನ ದಯಾಪೂರ್ಣವೂ, ಪರಿಶುದ್ಧವೂ, ಸುಂದರವೂ, ಶೀತಲವೂ ಆಗಿರುವ ಕಿರುನಗೆಯಿಂದ ಕೂಡಿದ ಚೆನ್ನೋಟದಿಂದಲೂ ಮತ್ತು ಮುಖಕಮಲದಿಂದ ತೊಟ್ಟಿಕ್ಕುತ್ತಿರುವ ವಾಣಿ ಯೆಂಬ ಸುಮಧುರವಾದ ಅಮೃತಬಿಂದುಗಳಿಂದಲೂ ನಮ್ಮ ಹೃದಯದ ತಾಪಗಳನ್ನು ಶಮನಗೊಳಿಸಪ್ಪಾ. ಅಗ್ನಿಯ ಅಂಶಗಳೇ ಆಗಿರುವ ಅಗ್ನಿಕಣ ಗಳೇ ಮುಂತಾದುವುಗಳು, ಅಗ್ನಿಯನ್ನು ಪ್ರಕಾಶಪಡಿಸಲು ಅಸಮರ್ಥ

ವಲ್ಲವೇ? ಹಾಗೆಯೇ ನಾವೂ ಕೂಡ ನಿನ್ನ ಎದುರಿಗೆ ನಮ್ಮದೇ ಆದ ಯಾವುದೇ ಸ್ವಾರ್ಥ-ಪರಾರ್ಥಗಳನ್ನೂ ಅರಿಕೆಮಾಡಲು ಅಸಮರ್ಥರಾಗಿದ್ದೇವೆ. ನಿನಗೆ ಅರಿಕೆಮಾಡುವುದಾದರೂ ಏನಿದೆ? ಏಕೆಂದರೆ : ನೀನೇ ಇಡೀ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳನ್ನು ಉಂಟುಮಾಡುವ ದಿವ್ಯವಾದ ಮಾಯೆಯೊಡನೆ ವಿನೋದಸುಖವನ್ನು ಅನುಭವಿಸುತ್ತಿದ್ದೀಯೆ. ಹಾಗೆಯೇ ಸಮಸ್ತ ಜೀವಗಳ ಅಂತಃಕರಣಗಳಲ್ಲಿಯೂ ಬ್ರಹ್ಮ ಮತ್ತು ಅಂತರ್ಯಾಮಿಯ ರೂಪದಲ್ಲಿ ಬೆಳಗುತ್ತಿರುವೆ. ಇಷ್ಟಲ್ಲದೇ ಅವುಗಳ ಹೊರಗಡೆಯಲ್ಲಿ ಪ್ರಕೃತಿಯ ರೂಪದಲ್ಲೂ ನೀನೆ ಬೆಳಗುತ್ತಿದ್ದೀಯೆ. ಪ್ರಪಂಚದಲ್ಲಿ ಎಷ್ಟೆಲ್ಲಾ ದೇಶ, ಕಾಲ, ಶರೀರ ಮುಂತಾದುವುಗಳು ಇವೆಯೋ–ಅವುಗಳಿಗೆ ಉಪಾದಾನವೂ ಮತ್ತು ಅವುಗಳನ್ನು ಪ್ರಕಾಶಪಡಿಸುವವನೂ ಆಗಿ ಆ ರೂಪದಲ್ಲಿ ಅವುಗಳನ್ನು ನೀನು ಅನುಭವಿಸುತ್ತಿರುವೆ. ನೀನು ಎಲ್ಲ ವೃತ್ತಿಗಳಿಗೂ ಸಾಕ್ಷಿಯಾಗಿರುವವನು. ಆಕಾಶದಂತೆ ಸರ್ವಗತನೂ ನಿರ್ಲಿಪ್ತನೂ ಆಗಿರುವವನು. ಸ್ವಯಂ ಪರಬ್ರಹ್ಮಪರಮಾತ್ಮನೇ ನೀನಪ್ಪಾ.

ಆದುದರಿಂದ–'ಇವರು ತಮ್ಮ ಅಭಿಪ್ರಾಯಗಳನ್ನು ಅರಿಕೆಮಾಡಿಕೊಳ್ಳಲಿ'–ಎಂಬುದನ್ನು ನಿರೀಕ್ಷಿಸದೇ, ನಾವು ಇಲ್ಲಿಗೆ ಯಾವ ಅಭಿಲಾಷೆಯಿಂದ ಬಂದಿದ್ದೇವೆಯೋ–ಆ ನಮ್ಮ ಅಭಿಲಾಷೆಯನ್ನು ನೀನೇ ಪೂರ್ಣಗೊಳಿಸು. (ಶ್ಲೋಕ 25-43)

ಅಥೋ ಈಶ ಜಹಿ ತ್ವಾಷ್ಟ್ರಂ ಗ್ರಸನ್ತಂ ಭುವನತ್ರಯಮ್ ।
ಗ್ರಸ್ತಾನಿ ಯೇನ ನಃ ಕೃಷ್ಣ ತೇಜಾಂಸ್ಯಸ್ತ್ರಾಯುಧಾನಿ ಚ ॥೪೪॥

ಸರ್ವಶಕ್ತನಾದ ಸ್ವಾಮಿಯೇ! ಶ್ರೀಕೃಷ್ಣನೇ!* ಆದುದರಿಂದ ಮೂರು ಲೋಕಗಳನ್ನೂ ನುಂಗಿಹಾಕುತ್ತಿರುವ ವೃತ್ರಾಸುರನನ್ನು ಸಂಹಾರ

---

* ಕೃಷಿರ್ಭೂರ್ವಾಚಕಃ ಶಬ್ದೋ ಣಶ್ಚ ನಿರ್ವೃತಿವಾಚಕಃ ।
ತಯೋರೈಕ್ಯಂ ಪರಂಬ್ರಹ್ಮ ಕೃಷ್ಣ ಇತ್ಯಭಿಧೀಯತೇ ॥

ಸತ್ಯವಾಚಕವಾದ ಕೃಷಿಧಾತುವಿಗೆ ಆನಂದವಾಚಕವಾದ 'ಣ' ಕಾರವು ಸೇರಿ ಕೃಷ್ಣ ಎಂಬ ಪದವಾಗುವುದರಿಂದ ಕೃಷ್ಣನೆಂದರೆ ಸಚ್ಚಿದಾನಂದಘನಬ್ರಹ್ಮನೆಂದು ತಿಳಿಯಬೇಕು.

ಮಾಡು. ಆತನು ನಮ್ಮ ತೇಜಸ್ಸುಗಳನ್ನೂ, ಅಸ್ತ್ರಗಳನ್ನೂ, ಆಯುಧಗಳನ್ನೂ ನುಂಗಿಹಾಕಿಬಿಡುತ್ತಿದ್ದಾನೆ.

ಹಂಸಾಯ ದಹ್ರನಿಲಯಾಯ ನಿರೀಕ್ಷಕಾಯ
ಕೃಷ್ಣಾಯ ಮೃಷ್ಟಯಶಸೇ ನಿರುಪಕ್ರಮಾಯ ।
ಸತ್ಸಂಗ್ರಹಾಯ ಭವಪಾನ್ಥನಿಜಾಶ್ರಮಾಪ್ತಾ-
ವನ್ತೇ ಪರೀಷ್ಟಗತಯೇ ಹರಯೇ ನಮಸ್ತೇ ||೪೫||

ನೀನು ಹಂಸ (ಶುದ್ಧ) ಸ್ವರೂಪನೂ, ಹೃದಯದಲ್ಲಿ ಶುದ್ಧವಾಗಿ ಬೆಳಗುತ್ತಿರುವ ಆಕಾಶಸ್ವರೂಪನೂ, ಸರ್ವಸಾಕ್ಷಿಯೂ, ಅನಾದಿಯೂ, ಅನಂತನೂ, ಉಜ್ಜ್ವಲಕೀರ್ತಿಸಂಪನ್ನನೂ ಆಗಿರುವೆ. ಸತ್ಪುರುಷರನ್ನು ಸಂಗ್ರಹಿಸುವವನು ನೀನು. ಈ ಸಂಸಾರದ ಯಾತ್ರಿಕರು ಸುತ್ತುತ್ತಾ ಅಲೆಯುತ್ತಾ ನಿನ್ನಲ್ಲಿ ಶರಣುಬಂದರೆ ಆಗ ನೀನು ಕಡೆಯಲ್ಲಿ ಅವರಿಗೆ ಪರಮಾನಂದಸ್ವರೂಪವೆಂಬ ಅಭೀಷ್ಟಫಲವನ್ನೇ ಈಯುವೆ ಮತ್ತು ಈ ರೀತಿಯಲ್ಲಿ ಅವರ ಜನ್ಮ-ಜನ್ಮಾಂತರಗಳ ಕಷ್ಟಗಳನ್ನೂ ಪರಿಹರಿಸುವೆ. ನಿನಗೆ ನಮೋ ನಮಃ."

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಎಲೈ ರಾಜೇಂದ್ರನೇ! ದೇವತೆಗಳು ಅತ್ಯಂತ ಆದರದಿಂದ ಹೀಗೆ ಸ್ತೋತ್ರಮಾಡಲು ಶ್ರೀಭಗವಂತನು ಅದರಿಂದ ಬಹಳ ಪ್ರಸನ್ನನಾಗಿ ಅವರಿಗೆ ಹೀಗೆಂದನು :

ಶ್ರೀಭಗವಂತನ ಅಭಯವಚನಗಳು :

"ಎಲೈ ದೇವಶ್ರೇಷ್ಠರೇ! ನೀವು ನನ್ನನ್ನು ಭಕ್ತಿ-ಜ್ಞಾನಗಳಿಂದ ಕೂಡಿದ ಸ್ತೋತ್ರದಿಂದ ಉಪಾಸನೆಮಾಡಿದ್ದೀರಿ. ಆದುದರಿಂದ ನನಗೆ ನಿಮ್ಮಲ್ಲಿ ತುಂಬಾ ಪ್ರಸನ್ನತೆಯುಂಟಾಗಿದೆ. ಈ ಸ್ತೋತ್ರದ ಅನುಸಂಧಾನದಿಂದ ಜೀವರಿಗೆ ಆತ್ಮವೈಭವದ ನೆನಪೂ ಮತ್ತು ನನ್ನ ವಿಷಯವಾದ ಭಕ್ತಿಯೂ ಉಂಟಾಗುವುವು. ಎಲೈ ದೇವಶಿಖಾಮಣಿಗಳೇ! ನಾನು ಪ್ರಸನ್ನನಾದ ಬಳಿಕ ಯಾವ ವಸ್ತುವೂ ದುರ್ಲಭವಾಗಲಾರದು. ಆದರೂ ನನ್ನಲ್ಲಿ

ಅನನ್ಯಭಕ್ತಿಯುಳ್ಳ ತತ್ತ್ವಜ್ಞರಾದ ಸುಕೃತಿಗಳು ನನ್ನನ್ನು ಬಿಟ್ಟು ಬೇರೆ ಏನನ್ನೂ ನನ್ನಿಂದ ಕೋರುವುದಿಲ್ಲ.

ನ ವೇದ ಕೃಪಣಃ ಶ್ರೇಯ ಆತ್ಮನೋ ಗುಣವಸ್ತು ದೃಕ್ ।
ತಸ್ಯ ತಾನಿಚ್ಛತೋ ಯಚ್ಛೇದ್ಯದಿ ಸೋಽಪಿ ತಥಾವಿಧಃ ॥೪೯॥

ತ್ರಿಗುಣಾತ್ಮಕವಾದ ಜಗತ್ತಿನ ವಿಷಯಗಳನ್ನು ಪಾರಮಾರ್ಥಿಕವೆಂದು ತಿಳಿಯುವವನು ಮೂರ್ಖನು. ಆತನಿಗೆ ತನ್ನ ವಾಸ್ತವಿಕವಾದ ಕಲ್ಯಾಣವು ಯಾವುದು?–ಎಂಬುದರ ತಿಳಿವಳಿಕೆ ಇರುವುದಿಲ್ಲ. ಅದಕ್ಕಾಗಿಯೇ ಆತನು ಈ ಜಗತ್ತಿನ ವಿಷಯಗಳನ್ನು ಅಪೇಕ್ಷಿಪಡುತ್ತಾನೆ. ಆದರೆ ಯಾವನಾದರೂ ಆತನಿಗೆ ಆತನು ಕೋರಿದ ಪ್ರಾಪಂಚಿಕವಾದ ಆ ವಸ್ತುವನ್ನು ಕೊಟ್ಟಿದ್ದೇ ಆದರೆ–ಆತನೂ ಅಂತಹ ಮೂರ್ಖನೆಂದೇ ತಿಳಿಯಬೇಕು.

ಸ್ವಯಂ ನಿಃಶ್ರೇಯಸಂ ವಿದ್ವಾನ್ನ ವಕ್ತ್ಯಜ್ಞಾಯ ಕರ್ಮ ಹಿ ।
ನ ರಾತಿ ರೋಗಿಣೋಽಪಥ್ಯಂ ವಾಞ್ಛತೋ ಹಿ ಭಿಷಕ್ತಮಃ ॥೫೦॥

ರೋಗಿಯು ಅಪೇಕ್ಷೆಪಟ್ಟರೂ ಒಳ್ಳೆಯ ವೈದ್ಯನು ಆತನಿಗೆ ಅಪಥ್ಯದ ವಸ್ತುವನ್ನು ಕೊಡುವುದಿಲ್ಲ. ಅದರಂತೆಯೇ ಮುಕ್ತಿಯ ಸ್ವರೂಪವನ್ನು ತಿಳಿದ ಜ್ಞಾನಿಯು–ಅಜ್ಞಾನಿಯು ಅಪೇಕ್ಷಿಸಿದರೂ–ಆತನಿಗೆ ಕರ್ಮಗಳಲ್ಲಿ ಸಿಕ್ಕಿ ಬೀಳುವ ಉಪದೇಶವನ್ನು ಮಾಡುವುದಿಲ್ಲ.

ಎಲೈ ದೇವರಾಜನೇ! ನಿನಗೆ ಮಂಗಳವಾಗಲಿ. ಈಗ ತಡಮಾಡದೇ ಋಷಿಶಿರೋಮಣಿಗಳಾದ ದಧೀಚಿಗಳ ಬಳಿಗೆ ಹೋಗಿರಿ. ಉಪಾಸನೆ, ವ್ರತ ಮತ್ತು ತಪಸ್ಸುಗಳಿಂದ ಅವರ ಶರೀರವು ಅತ್ಯಂತ ದೃಢಗೊಂಡಿದೆ. 'ಅದನ್ನೇ ಕೊಡಿರಿ'–ಎಂದು ಅವರನ್ನು ಬೇಡಿರಿ. ಆ ಮಹರ್ಷಿಗಳು ಶುದ್ಧಬ್ರಹ್ಮಜ್ಞಾನಿಗಳು. ಅಶ್ವಿನೀಕುಮಾರರಿಗೆ ಕುದುರೆಯ ಶಿರಸ್ಸಿನ ಮೂಲಕ ಉಪದೇಶ ಮಾಡಿದ್ದರಿಂದ ಅವರು 'ಅಶ್ವಶಿರಾ'* ಎಂಬ ಹೆಸರಿನಿಂದಲೂ ಪ್ರಸಿದ್ಧ

---

* ದಧೀಚಿಮಹರ್ಷಿಗಳು ಪ್ರವರ್ಗ್ಯವೆಂಬ ಯಜ್ಞಕರ್ಮದಲ್ಲಿಯೂ ಮತ್ತು ಬ್ರಹ್ಮವಿದ್ಯೆಯಲ್ಲಿಯೂ ಪಾರಂಗತರಾಗಿದ್ದರು. ಅದನ್ನು ತಿಳಿದ ಅಶ್ವಿನೀಕುಮಾರರು ಒಮ್ಮೆ ಅವರ ಬಳಿಗೆ ಬಂದು ತಮಗೆ ಆ ವಿದ್ಯೆಯನ್ನು ದಯಪಾಲಿಸಬೇಕೆಂದು ಬೇಡಿದರು. ದಧೀಚರು 'ಈಗ ನನಗೆ ಬೇರೆ ಕೆಲಸವಿದೆ, ಮತ್ತೊಮ್ಮೆ ಬನ್ನಿರಿ'–ಎಂದು ಹೇಳಿಕಳುಹಿಸಿದರು. ಆಗ ಇಂದ್ರನು ಅವರ ಬಳಿಗೆ ಬಂದು 'ಅಶ್ವಿನೀಕುಮಾರರು

ರಾಗಿದ್ದಾರೆ. ಅವರು ಉಪದೇಶ ಮಾಡಿದ ಆತ್ಮವಿದ್ಯೆಯ ಪ್ರಭಾವದಿಂದಲೇ ಆ ಅಶ್ವಿನೀಕುಮಾರರು ಅಮರತ್ವವನ್ನು ಪಡೆದರು. ಅಥರ್ವವೇದವನ್ನು ಅರಿತ ಆ ಮಹಾತ್ಮರೇ ನನ್ನ ಸ್ವರೂಪಭೂತವಾದ ನಾರಾಯಣಕವಚವನ್ನು ತ್ವಷ್ಟನಿಗೆ ಮೊಟ್ಟಮೊದಲಿಗೆ ಉಪದೇಶಮಾಡಿದವರು. ತ್ವಷ್ಟನು ಅದನ್ನು ವಿಶ್ವರೂಪನಿಗೆ ಉಪದೇಶಮಾಡಿದನು. ನೀನು ಆ ವಿಶ್ವರೂಪನಿಂದ ಅದರ ಉಪದೇಶವನ್ನು ಪಡೆದೆ. ದಧೀಚಿಗಳು ಧರ್ಮದ ಪರಮಮರ್ಮವನ್ನರಿತ ಧರ್ಮಜ್ಞಶಿಖಾಮಣಿಗಳು. ಅಶ್ವಿನೀದೇವತೆಗಳು ಪ್ರಾರ್ಥನೆ ಮಾಡಿದರೆ ಅವರು ನಿಮಗೆ ತಮ್ಮ ಶರೀರದ ಅಂಗಗಳಾದ ಮೂಳೆಗಳನ್ನು ಅವಶ್ಯವಾಗಿ ಕೊಡುವರು. ಅವುಗಳನ್ನು ಪಡೆದುಕೊಂಡು ನೀವು ವಿಶ್ವಕರ್ಮನ ಮೂಲಕ ಆ ಮೂಳೆಗಳಿಂದ ಒಂದು ಶ್ರೇಷ್ಠವಾದ ಆಯುಧವನ್ನು ನಿರ್ಮಿಸಿಕೊಳ್ಳಿರಿ. ದೇವರಾಜನೇ! ನನ್ನ ಶಕ್ತಿಯಿಂದ ಸಂಪನ್ನನಾಗಿ ನೀನು ಆ ದಿವ್ಯವಾದ ಆಯುಧದಿಂದಲೇ ವೃತ್ರಾಸುರನ ತಲೆಯನ್ನು ಕತ್ತರಿಸಿಹಾಕುವೆ. ಎಲೈ ದೇವತೆಗಳಿರಾ! ವೃತ್ರಾಸುರನು ಮರಣಹೊಂದಿದೊಡನೆಯೇ ನಿಮಗೆ ಮತ್ತೆ ತೇಜಸ್ಸು, ಅಸ್ತ್ರ-ಶತ್ರುಗಳು ಮತ್ತು ಸಂಪತ್ತುಗಳು ದೊರೆಯುವುವು.

ವೈದ್ಯವೃತ್ತಿಯವರು. ಅವರಿಗೆ ನೀವು ಆ ವಿದ್ಯೆಯನ್ನು ಉಪದೇಶಮಾಡಕೂಡದು. ನನ್ನ ಮಾತಿಗೆ ವಿರುದ್ಧವಾಗಿ ನಡೆದರೆ ನಿಮ್ಮ ತಲೆಯನ್ನು ಕತ್ತರಿಸಿಹಾಕುವೆನು'–ಎಂದು ಎಚ್ಚರಿಕೆ ನೀಡಿ ಹೋದನು. ಅಶ್ವಿನೀಕುಮಾರರು ಮತ್ತೆ ಮಹರ್ಷಿಗಳ ಬಳಿಗೆ ಬಂದು ವಿದ್ಯೆಯನ್ನು ಬೇಡಿದಾಗ–ಅವರು ಇಂದ್ರನು ಬಂದು ಹೇಳಿದ್ದ ವೃತ್ತಾಂತವನ್ನು ಅವರಿಗೆ ತಿಳಿಸಿದರು. ಅವರು–'ಮಹರ್ಷಿಗಳೇ! ನಾವು ನಿಮ್ಮ ತಲೆಯನ್ನು ಕತ್ತರಿಸಿ ಅದರ ಜಾಗದಲ್ಲಿ ಕುದುರೆಯ ತಲೆಯನ್ನು ಜೋಡಿಸುವೆವು. ಆಗ ತಾವು ನಮಗೆ ಉಪದೇಶಮಾಡಿರಿ. ಇಂದ್ರನು ಬಂದು ಆ ಕುದುರೆಯ ತಲೆಯನ್ನು ಕತ್ತರಿಸಿಹಾಕುವನು. ಆಗ ನಾವು ನಿಮಗೆ ಮತ್ತೆ ನಿಮ್ಮ ನಿಜವಾದ ತಲೆಯನ್ನು ಜೋಡಿಸುವೆವು'–ಎಂದು ಸಲಹೆನೀಡಿದರು. ಮುನಿಗಳು ಅವರ ಮಾತನ್ನು ನಂಬಲಿಲ್ಲ. ಆದರೂ ಕುದುರೆಯ ಮುಖದಿಂದ ಅವರು ಅಶ್ವಿನೀದೇವತೆಗಳಿಗೆ ವಿದ್ಯೆಯನ್ನು ಉಪದೇಶಮಾಡಿದರು. ಅದರಿಂದ ಅವರಿಗೆ 'ಅಶ್ವಶಿರಾಃ' (ಕುದುರೆಯ ತಲೆಯವರು) ಎಂದು ಹೆಸರಾಯಿತು.

ನಿಶಮ್ಯಾಥರ್ವಣಂ ದಕ್ಷಂ ಪ್ರವರ್ಗ್ಯಬ್ರಹ್ಮವಿದ್ಯಯೋಃ । ದಧ್ಯಂಚಂ ಸಮುಪಾಗಮ್ಯ ತಮೂಚತುರಥಾಶ್ವಿನೌ ॥೧॥ ಭಗವನ್ ದೇಹಿ ನೌ ವಿದ್ಯಾಮಿತಿ ಶ್ರುತ್ವಾ

ನಿಮಗೆ ಅವಶ್ಯವಾಗಿ ಮಂಗಳವುಂಟಾಗುವುದು. ಏಕೆಂದರೆ : ನೀವು ನನ್ನಲ್ಲಿ ಶರಣಾಗತರಾಗಿದ್ದೀರಿ. ನನ್ನಲ್ಲಿ ಶರಣುಬಂದವರನ್ನು ಯಾರೂ ಹಿಂಸೆ ಪಡಿಸಲಾರರು."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಷಷ್ಠಸ್ಕಂಧದ ೯ನೆಯ ಅಧ್ಯಾಯವು ಮುಗಿಯಿತು.

ಷಷ್ಠಸ್ಕಂಧ ೧೦ನೆಯ ಅಧ್ಯಾಯ

ದೇವತೆಗಳು ದಧೀಚಿಮಹರ್ಷಿಗಳ ಅಸ್ಥಿಗಳಿಂದ ವಜ್ರಾಯುಧವನ್ನು ನಿರ್ಮಿಸಿಕೊಂಡು ವೃತ್ರನ ಸೇನೆಯನ್ನು ಆಕ್ರಮಿಸಿದುದು

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಇನ್ದ್ರಮೇವಂ ಸಮಾದಿಶ್ಯ ಭಗವಾನ್ವಿಶ್ವಭಾವನಃ ।
ಪಶ್ಯತಾಮನಿಮೇಷಾಣಾಂ ತತ್ರೈವಾನ್ತರ್ದಧೇ ಹರಿಃ ॥೧॥

ಪರೀಕ್ಷಿತಮಹಾರಾಜ! ಇಡೀ ವಿಶ್ವಕ್ಕೇ ಸೃಷ್ಟಿಕರ್ತನಾಗಿ ಜೀವನ ಪ್ರದನಾದ ಶ್ರೀಭಗವಂತನಾದ ಶ್ರೀಹರಿಯು ಇಂದ್ರಾದಿಗಳಿಗೆ ಹೀಗೆ ಆದೇಶ ವನ್ನು ನೀಡಿ ದೇವತೆಗಳು ನೋಡುತ್ತಿರುವಂತೆಯೇ ಅಲ್ಲಿಯೇ ಅಂತರ್ಧಾನ ಹೊಂದಿದನು.

ಸ ಚಾಬ್ರವೀತ್ ॥ ಕರ್ಮಣ್ಯವಸ್ಥಿತೋಽದ್ಯಾಹಂ ಪಶ್ಚಾದ್ವಕ್ಷ್ಯಾಮಿ ಗಚ್ಛತಮ್ । ತಯೋರ್ನಿರ್ಗತಯೋರೇವ ಶಕ್ರ ಆಗತ್ಯ ತಂ ಮುನಿಮ್ । ಉವಾಚ ಭಿಷಜೋರ್ವಿದ್ಯಾಂ ಮಾವಾದೀರಶ್ವಿನೋರ್ಮುನೇ ॥೩॥ ಯದಿ ಮದ್ವಾಕ್ಯಮುಲ್ಲಂಘ್ಯ ಬ್ರವೀಷಿ ಸಹಸೈವ ತೇ । ಶಿರಶ್ಛಿಂದ್ಯಾಂ ನ ಸಂದೇಹ ಇತ್ಯುಕ್ತ್ವಾ ಸ ಯಯೌ ಹರಿಃ ॥೪॥ ಇಂದ್ರೇ ಗತೇ ತಥಾಭ್ಯೇತ್ಯ ನಾಸತ್ಯವೂಚತುರ್ದ್ವಿಜಮ್ । ತನ್ಮುಖಾದಿಂದ್ರಗದಿತಂ ಶ್ರುತ್ವಾ ತಾವೂಚತುಃ ಪುನಃ ॥೫॥ ಆವಾಂ ತವ ಶಿರಶ್ಛಿತ್ವಾ ಪೂರ್ವಮಶ್ವಸ್ಯ ಮಸ್ತಕಮ್ । ಸಂಧ್ಯಾಸ್ಯಾವಸ್ತತೋ ಬ್ರೂಹಿ ತೇನ ವಿದ್ಯಾಂ ಚ ನೌದ್ವಿಜ । ತಸ್ಮಿ- ನ್ನಿಂದ್ರೇಣ ಸಂಛಿನ್ನೇ ಪುನಸ್ಸಂಧಾಯ ಮಸ್ತಕಮ್ । ನಿಜಂ ತೇ ದಕ್ಷಿಣಾಂ ದತ್ವಾ ಗಮಿಷ್ಯಾವೋ ಯಥಾತಥಮ್। ಏತಚ್ಛ್ರುತ್ವಾ ತತೋವಾಚ ದಧ್ಯಙ್ಙಾಥರ್ವಣ ಸ್ತಯೋಃ । ಪ್ರವರ್ಗ್ಯಂ ಬ್ರಹ್ಮವಿದ್ಯಾಂ ಚ ಸತ್ಕೃತೋಽಸತ್ಯ ಶಂಕಿತಃ ॥

(ಭಾವಾರ್ಥದೀಪಿಕಾ)

ಅನಂತರ ದೇವತೆಗಳು ದಧೀಚಿಮಹರ್ಷಿಗಳ ಬಳಿಗೆ ಹೋಗಿ ಶ್ರೀಭಗವಂತನು ಆದೇಶನೀಡಿದ್ದರ ಪ್ರಕಾರ ಅವರನ್ನು ಬೇಡಿದರು. ಆ ಪ್ರಾರ್ಥನೆಯನ್ನು ಕೇಳಿ ಮಹರ್ಷಿಗಳಿಗೆ ಆನಂದವಾಯಿತು. ಅವರು ನಗುತ್ತಾ ದೇವತೆಗಳಿಗೆ ಹೀಗೆಂದರು :

"ಎಲೈ ದೇವತೆಗಳೇ! ಪ್ರಾಣಿಗಳಿಗೆ ಸಾಯುವ ಸಮಯದಲ್ಲಿ ಎಷ್ಟು ಕಷ್ಟವಾಗುವುದು?–ಎನ್ನುವುದು ಬಹುಶಃ ನಿಮಗೆ ಗೊತ್ತಿಲ್ಲವೆಂದು ಕಾಣು ತ್ತದೆ. ಪ್ರಜ್ಞೆ ಇರುವವರೆಗೂ ಅವು ಅತ್ಯಂತವಾಗಿ ಪೀಡೆಯನ್ನು ಅನುಭವಿ ಸುತ್ತಾ ಕಡೆಗೆ ಮೂರ್ಛೆಹೋಗಿಬಿಡುವುವು. ಜಗತ್ತಿನಲ್ಲಿ ಬದುಕಿರಬೇಕೆಂದು ಬಯಸುವ ಜೀವಿಗಳಿಗೆ ಶರೀರವೆಂಬುದು ಅತ್ಯಂತ ಅಮೂಲ್ಯವೂ, ಪ್ರಿಯತಮವೂ, ಅಭೀಷ್ಟವೂ ಆದ ವಸ್ತುವಾಗಿರುತ್ತದೆ. ಹೀಗಿರುವಾಗ ಸ್ವಯಂ ಶ್ರೀಭಗವಂತನಾದ ವಿಷ್ಣುವೇ ಜೀವನನ್ನು ಕುರಿತು–'ನಿನ್ನ ಶರೀರ ವನ್ನು ಕೊಟ್ಟುಬಿಡು'–ಎಂದು ಕೇಳಿದರೂ ಕೂಡ ಅದನ್ನು ಕೊಡುವಂತಹ ಸಾಹಸವನ್ನು ಯಾವ ಪ್ರಾಣಿಯು ತಾನೇ ಮಾಡೀತು?"

ದೇವತೆಗಳು ಮಹರ್ಷಿಗಳಿಗೆ ಹೀಗೆ ಉತ್ತರಿಸಿದರು :

ಕಿಂ ನು ತದುಸ್ತ್ಯಜಂ ಬ್ರಹ್ಮನ್ಪುಂಸಾಂ ಭೂತಾನುಕಮ್ಪಿನಾಮ್ ।
ಭವದ್ವಿಧಾನಾಂ ಮಹತಾಂ ಪುಣ್ಯಶ್ಲೋಕೇಡ್ಯಕರ್ಮಣಾಮ್ ॥೫॥

ನನು ಸ್ವಾರ್ಥಪರೋ ಲೋಕೋ ನ ವೇದ ಪರಸಂಕಟಮ್ ।
ಯದಿ ವೇದ ನ ಯಾಚೇತ ನೇತಿ ನಾಹ ಯದೀಶ್ವರಃ ॥೬॥

"ದೊಡ್ಡ ದೊಡ್ಡ ಕೀರ್ತಿಶಾಲಿಗಳಾದ ಮಹಾಪುರುಷರಿಂದಲೂ ಕೂಡ ಹೊಗಳಲ್ಪಡುವ, ಔದಾರ್ಯದಿಂದ ಜೀವರಲ್ಲಿ ದಯೆತೋರಿಸುವಂತಹ ಮಹಾತ್ಮರು ಪ್ರಾಣಿಗಳ ಒಳ್ಳೆಯದಕ್ಕೋಸ್ಕರ ಯಾವುದನ್ನು ಬೇಕಾದರೂ ತ್ಯಾಗಮಾಡಿಬಿಡುವರು. ಅದಕ್ಕಾಗಿ ಅವರು 'ನಾವು ಕೊಡುವುದಿಲ್ಲ' ಎಂದು ಕೈ ಬಿಡುವಂತಹ ಪದಾರ್ಥವು ಯಾವುದು ತಾನೇ ಇದ್ದೀತು?

ಬ್ರಾಹ್ಮಣೋತ್ತಮರೇ! 'ಕೊಡು'–ಎಂದು ಕೇಳುವವರು ಸ್ವಾರ್ಥಿ ಗಳೂ ಆಗಿರುತ್ತಾರೆ. ಅವರಿಗೆ ಕೊಡುವವರ ಕಷ್ಟವೇನೆಂಬುದನ್ನು ವಿಚಾರ ಮಾಡುವ ಬುದ್ಧಿಯೇ ಇರುವುದಿಲ್ಲ. ಅಷ್ಟು ತಿಳಿವಳಿಕೆ ಇದ್ದಿದ್ದರೆ ಅವರು

ಬೇಡುವುದಕ್ಕೇ ಹೋಗುತ್ತಿರಲಿಲ್ಲ. ಹಾಗೆಯೇ ಕೊಡುವವನಿಗೂ ಕೂಡ ಬೇಡುವವರ ಕಷ್ಟವೇನೆಂಬುದು ತಿಳಿಯದು. ಇಲ್ಲದಿದ್ದರೆ ಅವರ ಬಾಯಿಂದ 'ಇಲ್ಲ' ಎಂಬ ಮಾತೇ ಯಾವಾಗಲೂ ಹೊರಡುತ್ತಿರಲಿಲ್ಲ. ಆದ್ದರಿಂದ ನಮ್ಮ ವಿಪತ್ತನ್ನು ತಿಳಿದು ತಾವು ಕೃಪೆಯಿಟ್ಟು ನಮ್ಮ ಬೇಡಿಕೆಯನ್ನು ಈಡೇರಿಸಬೇಕು."

ದಧೀಚಿಮಹರ್ಷಿಗಳು ಅವರಿಗೆ ಹೀಗೆಂದರು :

"ದೇವತೆಗಳೇ! ನಿಮ್ಮ ಬಾಯಿಂದ ಧರ್ಮದ ಮಾತುಗಳನ್ನು ಕೇಳುವುದಕ್ಕೋಸ್ಕರವೇ ನಾನು ನಮ್ಮ ಬೇಡಿಕೆಯ ಬಗೆಗೆ ಉಪೇಕ್ಷೆಯನ್ನು ತೋರಿದೆನು. ಇದೋ ತೆಗೆದುಕೊಳ್ಳಿರಿ. ನಾನು ನನ್ನ ಪ್ರಿಯವಾದ ಶರೀರವನ್ನು ನಿಮಗೋಸ್ಕರ ಈಗಲೇ ಬಿಟ್ಟುಬಿಡುತ್ತೇನೆ. ಒಂದಲ್ಲ ಒಂದು ದಿವಸ ಬಿಟ್ಟುಬಿಡಲೇಬೇಕಾದ ವಸ್ತುವು ತಾನೇ ಇದು?

ಯೋಽಧ್ರುವೇಣಾತ್ಮನಾ ನಾಥಾ ನ ಧರ್ಮಂ ನ ಯಶಃ ಪುಮಾನ್ ।
ಈಹೇತ ಭೂತದಯಯಾ ಸ ಶೋಚ್ಯಃ ಸ್ಥಾವರೈರಪಿ ॥೮॥

ಎಲೈ ದೇವಶಿರೋಮಣಿಗಳೇ! ಅಳಿಯುವ ಸ್ವಭಾವವುಳ್ಳ ಈ ದೇಹವನ್ನು ದುಃಖದಲ್ಲಿರುವ ಪ್ರಾಣಿಗಳ ಮೇಲೆ ದಯೆತೋರಿ ಯಾವನು ಮುಖ್ಯವಾಗಿ ಧರ್ಮಸಂಪಾದನೆಗೋಸ್ಕರವೂ ಮತ್ತು ಗೌಣವಾಗಿ ಕೀರ್ತಿ ಸಂಪಾದನೆಗೋಸ್ಕರವೂ ಬಿಡುವುದಿಲ್ಲವೋ–ಆತನು ಗಿಡ-ಮರಗಳಿಗಿಂತಲೂ ಕೀಳುಮಟ್ಟದವನು.

ಏತಾವಾನವ್ಯಯೋ ಧರ್ಮಃ ಪುಣ್ಯಶ್ಲೋಕೈರುಪಾಸಿತಃ ।
ಯೋ ಭೂತಶೋಕಹರ್ಷಾಭ್ಯಾಮಾತ್ಮಾ ಶೋಚತಿ ಹೃಷ್ಯತಿ ॥೯॥

ಪುಣ್ಯವಾದ ಕೀರ್ತಿಯುಳ್ಳ ಬಹಳ ದೊಡ್ಡ ದೊಡ್ಡ ಮಹಾತ್ಮರು ಈ ಅವಿನಾಶಿಯಾದ ಧರ್ಮವನ್ನು ಉಪಾಸನೆಮಾಡಿದ್ದಾರೆ. ಆ ಧರ್ಮದ ಸ್ವರೂಪವೇನು?–ಎಂದರೆ ಮನುಷ್ಯನು ಯಾವುದೇ ಪ್ರಾಣಿಗೆ ದುಃಖವಾದರೂ ತಾನು ಅದರಿಂದ ದುಃಖಗೊಳ್ಳಬೇಕು. ಯಾವುದೇ ಪ್ರಾಣಿಯು ಸುಖಪಟ್ಟರೂ ಅದರಿಂದ ತಾನು ಸುಖವನ್ನು ಅನುಭವಿಸಬೇಕು–ಎಂಬುದಿಷ್ಟೇ.

ಅಹೋ ದೈನ್ಯಮಹೋ ಕಷ್ಟಂ ಪಾರಕ್ಯೈಃ ಕ್ಷಣಭಙ್ಗುರೈಃ ।
ಯನ್ನೋಪಕುರ್ಯಾದಸ್ವಾರ್ಥೈರ್ಮರ್ತ್ಯಃ ಸ್ವಜ್ಞಾತಿವಿಗ್ರಹೈಃ ॥

ಜಗತ್ತಿನಲ್ಲಿರುವ ಹಣ, ಮಡದಿ-ಮಕ್ಕಳೇ ಮುಂತಾದ ಸ್ವಜನರು, ಶರೀರ–ಇವೇ ಮುಂತಾದ ಎಲ್ಲ ಪದಾರ್ಥಗಳೂ ಕ್ಷಣಿಕವೇ ಆಗಿವೆ. ಇವು ಯಾವುವೂ ತನ್ನ ಕೆಲಸಕ್ಕೆ ಬರುವುದಿಲ್ಲ. ಕೊನೆಯಲ್ಲಿ ಇತರರ ಉಪಯೋಗಕ್ಕೇ ಬರುವುವು. ಆದರೂ ಅಯ್ಯೋ! ಎಂದಾದರೂ ಒಂದು ದಿನ ಸಾಯಲೇಬೇಕಾಗಿರುವ ಧರ್ಮವುಳ್ಳ ಮನುಷ್ಯನು ಇವುಗಳ ಮೂಲಕ ಪರೋಪಕಾರವನ್ನು ಮಾಡುವುದಿಲ್ಲವಲ್ಲಾ! ಎಂತಹ ಕಾರ್ಪಣ್ಯದ ವಿಷಯ! ಎಂತಹ ದುಃಖದ ವಿಷಯ ಇದು!"

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಎಲೈ ಭರತಕುಲಲಲಾಮನೇ! ಅಥರ್ವವೇದಜ್ಞರಾದ ದಧೀಚಿ ಮಹರ್ಷಿಗಳು ಹೀಗೆ ನಿಶ್ಚಯಮಾಡಿ ತಮ್ಮನ್ನು ಪರಬ್ರಹ್ಮಪರಮಾತ್ಮನಲ್ಲಿ ಲಯಗೊಳಿಸಿದವರಾಗಿ ತಮ್ಮ ಸ್ಥೂಲದೇಹವನ್ನು ತೊರೆದುಬಿಟ್ಟರು. ಆಗ ಅವರ ಇಂದ್ರಿಯ, ಪ್ರಾಣ, ಮನಸ್ಸು ಮತ್ತು ಬುದ್ಧಿ–ಎಲ್ಲವೂ ಸಂಯಮದಲ್ಲಿದ್ದುವು. ದೃಷ್ಟಿಯು ಪರಮಾತ್ಮತತ್ತ್ವಮಯವಾಗಿ ಬಿಟ್ಟಿದ್ದಿತು. ಸಾಂಸಾರಿಕವಾದ ಎಲ್ಲ ಕಟ್ಟುಗಳನ್ನೂ ಅವರು ಕತ್ತರಿಸಿ ಹಾಕಿಬಿಟ್ಟಿದ್ದರು. ಅದರಿಂದಲೇ ಅವರು ಶ್ರೀಭಗವಂತನಲ್ಲಿ ಅತ್ಯಂತಯೋಗವನ್ನು ಹೊಂದಿ ಆತನಲ್ಲಿ ನೆಲೆಗೊಂಡಿದ್ದಾಗ–ದೇಹವು ಯಾವಾಗ ಕಳಚಿಕೊಂಡಿತು ಎಂಬುದೇ ಅವರ ಅರಿವಿಗೆ ಬರಲಿಲ್ಲ. (ಶ್ಲೋಕ 11-12)

ಅನಂತರ ಇಂದ್ರನು ಶ್ರೀಭಗವಂತನ ಶಕ್ತಿ-ತೇಜಸ್ಸುಗಳಿಂದ ಕೂಡಿದವನಾಗಿ ಬಲ-ಪೌರುಷಗಳ ಪರಮಾವಧಿಯನ್ನು ಏರಿದನು. ಆಗ ವಿಶ್ವಕರ್ಮನು ದಧೀಚಿಮುನಿಗಳ ಮೂಳೆಗಳಿಂದ ವಜ್ರಾಯುಧವನ್ನು ನಿರ್ಮಿಸಿ ಇಂದ್ರನಿಗೆ ಕೊಟ್ಟನು. ಅದನ್ನು ಕೈಯ್ಯಲ್ಲಿ ಹಿಡಿದುಕೊಂಡು ಮಹೇಂದ್ರನು ಐರಾವತವನ್ನು ಏರಿದನು. ಅವನೊಡನೆ ಇತರ ದೇವತೆಗಳೂ ಯುದ್ಧಕ್ಕೆ ಸಿದ್ಧರಾದರು. ದೊಡ್ಡ-ದೊಡ್ಡ ಋಷಿ-ಮುನಿಗಳು ಇಂದ್ರನನ್ನು ಸ್ತುತಿಸತೊಡಗಿದರು. ಅವೆಲ್ಲದರಿಂದಲೂ ಉತ್ಸಾಹಗೊಂಡ ಇಂದ್ರನು ಮೂರು

ಲೋಕಗಳನ್ನೂ ಸಂತೋಷಪಡಿಸುತ್ತಾ ವೃತ್ರಾಸುರನನ್ನು ಸಂಹಾರ ಮಾಡುವುದಾಗಿ ಸಂಕಲ್ಪಮಾಡಿ, ತನ್ನ ಸರ್ವಶಕ್ತಿಗಳನ್ನೂ ಸಂಗ್ರಹ ಮಾಡಿಕೊಂಡು ಕ್ರೋಧದಿಂದ ಉದ್ದೀಪಿತನಾಗಿ–ಅಂತಕನ ಮೇಲೆ ಎರಗಿದ ಸಾಕ್ಷಾತ್ ರುದ್ರದೇವರಂತೆ–ವೃತ್ರಾಸುರನ ಮೇಲೆ ಮುತ್ತಿಗೆ ಹಾಕಿದನು. ವೃತ್ರಾಸುರನೂ ಕೂಡ ದೈತ್ಯಸೇನಾಪತಿಗಳ ದೊಡ್ಡ ಸೈನ್ಯದೊಡನೆ ಶತ್ರುವನ್ನು ಎದುರಿಸಿ ನಿಂತನು. (ಶ್ಲೋಕ 13-15)

ನರ್ಮದಾನದಿಯ ದಡದಲ್ಲಿ ದೇವಾಸುರರ ಭಯಂಕರವಾದ ಯುದ್ಧವು ನಡೆಯಿತು. ಈಗ ನಡೆಯುತ್ತಿರುವ ವೈವಸ್ವತಮನ್ವಂತರಕ್ಕೆ ಹಿಂದಿನ ಚತುರ್ಯುಗದ ತ್ರೇತಾಯುಗವು ಆರಂಭವಾದ ಸಮಯದಲ್ಲಿ ಆ ಸಂಗ್ರಾಮವು ನಡೆಯಿತು. ಆಗ ದೇವರಾಜನಾದ ಇಂದ್ರನು ಕೈಯಲ್ಲಿ ವಜ್ರವನ್ನು ಹಿಡಿದು ರುದ್ರರು, ವಸುಗಳು, ಆದಿತ್ಯರು, ಅಶ್ವಿನೀದೇವತೆಗಳು, ಪಿತೃಗಣಗಳು, ಅಗ್ನಿಗಳು, ಮರುದ್ದೇವತಾಗಣಗಳು, ಋಭುದೇವತಾಗಣ ಗಳು, ಸಾಧ್ಯರ ಗಣಗಳು ಮತ್ತು ವಿಶ್ವೇದೇವತೆಗಳು–ಇವರೇ ಮುಂತಾದವ ರಿಂದ ಒಡಗೂಡಿ ಮಹಾತೇಜಸ್ಸಿನಿಂದ ಬೆಳಗುತ್ತಿದ್ದನು. ವೃತ್ರಾಸುರನೇ ಮುಂತಾದ ದೈತ್ಯರು ಆತನು ಮುಂದೆ ಬರುತ್ತಿರುವುದನ್ನು ಕಂಡು ಮತ್ತೂ ಕ್ರುದ್ಧರಾದರು. ನಮುಚಿ, ಶಂಬರ, ಅನರ್ವಾ, ದ್ವಿಮೂರ್ಧಾ, ಋಷಭ, ಅಂಬರ, ಹಯಗ್ರೀವ, ಶಂಕುಶಿರಸ, ವಿಪ್ರಚಿತ್ತಿ, ಅಯೋಮುಖ, ಪುಲೋಮಾ, ವೃಷಪರ್ವಾ, ಪ್ರಹೇತಿ, ಹೇತಿ, ಉತ್ಕಲ, ಸುಮಾಲಿ, ಮಾಲಿ– ಇವರೇ ಮುಂತಾದ ಸಾವಿರಾರು ಮಂದಿ ದೈತ್ಯ-ದಾನವರೂ ಮತ್ತು ಯಕ್ಷ ರಾಕ್ಷಸರೂ ಚಿನ್ನದಿಂದ ಮಾಡಿದ ಆಭರಣ-ಉಪಕರಣಗಳಿಂದ ಕೂಡಿ ಯುದ್ಧಕ್ಕೆ ಬಂದು ಇಂದ್ರನ ಸೈನ್ಯವು ಮುಂದಕ್ಕೆ ನುಗ್ಗದಂತೆ ತಡೆಯ ತೊಡಗಿದರು. ಈಗ ದೇವತೆಗಳ ಸೇನೆಯು ಮೃತ್ಯುವಿಗೂ ಜಯಿಸಲು ಅಸಾಧ್ಯವಾಗಿತ್ತು. ಆದರೂ ಆ ದುರಹಂಕಾರಿಗಳಾದ ಅಸುರರು ಸಿಂಹ ನಾದಗಳನ್ನು ಮಾಡುತ್ತಾ ಗಾಬರಿಗೊಳ್ಳದೇ ದೇವಸೇನೆಯನ್ನು ಪ್ರಹರಿಸ ತೊಡಗಿದರು. ಅವರು ಗದೆ, ಪರಿಘ, ಬಾಣ, ಪ್ರಾಸ, ಮುದ್ಗರ, ತೋಮರ, ಶೂಲ, ಗಂಡುಗೊಡಲಿ, ಕತ್ತಿ, ಶತಘ್ನೀ (ಗುಂಡುಕೋವಿ,) ಭುಶುಂಡಿ-

ಇವೇ ಮುಂತಾದ ಅಸ್ತ್ರ-ಶಸ್ತ್ರಗಳ ಮಳೆಯಿಂದ ದೇವತೆಗಳನ್ನು ಎಲ್ಲ ಕಡೆ ಗಳಿಂದಲೂ ಮುಚ್ಚಿಬಿಟ್ಟರು. ಮೋಡಗಳು ಮುಚ್ಚಿರುವಾಗ ಆಕಾಶದ ನಕ್ಷತ್ರಗಳು ಕಾಣದೇ ಹೋಗುವ ರೀತಿಯಲ್ಲಿ ನಾಲ್ಕು ಕಡೆಗಳಿಂದಲೂ ಒಂದರ ಮೇಲೊಂದರಂತೆ ಪ್ರಯೋಗಿಸಲ್ಪಡುತ್ತಿದ್ದ ಬಾಣಗಳ ಸುರಿಮಳೆಯಿಂದ ಮುಚ್ಚಿಹೋದ ದೇವತೆಗಳು ಕಾಣಿಸದೇ ಹೋದರು. ಆದರೆ ಆ ಶಸ್ತ್ರಾಸ್ತ್ರಗಳ ಮಳೆಯು ದೇವತೆಗಳನ್ನು ಮುಟ್ಟಲು ಸಾಧ್ಯವೇ ಆಗಲಿಲ್ಲ. ಏಕೆಂದರೆ : ಅವರು ತಮ್ಮ ಕೈಚಳಕದಿಂದ ಅವುಗಳನ್ನು ಆಕಾಶದಲ್ಲಿಯೇ ಸಾವಿರಾರು ತುಂಡುಗಳಾಗುವಂತೆ ಕತ್ತರಿಸಿಬಿಟ್ಟರು. ತಮ್ಮ ಅಸ್ತ್ರ-ಶಸ್ತ್ರಗಳೆಲ್ಲವೂ ಮುಗಿದುಹೋಗಲು ಅಸುರರು ದೇವತೆಗಳ ಸೇನೆಯ ಮೇಲೆ ಪರ್ವತಗಳ ಶಿಖರಗಳನ್ನೂ, ವೃಕ್ಷಗಳನ್ನೂ, ಶಿಲೆಗಳನ್ನೂ ಸುರಿಸತೊಡಗಿದರು. ಆದರೆ ದೇವತೆಗಳು ಅವುಗಳನ್ನೂ ಹಿಂದಿನಂತೆಯೇ ತುಂಡರಿಸಿ ಹಾಕಿದರು.

(ಶ್ಲೋಕ 16-26)

ಹೀಗೆ ತಾವು ಸುರಿಸಿದ ಲೆಕ್ಕಿಸಲಾಗದಷ್ಟು ಶಸ್ತ್ರಾಸ್ತ್ರಗಳೆಲ್ಲವೂ ದೇವತೆ ಗಳಿಗೆ ಏನೂ ತೊಂದರೆಯನ್ನು ಮಾಡಲಾಗದೇ ಇರುವುದನ್ನೂ ಮರಗಳು, ಬಂಡೆಗಳು ಮತ್ತು ಪರ್ವತಗಳ ಶಿಖರಗಳಿಂದ ದೇವತೆಗಳ ಶರೀರದಲ್ಲಿ ಸ್ವಲ್ಪವೂ ಗಾಯದ ಗೆರೆಯೂ ಕೂಡ ಆಗದೇ ಅವರೆಲ್ಲರೂ ಕುಶಲರಾಗಿಯೇ ಇರುವುದನ್ನೂ ಕಂಡು ಅಸುರರಿಗೆ ತುಂಬಾ ಹೆದರಿಕೆಯಾಯಿತು. ಕ್ಷುದ್ರಮನುಷ್ಯರು ಪ್ರಯೋಗಿಸುವ ಕಠೋರವೂ, ಅಮಂಗಲಕರವೂ ಆದ ಕೆಟ್ಟಮಾತುಗಳು ಶ್ರೀಕೃಷ್ಣಪರಮಾತ್ಮನಿಂದ ಸಂರಕ್ಷಿತರಾಗಿರುವ ಭಕ್ತರ ಮೇಲೆ ಎಳ್ಳಷ್ಟೂ ಪ್ರಭಾವ ಬೀರುವುದಿಲ್ಲವಲ್ಲವೇ! ಹಾಗೆಯೇ ದೈತ್ಯರು ದೇವತೆಗಳನ್ನು ಪರಾಜಯಗೊಳಿಸಲು ಮಾಡಿದ ಪ್ರಯತ್ನಗಳೆಲ್ಲವೂ ಯಾವ ಪರಿಣಾಮವನ್ನೂ ಬೀರದೇ ವ್ಯರ್ಥವಾದುವು. ತಮ್ಮ ಪ್ರಯತ್ನಗಳು ನಿಷ್ಫಲ ವಾದುದನ್ನು ಕಂಡು ಶ್ರೀಭಗವಂತನಿಗೆ ವಿಮುಖರಾದ ಆ ದೈತ್ಯರು ಉತ್ಸಾಹ ಗುಂದಿದರು. ಅವರ ಪರಾಕ್ರಮದ ಗರ್ವವು ನುಚ್ಚುನೂರಾಯಿತು. ತಮ್ಮ ಅಧಿಪತಿಯಾದ ವೃತ್ರಾಸುರನನ್ನು ರಣರಂಗದಲ್ಲಿಯೇ ಬಿಟ್ಟು ಎಲ್ಲರೂ ಓಡಿ ಹೋಗತೊಡಗಿದರು. ಏಕೆಂದರೆ : ದೇವತೆಗಳು ಅವರ ಬಲ-ಪೌರುಷ ಗಳೆಲ್ಲವನ್ನೂ ಸೆಳೆದುಕೊಂಡುಬಿಟ್ಟಿದ್ದರು. ತನ್ನ ಅನುಯಾಯಿಗಳಾದ ದೈತ್ಯ

ವೀರರು ಓಡಿಹೋಗುತ್ತಿರುವುದನ್ನೂ ಮತ್ತು ತನ್ನ ಸೇನೆಯು ಚೆಲ್ಲಾಪಿಲ್ಲಿಯಾಗುತ್ತಿರುವುದನ್ನೂ ಕಂಡು ಧೀರ-ವೀರನಾದ ವೃತ್ರಾಸುರನಿಗೆ ನಗುವು ಬಂದಿತು. ಆ ವೀರಶಿರೋಮಣಿಯು ದೈತ್ಯವೀರರನ್ನು ಸಮಯಕ್ಕೆ ತಕ್ಕ ವೀರೋಚಿತವಾದ ವಾಣಿಯಿಂದ ಹುರಿದುಂಬಿಸುತ್ತಾ ಅವರಿಗೆ ಹೀಗೆಂದನು :

"ಎಲೈ ವಿಪ್ರಚಿತ್ತಿಯೇ! ನಮುಚಿಯೇ! ಪುಲೋಮನೇ! ಮಯನೇ! ಅನರ್ವನೇ! ಶಂಬರನೇ! ನನ್ನ ಮಾತನ್ನು ಕೇಳಿರಿ.

(ಶ್ಲೋಕ 27-31)

ಜಾತಸ್ಯ ಮೃತ್ಯುರ್ಧ್ರುವ ಏಷ ಸರ್ವತಃ
ಪ್ರತಿಕ್ರಿಯಾ ಯಸ್ಯ ನ ಚೇಹ ಕ್ಲೃಪ್ತಾ ।
ಲೋಕೋ ಯಶಶ್ಚಾಥ ತತೋ ಯದಿ ಹ್ಯಮುಂ
ಕೋ ನಾಮ ಮೃತ್ಯುಂ ನ ವೃಣೀತ ಯುಕ್ತಮ್ ॥೩೨॥

ಹುಟ್ಟಿದವರೆಲ್ಲರೂ ಒಂದಲ್ಲ ಒಂದು ದಿವಸ ಸಾಯಲೇಬೇಕು. ಈ ಜಗತ್ತಿನಲ್ಲಿ ಮೃತ್ಯುವಿನ ದೆಸೆಯಿಂದ ತಪ್ಪಿಸಿಕೊಂಡು ಹೋಗಲು ಯಾವ ಉಪಾಯವನ್ನೂ ಸೃಷ್ಟಿಸಿಲ್ಲ. ಹೀಗಿರುವಾಗ (ಯುದ್ಧದಲ್ಲಿ ಕಾದಾಡುತ್ತಾ) ಮಡಿಯುವುದರಿಂದ ಸ್ವರ್ಗವೇ ಮುಂತಾದ ಲೋಕಗಳೂ ಮತ್ತು ಕೀರ್ತಿಯೂ ದೊರೆಯುವ ಪಕ್ಷದಲ್ಲಿ ಅಂತಹ ಮೃತ್ಯುವನ್ನು ಯಾವ ಬುದ್ಧಿವಂತನು ತಾನೇ ಸ್ವಾಗತಿಸುವುದಿಲ್ಲ?

ದ್ವೌ ಸಂಮತಾವಿಹ ಮೃತ್ಯೂ ದುರಾಪೌ
ಯದ್ಬ್ರಹ್ಮಸಂಧಾರಣಯಾ ಜಿತಾಸುಃ ।
ಕಲೇವರಂ ಯೋಗರತೋ ವಿಜಹ್ಯಾ-
ದ್ಯದಗ್ರಣೀರ್ವೀರಶಯೇಽನಿವೃತ್ತಃ ॥೩೩॥

ಲೋಕದಲ್ಲಿ ಎರಡು ರೀತಿಗಳಲ್ಲಿ ಮೃತ್ಯುವನ್ನು ಪಡೆಯುವುದು ತುಂಬಾ ಶ್ರೇಷ್ಠ ಮತ್ತು ಅವು ಒದಗಿಬರುವುದು ತುಂಬಾ ಕಷ್ಟ—ಎಂದು ಜ್ಞಾನಿಗಳು ಹೇಳುತ್ತಾರೆ. ಈ ರೀತಿಗಳು ಯಾವುವೆಂದರೆ : ಒಂದು—ಪ್ರಾಣಗಳನ್ನು ಸಂಯಮಮಾಡಿ ಪರಮಾತ್ಮನನ್ನೇ ಚಿಂತಿಸುತ್ತಾ ದೇಹವನ್ನು ತೊರೆಯುವುದು. ಮತ್ತೊಂದು ಯುದ್ಧಭೂಮಿಯಲ್ಲಿ ಬೆನ್ನು ತೋರಿಸದೇ ಮುಂದೆ

ನಿಂತು ಹೋರಾಡುತ್ತಾ ಮಡಿಯುವುದು. ಇಂತಹ ಒಳ್ಳೆಯ ಅವಕಾಶವನ್ನು ನೀವು ಏಕೆ ಕಳೆದುಕೊಳ್ಳುತ್ತಿದ್ದೀರಿ?"

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಷಷ್ಠಸ್ಕಂಧದ ೧೦ನೆಯ ಅಧ್ಯಾಯವು ಮುಗಿಯಿತು.

ಷಷ್ಠಸ್ಕಂಧ ೧೧ನೆಯ ಅಧ್ಯಾಯ

ವೃತ್ರಾಸುರನ ವೀರವಾಣಿ : ಆತನು ಮಾಡಿದ ಭಗವತ್‌ಸ್ತುತಿ

ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

ತ ಏವಂ ಶಂಸತೋ ಧರ್ಮಂ ವಚಃ ಪತ್ಯುರಚೇತಸಃ ।
ನೈವಾಗೃಹ್ಣನ್ಭಯತ್ರಸ್ತಾಃ ಪಲಾಯನಪರಾ ನೃಪ ॥೧॥

ಎಲೈ ರಾಜೇಂದ್ರನೇ! ಬೆದರಿ ಗಾಬರಿಗೊಂಡು ಓಡಿಹೋಗುತ್ತಿದ್ದ ಅಸುರರ ಸೇನೆಯು ವಿವೇಕಪ್ರಜ್ಞೆಯನ್ನು ಕಳೆದುಕೊಂಡಿತ್ತು. ಅದರಿಂದ ಅದು ತಮ್ಮ ಒಡೆಯನಾದ ವೃತ್ರಾಸುರನು ಹೇಳಿದ ಯುದ್ಧಧರ್ಮದ ಮಾತುಗಳನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ.

'ದೇವತೆಗಳಿಗೆ ಕಾಲವು ಅನುಕೂಲವಾಗಿದ್ದ ಕಾರಣ ಅವರು ಹಾಗೆ ಅಸುರಸೇನೆಯನ್ನು ಧ್ವಂಸಮಾಡುತ್ತಿದ್ದಾರೆ ಮತ್ತು ಅಸುರರ ಸೈನ್ಯವು ಅನಾಯಕವಾಗಿದೆಯೋ ಎಂಬಂತೆ ಚೆಲ್ಲಾಪಿಲ್ಲಿಯಾಗುತ್ತಿದೆ'–ಎಂಬುದನ್ನು ಕಂಡು ವೃತ್ರಾಸುರನಿಗೆ ಮಿತಿಮೀರಿದ ಕ್ರೋಧವುಂಟಾಯಿತು. ಆತನಿಗೆ ದೇವತೆಗಳ ಉತ್ಸಾಹವನ್ನೂ ಮತ್ತು ತನ್ನ ಸೇನೆಯ ದೈನ್ಯವನ್ನೂ ತಡೆದು ಕೊಳ್ಳುವುದು ಸಾಧ್ಯವಾಗಲಿಲ್ಲ. ಆಗ ಆತನು ಬಲಾತ್ಕಾರದಿಂದ ದೇವಸೇನೆ ಯನ್ನು ಮುನ್ನುಗ್ಗದಂತೆ ತಡೆದು ಗದರಿಸುತ್ತಾ ಹೀಗೆಂದನು :

(ಶ್ಲೋಕ 2-3)

"ಕ್ಷುದ್ರರಾದ ದೇವತೆಗಳೇ! ಯುದ್ಧಭೂಮಿಯಲ್ಲಿ ಬೆನ್ನು ತೋರಿಸಿ ಓಡಿಹೋಗುತ್ತಿ ರುವ ಹೇಡಿಗಳ ಮೇಲೆ ಹಿಂದುಗಡೆಯಿಂದ ಏಟುಹಾಕುವುದ ರಿಂದ ಏನು ಲಾಭ? ಈ ಅಂಜುಪುರುಕರು ಒಳ್ಳೆ ತಂದೆ-ತಾಯಿಗಳ ಮಕ್ಕಳೇ ಅಲ್ಲ. ಅವರ ದೇಹದಿಂದ ಹೊರದೂಡಲ್ಪಟ್ಟ ಮಲ-ಮೂತ್ರಗಳಿಗೆ ಸಮಾನ

ರಾದವರು. ತಮ್ಮನ್ನು ಶೂರ-ವೀರರೆಂದು ತಿಳಿದುಕೊಂಡಿರುವ ನಿಮ್ಮಂತಹ ಪುರುಷರು ಇಂತಹ ಹೇಡಿಗಳನ್ನು ಹೊಡೆದು ಕೊಂದುಹಾಕಿದರೆ ಅದರಿಂದ ಹೊಗಳಿಕೆಯೇನೂ ಬರುವುದಿಲ್ಲ. ಸ್ವರ್ಗವೂ ದೊರೆಯುವುದಿಲ್ಲ. ನಿಮ್ಮ ಮನಸ್ಸಿನಲ್ಲಿ ಯುದ್ಧಮಾಡುವ ಶಕ್ತಿ, ಉತ್ಸಾಹಗಳೇನಾದರೂ ಇದ್ದು ಲೋಕದಲ್ಲಿ ಬದುಕಿ ವಿಷಯಸುಖಗಳನ್ನು ಅನುಭವಿಸುವ ಆಸೆ ಇಲ್ಲದೇ ಇದ್ದ ಪಕ್ಷದಲ್ಲಿ–ಸ್ವಲ್ಪಹೊತ್ತು ನನ್ನ ಮುಂದೆ ನಿಲ್ಲಿರಿ. ಯುದ್ಧದ ರುಚಿಯನ್ನು ಸವಿಯುವಿರಂತೆ.''

ಮಹಾವೀರಾಗ್ರಣಿಯಾದ ವೃತ್ರಾಸುರನು ಕ್ರೋಧದಿಂದ ಬೆಂಕಿಯ ಕಿಡಿಯನ್ನು ಕಾರುತ್ತಾ ತನ್ನ ಭೀಕರರೂಪದಿಂದಲೂ ಮತ್ತು ವಾಣಿಯಿಂದಲೂ ದೇವತೆಗಳನ್ನು ಹೀಗೆ ಹೆದರಿಸುತ್ತಾ ಗಟ್ಟಿಯಾಗಿ ಸಿಂಹನಾದವನ್ನು ಮಾಡಿದನು. ಆ ಗರ್ಜನೆಯನ್ನು ಕೇಳಿದೊಡನೆಯೇ ದೇವತೆಗಳು ಪ್ರಜ್ಞೆತಪ್ಪಿದರು. ಸಿಡಿಲಬಡಿತಕ್ಕೆ ಸಿಕ್ಕಿದವರಂತೆ ಅವರೆಲ್ಲರೂ ಮೂರ್ಛಿತರಾಗಿ ಭೂಮಿಯ ಮೇಲೆ ಕುಸಿದುಬಿದ್ದರು. ಮತ್ತೇರಿದ ಗಜರಾಜನು ಜೊಂಡುಹುಲ್ಲಿನ ಕಾಡನ್ನು ತುಳಿದುಹಾಕುವಂತೆ–ಯುದ್ಧೋತ್ಸಾಹದಿಂದ ಕೊಬ್ಬಿದ್ದ ಆ ವೃತ್ರಾಸುರನು ಕೈಯಲ್ಲಿ ತ್ರಿಶೂಲವನ್ನು ಹಿಡಿದುಕೊಂಡು, ಕಣ್ಣುಮುಚ್ಚಿಕೊಂಡು ಮೂರ್ಛಿತರಾಗಿ ಬಿದ್ದಿದ್ದ ದೇವತೆಗಳ ಆ ಸೇನೆಯನ್ನು ಕಾಲುಗಳಿಂದ ಮೆಟ್ಟಿ ಮಡುಹಿದನು. ಆತನ ವೇಗಕ್ಕೆ ಭೂಮಿಯು ನಡುಗತೊಡಗಿತು. ವಜ್ರಪಾಣಿಯಾದ ದೇವರಾಜನಿಗೆ ಅದನ್ನು ಸಹಿಸಲಾಗಲಿಲ್ಲ. ಆತನು ಮತ್ತಷ್ಟು ಕ್ರುದ್ಧನಾಗಿ ಮೇಲೆ ಬೀಳಲು ಬರುತ್ತಿದ್ದ ಆ ಶತ್ರುವಿನ ಮೇಲೆ ದೊಡ್ಡ ಗದಾಯುಧವನ್ನು ಬೀಸಿ ಎಸೆದನು. ಆದರೆ ಆ ವೀರವೃತ್ರನು ಅದು ತನ್ನ ಬಳಿಗೆ ಬರುವುದಕ್ಕೆ ಮೊದಲೇ ಅದನ್ನು ಲೀಲಾಜಾಲವಾಗಿ ತನ್ನ ಎಡಗೈಯಿಂದ ಹಿಡಿದುಬಿಟ್ಟನು. ಅಷ್ಟೇ ಅಲ್ಲ. ಆ ಪರಮಪರಾಕ್ರಮಿಯು ಕೋಪದಿಂದ ಕೆಂಡವಾಗಿ, ಘೋರವಾಗಿ ಗರ್ಜಿಸುತ್ತಾ ಅದೇ ಗದೆಯನ್ನು ಇಂದ್ರನ ವಾಹನವಾದ ಐರಾವತದ ತಲೆಯ ಮೇಲೆ ಬಿರುಸಿನಿಂದ ಬಡಿದನು. ಆತನ ಆ ಶೌರ್ಯವನ್ನು ಎಲ್ಲರೂ 'ಭಲೆ!' ಎಂದು ಹೊಗಳತೊಡಗಿದರು. ವೃತ್ರಾಸುರನು ಬೀಸಿದ ಗದೆಯ ಏಟಿನಿಂದ ಐರಾವತವು–ವಜ್ರದಿಂದ ಬಡಿಯಲ್ಪಟ್ಟ ಪರ್ವತದಂತೆ–ಘಾಸಿಗೊಂಡು ಒದ್ದಾಡತೊಡಗಿತು. ತಲೆಯು

ಒಡೆದುಹೋದುದರಿಂದ ರಕ್ತವನ್ನು ಕಾರುತ್ತಾ ನೋವಿನಿಂದ ನರಳುತ್ತಾ ಆ ಇಂದ್ರವಾಹನವು ತನ್ನ ಮೇಲೆ ಕುಳಿತಿದ್ದ ಪ್ರಭುವಿನೊಡನೆ ಇಪ್ಪತ್ತೆಂಟು ಕೈಯಳತೆಯಷ್ಟು ದೂರ ಹಿಂದಕ್ಕೆ ಸರಿಯಿತು. ತನ್ನ ದಿವ್ಯವಾಹನವು ಮೂರ್ಛೆಗೊಂಡಿದ್ದನ್ನು ಕಂಡು ಇಂದ್ರನಿಗೆ ಮತ್ತಷ್ಟು ಕಳವಳವಾಯಿತು. ಯುದ್ಧಧರ್ಮವನ್ನು ಅರಿತಿದ್ದ ಅಸುರೇಂದ್ರನು ಇಂದ್ರನ ಆ ಸ್ಥಿತಿಯನ್ನು ಕಂಡು ಆಗ ಆತನ ಮೇಲೆ ಮತ್ತೆ ಗದೆಯನ್ನು ಎಸೆಯದೇ ಸುಮ್ಮನಿದ್ದನು. ಈ ವೇಳೆಗೆ ಇಂದ್ರನು ಅಮೃತವು ಸೂಸುತ್ತಿದ್ದ ತನ್ನ ಹಸ್ತದ ಸ್ಪರ್ಶದಿಂದ ರಕ್ತವು ಸೋರುತ್ತಿದ್ದ ತನ್ನ ವಾಹನವಾದ ಐರಾವತದ ನೋವನ್ನು ಗುಣಪಡಿಸಿ ಮತ್ತೆ ಯುದ್ಧಭೂಮಿಗೆ ಬಂದು ಶತ್ರುವನ್ನೆದುರಿಸಿದನು. ತನ್ನ ಅಣ್ಣನಾದ ವಿಶ್ವರೂಪನನ್ನು ಕೊಲೆಮಾಡಿದ, ಶತ್ರುವಾದ ಇಂದ್ರನು ವಜ್ರಹಸ್ತನಾಗಿ ಯುದ್ಧಮಾಡಲು ತನ್ನೆದುರಿಗೆ ನಿಂತಿದ್ದನ್ನು ನೋಡಿ ವೃತ್ರಾಸುರನಿಗೆ ಆತನು ಮಾಡಿದ ಕ್ರೂರವಾದ ಪಾತಕದ ನೆನಪು ಬಂದು ಶೋಕ-ಮೋಹಗಳು ಉಮ್ಮಳಿಸುತ್ತಿದ್ದರೂ ನಸುನಗುತ್ತಾ ಇಂದ್ರನಿಗೆ ಹೀಗೆಂದನು :

"ಎಲೈ ದುರಾತ್ಮನೇ! ಬ್ರಾಹ್ಮಣನೂ ಆಗಿ, ನಿನಗೆ ಗುರುವೂ ಆಗಿ, ನನ್ನ ಅಣ್ಣನೂ ಆಗಿದ್ದ ಮಹಾತ್ಮನನ್ನು ಹತ್ಯೆಮಾಡಿದ ಕೊಲೆಗಡುಕ ಪಾತಕಿಯಾದ, ಶತ್ರುವಾದ ನೀನು ನನ್ನ ಎದುರಿಗೇ ಸಿಕ್ಕಿರುವುದು ನನ್ನ ಭಾಗ್ಯೋದಯವೇ ಸರಿ. ನಿನ್ನ ಈ ಕಠೋರವಾದ ಹೃದಯವನ್ನು ಶೀಘ್ರಾತಿಶೀಘ್ರದಲ್ಲೇ ನನ್ನ ಶೂಲದಿಂದ ಸೀಳಿಹಾಕಿ ಅಣ್ಣನ ಸಾಲವನ್ನು ತೀರಿಸಿಕೊಳ್ಳುತ್ತೇನೆ. ಎಲವೋ ಕ್ರೂರಪಾತಕಿಯೇ! ಬ್ರಾಹ್ಮಣನಾಗಿರುವುದರ ಜೊತೆಗೆ ಯಜ್ಞದಲ್ಲಿ ದೀಕ್ಷಿತನೂ ಆಗಿದ್ದು, ನಿನ್ನ ಗುರುವೇ ಆಗಿದ್ದ, ಆತ್ಮಜ್ಞಾನಿಯೂ ಪಾಪರಹಿತನೂ ಆಗಿದ್ದ ನನ್ನ ಅಣ್ಣನಿಗೆ ನಂಬಿಕೆತೋರಿಸಿ–ಸ್ವರ್ಗವನ್ನು ಬಯಸುವವನು ಯಜ್ಞದಲ್ಲಿ ಪಶುವಿನ ತಲೆಯನ್ನು ಕತ್ತರಿಸುವಂತೆ–ಆತನ ಮೂರು ತಲೆಗಳನ್ನೂ ಖಡ್ಗಕ್ಕೆ ಬಲಿಕೊಟ್ಟಿರುವೆ. ದಯೆಯೇನು, ನಾಚಿಕೆಯೇನು, ಕಾಂತಿಯೇನು, ಕೀರ್ತಿಯೇನು–ಎಲ್ಲ ಪುಣ್ಯಸಂಪತ್ತು ಗಳೂ ನಿನ್ನನ್ನು ತೊರೆದುಹೋಗಿವೆ. ನೀನು ಎಂತೆಂತಹನೀಚಕರ್ಮಗಳನ್ನು ಮಾಡಿದ್ದೀಯೇ–ಎಂದರೆ : ಅದನ್ನು ಮನುಷ್ಯರು ಮಾತ್ರವಲ್ಲದೇ ರಾಕ್ಷಸರು ಕೂಡ ನಿಂದಿಸುತ್ತಾರೆ. ಈಗ ನನ್ನ ತ್ರಿಶೂಲದಿಂದ ನಿನ್ನ ಈ ದುಷ್ಟ

ದೇಹವನ್ನು ತುಂಡರಿಸಿ ಚೆಲ್ಲುವೆನು. ನೀನು ಕಡುಕಷ್ಟದಿಂದ ಸಾಯುವೆ. ನಿನ್ನಂತಹ ಪಾಪಿಯ ದೇಹವನ್ನು ಬೆಂಕಿಯೂ ಸುಡಲಾರದು. ಹದ್ದುಗಳೇ ಅದನ್ನು ಕುಕ್ಕಿಕುಕ್ಕಿ ತಿನ್ನುವುವು. ಈ ಅಜ್ಞಾನಿಗಳಾದ ದೇವತೆಗಳು ನೀಚನೂ–ಘಾತುಕನೂ ಆಗಿರುವ ನಿನ್ನ ಅನುಯಾಯಿಗಳಾಗಿ ಬಂದು ನನ್ನ ಮೇಲೆ ಶಸ್ತ್ರಗಳನ್ನು ಪ್ರಯೋಗಿಸುತ್ತಿದ್ದಾರೆ. ಆದರೆ ನಾನು ತೀಕ್ಷ್ಣವಾದ ನನ್ನ ಈ ತ್ರಿಶೂಲದಿಂದ ಅವರ ಕತ್ತುಗಳನ್ನು ಕತ್ತರಿಸಿಹಾಕಿ ಅವುಗಳ ಮೂಲಕ ಭೈರವನೇ ಮುಂತಾದ ಭೂತಪತಿಗಳಿಗೂ ಆತನ ಗಣಗಳಿಗೂ ಬಲಿಯನ್ನು ಕೊಡುವೆನು. (ಶ್ಲೋಕ 4-17)

ವೀರನೇ! ಇದರ ಬದಲಿಗೆ ನೀನೇ ನನ್ನ ಸೈನ್ಯವನ್ನು ಕತ್ತರಿಸಿಹಾಕಿ ನಿನ್ನ ವಜ್ರಾಯುಧದಿಂದ ನನ್ನ ತಲೆಯನ್ನು ಕತ್ತರಿಸಿಹಾಕುವ ಸಂಭವವೂ ಉಂಟು. ಹಾಗೆಯೇ ಆದರೂ ನನಗೆ ಶ್ರೇಯಸ್ಸೇ. ಏಕೆಂದರೆ : ಆಗ ನಾನು ಪಶು-ಪಕ್ಷಿಗಳಿಗೆ ನನ್ನ ಶರೀರದ ಬಲಿಯನ್ನು ಕೊಟ್ಟು, ಕರ್ಮಗಳ ಬಂಧನ ದಿಂದ ಬಿಡುಗಡೆ ಹೊಂದಿ ಮಹಾಪುರುಷರ ಪಾದಧೂಳಿಯ ಆಶ್ರಯವನ್ನು ಪಡೆಯುವೆನು. ಮಹಾಪುರುಷರು ಹೋಗುವ ಉತ್ತಮೋತ್ತಮವಾದ ಲೋಕಕ್ಕೆ ಹೋಗುವೆನು. ದೇವರಾಜನೇ! ನಾನು ನಿನ್ನ ಶತ್ರುವಾಗಿದ್ದೇನೆ. ನಿನ್ನ ಮುಂದೆಯೇ ನಿಂತಿದ್ದೇನೆ. ಹೀಗಿರುವಾಗ ನೀನು ನನ್ನ ಮೇಲೆ ನಿನ್ನ ಅಮೋಘವಾದ ವಜ್ರಾಯುಧವನ್ನು ಏಕೆ ಪ್ರಯೋಗಿಸುತ್ತಿಲ್ಲ? ನನ್ನ ಗದೆಯು ನಿಷ್ಫಲವಾದಂತೆ ನಿನ್ನ ಈ ವಜ್ರಾಯುಧವೂ ನಿಷ್ಫಲವಾಗಿ ಬಿಡಬಹುದು. ಜಿಪುಣನಲ್ಲಿ ಮಾಡಿದ ಪ್ರಾರ್ಥನೆಯಂತೆ ವ್ಯರ್ಥವಾಗಿಬಿಡ ಬಹುದು–ಎಂದು ಸಂದೇಹಪಡಬೇಡ. ಏಕೆಂದರೆ : ಆ ವಜ್ರವು ಶ್ರೀಹರಿಯ ತೇಜಸ್ಸಿನಿಂದಲೂ ಮತ್ತು ದಧೀಚಿಮಹರ್ಷಿಯ ತಪಸ್ಸಿನಿಂದಲೂ ಶಕ್ತಿ ಪೂರ್ಣವಾಗಿದೆ. ಶ್ರೀಭಗವಂತನಾದ ವಿಷ್ಣುವೂ ನನ್ನನ್ನು ಸಂಹರಿಸಲು ನಿನಗೆ ಆಜ್ಞೆಯನ್ನು ನೀಡಿದ್ದಾನೆ. ಆದುದರಿಂದ ಈಗ ನೀನು ಅದೇ ವಜ್ರದಿಂದಲೇ ನನ್ನನ್ನು ಕೊಂದುಹಾಕು. ಶ್ರೀಹರಿಯು ಯಾವ ಪಕ್ಷದಲ್ಲಿರುತ್ತಾನೆಯೋ ಅಲ್ಲಿ ತಾನೇ ವಿಜಯವೂ, ಸಂಪತ್ತೂ, ಸಮಸ್ತಸದ್ಗುಣಗಳೂ ವಾಸಮಾಡು ತ್ತವೆ. ಎಲೈ ದೇವರಾಜನೇ! ಶ್ರೀಭಗವಂತನಾದ ಸಂಕರ್ಷಣನ ಆಣತಿ ಯಂತೆ ನಾನು ನನ್ನ ಮನಸ್ಸನ್ನು ಆತನ ಅಡಿದಾವರೆಗಳಲ್ಲಿ ಲಯಗೊಳಿಸು

ವೆನು. ನಿನ್ನ ವಜ್ರವು ನನ್ನ ದೇಹವನ್ನು ಮಾತ್ರವಲ್ಲದೇ ವಿಷಯಭೋಗ ರೂಪವಾದ ನನ್ನ ಬಲೆಯನ್ನೂ ಕತ್ತರಿಸಿಹಾಕಿಬಿಡುವುದು. ಆಗ ನಾನು ಈ ಶರೀರವನ್ನು ತ್ಯಜಿಸಿ ಮುನಿಜನಗಳಿಗೆ ಯೋಗ್ಯವಾದ ಗತಿಯನ್ನು ಪಡೆಯುವೆನು. ಶ್ರೀಭಗವಂತನನ್ನು ಅನನ್ಯಭಾವದಿಂದ ಪ್ರೀತಿಸುತ್ತಾ ಅವನ ಸ್ವಜನರೇ ಆಗಿರುವ ಭಕ್ತರಿಗೆ ಆತನು ಸ್ವರ್ಗ, ಭೂಮಿ ಅಥವಾ ಪಾತಾಳಲೋಕಗಳ ಸಂಪತ್ತನ್ನು ಕೊಡುವುದಿಲ್ಲ. ಏಕೆಂದರೆ : ಅವುಗಳಿಂದ ಪರಮಾನಂದವು ದೊರೆಯುವುದೇ ಇಲ್ಲ. ಅದರ ಬದಲಿಗೆ ದ್ವೇಷ, ಉದ್ವೇಗ, ಅಹಂಕಾರ, ಮಾನಸಿಕಪೀಡೆಗಳು, ಕಲಹ, ದುಃಖ ಮತ್ತು ಆಯಾಸಗಳೇ ಬಂದು ಸೇರುವುವು. ಎಲೈ ಇಂದ್ರನೇ! ನಮ್ಮ ಪ್ರಭುವು ತನ್ನ ಭಕ್ತರ ಧರ್ಮ, ಅರ್ಥ ಮತ್ತು ಕಾಮಸಂಬಂಧವಾದ ಪ್ರಯಾಸಗಳನ್ನು ವ್ಯರ್ಥಗೊಳಿಸಿಬಿಡುತ್ತಾನೆ. ನಿಜವಾಗಿ ವಿಚಾರಮಾಡಿ ನೋಡಿದರೆ ಇದರಿಂದ ಶ್ರೀಭಗವಂತನ ಕೃಪೆಯೇ ಸೂಚಿತವಾಗುವುದು. ಏಕೆಂದರೆ : ಆತನ ಇಂತಹ ಕೃಪಾಪ್ರಸಾದವು ಭೌತಿಕವಾಗಿ ದೀನ-ದರಿದ್ರರಾದ ಆತನ ಭಕ್ತರ ಅನುಭವಕ್ಕೆ ಮಾತ್ರ ಗೋಚರವಾಗುವುದು. ಇತರರಿಗೆ ಅದು ಅತ್ಯಂತ ದುರ್ಲಭವೇ ಅಗುವುದು." (ಶ್ಲೋಕ 18-23)

ಅನಂತರ ವೃತ್ರಾಸುರನು ಶ್ರೀಭಗವಂತನನ್ನು ಪ್ರತ್ಯಕ್ಷವಾಗಿ ಅನುಭವಿಸುತ್ತಾ ಆತನಲ್ಲಿ ಹೀಗೆ ಪ್ರಾರ್ಥನೆಮಾಡಿದನು :

ಅಹಂ ಹರೇ ತವ ಪಾದೈಕಮೂಲ-
ದಾಸಾನುದಾಸೋ ಭವಿತಾಸ್ಮಿ ಭೂಯಃ ।
ಮನಃ ಸ್ಮರೇತಾಸುಪತೇರ್ಗುಣಾಂಸ್ತೇ
ಗೃಣೀತ ವಾಕ್ಕರ್ಮ ಕರೋತು ಕಾಯಃ ॥೨೪॥

"ಪ್ರಭೋ! ಶ್ರೀಹರಿಯೇ! ನಾನು ನಿನ್ನ ಅಡಿದಾವರೆಗಳನ್ನೇ ಅನನ್ಯ ಭಾವದಿಂದ ಸೇವೆಮಾಡುವ ಯಾವ ದಾಸರುಂಟೋ–ಅವರಿಗೆ ಮುಂದೆಯೂ ಜನ್ಮ-ಜನ್ಮಾಂತರಗಳಲ್ಲಿಯೂ ಅಡಿಯಾಳಾಗುವಂತೆ ಅನುಗ್ರಹ ಮಾಡು. ನನ್ನ ಮನಸ್ಸು-ಪ್ರಾಣಗಳಿಗೆ ಅಧಿಪತಿಯಾಗಿರುವ ನಿನ್ನ ಕಲ್ಯಾಣ ಗುಣಗಳನ್ನು ನೆನೆಯುತ್ತಿರಲಿ. ನನ್ನ ವಾಣಿಯು–ಅದನ್ನೇ ಗಾನಮಾಡುತ್ತಿರಲಿ ಮತ್ತು ನನ್ನ ಶರೀರವು–ನಿನ್ನ ಸೇವೆಯಲ್ಲೇ ಆಸಕ್ತವಾಗಿರಲಿ.

ನ ನಾಕಪೃಷ್ಠಂ ನ ಚ ಪಾರಮೇಷ್ಠ್ಯಂ
ನ ಸಾರ್ವಭೌಮಂ ನ ರಸಾಧಿಪತ್ಯಮ್ ।
ನ ಯೋಗಸಿದ್ಧೀರಪುನರ್ಭವಂ ವಾ
ಸಮಞ್ಜಸ ತ್ವಾ ವಿರಹಯ್ಯ ಕಾಂಕ್ಷೇ ॥೧೫॥

ಎಲೈ ಸಕಲಸೌಭಾಗ್ಯನಿಧಿಯೇ! ನಾನು ನಿನ್ನನ್ನು ಬಿಟ್ಟು ಸ್ವರ್ಗವನ್ನಾಗಲೀ, ಬ್ರಹ್ಮಲೋಕದ ಆಧಿಪತ್ಯವನ್ನಾಗಲೀ, ಭೂಮಂಡಲದ ಸಾಮ್ರಾಜ್ಯವನ್ನಾಗಲೀ, ರಸಾತಲದ ಏಕಛತ್ರಾಧಿಪತ್ಯವನ್ನಾಗಲೀ, ಯೋಗ ಸಿದ್ಧಿಯನ್ನೇ ಆಗಲೀ–ಯಾವುದನ್ನೂ ಬಯಸೆನು. ಕಡೆಯದಾಗಿ ಮೋಕ್ಷ ವನ್ನು ಕೂಡ ಬಯಸೆನು.

ಅಜಾತಪಕ್ಷಾ ಇವ ಮಾತರಂ ಖಗಾಃ
ಸ್ತನ್ಯಂ ಯಥಾ ವತ್ಸತರಾಃ ಕ್ಷುಧಾರ್ತಾಃ ।
ಪ್ರಿಯಂ ಪ್ರಿಯೇವ ವ್ಯುಷಿತಂ ವಿಷಣ್ಣಾ
ಮನೋಽರವಿನ್ದಾಕ್ಷ ದಿದೃಕ್ಷತೇ ತ್ವಾಮ್ ॥೨೬॥

ಓ ಪುಂಡರೀಕಾಕ್ಷನೇ! ರೆಕ್ಕೆಹುಟ್ಟದೇ ಇರುವ ಹಕ್ಕಿಯ ಮರಿಗಳು ತಮ್ಮ ತಾಯಿಯನ್ನೇ ಹೇಗೆ ಎದುರುನೋಡುತ್ತವೆಯೋ ಹಸಿದ ಕರುಗಳು ತಮ್ಮ ತಾಯಿಯ ಸ್ತನ್ಯವನ್ನು ಕುಡಿಯಲು ಹೇಗೆ ಆತುರಪಡುತ್ತವೆಯೋ ಮತ್ತು ಪತಿಯ ಅಗಲಿಕೆಯಲ್ಲಿರುವ ರಮಣಿಯು ತನ್ನ ಪ್ರಿಯತಮನ ಸಮಾಗಮಕ್ಕಾಗಿ ಹೇಗೆ ಹಾತೊರೆಯುವಳೋ–ಹಾಗೆಯೇ ನನ್ನ ಮನಸ್ಸು ನಿನ್ನ ದರ್ಶನಕ್ಕಾಗಿ ಹಂಬಲಿಸುತ್ತಿದೆಯಪ್ಪಾ.

ಮಮೋತ್ತಮಶ್ಲೋಕಜನೇಷು ಸಖ್ಯಂ
ಸಂಸಾರಚಕ್ರೇ ಭ್ರಮತಃ ಸ್ವಕರ್ಮಭಿಃ
ತ್ವನ್ಮಾಯಯಾತ್ಮಾತ್ಮಜದಾರಗೇಹೇ-
ಷ್ವಾಸಕ್ತಚಿತ್ತಸ್ಯ ನ ನಾಥ ಭೂಯಾತ್ ॥೨೭॥

ಮಹಾಪ್ರಭೋ! ಕರ್ಮವಶದಿಂದ ಸಂಸಾರದ ಚಕ್ರದಲ್ಲಿ ಅಲೆದಾಡು ತ್ತಿರುವ ನನಗೆ ಉತ್ತಮಕೀರ್ತಿಗಳಾದ ನಿನ್ನ ಪ್ರಿಯರಾದ ಭಕ್ತರೊಡನೆ ಸದಾ ಗೆಳೆತನವು ಇರಲಿ. ನಿನ್ನ ಮಾಯೆಯಿಂದ ಯಾರು ದೇಹ, ಮನೆ, ಮಠ,

ಹೆಂಡಿರು-ಮಕ್ಕಳು ಮುಂತಾದವರಲ್ಲೇ ಆಸಕ್ತರಾಗಿರುತ್ತಾರೆಯೋ–ಅವರೊಡನೆ ನನಗೆ ಎಂದಿಗೂ ಯಾವ ರೀತಿಯ ಸಂಬಂಧವೂ ಉಂಟಾಗದಿರಲಿ.”

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಷಷ್ಠಸ್ಕಂಧದ ೧೧ನೆಯ ಅಧ್ಯಾಯವು ಮುಗಿಯಿತು.

ಷಷ್ಠಸ್ಕಂಧ ೧೨ನೆಯ ಅಧ್ಯಾಯ

ವೃತ್ರಾಸುರನ ವಧೆ

ಶ್ರೀಶುಕಮಹರ್ಷಿಗಳು ಹೇಳುತ್ತಿದ್ದಾರೆ :

ಏವಂ ಜಿಹಾಸುರ್ನೃಪ ದೇಹಮಾಜೌ
ಮೃತ್ಯುಂ ವರಂ ವಿಜಯಾನ್ಮನ್ಯಮಾನಃ ।
ಶೂಲಂ ಪ್ರಗೃಹ್ಯಾಭ್ಯಪತತ್ಸುರೇನ್ದ್ರಂ
ಯಥಾ ಮಹಾಪುರುಷಂ ಕೈಟಭೋಽಪ್ಸು ॥೧॥

ಎಲೈ ಪರೀಕ್ಷಿದ್ರಾಜನೇ! ಕೇಳು. ವೃತ್ರಾಸುರನಿಗೆ ರಣಭೂಮಿಯಲ್ಲಿ ದೇಹತ್ಯಾಗಮಾಡುವ ಬಯಕೆಯೇ ಇದ್ದಿತು. ಏತಕ್ಕೆಂದರೆ : ಅವನ ದೃಷ್ಟಿಯಲ್ಲಿ ಇಂದ್ರನ ಮೇಲೆ ಜಯವನ್ನು ಗಳಿಸಿ ಸ್ವರ್ಗವನ್ನು ಪಡೆಯುವುದಕ್ಕಿಂತಲೂ ದೇಹತ್ಯಾಗಮಾಡಿ ಶ್ರೀಭಗವಂತನನ್ನು ಪಡೆಯುವುದೇ ಶ್ರೇಷ್ಠವಾಗಿತ್ತು. ಆದುದರಿಂದ ಆತನು-ಕೈಟಭಾಸುರನು ಹಿಂದೆ ಪ್ರಳಯಮಹಾಜಲದಲ್ಲಿ ಶ್ರೀಭಗವಂತನಾದ ಮಹಾವಿಷ್ಣುವನ್ನು ಎದುರಿಸಲು ಹೋದಂತೆ–ತ್ರಿಶೂಲವನ್ನು ಎತ್ತಿಕೊಂಡು ಇಂದ್ರನ ಮೇಲೆ ಎರಗಿದನು.

ವೀರನಾದ ಆ ವೃತ್ರಾಸುರನು ಪ್ರಳಯಕಾಲದ ಅಗ್ನಿಯ ಜ್ವಾಲೆಗಳಂತೆ ತೀಕ್ಷ್ಣವಾಗಿದ್ದ ತುದಿಗಳುಳ್ಳ ತ್ರಿಶೂಲವನ್ನು ತಿರುಗಿಸುತ್ತಾ ಅತಿರಭಸದಿಂದ ಇಂದ್ರನ ಮೇಲೆ ಬೀಸಿ ಹೊಡೆದನು ಮತ್ತು ಕಡುಸಿಟ್ಟಿನಿಂದ ಸಿಂಹನಾದವನ್ನು ಮಾಡಿ–‘ಎಲ್ಲವೋ ಪಾಪಿಯೇ! ಈಗ ನೀನು ಉಳಿಯಲಾರೆ’–ಎಂದು ಕೂಗುಹಾಕಿದನು. ಆ ಭಯಂಕರವಾದ ತ್ರಿಶೂಲವು ಗ್ರಹ ಮತ್ತು ಉಲ್ಕೆಗಳಂತೆ ಸುತ್ತುತ್ತಾ ಆಕಾಶದಲ್ಲಿ ಬರುತ್ತಿರುವುದನ್ನು ಕಂಡರೂ ಇಂದ್ರನು ಸ್ವಲ್ಪವೂ ಅಳ್ಳೆದೆಯನ್ನು ತೋರಿಸಲಿಲ್ಲ. ಅಷ್ಟೇ ಅಲ್ಲದೇ ವಾಸುಕಿನಾಗ

ದಂತೆ ವಿಶಾಲವಾಗಿದ್ದ ಆತನ ತ್ರಿಶೂಲಸಹಿತವಾದ ಬಾಹುವನ್ನೇ ನೂರು ಗಿಣ್ಣುಗಳಿಂದ ಬೆಳಗುತ್ತಿದ್ದ ತನ್ನ ವಜ್ರಾಯುಧದಿಂದ ಕತ್ತರಿಸಿಹಾಕಿದನು. ಹಾಗೆ ತನ್ನ ಒಂದು ತೋಳು ಕತ್ತರಿಸಿಹೋದುದರಿಂದ ವೃತ್ರಾಸುರನಿಗೆ ತಡೆಯಲಾರದ ಕೋಪವುಂಟಾಯಿತು. ಆಗ ಆತನು ವಜ್ರಧಾರಿಯಾಗಿದ್ದ ಇಂದ್ರನ ಬಳಿಗೆ ಹೋಗಿ ಆತನ ಗದ್ದದ ಮೇಲೂ ಮತ್ತು ಗಜರಾಜನಾದ ಐರಾವತನ ಮೇಲೂ ಪರಿಘಾಯುಧದಿಂದ ಬಲವಾಗಿ ಹೊಡೆದನು. ಆ ಹೊಡೆತವು ಎಷ್ಟು ಬಲವಾಗಿತ್ತೆಂದರೆ–ಅದು ದೇಹದಲ್ಲಿ ಬಿದ್ದೊಡನೆಯೇ ಇಂದ್ರನ ಕೈಯಿಂದ ವಜ್ರಾಯುಧವು ಕೆಳಗೆ ಬಿದ್ದುಹೋಯಿತು. ವೃತ್ರಾಸುರನ ಆ ಅತ್ಯದ್ಭುತವಾದ ಕರ್ಮವನ್ನು ಕಂಡು ದೇವತೆಗಳೂ, ಅಸುರರೂ, ಚಾರಣರೂ, ಸಿದ್ಧಗಣಗಳೂ ಎಲ್ಲರೂ ಆತನನ್ನು ಪ್ರಶಂಸೆಮಾಡಿದರು. ಆದರೆ ಅವರೇ ಇಂದ್ರನ ಸಂಕಟವನ್ನು ಗಮನಿಸಿ 'ಅಯ್ಯೋ! ಅಯ್ಯೋ!' ಎಂದೂ ಕೂಗಿಕೊಳ್ಳತೊಡಗಿದರು. ಹಾಗೆ ವಜ್ರಾಯುಧವು ಕೈಯನ್ನು ಬಿಟ್ಟು ವೃತ್ರಾಸುರನ ಬಳಿಯಲ್ಲಿಯೇ ಬಿದ್ದುದನ್ನು ಕಂಡು ಮಹೇಂದ್ರನಿಗೆ ಬಹಳ ನಾಚಿಕೆಯಾಯಿತು. ಆತನು ಅದನ್ನು ಮತ್ತೆ ಕೈಗೆ ಎತ್ತಿಕೊಳ್ಳಲಿಲ್ಲ. ಆಗ ವೃತ್ರಾಸುರನೇ ಇಂದ್ರನನ್ನು ಹುರಿದುಂಬಿಸಿದನು. "ಇಂದ್ರ! ವಜ್ರವನ್ನು ಎತ್ತಿಕೊಂಡು ನಿನ್ನ ಶತ್ರುವನ್ನು ಸಂಹರಿಸುವವನಾಗು. ಇದು ಕಳವಳಪಟ್ಟು ಕೊಳ್ಳುವ ಕಾಲವಲ್ಲ. ಸರ್ವಜ್ಞನೂ, ಸನಾತನೂ, ಜಗತ್ತಿನ ಉತ್ಪತ್ತಿ-ಸ್ಥಿತಿ-ಲಯಗಳಿಗೆ ಕಾರಣನೂ ಆಗಿರುವ ಆದಿಪುರುಷನಾದ ಭಗವಂತ ನೊಬ್ಬನಿಗೆ ತಾನೇ ಎಂದೆಂದಿಗೂ ಜಯವು? ಯುದ್ಧಮಾಡಲು ಉತ್ಸುಕ ರಾಗಿ ಶತ್ರುಗಳನ್ನು ವಧಿಸಲು ಪ್ರಯತ್ನಿಸುವವರು ಬೇರೆ ಯಾರೇ ಆದರೂ ಅವರಿಗೆ ಸದಾ ಜಯವು ಇರುವುದಿಲ್ಲ. ಅವರು ಕೆಲವೊಮ್ಮೆ ಜಯಗಳಿಸುವರು. ಕೆಲವು ವೇಳೆಗಳಲ್ಲಿ ಸೋತುಹೋಗುವುದೂ ಉಂಟು. ಈ ಎಲ್ಲ ಲೋಕಗಳೂ ಮತ್ತು ಲೋಕಪಾಲಕರೂ ಬಲೆಯಲ್ಲಿ ಸಿಕ್ಕಿಹಾಕಿ ಕೊಂಡಿರುವ ಪಕ್ಷಿಗಳಂತೆ ಯಾವುದರ ವಶಕ್ಕೆ ಒಳಪಟ್ಟೇ ಉಸಿರಾಡು ತ್ತಾರೆಯೋ, ಎಲ್ಲ ಪ್ರಯತ್ನಗಳನ್ನೂ ಮಾಡುತ್ತಾರೆಯೋ–ಆ ಕಾಲವೇ ಎಲ್ಲರ ಜಯ-ಪರಾಜಯಗಳಿಗೂ ಕಾರಣವು. ಆ ಕಾಲವೇ ಮನುಷ್ಯರ ಮನೋಬಲ, ಇಂದ್ರಿಯಬಲ, ದೇಹಬಲ, ಪ್ರಾಣಗಳು, ಜೀವನ ಮತ್ತು

ಮೃತ್ಯುರೂಪವಾಗಿದೆ. ಇದನ್ನರಿಯದೇ ಮನುಷ್ಯರು ಈ ಜಡವಾದ ಶರೀರ ಗಳನ್ನೇ ಸೋಲು-ಗೆಲುವುಗಳಿಗೆ ಕಾರಣವೆಂದು ಭಾವಿಸುತ್ತಾರೆ. ಎಲೈ ಇಂದ್ರನೇ! ಮರದ ಬೊಂಬೆ ಮತ್ತು ಯಂತ್ರದ ಜಿಂಕೆಗಳು ಅವುಗಳನ್ನು ಕುಣಿಸುವವನ ಕೈಯಲ್ಲಿರುವಂತೆ–ಸಮಸ್ತಪ್ರಾಣಿಗಳೂ ಪರಮಾತ್ಮನಿಂದ ಆಟವಾಡಿಸಲ್ಪಡುತ್ತಾ ಆತನ ವಶದಲ್ಲಿವೆ. ಶ್ರೀಭಗವಂತನ ಅನುಗ್ರಹವಿಲ್ಲದೇ ಇದ್ದರೆ ಪುರುಷ, ಪ್ರಕೃತಿ, ಮಹತ್ತತ್ತ್ವ, ಅಹಂಕಾರ, ಪಂಚಭೂತಗಳು ಇಂದ್ರಿಯಗಳು ಮತ್ತು ನಾಲ್ಕು ಅಂತಃಕರಣಗಳು–ಇವು ಯಾವುವೂ ಈ ವಿಶ್ವದ ಉತ್ಪತ್ತಿಯೇ ಮುಂತಾದುವುಗಳನ್ನು ಮಾಡಲು ಸಮರ್ಥವಾಗುವು ದಿಲ್ಲ. ಶ್ರೀಭಗವಂತನೇ ಎಲ್ಲವನ್ನೂ ನಿಯಂತ್ರಣಮಾಡುತ್ತಿದ್ದಾನೆ. ಎಲ್ಲಕ್ಕೂ ನಿಯಾಮಕನಾಗಿದ್ದಾನೆ–ಎಂಬ ವಿಷಯವನ್ನು ಅರಿಯದವನು ಮಾತ್ರವೇ ಈ ಪರತಂತ್ರನಾಗಿರುವ ಜೀವನನ್ನು ಸ್ವತಂತ್ರನಾದ ಕರ್ತೃ, ಸ್ವತಂತ್ರನಾದ ಭೋಕ್ತೃ–ಎಂದು ತಿಳಿಯುತ್ತಾನೆ. ವಾಸ್ತವಿಕವಾಗಿ ಪ್ರಾಣಿಗಳ ಮೂಲಕ ಪ್ರಾಣಿಗಳ ಉತ್ಪತ್ತಿಯನ್ನೂ–ಪ್ರಾಣಿಗಳ ಮೂಲಕವೇ ಪ್ರಾಣಿಗಳ ಸಂಹಾರ ವನ್ನೂ ಮಾಡಿಸುತ್ತಿರುವವನು ಶ್ರೀಭಗವಂತನೇ. ಕಾಲವು ವಿರುದ್ಧವಾಗಿದ್ದರೆ ಮನುಷ್ಯನಿಗೆ ಆತನು ಬಯಸದೇ ಇದ್ದರೂ ಮೃತ್ಯು, ಅಪಕೀರ್ತಿ ಮುಂತಾದ ಅನಿಷ್ಟಗಳು ಒದಗುತ್ತವೆ. ಹಾಗೆಯೇ ಕಾಲವು ಅನುಕೂಲವಾಗಿದ್ದರೆ ಆತನು ಬಯಸದೇ ಇದ್ದರೂ ಆಯುಸ್ಸು, ಸಂಪತ್ತು, ಕೀರ್ತಿ, ಅಧಿಕಾರ–ಮುಂತಾದ ಭೋಗಗಳೂ ಆತನನ್ನು ಬಂದು ಸೇರುತ್ತವೆ. ಆದುದರಿಂದ ಕೀರ್ತಿ-ಅಪಕೀರ್ತಿ, ಗೆಲವು-ಸೋಲು, ಸುಖ-ದುಃಖ, ಬದುಕು-ಸಾವು ಎಂಬ ಜೋಡಿಗಳಲ್ಲಿ ಸಮಭಾವವನ್ನು ಹೊಂದಿರಬೇಕು. ಈ ಪ್ರತಿಯೊಂದು ಜೋಡಿಯಲ್ಲಿಯೂ ಒಂದು ಮಾತ್ರಬೇಕು. ಮತ್ತೊಂದು ಬೇಡ ಎನ್ನಬಾರದು. ಹರ್ಷ-ಶೋಕಗಳಿಗೆ ವಶನಾಗದೇ ಪ್ರತಿಯೊಂದು ಪರಿಸ್ಥಿತಿ ಯಲ್ಲಿಯೂ ಸಮಭಾವದಿಂದಿರಬೇಕು. ಸತ್ತ್ವ-ರಜಸ್ಸು-ತಮಸ್ಸು ಎಂಬೀ ಮೂರು ಪ್ರಕೃತಿಯ ಗುಣಗಳೇ ಹೊರತು ಆತ್ಮನ ಗುಣಗಳಲ್ಲ. ಆತ್ಮನು ಈ ಗುಣಗಳಿಗೆ ಸಾಕ್ಷಿಯು ಮಾತ್ರವೇ ಆಗಿದ್ದಾನೆ ಎಂದು ತಿಳಿದವನಿಗೆ ಆ ಗುಣ-ದೋಷಗಳ ಲೇಪ ಇರುವುದಿಲ್ಲ. ಎಲೈ ದೇವರಾಜನೇ! ನನ್ನ ಕಡೆನೋಡು. ನೀನು ನನ್ನ ಹಸ್ತವನ್ನೂ ಮತ್ತು ಶಸ್ತ್ರವನ್ನೂ ಕಡಿದು ಹಾಕಿ

ನನ್ನನ್ನು ಒಂದು ರೀತಿಯಲ್ಲಿ ಸೋಲಿಸಿಬಿಟ್ಟಿದ್ದೀಯೆ. ಆದರೂ ನಾನು ನಿನ್ನ ಪ್ರಾಣವನ್ನು ಅಪಹರಿಸಲು ಯಥಾಶಕ್ತಿ ಪ್ರಯತ್ನವನ್ನು ಮಾಡುತ್ತಲೇ ಇದ್ದೇನೆ. (ಶ್ಲೋಕ 2-16)

ಪ್ರಾಣಗ್ಲಹೋಽಯಂ ಸಮರ ಇಷ್ವಕ್ಷೋ ವಾಹನಾಸನಃ ।
ಅತ್ರ ನ ಜ್ಞಾಯತೇಽಮುಷ್ಯ ಜಯೋಽಮುಷ್ಯ ಪರಾಜಯಃ ॥೧೭॥

ಈ ಯುದ್ಧವೆಂಬುದು ಒಂದು ಬಗೆಯ ಜೂಜಾಟ. ಇದರಲ್ಲಿ ಪ್ರಾಣವನ್ನೇ ಪಣವನ್ನಾಗಿಡಲಾಗುತ್ತದೆ. ಬಾಣಗಳೇ ದಾಳಗಳು ಮತ್ತು ವಾಹನಗಳೇ ಹಾಸು-ಹಲಗೆಗಳು. ಇದರಲ್ಲಿ ಯಾವನು ಗೆಲ್ಲುವನು ಮತ್ತು ಯಾವನು ಸೋಲುವನು–ಎಂಬುದು ಮೊದಲೇ ತಿಳಿಯುವುದಿಲ್ಲ."

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ವೃತ್ರಾಸುರನ ಈ ಸತ್ಯವೂ ನಿಷ್ಕಾಪಟ್ಯವೂ ಆದ ಮಾತುಗಳನ್ನು ಕೇಳಿ ಇಂದ್ರನು ಆತನನ್ನು ಅಚ್ಚರಿಯಿಲ್ಲದ ನಿಷ್ಕಪಟಭಾವದಿಂದ ಗೌರವಿಸಿ, ಕೈಯಲ್ಲಿ ವಜ್ರಾಯುಧವನ್ನು ಎತ್ತಿಕೊಂಡು ನಸುನಗುತ್ತಾ ಆತನನ್ನು ಹೀಗೆ ಅಭಿನಂದಿಸಿದನು.

ಇಂದ್ರನ ಅಭಿನಂದನೆಯ ಮಾತುಗಳು :

"ಭಲೇ ದಾನವರಾಜ! ನೀನು ನಿಜವಾಗಿಯೂ ಸಿದ್ಧನೇ ಆಗಿದ್ದೀಯೆ. ಅದಕ್ಕೇ ನಿನ್ನಲ್ಲಿ ಇಂತಹ ಅಸಾಧಾರಣವಾದ ಸದ್ಬುದ್ಧಿಯು ಬೆಳಗುತ್ತಿದೆ. ಜಗತ್ತಿಗೆಲ್ಲಾ ಗೆಳೆಯನಾಗಿ ಎಲ್ಲಕ್ಕೂ ಆತ್ಮನಾಗಿರುವ ಪರಮಾತ್ಮನಲ್ಲಿ ಇಂತಹ ಅನನ್ಯವಾದ ಭಕ್ತಿಯು ನಿನ್ನಲ್ಲಿ ಬೇರೂರಿದೆ. ನಿಜವಾಗಿಯೂ ನೀನು ಜನರನ್ನು ಮರುಳುಗೊಳಿಸುವ ಶ್ರೀಭಗವಂತನ ವೈಷ್ಣವೀಮಾಯೆಯನ್ನು ದಾಟಿಬಿಟ್ಟಿದ್ದೀಯೆ. ಆಸುರಭಾವವನ್ನು ತೊರೆದು ಮಹಾಪುರುಷನಾಗಿದ್ದೀಯೆ. ರಜೋಗುಣಪ್ರಕೃತಿಯಾದ ದಾನವನಾಗಿದ್ದರೂ ಪರಿಶುದ್ಧ ಸತ್ತ್ವಸ್ವರೂಪನಾದ ವಾಸುದೇವನಲ್ಲಿ ನೀನು ದೃಢವಾದ ಭಕ್ತಿಭಾವವನ್ನು ಹೊಂದಿರುವುದು ಸತ್ಯವಾಗಿಯೂ ಆಶ್ಚರ್ಯವೇ. (ಶ್ಲೋಕ 18-21)

ಯಸ್ಯ ಭಕ್ತಿರ್ಭಗವತಿ ಹರೌ ನಿಃಶ್ರೇಯಸೇಶ್ವರೇ ।
ವಿಕ್ರೀಡತೋಽಮೃತಾಮ್ಭೋಧೌ ಕಿಂ ಕ್ಷುದ್ರೈಃ ಖಾತಕೋದಕೈಃ ॥

ಪರಮಕಲ್ಯಾಣಕ್ಕೆ ಅಧಿಪತಿಯಾಗಿರುವ, ಮೋಕ್ಷಕ್ಕೇ ಒಡೆಯನಾಗಿರುವ, ಶ್ರೀಹರಿಯ ಪಾದಾರವಿಂದಗಳಲ್ಲಿ ನಿರತಿಶಯಪ್ರೇಮರೂಪವಾದ ಭಕ್ತಿಯನ್ನು ಹೊಂದಿರುವವನಿಗೆ ಜಗತ್ತಿನ ಭೋಗಗಳಿಂದ ಏನಾಗಬೇಕು? ಅಮೃತದ ಕಡಲಿನಲ್ಲಿಯೇ ಕ್ರೀಡಿಸುತ್ತಿರುವವನಿಗೆ ಕ್ಷುದ್ರವಾದ ಹಳ್ಳ-ಕೊಳ್ಳಗಳ ನೀರಿನಿಂದ ಆಗಬೇಕಾದ ಪ್ರಯೋಜನವಾದರೂ ಏನು?"

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ರಾಜೇಂದ್ರ! ಹೀಗೆ ಮಹಾಪರಾಕ್ರಮಿಗಳಾದ, ಯೋಧಶ್ರೇಷ್ಠರಾದ ಇಂದ್ರ ಮತ್ತು ವೃತ್ರಾಸುರರು ಧರ್ಮವನ್ನು ತಿಳಿಯುವ ಇಚ್ಛೆಯಿಂದ ಪರಸ್ಪರವಾಗಿ ಮಾತನಾಡುತ್ತಾ ಯುದ್ಧವನ್ನು ಮಾಡತೊಡಗಿದರು. ಶತ್ರುಸಂಹಾರಕನಾದ ವೃತ್ರಾಸುರನು ಉಕ್ಕಿನಿಂದ ಮಾಡಿದ ಭಯಂಕರವಾದ ಒಂದು ಪರಿಘಾಯುಧವನ್ನು ಎಡಗೈಯಿಂದ ಎತ್ತಿಕೊಂಡು ಆಕಾಶದಲ್ಲಿ ಗಿರ-ಗಿರನೆ ತಿರುಗಿಸುತ್ತಾ ಇಂದ್ರನ ಮೇಲೆ ಎಸೆದನು. ಆದರೆ ದೇವರಾಜನು ತನ್ನ ನೂರು ಗಿಣ್ಣುಗಳಿಂದ ಕೂಡಿದ್ದ ವಜ್ರಾಯುಧದಿಂದ ಆ ಪರಿಘಾಯುಧ ಮತ್ತು ಅದನ್ನು ಹಿಡಿದಿದ್ದ, ಆನೆಯ ಸೊಂಡಿಲಿನಂತೆ ಉದ್ದವಾಗಿದ್ದ ವೃತ್ರನ ತೋಳು–ಇವೆರಡನ್ನೂ ಒಟ್ಟಿಗೇ ಕಡಿದುಹಾಕಿದನು. ಹೀಗೆ ಎರಡೂ ತೋಳುಗಳೂ ಬುಡಸಹಿತ ಕತ್ತರಿಸಲ್ಪಡಲು ವೃತ್ರಾಸುರನ ಎಡ-ಬಲ ಹೆಗಲುಗಳೆರಡರಿಂದಲೂ ರಕ್ತದ ಧಾರೆ ಹರಿಯತೊಡಗಿತು. ಆಗ ಆತನು–ಇಂದ್ರನ ವಜ್ರಾಯುಧದ ಏಟಿನಿಂದ ರೆಕ್ಕೆಗಳು ಕತ್ತರಿಸಿಹೋಗಿ ಆಕಾಶದಿಂದ ನೆಲಕ್ಕೆ ಉರುಳಿದ ಮಹಾಪರ್ವತವೋ ಎಂಬಂತೆ ಕಾಣುತ್ತಿದ್ದನು. ಆಗ ಕಾಲುಗಳಿಂದ ನಡೆದಾಡುವ ಪರ್ವತರಾಜನಂತೆ ಅತಿದೀರ್ಘಕಾಯನಾಗಿದ್ದ ಆ ದಾನವರಾಜನು ತನ್ನ ಕೆಳದವಡೆಯನ್ನು ಭೂಮಿಯಲ್ಲಿಯೂ ಮೇಲಿನ ದವಡೆಯನ್ನು ಸ್ವರ್ಗದಲ್ಲಿಯೂ ಚಾಚಿ ಆಕಾಶದಂತೆ ಆಳವಾಗಿದ್ದ ಬಾಯಿ, ಸರ್ಪದಂತೆ ಭೀಕರವಾಗಿದ್ದ ನಾಲಿಗೆ ಮತ್ತು ಮೃತ್ಯುವಿಗೆ ಸಮನಾದ ಕೋರೆದಾಡೆಗಳು–ಇವುಗಳಿಂದ ಮೂರು ಲೋಕಗಳನ್ನೂ ನುಂಗಿಹಾಕುತ್ತಿರುವನೋ ಎಂಬಂತೆ ತನ್ನ ಕಾಲುಗಳ ಘಟ್ಟನೆಗಳಿಂದ ಭೂಮಿಯನ್ನು ತುಳಿದುಹಾಕುತ್ತಲೂ, ಮಹಾವೇಗದಿಂದ ಪರ್ವತಗಳನ್ನು ತಲೆಕೆಳಗುಮಾಡುತ್ತಲೂ ಇಂದ್ರನ ಬಳಿಗೆ ನುಗ್ಗಿ–ಅತಿಪರಾಕ್ರಮಿಯೂ,

ಬಲಶಾಲಿಯೂ ಆದ ರಾಕ್ಷಸಕಾಯದ ಹೆಬ್ಬಾವೊಂದು ಆನೆಯನ್ನು ನುಂಗಿ ಹಾಕುತ್ತಿದೆಯೋ–ಎಂಬಂತೆ ಇಂದ್ರನನ್ನು ಆತನ ವಾಹನವಾದ ಐರಾವತ ಗಜೇಂದ್ರಸಹಿತವಾಗಿ ನುಂಗಿಹಾಕಿಬಿಟ್ಟನು. ಹೀಗೆ ತ್ರಿಲೋಕಗಳ ಒಡನೆಯನೇ ವೃತ್ರಾಸುರನಿಂದ ನುಂಗಿಹಾಕಲ್ಪಟ್ಟಿದ್ದನ್ನು ಕಂಡು ಪ್ರಜಾಪತಿಗಳೂ, ಮಹರ್ಷಿಗಳೂ ಕಡುದುಃಖದಿಂದ–'ಅಯ್ಯೋ! ಅಯ್ಯೋ! ಎಂತಹ ಅನರ್ಥವಾಯಿತು!'–ಎಂದು ಕೂಗಿಕೊಳ್ಳತೊಡಗಿದರು.

(ಶ್ಲೋಕ 23-30)

ಆದರೆ ದೇವರಾಜನಿಗೆ ಯಾವ ಅಪಾಯವೂ ಆಗಿರಲಿಲ್ಲ. ನಾರಾಯಣ ಕವಚವೆಂಬ ಮಹಾಪುರುಷವಿದ್ಯೆಯು ಆತನನ್ನು ಸಂರಕ್ಷಿಸಿತು. ಯೋಗ ಬಲವೂ ಆತನನ್ನು ಕಾಪಾಡಿತು. ಆದುದರಿಂದ ವೃತ್ರಾಸುರನು ತನ್ನನ್ನು ನುಂಗಿದಾಗ ಆತನ ಹೊಟ್ಟೆಯೊಳಗೆ ಹೋಗಿದ್ದರೂ ಇಂದ್ರನು ಸಾವಿಗೆ ಈಡಾಗಲಿಲ್ಲ. ಆತನು ತನ್ನ ವಜ್ರಾಯುಧದಿಂದ ಆತನ ಹೊಟ್ಟೆಯನ್ನು ಸೀಳಿಹಾಕಿ ಹೊರಕ್ಕೆ ಬಂದು ಕಡುರಭಸದಿಂದ ಪರ್ವತಶಿಖರಕ್ಕೆ ಸಮನಾಗಿ ಉನ್ನತವಾಗಿದ್ದ ಆತನ ತಲೆಯನ್ನು ಕಡಿದುಹಾಕಿದನು. ಗ್ರಹಗಳಿಗೆ ಉತ್ತರಾಯಣ-ದಕ್ಷಿಣಾಯನಗತಿಗಳಿಗೆ ಆಗುವಷ್ಟು ಕಾಲದಲ್ಲಿ ಅಂದರೆ : ಒಂದು ವರ್ಷದ ಸಮಯದಲ್ಲಿ ವೃತ್ರಸಂಹಾರದ ಯೋಗವು ಒದಗಿದಾಗ ತೀವ್ರವೇಗದಿಂದ ಸುತ್ತುತ್ತಿದ್ದ ವಜ್ರಾಯುಧವು ಆತನ ಕುತ್ತಿಗೆಯನ್ನು ಎಲ್ಲ ಕಡೆಗಳಿಂದಲೂ ಕತ್ತರಿಸಿ ಭೂಮಿಯಲ್ಲಿ ಬೀಳಿಸಿತು.

(ಶ್ಲೋಕ 31-33)

ಆಗ ಆಕಾಶದಲ್ಲಿ ದೇವದುಂಭಿಗಳು ಮೊಳಗತೊಡಗಿದುವು. ಮಹರ್ಷಿಸಹಿತರಾದ ಗಂಧರ್ವರು, ಸಿದ್ಧರು–ಮುಂತಾದವರು ಪರಮಾ ನಂದಭರಿತರಾಗಿ ವೃತ್ರಸಂಹಾರವನ್ನು ಕೊಂಡಾಡುವ ದಿವ್ಯಮಂತ್ರಗಳಿಂದ ದೇವರಾಜನನ್ನು ಸ್ತುತಿಸುತ್ತಾ ಹೂಮಳೆಯನ್ನು ಕರೆಯತೊಡಗಿದರು.

ವೀರವರನಾದ ಭೂಪತಿಯೇ! ಕೇಳು : ಆಗ ವೃತ್ರಾಸುರನ ದೇಹ ದಿಂದ ಆತ್ಮಜ್ಯೋತಿಯು ಹೊರಬಂದು ಇಂದ್ರನೇ ಮುಂತಾದ ದೇವತೆಗಳು

ನೋಡುತ್ತಿರುವಂತೆಯೇ ಸರ್ವಲೋಕಗಳನ್ನೂ ಮೀರಿದ ಪರಮಧಾಮ ವನ್ನು ಸೇರಿಕೊಂಡುಬಿಟ್ಟಿತು. (ಶ್ಲೋಕ 34-35)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಷಷ್ಠಸ್ಕಂಧದ ೧೨ನೆಯ ಅಧ್ಯಾಯವು ಮುಗಿಯಿತು.

ಷಷ್ಠಸ್ಕಂಧ ೧೩ನೆಯ ಅಧ್ಯಾಯ

ಇಂದ್ರನನ್ನು ಬ್ರಹ್ಮಹತ್ಯೆಯು ಆವರಿಸಿದುದು

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ವೃತ್ರೇ ಹತೇ ತ್ರಯೋ ಲೋಕಾ ವಿನಾ ಶಕ್ರೇಣ ಭೂರಿದ ।
ಸಪಾಲಾ ಹ್ಯಭವನ್ಸದ್ಯೋ ವಿಜ್ವರಾ ನಿರ್ವೃತೇನ್ದ್ರಿಯಾಃ ॥೧॥

ದೇವರ್ಷಿಪಿತೃಭೂತಾನಿ ದೈತ್ಯಾ ದೇವಾನುಗಾಃ ಸ್ವಯಮ್ ।
ಪ್ರತಿಜಗ್ಮುಃ ಸ್ವಧಿಷ್ಣ್ಯಾನಿ ಬ್ರಹ್ಮೇಶೇನ್ದ್ರಾದಯಸ್ತತಃ ॥೨॥

ಮಹಾದಾನಶೂರನಾದ ಮಹಾರಾಜಪರೀಕ್ಷಿತನೇ! ವೃತ್ರಾಸುರನು ಸಂಹರಿಸಲ್ಪಟ್ಟಿದ್ದರಿಂದ ಇಂದ್ರನನ್ನು ಬಿಟ್ಟು ಉಳಿದ ಎಲ್ಲರೂ ಅಂದರೆ ಮೂರು ಲೋಕಗಳೂ ಲೋಕಪಾಲರೂ ಸರ್ವರೂ ಒಡನೆಯೇ ಸಂತೋಷ-ಸಮಾಧಾನಗಳನ್ನು ಹೊಂದಿದರು. ಅವರ ಸಂತಾಪ, ಭಯ, ಚಿಂತೆ ಎಲ್ಲವೂ ಹೊರಟುಹೋದುವು. ಆ ಯುದ್ಧವು ಮುಗಿಯಲು ದೇವತೆಗಳೂ, ಋಷಿಗಳೂ, ಭೂತಗಳೂ, ದೈತ್ಯರೂ ಮತ್ತು ದೇವತೆಗಳ ಅನುಚರರಾದ ಗಂಧರ್ವರೇ ಮುಂತಾದವರೂ (ಇಂದ್ರನಿಗೆ ಹೇಳದೆಯೇ) ತಮ್ಮ ತಮ್ಮ ಲೋಕಗಳಿಗೆ ಹಿಂದಿರುಗಿಬಿಟ್ಟರು. ಅನಂತರ ಬ್ರಹ್ಮದೇವರು, ರುದ್ರದೇವರು, ಇಂದ್ರದೇವರು–ಎಲ್ಲರೂ ಹೊರಟುಹೋದರು.

ಶ್ರೀಶುಕಮಹರ್ಷಿಗಳ ಈ ಮಾತನ್ನು ಕೇಳಿ ಪರೀಕ್ಷಿದ್ರಾಜನು ಅವ ರನ್ನು–"ಮಹಾತ್ಮರೇ! ಮುನಿವರ್ಯರೇ! ಇಂದ್ರನೊಬ್ಬನಿಗೆ ಮಾತ್ರ ಆಗ ಅಪ್ರಸನ್ನತೆಯುಂಟಾದುದಕ್ಕೆ ಕಾರಣವೇನು? ವೃತ್ರಾಸುರನ ವಧೆಯಿಂದ ಎಲ್ಲ ದೇವತೆಗಳೂ ಸುಖಪಟ್ಟಿರುವಾಗ ಇಂದ್ರನೊಬ್ಬನಿಗೆ ಮಾತ್ರ ಏಕೆ

ದುಃಖವುಂಟಾಯಿತು?–ಎಂಬುದನ್ನು ತಿಳಿಸಬೇಕು”–ಎಂದು ಪ್ರಾರ್ಥನೆ ಮಾಡಿದನು.

ಅದಕ್ಕೆ ಉತ್ತರನೀಡುತ್ತಾ ಶ್ರೀಶುಕಮುನಿಗಳು ಆತನಿಗೆ ಹೇಳಿದರು :

“ಎಲೈ ರಾಜೇಂದ್ರನೇ! ವೃತ್ರನ ಪರಾಕ್ರಮದಿಂದ ಭಯಭೀತರಾದ ಸಮಸ್ತದೇವತೆಗಳೂ ಮತ್ತು ಋಷಿ-ಮಹರ್ಷಿಗಳೂ ದೇವೇಂದ್ರನನ್ನು ‘ನೀನು ಈತನನ್ನು ವಧಿಸಿ ಎಲ್ಲರನ್ನೂ ಕಾಪಾಡಬೇಕು’–ಎಂದು ಪ್ರಾರ್ಥಿಸಿದರು. ಆದರೆ ಇಂದ್ರನು ಅದರಿಂದ ಬ್ರಹ್ಮಹತ್ಯೆಯ ಪಾತಕವು ಬರುವುದೆಂದು ಹೆದರಿ ವೃತ್ರವಧೆಯನ್ನು ಮಾಡಲು ಬಯಸಲಿಲ್ಲ. ‘ದೇವತೆಗಳಿರಾ! ಋಷಿಗಳಿರಾ! ಹಿಂದೆ ವಿಶ್ವರೂಪವನ್ನು ಸಂಹರಿಸಿದ್ದರಿಂದ ನನಗೆ ಉಂಟಾಗಿದ್ದ ಬ್ರಹ್ಮಹತ್ಯೆಯನ್ನೇನೋ ಸ್ತ್ರೀಯರು, ಪೃಥಿವೀ, ಜಲ ಮತ್ತು ವೃಕ್ಷಗಳು ತಮ್ಮಲ್ಲಿ ಹಂಚಿಕೊಂಡು ಸ್ವೀಕಾರಮಾಡಿದುವು. ಈಗ ವೃತ್ರನನ್ನು ವಧಿಸಿದರೆ ನನಗೆ ಮತ್ತೆ ಬ್ರಹ್ಮಹತ್ಯೆಯು ಬರುವುದು. ಅದರಿಂದ ಹೇಗೆ ಬಿಡುಗಡೆ ಯಾದೀತು?’–ಎಂದು ಅವನು ತನ್ನ ಆತಂಕವನ್ನು ಅವರಿಗೆ ತಿಳಿಸಿದನು. ಅದಕ್ಕೆ ಅವರು–‘ದೇವರಾಜ! ನಿನಗೆ ಮಂಗಳವಾಗಲಿ. ಬ್ರಹ್ಮಹತ್ಯೆಯ ದೋಷವು ಒದಗುವುದೆಂದು ನೀನು ಚಿಂತಿಸಬೇಡ. ನಾವು ನಿನ್ನಿಂದ ಅಶ್ವಮೇಧಯಜ್ಞವನ್ನು ಮಾಡಿಸುವೆವು. ಅದರಿಂದ ನೀನು ಸರ್ವಪಾಪ ಗಳಿಂದಲೂ ಬಿಡುಗಡೆಹೊಂದುವೆ. ಪರಮಪುರುಷನೂ, ಪರಮಾತ್ಮನೂ, ಸರ್ವೇಶ್ವರನೂ ಆಗಿರುವ ನಾರಾಯಣನನ್ನು ಅಶ್ವಮೇಧ ಯಜ್ಞದ ಮೂಲಕ ಆರಾಧನೆಮಾಡಿದರೆ ಇಡೀ ಜಗತ್ತನ್ನು ಸಂಹಾರಮಾಡಿದ ಪಾಪವೂ ತೊಲಗಿ ಹೋಗುವುದು. ಆತನ ಕೀರ್ತನೆಯನ್ನು ಮಾಡಿದರೆ ಸಾಕು–ಅದರಿಂದ ಬ್ರಹ್ಮಹತ್ಯೆಯನ್ನು ಮಾಡಿದವನು, ಪಿತೃಹತ್ಯೆಯನ್ನು ಮಾಡಿದವನು, ಗೋಹತ್ಯೆಯ ಪಾತಕವನ್ನು ಮಾಡಿದವನು, ತಾಯಿಯನ್ನು ಕೊಂದಪಾಪಕ್ಕೆ ಪಾತ್ರನಾದವನು, ಆಚಾರ್ಯಹತ್ಯೆಯ ಪಾಪಕ್ಕೆ ಒಳಗಾದವನು, ನಾಯಿಯ ಮಾಂಸವನ್ನು ತಿನ್ನುವ ಮಹಾಪಾತಕಿ–ಇಂತಹವರು ಕೂಡ ಪರಿಶುದ್ಧ ರಾಗಿಬಿಡುವರು. ನಿನಗಾಗಿ ನಾವು ಆ ಅಶ್ವಮೇಧವೆಂಬ ಮಹಾಯಜ್ಞ

ವನ್ನು ಅನುಷ್ಠಾನಮಾಡುವೆವು. ಅದರ ಮೂಲಕ ಶ್ರದ್ಧೆಯಿಂದ ಶ್ರೀಭಗವಂತನನ್ನು ಆರಾಧನೆಮಾಡಿದರೆ ನೀನು ಬ್ರಹ್ಮದೇವರವರೆಗಿನ ಇಡೀ ಚರಾಚರಜಗತ್ತನ್ನು ಹತ್ಯೆಮಾಡಿದರೆ ಬರುವ ಪಾತಕವೂ ನಿನಗೆ ಅಂಟುವುದಿಲ್ಲ. ಹೀಗಿರುವಾಗ ದುಷ್ಟನಾದ ಈ ಅಸುರನನ್ನು ನಿಗ್ರಹಮಾಡಿದ್ದರಿಂದ ಸಂಭವಿಸಬಹುದಾದ ಪಾಪವು ನಿನ್ನನ್ನು ಹೇಗೆ ತಾನೇ ಮುಸುಕೀತು?'– ಎಂದು ಆತನಿಗೆ ಪಾಪಪರಿಹಾರದ ನಂಬಿಕೆ ಹುಟ್ಟಿಸಿ ಆತನನ್ನು ವೃತ್ರವಧೆಗೆ ಪ್ರೇರಿಸಿದರು. ಹೀಗೆ ಬ್ರಾಹ್ಮಣರಿಂದ ಪ್ರೇರಿತನಾಗಿ ಇಂದ್ರನು ವೃತ್ರಾಸುರನ ವಧೆಯನ್ನು ಮಾಡಿದನು. ಆಗ ಆತನನ್ನು ಸಂಹಾರಮಾಡಿದ್ದರಿಂದ ಬ್ರಹ್ಮಹತ್ಯೆಯು ಇಂದ್ರನ ಬಳಿಗೆ ಬಂದುಬಿಟ್ಟಿತು. (ಶ್ಲೋಕ 3-10)

ತಯೇನ್ದ್ರಃ ಸ್ಮಾಸಹತ್ತಾಪಂ ನಿರ್ವೃತಿರ್ನಾಮುಮಾವಿಶತ್ ।
ಹ್ರೀಮನ್ತಂ ವಾಚ್ಯತಾಂ ಪ್ರಾಪ್ತಂ ಸುಖಯನ್ತ್ಯಪಿ ನೋ ಗುಣಾಃ ॥

ಈ ಕಾರಣದಿಂದ ಇಂದ್ರನಿಗೆ ತುಂಬಾ ಕ್ಲೇಶವುಂಟಾಯಿತು. ಮಹಾ ಸಂತಾಪವನ್ನು ಆತನು ಸಹಿಸಬೇಕಾಯಿತು. ಆತನಿಗೆ ಒಂದು ಕ್ಷಣಕಾಲ ಕೂಡ ನೆಮ್ಮದಿ ಇಲ್ಲವಾಯಿತು. ನಾಚಿಕೆ-ಸಂಕೋಚಗಳುಳ್ಳ ಸತ್ಪುರುಷನಿಗೆ ಕಳಂಕವು ತಗುಲಿದರೆ ಆಗ ಆತನ ಧೈರ್ಯವೇ ಮುಂತಾದ ಗುಣಗಳೂ ಆತನಿಗೆ ಸುಖವನ್ನುಂಟುಮಾಡಲಾರವಷ್ಟೆ!

ಆ ಬ್ರಹ್ಮಹತ್ಯೆಯು ರೂಪುವೆತ್ತ ಚಾಂಡಾಲಿಯಂತೆ ತನ್ನ ಹಿಂದೆಯೇ ಬೆನ್ನಟ್ಟಿ ಬರುತ್ತಿರುವುದು ಇಂದ್ರನಿಗೆ ಕಾಣಿಸಿತು. ಎಂತಹ ಜುಗುಪ್ಸತವಾದ ಆಕಾರ ಆ ಮಹಾಪಾತಕಕ್ಕೆ! ಅಸಹ್ಯವಾದ ಮುದುಕಿಯ ರೂಪ. ಅದರ ಅಂಗಾಂಗಗಳೆಲ್ಲವೂ ಗಡ-ಗಡನೆ ನಡುಗುತ್ತಿವೆ. ಜೊತೆಗೆ ಕ್ಷಯ ರೋಗವೂ ಬೇರೆ ಅದನ್ನು ಪೀಡಿಸುತ್ತಿದೆ. ಉಟ್ಟಿರುವ ವಸ್ತ್ರಗಳೆಲ್ಲಾ ರಕ್ತದಿಂದ ತೋಯ್ದುಹೋಗಿವೆ. ತನ್ನ ನರೆಗೂದಲುಗಳನ್ನು ಬಿಚ್ಚಿ ಕೆದರಿಕೊಂಡು 'ನಿಲ್ಲು! ನಿಲ್ಲು!' ಎಂದು ಕಿರುಚುತ್ತಾ ಬರುತ್ತಿದೆ. ಅದರ ಉಸಿರಿನಿಂದ ಮೀನಿನಲ್ಲಿರುವಂತಹ ದುರ್ವಾಸನೆಯು ಹೊರಹೊಮ್ಮುತ್ತಾ ದಾರಿಯೆಲ್ಲಾ ಅದರಿಂದ ದೂಷಿತವಾಗುತ್ತಿದೆ. ಮಹಾರಾಜ! ಅದಕ್ಕೆ ಹೆದರಿ ಗಾಬರಿಗೊಂಡ ಇಂದ್ರನು ದಿಕ್ಕು-ದಿಕ್ಕುಗಳಿಗೂ ಆಕಾಶಕ್ಕೂ ಓಡುತ್ತಾ

ಅಲೆದಾಡಿದನು. ಕೊನೆಗೆ ಎಲ್ಲಿಯೂ ಆಸರೆ ಸಿಕ್ಕದೇ ಆತನು ಈಶಾನ್ಯದ ಮೂಲೆಯಲ್ಲಿದ್ದ ಮಾನಸಸರೋವರದೊಳಗೆ ಬೇಗನೆ ಪ್ರವೇಶಿಸಿಬಿಟ್ಟನು. ಮಹೇಂದ್ರನು ಮಾನಸಸರೋವರದ ತಾವರೆದಂಟಿನ ನೂಲುಗಳೊಳಗೆ ಒಂದು ಸಾವಿರ ವರ್ಷ ಕಾಲ ಅವಿತಿದ್ದು–'ಬ್ರಹ್ಮಹತ್ಯೆಯಿಂದ ತನಗೆ ಹೇಗೆ ಬಿಡುಗಡೆಯಾದೀತು?'–ಎಂಬುದನ್ನೇ ಚಿಂತಿಸುತ್ತಿದ್ದನು. ಅಷ್ಟು ಕಾಲದ ವರೆಗೂ ಆತನಿಗೆ ತಿನ್ನುವುದಕ್ಕೂ ಏನೂ ದೊರೆಯಲಿಲ್ಲ. ಏಕೆಂದರೆ : ದೇವತೆಗಳೂ ಮತ್ತು ದೇವೇಂದ್ರನೂ ಊಟಮಾಡುವುದು ಅಗ್ನಿದೇವತೆಯ ಮುಖದಿಂದಲ್ಲವೇ? ಆದರೆ ಅಗ್ನಿದೇವನಿಗೆ ನೀರಿನೊಳಗಿರುವ ತಾವರೆ ದಂಟಿನ ದಾರಗಳೊಳಗೆ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಹೀಗೆ ಇಂದ್ರನು ಕಮಲದ ದಂಟಿನ ದಾರಗಳೊಳಗೆ ಅಡಗಿರುವಷ್ಟು ಕಾಲವೂ ರಾಜಾನಹುಷನು ತನ್ನ ವಿದ್ಯೆ, ತಪಸ್ಸು ಮತ್ತು ಯೋಗಬಲಗಳಿಂದ ಸ್ವರ್ಗಲೋಕವನ್ನು ಆಳುತ್ತಿದ್ದನು. ಆದರೆ ಆತನು, ಸಂಪತ್ತು-ಅಧಿಕಾರಗಳ ಮದದಿಂದ ಕುರುಡನಾಗಿ ಇಂದ್ರಪತ್ನಿಯಾದ ಶಚೀದೇವಿಯ ವಿಷಯದಲ್ಲಿ ಅಪಚಾರವನ್ನು ಮಾಡಲು ಬಯಸಲು, ಆಕೆಯು–ಆತನು ಮಹರ್ಷಿಗಳಲ್ಲಿ ಅಪರಾಧವನ್ನು ಆಚರಿಸುವಂತೆ ಮಾಡಿದಳು. ಆಗ ಆತನು ಅವರ ಶಾಪಕ್ಕೆ ಗುರಿಯಾಗಿ ಹೆಬ್ಬಾವಿನ ರೂಪವನ್ನು ತಳೆಯಬೇಕಾಯಿತು. ಅನಂತರ ಸತ್ಯಕ್ಕೆ ಪರಮ ಪೋಷಕನಾಗಿರುವ ಶ್ರೀಭಗವಂತನನ್ನು ಚೆನ್ನಾಗಿ ಧ್ಯಾನಮಾಡಿದ್ದರಿಂದ ಇಂದ್ರನ ಪಾಪವು ನಿವಾರಿಸಲ್ಪಟ್ಟಿತು. ಬ್ರಾಹ್ಮಣರ ಕರೆಯಂತೆ ಅನಂತರ ಆತನು ಸ್ವರ್ಗಕ್ಕೆ ಹಿಂದಿರುಗಿದನು. ಕಮಲವನದಲ್ಲಿ ವಿಹರಿಸುವ ಶ್ರೀಜಗನ್ಮಾತೆಯಾದ ಶ್ರೀವಿಷ್ಣುಪತ್ನಿಯಾದ ಲಕ್ಷ್ಮೀದೇವಿಗೆ ಆತನು ಪ್ರಿಯಭಕ್ತನಾಗಿದ್ದನು. ಆಕೆಯು ಆತನನ್ನು ಸಂರಕ್ಷಿಸುತ್ತಿದ್ದುದರಿಂದಲೂ ಮತ್ತು ಈಶಾನ್ಯದಿಕ್ಕಿಗೆ ಅಧಿಪತಿಗಳಾದ ರುದ್ರದೇವರು ಪಾಪದ ತೇಜಸ್ಸನ್ನು ನಿಗ್ರಹಿಸಿದ್ದರಿಂದಲೂ ಬ್ರಹ್ಮಹತ್ಯೆಯು ಇಂದ್ರನನ್ನು ಆಕ್ರಮಿಸಲಾರದೇ ಹೋಯಿತು. (ಶ್ಲೋಕ 12-17)

ಇಂದ್ರನು ಸ್ವರ್ಗಕ್ಕೆ ಹಿಂದಿರುಗಿದನಂತರ ಬ್ರಹ್ಮರ್ಷಿಗಳು ಅಲ್ಲಿಗೆ ಬಂದು ಆತನಿಗೆ ಯಜ್ಞದೀಕ್ಷೆಯನ್ನು ಕೊಟ್ಟು ಶ್ರೀಭಗವಂತನ ಆರಾಧನೆಯ ರೂಪವಾಗಿ ಆತನಿಂದ ಅಶ್ವಮೇಧಯಜ್ಞವನ್ನು ಮಾಡಿಸಿದರು. ವೇದ

ವಾದಿಗಳಾದ ಬ್ರಾಹ್ಮಣರು ಮಾಡಿಸಿದ ಯಜ್ಞದ ಮೂಲಕ ಸರ್ವದೇವ ಸ್ವರೂಪನಾದ, ಶ್ರೀಭಗವಂತನಾದ ಪುರುಷೋತ್ತಮನನ್ನು ಆರಾಧನೆ ಮಾಡಲು ಅದರ ಮಹಿಮೆಯಿಂದ ಇಂದ್ರನಿಗೆ ವೃತ್ರವಧೆಯಿಂದುಂಟಾಗಿದ್ದ ಪಾಪರಾಶಿಯು–ಸೂರ್ಯೋದಯದಿಂದ ಮಂಜು ನಾಶವಾಗುವಂತೆ ಸಂಪೂರ್ಣವಾಗಿ ಧ್ವಂಸವಾಗಿಬಿಟ್ಟಿತು. ಮರೀಚಿಗಳೇ ಮುಂತಾದ ಮುನೀಶ್ವರರು ವಿಧಿಪೂರ್ವಕವಾಗಿ ನಡೆಸಿಕೊಟ್ಟ ಅಶ್ವಮೇಧಮಹಾಯಜ್ಞದ ಮೂಲಕ ಸನಾತನಪುರುಷನೂ ಯಜ್ಞಾಧಿಪತಿಯೂ ಆದ ಶ್ರೀಭಗವಂತ ನನ್ನು ಆರಾಧಿಸಿ ಇಂದ್ರನು ಸರ್ವಪಾಪಗಳ ದೆಸೆಯಿಂದಲೂ ಬಿಡುಗಡೆ ಹೊಂದಿ ಹಿಂದಿನಂತೆ ಲೋಕಪೂಜ್ಯನಾದನು.

ಹೀಗೆ ಶ್ರೇಷ್ಠವಾದ ಈ ಉಪಾಖ್ಯಾನದಲ್ಲಿ ಇಂದ್ರನಿಗೆ ವಿಜಯವನ್ನೂ, ಆತನು ಪಾಪಗಳ ದೆಸೆಯಿಂದ ಬಿಡುಗಡೆ ಹೊಂದಿದ ಪ್ರಸಂಗವನ್ನೂ ಮತ್ತು ಶ್ರೀಭಗವಂತನ ಪ್ರಿಯಭಕ್ತನಾದ ವೃತ್ರನ ಚರಿತ್ರೆಯನ್ನೂ ವರ್ಣಿಸಿದ್ದೇನೆ. ತೀರ್ಥಗಳಿಗೂ ತೀರ್ಥಸ್ವರೂಪನಾಗಿರುವ ಶ್ರೀಭಗವಂತನ ಅನುಗ್ರಹವೇ ಮುಂತಾದ ಗುಣಗಳನ್ನೂ ಸಂಕೀರ್ತನೆ ಮಾಡಿದ್ದೇನೆ. ಸಮಸ್ತಪಾಪ ಗಳನ್ನೂ ತೊಳೆದುಹಾಕುವ ಮತ್ತು ಭಕ್ತಿಯನ್ನೂ ವೃದ್ಧಿಪಡಿಸುವ ಪವಿತ್ರ ವಾದ ಉಪಾಖ್ಯಾನವಿದು. ಬುದ್ಧಿಶಾಲಿಗಳಾದ ಸುಕೃತಿಗಳು ಈ ಇಂದ್ರ ದೇವತಾಸಂಬಂಧವಾದ ಆಖ್ಯಾನವನ್ನು ಸದಾ ಓದುತ್ತಾ, ಕೇಳುತ್ತಾ ಇರಬೇಕು. ವಿಶೇಷವಾಗಿ ಪರ್ವಕಾಲಗಳು ಬಂದಾಗ ಇದನ್ನು ಅವಶ್ಯವಾಗಿ ಸೇವಿಸಬೇಕು. ಇದು ಧನವನ್ನೂ ಯಶಸ್ಸನ್ನೂ ವೃದ್ಧಿಪಡಿಸುವ ಉಪಾಖ್ಯಾನವು. ಸಮಸ್ತಪಾಪಗಳನ್ನೂ ತೊಳೆದುಹಾಕುವುದು. ಶತ್ರುಗಳ ಮೇಲೆ ಜಯವನ್ನು ತಂದುಕೊಡುವುದು ಮತ್ತು ಆಯುಸ್ಸನ್ನೂ ಮಂಗಳವನ್ನೂ ವೃದ್ಧಿಪಡಿಸುವುದು." (ಶ್ಲೋಕ 18-23)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಷಷ್ಠಸ್ಕಂಧದ ೧೩ನೆಯ ಅಧ್ಯಾಯವು ಮುಗಿಯಿತು.

ಷಷ್ಠಸ್ಕಂಧ ೧೪ನೆಯ ಅಧ್ಯಾಯ

ವೃತ್ರಾಸುರನ ಪೂರ್ವಚರಿತ್ರೆ

ವೃತ್ರನ ಉಪಾಖ್ಯಾನವನ್ನು ಕೇಳಿದ ಪರೀಕ್ಷಿದ್ರಾಜನು ಶ್ರೀಶುಕ ಮಹರ್ಷಿಗಳನ್ನು ಹೀಗೆ ಪ್ರಶ್ನೆಮಾಡಿದನು :

ರಜಸ್ತಮಃಸ್ವಭಾವಸ್ಯ ಬ್ರಹ್ಮನ್ವೃತ್ರಸ್ಯ ಪಾಪ್ಮನಃ ।
ನಾರಾಯಣೇ ಭಗವತಿ ಕಥಮಾಸೀದ್ದೃಢಾ ಮತಿಃ ॥೧॥

"ಮಹಾತ್ಮರೇ! ವೃತ್ರಾಸುರನಾದರೋ ರಜೋಗುಣ-ತಮೋಗುಣ ಪ್ರಕೃತಿಯುಳ್ಳ ಅಸುರನು. ಪಾಪಕರ್ಮಿಯು. ಅಂತಹವನಿಗೆ ಶ್ರೀಭಗವಂತನಾದ ನಾರಾಯಣನಲ್ಲಿ ದೃಢವಾದ ಭಕ್ತಿಯು ಹೇಗೆ ಉಂಟಾಯಿತು?

ಸಾಮಾನ್ಯವಾಗಿ ಶುದ್ಧಸತ್ತ್ವಮಯರಾದ ದೇವತೆಗಳಿಗೂ ಮತ್ತು ಪವಿತ್ರಹೃದಯರಾದ ಮಹರ್ಷಿಗಳಿಗೂ ಕೂಡ ಶ್ರೀಭಗವಂತನಾದ ಮುಕುಂದನ ಶ್ರೀಚರಣಗಳಲ್ಲಿ ಭಕ್ತಿಯುಂಟಾಗುವುದು ಕಷ್ಟ. ಭಗವದ್ಭಕ್ತಿಯು ಅತಿದುರ್ಲಭವಾದುದು. ಈ ಜಗತ್ತಿನಲ್ಲಿ ಭೂಮಿಯಲ್ಲಿರುವ ಧೂಳುಗಳಂತೆ ಜೀವಿಗಳು ಅಸಂಖ್ಯಾತರಾಗಿದ್ದಾರೆ. ಅವರಲ್ಲಿಯೂ ಮನುಷ್ಯರೇ ಮುಂತಾದ ಕೆಲವು ಶ್ರೇಷ್ಠಜೀವಿಗಳು ಮಾತ್ರವೇ ತಮ್ಮ ಕಲ್ಯಾಣವನ್ನು ಸಾಧಿಸಿಕೊಳ್ಳಲು ಪ್ರಯತ್ನಪಡುತ್ತಾರೆ. ಅಂತಹವರಲ್ಲಿಯೂ ಸಂಸಾರದಿಂದ ಬಿಡುಗಡೆಯನ್ನು ಪಡೆಯಲು ಬಯಸುವವರು ಅತ್ಯಂತ ವಿರಳ. ಹಾಗೆ ಮೋಕ್ಷವನ್ನು ಬಯಸುವವರಲ್ಲಿಯೂ ಸಾವಿರದಲ್ಲಿ ಒಬ್ಬನು ತಾನೇ ಮುಕ್ತಸಿದ್ಧಿಯನ್ನು ಪಡೆಯುವನು? ಮಹಾಮುನಿಗಳೇ! ಕೋಟಿ ಕೋಟಿ ಸಿದ್ಧರಲ್ಲೂ ಮತ್ತು ಮುಕ್ತರಲ್ಲೂ ನಾರಾಯಣನೊಬ್ಬನಲ್ಲೇ ಪರಾಯಣನಾಗಿರುವ ಪ್ರಶಾಂತಚಿತ್ತನಾದ ಮಹಾಪುರುಷನು ದೊರೆಯುವುದು ಅತಿದುರ್ಲಭ. ಹೀಗಿರುವಾಗ ಲೋಕಕ್ಕೆ ಪೀಡೆಯನ್ನು ಉಂಟುಮಾಡುತ್ತಿದ್ದ ಮಹಾಪಾಪಿಯಾದ ವೃತ್ರಾಸುರನಿಗೆ ಭಯಂಕರವಾದ ಯುದ್ಧದ ಸಮಯದಲ್ಲಿ ತನ್ನ ವೃತ್ತಿಗಳೆಲ್ಲವನ್ನೂ ಶ್ರೀಕೃಷ್ಣಪರಮಾತ್ಮನಲ್ಲಿ ದೃಢವಾಗಿ ನೆಲೆಗೊಳಿಸಿಕೊಳ್ಳಲು ಹೇಗೆ ಸಾಧ್ಯವಾಯಿತು? ಇದಕ್ಕೆ ಕಾರಣವೇನು?

ನನಗೆ ಈ ಬಗೆಗೆ ಸಂಶಯವುಂಟಾಗಿ ಅದನ್ನು ಪರಿಹರಿಸಿಕೊಳ್ಳಲು ತುಂಬಾ ಕುತೂಹಲವಾಗಿದೆ. ಆ ವೃತ್ರಾಸುರನ ಪರಾಕ್ರಮವಾದರೋ ಅತ್ಯದ್ಭುತ ವಾದುದು. ಯುದದಲ್ಲಿ ದೇವರಾಜನಾದ ಇಂದ್ರನಿಗೂ ಅದರಿಂದಸಂತೋಷ ವುಂಟಾಯಿತಲ್ಲವೇ?" (ಶ್ಲೋಕ 2-7)

ಸೂತಪುರಾಣಿಕರು ಶೌನಕಾದಿಮುನಿಗಳಿಗೆ ಹೇಳುತ್ತಾರೆ :

ಶ್ರೀಭಗವಂತರಾದ ಶುಕಮುನಿಗಳು ಶ್ರದ್ಧಾವಂತನಾದ ಪರೀಕ್ಷಿದ್ರಾಜನ ಆ ಶ್ರೇಷ್ಠವಾದ ಪ್ರಶ್ನೆಯನ್ನು ಕೇಳಿ ಆತನನ್ನು ಅಭಿನಂದಿಸುತ್ತಾ ಹೀಗೆ ಉತ್ತರನೀಡಿದರು :

"ಎಲೈ ನೃಪಶ್ರೇಷ್ಠನೇ! ಈ ವಿಷಯದಲ್ಲಿ ನಾನು ಒಂದು ಇತಿಹಾಸ ವನ್ನು ಹೇಳುತ್ತೇನೆ. ಅದನ್ನು ಸಾವಧಾನವಾಗಿ ಕೇಳು. ಅದನ್ನು ನಾನು ನನ್ನ ತೀರ್ಥರೂಪರಾದ ವೇದವ್ಯಾಸರು, ದೇವರ್ಷಿನಾರದರು ಮತ್ತು ಮಹರ್ಷಿದೇವಲರು–ಇವರ ಬಾಯಿಂದ ವಿಧಿಪೂರ್ವಕವಾಗಿ ಕೇಳಿದ್ದೇನೆ.

(ಶ್ಲೋಕ 8-9)

ಬಹಳ ಹಿಂದಿನ ಕಾಲದ ಚರಿತ್ರೆ. ಶೂರಸೇನದೇಶದಲ್ಲಿ ಚಿತ್ರಕೇತು ವೆಂದು ಪ್ರಸಿದ್ಧನಾದ ಒಬ್ಬ ಸಾರ್ವಭೌಮನಿದ್ದನು. ಆತನ ರಾಜ್ಯದಲ್ಲಿ ಭೂಮಿಯು ಕಾಮಧೇನುವಿನಂತೆ ಪ್ರಜೆಗಳ ಆಹಾರಾದಿ ಕಾಮನೆಗಳನ್ನು ಯಥೇಷ್ಟವಾಗಿ ಈಡೇರಿಸುತ್ತಿತ್ತು. ಆತನಿಗೆ ಒಂದು ಕೋಟಿ (ಬಹುಸಂಖ್ಯಾತ ರಾದ) ರಾಣಿಯರಿದ್ದರು. ರಾಜನಿಗೆ ಸಂತಾನವನ್ನು ಪಡೆಯಲು ಬೇಕಾದ ಯೌವನ, ವೀರ್ಯ, ಸಂಪತ್ತು ಎಲ್ಲವೂ ಇದ್ದುವು. ಆದರೂ ಆತನಿಗೆ ಯಾವ ರಾಣಿಯಲ್ಲಿಯೂ ಒಂದು ಸಂತಾನವೂ ಆಗಲಿಲ್ಲ. ಆತನಿಗೆ ಯಾವ ವಿಷಯದಲ್ಲೂ ಕುಂದು-ಕೊರತೆಗಳಿರಲಿಲ್ಲ. ಸೌಂದರ್ಯ, ಔದಾರ್ಯ, ಯೌವನ, ಕುಲೀನತೆ, ವಿದ್ಯೆ, ಅಧಿಕಾರ, ಸಂಪತ್ತು ಎಲ್ಲವೂ ಆತನಲ್ಲಿ ತುಂಬಿದ್ದುವು. ಆದರೂ ಆತನ ಪತ್ನಿಯರೆಲ್ಲರೂ ಬಂಜೆಯರಾಗಿದ್ದುದು ಆತನಿಗೆ ತುಂಬಾ ಚಿಂತೆ-ಕಳವಳಗಳಿಗೆ ಕಾರಣವಾಗಿತ್ತು. ಆತನು ಇಡೀ ಭೂಮಂಡಲಕ್ಕೆ ಏಕಛತ್ರಾಧಿಪತಿಯಾಗಿದ್ದನು. ಸುಂದರಿಯರಾದ ಮಡದಿ

ಯರು, ವಿಧೇಯರಾದ ಪ್ರಜೆಗಳು ಮತ್ತು ಎಲ್ಲ ಬಗೆಯ ಸಂಪತ್ತುಗಳೂ ಆತನ ಸೇವೆಗೆ ಸಿದ್ಧವಾಗಿದ್ದುವು. ಆದರೂ ಆತನಿಗೆ ಇವು ಯಾವುವೂ ಸುಖವನ್ನುಂಟುಮಾಡಲಿಲ್ಲ. ಹೀಗೆಯೇ ಇರುವಾಗ ಒಂದು ದಿನ ಭಗವಂತ ರಾದ ಅಂಗಿರಸಮಹರ್ಷಿಗಳು ಯಥೇಚ್ಛವಾಗಿ ನಾನಾಲೋಕಗಳಲ್ಲಿ ಸಂಚಾರಮಾಡುತ್ತಾ ಅಕಸ್ಮಾತ್ತಾಗಿ ಆತನ ಅರಮನೆಗೆ ದಯಮಾಡಿಸಿದರು. ರಾಜನು ಎದ್ದು ನಿಂತು ಸ್ವಾಗತ, ಅರ್ಘ್ಯ, ಪಾದ್ಯ–ಮುಂತಾದುವುಗಳಿಂದ ಅವರನ್ನು ವಿಧಿಪೂರ್ವಕವಾಗಿ ಆರಾಧಿಸಿದನು. ಆತಿಥ್ಯಸತ್ಕಾರಾನಂತರ ಮಹರ್ಷಿಗಳು ಸುಖವಾಗಿ ಆಸನದ ಮೇಲೆ ವಿರಾಜಿಸಿದಾಗ ಚಿತ್ರಕೇತುವೂ ಕೂಡ ಶಾಂತನಾಗಿ ಅವರ ಬಳಿಯಲ್ಲಿಯೇ ಕುಳಿತುಕೊಂಡನು. ರಾಜನು ಅತ್ಯಂತವಿನಯಶಾಲಿಯಾಗಿದ್ದು ತಮ್ಮ ಬಳಿಯಲ್ಲಿ ನೆಲದ ಮೇಲೆಯೇ ಕುಳಿತು ಭಕ್ತ್ಯಾದರಗಳನ್ನು ತೋರಿಸಿದ್ದನ್ನು ಗಮನಿಸಿದ ಅಂಗಿರಸಮಹರ್ಷಿ ಗಳು ಆತನನ್ನು ಆದರಿಸಿ ಕುಶಲಪ್ರಶ್ನೆಮಾಡುತ್ತಾ ಹೀಗೆಂದರು :

"ಮಹಾರಾಜ! ನೀನು ನಿನ್ನ ಗುರು, ಮಂತ್ರಿ, ರಾಷ್ಟ್ರ, ದುರ್ಗ, ಸೈನ್ಯ ಮತ್ತು ಮಿತ್ರರೇ ಮುಂತಾದ ಪ್ರಕೃತಿಗಳೊಡನೆ ಸುಖವಾಗಿರುವೆಯಾ? ಜೀವಗಳು ಮಹತ್ತತ್ತ್ವವೇ ಮುಂತಾದ ಆರು ಆವರಣಗಳಿಂದ ಸುತ್ತುವರಿಯಲ್ಪಟ್ಟಿರುವಂತೆ ರಾಜನೂ ಈ ಏಳು ಮಂದಿ ಪ್ರಕೃತಿಗಳಿಂದ ಸುತ್ತುವರಿಯಲ್ಪಟ್ಟಿರುತ್ತಾನೆ. ಎಲೈ ರಾಜೇಂದ್ರನೇ! ಈ ಪ್ರಕೃತಿಯು ಅನುಕೂಲವಾಗಿದ್ದರೆ ತಾನೇ ರಾಜನೂ ರಾಜ್ಯಸುಖವನ್ನು ಅನುಭವಿಸ ಬಹುದು? ಹಾಗೆಯೇ ಪ್ರಕೃತಿಗಳೂ ತಮ್ಮ ರಕ್ಷಣೆಯ ಭಾರವನ್ನು ರಾಜನಿಗೆ ಒಪ್ಪಿಸಿ ತಾವು ಸುಖ-ಸಮೃದ್ಧಿಗಳನ್ನು ಅನುಭವಿಸುತ್ತಿರಬಹುದು? ಮಹಾರಾಜ! ನಿನ್ನ ರಾಣಿಯರು, ಪ್ರಜೆಗಳು, ಸಲಹೆಗಾರರು, ಸೇವಕರು, ವ್ಯಾಪಾರಿಗಳು, ಮಂತ್ರಿಗಳು, ನಾಗರಿಕರು, ದೇಶನಿವಾಸಿಗಳು ಮತ್ತು ಮಂಡಲೇಶ್ವರರಾದ ರಾಜರು ಮತ್ತು ಪುತ್ರರು–ಎಲ್ಲರೂ ನಿನ್ನ ವಶದಲ್ಲಿರುವ ರಷ್ಟೇ? ನಿಜವನ್ನು ಹೇಳುವುದಾದರೆ ಮನಸ್ಸು ಯಾವನಿಗೆ ಸ್ವಾಧೀನದಲ್ಲಿ ಇರುತ್ತದೆಯೋ ಆತನು ತಾನೇ ಇವರೆಲ್ಲರನ್ನೂ ವಶದಲ್ಲಿಟ್ಟುಕೊಳ್ಳ ಬಹುದು? ಇವರು ಮಾತ್ರವಲ್ಲದೇ ಎಲ್ಲ ಲೋಕಗಳೂ ಮತ್ತು ಲೋಕಪಾಲ ಕರೂ ಕೂಡ ತುಂಬಾ ಸಾವಧಾನದಿಂದ ಆತನಿಗೆ ಕಪ್ಪ-ಕಾಣಿಕೆಗಳನ್ನು

ಅರ್ಪಿಸುತ್ತಾ ಆತನ ಪ್ರಸನ್ನತೆಯನ್ನು ಕೋರುವರು. ಆದರೆ ನಿನಗೆ ಸಂತೋಷ-ಸಮಾಧಾನಗಳು ಇಲ್ಲವಾಗಿವೆಯೆಂದು ನಿನ್ನನ್ನು ನೋಡಿದರೆ ತಿಳಿಯುತ್ತದೆ. ನಿನ್ನ ಯಾವುದೋ ಕಾಮನೆಯು ಈಡೇರಿಲ್ಲ–ಎಂದು ಅನ್ನಿಸುತ್ತಿದೆ. ಯಾವುದೋ ಒಳವಿಷಯವನ್ನು ಕುರಿತ ಚಿಂತೆಯು ನಿನ್ನ ಮುಖದಲ್ಲಿ ಎದ್ದು ಕಾಣುತ್ತಿದೆ. ಹೀಗೆ ನಿನ್ನ ಮನಸ್ಸು ಅಸಂತುಷ್ಟವಾಗಿ ರುವುದಕ್ಕೆ ಬೇರೆ ಯಾರಾದರೂ ಕಾರಣರೋ ಅಥವಾ ನೀನೇ ಕಾರಣವಾಗಿ ದ್ದೀಯೋ? ತಿಳಿಸಪ್ಪಾ."

ಮಹರ್ಷಿಗಳಿಗೆ ಅವನ ಚಿಂತೆಗೆ ಕಾರಣವೇನೆಂಬುದು ಗೊತ್ತಿದ್ದರೂ ಅವರು ಆತನನ್ನು ಹೀಗೆ ಬಗೆ-ಬಗೆಯಾಗಿ ಪ್ರಶ್ನೆಮಾಡಲು, ಸಂತಾನದ ಬಯಕೆಯಿಂದಲೇ ಕೂಡಿದ್ದ ಚಿತ್ರಕೇತುವು ಅವರಿಗೆ ವಿನಯದಿಂದ ತಲೆಬಾಗಿ ಹೀಗೆ ವಿಜ್ಞಾಪನೆಮಾಡಿದನು : (ಶ್ಲೋಕ 10-22)

"ಶ್ರೀಭಗವಂತರೇ! ತಪೋಜ್ಞಾನ-ಸಮಾಧಿಗಳಿಂದ ಪಾಪಗಳನ್ನು ಕಳೆದುಕೊಂಡಿರುವ ಯೋಗಿಗಳಿಗೆ ಪ್ರಾಣಿಗಳ ಶರೀರದ ಹೊರಗಾಗಲೀ, ಒಳಗಾಗಲೀ ಯಾವುದೂ ತಿಳಿಯದ ವಿಷಯವಿಲ್ಲ. ಹೀಗೆ ಎಲ್ಲವನ್ನೂ ತಿಳಿದುಕೊಂಡಿದ್ದರೂ ನೀವು ನನ್ನ ಚಿಂತೆಗೆ ಕಾರಣವೇನೆಂದು ನನ್ನನ್ನು ಕೇಳುತ್ತಿದ್ದೀರಿ. ಅದರಿಂದ ತಮ್ಮ ಆಜ್ಞೆ ಮತ್ತು ಪ್ರೇರಣೆಗಳಂತೆ ನಾನು ನನ್ನ ಚಿಂತೆಗೆ ಕಾರಣವೇನೆಂಬುದನ್ನು ವಿಜ್ಞಾಪಿಸುತ್ತೇನೆ. ಲೋಕಪಾಲಕರೂ ಕೂಡ ಆಸೆಪಡಲು ಯೋಗ್ಯವಾದ ಭೂಮಿಯ ಸಾಮ್ರಾಜ್ಯ, ಐಶ್ವರ್ಯ, ಅಧಿಕಾರ, ಸಂಪತ್ತು–ಎಲ್ಲವೂ ನನ್ನಲ್ಲಿ ತುಂಬಿವೆ. ಆದರೂ ಸಂತಾನ ಸೌಭಾಗ್ಯ ವಿಲ್ಲದ್ದರಿಂದ ನನಗೆ ಈ ಸುಖ-ಭೋಗಗಳಿಂದ ಯಾವುದೇ ರೀತಿಯ ಶಾಂತಿಯೂ ಉಂಟಾಗುತ್ತಿಲ್ಲ. ಹಸಿವು-ಬಾಯಾರಿಕೆಗಳಿಂದ ಪೀಡಿತವಾಗಿ ರುವ ಪ್ರಾಣಿಗೆ ಆಹಾರ-ಪಾನೀಯಗಳನ್ನು ಬಿಟ್ಟು ಬೇರೆ ಯಾವ ಸುಖ-ಭೋಗಗಳಿಂದಲೂ ತೃಪ್ತಿಯು ಉಂಟಾಗುವುದಿಲ್ಲವಷ್ಟೇ! ನನ್ನ ಸ್ಥಿತಿಯೂ ಹಾಗೆಯೇ ಆಗಿದೆ. ಮಹಾತ್ಮರೇ! ನಾನು ದುಃಖಿಸುತ್ತಿರುವುದು ಮಾತ್ರ ವಲ್ಲದೇ–'ಪಿಂಡದಾನವು ಮುಂದೆ ಸಿಕ್ಕುವುದಿಲ್ಲವಲ್ಲಾ'–ಎಂದು ನನ್ನ ಪಿತೃಗಳೂ ದುಃಖಪಡುತ್ತಿದ್ದಾರೆ. ಮಹಾನುಭಾವರೇ! ಈಗ ತಾವು ನನಗೆ

ಸಂತಾನಭಾಗ್ಯವನ್ನು ದಯಪಾಲಿಸಿ ಸಂತಾನಹೀನನಿಗೆ ಪರಲೋಕದಲ್ಲಿ ಉಂಟಾಗುವ ಘೋರವಾದ ನರಕದಿಂದ ನನ್ನನ್ನು ಉದ್ಧಾರಮಾಡಿರಿ. ಇಹಲೋಕ-ಪರಲೋಕಗಳೆರಡರಲ್ಲೂ ನಾನು ಸಮಸ್ತದುಃಖಗಳಿಂದಲೂ ಬಿಡುಗಡೆ ಹೊಂದುವಂತೆ ಮಾಡಿರಿ." (ಶ್ಲೋಕ 23-26)

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಚಿತ್ರಕೇತುವಿನ ಬೇಡಿಕೆಯಿಂದ ಮನಸ್ಸು ಕರಗಿದ ಆ ಕರುಣಾಳು ಗಳಾದ, ಬ್ರಹ್ಮಪುತ್ರರಾದ ಭಗವಾನ್ ಅಂಗಿರಸಮಹರ್ಷಿಗಳು ತ್ವಷ್ಟೃ ದೇವತೆಗೆ ಯೋಗ್ಯವಾದ ಚರುವನ್ನು ಸಿದ್ಧಪಡಿಸಿ ಅದರಿಂದ ಆ ದೇವತೆ ಯನ್ನು ಪೂಜಿಸಿದರು. ಆ ಯಜ್ಞಶೇಷದ ಪ್ರಸಾದವನ್ನು ಅವರು ಚಕ್ರವರ್ತಿಯ ರಾಣಿಯರಲ್ಲಿ ಜ್ಯೇಷ್ಠೆಯೂ–ಗುಣಸಂಪನ್ನೆಯೂ ಆದ 'ಕೃತದ್ಯುತಿ' ಎಂಬಾಕೆಗೆ ಅನುಗ್ರಹಿಸಿಕೊಟ್ಟು ಚಿತ್ರಕೇತುವನ್ನು ಕುರಿತು 'ರಾಜೇಂದ್ರ! ನಿನಗೆ ನಿನ್ನ ಈ ಪತ್ನಿಯ ಗರ್ಭದಲ್ಲಿ ಒಬ್ಬ ಪುತ್ರನು ಜನಿಸುವನು. ಆತನು ನಿನ್ನ ಹರ್ಷ ಮತ್ತು ಶೋಕ ಎರಡಕ್ಕೂ ಕಾರಣನಾಗುವನು'–ಎಂದು ಹೇಳಿ ಮಹರ್ಷಿಗಳು ಹೊರಟುಹೋದರು. ಅದರಂತೆಯೇ ಯಜ್ಞಶೇಷಪ್ರಸಾದವನ್ನು ಸೇವನೆ ಮಾಡಿದ ಕೃತದ್ಯುತಿಯು–ಕೃತ್ತಿಕೆಯು ತನ್ನ ಗರ್ಭದಲ್ಲಿ ಅಗ್ನಿಕುಮಾರನನ್ನು ಧರಿಸಿದಂತೆ–ಮಹಾರಾಜ ಚಿತ್ರಕೇತುವಿ ನಿಂದ ಗರ್ಭವನ್ನು ಧರಿಸಿದಳು. ಶೂರಸೇನರಾಜೇಂದ್ರನ ತೇಜಸ್ಸಿನಿಂದ ಕೃತದ್ಯುತಿಯ ಗರ್ಭವು ಶುಕ್ಲಪಕ್ಷದ ಚಂದ್ರನಂತೆ ಕ್ರಮವಾಗಿ ವೃದ್ಧಿಹೊಂದ ತೊಡಗಿತು. (ಶ್ಲೋಕ 27-31)

ಅನಂತರ ಸಕಾಲದಲ್ಲಿ ಆಕೆಯ ಗರ್ಭದಿಂದ ಒಬ್ಬ ಪರಮಸುಂದರ ನಾದ ಪುತ್ರನು ಜನಿಸಿದನು. ಕುಟುಂಬ-ಪರಿವಾರಸಹಿತನಾದ ರಾಜನಿಗೆ ಮಾತ್ರವಲ್ಲದೇ ಆ ಸಮಾಚಾರವನ್ನು ಕೇಳಿದ ಶೂರಸೇನರಾಜ್ಯದ ಪ್ರಜೆ ಗಳೆಲ್ಲರಿಗೂ ಅದರಿಂದ ಪರಮಾನಂದವಾಯಿತು. ಚಕ್ರವರ್ತಿ ಚಿತ್ರಕೇತುವಿನ ಆನಂದಕ್ಕೆ ಎಲ್ಲೆಯೇ ಇಲ್ಲವಾಯಿತು. ಆತನು ಸ್ನಾನಮಾಡಿ ಶುಚಿಯಾಗಿ ವಸ್ತ್ರಾಭರಣಗಳಿಂದ ಅಲಂಕೃತನಾಗಿ ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿ ಆಶೀರ್ವಾದಗಳನ್ನು ಪಡೆದು ಮಗುವಿಗೆ ಜಾತಕರ್ಮಸಂಸ್ಕಾರ

ವನ್ನು ಮಾಡಿಸಿದನು. ಆ ಬ್ರಾಹ್ಮಣರಿಗೆ ಚಿನ್ನ, ಬೆಳ್ಳಿ, ವಸ್ತ್ರ, ಒಡವೆ, ಗ್ರಾಮಗಳು, ಕುದುರೆಗಳು, ಆನೆಗಳು ಮತ್ತು ಆರು ಅರ್ಬುದಗಳಷ್ಟು ಲೆಕ್ಕದ ಗೋವುಗಳನ್ನು ದಾನಮಾಡಿದನು. ಉದಾರಶಿರೋಮಣಿಯಾದ ಚಿತ್ರಕೇತು ಸಾರ್ವಭೌಮನು ಪುತ್ರನ ಧನ, ಕೀರ್ತಿ, ಆಯುಸ್ಸುಗಳು ಅಭಿವೃದ್ಧಿಹೊಂದ ಲೆಂದು–ಮೋಡವು ಎಲ್ಲ ಜೀವಿಗಳ ಮನೋರಥಗಳನ್ನೂ ಈಡೇರಿಸು ವಂತೆ–ಇತರರಿಗೂ ಅವರು ಬೇಡಿದ ವಸ್ತುಗಳೆಲ್ಲವನ್ನೂ ಕೊಡುಗೈಯಿಂದ ನೀಡಿದನು. ಕಾಸಿನ ಮುಖವನ್ನೇ ಕಾಣದ ಬಡವನಿಗೆ ಬಹಳ ಕಷ್ಟದಿಂದ ಸ್ವಲ್ಪ ಹಣವು ದೊರಕಿದರೂ ಆತನಿಗೆ ಅದರಲ್ಲಿ ಆಸೆ-ಆಸಕ್ತಿಗಳು ಬೆಳೆಯುವಂತೆ–ಬಹಳ ಕಷ್ಟದಿಂದ ಜನಿಸಿದ ಆ ಪುತ್ರನಲ್ಲಿ ರಾಜರ್ಷಿ ಚಿತ್ರಕೇತುವಿನ ಸ್ನೇಹಬಂಧನವು ದಿನೇ ದಿನೇ ಬಿಗಿಯಾಗತೊಡಗಿತು. ಮಗುವಿನ ತಾಯಿಯಾದ ಕೃತದ್ಯುತಿಗೂ ಶಿಶುವಿನ ವಿಷಯದಲ್ಲಿ ಮೋಹದಿಂದ ಸ್ನೇಹ-ಮಮತೆಗಳು ಹೆಚ್ಚಿದುವು. ಆದರೆ ಅದರಿಂದ ಆಕೆಯ ಸವತಿಯರಾಗಿದ್ದ ರಾಣಿಯರಿಗೆ 'ತಮಗೆ ಸಂತಾನವಾಗಲಿಲ್ಲವಲ್ಲಾ!' ಎಂಬ ಕಾರಣದಿಂದ ಕೃತದ್ಯುತಿಯ ವಿಷಯದಲ್ಲಿ ಹೊಟ್ಟೆಯುರಿಯೇ ಹೆಚ್ಚ ತೊಡಗಿತು. ಪ್ರತಿದಿನವೂ ಮಗುವನ್ನು ಮುದ್ದಿಸಿ, ಪ್ರೀತಿಸುತ್ತಿದ್ದ ಚಿತ್ರಕೇತು ವಿಗೆ ಮಗುವಿನ ತಾಯಿಯಾದ ಕೃತದ್ಯುತಿಯಲ್ಲಿ ಇದ್ದಷ್ಟು ಪ್ರೇಮವು ಇತರ ರಾಣಿಯರಲ್ಲಿ ಇಲ್ಲವಾಯಿತು. ಆ ರಾಣಿಯರಿಗೆ ಸಂತಾನವಿಲ್ಲದ ದುಃಖ ವೊಂದು, ಜೊತೆಗೆ ಚಿತ್ರಕೇತುವು ತಮ್ಮನ್ನು ಉಪೇಕ್ಷೆಮಾಡಿದ ವಿಷಾದ ವೊಂದು–ಎರಡೂ ಸೇರಿ ಅವರು ಮಾತ್ಸರ್ಯದಿಂದ ತಮ್ಮನ್ನೇ ಧಿಕ್ಕರಿಸಿ ಕೊಳ್ಳುತ್ತಾ ಮನಸ್ಸಿನಲ್ಲಿಯೇ ಕುದಿಯತೊಡಗಿದರು. 'ಅಕಟಾ! ಪುತ್ರನಿಲ್ಲದ ಹೆಂಗಸಿನದು ಎಂತಹ ಪಾಡು! ಪುತ್ರನನ್ನು ಪಡೆದ ಸವತಿಯರು ಆಕೆಯನ್ನು ತಮ್ಮ ದಾಸಿಯಂತೆ ಕಂಡು ತಿರಸ್ಕಾರಮಾಡುವರು. ಇತರರ ವಿಷಯ ಹಾಗಿರಲಿ ; ಆಕೆಯ ಪತಿಯೇ ಆಕೆಯನ್ನು ಪತ್ನಿಯೆಂದು ಸಂಭಾವಿಸುವುದಿಲ್ಲ. ನಿಜವಾಗಿಯೂ ಪುತ್ರಹೀನೆಯರಾದ ಸ್ತ್ರೀಯರ ಸ್ಥಿತಿಯು ಅತ್ಯಂತ ಶೋಚನೀಯವಾದುದು. ದಾಸಿಯರ ಸ್ಥಿತಿಗಿಂತಲೂ ಹೀನಾಯವಾದ ಸ್ಥಿತಿ ಅವರದು. ಏಕೆಂದರೆ : ದಾಸಿಯರು ತಮ್ಮ ಪ್ರಭುವನ್ನು ಸೇವೆಮಾಡಿ ಆತನಿಂದ ನಿರಂತರವಾಗಿ ಸಮ್ಮಾನವನ್ನೇ ಪಡೆಯುವರು. ಆದರೆ

ದುರದೃಷ್ಟಶಾಲಿನಿಯರಾದ ನಾವು ಅವರಿಗಿಂತಲೂ ಕಡೆಯಾಗಿ ದಾಸಿಯರ ದಾಸಿಯರಂತೆ ಮತ್ತೆ ಮತ್ತೆ ತಿರಸ್ಕಾರಕ್ಕೆ ಪಾತ್ರರಾಗುತ್ತಿದ್ದೇವೆ."

(ಶ್ಲೋಕ 32-41)

ಆ ರಾಣಿಯರು ತಮ್ಮ ಸವತಿಯ ಪುತ್ರಸಂಪತ್ತಿನಿಂದ ಹೊಟ್ಟೆಯುರಿ ಪಟ್ಟುಕೊಳ್ಳುತ್ತಾ ಇರಲು ರಾಜನೂ ಅವರ ವಿಷಯದಲ್ಲಿ ಉದಾಸೀನ ನಾಗಿದ್ದುಬಿಟ್ಟನು. ಅದರ ಫಲವಾಗಿ ಅವರೆಲ್ಲರಿಗೂ ಕೃತದ್ಯುತಿಯ ವಿಷಯ ದಲ್ಲಿ ತಡೆಯಲಾರದ ದ್ವೇಷವುಂಟಾಯಿತು. ಆ ದ್ವೇಷದಿಂದ ಅವರ ಬುದ್ಧಿಯು ಕೆಟ್ಟುಹೋಯಿತು. ಕ್ರೌರ್ಯವು ಅವರ ಚಿತ್ತವನ್ನು ತುಂಬಿ ಕೊಂಡಿತು. ಪತಿಯಾದ ಚಿತ್ರಕೇತುವಿನ ಪುತ್ರಸ್ನೇಹವನ್ನು ಅವರು ಸಹಿಸ ಲಾರದೇ ಹೋದರು. ಆ ಅಸಹನೆಯಿಂದ ಸಿಟ್ಟಿಗೆದ್ದ ಆ ಕ್ರೂರಮನಸ್ಸಿನ ಹೆಂಗಸರು ಆ ಎಳೆವಯಸ್ಸಿನ ಮಗುವಿಗೆ ವಿಷವನ್ನು ಉಣಿಸಿಬಿಟ್ಟರು. ಮಹಾರಾಣಿ ಕೃತದ್ಯುತಿಗೆ ತನ್ನ ಸವತಿಯರ ಈ ಪಾಪದ ಪಿತೂರಿಯು ಸ್ವಲ್ಪವೂ ತಿಳಿದಿರಲಿಲ್ಲ. ಆಕೆಯು ದೂರದಿಂದ ನೋಡಿ ಮಗುವು ನಿದ್ರೆಯಮಾಡುತ್ತಿದೆ–ಎಂದೇ ಭಾವಿಸಿ ಅರಮನೆಯಲ್ಲಿ ನಿಶ್ಚಿಂತೆಯಿಂದ ಅಡ್ಡಾಡುತ್ತಿದ್ದಳು. ಆ ಬುದ್ಧಿಶಾಲಿನಿಯು–ಮಗುವು ಬಹಳ ಹೊತ್ತಾದರೂ ಇನ್ನೂ ಏಳದೇ ಇರುವುದನ್ನು ಗಮನಿಸಿ ದಾದಿಯನ್ನು ಕರೆದು–'ಕಲ್ಯಾಣಿ! ನನ್ನ ಕಂದನನ್ನು ಕರೆದುಕೊಂಡು ಬಾ'–ಎಂದು ಆಜ್ಞೆಮಾಡಿದಳು. ದಾದಿಯು ಮಲಗಿದ್ದ ಮಗುವಿನ ಬಳಿಗೆ ಹೋಗಿ ನೋಡಿದಾಗ ಆಕೆಗೆ ಕಡುಗಾಬರಿಯಾಯಿತು. 'ಮಗುವಿನ ಕಣ್ಣುಗುಡ್ಡೆಗಳು ತಿರುಗುಮುರುಗಾಗಿವೆ. ಉಸಿರು ನಿಂತುಹೋಗಿದೆ. ಪ್ರಾಣ, ಇಂದ್ರಿಯ, ಆತ್ಮ ಎಲ್ಲವೂ ಆ ಸುಕುಮಾರವಾದ ದೇಹವನ್ನು ಬಿಟ್ಟು ಹೊರಟುಹೋಗಿವೆ'–ಎಂಬುದು ಆಕೆಯ ಗಮನಕ್ಕೆ ಬಂದಿತು. ಒಡನೆಯೇ 'ಅಯ್ಯೋ! ಸತ್ತೆನು! ಕೆಟ್ಟೆನು!' ಎಂದು ಕಿರುಚುತ್ತಾ ದೊಪ್ಪನೆ ಭೂಮಿಯಲ್ಲಿ ಕುಸಿದುಬಿದ್ದಳು.

(ಶ್ಲೋಕ 42-46)

ಆಕೆಯು ತನ್ನ ಎರಡು ಕೈಗಳಿಂದಲೂ ಎದೆಯನ್ನು ಚಚ್ಚಿಕೊಳ್ಳುತ್ತಾ ಗಟ್ಟಿಯಾಗಿ ಗೋಳಿಡತೊಡಗಿದಳು. ಆ ಆರ್ತಸ್ವರದ ಅಳುವನ್ನು ಕೇಳಿ ದೊಡನೆಯೇ ತಾಯಿ ಕೃತದ್ಯುತಿಯು ತಟ್ಟನೆ ಮಗುವಿನ ಬಳಿಗೆ ಓಡಿ

ಬಂದಳು. ತನ್ನ ಕಂದನು ಇದ್ದಕ್ಕಿದ್ದಂತೆ ಸತ್ತುಹೋಗಿರುವುದನ್ನು ಕಂಡು ಆಕೆಯು ಮೂರ್ಛೆಗೊಂಡು ದಿಢೀರನೆ ನೆಲಕ್ಕೆ ಉರುಳಿದಳು. ತಲೆಯ ಕೂದಲು ಬಿಚ್ಚಿಹೋಗಿ ಉಟ್ಟಸೀರೆಯು ಅಸ್ತವ್ಯಸ್ತವಾಗಿದ್ದುದನ್ನೂ ಗಮನಿಸದೇ ಪ್ರಜ್ಞೆತಪ್ಪಿ ಬಿದ್ದಳು. ಪ್ರಜ್ಞೆಬಂದೊಡನೆಯೇ ಅತ್ಯಂತಕರುಣಾಜನಕವಾಗಿ ಕೂಗಾಡುತ್ತಾ ಅಳುತ್ತಿದ್ದ ಆಕೆಯ ರೋದನಧ್ವನಿಯನ್ನು ಕೇಳಿ ಅಂತಃಪುರದಲ್ಲಿದ್ದ ಎಲ್ಲ ಹೆಂಗಸರೂ, ಗಂಡಸರೂ ಅಲ್ಲಿಗೆ ಓಡಿಬಂದರು. ಸಹಾನುಭೂತಿಯಿಂದ ಅವರೂ ರೋದಿಸತೊಡಗಿದರು. ಮಗುವನ್ನು ಕೊಲೆಮಾಡಿದ್ದ ಕೆಟ್ಟ ಮನಸ್ಸಿನ ರಾಣಿಯರೂ ಅಲ್ಲಿಗೆ ಬಂದು ಕಪಟದ ಅಳುವಿನ ಅಭಿನಯವನ್ನು ಮಾಡಿದರು. ಇದ್ದಕ್ಕಿದ್ದಂತೆ ತನ್ನ ಕಂದನು ಅಕಾಲಮೃತ್ಯುವಿಗೆ ತುತ್ತಾದನೆಂಬ ಸಮಾಚಾರ ತಿಳಿದು ರಾಜನಿಗೆ ಪುತ್ರಸ್ನೇಹದ ಆಘಾತದಿಂದ ಆತನ ಕಣ್ಣಿನ ಮುಂದೆ ಕತ್ತಲೆ ಕವಿಯಿತು. ರಾಜನು ಶೋಕಭಾರದಿಂದ ಎಡುವುತ್ತಾ ಮುಗ್ಗರಿಸುತ್ತಾ ಮೆಲ್ಲ-ಮೆಲ್ಲಗೆ ಮಂತ್ರಿ-ಬ್ರಾಹ್ಮಣಾದಿ ಪರಿವಾರಸಹಿತನಾಗಿ ಸತ್ತ ಮಗುವಿದ್ದ ಸ್ಥಳಕ್ಕೆ ಬಂದು ದುಃಖವನ್ನು ತಡೆಯಲಾರದೇ ಪ್ರಜ್ಞೆತಪ್ಪಿ ನೆಲಕ್ಕೆ ಉರುಳಿದನು. ಆತನ ತಲೆಕೂದಲು ಬಿಚ್ಚಿಹೋಗಿ ವಸ್ತ್ರಗಳು ಅಸ್ತವ್ಯಸ್ತವಾದುವು. ಬಿಸಿ-ಬಿಸಿ ನಿಟ್ಟುಸಿರಿನಿಂದ ಮುಖವು ಒಣಗಿತು. ಉಮ್ಮಳಿಸುವ ಕಣ್ಣೀರಿನ ಧಾರೆಯಿಂದ ಗಂಟಲು ಕಟ್ಟಿಹೋಯಿತು. ಆತನ ಬಾಯಿಂದ ಮಾತೇ ಹೊರಡದೇ ಹೋಯಿತು. ಸಾಧ್ವೀಮಣಿಯಾದ ಕೃತದ್ಯುತಿಗೆ ತನ್ನ ಪತಿಯು ಹಾಗೆ ದುಃಖದಲ್ಲಿ ಮುಳುಗಿದ್ದನ್ನೂ—ಇದ್ದ ಒಂದೇ ಮಗುವು ಸಾವಿಗೀಡಾದುದನ್ನೂ ಕಂಡು ಮತ್ತೂ ದುಃಖವು ಉಕ್ಕೇರಿತು. ಆಕೆಯು ಅತಿದೈನ್ಯದಿಂದ ಬಗೆ-ಬಗೆಯಾಗಿ ಗೋಳಾಡತೊಡಗಿದಳು. ಅದನ್ನು ಕಂಡು ಅಲ್ಲಿದ್ದ ಮಂತ್ರಿಯೇ ಮುಂತಾದವರೆಲ್ಲರೂ ಶೋಕಗ್ರಸ್ತರಾದರು. ಅಲ್ಲಿ ಯಾರಿಗೆ ಯಾರು ಸಮಾಧಾನ ಹೇಳುವುದು? ಮಹಾರಾಣಿಯ ಕಣ್ಣುಗಳಿಂದ ಕಣ್ಣೀರಿನ ಕೋಡಿಯೇ ಹರಿದುಬರುತ್ತಾ ಕಣ್ಣುಗಳಿಗೆ ಹಾಕಿಕೊಂಡಿದ್ದ ಕಾಡಿಗೆಯು ಕರಗಿ ಕುಂಕುಮಕೇಸರಿ-ಗಂಧಗಳು ಪೂಸಿದ್ದ ವಕ್ಷಃಸ್ಥಳವೂ ನೆನೆಯತೊಡಗಿತು. ಆಕೆಯ ತಲೆಗೂದಲು ಚೆದುರಿಹೋಗಿ ಮುಡಿದಿದ್ದ ಹೂಗಳು ಕೆಳಗೆ ಬೀಳುತ್ತಿದ್ದುವು. ಹೀಗೆ ಆಕೆಯು ಸಹಿಸಲಾರದ ಪುತ್ರಶೋಕದಿಂದ ಕುರರೀಹಕ್ಕಿ

ಯಂತೆ ಅತ್ಯಂತಕರುಣಾಜನಕವಾಗಿ ಗಟ್ಟಿಯಾದ ಧ್ವನಿಯಲ್ಲಿ ವಿವಿಧ ಪ್ರಕಾರಗಳಿಂದ ವಿಲಪಿಸುತ್ತಿದ್ದಳು. (ಶ್ಲೋಕ 47-53)

ಅವಳ ಗೋಳಾಟವನ್ನು ಹೇಗೆ ವರ್ಣಿಸುವುದು? 'ಅಯ್ಯೋ ವಿಧಿಯೇ! ಎಂತಹ ಮೂರ್ಖನು ನೀನು! ನಿನ್ನ ಸೃಷ್ಟಿಗೇ ಪ್ರತಿಕೂಲವಾಗಿರುವ ಕೆಲಸವನ್ನು ಮಾಡುತ್ತಿರುವೆಯಲ್ಲಾ! ವಯಸ್ಸಾದವರು ಬದುಕಿರುವಾಗ ಅವರ ಮುಂದೆಯೇ ಎಳೆಗೂಸುಗಳು ಸಾಯುವಂತೆ ಮಾಡುತ್ತೀಯೆ. ವಾಸ್ತವವಾಗಿ ನಿನ್ನ ಸ್ವಭಾವವೇ ಹೀಗಿರುವುದಾದರೆ ನಿನ್ನನ್ನು ನಿಜವಾಗಿಯೂ ಜೀವಿಗಳ ಶಾಶ್ವತಶತ್ರುವೆಂದೇ ತಿಳಿಯಬೇಕು. ಪ್ರಪಂಚದಲ್ಲಿ ಪ್ರಾಣಿಗಳ ಜನನ-ಮರಣಗಳಲ್ಲಿ ಯಾವ ಕ್ರಮವೂ ಇಲ್ಲ. ಯಾರು ಬೇಕಾದರೂ ಮೊದಲೂ ಸಾಯಬಹುದು. ಯಾರು ಬೇಕಾದರೂ ಅನಂತರ ಸಾಯಬಹುದು–ಎನ್ನುವುದಾದರೆ ಅವು ತಮ್ಮ ಪ್ರಾರಬ್ಧಕರ್ಮದಂತೆ ಹುಟ್ಟುಸಾವುಗಳನ್ನು ಅನುಭವಿಸುತ್ತವೆ. ಕರ್ಮಗಳೇ ಅವುಗಳನ್ನು ನಡೆಸುವಾಗ ನಿನ್ನ ಇರುವಿಕೆಯ ಆವಶ್ಯಕತೆಯಾದರೂ ಏನು? ನೀನು ಬಂಧುಗಳನ್ನು ಸ್ನೇಹಬಂಧನದಲ್ಲಿ ಕಟ್ಟಿಹಾಕಿರುವ ಉದ್ದೇಶ–ಅವರು ನಿನ್ನ ಸೃಷ್ಟಿಯನ್ನು ಮುಂದುವರಿಸುವುದೇ ಅಲ್ಲವೇ? ಆದರೆ ಹೀಗೆ ಮಕ್ಕಳನ್ನು ಸಾವಿಗೀಡು ಮಾಡಿ ನಿನ್ನ ಸಂಕಲ್ಪವೃಕ್ಷವನ್ನು ನೀನೇ ಕಡಿದುಹಾಕುತ್ತಿರುವೆಯಲ್ಲಾ!'– ಎಂದು ಅವಳು ಸೃಷ್ಟಿಕರ್ತನನ್ನು ನಿಂದಿಸತೊಡಗಿದಳು.

ಅನಂತರ ರಾಣಿಯು ಸತ್ತುಬಿದ್ದಿದ್ದ ಆ ರಾಜಪುತ್ರನ ಕಡೆಗೆ ತಿರುಗಿ ಆತನನ್ನು ಸಂಬೋಧಿಸುತ್ತಾ–"ಅಪ್ಪಾ ಮಗು! ನೀನಿಲ್ಲದೇ ನಾನು ಹೇಗೆ ಅನಾಥಳೂ ದೀನಳೂ ಆಗಿದ್ದೇನೆಂಬುದನ್ನು ನೋಡು. ಇಂತಹ ಸ್ಥಿತಿಯಲ್ಲಿ ನನ್ನನ್ನು ಕೈಬಿಟ್ಟು ಹೋಗುವುದು ನಿನಗೆ ಉಚಿತವಲ್ಲ. ಸ್ವಲ್ಪ ಕಣ್ಣು ತೆರೆದು ನಿನ್ನ ತಂದೆಯನ್ನಾದರೂ ನೋಡು. ನಿನ್ನ ಅಗಲಿಕೆಯಿಂದ ಅವರು ಶೋಕಪಡುತ್ತಿದ್ದಾರೆ. ಸಂತಾಹೀನರಾದ ಪುರುಷರು ಯಾವ ಘೋರನರಕವನ್ನು ಕಷ್ಟದಿಂದ ದಾಟಬೇಕಾಗುತ್ತದೆಯೋ–ಆ ನರಕವನ್ನು ನಾವು ನಿನ್ನ ಸಹಾಯದಿಂದ ಆಯಾಸವಿಲ್ಲದೆಯೇ ದಾಟಬೇಕಾಗಿದೆ. ಯಮರಾಜನ ಜೊತೆಯಲ್ಲಿ ತುಂಬಾ ದೂರ ಹೋಗಬೇಡ, ಕಂದಯ್ಯಾ! ಆತನು ದಯೆ-ದಾಕ್ಷಿಣ್ಯ ಇಲ್ಲದವನು. ಎನ್ನ ಮುದ್ದಿನ ಮಗನೇ! ಓ ರಾಜಕುಮಾರ!

ಎದ್ದೇಳು ಮಗು! ಇದೋ ನೋಡು. ನಿನ್ನ ಜೊತೆಯ ಬಾಲಕರು ನಿನ್ನನ್ನು ಆಟಕ್ಕೆ ಕರೆಯುತ್ತಿದ್ದಾರೆ. ನೀನು ಮಲಗಿ ತುಂಬಾ ಹೊತ್ತಾಯಿತು. ಈಗ ನಿನಗೆ ಹಸಿವಾಗಿರಬೇಕು. ಏಳು. ಏನಾದರೂ ಸ್ವಲ್ಪ ಊಟ ಮಾಡುವೆಯಂತೆ. ಬೇರೇನೂ ಇಲ್ಲದಿದ್ದರೆ ನನ್ನ ಹಾಲನ್ನಾದರೂ ಕುಡಿದು ನೆಂಟರಿಷ್ಟರಾದ ನಮ್ಮ ದುಃಖವನ್ನು ಹೋಗಲಾಡಿಸು. ಕಂದ! ಇದೇನು ಇಂದು ನಿನ್ನ ಮುಖಾರವಿಂದದಲ್ಲಿ ಎಂದಿನಂತೆ ಮುದ್ದಾದ ಎಳೆನಗೆಯೂ ಆನಂದ ತುಂಬಿದ ಚೆನ್ನೋಟವೂ ಕಾಣುತ್ತಿಲ್ಲವಲ್ಲಾ! ಎಂತಹ ದುರ್ಭಾಗ್ಯಳು ನಾನು? ನಿನ್ನ ತೊದಲುನುಡಿಗಳೂ ಮುದ್ದು ಮಾತುಗಳೂ ನನಗೆ ಕೇಳಿಸುತ್ತಿಲ್ಲವಲ್ಲಾ! ನಿಜವಾಗಿಯೂ ನಿರ್ದಯನಾಗಿರುವ ಯಮ ರಾಜನು ಎಲ್ಲಿಗೆ ಹೋದರೆ ಹಿಂದಿರುಗಿಬರುವುದಕ್ಕಾಗುವುದಿಲ್ಲವೋ ಅಂತಹ–ಪರಲೋಕಕ್ಕೆ ನಿನ್ನನ್ನು ಕರೆದುಕೊಂಡು ಹೋಗಿಬಿಟ್ಟನು"–ಎಂದು ರೋದಿಸಿದಳು.

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ತನ್ನ ರಾಣಿಯು ಮೃತನಾದ ಪುತ್ರನಿಗಾಗಿ ಹಾಗೆ ಬಗೆ-ಬಗೆಯಾಗಿ ವಿಲಪಿಸುತ್ತಿರುವುದನ್ನು ಕಂಡು ಚಿತ್ರಕೇತುವೂ ಅತ್ಯಂತಶೋಕಸಂತಪ್ತನಾಗಿ ಬಿಕ್ಕಿ-ಬಿಕ್ಕಿ ಅಳತೊಡಗಿದನು. ರಾಜ-ರಾಣಿಯರು ವಿಲಪಿಸುವುದನ್ನು ಕಂಡು ಅವರಲ್ಲಿ ನಿಷ್ಠೆಯನ್ನು ಹೊಂದಿದ್ದ ಅವರ ಅನುಗಾಮಿಗಳಾಗಿದ್ದ ಸ್ತ್ರೀ-ಪುರುಷರೆಲ್ಲರೂ ದುಃಖಮಗ್ನರಾಗಿ ರೋದಿಸತೊಡಗಿದರು. ಈ ರೀತಿಯಲ್ಲಿ ಇಡೀ ನಗರವೇ ಶೋಕದಿಂದ ಜಡವಸ್ತುವಿನಂತೆ ಆಗಿಬಿಟ್ಟಿತು. 'ಚಿತ್ರಕೇತು ಮಹಾರಾಜನು ಹೀಗೆ ಪುತ್ರಶೋಕದಿಂದ ಚೇತನಾರಹಿತನಾಗಿ ಬಿಟ್ಟಿದ್ದಾನೆ. ಆಗ ಆತನಿಗೆ ತಿಳಿವಳಿಕೆ ಕೊಡುವವರು ಯಾರೂ ಇಲ್ಲದೇ ಆತನು ಅಸಹಾಯಕನಾಗಿದ್ದಾನೆ'–ಎಂಬುದನ್ನು ಕಂಡುಕೊಂಡ ಅಂಗಿರಸಮಹರ್ಷಿಗಳೂ ಮತ್ತು ನಾರದಮಹರ್ಷಿಗಳೂ ಅವನಿದ್ದ ಜಾಗಕ್ಕೆ ದಯಮಾಡಿಸಿದರು.
(ಶ್ಲೋಕ 54-61)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಷಷ್ಠಸ್ಕಂಧದ ೧೪ನೆಯ ಅಧ್ಯಾಯವು ಮುಗಿಯಿತು.

ಷಷ್ಠಸ್ಕಂಧ ೧೫ನೆಯ ಅಧ್ಯಾಯ

ಚಿತ್ರಕೇತುವಿಗೆ ಅಂಗಿರಸರಿಂದ ಮತ್ತು ನಾರದಮಹರ್ಷಿಗಳಿಂದ ಉಪದೇಶ

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಊಚತುರ್ಮೃತಕೋಪಾನ್ತೇ ಪತಿತಂ ಮೃತಕೋಪಮಮ್ ।
ಶೋಕಾಭಿಭೂತಂ ರಾಜಾನಂ ಬೋಧಯನ್ತೌ ಸದುಕ್ತಿಭಿಃ ॥೧॥

ಹಾಗೆ ಶೋಕಗ್ರಸ್ತನಾಗಿ ತನ್ನ ಮೃತಪುತ್ರನ ಬಳಿ ತಾನೂ ಮೃತನಾದವನಂತೆ ಬಿದ್ದುಕೊಂಡಿದ್ದ ಚಿತ್ರಕೇತುಮಹಾರಾಜನಿಗೆ ಒಳ್ಳೆಯ ಮಾತುಗಳಿಂದ ತಿಳಿವಳಿಕೆನೀಡುತ್ತಾ ಅಂಗಿರಸರು ಮತ್ತು ನಾರದಮಹರ್ಷಿಗಳು ಆತನಿಗೆ ಹೀಗೆಂದರು :

“ಎಲೈ ರಾಜೇಂದ್ರನೇ! ನೀನು ಯಾವನನ್ನು ಕುರಿತು ಇಷ್ಟು ಶೋಕಪಡುತ್ತಿದ್ದೀಯೋ—ಆ ಬಾಲಕನು ನಿಜವಾಗಿಯೂ ನಿನಗೇನಾಗಬೇಕು? ನೀನಾದರೂ ಆತನಿಗೆ ಏನಾಗಬೇಕು? ಮುಂದಿನ ಜನ್ಮಗಳಲ್ಲಾದರೂ ನಿನಗೂ ಅವನಿಗೂ ಯಾವ ಸಂಬಂಧವು ತಾನೇ ಇದ್ದೀತು? ಈ ಸಂಬಂಧಗಳೆಲ್ಲವೂ ಪ್ರಕೃತಿಯ ಕಾರಣದಿಂದ ತೋರುತ್ತವೆಯೇ ಹೊರತು ಆತ್ಮಸ್ವರೂಪದ ದೃಷ್ಟಿಯಿಂದ ಈ ಯಾವ ಸಂಬಂಧವೂ ಇರುವುದಿಲ್ಲ—ಎಂದು ಶುದ್ಧಾತ್ಮಸ್ವರೂಪದ ದೃಷ್ಟಿಯಿಂದ ವಿಚಾರಮಾಡಿದರೆ ನಿನ್ನ ಶೋಕಕ್ಕೆ ಕಾರಣವೇ ಇಲ್ಲ. ಇದಲ್ಲದೆ ಈ ತಂದೆ, ಮಗ, ಶತ್ರು, ಮಿತ್ರ—ಮುಂತಾದ ಯಾವ ಸಂಬಂಧವೂ ಪ್ರಕೃತಿಪ್ರವಾಹದಲ್ಲಿ ನಿತ್ಯವಾದುದಲ್ಲ. ಈ ಜನ್ಮದಲ್ಲಿ ಒಬ್ಬನ ಮಗನಾಗಿರುವವನು ಹಿಂದಿನ ಜನ್ಮದಲ್ಲಿ ಆತನ ತಂದೆಯಾಗಿದ್ದಿರಬಹುದು. ಮುಂದಿನ ಜನ್ಮದಲ್ಲಿ ಬೇರಾವುದಾದರೂ ಸಂಬಂಧ ಇವರಿಬ್ಬರಿಗೂ ಉಂಟಾಗಬಹುದು. ಅಥವಾ ಯಾವುದೇ ಸಂಬಂಧವೂ ಒದಗದೆಯೂ ಇರಬಹುದು. ಆದುದರಿಂದ ‘ಈ ಬಾಲಕನು ನಿಜವಾಗಿಯೂ ನನ್ನ ಮಗನೇ. ಸದಾ ನನ್ನ ಮಗನೇ ಆಗಿದ್ದನು. ಮುಂದೆಯೂ ಮಗನೇ ಆಗುವನು’— ಎಂದು ಭ್ರಮಿಸಿ ಶೋಕಿಸಬೇಡ. ಪ್ರಕೃತಿಪ್ರವಾಹದಲ್ಲೂ ಈ ತಂದೆ—ಮಗ ಮುಂತಾದ ಸಂಬಂಧಗಳು ನಿಯತವಾಗಿರುವುದಿಲ್ಲ. ಇವು ಯಾವಾಗಲೋ

ಬಂದು ಯಾವಾಗಲೋ ಹೋಗುವುವು–ಎಂಬುದಕ್ಕೆ ಉದಾಹರಣೆಯನ್ನು ಕೊಡುತ್ತೇನೆ ; ಕೇಳು :

ಯಥಾ ಪ್ರಯಾನ್ತಿ ಸಂಯಾನ್ತಿ ಸ್ರೋತೋವೇಗೇನ ವಾಲುಕಾಃ ।
ಸಂಯುಜ್ಯನ್ತೇ ವಿಯುಜ್ಯನ್ತೇ ತಥಾ ಕಾಲೇನ ದೇಹಿನಃ ॥೩॥

ನದಿಯ ಪ್ರವಾಹದ ವೇಗದಲ್ಲಿ ಕೊಚ್ಚಿಹೋಗುತ್ತಿರುವಾಗ ಕೆಲವು ಮರಳಿನ ಕಣಗಳು ಯಾವಾಗಲೋ ಒಂದರೊಡನೊಂದು ಸೇರಿಕೊಳ್ಳುವುವು ಮತ್ತು ಯಾವಾಗಲೋ ಒಂದನ್ನೊಂದು ಅಗಲುವುವು. ಹೀಗೆ ಕಾಲಪ್ರವಾಹದಲ್ಲಿ ಜೀವಗಳು ಪರಸ್ಪರವಾಗಿ ಸೇರಿ ಸಂಬಂಧಿಗಳಾಗುವರು ; ಹಾಗೆಯೇ ಅಗಲಿಕೆಯನ್ನು ಹೊಂದಿ ಸಂಬಂಧವನ್ನೂ ಕಳೆದುಕೊಳ್ಳುವರು. ಆದುದರಿಂದ ನಿನಗೂ ಈ ಬಾಲಕನಿಗೂ ತಂದೆ–ಮಗ ಎಂಬ ಸಂಬಂಧವು ಶಾಶ್ವತವಾದುದೆಂದು ತಿಳಿದು ಶೋಕಿಸಬೇಡ. ಇವು ಕಾಲಪ್ರವಾಹದಲ್ಲಿ ಯಾವಾಗಲೋ ಒದಗಿ ಬಂದು ಅಗಲುವುವು.

ಯಥಾ ಧಾನಾಸು ವೈ ಧಾನಾ ಭವನ್ತಿ ನ ಭವನ್ತಿ ಚ ।
ಏವಂ ಭೂತೇಷು ಭೂತಾನಿ ಚೋದಿತಾನೀಶಮಾಯಯಾ ॥೪॥

ಒಂದು ಬೀಜದಿಂದ ಬೇರೆ ಕೆಲವು ಬೀಜಗಳು ಹುಟ್ಟುವುದುಂಟು. ಹುಟ್ಟದೇ ಇರುವುದೂ ಉಂಟು. ಹುಟ್ಟಿ ನಾಶವಾಗುವುದೂ ಉಂಟು. ಹಾಗೆಯೇ ಈಶ್ವರನ ಪ್ರೇರಣೆಯಂತೆ ಕೆಲವು ಪ್ರಾಣಿಗಳಲ್ಲಿ ಬೇರೆ ಕೆಲವು ಪ್ರಾಣಿಗಳು ಮಕ್ಕಳ ರೂಪದಲ್ಲಿ ಹುಟ್ಟುವುದುಂಟು. ಹುಟ್ಟದೇ ಇರುವುದೂ ಉಂಟು. ಹುಟ್ಟಿ ಸಾಯುವುದೂ ಉಂಟು. ಈಶ್ವರನ ಸಂಕಲ್ಪದಿಂದ ಸೇರಿ ಬಂದು ಪುನಃ ಅಗಲಿಹೋಗಿರುವ ಈ ಸಂಬಂಧದ ಬಗೆಗೆ ನೀನು ಶೋಕಿಸಬೇಡ.

ವಯಂ ಚ ತ್ವಂ ಚ ಯೇ ಚೇಮೇ ತುಲ್ಯಕಾಲಾಶ್ಚರಾಚರಾಃ ।
ಜನ್ಮಮೃತ್ಯೋರ್ಯಥಾ ಪಶ್ಚಾತ್ಪ್ರಾಙ್ನೈವಮಧುನಾಪಿ ಭೋಃ ॥೫॥

ಎಲೈ ರಾಜೇಂದ್ರನೇ! ನಾವು, ನೀನು ಮತ್ತು ನಮ್ಮ ಸಮಕಾಲದಲ್ಲಿರುವ ಪ್ರಾಣಿಗಳು–ಇವು ಯಾವುವೂ ಹುಟ್ಟುವುದಕ್ಕೆ ಹಿಂದೆಯಾಗಲೀ, ಸತ್ತನಂತರವಾಗಲೀ ಈ ಸಂಬಂಧದಿಂದ ಇರಲಿಲ್ಲ. ಹಾಗೆಯೇ ವರ್ತಮಾನ

ಕಾಲದಲ್ಲೂ ಈ ಸಂಬಂಧಗಳು ವಾಸ್ತವವಾಗಿಯೂ ಇಲ್ಲ. ಇವೆಲ್ಲವೂ ಪ್ರಕೃತಿಯಿಂದ ಕಲ್ಪಿತವಾದುವು–ಎಂದು ತಿಳಿಯಪ್ಪಾ.

ಭೂತೈರ್ಭೂತಾನಿ ಭೂತೇಶಃ ಸೃಜತ್ಯವತಿ ಹನ್ತ್ಯಜಃ ।
ಆತ್ಮಸೃಷ್ಟೈರಸ್ವತನ್ತ್ರೈರನಪೇಕ್ಷೋಽಪಿ ಬಾಲವತ್ ॥೬॥

ಬಾಲಕನು ವಿನೋದಕ್ಕೋಸ್ಕರ ಆಟದ ವಸ್ತುಗಳಿಂದ ಮನೆ-ಮಠ ಮುಂತಾದುವುಗಳನ್ನು ರಚಿಸಿ ಅವುಗಳಿಂದ ಆಟವಾಡಿ ಅವುಗಳನ್ನು ಒಡೆದು ಹಾಕುವನು. ಹಾಗೆಯೇ ಜನ್ಮರಹಿತನೂ–ಭೂತಗಳ ಒಡೆಯನೂ ಆದ ಶ್ರೀಭಗವಂತನು ತನಗೆ ಯಾವ ಅಪೇಕ್ಷೆಯು ಇಲ್ಲದಿದ್ದರೂ ಲೀಲಾರ್ಥ ವಾಗಿ ಈ ಸೃಷ್ಟಿ-ಸ್ಥಿತಿ-ಸಂಹಾರಗಳನ್ನು ಮಾಡುವನು. ಪರತಂತ್ರರಾಗಿರುವ ಪ್ರಾಣಿಗಳನ್ನು ಆತನು ಸೃಷ್ಟಿಸುತ್ತಾನೆ ಮತ್ತು ಅವುಗಳ ಮೂಲಕ ಇತರ ಪ್ರಾಣಿಗಳನ್ನೂ ರಚನೆಮಾಡಿಸಿ, ಪಾಲನೆಮಾಡಿಸಿ, ಸಂಹಾರವನ್ನೂ ಮಾಡಿಸುವನು. ಪ್ರಾಣಿಗಳಿಗೆ ಈ ವಿಷಯದಲ್ಲಿ ವಾಸ್ತವವಾಗಿ ಸ್ವಾತಂತ್ರ್ಯವಿಲ್ಲ. ಆದುದರಿಂದ ಸ್ವತಂತ್ರನಾದ ಈಶ್ವರನ ಸಂಕಲ್ಪದಿಂದ ಆಗಿರುವ ಪ್ರಾಣಿಗಳ ಸೃಷ್ಟಿ, ಪರಸ್ಪರ ಸಂಬಂಧ, ಸ್ಥಿತಿ, ನಾಶ–ಮುಂತಾದುವುಗಳನ್ನು ಕುರಿತು ಶೋಕಿಸಬಾರದು.

ದೇಹೇನ ದೇಹಿನೋ ರಾಜನ್ದೇಹಾದ್ದೇಹೋಽಭಿಜಾಯತೇ ।
ಬೀಜಾದೇವ ಯಥಾ ಬೀಜಂ ದೇಹ್ಯರ್ಥಂ ಇವ ಶಾಶ್ವತಃ ॥೭॥

ಒಂದು ಬೀಜದಿಂದ ಮತ್ತೊಂದು ಬೀಜವು ಉಂಟಾಗುವಂತೆ ತಂದೆಯ ದೇಹದ ಮೂಲಕ ತಾಯಿಯ ದೇಹದಿಂದ ಪುತ್ರನ ದೇಹವು ಹುಟ್ಟುವುದು. ಇಲ್ಲಿ ಹುಟ್ಟುವುದು ದೇಹವೇ ಹೊರತು ದೇಹಿಯಾದ ಆತ್ಮವಲ್ಲ. ಆತನು ಶಾಶ್ವತನು ಎಂದು ಗಮನಿಸಿ, ಈ ಅಶಾಶ್ವತವಾದ ತಂದೆ-ತಾಯಿ-ಮಗ ಮುಂತಾದ ದೇಹಗಳ ಅಗಲಿಕೆಯು ಉಂಟಾದುದಕ್ಕಾಗಿ ನೀನು ಶೋಕಿಸಬೇಡ.

ದೇಹಿದೇಹಿವಿಭಾಗೋಽಯಮವಿವೇಕಕೃತಃ ಪುರಾ ।
ಜಾತಿವ್ಯಕ್ತಿವಿಭಾಗೋಽಯಂ ಯಥಾ ವಸ್ತುನಿ ಕಲ್ಪಿತಃ ॥೮॥

(ಜೇಡಿಯ ಮಣ್ಣು ಮುಂತಾದ) ವಸ್ತುವಿನಲ್ಲಿ (ಘಟತ್ವವೇ

ಮುಂತಾದುವು ಆಗುವಂತೆ) ಜಾತಿ, ವ್ಯಕ್ತಿ ಎಂಬ ವಿಭಾಗವು ಕೇವಲ ಕಲ್ಪನೆಯು. ಹಾಗೆಯೇ ದೇಹ ಮತ್ತು ದೇಹೀ ಎಂಬ ವಿಭಾಗವೂ ಅನಾದಿಯಾಗಿ ಅವಿದ್ಯೆಯಿಂದ ಕಲ್ಪಿತವಾಗಿದೆ. ತ್ರಿಕಾಲಗಳಲ್ಲೂ ಅಬಾಧಿತವಾಗಿರುವ ಏಕಮಾತ್ರ ಸತ್ಯವು ಪರಮಾತ್ಮನೇ. ಆದುದರಿಂದ, ಚಿತ್ರಕೇತುವೇ! ಶೋಕಿಸುವುದು ಉಚಿತವಲ್ಲ.

(ಅಥವಾ ಅವಸ್ತುವಿನಲ್ಲಿ ಜಾತಿ, ವ್ಯಕ್ತಿ ಮುಂತಾದ ವಿಭಾಗ ಮಾಡುವುದು ವಾಸ್ತವವಲ್ಲ; ಕಲ್ಪಿತವಾದುದು. ಹಾಗೆಯೇ ವಿಭಾಗರಹಿತನಾದ ಆತ್ಮನಲ್ಲಿ ದೇವ-ಮನುಷ್ಯಾದಿ ಭೇದವನ್ನಾಶ್ರಯಿಸಿ ದೇಹ-ದೇಹೀ ಎಂಬ ವಿಭಾಗಮಾಡುವುದು ವಾಸ್ತವಿಕವಲ್ಲ. ಕಲ್ಪನಾಮೂಲವಾದುದು. ಹೀಗೆ ಕಲ್ಪನಾಮೂಲವಾದ ದೇಹಸಂಬಂಧದಿಂದುಂಟಾದ ಪುತ್ರಶೋಕವನ್ನು ಹೊಂದುವುದು ಉಚಿತವಲ್ಲ.)"*

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಎಲೈ ರಾಜೇಂದ್ರನೇ! ಹೀಗೆ ಅಂಗಿರಸ ಮತ್ತು ನಾರದಮಹರ್ಷಿಗಳಿಂದ ಸಮಾಧಾನಪಡಿಸಲ್ಪಟ್ಟ ಚಿತ್ರಕೇತುವು ಶೋಕದಿಂದ ಬಾಡಿದ್ದ ತನ್ನ

---

* ಶ್ಲೋಕ ೮ರ ನಂತರ ವಿಜಯಧ್ವಜೀಯದಲ್ಲಿ ಈ ಕೆಳಗಿನ ಶ್ಲೋಕಗಳನ್ನು ನೋಡುತ್ತೇವೆ.

ನಾನಾತ್ವಂ ಜನ್ಮನಾಶಶ್ಚ ಕ್ಷಯೋ ವೃದ್ಧಿಃ ಕ್ರಿಯಾಫಲಮ್ । ದೃಷ್ಟುಶ್ಚ ಭಾನ್ತ್ಯತದ್ಧರ್ಮಾ ಯಥಾಗ್ನೇರ್ದಾರುವಿಕ್ರಿಯಾಃ । ತ ಇಮೇ ದೇಹಸಂಯೋಗಾ ದಾತ್ಮನ್ಯಾಭಾನ್ತ್ಯಸದ್ಗ್ರಹಾತ್ । ಸ್ವಪ್ನೇ ಯಥಾ ತಥಾ ನಾನ್ಯತ್ ಧ್ಯಾಯೇತ್ಸರ್ವಂ ಭಯಂ ಚ ಯತ್ । ಪ್ರಸುಪ್ತಸ್ಯಾನಹಂಮಾನಾನ್ನಘೋರಾ ಭಾತಿ ಸಂಸೃತಿಃ । ಜೀವತೋऽಪಿ ಯಥಾ ತದ್ವತ್ ಮುಕ್ತಸ್ಯಾಪ್ಯನಹಂಕೃತೇಃ । ತಸ್ಮಾದನನ್ಯನ್ಮನೋ ಮಾತ್ರಂ ಜಹ್ಯಹಂ ಮಮತಾತಮಃ । ವಾಸುದೇವೇ ಭಗವತಿ ಮನೋ ದೇಹ್ಯಾತ್ಮ ನೀಶ್ವರೇ ॥

(ದೇವ-ಮನುಷ್ಯ ಮುಂತಾದ ಭೇದಗಳು, ಜನನ-ಮರಣಗಳು, ವೃದ್ಧಿ-ಕ್ಷಯಗಳು ಕರ್ಮಫಲ–ಎಂಬಿವು ಆತ್ಮನ ಧರ್ಮಗಳಲ್ಲದಿದ್ದರೂ ಆತ್ಮನ ಧರ್ಮಗಳಂತೆ ತೋರುವುವು. ಅವು ಸರ್ವಕ್ಕೂ ಸಾಕ್ಷಿಯಾಗಿರುವ ಪರಮಾತ್ಮನಲ್ಲಿ ಆರೋಪಿಸಲ್ಪಡು ತ್ತವೆ. ಕಟ್ಟಿಗೆಯಲ್ಲಿ ಉಂಟಾಗುವ ವೃದ್ಧಿ-ಕ್ಷಯ ಮುಂತಾದ ವಿಕಾರಗಳು ಅಗ್ನಿಯ ಧರ್ಮಗಳಲ್ಲದಿದ್ದರೂ ಅಗ್ನಿಯಲ್ಲಿ ಆರೋಪಿಸಲ್ಪಡುವುದಲ್ಲವೇ? ಅದರಂತೆ).

ಮುಖವನ್ನು ಕೈಯಿಂದ ಒರೆಸಿಕೊಂಡು ಆ ಮಹಾತ್ಮರನ್ನು ಹೀಗೆ ಪ್ರಶ್ನೆ ಮಾಡಿದನು :

"ಎಲೈ ಮಹಾತ್ಮರೇ! ಪರಮಜ್ಞಾನಸಂಪನ್ನರಾಗಿ, ಉತ್ತಮ ರಲ್ಲಿಯೂ ಮಹೋತ್ತಮರಾಗಿ ಅವಧೂತವೇಷದಿಂದ ಮಹಿಮೆಯನ್ನು ಮರೆಸಿಕೊಂಡು ಇಲ್ಲಿಗೆ ದಯಮಾಡಿಸಿರುವ ನೀವಿಬ್ಬರೂ ಯಾರು? ಕೃಪೆ ಯಿಟ್ಟು ತಿಳಿಸಿರಿ. ಬ್ರಹ್ಮಜ್ಞಾನಿಗಳಾಗಿ ಶ್ರೀಭಗವಂತನಿಗೆ ಪ್ರಿಯರಾಗಿರುವ ಹಲವಾರು ಮಂದಿ ಭಾಗವತೋತ್ತಮರು ನನ್ನಂತಹ ಪಶುಬುದ್ಧಿಯುಳ್ಳ ಪ್ರಾಣಿಗಳಿಗೆ ಉಪದೇಶಮಾಡುವುದಕ್ಕೋಸ್ಕರ ಹುಚ್ಚರಂತೆ ವೇಷವನ್ನು ಧರಿಸಿ ಕೊಂಡು ಭೂಮಿಯ ಮೇಲೆ ಸಂಚರಿಸುತ್ತಿರುವುದುಂಟು. ಅಂತಹವರಲ್ಲಿ ನೀವು ಯಾರು? ಸನತ್ಕುಮಾರರು, ನಾರದರು, ಋಭುಗಳು, ಅಂಗಿರಸರು, ದೇವಲರು, ಅಸಿತರು, ಅಪಾಂತರತಮರು, ವ್ಯಾಸರು, ಮಾರ್ಕಂಡೇಯರು, ಗೌತಮರು, ವಸಿಷ್ಠರು, ಭಗವಾನ್ ಪರಶುರಾಮರು, ಕಪಿಲಮಹಾಮುನಿ ಗಳು, ಶುಕಮುನಿಗಳು, ದುರ್ವಾಸರು, ಯಾಜ್ಞವಲ್ಕ್ಯರು, ಜಾತೂ ಕರ್ಣ್ಯರು, ಆರುಣಿಗಳು, ರೋಮಶರು, ಚ್ಯವನರು, ದತ್ತಾತ್ರೇಯರು, ಆಸುರಿಮಹರ್ಷಿಗಳು, ಪತಂಜಲಿಮಹರ್ಷಿಗಳು, ವೇದಶಿರಸಮಹರ್ಷಿ ಗಳು, ಬೋಧಾಯನಮುನಿಗಳು, ಪಂಚಶಿರಸಮುನಿಗಳು, ಹಿರಣ್ಯನಾಭರು,

---

ಕಣ್ಣಿಗೆ ಕಾಣುತ್ತಿರುವ ಹುಟ್ಟು, ಬಾಳ್ವೆ, ಸಾವು ಮುಂತಾದುವು ಜೀವನಿಗೆ ದೇಹ ಸಂಬಂಧದಿಂದಲೇ ಉಂಟಾಗುವುವು. ತಾನೇ ಶರೀರವೆಂಬ ಅಹಂಕಾರಕ್ಕೆ ಅನಾದಿ ಕಾಲದಿಂದ ಜೀವನು ಒಳಪಟ್ಟಿದ್ದಾನೆ. ಇದರಿಂದ ಎಚ್ಚರದ ಸ್ಥಿತಿಯಲ್ಲಿ ಹುಲಿ ಮುಂತಾದುವುಗಳ ಸಂಸ್ಕಾರದಿಂದ ಉಂಟಾದ ಭಯ, ನಡುಕ ಮುಂತಾದುವು ಸ್ವಪ್ನ ದಲ್ಲಿಯೂ ಕಂಡುಬರುವಂತೆ ಆತ್ಮನಲ್ಲಿಯೂ ತೋರಿಬರುತ್ತವೆ. ಪರಮಾತ್ಮನನ್ನು ಬಿಟ್ಟು ಉಳಿದುವೆಲ್ಲವೂ ಭಯದ ಕಾರಣವೇ ಆಗಿವೆ. ಆದುದರಿಂದ ಅವು ಯಾವುದನ್ನೂ ಧ್ಯಾನಿಸಬಾರದು. ಗಾಢವಾಗಿ ನಿದ್ರೆಮಾಡುತ್ತಿರುವ ಪುರುಷನಿಗೆ ಅಹಂಕಾರವಿಲ್ಲ. ಆತನು ಬದುಕಿದ್ದರೂ ಆತನಿಗೆ ಭಯಂಕರವಾದ ಸಂಸಾರವು ಗೋಚರವಾಗುವುದಿಲ್ಲ. ಹಾಗೆಯೇ ಅಭಿಮಾನಹೀನನಾದ ಜೀವನ್ಮುಕ್ತನು ಜೀವಿಸುತ್ತಿದ್ದರೂ ಬಂಧನಕ್ಕೆ ಒಳಗಾಗುವುದೇ ಇಲ್ಲ. ಆದುದರಿಂದ ಉಳಿದುದೆಲ್ಲವೂ ಕೇವಲ ಮನೋಮಾತ್ರಗಳು. ಅಹಂಕಾರ-ಮಮಕಾರ ಮಾತ್ರವಾದ ಅಜ್ಞಾನವನ್ನು ತೊರೆದು ಸರ್ವಲೋಕೇಶ್ವರನಾದ ಶ್ರೀಭಗವಂತನಲ್ಲಿ ಮನಸ್ಸನ್ನಿರಿಸಬೇಕು.

ಕೌಸಲ್ಯರು, ಶ್ರುತದೇವರು ಮತ್ತು ಋತಧ್ವಜರು–ಇವರೇ ಅಲ್ಲದೇ ಸಿದ್ಧೇಶ್ವರರಾದ ಋಷಿ-ಮುನಿಗಳೂ ಜ್ಞಾನದಾನಮಾಡುವುದಕ್ಕೋಸ್ಕರ ಭೂಮಿಯ ಮೇಲೆ ಸಂಚಾರಮಾಡುತ್ತಿದ್ದಾರೆ. ಎಲೈ ಪ್ರಭುಗಳೇ! ನಾನು ವಿಷಯಭೋಗಗಳಲ್ಲಿ ಸಿಕ್ಕಿಕೊಂಡಿರುವ ಮೂಢಬುದ್ಧಿಯುಳ್ಳ ಗ್ರಾಮ್ಯ ಪಶುವಾಗಿ ಅಜ್ಞಾನದ ಘೋರವಾದ ಅಂಧಕಾರದಲ್ಲಿ ಮುಳುಗಿರುವವನು. ತಾವು ನನಗೆ ಜ್ಞಾನಜ್ಯೋತಿಯನ್ನು ತೋರಿಸಿ ಪ್ರಕಾಶದ ಕೇಂದ್ರಕ್ಕೆ ಕೊಂಡೊಯ್ಯಿರಿ.''

ಆಗ ಅಂಗಿರಸಮಹರ್ಷಿಗಳು ರಾಜನಿಗೆ ಹೀಗೆ ಉತ್ತರಕೊಟ್ಟರು :

“ಎಲೈ ಮಹಾರಾಜನೇ! ನಾನು–ಪುತ್ರಕಾಮನಾಗಿದ್ದ ನಿನಗೆ ಪುತ್ರನನ್ನು ಕೊಟ್ಟ ಅಂಗಿರಸಮಹರ್ಷಿಯು. ಕಣ್ಣೆದುರಿಗೆ ಕಾಣುತ್ತಿರುವ ಇವರು ಬ್ರಹ್ಮದೇವರ ಪುತ್ರರಾದ ಭಗವಾನ್ ನಾರದಮಹರ್ಷಿಗಳು. ನೀನು ಹೀಗೆ ಪುತ್ರಶೋಕದ ಕಾರಣ ಗಾಢವಾದ ಅಜ್ಞಾನಾಂಧಕಾರದಲ್ಲಿ ಮುಳುಗಿ ಹೋಗಿದ್ದೀಯೆ. ಆದರೆ ಪರಮಪುರುಷನ ಭಕ್ತನಾದ ನೀನು ಶೋಕಿಸುವುದು ಉಚಿತವಲ್ಲ–ಎಂದು ಯೋಚಿಸಿ ನಿನಗೆ ಅನುಗ್ರಹಮಾಡುವುದಕ್ಕೋಸ್ಕರವೇ ನಾವಿಬ್ಬರೂ ಇಲ್ಲಿಗೆ ಬಂದಿದ್ದೇವೆ. ರಾಜೇಂದ್ರ! ಶ್ರೀಭಗವಂತನಲ್ಲಿಯೂ ಮತ್ತು ಬ್ರಾಹ್ಮಣರಲ್ಲಿಯೂ ಭಕ್ತನಾಗಿರುವವನು ನಿಜವಾಗಿಯೂ ಯಾವುದೇ ಸ್ಥಿತಿಯಲ್ಲಿಯೂ ಶೋಕಪಡಲೇಬಾರದು. ನಿನ್ನ ಮನೆಗೆ ನಾನು ಮೊಟ್ಟಮೊದಲಿಗೆ ಬಂದಿದ್ದಾಗಲೇ ನಿನಗೆ ಪರಮಜ್ಞಾನವನ್ನು ಉಪದೇಶ ಮಾಡಬಹುದಾಗಿತ್ತು. ಆದರೆ ಇನ್ನೂ ನಿನ್ನ ಹೃದಯದಲ್ಲಿ ಪುತ್ರನನ್ನು ಪಡೆಯುವ ವಿಷಯದಲ್ಲಿ ಉತ್ಕಟವಾದ ಅಭಿಲಾಷೆಯು ತುಂಬಿದೆಯೆಂಬುದನ್ನು ಗಮನಿಸಿ ನಾನು ನಿನಗೆ ಆಗ ಜ್ಞಾನವನ್ನು ಕೊಡದೇ ಪುತ್ರನನ್ನೇ ಕೊಟ್ಟೆನು. ಪುತ್ರವಂತರಿಗೆ ಎಷ್ಟು ದುಃಖವುಂಟಾಗುವುದು?–ಎಂಬುದು ಈಗ ನಿನ್ನ ಸ್ವಂತ ಅನುಭವಕ್ಕೇ ಬಂದಿದೆ. ಹೆಂಡತಿ, ಮನೆ, ಮಠ, ಹಣ, ಬಗೆ-ಬಗೆಯ ಅಧಿಕಾರ, ಐಶ್ವರ್ಯಗಳು, ಸಂಪತ್ತುಗಳು, ಶಬ್ದ-ರಸ-ರೂಪಾದಿ ಇಂದ್ರಿಯ ವಿಷಯಗಳು, ರಾಜ್ಯವೈಭವ, ಭೂಮಿ, ರಾಜ್ಯ, ಸೈನ್ಯ, ಭಂಡಾರ, ಸೇವಕರು, ಅಮಾತ್ಯರು, ನೆಂಟರು, ಇಷ್ಟರು–ಎಲ್ಲರಿಗೂ ಈ

ಮಾತೇ ಅನ್ವಯಿಸುತ್ತದೆ. ಏಕೆಂದರೆ : ಇವೆಲ್ಲವೂ ಕನಸಿಗೂ, ಮಾಯೆಗೂ, ಮನಸ್ಸಿನ ಮಂಡಿಗೆಗಳಿಗೂ, ಕಲ್ಪನಾರೂಪವಾದ ಗಂಧರ್ವನಗರಿಗೂ ಸಮನಾಗಿ ಅನಿತ್ಯಪದಾರ್ಥಗಳೇ ಆಗಿವೆ. ಯಾರು ಕರ್ಮವಾಸನೆಗಳಿಂದ ಪ್ರೇರಿತರಾಗಿ ಇಂದ್ರಿಯವಿಷಯಗಳನ್ನೇ ಕುರಿತು ಚಿಂತಿಸುತ್ತಾರೆಯೋ ಅವರ ಮನಸ್ಸು ತಾನೇ ಬಗೆ-ಬಗೆಯು ಕರ್ಮಗಳನ್ನು ಸೃಷ್ಟಿಸಿಕೊಳ್ಳುವುದು! ಪಂಚಭೂತಗಳು, ಜ್ಞಾನೇಂದ್ರಿಯಗಳು ಮತ್ತು ಕರ್ಮೇಂದ್ರಿಯ ಗಳು–ಇವುಗಳ ಸಂಘಾತವಾಗಿರುವ ಜೀವಾತ್ಮನ ಈ ದೇಹವು ಆತನಿಗೆ ಬಗೆ-ಬಗೆಯ ಕ್ಲೇಶಗಳನ್ನೂ ಮತ್ತು ಸಂತಾಪಗಳನ್ನೂ ಕೊಡುವುದೆಂದು ಹೇಳಲ್ಪಟ್ಟಿದೆ. ಆದುದರಿಂದ ನೀನು ನಿನ್ನ ಮನಸ್ಸನ್ನು ವಿಷಯಗಳಲ್ಲಿ ಅಲೆದಾಡದಂತೆ ತಡೆದು ಸಮಾಧಾನವಾಗಿಸಿ ಮನಸ್ಸಿನ ಮೂಲಕ ನಿನ್ನ ನಿಜಸ್ವರೂಪವನ್ನು ವಿಚಾರಮಾಡಿ, ಈ ದ್ವೈತದ ಭ್ರಮೆಯಲ್ಲಿ ನಿತ್ಯತ್ವ ಬುದ್ಧಿಯನ್ನು ತ್ಯಜಿಸಿ ಪರಮಶಾಂತಿಸ್ವರೂಪನಾದ ಪರಮಾತ್ಮನಲ್ಲಿ ನೆಲೆಯನ್ನು ಪಡೆಯುವವನಾಗು."* (ಶ್ಲೋಕ 12-26)

ಅನಂತರ ನಾರದಮಹರ್ಷಿಗಳು ಚಿತ್ರಕೇತುಮಹಾರಾಜನಿಗೆ ಹೀಗೆಂದರು :

"ರಾಜೇಂದ್ರನೇ! ನಾನು ಈಗ ಉಪದೇಶಮಾಡುವ ಮಂತ್ರೋಪ ನಿಷತ್ತನ್ನು ಏಕಾಗ್ರವಾದ ಮನಸ್ಸಿನಿಂದ ಗ್ರಹಣಮಾಡು. ಇದನ್ನು ಧರಿಸಿ

---

* ಸಂಸಾರಸಂಗವನ್ನು ತೊರೆಯುವುದೇ ವಿರಾಗಿಗೆ ಮೊದಲನೆಯ ಸಾಧನವು.

ಹಿಂದೆ ಭೋಜನೆಂಬ ರಾಜನು ಒಮ್ಮೆ ಭಯಂಕರವಾದ ಕನಸನ್ನು ಕಂಡನು. ಅಲ್ಲಿ ಆತನು ಶತ್ರುಗಳ ಕೈಯಲ್ಲಿ ಸಿಕ್ಕಿಹಾಕಿಕೊಂಡನು. ಅಪಾರವಾದ ಸಂಕಟವನ್ನು ಅನುಭವಿಸಬೇಕಾಯಿತು. ಶತ್ರುಗಳು ತಿಂದು ಮಿಕ್ಕ ಎಂಜಲನ್ನು ತಿನ್ನುತ್ತಾ ಜೀವಿಸ ಬೇಕಾಯಿತು. ಶೋಕ-ಮೋಹ-ಭಯಗಳನ್ನು ಅನುಭವಿಸಬೇಕಾಯಿತು. ಶತ್ರುಗಳಲ್ಲಿ ಕೆಲವರು ಹಿಂದಿನ ವೈರದಿಂದ ಆತನ ರಾಜ್ಯ-ಕೋಶಾದಿಗಳನ್ನು ಕಸಿದುಕೊಂಡರು. ಕೆಲವರು ಪತ್ನಿಯರನ್ನು ಪರಾಭವಿಸಿದರು. ಕೆಲವರು ಆತನ ಭೃತ್ಯರನ್ನು ಕೊಂದು ಹಾಕಿದರು. ಬಂಧು-ಬಳಗಗಳನ್ನೂ ಸಂಹರಿಸಿದರು. ಕೆಲವರು ಆತನ ತಲೆಯನ್ನೇ ಕತ್ತರಿಸಿಹಾಕಿದರು.

ಹೀಗೆ ಕನಸಿನಲ್ಲಿ ಮಿತಿಮೀರಿದ ದುಃಖವನ್ನು ಅನುಭವಿಸಿದ ಭೋಜರಾಜನು

ಕೊಂಡಿದ್ದರೆ ನಿನಗೆ ಏಳು ರಾತ್ರಿಗಳಲ್ಲೇ ಶ್ರೀಸಂಕರ್ಷಣಭಗವಂತನ ದರ್ಶನವು ದೊರೆಯುವುದು. ಹಿಂದಿನ ಕಾಲದಲ್ಲಿ ಶ್ರೀಭಗವಂತನಾದ ಶ್ರೀಶಂಕರನೇ ಮುಂತಾದವರು ಶ್ರೀಸಂಕರ್ಷಣದೇವರ ಅಡಿದಾವರೆಗಳ ಲ್ಲಿಯೇ ಆಸರೆ ಪಡೆದಿದ್ದರು. ಅದರಿಂದ ಅವರು ಎರಡು ಬಗೆಯ ಭ್ರಮೆ ಯನ್ನು ತೊರೆದವರಾಗಿ ಯಾವುದಕ್ಕೆ ಎಣೆಯಾದ ಅಥವಾ ಮಿಗಿಲೆನಿಸಿದ ವಸ್ತುವು ಯಾವುದೂ ಇಲ್ಲವೋ–ಅಂತಹ ಶ್ರೀಭಗವಂತನ ಮಹಿಮೆಯನ್ನು ಪಡೆದುಕೊಂಡರು. ನೀನೂ ಶೀಘ್ರದಲ್ಲಿಯೇ ಶ್ರೀಭಗವಂತನ ಆ ಪರಮ ಪದವನ್ನೇ ಪಡೆಯುವೆ.”

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಷಷ್ಠಸ್ಕಂಧದ ೧೫ನೆಯ ಅಧ್ಯಾಯವು ಮುಗಿಯಿತು.

ಷಷ್ಠಸ್ಕಂಧ ೧೬ನೆಯ ಅಧ್ಯಾಯ

ಚಿತ್ರಕೇತುವಿನ ವೈರಾಗ್ಯ: ಸಂಕರ್ಷಣಸ್ವಾಮಿಯ ದರ್ಶನ

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಅಥ ದೇವಋಷೀ ರಾಜನ್ಸಮ್ಪರೇತಂ ನೃಪಾತ್ಮಜಮ್ ।
ದರ್ಶಯಿತ್ವೇತಿ ಹೋವಾಚ ಜ್ಞಾತೀನಾಮನುಶೋಚತಾಮ್ ॥೧॥

ಎಲೈ ಭರತಕುಲಾಗ್ರಣಿಯೇ! ಕೇಳು. ಚಿತ್ರಕೇತುವನ್ನು ಅಧ್ಯಾತ್ಮೋಪದೇಶದಿಂದ ಸಂತೈಸಿದನಂತರ ದೇವರ್ಷಿಗಳಾದ ನಾರದರು, ತಮ್ಮ ಯೋಗಬಲದಿಂದ ಅಲ್ಲಿ ಮೃತನಾಗಿದ್ದ ರಾಜಕುಮಾರನ ಜೀವಾತ್ಮನನ್ನು ಶೋಕಪಡುತ್ತಿದ್ದ ನೆಂಟರಿಷ್ಟರ ಮುಂದೆ ಪ್ರತ್ಯಕ್ಷವಾಗುವಂತೆ ಮಾಡಿ ಆತನನ್ನು ಕುರಿತು–“ಎಲೈ ಜೀವಾತ್ಮನೇ! ನಿನಗೆ ಮಂಗಳವಾಗಲಿ. ಇಲ್ಲಿ ನೋಡು! ನಿನ್ನ ತಂದೆ-ತಾಯಿಗಳೂ ಬಂಧು-ಮಿತ್ರರೂ ನಿನ್ನ ಅಗಲಿಕೆಯಿಂದ

ಅದನ್ನೆಲ್ಲಾ ನೆನೆದು ವಿರಕ್ತನಾಗಿ ಮನೆಯಿಂದ ಹೊರಟುಬಿಟ್ಟನು. ನಿಸ್ಸಂಗನಾಗಿ, ಶಾಂತನಾಗಿ, ಮನಸ್ಸಿನಲ್ಲಿ ಪರಮಾತ್ಮನನ್ನು ಧ್ಯಾನಿಸುತ್ತಾ ಲೋಕಕ್ಕೆ ಹುಚ್ಚನಂತೆ ತೋರಿಸಿಕೊಳ್ಳುವ ಅವಧೂತನಾದನು. ತನ್ನ ದೇಹವನ್ನು ಕೂಡ ಮರೆತು ಆತ್ಮಾರಾಮನಾಗಿದ್ದನು.

ತುಂಬಾ ಕಳವಳಗೊಂಡು ಗೋಳಿಡುತ್ತಿದ್ದಾರೆ. ಆದುದರಿಂದ ನೀನು ನಿನ್ನ ಈ ಶರೀರದೊಳಗೆ ಪ್ರವೇಶಮಾಡಿ ಉಳಿದ ಆಯುಸ್ಸಿನ ಕಾಲವನ್ನು ನಿನ್ನ ನೆಂಟರಿಷ್ಟರ ಜೊತೆಯಲ್ಲೇ ಇದ್ದು ಕಳೆಯುವವನಾಗು. ನಿನ್ನ ತಂದೆಯು ಕೊಡುವ ಭೋಗಗಳನ್ನು ಅನುಭವಿಸು ಮತ್ತು ರಾಜಸಿಂಹಾಸನದ ಮೇಲೆ ಕುಳಿತು ರಾಜಾಧಿರಾಜನಾಗಿ ಬಾಳು"–ಎಂದು ಎಲ್ಲ ರ ಎದುರಿಗೂಉಪದೇಶ ಮಾಡಿದರು. ಅದಕ್ಕೆ ಆ ಜೀವಾತ್ಮನು ಹೀಗೆ ಉತ್ತರ ನೀಡಿದನು :

"ದೇವರ್ಷಿಗಳೇ! ನಾನು ನನ್ನ ಕರ್ಮಾನುಸಾರವಾಗಿ ದೇವತಾ ಯೋನಿ, ಮನುಷ್ಯಯೋನಿ, ಪಶು-ಪಕ್ಷಿಗಳ ಯೋನಿ ಇವೇ ಮುಂತಾದ ನಾನಾಯೋನಿಗಳಲ್ಲಿ ಎಷ್ಟೋ ಜನ್ಮಗಳಿಂದ ಅಲೆದಾಡುತ್ತಾ ಬಂದಿದ್ದೇನೆ. ಆ ಜನ್ಮಗಳಲ್ಲಿ ನನಗೆ ಎಷ್ಟೋ ಮಂದಿ ತಂದೆಗಳೂ-ತಾಯಂದಿರೂ ಆಗಿ ಹೋದರು. ಹೀಗಿರುವಾಗ ಇವರೇ ನನ್ನ ತಂದೆ-ತಾಯಿಗಳು ಎಂಬುದು ಏನು ನಿಶ್ಚಯ? ಇಂತಹವರು ಇಂತಹವರೊಡನೆಯೇ ಎಂದೆಂದಿಗೂ ಒಂದೇ ನೆಂಟಸ್ತಿಕೆಯನ್ನು ಹೊಂದಿರಬೇಕೆಂಬ ನಿಯಮವೆಲ್ಲಿ ಬಂತು?

ಬನ್ಧುಜ್ಞಾತ್ಯರಿಮಧ್ಯಸ್ಥಮಿತ್ರೋದಾಸೀನವಿದ್ವಿಷಃ ।
ಸರ್ವ ಏವ ಹಿ ಸರ್ವೇಷಾಂ ಭವನ್ತಿ ಕ್ರಮಶೋ ಮಿಥಃ ॥೫॥

ಯಥಾ ವಸ್ತೂನಿ ಪಣ್ಯಾನಿ ಹೇಮಾದೀನಿ ತತಸ್ತತಃ ।
ಪರ್ಯಟನ್ತಿ ನರೇಷ್ವೇವಂ ಜೀವೋ ಯೋನಿಷು ಕರ್ತೃಷು ॥೬॥

ಬೇರೆ ಬೇರೆ ಜನ್ಮಗಳಲ್ಲಿ ಎಲ್ಲರೂ ಒಬ್ಬರಿಗೊಬ್ಬರು ನೆಂಟರಿಷ್ಟರೋ, ಶತ್ರು-ಮಿತ್ರರೋ, ಮಧ್ಯಸ್ಥರೋ, ಉದಾಸೀನರೋ, ದ್ವೇಷಿಗಳೋ ಆಗುತ್ತಿರುವರು. ಚಿನ್ನವೇ ಮುಂತಾದ ಕ್ರಯ-ವಿಕ್ರಯಹೊಂದುವ ಪದಾರ್ಥ ಗಳು ಒಬ್ಬ ವ್ಯಾಪಾರಿಯಿಂದ ಮತ್ತೊಬ್ಬ ವ್ಯಾಪಾರಿಯ ಬಳಿಗೆ ಹೋಗುತ್ತಾ ಬರುತ್ತಾ ಇರುವಂತೆ–ಜೀವಿಗಳೂ ಬೇರೆ ಬೇರೆ ಯೋನಿಗಳಿಗೆ ಹೋಗುತ್ತಾ ಬರುತ್ತಾ ಇರುವುವು.

ಈ ರೀತಿ ವಿಚಾರಮಾಡಿದರೆ ಮನುಷ್ಯರಿಗಿಂತಲೂ ಹೆಚ್ಚು ಕಾಲ ಬಾಳುವ ಚಿನ್ನವೇ ಮುಂತಾದ ಪದಾರ್ಥಗಳೂ ಮನುಷ್ಯರೊಡನೆ ಹೆಚ್ಚು ಕಾಲ ಇರುವುದಿಲ್ಲ. ಕ್ಷಣಕಾಲ ಮಾತ್ರ ಇರುವುವು. ಆ ವಸ್ತುವಿನ

ಸಂಬಂಧವು ಒಬ್ಬ ಮನುಷ್ಯನೊಡನೆ ಎಷ್ಟುಕಾಲ ಇರುತ್ತದೆಯೋ ಅಷ್ಟು ಕಾಲದವರೆಗೆ ಮಾತ್ರ ಅದರಲ್ಲಿ ಆ ಮನುಷ್ಯನಿಗೆ ಮಮತೆ ಇರುವುದು. ಜೀವನು ನಿತ್ಯನು. ಯಾವ ಅಹಂಕಾರವೂ ಇಲ್ಲದವನು. ಆತನು ಶರೀರದಲ್ಲಿ ಒಂದು ಗರ್ಭವನ್ನು ಪ್ರವೇಶಿಸಿ ಆ ಶರೀರದಲ್ಲಿ ಇರುವವರೆಗೆ ಮಾತ್ರ ಆ ಶರೀರವನ್ನು ತನ್ನದೆಂದು ತಿಳಿಯುತ್ತಾನೆ. ಜೀವನು ಅಳಿವಿಲ್ಲದವನು. ಸೂಕ್ಷ್ಮನು, ಜನ್ಮಾದಿರಹಿತನು, ಸರ್ವರಿಗೂ ಆಶ್ರಯನು ಮತ್ತು ಸ್ವಯಂಪ್ರಕಾಶನು. ಆತನಿಗೆ ಸ್ವರೂಪದಿಂದ ಹುಟ್ಟು-ಸಾವು ಇತ್ಯಾದಿ ಗಳಾವುವೂ ಇಲ್ಲ. ಆದರೂ ತನ್ನ ಮಾಯಾಗುಣಗಳ ಕಾರಣ ನಾನಾರೂಪಗಳಲ್ಲಿ ಪ್ರಕಟಗೊಳ್ಳುತ್ತಾನೆ. ಆತನಿಗೆ (ಸ್ವರೂಪದೃಷ್ಟಿಯಿಂದ) ತುಂಬಾ ಬೇಕಾದವನೂ ಇಲ್ಲ. ತುಂಬಾ ಬೇಡವಾದವನೂ ಇಲ್ಲ. ಸ್ವಕೀಯನೂ ಇಲ್ಲ. ಪರಕೀಯನೂ ಇಲ್ಲ. ಏಕೆಂದರೆ : ಆತನು ಗುಣ-ದೋಷ, ಹಿತ-ಅಹಿತ ಗಳನ್ನು ಮಾಡುವ ಮಿತ್ರ-ಶತ್ರು ಮುಂತಾದ ಎಲ್ಲ ಬುದ್ಧಿವೃತ್ತಿಗಳಿಗೂ ಒಬ್ಬನೇ ಒಬ್ಬ ಸಾಕ್ಷಿಮಾತ್ರವೇ ಆಗಿರುತ್ತಾನೆ. ಪ್ರಭುವಾದ ಈ ಆತ್ಮನು ಶರೀರವೇ ಮುಂತಾದುವುಗಳ ಗುಣ-ದೋಷಗಳನ್ನಾಗಲೀ ಕರ್ಮಫಲಗಳ ನ್ನಾಗಲೀ ಸ್ವೀಕರಿಸುವುದಿಲ್ಲ. ಅವುಗಳ ಅಂಟು ಅವನಿಗಿರುವುದಿಲ್ಲ. ಯಾವು ದನ್ನೂ ಅಂಟಿಸಿಕೊಳ್ಳದೇ ಸದಾ ಉದಾಸೀನಭಾವದಿಂದಿರುತ್ತಾನೆ.” (ಶ್ಲೋಕ 7-11)

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಹೀಗೆ ಹೇಳಿ ಆ ಜೀವಾತ್ಮನು ಹೊರಟೇಹೋದನು. ಆತನ ಮಾತು ಗಳನ್ನು ಕೇಳಿ ಆ ಬಂಧು-ಮಿತ್ರರಿಗೆಲ್ಲಾ ಬಹಳ ಆಶ್ಚರ್ಯವುಂಟಾಯಿತು. ಅವರಿಗೆ ಆ ಜೀವನದಲ್ಲಿದ್ದ ಸ್ನೇಹಪಾಶವು ಕಡಿದುಹೋಯಿತು. ಆತನ ಸಾವಿನಿಂದುಂಟಾಗಿದ್ದ ದುಃಖವೂ ಹೊರಟುಹೋಯಿತು. ಅನಂತರ ಆ ಸತ್ತ ಬಾಲಕನ ಜ್ಞಾತಿಗಳು ಆತನ ಶವವನ್ನು ಎತ್ತಿಕೊಂಡು ಹೋಗಿ ಅದಕ್ಕೆ ಕಾಲೋಚಿತವಾದ ಸಂಸ್ಕಾರಗಳನ್ನೂ–ಮರಣಾನಂತರದ ಕರ್ಮಗಳನ್ನೂ ಮಾಡಿ ಮುಗಿಸಿದರು. ಶೋಕ, ಮೋಹ, ಭಯ ಮತ್ತು ದುಃಖಗಳಿಗೆ ಕಾರಣವಾಗುವ ಸ್ನೇಹ-ಮಮತೆಗಳನ್ನೂ ತ್ಯಜಿಸಿದರು. ಅದನ್ನು ತೊರೆಯು ವುದು ಅತಿಕಷ್ಟವಾದರೂ ಅವರು ಆಗ ಉಂಟಾದ ವಿವೇಕದ ಬಲದಿಂದ

ತೊರೆದುಬಿಟ್ಟರು. ಆ ಮಗುವಿಗೆ ವಿಷವನ್ನಿಟ್ಟು ಅದರ ಹತ್ಯೆಗೆ ಕಾರಣ ರಾಗಿದ್ದ ರಾಣಿಯರ ಮುಖವು ಬಾಲಹತ್ಯಾದೋಷದಿಂದ ಕಾಂತಿಹೀನವಾಗಿ ಅವರು ನಾಚಿಕೆಯಿಂದ ಕಣ್ಣೆತ್ತಿನೋಡಲೂ ಅಸಮರ್ಥರಾಗಿದ್ದರು. ಆಗ ಅವರು ಅಂಗಿರಸಮಹರ್ಷಿಯ ಉಪದೇಶವನ್ನು ನೆನೆದು ಮಾತ್ಸರ್ಯವನ್ನು ಬಿಟ್ಟು ಯಮುನಾನದಿಯ ದಡದಲ್ಲಿ ಬ್ರಾಹ್ಮಣರ ಆದೇಶದಂತೆ ಪ್ರಾಯಶ್ಚಿತವನ್ನು ಮಾಡಿಕೊಂಡರು. ಹೀಗೆ ಅಂಗಿರಸ ಮತ್ತು ನಾರದಮಹರ್ಷಿಗಳ ಉಪದೇಶಗಳಿಂದ ಚಿತ್ರಕೇತುಮಹಾರಾಜನ ವಿವೇಕಬುದ್ಧಿಯು ಎಚ್ಚರ ಗೊಂಡಿತು. ಆಗ ಆತನು–ಸಲಗವು ಕೆರೆಯ ಕೆಸರು ನೀರಿನಿಂದ ಮೇಲೆದ್ದು ಬರುವಂತೆ ಮನೆ-ಮನೆವಾರ್ತೆಗಳ ಕಗ್ಗತ್ತಲೆಯ ಬಾಗಿಲಿನಿಂದ ಹೊರ ಬಂದನು. ಅವನು ಯಮುನಾನದಿಯಲ್ಲಿ ವಿಧಿಪೂರ್ವಕವಾಗಿ ಸ್ನಾನಮಾಡಿ ತರ್ಪಣವೇ ಮುಂತಾದ ಪುಣ್ಯಕರ್ಮಗಳನ್ನು ಆಚರಿಸಿದನು. ಅನಂತರ ಇಂದ್ರಿಯ ಸಂಯಮದಿಂದ ಕೂಡಿ ಮೌನಿಯಾಗಿ ಬ್ರಹ್ಮಪುತ್ರರಾದ ಅಂಗಿರಸ ಮತ್ತು ನಾರದಮಹರ್ಷಿಗಳ ಅಡಿಗಳಿಗೆ ಎರಗಿದನು. ಚಿತ್ರಕೇತುವು ಜಿತೇಂದ್ರಿಯನಾಗಿ, ಭಗವದ್ಭಕ್ತನಾಗಿ, ಶರಣಾಗತನಾಗಿದ್ದಾನೆಂದು ಶ್ರೀಭಗವಂತರಾದ ನಾರದರಿಗೆ ತಿಳಿಯಿತು. ಆಗ ಅವರು ಅತ್ಯಂತ ಪ್ರಸನ್ನ ರಾಗಿ ಅವನಿಗೆ ಈ ಸಂಕರ್ಷಣಮಹಾವಿದ್ಯೆಯನ್ನು ಉಪದೇಶಮಾಡಿದರು. (ಶ್ಲೋಕ 12-17)

ದೇವರ್ಷಿನಾರದರು ಚಿತ್ರಕೇತುವಿಗೆ ಮಾಡಿದ ಸಂಕರ್ಷಣಬ್ರಹ್ಮ ವಿದ್ಯೆಯ ಉಪದೇಶ :

ಓಂ ನಮಸ್ತುಭ್ಯಂ ಭಗವತೇ ವಾಸುದೇವಾಯ ಧೀಮಹಿ ।
ಪ್ರದ್ಯುಮ್ನಾಯಾನಿರುದ್ಧಾಯ ನಮಃ ಸಙ್ಕರ್ಷಣಾಯ ಚ ॥೧೮॥

"ಓಂಕಾರಸ್ವರೂಪನಾದ ಶ್ರೀಭಗವಂತನಾದ ಪರವಾಸುದೇವನನ್ನು ನಮಸ್ಕಾರಪೂರ್ವಕವಾಗಿ ಧ್ಯಾನಿಸುತ್ತೇನೆ. ಪರಮಾತ್ಮನಾದ ಆ ಪರವಾಸು ದೇವನನ್ನೂ, ಜೀವತತ್ತ್ವಕ್ಕೆ ಅಧಿಷ್ಠಾತೃವಾದ ಸಂಕರ್ಷಣಮೂರ್ತಿ ಯನ್ನೂ, ಅಹಂಕಾರತತ್ತ್ವಕ್ಕೆ ಅಧಿದೇವತೆಯಾದ ಪ್ರದ್ಯುಮ್ನಮೂರ್ತಿ ಯನ್ನೂ, ಮನಸ್ತತ್ತ್ವಕ್ಕೆ ಅಧಿಷ್ಠಾತೃವಾದ ಅನಿರುದ್ಧಮೂರ್ತಿಯನ್ನೂ

ನಮಸ್ಕರಿಸಿ ಧ್ಯಾನಿಸುತ್ತೇನೆ. ಶ್ರೀಭಗವಂತನ ಈ ಚತುರ್ವ್ಯೂಹವನ್ನು ನಮಸ್ಕಾರಪೂರ್ವಕವಾಗಿ ಧ್ಯಾನಿಸುತ್ತೇನೆ.

ನಮೋ ವಿಜ್ಞಾನಮಾತ್ರಾಯ ಪರಮಾನನ್ದಮೂರ್ತಯೇ ।
ಆತ್ಮಾರಾಮಾಯ ಶಾನ್ತಾಯ ನಿವೃತ್ತದ್ವೈತದೃಷ್ಟಯೇ ॥೧೯॥

ಕೇವಲ ವಿಜ್ಞಾನರೂಪನೂ, ಪರಮಾನಂದಮೂರ್ತಿಯೂ, ಆತ್ಮಾರಾಮನೂ, ಪ್ರಶಾಂತನೂ, ಭೇದದೃಷ್ಟಿರಹಿತನೂ ಆಗಿರುವ ದೇವನಿಗೆ ನಮಸ್ಕಾರ.

ಆತ್ಮಾನನ್ದಾನುಭೂತ್ಯೈವ ನ್ಯಸ್ತಶಕ್ತ್ಯೂರ್ಮಯೇ ನಮಃ ।
ಹೃಷೀಕೇಶಾಯ ಮಹತೇ ನಮಸ್ತೇ ವಿಶ್ವಮೂರ್ತಯೇ ॥೨೦॥

ಸ್ವರೂಪಭೂತವಾದ ಆನಂದದ ಅನುಭವದಿಂದಲೇ ಮಾಯೆಯಿಂದುಂಟಾದ ರಾಗ-ದ್ವೇಷಾದಿ ತರಂಗಗಳನ್ನೂ ತಿರಸ್ಕರಿಸಿದವನಿಗೆ ನಮಸ್ಕಾರವು. ಇಂದ್ರಿಯಗಳಿಗೆ ಅಧಿಪತಿಯೂ ಮಹತ್‌ಸ್ವರೂಪನೂ ಆದವನಿಗೆ ನಮಸ್ಕಾರವು. ವಿಶ್ವಮೂರ್ತಿಯಾಗಿರುವ ನಿನಗೆ ನಮಸ್ಕಾರವು.

ವಚಸ್ಯುಪರತೇಽಪ್ರಾಪ್ಯ ಯ ಏಕೋ ಮನಸಾ ಸಹ ।
ಅನಾಮರೂಪಶ್ಚಿನ್ಮಾತ್ರಃ ಸೋಽವ್ಯಾನ್ನಃಸದಸತ್ಪರಃ ॥೨೧॥

ಯಾವನನ್ನು ಮುಟ್ಟಲಾರದೇ ಮನಸ್ಸು ಮಾತಿನೊಡನೆ ಹಿಂದಿರುಗುವುದೋ ಮತ್ತು ಹಾಗೆ ಹಿಂದಿರುಗಿದಾಗ ಯಾವನು ಜ್ಞಾನೈಕಸ್ವರೂಪನಾಗಿ ವ್ಯಕ್ತಾವ್ಯಕ್ತಗಳನ್ನು ಮೀರಿದವನಾಗಿ ಉಳಿಯುವನೋ–ಅಂತಹ ಪರತತ್ತ್ವನಾದ ಪರಮಾತ್ಮನಿಗೆ ನಮಸ್ಕಾರವು.

ಯಸ್ಮಿನ್ನಿದಂ ಯತಶ್ಚೇದಂ ತಿಷ್ಠತ್ಯಪ್ಯೇತಿ ಜಾಯತೇ ।
ಮೃಣ್ಮಯೇಷ್ವಿವ ಮೃಜ್ಜಾತಿಸ್ತಸ್ಮೈ ತೇ ಬ್ರಹ್ಮಣೇ ನಮಃ ॥೨೨॥

ಜೇಡಿಯ ಮಣ್ಣು, ಮಣ್ಣಿನಿಂದ ರಚಿತವಾದ ಮಡಕೆಯೇ ಮುಂತಾದುವುಗಳೆಲ್ಲದರಲ್ಲಿಯೂ ವ್ಯಾಪಿಸಿರುವಂತೆ–ಈ ಜಗತ್ತೆಲ್ಲವೂ ಯಾವನಿಂದ ಉಂಟಾಗಿ, ಯಾವನಲ್ಲಿ ನೆಲೆಗೊಂಡು, ಯಾವನಲ್ಲಿಯೇ ಲಯಹೊಂದಿ, ಯಾವನಿಂದ ಹಾಸು-ಹೊಕ್ಕಾಗಿ ವ್ಯಾಪಿಸಲ್ಪಟ್ಟಿದೆಯೋ–ಅಂತಹ ಸರ್ವಾಧಾರವಾದ ಪರಬ್ರಹ್ಮಸ್ವರೂಪಕ್ಕೆ ನಮಸ್ಕಾರವು.

ಯನ್ನ ಸ್ಪೃಶನ್ತಿ ನ ವಿದುರ್ಮನೋಬುದ್ಧೀನ್ದ್ರಿಯಾಸವಃ ।
ಅನ್ತರ್ಬಹಿಶ್ಚ ವಿತತಂ ವ್ಯೋಮವತ್ತನ್ನತೋಽಸ್ಮ್ಯಹಮ್ ॥೨೩॥

ಯಾವನು ಆಕಾಶದಂತೆ ಒಳಗೂ-ಹೊರಗೂ ಏಕರಸವಾಗಿ ವ್ಯಾಪಿಸಿಕೊಂಡಿದ್ದರೂ ಜ್ಞಾನೇಂದ್ರಿಯಗಳು ತಮ್ಮ ಜ್ಞಾನಶಕ್ತಿಯಿಂದಲೂ ಮತ್ತು ಪ್ರಾಣಗಳೂ–ಕರ್ಮೇಂದ್ರಿಯಗಳೂ ತಮ್ಮ ಕ್ರಿಯಾಶಕ್ತಿಯಿಂದಲೂ ಯಾವನನ್ನು ಮುಟ್ಟಲಾರವೋ–ಅಂತಹ ಸರ್ವೇಶ್ವರನನ್ನು ನಮಸ್ಕರಿಸುತ್ತೇನೆ.

ದೇಹೇನ್ದ್ರಿಯಪ್ರಾಣಮನೋಧಿಯೋಽಮೀ
ಯದಂಶವಿದ್ಧಾಃ ಪ್ರಚರನ್ತಿ ಕರ್ಮಸು ।
ನೈವಾನ್ಯದಾ ಲೋಹಮಿವಾಪ್ರತಪ್ತಂ
ಸ್ಥಾನೇಷು ತದ್ದ್ರಷ್ಟ್ರಪದೇಶಮೇತಿ ॥೨೪॥

ಈ ದೇಹ, ಇಂದ್ರಿಯ, ಪ್ರಾಣ, ಮನಸ್ಸು ಮತ್ತು ಬುದ್ಧಿಗಳು ಜಾಗ್ರತ್ ಮತ್ತು ಸ್ವಪ್ನಾವಸ್ಥೆಗಳಲ್ಲಿ ನಿನ್ನ ಚೈತನ್ಯಾಂಶದಿಂದ ಕೂಡಿಯೇ ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತವೆ ಹಾಗೂ ಸುಷುಪ್ತಿಯ ಅವಸ್ಥೆ ಮತ್ತು ಮೂರ್ಛಾವಸ್ಥೆಗಳಲ್ಲಿ ನಿನ್ನ ಚೈತನ್ಯಾಂಶದ ಯೋಗವಿಲ್ಲವಾದ್ದರಿಂದ ತಮ್ಮ ತಮ್ಮ ಕಾರ್ಯಗಳನ್ನು ಮಾಡಲು ಅಸಮರ್ಥವಾಗುವುವು. ಕಬ್ಬಿಣವು ಅಗ್ನಿಯಿಂದ ಕಾಯಿಸಿದಾಗ ಮಾತ್ರವೇ ಸುಡಲು ಸಮರ್ಥವಾಗುವುದು. ಇಲ್ಲದಿದ್ದರೆ ಸುಡಲು ಸಮರ್ಥವಾಗುವುದಿಲ್ಲ. ಹಾಗೆಯೇ ನಿನ್ನ ಚೈತನ್ಯಾಂಶವು ಸೇರಿದರೆ ಮಾತ್ರವೇ ಅವೆಲ್ಲವೂ ತಮ್ಮ ಕಾರ್ಯಗಳನ್ನು ಮಾಡಲು ಶಕ್ತವಾಗುವುವು. ಇಲ್ಲದಿದ್ದರೆ ಅಶಕ್ತವಾಗುವುವು. 'ದ್ರಷ್ಟಾ' 'ನೋಡುವವನು' ಎಂದು ಯಾರನ್ನು ಕರೆಯುತ್ತಾರೆಯೋ ಅವನು ನೀನೇ. ಜಾಗ್ರತ್ ಮುಂತಾದ ಅವಸ್ಥೆಗಳಲ್ಲಿ ನೀನು ಆ ಹೆಸರನ್ನು ಸ್ವೀಕಾರಮಾಡು ತ್ತೀಯೆ. ಆದರೆ ವಾಸ್ತವವಾಗಿ ನಿನ್ನನ್ನು ಬಿಟ್ಟು ಪ್ರತ್ಯೇಕವಾಗಿ ಅವುಗಳಿಗೆ ಅಸ್ತಿತ್ವವೇ ಇಲ್ಲವು.

ಓಂ ನಮೋ ಭಗವತೇ ಮಹಾಪುರುಷಾಯ ಮಹಾನುಭಾವಾಯ ಮಹಾವಿಭೂತಿಪತಯೇ ಸಕಲಸಾತ್ವತಪರಿವೃಢನಿಕರ-
ಕರಕಮಲಕುಡ್ಮಲೋಪಲಾಲಿತಚರಣಾರ ವಿನ್ದಯುಗಲ ಪರಮ-ಪರಮೇಷ್ಠಿನ್ನಮಸ್ತೇ ॥೨೫॥

ಓಂಕಾರಸ್ವರೂಪಿಯೂ, ಮಹಾಪುರುಷನೂ, ಮಹಾನುಭಾವನೂ, ಮಹಾವಿಭೂತಿಗಳುಳ್ಳವನೂ ಆದ ಸಂಕರ್ಷಣದೇವನಿಗೆ ನಮಸ್ಕಾರವು. ಶ್ರೇಷ್ಠತಮರಾದ ಎಲ್ಲ ಭಕ್ತರ ಸಮೂಹಗಳೂ ಮೊಗ್ಗುಗಳಂತೆ ಜೋಡಿಸಿದ ತಮ್ಮ ಕರಕಮಲಗಳಿಂದ ನಿನ್ನ ಸೇವೆ ಮಾಡುವುದರಲ್ಲಿ ಆಸಕ್ತವಾಗಿವೆ. ನೀನೇ ಸರ್ವಶ್ರೇಷ್ಠನು. ಓ ಮಹಾಪ್ರಭುವೇ! ಇಂತಹ ನಿನಗೆ ಮತ್ತೆ ಮತ್ತೆ ನಮಸ್ಕಾರವು."

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಮಹಾರಾಜಪರೀಕ್ಷಿತ! ದೇವರ್ಷಿನಾರದರು ತಮ್ಮಲ್ಲಿ ಶರಣಾಗತ ನಾಗಿದ್ದ ಭಕ್ತನಾದ ಚಿತ್ರಕೇತುವಿಗೆ ಹೀಗೆ ವಿದ್ಯೆಯನ್ನು ಉಪದೇಶಮಾಡಿ ಅಂಗಿರಸಮಹರ್ಷಿಗಳೊಡನೆ ಬ್ರಹ್ಮಲೋಕಕ್ಕೆ ದಯಮಾಡಿಸಿದರು. ಚಿತ್ರಕೇತುಮಹಾರಾಜನು ನಾರದರು ಉಪದೇಶಮಾಡಿದ್ದ ವಿದ್ಯೆಯನ್ನು ಅವರ ಆದೇಶದಂತೆ ಏಳು ದಿವಸಗಳ ಕಾಲ ಕೇವಲ ಜಲಾಹಾರದ ನಿಯಮ ದಲ್ಲಿದ್ದುಕೊಂಡು ಏಕಾಗ್ರತೆಯಿಂದ ಅನುಷ್ಠಾನಮಾಡಿದನು. ಅದರ ಫಲ ವಾಗಿ ಆತನಿಗೆ ಏಳು ರಾತ್ರಿಗಳು ಕಳೆದೊಡನೆಯೇ ವಿದ್ಯಾಧರರ ಅಖಂಡ ಆಧಿಪತ್ಯವು ಲಭಿಸಿತು. ಅನಂತರ ಕೆಲವೇ ದಿನಗಳಲ್ಲಿ ಆ ವಿದ್ಯೆಯ ಪ್ರಭಾವ ದಿಂದ ಆತನ ಮನಸ್ಸು ಮತ್ತೂ ಶುದ್ಧವಾಯಿತು. ಆಗ ಆತನು ಆದಿಶೇಷ ಸ್ವಾಮಿಯ ಪಾದಾರವಿಂದಗಳ ಬಳಿಗೆ ತಲುಪಿದನು. ಅಲ್ಲಿ ಸಿದ್ಧೇಶ್ವರರ ಮಧ್ಯದಲ್ಲಿ ಸಂಕರ್ಷಣದೇವನು ಬೆಳಗುತ್ತಿದ್ದನು. ಆತನ ದಿವ್ಯಮಂಗಳ ದೇಹವು ತಾವರೆಯ ದಂಟಿನಂತೆ ಬೆಳ್ಳಗೆ ಹೊಳೆಯುತ್ತಿತ್ತು. ಆ ಬಿಳಿಯ ದೇಹದಲ್ಲಿ ನೀಲಿಬಣ್ಣದ ವಸ್ತ್ರಗಳು ರಾರಾಜಿಸುತ್ತಿದ್ದುವು. ತಲೆಯಲ್ಲಿ ಕಿರೀಟವೂ, ತೋಳುಗಳಲ್ಲಿ ತೋಳ್ಬಂದಿಗಳೂ, ಕಟಿಯಲ್ಲಿ ಉಡಿದಾರವೂ, ಮಣಿಕಟ್ಟಿನಲ್ಲಿ ಕಂಕಣವೂ ಕಳಕಳಿಸುತ್ತಿದ್ದುವು. ಅನುಗ್ರಹಾಮೃತವನ್ನು ಸುರಿಸುವ ಮುಖಮಂಡಲದಿಂದಲೂ–ನಸುಗೆಂಪಾದ ಕಣ್ಣುಗಳಿಂದಲೂ ಸ್ವಾಮಿಯು ಶೋಭಿಸುತ್ತಿದ್ದನು. ಆ ಪ್ರಭುವಿನ ದರ್ಶನವನ್ನು ಮಾಡಿದೊಡ ನೆಯೇ ಚಿತ್ರಕೇತುವಿನ ಸಕಲಕಲ್ಮಷಗಳೂ ತೊಳೆದುಹೋದುವು. ಅಂತಃಕರ ಣವು ನಿರ್ಮಲವಾಯಿತು ; ಸ್ವಚ್ಛವಾಯಿತು. ಹೃದಯದಲ್ಲಿ ಭಕ್ತಿಯ ಪ್ರವಾ ಹವು ಉಕ್ಕಿಬಂದಿತು. ಕಣ್ಣುಗಳಲ್ಲಿ ಆನಂದಬಾಷ್ಪಗಳು ಉಮ್ಮಳಿಸಿದುವು.

ಮೈ ಪುಳಕಗಳಿಂದ ಅರಳಿತು. ಅಂತಹ ಭಾವಸಮಾಧಿಯಲ್ಲಿ ಆತನು ಆದಿಪುರುಷನಾದ ಸಂಕರ್ಷಣಭಗವಂತನಿಗೆ ಪ್ರಣಾಮಮಾಡಿದನು. ಆತನ ಕಣ್ಣುಗಳಿಂದ ತೊಟ್ಟಿಕ್ಕುತ್ತಿದ್ದ ಕಂಬನಿಗಳಿಂದ ಶ್ರೀಭಗವಂತನ ಪಾದಪೀಠವು ನೆನೆಯುತ್ತಿತ್ತು. ಪ್ರೇಮದ ಉದ್ರೇಕದಿಂದ ಒಂದಕ್ಷರವೂ ಆತನ ಬಾಯಿಂದ ಹೊರಡದೇ ಹೋಯಿತು. ಬಹಳ ಹೊತ್ತಿನವರೆಗೂ ಆತನಿಗೆ ದೇವನನ್ನು ಸ್ತುತಿಸುವುದಕ್ಕೇ ಆಗಲಿಲ್ಲ. ಸ್ವಲ್ಪಹೊತ್ತಿನನಂತರ ಆತನಿಗೆ ಮಾತನಾಡಲು ಸ್ವಲ್ಪ ಶಕ್ತಿಯುಂಟಾಯಿತು. ಆತನು ವಿವೇಕದಿಂದ ಬುದ್ಧಿಯನ್ನು ಸ್ತಿಮಿತಕ್ಕೆ ತಂದುಕೊಂಡು ಇಂದ್ರಿಯಗಳ ಹೊರವೃತ್ತಿಯನ್ನು ತಡೆಗಟ್ಟಿದನು. ಅನಂತರ ಶ್ರೀ ಪಾಂಚರಾತ್ರವೇ ಮುಂತಾದ ಭಕ್ತಿಶಾಸ್ತ್ರಗಳಲ್ಲಿ ವರ್ಣಿತವಾಗಿರುವ ದಿವ್ಯ ಸ್ವರೂಪವುಳ್ಳ ಆ ಜಗದ್ಗುರುವನ್ನು ಹೀಗೆ ಸ್ತೋತ್ರಮಾಡಿದನು :

(ಶ್ಲೋಕ 26-33)

ಚಿತ್ರಕೇತುವು ಮಾಡಿದ ಸಂಕರ್ಷಣಭಗವಂತನ ಸ್ತುತಿ :

ಅಜಿತ ಜಿತಃ ಸಮಮತಿಭಿಃ
ಸಾಧುಭಿರ್ಭವಾನ್ ಜಿತಾತ್ಮಭಿರ್ಭವತಾ ।
ವಿಜಿತಾಸ್ತೇಽಪಿ ಚ ಭಜತಾ-
ಮಕಾಮಾತ್ಮನಾಂ ಯ ಆತ್ಮದೋಽತಿರುಣಃ ॥೩೪॥

“ಓ ಅಜಿತನೇ! ನೀನು ಅಜಿತನಾಗಿ ಯಾರಿಂದಲೂ ಗೆಲ್ಲಲ್ಪಡದವನಾಗಿದ್ದರೂ—ಸಮದರ್ಶಿಗಳೂ, ಜಿತೇಂದ್ರಿಯರೂ ಆದ ಸಾಧುಗಳು ತಮ್ಮ ಭಕ್ತಿಯಿಂದ ನಿನ್ನನ್ನು ಗೆದ್ದುಬಿಡುತ್ತಾರೆ. ನೀನು ನಿನ್ನ ಸೌಂದರ್ಯ-ಮಾಧುರ್ಯ-ಕಾರುಣ್ಯಗಳೇ ಮುಂತಾದ ಗುಣಗಳಿಂದ ಅವರನ್ನು ಗೆದ್ದು ವಶಪಡಿಸಿಕೊಳ್ಳುವೆ. ನಿನ್ನ ಕರುಣೆ ಎಷ್ಟರಮಟ್ಟಿನದು ಎಂದರೆ : ಆ ನಿಷ್ಕಾಮಭಕ್ತರಿಗೆ ನೀನು ನಿನ್ನನ್ನೇ ಕೊಟ್ಟುಕೊಂಡುಬಿಡುವೆ.

ತವ ವಿಭವಃ ಖಲು ಭಗವನ್
ಜಗದುದಯಸ್ಥಿತಿಲಯಾದೀನಿ ।
ವಿಶ್ವಸೃಜಸ್ತೇಽಶಾಂಶಾ-
ಸ್ತತ್ರ ಮೃಷಾ ಸ್ಪರ್ಧನ್ತೇ ಪೃಥಗಭಿಮತ್ಯಾ ॥೩೫॥

ಓ ಭಗವಂತನೇ! ಈ ಮಹಾಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ಲಯ ಮುಂತಾದುವುಗಳು ನಿನ್ನ ವೈಭವಗಳು. ಅವುಗಳನ್ನು ಲೀಲಾಜಾಲವಾಗಿ ನೀನು ನಡೆಸುತ್ತೀಯೆ. ಜಗತ್ತಿನ ಸೃಷ್ಟಿಕರ್ತರಾದ ಬ್ರಹ್ಮದೇವರೇ ಮುಂತಾದವರು ನಿನ್ನ ಅಂಶಗಳಿಗೂ ಅಂಶಭೂತರಾದವರು. ಆದರೂ ತಮ್ಮನ್ನು ತಾವೇ ಸ್ವತಂತ್ರರಾದ ಕರ್ತೃಗಳೆಂದು ಭಾವಿಸಿಕೊಂಡು ವ್ಯರ್ಥವಾದ ಅಭಿಮಾನದಿಂದ ಸ್ಪರ್ಧಿಸುತ್ತಾರೆ.

ಪರಮಾಣುಪರಮಮಹತೋ-
ಸ್ತ್ವಮಾದ್ಯನ್ತಾನ್ತರವರ್ತೀ ತ್ರಯವಿಧುರಃ ।
ಆದಾವನ್ತೇಽಪಿ ಚ ಸತ್ತ್ವಾನಾಂ
ಯದ್ಧ್ರುವಂ ತದೇವಾನ್ತರಾಲೇಽಪಿ ॥೩೬॥

ಪರಮಾಣುವಿನಿಂದ ಹಿಡಿದು ಪರಮಮಹತ್ತಿನವರೆಗಿನ ಸಮಸ್ತವಸ್ತುಗಳ ಆದಿ, ಮಧ್ಯ ಮತ್ತು ಅಂತ್ಯಗಳಲ್ಲಿಯೂ ನೀನೇ ಬೆಳಗುತ್ತಿರುವೆ. ಆದರೆ ನಿನಗೆ ಆದಿ-ಮಧ್ಯ-ಅಂತ್ಯಗಳಿಲ್ಲವು. ಏಕೆಂದರೆ : ಯಾವುದಾದರೂ ಪದಾರ್ಥದ ಆದಿ ಮತ್ತು ಅಂತ್ಯಗಳಲ್ಲಿ ಯಾವ ವಸ್ತುವು ಇದೆಯೋ ಮಧ್ಯದಲ್ಲಿ ಇರುವುದೂ ಅದೇ.

ಕ್ಷಿತ್ಯಾದಿಭಿರೇಷ ಕಿಲಾವೃತಃ
ಸಪ್ತಭಿರ್ದಶಗುಣೋತ್ತರೈರಾಣ್ಡಕೋಶಃ ।
ಯತ್ರ ಪತತ್ಯಣುಕಲ್ಪಃ
ಸಹಾಣ್ಡಕೋಟಿಕೋಟಿಭಿಸ್ತದನನ್ತಃ ॥೩೭॥

ನೀನು ಅನಂತನು. ಏಕೆಂದರೆ : ಪೃಥಿವಿಯೇ ಮೊದಲಾಗಿ ಒಂದಕ್ಕಿಂತಲೂ ಒಂದಕ್ಕೆ ಹತ್ತರಷ್ಟಿರುವ, ಏಳು ಆವರಣಗಳಿಂದ ಕೂಡಿರುವ ಈ ವಿಶಾಲವಾದ ಬ್ರಹ್ಮಾಂಡಕೋಶವು ತನಗೆ ಸಮಾನವಾಗಿರುವ ಅನೇಕ ಕೋಟಿ ಬ್ರಹ್ಮಾಂಡಗಳೊಡನೆ ಕೂಡಿದ್ದರೂ–ನಿನ್ನಲ್ಲಿ ಒಂದು ಪರಮಾಣುವಿನಂತೆ ಸುತ್ತುತ್ತಿದೆ. ಅದಕ್ಕೂ ನಿನ್ನ ಎಲ್ಲೆಯು ತಿಳಿಯದು.

ವಿಷಯತೃಷೋ ನರಪಶವೋ
ಯ ಉಪಾಸತೇ ವಿಭೂತೀರ್ನ ಪರಂ ತ್ವಾಮ್ ।

ತೇಷಾಮಾಶಿಷ ಈಶ
ತದನು ವಿನಶ್ಯನ್ತಿ ಯಥಾ ರಾಜಕುಲಮ್ ॥೩೮॥

ಕೇವಲ ವಿಷಯೋಪಭೋಗಗಳನ್ನೇ ಬಯಸುವ ಯಾವ ನರಪಶುಗಳುಂಟೋ–ಅವರು ನಿನ್ನನ್ನು ಭಜಿಸದೇ ನಿನ್ನ ವಿಭೂತಿಗಳನ್ನು ಮಾತ್ರವೇ ಭಜಿಸುತ್ತಾರೆ. ರಾಜಕುಲವು ನಾಶವಾದ ಬಳಿಕ ಅದನ್ನು ಅವಲಂಬಿಸಿ ಜೀವನ ನಡೆಸುವವರ ಜೀವಿಕೆಯೂ ನಷ್ಟವಾಗಿಬಿಡುವಂತೆ–ನಿನ್ನ ವಿಭೂತಿಗಳಾದ ಆ ಕ್ಷುದ್ರದೇವತೆಗಳನ್ನು ಉಪಾಸನೆ ಮಾಡುವವರಿಗೆ ಆ ದೇವತೆಗಳು ನಾಶಹೊಂದಿದಾಗ ಅವರು ಕೊಟ್ಟ ಭೋಗಗಳೂ ನಾಶವಾಗಿಬಿಡುವುವು. ಆದುದರಿಂದ ವಿವೇಕಿಗಳು ವಿಭೂತಿಗಳಾದ ಅವರನ್ನು ಉಪಾಸನೆಮಾಡದೇ ನಿನ್ನನ್ನು ಉಪಾಸನೆ ಮಾಡುವರು.

ಕಾಮಧಿಯಸ್ತ್ವಯಿ ರಚಿತಾ
ನ ಪರಮ ರೋಹನ್ತಿ ಯಥಾ ಕರಮ್ಭಬೀಜಾನಿ ।
ಜ್ಞಾನಾತ್ಮನ್ಯಗುಣಮಯೇ
ಗುಣಗಣತೋಽಸ್ಯ ದ್ವನ್ದ್ವಜಾಲಾನಿ ॥೩೯॥

ಎಲೈ ಪರಮಾತ್ಮನೇ! ನೀನು ಜ್ಞಾನಸ್ವರೂಪನೂ ಗುಣಾತೀತನೂ ಆಗಿರುವೆ. ಆದುದರಿಂದ ನಿನ್ನನ್ನು ಕುರಿತು ಮಾಡಿದ ಸಕಾಮವಾದ ಭಾವನೆಯೂ ಇತರ ಕರ್ಮಗಳಂತೆ ಹುಟ್ಟು-ಸಾವುಗಳ ರೂಪವಾದ ಫಲವನ್ನು ಕೊಡುವುದಿಲ್ಲ. ಏಕೆಂದರೆ : ಅವು ಹುರಿದ ಬೀಜಗಳಂತೆ ಆಗಿಬಿಡುತ್ತವೆ. ಹುರಿದ ಬೀಜಗಳಿಂದ ಮೊಳಕೆಗಳು ಹೊರಡುವುದೇ ಇಲ್ಲ. ಜೀವಗಳಿಗೆ ಉಂಟಾಗುವ ಸುಖ-ದುಃಖಾದಿ ಜೋಡಿಗಳೆಲ್ಲವೂ ಸತ್ತ್ವಾದಿ ಗುಣಗಳಿಂದ ಉಂಟಾಗುತ್ತವೆಯೇ ಹೊರತು ಗುಣಾತೀತೆಯಿಂದಲ್ಲ. (ನೀನು ಗುಣಾತೀತನಾಗಿರುವುದರಿಂದ ನಿನಗೆ ಅರ್ಪಿಸಿದ ಕರ್ಮಗಳು ಹುರಿದ ಬೀಜಗಳಂತೆ ನಿರ್ವೀರ್ಯವಾಗುವುದರಿಂದ ಅವುಗಳಿಂದ ಸಂಸಾರಸಂಬಂಧವು ಉಂಟಾಗುವುದಿಲ್ಲ. ಜ್ಞಾನಾನಂದದಲ್ಲಿಯೇ ಅವು ಲಯಹೊಂದಿಸುತ್ತವೆ.)

ಜಿತಮಜಿತ ತದಾ ಭವತಾ
ಯದಾಹ ಭಾಗವತಂ ಧರ್ಮಮನವದ್ಯಮ್ ।

ನಿಷ್ಕಿಞ್ಚನಾ ಯೇ ಮುನಯ
ಆತ್ಮಾರಾಮಾ ಯಮುಪಾಸತೇಽಪವರ್ಗಾಯ ॥೪೦॥

ಓ ಅಜಿತನೇ! ನೀನು ಯಾವಾಗ ಪರಿಶುದ್ಧವಾದ ಭಾಗವತಧರ್ಮವನ್ನು ಉಪದೇಶಮಾಡಿದೆಯೋ-ಆಗಲೇ ಎಲ್ಲರನ್ನೂ ಸೋಲಿಸಿಬಿಟ್ಟೆ. ಎಲ್ಲರನ್ನೂ ಜಯಿಸಿ ವಶಪಡಿಸಿಕೊಂಡು ಬಿಟ್ಟೆ. ಏಕೆಂದರೆ : ಯಾವ ಸಂಗ್ರಹ-ಪರಿಗ್ರಹಗಳನ್ನೂ ಇಟ್ಟುಕೊಳ್ಳದೇ, ಯಾವುದರಲ್ಲಿಯೂ ಅಹಂಕಾರ-ಮಮಕಾರಗಳನ್ನು ಹೊಂದಿಲ್ಲದೇ ಇರುವ ಆತ್ಮಾರಾಮರಾದ ಸನಕಾದಿ ಪರಮಮಹರ್ಷಿಗಳೂ ಕೂಡ ಮೋಕ್ಷವನ್ನು ಪಡೆಯುವುದಕ್ಕಾಗಿ ಭಾಗವತಧರ್ಮವನ್ನೇ ಆಶ್ರಯಿಸುತ್ತಾರೆ. ಅವರು ಎಲ್ಲವನ್ನೂ ಜಯಿಸಿದವರಾಗಿದ್ದರೆ ನೀನು ಅವರನ್ನೂ ಜಯಿಸಿಬಿಟ್ಟಿರುವ ಅಜಿತನು.

ವಿಷಮಮತಿರ್ನ ಯತ್ರ ನೃಣಾಂ
ತ್ವಮಹಮಿತಿ ಮಮ ತವೇತಿ ಚ ಯದನ್ಯತ್ರ ।
ವಿಷಮಧಿಯಾ ರಚಿತೋ ಯಃ
ಸ ಹ್ಯವಿಶುದ್ಧಃ ಕ್ಷಯಿಷ್ಣುರಧರ್ಮಬಹುಲಃ ॥೪೧॥

ನೀನು ಉಪದೇಶಮಾಡಿದ ಈ ಭಾಗವತಧರ್ಮವು ಎಷ್ಟು ಶುದ್ಧವಾದುದು ಎಂದರೆ : ಅದರಲ್ಲಿ ಸಕಲಧರ್ಮಗಳಲ್ಲಿರುವಂತೆ ಮನುಷ್ಯರಲ್ಲಿ 'ಇದು ನಾನು, ಇದು ನನ್ನದು. ಇದು ನೀನು ; ಇದು ನಿನ್ನದು'–ಎಂಬ ವಿಷಮಬುದ್ಧಿಯು ಉಂಟಾಗುವುದಿಲ್ಲ. ಹೀಗೆ ನಿಷ್ಕಾಮವಾಗಿ ಅಹಂಕಾರ-ಮಮಕಾರಾದಿಗಳಿಂದ ರಹಿತವಾಗಿರುವ ಭಾಗವತಧರ್ಮವೇ ಶುದ್ಧವಾದ ಧರ್ಮವು. ಸಾಮ್ಯಬುದ್ಧಿಯನ್ನು ಬೋಧಿಸುವ ಧರ್ಮವು. ಇದಕ್ಕೆ ವಿರುದ್ಧವಾಗಿ ಯಾವ ಧರ್ಮದ ಮೂಲದಲ್ಲಿಯೇ ವೈಷಮ್ಯದ ಬೀಜವು ಬಿತ್ತಲ್ಪಡುತ್ತದೆಯೋ–ಅದು ಹೇಗೆ ಶುದ್ಧವಾದೀತು? ಅದು ಅಶುದ್ಧ, ವಿನಾಶಿ ಮತ್ತು ಅಧರ್ಮದಿಂದ ಬಹುಮಟ್ಟಿಗೆ ತುಂಬಿರುವುದು.

ಕಃ ಕ್ಷೇಮೋ ನಿಜಪರಯೋಃ
ಕಿಯಾನರ್ಥಃ ಸ್ವಪರದ್ರುಹಾ ಧರ್ಮೇಣ ।
ಸ್ವದ್ರೋಹಾತ್ತವ ಕೋಪಃ
ಪರಸಮ್ಪೀಡಯಾ ಚ ತಥಾಧರ್ಮಃ ॥೪೨॥

ಸಕಾಮಧರ್ಮವು ಅದನ್ನು ಆಚರಿಸುವವನಿಗೂ ಅಹಿತವನ್ನುಂಟು ಮಾಡುವುದು ಮತ್ತು ಇತರರಿಗೂ ಅಹಿತವನ್ನುಂಟುಮಾಡುವುದು. ಅದರಿಂದ ಆತನಿಗಾಗಲೀ, ಇತರರಿಗಾಗಲೀ ಏನು ತಾನೇ ಪ್ರಯೋಜನ? ಆ ಧರ್ಮವನ್ನು ಅನುಷ್ಠಾನಮಾಡುವವನ ಚಿತ್ತಕ್ಕೆ ದುಃಖವುಂಟಾದಾಗ ನಿನಗೆ ರೋಷವುಂಟಾಗುವುದು. ಇತರರ ಚಿತ್ತಕ್ಕೆ ದುಃಖವುಂಟಾದಾಗ ಅದು ಧರ್ಮವೇ ಆಗುವುದಿಲ್ಲ. ಅಧರ್ಮವೇ ಆಗಿಬಿಡುವುದು.

ನ ವ್ಯಭಿಚರತಿ ತವೇಕ್ಷಾ
ಯಯಾ ಹ್ಯಭಿಹಿತೋ ಭಾಗವತೋ ಧರ್ಮಃ ।
ಸ್ಥಿರಚರಸತ್ತ್ವಕದಮ್ಬೇ-
ಷ್ವಪೃಥಗ್ಧಿಯೋ ಯಮುಪಾಸತೇ ತ್ವಾರ್ಯಾಃ ॥೪೩॥

ಓ ಭಗವಂತನೇ! ನೀನು ಯಾವ ದೃಷ್ಟಿಯಿಂದ ಭಾಗವತಧರ್ಮ ವನ್ನು ನಿರೂಪಣೆ ಮಾಡಿರುವೆಯೋ–ಅದು ಎಂದಿಗೂ ಪರಮಾರ್ಥದಿಂದ ಕದಲುವುದಿಲ್ಲ. ಆದುದರಿಂದ ಚರಾಚರವಾದ ಈ ಸಮಸ್ತಪ್ರಾಣಿಗಳಲ್ಲಿಯೂ ಸಮದೃಷ್ಟಿಯನ್ನು ಇಟ್ಟುಕೊಂಡಿರುವವರು ಮಾತ್ರವೇ ಆ ಧರ್ಮವನ್ನು ಸೇವನೆಮಾಡುತ್ತಾರೆ.

ನ ಹಿ ಭಗವನ್ನಘಟಿತಮಿದಂ
ತ್ವದ್ದರ್ಶನಾನ್ನೃಣಾಮಖಿಲಪಾಪಕ್ಷಯಃ ।
ಯನ್ನಾಮಸಕೃಚ್ಛ್ರವಣಾ-
ತ್ಪುಲ್ಕಸಕೋಽಪಿ ವಿಮುಚ್ಯತೇ ಸಂಸಾರಾತ್ ॥೪೪॥

ಎಲೈ ಭಗವಂತನೇ! ನಿನ್ನ ದರ್ಶನಮಾತ್ರದಿಂದಲೇ ಮನುಷ್ಯರ ಸಮಸ್ತಪಾತಕಗಳೂ ಕ್ಷಯಹೊಂದುವುದರಲ್ಲಿ ಅಸಂಭವವೇನೂ ಇಲ್ಲ. ಏಕೆಂದರೆ : ನಿನ್ನ ನಾಮವನ್ನು ಒಂದು ಬಾರಿ ಕೇಳಿದ ಮಾತ್ರದಿಂದಲೇ ನೀಚನಾದ ಚಂಡಾಲನೂ ಸಂಸಾರದಿಂದ ಬಿಡುಗಡೆಹೊಂದಿಬಿಡುವನು.

ಅಥ ಭಗವನ್ವಯಮಧುನಾ
ತ್ವದವಲೋಕಪರಿಮೃಷ್ಟಾಶಯಮಲಾಃ ।

ಸುರಋಷಿಣಾ ಯದುದಿತಂ
ತಾವಕೇನ ಕಥಮನ್ಯಥಾ ಭವತಿ ॥೪೫॥

ಭಗವಂತನೇ! ಈಗ ನಿನ್ನ ದರ್ಶನಮಾತ್ರದಿಂದಲೇ ನನ್ನ ಅಂತಃಕರಣದ ಎಲ್ಲ ಮಲವೂ ತೊಳೆದುಹೋಯಿತು. ನಿನ್ನ ಅನನ್ಯಭಕ್ತರಾದ ದೇವರ್ಷಿಗಳಾದ ನಾರದರು ಹೇಳಿದ ಮಾತು ಹೇಗೆ ಸುಳ್ಳಾದೀತು?

ವಿದಿತಮನನ್ತ ಸಮಸ್ತಂ
ತವ ಜಗದಾತ್ಮನೋ ಜನೈರಿಹಾಚರಿತಮ್ ।
ವಿಜ್ಞಾಪ್ಯಂ ಪರಮಗುರೋಃ
ಕಿಯದಿವ ಸವಿತುರಿವ ಖದ್ಯೋತೈಃ ॥೪೬॥

ಓ ಅನಂತನೇ! ನೀನು ಇಡೀ ಜಗತ್ತಿಗೆ ಆತ್ಮವಾಗಿರುವೆ. ಆದುದ ರಿಂದ ಜಗತ್ತಿನ ಪ್ರಾಣಿಗಳು ಏನೇನು ಮಾಡುತ್ತವೆಯೋ–ಅವೆಲ್ಲವೂ, ನಿನಗೆ ತಿಳಿದೇ ಇರುವುದು. ಇಂತಹ ಪರಮಗುರುವಾದ ನಿನಗೆ ನಾನು ವಿಜ್ಞಾಪನೆಮಾಡಬೇಕಾದುದು ಏನಿದೆ? ನಿನ್ನ ಬೆಳಕಿಗೆ ತರಬೇಕಾದ ವಿಷಯವೇನಿದೆ? ಮಿಣುಕುಹುಳುವು ಸೂರ್ಯನಿಗೆ ಏನೂ ಪ್ರಕಾಶ ವನ್ನುಂಟುಮಾಡಲಾರದಷ್ಟೇ!

ನಮಸ್ತುಭ್ಯಂ ಭಗವತೇ
ಸಕಲಜಗತ್ಸ್ಥಿತಿಲಯೋದಯೇಶಾಯ ।
ದುರವಸಿತಾತ್ಮಗತಯೇ
ಕುಯೋಗಿನಾಂ ಭಿದಾ ಪರಮಹಂಸಾಯ ॥೪೭॥

ಸಕಲಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ಲಯಗಳಿಗೆ ಅಧಿಪತಿಯಾಗಿರುವ ನಿನಗೆ ನಮಸ್ಕಾರವು. ಅತ್ಯಂತಶುದ್ಧನಾದ ಪರಮಹಂಸನು ನೀನು. ಕುಯೋಗಿಗಳಿಗೆ ಭೇದದೃಷ್ಟಿಯು ಇರುವುದರಿಂದ ಅವರು ನಿನ್ನ ವಾಸ್ತವಿಕಸ್ವರೂಪವನ್ನು ತಿಳಿಯಲಾರರು.

ಯಂ ವೈ ಶ್ವಸನ್ತಮನು ವಿಶ್ವಸೃಜಃ ಶ್ವಸನ್ತಿ
ಯಂ ಚೇಕಿತಾನಮನು ಚಿತ್ತಯ ಉಚ್ಚಕನ್ತಿ ।

ಭೂಮಣ್ಡಲಂ ಸರ್ಷಪಾಯತಿ ಯಸ್ಯ ಮೂರ್ಧ್ನಿ
ತಸ್ಮೈ ನಮೋ ಭಗವತೇಽಸ್ತು ಸಹಸ್ರಮೂರ್ಧ್ನೇ ॥೪೮॥

ನಿನ್ನ ಉಸಿರಾಟವನ್ನನುಸರಿಸಿಯೇ ವಿಶ್ವದ ಸೃಷ್ಟಿಕರ್ತರಾದ ಬ್ರಹ್ಮಾದಿಗಳೂ ಉಸಿರಾಡುತ್ತಾರೆ. ನಿನ್ನ ವ್ಯಾಪಾರದಿಂದ ಶಕ್ತಿಯನ್ನು ಪಡೆದೇ ಆ ಬ್ರಹ್ಮಾದಿಲೋಕಪಾಲಕರು ತಮ್ಮ-ತಮ್ಮ ವ್ಯಾಪಾರಗಳನ್ನು ಮಾಡಲು ಸಮರ್ಥರಾಗುತ್ತಾರೆ. ನಿನ್ನ ದೃಷ್ಟಿಯಿಂದ ಚೈತನ್ಯವನ್ನು ಪಡೆದೇ ಜ್ಞಾನೇಂದ್ರಿಯಗಳು ತಮ್ಮ-ತಮ್ಮ ವಿಷಯಗಳನ್ನು ಗ್ರಹಿಸಲು ಸಮರ್ಥವಾಗುತ್ತವೆ. ಈ ಭೂಮಂಡಲವು ನಿನ್ನ ತಲೆಯಮೇಲೆ ಒಂದು ಸಾಸಿವೆಯ ಕಾಳಿನಂತೆ ಕಾಣುತ್ತದೆ. ಅಂತಹ ಸಾವಿರ ತಲೆಗಳುಳ್ಳ ಪರಮಪುರುಷನಾದ ಶ್ರೀಭಗವಂತನಿಗೆ ಮತ್ತೆ ಮತ್ತೆ ನಮಸ್ಕಾರಗಳು."

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಮಹಾರಾಜನೇ! ವಿದ್ಯಾಧರರ ಅಧಿಪತಿಯಾದ ಚಿತ್ರಕೇತುವು ಹೀಗೆ ಶ್ರೀಭಗವಂತನಾದ ಅನಂತನನ್ನು ಸ್ತುತಿಸಲು–ಅದರಿಂದ ಶ್ರೀಭಗವಂತನಿಗೆ ತುಂಬಾ ಸಂತೋಷವುಂಟಾಯಿತು. ಪ್ರಸನ್ನನಾದ ಸ್ವಾಮಿ ಸಂಕರ್ಷಣನು ಚಿತ್ರಕೇತುವಿಗೆ ಪರಮಾನುಗ್ರಹದಿಂದ ಹೀಗೆಂದನು :

"ಎಲೈ ರಾಜನೇ! ದೇವರ್ಷಿಗಳಾದ ನಾರದರೂ ಮತ್ತು ಮಹರ್ಷಿಗಳಾದ ಅಂಗಿರಸರೂ ನಿನಗೆ ನನ್ನನ್ನು ಕುರಿತು ಯಾವ ವಿದ್ಯೆಯನ್ನು ಉಪದೇಶಮಾಡಿದ್ದಾರೆಯೋ–ಅದರಿಂದಲೂ ಮತ್ತು ನನ್ನ ದರ್ಶನದಿಂದಲೂ ನೀನು ಸಂಸಿದ್ಧಿಯನ್ನು ಪಡೆದಿದ್ದೀಯೆ. ನಿನ್ನ ಸಿದ್ಧಿಯು ಪೂರ್ಣವಾಗಿದೆ. ನಾನೇ ಸರ್ವಭೂತರೂಪನಾಗಿದ್ದೇನೆ. ಭೂತಗಳ ಆತ್ಮವೂ ನಾನೇ. ಅವುಗಳನ್ನು ಪಾಲನೆಮಾಡುತ್ತಿರುವವನೂ ನಾನೇ. ಶಬ್ದಬ್ರಹ್ಮವಾದ ವೇದವೂ ಮತ್ತು (ಅದರಿಂದ ಹೇಳಲ್ಪಡುವ) ಪರಬ್ರಹ್ಮವೂ–ಎರಡೂ ನನ್ನ ಸನಾತನ ರೂಪಗಳೇ ಆಗಿವೆ. ಆತ್ಮವು ಲೋಕದಲ್ಲಿ ವ್ಯಾಪಿಸಿಕೊಂಡಿದೆ ಮತ್ತು ಲೋಕವು ಆತ್ಮದಲ್ಲಿ ನೆಲೆಸಿದೆ. ಈ ಆತ್ಮ ಮತ್ತು ಲೋಕಗಳೆರಡನ್ನೂ ನಾನು ವ್ಯಾಪಿಸಿಕೊಂಡಿದ್ದೇನೆ. ಇವೆರಡೂ ಆಶ್ರಯನಾದ ನನ್ನಲ್ಲಿ ರಚಿತವಾಗಿವೆ. ಕನಸಿನಲ್ಲಿ ಮಲಗಿರುವ ಮನುಷ್ಯನು ಆ ಕನಸಿನಲ್ಲಿ (ಮತ್ತೊಂದು

ಕನಸು ಕಾಣಿಸುವಾಗ) ಇಡೀ ಜಗತ್ತನ್ನು ತನ್ನಲ್ಲಿ ಕಾಣುವನು ಮತ್ತು (ಆ ಮತ್ತೊಂದು ಕನಸು ಮುಗಿದುಹೋದಾಗ) ಕನಸಿನಲ್ಲಿಯೇ ಎಚ್ಚರ ಗೊಳ್ಳುವನು ಹಾಗೂ ತನ್ನನ್ನು ಪ್ರಪಂಚದ ಯಾವುದೋ ಒಂದು ಮೂಲೆಯಲ್ಲಿ ಇರುವಂತೆ ಕಾಣುವನು. ಆದರೆ ವಾಸ್ತವವಾಗಿ ಅದೂ ಕನಸೇ ಆಗಿದೆ. ಹಾಗೆಯೇ ಜೀವನ ಜಾಗ್ರತ್ ಮುಂತಾದ ಅವಸ್ಥೆಗಳೂ ಕೂಡ ಶ್ರೀಭಗವಂತನ ಮಾಯೆಯೇ ಆಗಿವೆ–ಎಂದು ತಿಳಿದುಕೊಂಡು ಎಲ್ಲರಿಗೂ ಸಾಕ್ಷಿಯಾಗಿರುವ ಮಾಯಾತೀತನಾದ ಪರಮಾತ್ಮನನ್ನೇ ಸ್ಮರಿಸಬೇಕು. ನಿದ್ರಿಸುತ್ತಿರುವ ಮನುಷ್ಯನು ಯಾವುದರ ಸಹಾಯದಿಂದ ತನ್ನ ನಿದ್ರೆಯನ್ನು ಮತ್ತು ಅದರ ಅತೀಂದ್ರಿಯಸ್ಥಿತಿಯನ್ನು ಅನುಭವಿಸುತ್ತಾನೆಯೋ–ಆ ಬ್ರಹ್ಮವು ನಾನೇ. ಆ ಬ್ರಹ್ಮವನ್ನು ನಿನ್ನ ಆತ್ಮನನ್ನಾಗಿ ತಿಳಿದುಕೋ. ಪುರುಷನು ನಿದ್ರೆ ಮತ್ತು ಎಚ್ಚರ–ಎಂಬ ಎರಡು ಅವಸ್ಥೆಗಳನ್ನೂ ಅನುಭವಿಸುತ್ತಾನೆ. ಆ ಎರಡೂ ಅವಸ್ಥೆಗಳಲ್ಲಿಯೂ ಅನುಗತನಾಗಿದ್ದರೂ ವಾಸ್ತವವಾಗಿ ಅವನು ಅವೆರಡರಿಂದಲೂ ಬೇರೆಯಾಗಿದ್ದಾನೆ. ಆ ಎಲ್ಲ ಅವಸ್ಥೆಗಳಲ್ಲಿಯೂ ಇರುವ ಅಖಂಡವೂ ಏಕರಸವೂ ಆದ ಜ್ಞಾನವೇ ಬ್ರಹ್ಮವು ; ಪರಬ್ರಹ್ಮವು. ಜೀವನು ಯಾವಾಗ ನನ್ನ ಸ್ವರೂಪವನ್ನು ಮರೆತುಬಿಡುತ್ತಾನೆಯೋ–ಆಗ ತನ್ನನ್ನು ನನ್ನಿಂದ ಭಿನ್ನನನ್ನಾಗಿ ಭಾವಿಸುತ್ತಾನೆ. ಅದರಿಂದಲೇ ಆತನು ಈ ಸಂಸಾರಚಕ್ರದಲ್ಲಿ ಬೀಳಬೇಕಾಗಿ ಬರುತ್ತದೆ. ಹುಟ್ಟಿನ ಅನಂತರ ಹುಟ್ಟು ಮತ್ತು ಸಾವಿನ ಅನಂತರ ಸಾವು–ಆತನಿಗೆ ಉಂಟಾಗುವುವು. ಈ ಮನುಷ್ಯಯೋನಿಯು ಜ್ಞಾನ ಮತ್ತು ವಿಜ್ಞಾನಗಳ ಮೂಲಸ್ರೋತಸ್ಸಾಗಿದೆ. ಅದನ್ನು ಪಡೆದರೂ ಕೂಡ ಯಾವನು ಆತ್ಮಸ್ವರೂಪವನ್ನು ತಿಳಿದು ಕೊಳ್ಳುವುದಿಲ್ಲವೋ–ಆತನಿಗೆ ಎಲ್ಲೂ ಯಾವ ಯೋನಿಯಲ್ಲಿಯೂ ಶಾಂತಿಯು ದೊರಕಲಾರದು. ಎಲೈ ರಾಜನೇ! ಸಾಂಸಾರಿಕ ಸುಖಕ್ಕಾಗಿ ಮಾಡಲ್ಪಡುವ ಪ್ರಯತ್ನಗಳಲ್ಲಿ ಶ್ರಮವುಂಟು ; ಕ್ಲೇಶವುಂಟು. ಯಾವ ಪರಮಸುಖವನ್ನು ಪಡೆಯುವ ಉದ್ದೇಶದಿಂದ ಅವುಗಳನ್ನು ಮಾಡ ಲಾಗುತ್ತದೆಯೋ–ಅದಕ್ಕೆ ವಿರುದ್ಧವಾಗಿ ಪರಮದುಃಖವನ್ನೇ ಅವು ಕೊಡುವುವು. ಆದರೆ ಕರ್ಮಗಳಿಂದ ನಿವೃತ್ತಿಹೊಂದುವುದರಿಂದ ಯಾವ ಭಯವೂ ಇರುವುದಿಲ್ಲ. ಇದನ್ನು ಯೋಚಿಸಿ ಬುದ್ಧಿವಂತನಾದ ಮನುಷ್ಯನು

ಯಾವುದೇ ಬಗೆಯ ಕರ್ಮಗಳ ಫಲಗಳನ್ನೂ ಸಂಕಲ್ಪಿಸಬಾರದು. ಜಗತ್ತಿನಲ್ಲಿರುವ ದಂಪತಿಗಳೆಲ್ಲರೂ, 'ಸುಖವು ದೊರೆಯಲಿ, ದುಃಖವು ತಪ್ಪಿಹೋಗಲಿ' ಎನ್ನುವುದಕ್ಕೋಸ್ಕರವಾಗಿಯೇ ಕರ್ಮಗಳನ್ನು ಆಚರಿಸುತ್ತಾರೆ. ಆದರೆ ಆ ಕರ್ಮಗಳಿಂದ ಅವರ ದುಃಖವೂ ದೂರವಾಗುವುದಿಲ್ಲ ಮತ್ತು ಸುಖವೂ ದೊರೆಯುವುದಿಲ್ಲ. ಯಾವ ಮನುಷ್ಯನು ತನ್ನನ್ನು ಅತಿಬುದ್ಧಿವಂತನೆಂದು ಭಾವಿಸಿಕೊಂಡು ಕರ್ಮಗಳ ಪಂಜರಗಳಲ್ಲಿ ಸಿಕ್ಕಿಹಾಕಿ ಕೊಳ್ಳುತ್ತಾನೆಯೋ–ಆತನಿಗೆ ಅವನ ಭಾವನೆಗೆ ವಿರುದ್ಧವಾದ ಫಲವೇ ದೊರೆಯುವುದು–ಎಂಬುದನ್ನು ಅರಿಯಬೇಕು. ಜೊತೆಗೆ ಆತ್ಮಸ್ವರೂಪವು ಅತ್ಯಂತ ಸೂಕ್ಷ್ಮವಾದುದು ಮತ್ತು ಜಾಗ್ರತ್-ಸ್ವಪ್ನ-ಸುಷುಪ್ತಿಗಳೆಂಬ ಮೂರು ಅವಸ್ಥೆಗಳಿಗಿಂತಲೂ ಮತ್ತು ಅವುಗಳ ಅಭಿಮಾನಿದೇವತೆಗಳಿಗಿಂತಲೂ ವಿಲಕ್ಷಣವಾಗಿರುವುದು–ಎಂದು ತಿಳಿಯಬೇಕು. ಇದನ್ನು ತಿಳಿದು ಮನುಷ್ಯನು ಇಹಲೋಕದ ಮತ್ತು ಪರಲೋಕದ ಸುಖಗಳಿಂದ ಬಿಡಿಸಿಕೊಂಡು ಜ್ಞಾನ-ವಿಜ್ಞಾನಗಳಿಂದಲೇ ಸಂತೋಷಗೊಂಡು ನನ್ನ ಭಕ್ತನಾಗಿಬಿಡಬೇಕು. ಯೋಗಮಾರ್ಗದ ತತ್ತ್ವವನ್ನು ತಿಳಿಯುವುದರಲ್ಲಿ ನಿಪುಣರಾದ ಮನುಷ್ಯರು–ಬ್ರಹ್ಮ ಮತ್ತು ಆತ್ಮಗಳ ಐಕ್ಯವನ್ನು ಅನುಭವಿ ಸುವುದೇ ಜೀವನ ಅತ್ಯಂತ ದೊಡ್ಡ ಸ್ವಾರ್ಥ ಮತ್ತು ಪರಾರ್ಥಗಳಾಗಿವೆ– ಎಂದು ಚೆನ್ನಾಗಿ ತಿಳಿದುಕೊಳ್ಳಬೇಕು. ನೀನು ನನ್ನ ಈ ಉಪದೇಶವನ್ನು ಸಾವಧಾನವಾಗಿ ಶ್ರದ್ಧೆಯಿಂದ ಧರಿಸಿಕೊಂಡರೆ ಜ್ಞಾನ ಮತ್ತು ವಿಜ್ಞಾನಗಳಿಂದ ಸಂಪನ್ನನಾಗಿ ಶೀಘ್ರವೇ ಸಿದ್ಧನಾಗಿಬಿಡುವೆ."

ಶ್ರೀಶುಕಮಹರ್ಷಿಗಳು ಹೇಳುತ್ತಿದ್ದಾರೆ :

ಎಲೈ ರಾಜೇಂದ್ರನೇ! ಜಗತ್ತಿಗೇ ಗುರುವಾದ ವಿಶ್ವಾತ್ಮನಾದ ಶ್ರೀಹರಿ ಸಂಕರ್ಷಣಭಗವಂತನು ಚಿತ್ರಕೇತುವಿಗೆ ಹೀಗೆ ತಿಳಿವಳಿಕೆ ಹೇಳಿ ಸಮಾಧಾನಪಡಿಸಿ ಆತನ ಎದುರಿಗೇ ಅಲ್ಲಿಂದ ಅಂತರ್ಧಾನಹೊಂದಿದನು.

(ಶ್ಲೋಕ 49-65)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಷಷ್ಠಸ್ಕಂಧದ ೧೬ನೆಯ ಅಧ್ಯಾಯವು ಮುಗಿಯಿತು.

ಚಿತ್ರಕೇತುವಿಗೆ ಪಾರ್ವತೀದೇವಿಯ ಶಾಪ

ಶ್ರೀಶುಕಮಹರ್ಷಿಗಳು ಹೇಳುತ್ತಿದ್ದಾರೆ :

ಯತಶ್ಚಾನ್ತರ್ಹಿತೋಽನನ್ತಸ್ತಸ್ಯೈ ಕೃತ್ವಾ ದಿಶೇ ನಮಃ ।
ವಿದ್ಯಾಧರಶ್ಚಿತ್ರಕೇತುಶ್ಚಚಾರ ಗಗನೇಚರಃ ॥೧॥

ಎಲೈ ದೊರೆಯೇ! ಕೇಳು. ವಿದ್ಯಾಧರಚಕ್ರವರ್ತಿಯಾದ ಚಿತ್ರಕೇತುವು ಸಂಕರ್ಷಣಭಗವಂತನು ಯಾವ ದಿಕ್ಕಿನಲ್ಲಿ ಅಂತರ್ಧಾನಹೊಂದಿದನೋ–ಆ ದಿಕ್ಕಿಗೆ ನಮಸ್ಕಾರಮಾಡಿ ಆಕಾಶಮಾರ್ಗದಲ್ಲಿ ಯಥೇಚ್ಛವಾಗಿ ಸಂಚರಿಸುತ್ತಿದ್ದನು.

ಮಹಾಯೋಗಿಯಾದ ಆ ಚಿತ್ರಕೇತುವು ಕೋಟ್ಯಂತರ ವರ್ಷಗಳ ವರೆಗೆ ಎಲ್ಲ ಬಗೆಯ ಸಂಕಲ್ಪಗಳನ್ನೂ ಪೂರ್ಣಗೊಳಿಸುವ ಸುಮೇರು ಪರ್ವತದ ತಪ್ಪಲುಗಳಲ್ಲಿ ವಿಹರಿಸುತ್ತಿದ್ದನು. ಆತನ ದೇಹಬಲ ಮತ್ತು ಇಂದ್ರಿಯಶಕ್ತಿಗಳು ಸ್ವಲ್ಪವೂ ಕಡಿಮೆಯಾಗದೇ ಹಾಗೆಯೇ ಇದ್ದುವು. ದೊಡ್ಡ-ದೊಡ್ಡ ಮುನಿಗಳೂ, ಸಿದ್ಧರೂ, ಚಾರಣರೂ ಆತನನ್ನು ಸ್ತುತಿಸುತ್ತಿದ್ದರು. ವಿದ್ಯಾಧರಸ್ತ್ರೀಯರು ಆತನ ಪ್ರೇರಣೆಯಂತೆ ಆತನ ಮುಂದೆ ಸರ್ವಶಕ್ತನಾದ ಶ್ರೀಭಗವಂತನ ಗುಣಗಳನ್ನೂ ಮತ್ತು ಲೀಲೆಗಳನ್ನೂ ಗಾನಮಾಡುತ್ತಿದ್ದರು. (ಶ್ಲೋಕ 2-3)

ಆತನು–ಮಹಾವಿಷ್ಣುವು ದಯಪಾಲಿಸಿದ ವಿಮಾನದಿಂದ ಹೀಗೆ ಸಂಚರಿಸುತ್ತಿರುವಾಗ–ಒಮ್ಮೆ ಭಗವಂತನಾದ ಶ್ರೀಶಂಕರನನ್ನು ಕಂಡನು. ಆ ಶ್ರೀಭಗವಂತನನ್ನು ಸಿದ್ಧ-ಚಾರಣರು ಸುತ್ತುವರಿದು ಸೇವಿಸುತ್ತಿದ್ದರು. ಶ್ರೀಭಗವಂತನು ಋಷಿಗಳ ದಿವ್ಯಸಭೆಯಲ್ಲಿ ತನ್ನ ತೊಡೆಯನ್ನು ಅಲಂಕರಿಸಿದ್ದ ಭಗವತಿಯಾದ ಪಾರ್ವತೀದೇವಿಯನ್ನು ಆಲಿಂಗಿಸಿಕೊಂಡಿದ್ದನು. ಚಿತ್ರಕೇತುವು ಶ್ರೀಭಗವಂತನಾದ ಆ ಶಂಕರನ ಬಳಿಗೆ ಹೋಗಿ ಪಾರ್ವತೀ ದೇವಿಯು ಕೇಳುತ್ತಿರುವ ಹಾಗೆಯೇ ಗಟ್ಟಿಯಾಗಿ ನಗುತ್ತಾ ಹೀಗೆಂದನು :

(ಶ್ಲೋಕ 4-5)

"ಈತನು ಜಗತ್ತಿನ ಎಲ್ಲ ಜೀವಿಗಳಿಗೂ ಧರ್ಮವನ್ನು ಬೋಧಿಸುವ ಜಗದ್ಗುರುವು. ಸರ್ವಪ್ರಾಣಿಗಳಲ್ಲಿಯೂ ಶ್ರೇಷ್ಠನಾದವನು. ಆದರೂ ತುಂಬಿದ ಸಭೆಯಲ್ಲಿ ಪತ್ನಿಯನ್ನು ಜೊತೆಗೂಡಿಸಿಕೊಂಡು ಕುಳಿತಿದ್ದಾನೆ. ಜಟೆಯನ್ನು ಧರಿಸಿದ್ದಾನೆ. ಬಹಳ ದೊಡ್ಡ ತಪಸ್ವಿಯಾಗಿದ್ದಾನೆ ಮತ್ತು ಬ್ರಹ್ಮವಾದಿಗಳ ಸಭೆಗೆ ಅಧಿಪತಿಯೂ ಆಗಿದ್ದಾನೆ. ಹಾಗಿದ್ದರೂ ಪ್ರಾಕೃತ ಮನುಷ್ಯರಂತೆ ನಾಚಿಕೆಯಿಲ್ಲದೇ ಹೆಂಡತಿಯನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಸಭೆಯಲ್ಲಿ ಕುಳಿತಿದ್ದಾನಲ್ಲಾ! ಸಾಮಾನ್ಯವಾಗಿ ಸಾಧಾರಣ ಮನುಷ್ಯರೂ ಕೂಡ ಏಕಾಂತದಲ್ಲಿ ಮಾತ್ರವೇ ಹೆಂಡತಿಯನ್ನು ತಮ್ಮ ದೇಹದಲ್ಲಿ ಇರಿಸಿಕೊಳ್ಳುತ್ತಾರೆ. ಆದರೆ ಈತನು ಇಷ್ಟು ವ್ರತಧಾರಿಯಾಗಿದ್ದರೂ ತುಂಬಿದ ಸಭೆಯಲ್ಲಿ ಈಕೆಯನ್ನು ಧರಿಸಿ ಕುಳಿತುಕೊಂಡಿರು ವನಲ್ಲಾ!" (ಶ್ಲೋಕ 6-8)

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಮಹಾರಾಜ! ಶ್ರೀಭಗವಂತನಾದ ಶಂಕರನ ಬುದ್ಧಿಯು ಅಗಾಧ ವಾದುದು. ಆತನು ಚಿತ್ರಕೇತುವಿನ ಕುಚೋದ್ಯದ ಮಾತುಗಳನ್ನು ಕೇಳಿ ನಕ್ಕು ಸುಮ್ಮನಾದನು. ಸಭೆಯನ್ನು ಅಲಂಕರಿಸಿದ್ದ ಶ್ರೀಭಗವಂತನ ಅನು ಯಾಯಿಗಳಾದ ಮಹಾತ್ಮರೂ ಮೌನವಾಗಿದ್ದರು. ಶ್ರೀಭಗವಂತನಾದ ಶಂಕರನ ಪ್ರಭಾವವನ್ನರಿಯದ ಮೂರ್ಖನಾದ ಚಿತ್ರಕೇತುವು ತೋಚಿದಂತೆ ಗಳಹುತ್ತಿದ್ದನು. ತಾನೇ ಜಿತೇಂದ್ರಿನೆಂದು ಆತನಿಗೆ ದುರಹಂಕಾರವುಂಟಾಗಿತ್ತು. ಆತನ ದುಷ್ಟವಾದ ಆ ದಿಟ್ಟತನವನ್ನು ಪಾರ್ವತೀದೇವಿಗೆ ಸಹಿಸಲಾಗಲಿಲ್ಲ. ಆಕೆಯು ಕ್ರೋಧದಿಂದ ಹೀಗೆಂದಳು : (ಶ್ಲೋಕ 9-10)

"ಆಹಾ! ನಮ್ಮಂತಹ ದುಷ್ಟರೂ ನಾಚಿಕೆಗೆಟ್ಟವರೂ ಆದ ಜನರ ಮೇಲೆ ದಂಡಾಧಿಕಾರಿಗಳಾಗಿ ಶಾಸನಮಾಡುವ ಮತ್ತು ತಿರಸ್ಕಾರವನ್ನು ಪ್ರಕಟಪಡಿಸುವ ಮಹಾಪ್ರಭುಗಳು ಈ ಜಗತ್ತಿನಲ್ಲಿ ಇವರೊಬ್ಬರೇ ಎಂದು ಕಾಣುತ್ತದೆ. ಅಯ್ಯೋ ಪಾಪ! ಬ್ರಹ್ಮದೇವರಿಗೆ, ಭೃಗು-ನಾರದರು-ಸನಕರೇ ಮುಂತಾದ ಬ್ರಹ್ಮಪುತ್ರರಾದ ಪರಮರ್ಷಿಗಳಿಗೆ, ಕಪಿಲರು ಮತ್ತು ಮನುವೇ

ಮುಂತಾದ ಮಹಾಪುರುಷರಿಗೆ ಧರ್ಮರಹಸ್ಯವು ಗೊತ್ತೇ ಇಲ್ಲ. ಅದಕ್ಕೇ ಅವರು ಧರ್ಮಮರ್ಯಾದೆಯನ್ನು ಮೀರಿ ನಡೆದಿರುವ ಶ್ರೀಭಗವಂತನನಾದ ಶಿವನನ್ನು ಈ ಕಾರ್ಯದಿಂದ ತಡೆಯುತ್ತಿಲ್ಲ. ಈ ಮಹಾತ್ಮರೆಲ್ಲರೂ ಧ್ಯಾನಮಾಡಲು ಯೋಗ್ಯವಾದ ಅಡಿದಾವರೆಗಳುಳ್ಳವನಾಗಿ, ಮಂಗಳ ಗಳಿಗೂ ಮಾಂಗಲ್ಯನಾಗಿರುವ ಜಗದ್ಗುರುವಾದ ಶ್ರೀಭಗವಂತನಾದ ಸಾಕ್ಷಾತ್ ಶಂಕರನನ್ನೂ ಮತ್ತು ಆತನ ಅನಾಯಾಯಿಗಳಾಗಿರುವ ಮಹಾತ್ಮರನ್ನೂ ಈ ಕ್ಷತ್ರಿಯಾಧಮನು ತಿರಸ್ಕರಿಸಿ ಅವರ ಮೇಲೆ ಶಾಸನಮಾಡಲು ಪ್ರಯತ್ನಿಸಿದ್ದಾನೆ. ಆದುದರಿಂದ ಈ ದುರುಳನು ದಂಡನೆಗೆ ಯೋಗ್ಯನು. ತನ್ನನ್ನು ತುಂಬಾ ದೊಡ್ಡವನು ಎಂದು ಭಾವಿಸಿಕೊಂಡಿರುವ ಈ ದುರಹಂಕಾರಿಯು ಸಾಧುಶ್ರೇಷ್ಠರೆಲ್ಲರೂ ಉಪಾಸನೆಮಾಡುತ್ತಿರುವ ಶ್ರೀಹರಿಯ ಪಾದಾರವಿಂದ ಗಳಲ್ಲಿರಲು ಯೋಗ್ಯನಲ್ಲ. ಎಲ್ಲವೋ ದುರ್ಬುದ್ಧಿಯವನೇ! ನೀನು ಪಾಪಮಯವಾದ ಅಸುರಯೋನಿಯಲ್ಲಿ ಹೋಗಿ ಬೀಳುವವನಾಗು. ಹೀಗಾದರೆ ನೀನು ಮತ್ತೆ ಹೀಗೆ ಮಹಾಪುರುಷರಲ್ಲಿ ಅಪರಾಧವನ್ನು ಮಾಡಲಾರೆ."

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಪಾರ್ವತಿದೇವಿಯು ಹೀಗೆ ಶಾಪವನ್ನು ಕೊಡಲು ಚಿತ್ರಕೇತುವು ಒಡನೆಯೇ ವಿಮಾನದಿಂದಿಳಿದು ತಲೆತಗ್ಗಿಸಿ ನಮಸ್ಕಾರಮಾಡಿ ಆಕೆಯನ್ನು ಪ್ರಸನ್ನಗೊಳಿಸುತ್ತಾ ಹೀಗೆ ವಿಜ್ಞಾಪಿಸಿದನು : (ಶ್ಲೋಕ 11-16)

"ಓ ಜಗನ್ಮಾತೆಯೇ! ನಿನ್ನ ಈ ಶಾಪವನ್ನು ನಾನು ಕೈಜೋಡಿಸಿಕೊಂಡು ವಿನಯದಿಂದ ಸ್ವೀಕರಿಸುತ್ತೇನೆ. ಏಕೆಂದರೆ : ದೇವತೆಗಳು– ಮನುಷ್ಯರಿಗೆ ಏನಾದರೂ ನುಡಿದರೆ ಅದು ಅವರ ಪ್ರಾರಬ್ಧಕ್ಕೆ ಅನುಗುಣವಾಗಿ ಸಿಕ್ಕುವ ಫಲದ ಪೂರ್ವಸೂಚನೆಯು ಮಾತ್ರವೇ ಆಗುವುದು. ದೇವಿ! ಈ ಜೀವನು ಅಜ್ಞಾನದಿಂದ ಆವರಿಸಲ್ಪಟ್ಟಿರುವುದರಿಂದಲೇ ಈ ಸಂಸಾರಚಕ್ರ ದಲ್ಲಿ ತಿರುಗಿಸಲ್ಪಡುತ್ತಾ ಅಲೆದಾಡುತ್ತಾ ಸುಖ ಮತ್ತು ದುಃಖಗಳನ್ನು ಅನುಭವಿಸುತ್ತಿರುವನು. ಅಮ್ಮ! ಸುಖವನ್ನು ಅಥವಾ ದುಃಖವನ್ನು ಕೊಡುವವನು ತನ್ನ ಆತ್ಮವೂ ಅಲ್ಲ. ಇತರರೂ ಅಲ್ಲ. ತಾನೇ ಅಥವಾ ಇತರರೇ

ಸುಖ-ದುಃಖಗಳಿಗೆ ಕರ್ತೃಗಳೆಂದು ಅಜ್ಞಾನಿಗಳು ಮಾತ್ರವೇ ತಿಳಿಯುವರು. ಈ ಜಗತ್ತೆಂಬುದು ಸತ್ತ್ವ, ರಜಸ್ಸು ಮತ್ತು ತಮಸ್ಸುಗಳೆಂಬ ತ್ರಿಗುಣಗಳ ಸ್ವಾಭಾವಿಕವಾದ ಪ್ರವಾಹವೇ ಆಗಿದೆ. ಇದರಲ್ಲಿ ಶಾಪವೇನು? ಅನುಗ್ರಹ ವೇನು? ಸ್ವರ್ಗವೇನು? ನರಕವೇನು? ಸುಖವಾವುದು? ದುಃಖ ವಾವುದು? ಪರಿಪೂರ್ಣನಾದ ಪರಮಾತ್ಮನೇ ಬೇರೆ ಯಾರ ಸಹಾಯವೂ ಇಲ್ಲದೇ ತನ್ನ ಮಾಯಾಶಕ್ತಿಯಿಂದ ಭೂತಗಳನ್ನು ಸೃಷ್ಟಿಸುತ್ತಾನೆ. ಅವುಗಳ ಸಂಸಾರಬಂಧನವನ್ನೂ, ಮೋಕ್ಷವನ್ನೂ, ಸುಖವನ್ನೂ ಮತ್ತು ದುಃಖವನ್ನೂ ಅವನೇ ಉಂಟುಮಾಡುವನು. (ಶ್ಲೋಕ 17-21)

ನ ತಸ್ಯ ಕಶ್ಚಿದ್ದಯಿತಃ ಪ್ರತೀಪೋ
ನ ಜ್ಞಾತಿಬನ್ಧುರ್ನ ಪರೋ ನ ಚ ಸ್ವಃ ।
ಸಮಸ್ಯ ಸರ್ವತ್ರ ನಿರಞ್ಜನಸ್ಯ
ಸುಖೇ ನ ರಾಗಃ ಕುತ ಏವ ರೋಷಃ ॥೨೨॥

ಅಂಬ! ಆ ಶ್ರೀಹರಿಯು ಸರ್ವಸಮನು. ಮಾಯೆಯ ಮಲದ ಸೋಂಕು ಇಲ್ಲದವನು. ಆತನಿಗೆ ಯಾವನೂ ಪ್ರಿಯನೂ ಇಲ್ಲ. ಅಪ್ರಿಯನೂ ಇಲ್ಲ. ಜ್ಞಾತಿಯೂ ಇಲ್ಲ. ಬಂಧುವೂ ಇಲ್ಲ. ತನ್ನವನೂ ಇಲ್ಲ. ಪರಕೀಯನೂ ಇಲ್ಲ. ಸುಖದಲ್ಲಿ ಪ್ರೀತಿಯೂ ಇಲ್ಲ. ರೋಷವಾದರೂ ಎಲ್ಲಿಂದ ಬಂದೀತು?

ತಥಾಪಿ ತಚ್ಛಕ್ತಿವಿಸರ್ಗ ಏಷಾಂ
ಸುಖಾಯ ದುಃಖಾಯ ಹಿತಾಹಿತಾಯ ।
ಬನ್ಧಾಯ ಮೋಕ್ಷಾಯ ಚ ಮೃತ್ಯುಜನ್ಮನೋಃ
ಶರೀರಿಣಾಂ ಸಂಸೃತಯೇಽವಕಲ್ಪತೇ ॥೨೩॥

ಆದರೂ ಆತನ ಮಾಯಾಶಕ್ತಿಯ ಕಾರ್ಯಗಳಿಂದ ಪುಣ್ಯ-ಪಾಪಗಳೇ ಪ್ರಾಣಿಗಳ ಸುಖ-ದುಃಖ, ಹಿತ-ಅಹಿತ, ಬಂಧನ-ಮೋಕ್ಷ, ಹುಟ್ಟು-ಸಾವು ಮತ್ತು ಸಂಸಾರದ ಗತಾಗತಗಳಿಗೆ ಕಾರಣವಾಗುವುದು.

ಆದುದರಿಂದ, ಎಲೈ ಪತಿಪ್ರಾಣೆಯಾದ ದೇವಿಯೇ! 'ನನ್ನನ್ನು ಶಾಪ

ದಿಂದ ಬಿಡುಗಡೆಮಾಡು'–ಎಂದು ನಿನ್ನನ್ನು ಬೇಡುತ್ತಿಲ್ಲ. ಕೆಟ್ಟದ್ದು ಎಂದು ನಿನಗೆ ಅನ್ನಿಸಿರುವ ನನ್ನ ಮಾತುಗಳನ್ನು ಕೃಪೆಯಿಟ್ಟು ಕ್ಷಮಿಸು."

(ಶ್ಲೋಕ 24)

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಎಲೈ ಶತ್ರುಹಂತಕನೇ! ಚಿತ್ರಕೇತುವು ಹೀಗೆ ಪಾರ್ವತೀ-ಪರಮೇಶ್ವರರನ್ನು ಪ್ರಸನ್ನಗೊಳಿಸಿ ಅವರು ನಸುನಗುತ್ತಾ ನೋಡುತ್ತಿರುವಂತೆಯೇ ತನ್ನ ವಿಮಾನವನ್ನೇರಿ ಹೊರಟುಹೋದನು. ಆಗ ಶ್ರೀಭಗವಂತರಾದ ರುದ್ರದೇವರು-ದೇವರ್ಷಿಗಳೂ, ದೈತ್ಯರೂ, ಸಿದ್ಧರೂ ಮತ್ತು ತನ್ನ ಪಾರ್ಷದರೂ ಕೇಳುತ್ತಿರುವಂತೆಯೇ ಪಾರ್ವತಿಗೆ ಹೀಗೆಂದರು : "ಎಲೈ ಸುಂದರಿಯೇ! ಅದ್ಭುತವಾದ ಕರ್ಮಗಳುಳ್ಳ, ನಿಃಸ್ಪೃಹರೂ–ಉದಾರಹೃದಯರೂ ಆದ ಶ್ರೀಹರಿಯ ದಾಸಾನುದಾಸರ ಮಹಿಮೆಯನ್ನು ಕಣ್ಣಿಂದಲೇ ನೋಡಿದೆಯಲ್ಲ ವೇ? ಶ್ರೀಭಗವಂತನಲ್ಲಿ ಯಾರು ಶರಣಾಗತರಾಗಿದ್ದಾ ರೆಯೋಅವರು ಯಾರಿಗೂ ಹೆದರುವುದಿಲ್ಲ. ಏಕೆಂದರೆ : ಅವರಿಗೆ ಸ್ವರ್ಗ, ಮೋಕ್ಷ ಮತ್ತು ನರಕಗಳಲ್ಲಿಯೂ ಕೂಡ ಕೇವಲ ಶ್ರೀಭಗವಂತನೊಬ್ಬನೇ ಸಮಾನಭಾವದಿಂದ ಕಾಣುತ್ತಿ ರುತ್ತಾ ನೆ. ಜೀವಗಳಿಗೆ ದೇಹಸಂಯೋಗ-ವಿಯೋಗಗಳಿಂದ ಸುಖ-ದುಃಖಗಳು, ಹುಟ್ಟು-ಸಾವುಗಳು ಮತ್ತು ಶಾಪ-ಅನುಗ್ರಹಗಳು ಇವೇ ಮುಂತಾದ ದ್ವಂದ್ವಗಳು ಉಂಟಾಗುವುದಕ್ಕೆ ಶ್ರೀಭಗವಂತನ ಲೀಲೆಯೇ ಕಾರಣವು. ಆತ್ಮನು ಸಮನಾಗಿದ್ದರೂ ಅವಿವೇಕವಶದಿಂದ ಆತನಲ್ಲಿ ದೇವತೆ, ಮನುಷ್ಯ–ಮುಂತಾದ ಭೇದಗಳೂ ಮತ್ತು ಗುಣ, ದೋಷ ಮುಂತಾದ ಕಲ್ಪನೆಗಳೂ ಉಂಟಾಗುವುವು. ಮಾಲೆಯಲ್ಲಿ ಸರ್ಪಬುದ್ಧಿಯು ಹೇಗೋ ಹಾಗೆ ಇದು ಭ್ರಮೆಯಿಂದಲೇ ಉಂಟಾಗುವುದು. (ಶ್ಲೋಕ 25-30)

ಶ್ರೀಭಗವಂತನಾದ ವಾಸುದೇವನಲ್ಲಿ ಭಕ್ತಿಯಿಂದ ಪೂರ್ಣರಾಗಿ, ಜ್ಞಾನದ ಮತ್ತು ವೈರಾಗ್ಯದ ಬಲವನ್ನು ಹೊಂದಿರುವ ಮಹಾತ್ಮರು ಯಾವುದೇ ವಸ್ತುವಿನಲ್ಲಿಯೂ ಇದು ಹೇಯ, ಇದು ಉಪಾದೇಯ ಎಂದು ರಾಗ-ದ್ವೇಷಗಳನ್ನು ಹೊಂದಿರುವುದಿಲ್ಲ. ನಾನಾಗಲೀ, ಬ್ರಹ್ಮದೇವರಾಗಲೀ, ಸನಕಾದಿಗಳಾಗಲೀ, ನಾರದರಾಗಲೀ, ಬ್ರಹ್ಮಪುತ್ರರಾದ ಭೃಗುವೇ ಮುಂತಾದ ಮಹಾಮುನಿಗಳಾಗಲೀ, ಮಹಾದೇವತೆಗಳಾಗಲೀ–ಯಾರೂ

ಕೂಡ ಶ್ರೀಭಗವಂತನ ರಹಸ್ಯವನ್ನು ಅರಿಯಲಾರರು. ಹೀಗಿರುವಾಗ ಆತನ ಅಂಶಾಂಶಗಳಾಗಿ ತಮ್ಮನ್ನು ಅವನಿಂದ ಬೇರೆಯಾದ ಈಶ್ವರರೆಂದು ತಿಳಿದುಕೊಂಡಿರುವವರು ಯಾರು ತಾನೇ ಆತನ ಸ್ವರೂಪವನ್ನು ಅರಿಯಲು ಸಾಧ್ಯ? ಶ್ರೀಭಗವಂತನಿಗೆ ಯಾವನೂ ಪ್ರಿಯನೂ ಅಲ್ಲ ; ಅಪ್ರಿಯನೂ ಅಲ್ಲ. ಯಾವನೂ ಸ್ವಕೀಯನೂ ಅಲ್ಲ ; ಪರಕೀಯನೂ ಅಲ್ಲ. ಆತನು ಎಲ್ಲ ಪ್ರಾಣಿಗಳಿಗೂ ಆತ್ಮನಾಗಿದ್ದಾನೆ. ಆದ್ದರಿಂದ ಎಲ್ಲ ಪ್ರಾಣಿಗಳಿಗೂ ಪ್ರಿಯ ತಮನೂ ಆಗಿದ್ದಾನೆ. ಪರಮಭಾಗ್ಯವಂತನಾದ ಈ ಚಿತ್ರಕೇತುವೂ ಆ ಶ್ರೀಭಗವಂತನಿಗೇ ಪ್ರಿಯನಾದ ಅನುಚರನೂ, ಶಾಂತನೂ, ಸಮ ದರ್ಶಿಯೂ ಆಗಿದ್ದಾನೆ. ನಾನೂ ಕೂಡ ಆ ಶ್ರೀಭಗವಂತನಾದ ಶ್ರೀಹರಿಗೆ ಪ್ರಿಯನಾಗಿದ್ದೇನೆ. ಆದುದರಿಂದ ನೀನು ಶ್ರೀಭಗವಂತನಿಗೆ ಪ್ರಿಯರಾಗಿ, ಶಾಂತರೂ ಸಮದರ್ಶಿಗಳೂ ಆಗಿರುವ ಮಹಾತ್ಮರ ವಿಷಯದಲ್ಲಿ ಯಾವುದೇ ಬಗೆಯ ಆಶ್ಚರ್ಯವನ್ನೂ ಪಡಬಾರದು.” (ಶ್ಲೋಕ 31-35)

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಉಮಾದೇವಿಯು ಶ್ರೀಭಗವಂತನಾದ ಶಿವನ ಆ ಭಾಷಣವನ್ನು ಕೇಳಿ ಶಾಂತಳಾದಳು ಮತ್ತು ಆಶ್ಚರ್ಯರಹಿತಳಾದಳು. ಭಾಗವತೋತ್ತಮನಾದ ಚಿತ್ರಕೇತುವು ದೇವಿಗೂ ಪ್ರತಿಶಾಪವನ್ನು ಕೊಡಲು ಸಮರ್ಥನಾಗಿದ್ದನು. ಆದರೂ ಆತನು ಹಾಗೆ ಶಾಪವನ್ನು ನೀಡದೇ ಆ ಶಾಪವನ್ನು ಶಿರಸಾವಹಿಸಿ ದನು. ಇದು ತಾನೇ ಸಾಧು-ಸಜ್ಜನರ ಲಕ್ಷಣವು? ಅದೇ ವಿದ್ಯಾಧರ ಚಕ್ರವರ್ತಿ ಚಿತ್ರಕೇತುವೇ ದಾನವಯೋನಿಯನ್ನು ಆಶ್ರಯಿಸಿ ತ್ವಷ್ಟನ ದಕ್ಷಿಣಾಗ್ನಿಯಲ್ಲಿ ಹುಟ್ಟಿ ವೃತ್ರಾಸುರನೆಂಬ ಹೆಸರಿನಿಂದ ಪ್ರಸಿದ್ಧನಾದನು. ಆ ಅಸುರಯೋನಿಯಲ್ಲಿದ್ದಾಗಲೂ ಆತನಲ್ಲಿ ಶ್ರೀಭಗವಂತನ ಸ್ವರೂಪದ ಜ್ಞಾನ ಮತ್ತು ಭಕ್ತಿಗಳು ತುಂಬಿದ್ದುವು. 'ವೃತ್ರನು ದೈತ್ಯಯೋನಿಯಲ್ಲಿ ಏಕೆ ಜನಿಸಿದನು? ಆ ಯೋನಿಯಲ್ಲಿ ಆತನಿಗೆ ಅಂತಹ ಅನುಪಮವಾದ ಭಗವದ್ಭಕ್ತಿಯು ಹೇಗೆ ಬಂದಿತು?'—ಎಂದು ನೀನು ಪ್ರಶ್ನೆಮಾಡಿದ್ದೆ. ಅದಕ್ಕೆ ವಿವರವಾದ ಉತ್ತರವನ್ನು ನಾನು ಕೊಟ್ಟಾಯಿತಪ್ಪಾ. ಮಹಾತ್ಮನಾದ ಚಿತ್ರಕೇತುವಿನ ಪವಿತ್ರವಾದ ಈ ಇತಿಹಾಸವು ಕೇವಲ ಅವನ ಮಾಹಾತ್ಮ್ಯ

ವಾಗಿರದೇ ಸಮಸ್ತವಿಷ್ಣುಭಕ್ತರ ಮಾಹಾತ್ಮ್ಯವೂ ಆಗಿದೆ. ಇದನ್ನು ಯಾವನು ಕೇಳುತ್ತಾನೆಯೋ–ಅವನು ಸಮಸ್ತಬಂಧನಗಳಿಂದಲೂ ಬಿಡುಗಡೆಹೊಂದುವನು. ಪ್ರಾತಃಕಾಲದಲ್ಲಿ ಎದ್ದು ಮೌನದಲ್ಲಿದ್ದು ಶ್ರದ್ಧೆಯಿಂದ ಶ್ರೀಭಗವಂತನ ಸ್ಮರಣೆಮಾಡುತ್ತಾ ಈ ಇತಿಹಾಸವನ್ನು ಓದುವವನು ಪರಮಗತಿಯನ್ನು ಹೊಂದುವನು. (ಶ್ಲೋಕ 36-41)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಷಷ್ಠಸ್ಕಂಧದ ೧೭ನೆಯ ಅಧ್ಯಾಯವು ಮುಗಿಯಿತು.

ಷಷ್ಠಸ್ಕಂಧ ೧೮ನೆಯ ಅಧ್ಯಾಯ

ಅದಿತಿ ಮತ್ತು ದಿತಿ ಇವರ ಸಂತಾನಗಳು ಮತ್ತು ಮರುದ್ದೇವತೆಗಳ ಉತ್ಪತ್ತಿ

ಶ್ರೀಶುಕಮಹರ್ಷಿಗಳು ಹೇಳುತ್ತಿದ್ದಾರೆ :

ಪೃಶ್ನಿಸ್ತು ಪತ್ನೀ ಸವಿತುಃ ಸಾವಿತ್ರೀಂ ವ್ಯಾಹೃತಿಂ ತ್ರಯೀಮ್ ।
ಅಗ್ನಿಹೋತ್ರಂ ಪಶುಂ ಸೋಮಂ ಚಾತುರ್ಮಾಸ್ಯಂ ಮಹಾಮಖಾನ್ ॥

ಪರೀಕ್ಷಿದ್ರಾಜನೇ! ಕೇಳು. ಸವಿತೃದೇವನ ಪತ್ನಿಯಾದ ಪೃಶ್ನಿದೇವಿಯು–ಸಾವಿತ್ರೀ, ವ್ಯಾಹೃತಿ, ತ್ರಯೀ, ಅಗ್ನಿಹೋತ್ರ, ಪಶು, ಸೋಮ, ಚಾತುರ್ಮಾಸ್ಯ ಮತ್ತು ಪಂಚಮಹಾಯಜ್ಞಗಳೆಂಬ ಎಂಟು ಮಂದಿ ಮಕ್ಕಳನ್ನು ಪಡೆದಳು.

ಭಗದೇವತೆಯ ಪತ್ನಿಯಾದ ಸಿದ್ಧಿಯಲ್ಲಿ ಮಹಿಮಾ, ವಿಭು ಮತ್ತು ಪ್ರಭು–ಎಂಬ ಮೂವರು ಪುತ್ರರೂ–'ಆಶೀ' ಎಂಬ ಸುಂದರಿಯಾದ ಒಬ್ಬಳು ಪುತ್ರಿಯೂ ಜನಿಸಿದರು. ಧಾತೃದೇವತೆಗೆ–ಕುಹೂ, ಸಿನೀವಾಲೀ, ರಾಕಾ ಮತ್ತು ಅನುಮತಿ–ಎಂಬ ನಾಲ್ವರು ಪತ್ನಿಯರಿಂದ ಸಾಯಂಕಾಲ, ದರ್ಶ, ಪ್ರಾತಃಕಾಲ ಮತ್ತ ಪೂರ್ಣಮಾಸ–ಎಂಬ ನಾಲ್ವರು ಪುತ್ರರು ಹುಟ್ಟಿದರು. ಧಾತೃವಿನ ತಮ್ಮನಿಗೆ 'ವಿಧಾತಾ' ಎಂದು ಹೆಸರು. ಆತನ ಪತ್ನಿಯು ಕ್ರಿಯೆ. ಆಕೆಯಲ್ಲಿ ಪುರೀಷ್ಯ ಎಂಬ ಹೆಸರಿನ ಐದು ಅಗ್ನಿಗಳು ಉತ್ಪನ್ನರಾದರು. ವರುಣದೇವರ ಪತ್ನಿಯ ಹೆಸರು ಚರ್ಷಣೀ. ಆಕೆಯಲ್ಲಿ

ಭೃಗುಮಹರ್ಷಿಗಳು ದ್ವಿತೀಯಜನ್ಮವನ್ನು ಪಡೆದರು. ಅದಕ್ಕೆ ಮೊದಲು ಅವರು ಬ್ರಹ್ಮದೇವರ ಪುತ್ರರಲ್ಲಿ ಒಬ್ಬರಾಗಿದ್ದರು. ಮಹಾಯೋಗಿಗಳಾದ ವಾಲ್ಮೀಕಿಗಳೂ ಕೂಡ ವರುಣದೇವರ ಪುತ್ರರೇ ಆಗಿದ್ದರು. ಹುತ್ತದಿಂದ ಹುಟ್ಟಿದ್ದರಿಂದ ಅವರು ವಾಲ್ಮೀಕಿ ಎನಿಸಿಕೊಂಡರು. ಉರ್ವಶಿಯನ್ನು ಕಂಡು ಮಿತ್ರದೇವತೆ ಮತ್ತು ವರುಣದೇವತೆ ಇಬ್ಬರಿಗೂ ವೀರ್ಯಸ್ಖಲನವಾಯಿತು. ಆ ವೀರ್ಯವನ್ನು ಅವರು ಒಂದು ಮಡಕೆಯಲ್ಲಿ ಇರಿಸಿದರು. ಅದರಿಂದಲೇ ಮುನಿಶ್ರೇಷ್ಠರಾದ ಅಗಸ್ತ್ಯರ ಮತ್ತು ವಸಿಷ್ಠರ ಜನನವಾಯಿತು. ಮಿತ್ರ ದೇವತೆಯ ಪತ್ನಿಯು ರೇವತೀ. ಆಕೆಗೆ ಉತ್ಸರ್ಗ, ಅರಿಷ್ಟ ಮತ್ತು ಪಿಪ್ಪಲ–ಎಂಬ ಮೂವರು ಪುತ್ರರು ಜನಿಸಿದರು. ಪುಲೋಮನ ಪುತ್ರಿಯಾದ ಶಚೀದೇವಿಯು ಇಂದ್ರದೇವರ ಪತ್ನೀ. ಆಕೆಯಲ್ಲಿ ಅವರಿಗೆ ಜಯಂತ, ಋಷಭ ಮತ್ತು ಮೀಢ್ವಾನ್–ಎಂಬ ಮೂವರು ಪುತ್ರರು ಹುಟ್ಟಿದರೆಂದು ನಾವು ಕೇಳಿದ್ದೇವೆ. ಮಾಯೆಯಿಂದ ವಾಮನರೂಪದಲ್ಲಿ ಅವತಾರಮಾಡಿ ಮೂರಡಿಗಳಿಂದ ಮೂರು ಲೋಕಗಳನ್ನೂ ಅಳೆದ ಶ್ರೀಭಗವಂತನಾದ ಶ್ರೀಮಹಾವಿಷ್ಣುವಿಗೆ 'ಕೀರ್ತಿ' ಎಂಬಾಕೆಯು ಪತ್ನಿಯಾಗಿದ್ದಳು. ಆಕೆಯಲ್ಲಿ ಬೃಹಚ್ಛ್ಲೋಕ ಎಂಬ ಪುತ್ರನು ಜನಿಸಿದನು. ಆ ಬೃಹಚ್ಛ್ಲೋಕನಿಗೆ ಸೌಭಗನೇ ಮುಂತಾದ ಅನೇಕ ಮಂದಿ ಮಕ್ಕಳು ಹುಟ್ಟಿದರು. ಕಶ್ಯಪರ ಸುಪುತ್ರನಾದ ಶ್ರೀಭಗವಂತನಾದ ವಾಮನನು ಅದಿತಿದೇವಿಯ ಗರ್ಭದಲ್ಲಿ ಏಕೆ ಅವತರಿಸಿದನು ಮತ್ತು ಆ ಅವತಾರದಲ್ಲಿ ಆತನು ಯಾವ ಯಾವ ಗುಣ, ಲೀಲೆ, ಪರಾಕ್ರಮಗಳನ್ನು ಪ್ರಕಟಿಸಿದನು?–ಎಂಬುದನ್ನು ಮುಂದೆ ವರ್ಣಿಸುವೆವು.* (ಶ್ಲೋಕ 2-9)

ಮಹಾರಾಜ! ಈಗ ನಿನಗೆ ಕಶ್ಯಪರ ಮತ್ತೊಬ್ಬ ಪತ್ನಿಯಾದ ದಿತಿದೇವಿಯಲ್ಲಿ ಉತ್ಪನ್ನವಾದ ಸಂತಾನಪರಂಪರೆಯನ್ನು ವರ್ಣಿಸುತ್ತೇನೆ ; ಕೇಳು : ಶ್ರೀಭಗವಂತನ ಪ್ರಿಯತಮಭಕ್ತನಾದ ಪ್ರಹ್ಲಾದನೂ ಮತ್ತು ಬಲಿ ಚಕ್ರವರ್ತಿಯೂ ಆ ವಂಶವನ್ನೇ ಅಲಂಕರಿಸಿದವರು. ದಿತಿದೇವಿಗೆ ದೈತ್ಯ-ದಾನವರೆಲ್ಲರಿಗೂ ವಂದನೀಯರಾದ ಹಿರಣ್ಯಕಶಿಪು ಮತ್ತು ಹಿರಣ್ಯಾಕ್ಷ–ಎಂಬ ಇಬ್ಬರೇ ಪುತ್ರರು ಹುಟ್ಟಿದರು. ಜಂಭದಾನವನು ತನ್ನ ಸುಪುತ್ರಿ

---

* ಮುಂದೆ ಎಂದರೆ ಎಂಟನೆಯ ಸ್ಕಂಧದಲ್ಲಿ.

ಯಾದ ಕಯಾಧುವನ್ನು ಹಿರಣ್ಯಕಶಿಪುವಿಗೆ ಕೊಟ್ಟು ವಿವಾಹಮಾಡಿದನು. ಕಯಾಧುವಿನಲ್ಲಿ ಹಿರಣ್ಯಕಶಿಪುವಿಗೆ ಸಂಹ್ಲಾದ, ಅನುಹ್ಲಾದ, ಹ್ಲಾದ ಮತ್ತು ಪ್ರಹ್ಲಾದ–ಎಂಬ ನಾಲ್ವರು ಪುತ್ರರು ಜನಿಸಿದರು. ಅವರ ಸೋದರಿಯಾದ ಸಿಂಹಿಕೆಯು ವಿಪ್ರಚಿತ್ತನೆಂಬ ದಾನವನನ್ನು ಮದುವೆಯಾಗಿ ರಾಹುವೆಂಬ ಪುತ್ರನನ್ನು ಹಡೆದಳು. ಅಮೃತಪಾನದ ಸಮಯದಲ್ಲಿ ಮೋಹಿನೀ ರೂಪಧಾರಿಯಾದ ಶ್ರೀಮಹಾವಿಷ್ಣುವು ಸುದರ್ಶನಚಕ್ರದಿಂದ ಕತ್ತರಿಸಿ ಹಾಕಿದ್ದು ಇದೇ ರಾಹುವಿನ ಶಿರಸ್ಸನ್ನು. ಸಂಹ್ಲಾದನ ಪತ್ನಿಯ ಹೆಸರು ಕೃತಿ. ಆಕೆಯಲ್ಲಿ ಪಂಚಜನನೆಂಬ ಪುತ್ರನು ಹುಟ್ಟಿದನು. ಹ್ಲಾದನ ಪತ್ನಿಯು ಧಮನಿ. ಆಕೆಯು ಇಲ್ವಲ ಮತ್ತು ವಾತಾಪಿ ಎಂಬ ಇಬ್ಬರು ಪುತ್ರರನ್ನು ಪಡೆದಳು. ಅದೇ ಇಲ್ವಲನೇ ಅಗಸ್ತ್ಯರಿಗೆ ಆತಿಥ್ಯವನ್ನು ನೀಡುವಾಗ ವಾತಾಪಿ ಯನ್ನು ಬೇಯಿಸಿ ತಿನ್ನಿಸಿದನೆಂಬುದು ಪ್ರಸಿದ್ಧವಾಗಿದೆ. ಅನುಹ್ಲಾದನ ಪತ್ನಿಯು ಸೂರ್ಮ್ಯಾ. ಆಕೆಯ ಪುತ್ರರೇ ಬಾಷ್ಕಲ ಮತ್ತು ಮಹಿಷಾಸುರರು. ಪ್ರಹ್ಲಾದನ ಪುತ್ರನು ವಿರೋಚನ. ಆತನ ಮಡದಿಯಾದ ದೇವಿಯ ಗರ್ಭ ದಿಂದ ದೈತ್ಯರಾಜನಾದ ಬಲಿಚಕ್ರವರ್ತಿಯು ಜನಿಸಿದನು. ಬಲಿಚಕ್ರವರ್ತಿಯ ಪತ್ನಿಯ ಹೆಸರು ಅಶನಾ. ಆಕೆಗೆ ಬಾಣನೇ ಮುಂತಾದ ನೂರು ಮಂದಿ ಪುತ್ರರು ಜನಿಸಿದರು. ದೈತ್ಯರಾಜನಾದ ಆ ಬಲಿಯ ಮಹಿಮೆಯು ಗಾನಮಾಡಲು ಯೋಗ್ಯವಾದುದು. ಆ ಪುಣ್ಯಾತ್ಮನ ಕಥೆಯನ್ನು ಮುಂದೆ ತಿಳಿಸುವೆನು.* ಬಲಿಯ ಪುತ್ರನಾದ ಬಾಣಾಸುರನು ಶ್ರೀಭಗವಂತನಾದ ಶ್ರೀಶಂಕರನನ್ನು ಆರಾಧನೆಮಾಡಿ ಆತನ ಗಣಾಧಿಪತಿಗಳಲ್ಲೊಬ್ಬನಾದನು. ಇಂದೂ ಕೂಡ ಶ್ರೀಭಗವಂತನಾದ ಶಂಕರನು ಆತನ ನಗರಿಯನ್ನು ರಕ್ಷಿಸು ವುದಕ್ಕಾಗಿ ಆತನ ಬಳಿಯೇ ಇರುತ್ತಿದ್ದಾನೆ. ದಿತಿದೇವಿಯ ಗರ್ಭದಲ್ಲಿ ಹಿರಣ್ಯಾ ಕಶಿಪು ಮತ್ತು ಹಿರಣ್ಯಾಕ್ಷರಲ್ಲದೇ ಇನ್ನೂ ನಲವತ್ತೊಂಬತ್ತು ಮಂದಿ ಪುತ್ರರು ಉತ್ಪತ್ತಿಹೊಂದಿದರು. ಅವರಿಗೆ ಮರುದ್ಗಣಗಳೆಂದು ಹೆಸರು. ಅವರಿಗೆ ಸಂತಾನವಿಲ್ಲ. ದೇವರಾಜನಾದ ಇಂದ್ರನು ಆ ಮರುದ್ಗಣಗಳನ್ನು ತನಗೆ ಸಮರಾದ ದೇವತೆಗಳನ್ನಾಗಿ ಮಾಡಿಕೊಂಡುಬಿಟ್ಟನು"–ಎಂದು ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳಿದರು. ಆಗ ದಿತಿಯ ಗರ್ಭದಲ್ಲಿ

* ಮುಂದೆ-ಎಂಟನೆಯ ಸ್ಕಂಧದಲ್ಲಿ.

ಹುಟ್ಟಿದ ಮರುದ್ಗಣಗಳು ಹೇಗೆ ದೇವತೆಗಳಾದರು?–ಎಂಬ ಬಗೆಗೆ ಪರೀಕ್ಷಿದ್ರಾಜನಿಗೆ ಸಂದೇಹವುಂಟಾಗಿ ಆತನು–"ಮಹಾತ್ಮರೇ! ಮರುದ್ಗಣಗಳು ತಮಗೆ ಹುಟ್ಟಿನಿಂದ ಬಂದಿದ್ದ ಅಸುರೋಚಿತವಾದ ಭಾವವನ್ನು ಬಿಟ್ಟು ದೇವರಾಜನಾದ ಇಂದ್ರನಿಂದ ದೇವತೆಗಳಾಗಿಸಲ್ಪಟ್ಟಿದ್ದು ಹೇಗೆ? ಅವರು ಅದಕ್ಕಾಗಿ ಯಾವ ಪುಣ್ಯಕರ್ಮವನ್ನು ಆಚರಿಸಿದರು? ಈ ವಿಷಯವನ್ನು ತಿಳಿದುಕೊಳ್ಳಬೇಕೆಂದು ನಾನಲ್ಲದೆ ಇಲ್ಲಿರುವ ಇತರ ಋಷಿಗಳ ಮಂಡಲಿಯೇ ಕುತೂಹಲಗೊಂಡಿದೆ. ದಯೆಯಿಟ್ಟು ಆ ವೃತ್ತಾಂತ್ತವನ್ನು ವಿಸ್ತಾರವಾಗಿ ಅಪ್ಪಣೆಕೊಡಿಸಬೇಕು"–ಎಂದು ಶ್ರೀಶುಕಮಹರ್ಷಿಗಳನ್ನು ಪ್ರಾರ್ಥಿಸಿದನು.

(ಶ್ಲೋಕ 10-21)

ಸೂತಪುರಾಣಿಕರು ಹೇಳುತ್ತಾರೆ :

ವಿಷ್ಣುರಾತ ಪರೀಕ್ಷಿದ್ರಾಜನು ಅತ್ಯಾದರದಿಂದ ಕೇಳಿದ ಈ ಸಾರಗರ್ಭಿತವಾದ ಪ್ರಶ್ನೆಗಾಗಿ ಪ್ರಸನ್ನವಾದ ಚಿತ್ತದಿಂದ ಆತನನ್ನು ಅಭಿನಂದನೆ ಮಾಡಿ ಶುಕಮಹರ್ಷಿಗಳು ಹೀಗೆ ಉತ್ತರಿಸಿದರು :

"ಶ್ರೀಭಗವಂತನಾದ ಮಹಾವಿಷ್ಣುವು ಇಂದ್ರನ ಪಕ್ಷವನ್ನು ವಹಿಸಿ ತನ್ನ ಪುತ್ರರಾದ ಹಿರಣ್ಯಕಶಿಪು ಮತ್ತು ಹಿರಣ್ಯಾಕ್ಷರಿಬ್ಬರನ್ನೂ ಸಂಹರಿಸಿ ಬಿಡಲು ಶೋಕಾಗ್ನಿಯಿಂದ ಕೆರಳಿದ ದಿತಿದೇವಿಯು ಹೀಗೆ ಚಿಂತಿಸಿದಳು : 'ನಿಜವಾಗಿಯೂ ಈ ಇಂದ್ರನು ಇಂದ್ರಿಯಗಳಲ್ಲೇ ರಮಿಸುವವನು. ಅತಿ ಕ್ರೂರಿಯು. ದಯೆ-ದಾಕ್ಷಿಣ್ಯಗಳಿಲ್ಲದೇ ತನ್ನ ಒಡಹುಟ್ಟಿದವರನ್ನೇ ಕೊಲ್ಲಿಸಿದ ಪಾಪಿಯು. ಈತನನ್ನೇ ಕೊಲ್ಲಿಸಿ ನಾನು ಎಂದಿಗೆ ಸುಖವಾಗಿ ನಿದ್ರೆ ಮಾಡಿಯೇನು? ಜನರು, ರಾಜರ ಮತ್ತು ದೇವತೆಗಳ ಶರೀರಗಳನ್ನು 'ಪ್ರಭು' ಎಂದು ಕರೆಯುತ್ತಾರೆ. ಆದರೆ ಒಂದಲ್ಲ ಒಂದು ದಿನ ಆ ಶರೀರಗಳೂ ಹುಳು-ಹುಪ್ಪಟ್ಟೆ, ಮಲ ಅಥವಾ ಬೂದಿಯ ರಾಶಿಯಾಗಿ ಬಿಡುವುದು. ಆದುದರಿಂದ ಇತರ ಪ್ರಾಣಿಗಳನ್ನು ಗೋಳುಹೊಯ್ದುಕೊಳ್ಳುವವನಿಗೆ ತನ್ನ ನಿಜವಾದ ಸ್ವಾರ್ಥ ಯಾವುದು? ಪರಮಾರ್ಥ ಯಾವುದು? ಎಂಬುದು ಅರಿವಿಗೆ ಬರುವುದಿಲ್ಲ. ಆತನು ನರಕಕ್ಕೇ ಹೋಗಿ ಬೀಳಬೇಕಾಗುವುದು. ಇಂದ್ರನು ತನ್ನ ಶರೀರವನ್ನು ನಿತ್ಯವೆಂದು ಭಾವಿಸಿ ಹೀಗೆ ಕೊಬ್ಬಿ

ಹೋಗಿದ್ದಾನೆ. ತನ್ನ ವಿನಾಶದ ಅರಿವೇ ಆತನಿಗೆ ಇಲ್ಲವಾಗಿದೆ. ಈಗ ನಾನು ಆತನ ಅಹಂಕಾರವನ್ನು ಮುರಿದುಹಾಕುವಂತಹ ಪುತ್ರನನ್ನು ಪಡೆಯುವ ಉಪಾಯವೊಂದನ್ನು ಮಾಡುವೆನು'–ಹೀಗೆ ಮನಸ್ಸಿನಲ್ಲಿ ಯೋಚನೆಮಾಡಿದ ದಿತಿಯು ಸೇವೆ, ಶುಶ್ರೂಷೆ, ನಯ, ವಿನಯ, ಪ್ರೇಮ, ಜಿತೇಂದ್ರಿಯತ್ವ–ಇವೇ ಮುಂತಾದುವುಗಳಿಂದ ನಿರಂತರವಾಗಿ ತನ್ನ ಪತಿದೇವರಾದ ಕಶ್ಯಪಪ್ರಜಾಪತಿಗಳನ್ನು ಪ್ರಸನ್ನಗೊಳಿಸತೊಡಗಿದಳು. ಆಕೆಯು ಪತಿಯ ಹೃದಯದ ಒಂದೊಂದು ಭಾವವನ್ನೂ ಅರ್ಥಮಾಡಿಕೊಂಡು ಪರಮ ಪ್ರೇಮಭಾವದಿಂದಲೂ, ಸವಿಮಾತುಗಳಿಂದಲೂ, ಕಿರುನಗೆಯಿಂದ ಕೂಡಿದ ಕಡೆಗಣ್ಣುಗಳ ನೋಟಗಳಿಂದಲೂ ಪತಿಯ ಮನಸ್ಸನ್ನು ತನ್ನಡೆಗೆ ಸೆಳೆದುಕೊಳ್ಳುತ್ತಿದ್ದಳು. ಕಶ್ಯಪಮಹರ್ಷಿಗಳು ಮಹಾವಿದ್ವಾಂಸರೂ, ವಿವೇಕಿಗಳೂ, ವಿಚಾರವಂತರೂ ಆಗಿದ್ದರೂ ಚತುರೆಯಾದ ದಿತಿಯ ಸೇವೆ-ಶುಶ್ರೂಷೆಗಳಿಂದ ಆಕೆಯ ವಶರಾಗಿ ಯಾವುದೇ ಅಪೇಕ್ಷೆಯನ್ನಾದರೂ ಈಡೇರಿಸುವುದಾಗಿ ಮಾತುಕೊಟ್ಟರು. 'ನ ತಚ್ಚಿತ್ರಂ ಹಿ ಯೋಷಿತಿ' ಹೆಂಗಸರು ಹೀಗೆಲ್ಲಾ ಪತಿಯನ್ನು ಮೋಹಗೊಳಿಸಿ ವಶಪಡಿಸಿಕೊಳ್ಳುವುದರಲ್ಲಿ ಆಶ್ಚರ್ಯವೇನೂ ಇಲ್ಲ. (ಶ್ಲೋಕ 22-29)

ವಿಲೋಕ್ಯೈಕಾನ್ತಭೂತಾನಿ ಭೂತಾನ್ಯಾದೌ ಪ್ರಜಾಪತಿಃ ।
ಸ್ತ್ರಿಯಂ ಚಕ್ರೇ ಸ್ವದೇಹಾರ್ಧಂ ಯಯಾ ಪುಂಸಾಂ ಮತಿರ್ಹೃತಾ ॥

ಸೃಷ್ಟಿಯ ಪ್ರಾರಂಭದ ಸಮಯದಲ್ಲಿ ಬ್ರಹ್ಮದೇವರು ತಾವು ಸೃಷ್ಟಿಸಿದ ಎಲ್ಲ ಜೀವರೂ ನಿಸ್ಸಂಗರಾಗಿ ಏಕಾಂತದಲ್ಲಿರುವುದನ್ನು ಕಂಡು–'ಇವರನ್ನು ಹೇಗೆ ವ್ಯಾಮೋಹದ ಬಲೆಯಲ್ಲಿ ಸಿಕ್ಕಿಸುವುದು?'–ಎಂದು ಯೋಚನೆ ಮಾಡಿ ತಮ್ಮ ಅರ್ಧಶರೀರದಿಂದ ಹೆಂಗಸರನ್ನು ಸೃಷ್ಟಿಮಾಡಿದನು. ಅದರಂತೆ ಆ ಸ್ತ್ರೀಯರು ಗಂಡಸರನ್ನು ತಮ್ಮ ಕಡೆಗೆ ಸೆಳೆದು ಮೋಹಗೊಳಿಸಿದರು.

ಇರಲಿ ; ದಿತಿಯು ಕಶ್ಯಪರ ಸೇವೆಯನ್ನು ಪರಮಾತಿಶಯದಿಂದ ಮಾಡಿದಳು–ಎಂದು ಹೇಳುತ್ತಿದ್ದೆನಲ್ಲವೇ! ಅದರಿಂದ ಅತ್ಯಂತ ಪ್ರಸನ್ನರಾದ ಭಗವಾನ್ ಕಶ್ಯಪಮಹರ್ಷಿಗಳು ದಿತಿಯನ್ನು ಅಭಿನಂದಿಸುತ್ತಾ ನಸುನಕ್ಕು ಆಕೆಗೆ ಹೇಳಿದರು :

"ಎಲೈ ಸುಂದರಿಯೇ! ಅನಿಂದ್ಯರೂಪಗುಣಸಂಪನ್ನೆಯೇ! ನಾನು ನಿನ್ನಲ್ಲಿ ಅತ್ಯಂತಸಂತುಷ್ಟನಾಗಿದ್ದೇನೆ. ನಿನಗೆ ಇಷ್ಟಬಂದ ವರವನ್ನು ಕೇಳಿಕೋ. ಪತಿಯು ಪ್ರಸನ್ನನಾದ ಪಕ್ಷದಲ್ಲಿ ಪತ್ನಿಗೆ ಇಹಲೋಕದಲ್ಲಾಗಲೀ, ಪರಲೋಕದಲ್ಲಾಗಲೀ–ಯಾವುದೇ ಕೋರಿಕೆಯ ವಸ್ತುವೂ ದುರ್ಲಭ ವಾಗುವುದಿಲ್ಲ. 'ಪತಿಯೇ ಸ್ತ್ರೀಯರಿಗೆ ಪರಮಾರಾಧ್ಯವಾದ ಇಷ್ಟದೇವರು'– ಎಂದು ಶಾಸ್ತ್ರಗಳಲ್ಲಿ ಸ್ಪಷ್ಟವಾಗಿ ಹೇಳಿದೆ. ಪ್ರಿಯೇ! ಲಕ್ಷ್ಮೀಪತಿಯಾದ ವಾಸುದೇವನೇ ಸಮಸ್ತಪ್ರಾಣಿಗಳ ಹೃದಯಗಳಲ್ಲಿ ಬೆಳಗುತ್ತಿರುವನು. ಆತನೇ ಬೇರೆ-ಬೇರೆ ದೇವತೆಗಳ ನಾಮಗಳಿಂದಲೂ, ರೂಪಗಳಿಂದಲೂ ಉಪಾಸನೆ ಮಾಡಲ್ಪಡುತ್ತಿದ್ದಾನೆ. ಎಲ್ಲ ಪುರುಷರೂ ಯಾವುದೇ ದೇವತೆಯನ್ನು ಉಪಾಸನೆಮಾಡಿದರೂ–ಉಪಾಸನೆಮಾಡುವುದು ಆ ಶ್ರೀಭಗವಂತನನ್ನೇ. ಹಾಗೆಯೇ ಸ್ತ್ರೀಯರಿಗೋಸ್ಕರ ಆ ಶ್ರೀಭಗವಂತನೇ ಪತಿಯ ರೂಪವನ್ನು ಪಡೆದು ಉಪಾಸನೆಗೆ ವಿಷಯವಾಗುವನು. ಪತಿಯ ರೂಪದಲ್ಲಿಯೇ ಅವರು ಆತನನ್ನು ಉಪಾಸನೆಮಾಡುವರು. ಆದುದರಿಂದ ಎಲೈ ಮನೋವಲ್ಲಭೆಯೇ! ತಮ್ಮ ಕಲ್ಯಾಣವನ್ನು ಬಯಸುವ ಪತಿವ್ರತಾ ಸ್ತ್ರೀಯರು ಅನನ್ಯಪ್ರೇಮದಿಂದ ತಮ್ಮ ಪತಿದೇವರನ್ನೇ ಪೂಜೆಮಾಡುವರು. ಏಕೆಂದರೆ : ಪತಿದೇವನೇ ಅವರ ಪರಮಪ್ರಿಯತಮನಾದ ಆತ್ಮವೂ ಮತ್ತು ಈಶ್ವರನೂ ಆಗಿದ್ದಾನೆ. ಎಲೈ ಮಂಗಳಾಂಗಿಯೇ! ನೀನು ಅತ್ಯಂತಪ್ರೇಮ ಭಾವದಿಂದ, ಭಕ್ತಿಯಿಂದ ನನ್ನನ್ನು ಹಾಗೆಯೇ ಆರಾಧಿಸಿದ್ದೀಯೆ. ಈಗ ನಾನು ನಿನ್ನ ಎಲ್ಲ ಅಭಿಲಾಷೆಗಳನ್ನೂ ಈಡೇರಿಸುವೆನು. ಗರತಿಯರಲ್ಲದವರಿಗೆ ಇಂತಹ ಭಾಗ್ಯವು ಸಿಕ್ಕುವುದು ಕಷ್ಟ."

(ಶ್ಲೋಕ 31-36)

ಹೀಗೆ ವರಪ್ರದಾನಮಾಡಲು ಸಿದ್ಧರಾದ ಕಶ್ಯಪರಲ್ಲಿ ದಿತಿಯು ಹೀಗೆ ಅರಿಕೆಮಾಡಿಕೊಂಡಳು :

ವರದೋ ಯದಿ ಮೇ ಬ್ರಹ್ಮನ್ಪುತ್ರಮಿನ್ದ್ರಹಣಂ ವೃಣೇ ।
ಅಮೃತ್ಯುಂ ಮೃತಪುತ್ರಾಹಂ ಯೇನ ಮೇ ಘಾತಿತೌ ಸುತೌ ॥೩೭॥

"ಬ್ರಾಹ್ಮಣೋತ್ತಮರೇ! ಪ್ರಜಾಪತಿಶ್ರೇಷ್ಠರೇ! ಇಂದ್ರನು ವಿಷ್ಣು

ವಿನ ಕೈಯಿಂದ ನನ್ನ ಇಬ್ಬರು ಪುತ್ರರನ್ನೂ ಕೊಲ್ಲಿಸಿ ನನ್ನನ್ನು ಪುತ್ರಹೀನೆಯನ್ನಾಗಿ ಮಾಡಿದ್ದಾನೆ. ಆದುದರಿಂದ ತಾವು ನನಗೆ ಅಭೀಷ್ಟವಾದ ವರವನ್ನು ಕೊಡುವುದಾಗಿದ್ದರೆ–ಇಂದ್ರನನ್ನು ಸಂಹರಿಸುವಂತಹ ಅಮರನಾದ ಪುತ್ರನನ್ನು ನನಗೆ ಅನುಗ್ರಹಿಸಿರಿ."

ಅಪ್ಪ ಪರೀಕ್ಷಿತ! ದಿತಿಯ ಆ ಮಾತನ್ನು ಕೇಳಿ ಕಶ್ಯಪರು ಖಿನ್ನರಾಗಿ ಪಶ್ಚಾತ್ತಾಪಪಡತೊಡಗಿದರು. ಅವರು ಮನಸ್ಸಿನೊಳಗೆ ಹೀಗೆಂದು ಕೊಂಡರು : 'ಅಯ್ಯೋ! ಇ ಂದು ನನ್ನ ಜಿ ೀವನದಲ್ಲಿ ಅತಿ ದೊಡ್ಡ ಅಧರ್ಮದ ಪ್ರಸಂಗವು ಒದಗಿತಲ್ಲಾ! ಇಂದ್ರಿಯವಿಷಯಗಳಲ್ಲಿಯೇ ರಮಿಸತೊಡಗಿದ ನನ್ನ ಮನಸ್ಸನ್ನು ಈ ಹೆಂಗಸಿನ ರೂಪವಾದ ಮಾಯೆಯು ಹಿಡಿದುಕೊಂಡಿ ತಲ್ಲಾ! ಹೀಗೆ ಈಕೆಗೆ ವಶನಾಗಿ ದೀನನಾದ ನಾನು ಅವಶ್ಯವಾಗಿ ನರಕದಲ್ಲಿ ಬೀಳುವೆನು. ಆದರೆ ಈ ಹೆಂಗಸಿನಲ್ಲಿ ಯಾವ ದೋಷವೂ ಇಲ್ಲ. ಈಕೆಯು ತನ್ನ ಹುಟ್ಟಿನ ಸ್ವಭಾವವನ್ನೇ ಅನುಸರಿಸಿದ್ದಾಳೆ. ನಿಜವಾಗಿಯೂ ದೋಷವು ನನ್ನದೇ. ಏಕೆಂದರೆ : ನಾನು ಇಂದ್ರಿಯಗಳನ್ನು ವಶದಲ್ಲಿಟ್ಟುಕೊಳ್ಳಲಾರದೇ ಹೋದೆನು. ನನ್ನ ನಿಜವಾದ ಸ್ವಾರ್ಥವು ಯಾವುದು ಮತ್ತು ಪರಮಾರ್ಥವು ಯಾವುದು?–ಎಂಬುದನ್ನು ತಿಳಿಯಲಾರದೇ ಹೋದೆನು. ಇಂತಹ ತಿಳಿಗೇಡಿಯಾದ ನನಗೆ ಮತ್ತೆ ಮತ್ತೆ ಧಿಕ್ಕಾರವಿರಲಿ! ಸ್ತ್ರೀಯರ ಮುಖವು ಶರತ್ಕಾಲದ ಕಮಲದಂತೆ ಅರಳಿರುವುದು. ಮಾತು ಅಮೃತದಂತೆ ಸವಿಯಾಗಿರುವುದು. ಆದರೆ ಹೃದಯವು ಮಾತ್ರ ಕತ್ತಿಯ ಅಲಗಿನಂತೆ ಕಡುಹರಿತವಾಗಿರುವುದು. ಇಂತಹ ಹೆಂಗಸರ ನಡವಳಿಕೆಯು ಯಾರಿಗೆ ತಾನೇ ಅರ್ಥವಾದೀತು? ಈ ಹೆಂಗಸರು ಸ್ವಾರ್ಥಸಾಧನೆಯಲ್ಲಿಯೇ ಆಸಕ್ತ ರಾಗಿರುವರು. ಇವರಿಗೆ ಯಾರ ಮೇಲೂ ನಿಜವಾದ ಪ್ರೀತಿಯಿಲ್ಲ. ಸ್ವಾರ್ಥ ಕ್ಕಾಗಿ ತಮ್ಮ ಪತಿಯನ್ನಾಗಲೀ, ಪುತ್ರನನ್ನಾಗಲೀ ಅಥವಾ ಒಡಹುಟ್ಟಿ ದವನನ್ನೇ ಆಗಲೀ–ಕೊಲ್ಲಲು ಅಥವಾ ಕೊಲ್ಲಿಸಲು ಹಿಂಜರಿಯುವುದಿಲ್ಲ. ಆದರೆ ನಾನು ಈಕೆಗೆ 'ನಿನ್ನ ಇಷ್ಟಾರ್ಥವನ್ನು ಈಡೇರಿಸುತ್ತೇನೆ'–ಎಂದು ಮಾತುಕೊಟ್ಟಾಗಿದೆ. ಕೊಟ್ಟ ಭಾಷೆಯನ್ನು ಸುಳ್ಳಾಗಿಸಬಾರದು. ಹಾಗೆಯೇ ಇಂದ್ರನೂ ವಧಿಸಲ್ಪಡಬಾರದು. ಇಂತಹ ಒಂದು ಉಪಾಯವನ್ನು ಮಾಡುತ್ತೇನೆ.' ಸರ್ವಸಮರ್ಥರೂ, ಸರ್ವಜ್ಞರೂ, ಪೂಜ್ಯರೂ ಆದ

ಕಶ್ಯಪಮಹರ್ಷಿಗಳು ಸ್ವಲ್ಪ ಕೋಪಗೊಂಡವರಾಗಿ ತಮ್ಮನ್ನು ಮನಸ್ಸಿನಲ್ಲಿಯೇ ಹಳಿದುಕೊಂಡು ಸಮಯೋಚಿತವಾದ ಯುಕ್ತಿಯೊಂದನ್ನು ಚಿಂತಿಸಿದವರಾಗಿ ದಿತಿಯನ್ನು ಕುರಿತು–"ಭದ್ರೇ! ನಾನು ಹೇಳುವ ಒಂದು ವ್ರತವನ್ನು ಒಂದು ವರ್ಷಕಾಲ ವಿಧಿಪೂರ್ವಕವಾಗಿ ನೀನು ಆಚರಿಸಿದರೆ ನಿನಗೆ ಇಂದ್ರನನ್ನು ಸಂಹರಿಸುವ ಪುತ್ರನು ಹುಟ್ಟುವನು. ಆದರೆ ವ್ರತ-ನಿಯಮಗಳ ಪಾಲನೆಯಲ್ಲಿ ಕುಂದು-ಕೊರತೆಗಳಾದರೆ, ಹೆಚ್ಚು-ಕಡಿಮೆ ಮಾಡಿದರೆ–ಆಗ ಆ ಪುತ್ರನು ದೇವತೆಗಳಿಗೆ ಮಿತ್ರನಾಗಿಬಿಡುವನು"–ಎಂದು ಹೇಳಿದರು. ಅದಕ್ಕೆ ದಿತಿಯು–"ಪ್ರಜಾಪತಿಗಳೇ! ಬ್ರಾಹ್ಮಣೋತ್ತಮರೇ! ನಾನು ವ್ರತವನ್ನು ನಿಷ್ಠೆಯಿಂದ ಪಾಲಿಸುವೆನು. ವ್ರತದಲ್ಲಿ ನಾನೇನು ಮಾಡಬೇಕು? ವ್ರತದಲ್ಲಿ ಏನನ್ನು ಮಾಡಬಾರದು?" ಎಂಬುದನ್ನು ತಿಳಿಸಿರಿ–ಎಂದು ಅವರನ್ನು ಪ್ರಾರ್ಥಿಸಿದಳು. (ಶ್ಲೋಕ 38-46)

ಕಶ್ಯಪರು ಆಕೆಗೆ ಹೀಗೆಂದರು :

"ಪ್ರಿಯೇ! ಈ ವ್ರತದಲ್ಲಿ ಯಾವುದೇ ಪ್ರಾಣಿಗೂ ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ, ದೇಹದಿಂದಾಗಲೀ–ಯಾವುದೇ ರೀತಿಯಲ್ಲಿಯೂ ಹಿಂಸೆಯನ್ನು ಉಂಟುಮಾಡಬಾರದು. ಯಾರನ್ನೂ ಬಯ್ಯಕೂಡದು. ಶಪಿಸಕೂಡದು. ಸುಳ್ಳುಹೇಳಬಾರದು. ಶರೀರದ ಉಗುರುಗಳನ್ನಾಗಲೀ ಕೂದಲನ್ನಾಗಲೀ ಕತ್ತರಿಸಕೂಡದು. ಕೀಳಕೂಡದು. ಯಾವುದೇ ಅಮಂಗಳ ವಸ್ತುವನ್ನೂ ಮುಟ್ಟಕೂಡದು. ನೀರಿನೊಳಗೆ ಮುಳುಗಿ ಸ್ನಾನಮಾಡಕೂಡದು. ಕೋಪಿಸಿಕೊಳ್ಳಕೂಡದು. ದುರ್ಜನರೊಡನೆ ಮಾತನಾಡಬಾರದು. ಒಗೆಯದೇ ಇರುವ ಮಡಿಯಲ್ಲದ ಬಟ್ಟೆಗಳನ್ನುಡಬಾರದು. ಬೇರೊಬ್ಬರು ಧರಿಸಿದ ಮಾಲೆಯನ್ನು ಧರಿಸಬಾರದು. ಎಂಜಲನ್ನು ತಿನ್ನಕೂಡದು. ಭದ್ರಕಾಳಿಯ ಪ್ರಸಾದವನ್ನು ಅಥವಾ ಮಾಂಸ ಸೇರಿದ ಅನ್ನವನ್ನು ತಿನ್ನಬಾರದು. ಅಧರ್ಮಿಷ್ಠರು ತಂದ ಮತ್ತು ರಜಸ್ವಲೆಯು ನೋಡಿದ ಅನ್ನವನ್ನೂ ತಿನ್ನಬಾರದು. ಬೊಗಸೆಯಲ್ಲಿ ನೀರನ್ನು ಕುಡಿಯಬಾರದು. ಬಾಯಿ ಮುಕ್ಕುಳಿಸಿ ಶುದ್ಧಿಮಾಡಿಕೊಳ್ಳದೇ ಎಂಜಲು ಬಾಯಿಯಲ್ಲಿ ಮನೆಯಿಂದ ಹೊರಡಬಾರದು. ಆಚಮನವನ್ನು ಮಾಡದೇ ಮನೆಯಿಂದ ಹೊರಡಬಾರದು. ಸಂಧ್ಯಾಸಮಯದಲ್ಲಿ ಮನೆಯಿಂದ ಹೊರಡಬಾರದು. ತಲೆಗೂದಲು ಬಿಚ್ಚಿರು

ವಾಗ, ಅಲಂಕಾರವಿಲ್ಲದೇ ಇರುವಾಗ ಮನೆಯಿಂದ ಹೊರಡಬಾರದು. ಮಾತಿನಲ್ಲಿ ಸಂಯಮವಿಲ್ಲದೇ ಮನೆಯಿಂದ ಹೊರಡಬಾರದು. ಉತ್ತರೀಯ ವನ್ನು ಹೊದೆಯದೇ ಮನೆಯಿಂದ ಹೊರಡಬಾರದು. ಕೈಕಾಲುಗಳನ್ನು ತೊಳೆದುಕೊಳ್ಳದೇ, ಅಪವಿತ್ರವಾದ ಅವಸ್ಥೆಯಲ್ಲಿ, ಒದ್ದೆಯಾದ ಕಾಲಿ ನೊಡನೆ, ಉತ್ತರದ ಕಡೆಗೆ ಅಥವಾ ಪಶ್ಚಿಮದ ಕಡೆಗೆ ತಲೆಮಾಡಿಕೊಂಡು ಮಲಗಿಕೊಳ್ಳಬಾರದು. ಮತ್ತೊಬ್ಬರೊಡನೆ ಮಲಗಬಾರದು. ಬೆತ್ತಲೆಯಾಗಿ ಪ್ರಾತಃಸಂಧ್ಯಾ-ಸಾಯಂಸಂಧ್ಯಾಕಾಲಗಳಲ್ಲಿ ಮಲಗಿಕೊಳ್ಳಬಾರದು. ಈ ರೀತಿಯಲ್ಲಿ ನಿಷಿದ್ಧವಾದ ಕರ್ಮಗಳನ್ನು ಬಿಟ್ಟು ಸದಾ ಪವಿತ್ರಳಾಗಿರಬೇಕು. ಮಡಿಯಾದ ವಸ್ತ್ರಗಳನ್ನೇ ಧರಿಸಿಕೊಳ್ಳಬೇಕು. ಎಲ್ಲ ಮಂಗಳದ್ರವ್ಯಗಳನ್ನೂ– ಮಂಗಳಚಿಹ್ನೆಗಳನ್ನೂ ಧರಿಸಬೇಕು. ಪ್ರಾತಃಕಾಲದಲ್ಲಿ ಉಪಾಹಾರವನ್ನು ಸೇವಿಸುವುದಕ್ಕೆ ಮೊದಲೇ ಗೋವುಗಳು, ಬ್ರಾಹ್ಮಣರು, ಶ್ರೀಲಕ್ಷ್ಮೀದೇವಿ ಮತ್ತು ಶ್ರೀಮನ್ನಾರಾಯಣ–ಇವರ ಪೂಜೆಯನ್ನು ಮಾಡಬೇಕು. ಅದಾದ ನಂತರ ಪುಷ್ಪಮಾಲೆ, ಶ್ರೀಗಂಧಗಳೇ ಮುಂತಾದ ಸುಗಂಧದ್ರವ್ಯಗಳು ನೈವೇದ್ಯ ಮತ್ತು ಆಭರಣ–ಮುಂತಾದುವುಗಳಿಂದ ಸುವಾಸಿನೀ- ಸುಮಂಗಲಿಯರನ್ನು ಪೂಜಿಸಬೇಕು ಮತ್ತು ಪತಿಯ ಪೂಜೆಮಾಡಿ ಆತನ ಸೇವೆಯಲ್ಲಿ ಆಸಕ್ತಳಾಗಿರಬೇಕು. ಪತಿಯ ತೇಜಸ್ಸು ತನ್ನ ಗರ್ಭದಲ್ಲಿದೆಯೆಂಬುದನ್ನು ಭಾವಿಸಿಕೊಳ್ಳುತ್ತಿರಬೇಕು. ಪ್ರಿಯೇ! ಈ ವ್ರತಕ್ಕೆ ಪುಂಸವನ ಎಂದು ಹೆಸರು. ಯಾವ ವಿಘ್ನವೂ ಇಲ್ಲದಂತೆ ಒಂದು ವರ್ಷಕಾಲ ಈ ವ್ರತವನ್ನು ಆಚರಿಸಿದ್ದೇ ಆದರೆ ನಿನ್ನ ಗರ್ಭದಿಂದ ಇಂದ್ರನನ್ನು ಸಂಹರಿಸುವಂತಹ ಪುತ್ರನು ಜನಿಸುವನು."

ಮಹಾರಾಜಪರೀಕ್ಷಿತನೇ! ದೃಢನಿಶ್ಚಯವನ್ನು ಹೊಂದಿದ್ದ ದಿತಿದೇವಿಯು 'ಹಾಗೆಯೇ ಆಗಲಿ'–ಎಂದು ಪತಿಯ ಆಜ್ಞೆಯನ್ನು ಶಿರಸಾವಹಿಸಿದಳು. ಆಕೆಯ ಮನೋಬಲವು ಅದ್ಭುತವಾಗಿತ್ತು. ಆಕೆಯು ತನ್ನ ಗರ್ಭದಲ್ಲಿ ಕಶ್ಯಪರ ವೀರ್ಯವನ್ನೂ, ಜೀವನದಲ್ಲಿ ಅವರು ಉಪದೇಶಮಾಡಿದ ವ್ರತವನ್ನೂ ಧರಿಸಿ ಅನಾಯಾಸವಾಗಿಯೇ ಅದರ ನಿಯಮಗಳನ್ನು ಪಾಲಿಸತೊಡಗಿದಳು. ದೇವರಾಜನಾದ ಇಂದ್ರನಿಗೆ ತನ್ನ ದೊಡ್ಡಮ್ಮನ ಆಶಯವು ತಿಳಿಯಿತು. ಆತನು ಬಹಳ ಬುದ್ಧಿವಂತಿಕೆ

ಯಿಂದ ವೇಷವನ್ನು ಮರೆಸಿಕೊಂಡು ಆಕೆಯ ಆಶ್ರಮಕ್ಕೆ ಬಂದು ಸೇವೆ ಯನ್ನು ಮಾಡತೊಡಗಿದನು. ಆಕೆಗೋಸ್ಕರ ಪ್ರತಿದಿನವೂ ಕಾಲ-ಕಾಲಗಳಲ್ಲಿ ಅರಣ್ಯದಿಂದ ಹೂವು, ಹಣ್ಣು, ಗೆಡ್ಡೆ-ಗೆಣಸು, ಸಮಿತ್ತು, ದರ್ಭೆ, ಪತ್ರೆ, ಚಿಗುರು, ಮಣ್ಣು ಮತ್ತು ನೀರನ್ನು ತಂದು ಒದಗಿಸುತ್ತಾ ಶುಶ್ರೂಷೆ ಮಾಡುತ್ತಿದ್ದನು. ಕಪಟಿಗಳಾದ ಬೇಟೆಗಾರರು ಜಿಂಕೆಯನ್ನು ಕೊಲ್ಲು ವುದಕ್ಕಾಗಿ ಜಿಂಕೆಯಂತೆ ರೂಪವನ್ನು ಧರಿಸಿಕೊಂಡು ಅದರ ಬಳಿಗೆ ಹೋಗುವಂತೆ–ದೇವರಾಜನು ಕಪಟವೇಷವನ್ನು ಧರಿಸಿ ದಿತಿಯ ಬಳಿಗೆ ಹೋಗಿ ವ್ರತಪರಾಯಣೆಯಾಗಿದ್ದ ಆಕೆಯ ವ್ರತದಲ್ಲಿ ಛಿದ್ರವನ್ನು ಹುಡುಕುವುದಕ್ಕೋಸ್ಕರ ಸೇವೆಮಾಡುತ್ತಿದ್ದನು. ಸದಾ ಸೂಕ್ಷ್ಮವಾಗಿ ಗಮನಿಸುತ್ತಿದ್ದರೂ ಆಕೆಯಲ್ಲಿ ಯಾವ ಛಿದ್ರವೂ ಆತನಿಗೆ ಕಂಡು ಬರಲಿಲ್ಲ. ಅದರಿಂದ ಇಂದ್ರನಿಗೆ ತುಂಬಾ ಚಿಂತೆ-ಗಾಬರಿಯುಂಟಾಯಿತು. 'ಯಾವ ಉಪಾಯವನ್ನು ಮಾಡಿದರೆ ತನಗೆ ಒಳ್ಳೆಯದಾಗುವುದು?'–ಎಂಬುದನ್ನು ಕುರಿತು ಆತನು ಚಿಂತಿಸುತ್ತಿದ್ದನು. (ಶ್ಲೋಕ 47-59)

ವ್ರತನಿಯಮಗಳನ್ನು ಬಹಳ ದಿನಗಳವರೆಗೆ ಕಟ್ಟುನಿಟ್ಟಾಗಿ ಪಾಲಿ ಸುತ್ತಾ ದಿತಿಯು ತುಂಬಾ ದುರ್ಬಲೆಯಾದಳು. ವಿಧಿಯ ಮೋಹಕ್ಕೆ ಒಳಗಾಗಿ ಆಕೆಯು ಒಂದು ದಿನ ಸಂಧ್ಯಾಸಮಯದಲ್ಲಿ ಬಾಯಿ ಮುಕ್ಕುಳಿ ಸದೇ ಎಂಜಲು ಬಾಯಿಂದ ಕೂಡಿ, ಆಚಮನಮಾಡದೇ, ಕಾಲು ತೊಳೆದು ಕೊಳ್ಳದೇ ಹಾಗೆಯೇ ನಿದ್ರೆಹೋಗಿಬಿಟ್ಟಳು. ತನ್ನ ಕಾರ್ಯವನ್ನು ಸಾಧಿಸಲು ಒಳ್ಳೆಯ ಸಮಯವು ಸಿಕ್ಕಿತೆಂದು ಇಂದ್ರನಿಗೆ ತಿಳಿಯಿತು. ಒಡನೆಯೇ ಯೋಗೇಶನಾದ ಇಂದ್ರದೇವನು ಯೋಗಬಲದಿಂದ ದಿತಿದೇವಿಯ ಗರ್ಭದೊಳಗೆ ಪ್ರವೇಶಿಸಿ ಚಿನ್ನದಂತೆ ಹೊಳೆಯುತ್ತಿದ್ದ ಆಕೆಯ ಗರ್ಭವನ್ನು ತನ್ನ ವಜ್ರಾಯುಧದಿಂದ ಏಳು ಹೋಳುಗಳಾಗಿ ಕತ್ತರಿಸಿಬಿಟ್ಟನು. ಆ ಗರ್ಭವು ಅಳತೊಡಗಿತು. ಇಂದ್ರನು ಅದಕ್ಕೆ 'ಅಳಬೇಡ, ಅಳಬೇಡ' ಎಂದು ಹೇಳಿ ಆ ಏಳು ಭಾಗಗಳಲ್ಲಿ ಒಂದೊಂದನ್ನೂ ಏಳು ಭಾಗಗಳಾಗು ವಂತೆ ಮತ್ತೆ ತುಂಡರಿಸಿದನು. ಆಗ ಅವೆಲ್ಲವೂ ಕೈಜೋಡಿಸಿಕೊಂಡು 'ದೇವರಾಜ! ನೀನು ನಮ್ಮನ್ನು ಏಕೆ ಕೊಲ್ಲುತ್ತಿದ್ದೀಯೆ? ನಾವಾದರೋ ನಿನ್ನ ಒಡಹುಟ್ಟಿದವರಾದ ಮರುದ್ಗಣಗಳು'–ಎಂದು ಅರಿಕೆಮಾಡಿದುವು.

ಆಗ ಇಂದ್ರನು, ಮುಂದೆ ತನ್ನಲ್ಲಿ ಅನನ್ಯಪ್ರೇಮದಿಂದ ಕೂಡಿ ಪಾರ್ಷದರಾದ ಆ ಮರುದ್ಗಣಗಳಿಗೆ–'ಒಳ್ಳೆಯದು! ನೀವು ನನ್ನ ತಮ್ಮಂದಿರಾದಿರಿ. ಇನ್ನು ಹೆದರಬೇಡಿ'–ಎಂದು ಅಭಯವನ್ನಿತ್ತನು.

ಮಹಾರಾಜವಿಷ್ಣುರಾತನೇ! ಅಶ್ವತ್ಥಾಮನ ಅಸ್ತ್ರದಿಂದ ನಿನಗೆ ಸ್ವಲ್ಪವೂ ಅನಿಷ್ಟವುಂಟಾಗಲಿಲ್ಲವಷ್ಟೇ! ಹಾಗೆಯೇ ಶ್ರೀಭಗವಂತನಾದ ಶ್ರೀಹರಿಯ ಕೃಪೆಯಿಂದ ದಿತಿಯ ಆ ಗರ್ಭವು ವಜ್ರದಿಂದ ತುಂಡರಿಸಲ್ಪಡುತ್ತಿದ್ದರೂ ಅದಕ್ಕೆ ಯಾವ ಅನಿಷ್ಟವೂ ಉಂಟಾಗಲಿಲ್ಲ. ಇದರಲ್ಲಿ ಸ್ವಲ್ಪವೂ ಆಶ್ಚರ್ಯವಿಲ್ಲ. ಏಕೆಂದರೆ : ಒಂದೇ ಬಾರಿಯಾದರೂ ಆದಿಪುರುಷನಾದ ಶ್ರೀಮನ್ನಾರಾಯಣನ ಆರಾಧನೆಯನ್ನು ಮಾಡುವವನು ಆತನ ಸಾಮ್ಯವನ್ನೇ ಹೊಂದುವನು. ಹೀಗಿರುವಾಗ ದಿತಿಯು ಮಾಡಿದ್ದ ಆರಾಧನೆಯ ಮಹಿಮೆಯ ಬಗೆಗೆ ಹೇಳತಕ್ಕದ್ದೇನು? ಆಕೆಯು ಒಂದು ಸಂವತ್ಸರಕ್ಕೆ ಕೆಲವೇ ದಿವಸಗಳಷ್ಟು ಕಡಿಮೆ ಕಾಲದವರೆಗೆ ಶ್ರೀಭಗವಂತನನ್ನು ನಿಷ್ಠೆಯಿಂದ ಆರಾಧಿಸಿದ್ದಳು. ಆ ಮರುದ್ಗಣಗಳು ಇಂದ್ರನೊಡನೆ ಸೇರಿ ಒಟ್ಟು ಐವತ್ತು ಮಂದಿಯಾದರು. ಇಂದ್ರನೂ ಕೂಡ ತನ್ನ ಬಲತಾಯಿಯ ಪುತ್ರರಲ್ಲಿ ವೈರವನ್ನಿಡದೇ ಅವರನ್ನು ಸೋಮಪಾನಮಾಡುವ ದೇವತೆಗಳನ್ನಾಗಿಸಿದನು. ದಿತಿಯು ಕಣ್ಣುತೆರೆದು ನೋಡಿದಾಗ ಅಗ್ನಿಯಂತೆ ಹೊಳೆಯುತ್ತಿದ್ದ ತನ್ನ ನಲವತ್ತೊಂಬತ್ತು ಮಂದಿ ಬಾಲಕರು ಇಂದ್ರನೊಡನೆ ಇರುವುದು ಆಕೆಗೆ ಕಾಣಿಸಿತು. ಅದರಿಂದ ಅನಿಂದ್ಯವಾದ ಸ್ವಭಾವವುಳ್ಳ ಆ ದೇವಿಗೆ ಸಂತೋಷವೇ ಆಯಿತು. ಆಕೆಯು ಇಂದ್ರನನ್ನು ಕುರಿತು–"ಮಗನೇ! ನಾನು 'ಅದಿತಿಯ ಪುತ್ರರಾಗಿರುವ ನಿಮಗೆ ಭಯವನ್ನುಂಟುಮಾಡುವ ಒಬ್ಬ ಪುತ್ರನು ಹುಟ್ಟಲಿ'–ಎಂಬ ಇಚ್ಛೆಯಿಂದ ಅತಿಕಠಿನವಾದ ವ್ರತವನ್ನು ಪಾಲನೆಮಾಡುತ್ತಿದ್ದೆನು. ನಾನು ಸಂಕಲ್ಪಮಾಡಿದುದು ಒಬ್ಬನೇ ಪುತ್ರನಿಗಾಗಿ. ಆದರೆ ಈ ನಲವತ್ತೊಂಬ್ಬತ್ತು ಮಂದಿ ಪುತ್ರರು ಹೇಗೆ ಆದರು? ನಿನಗೆ ಇದರ ರಹಸ್ಯವು ಗೊತ್ತಿದ್ದರೆ ತಿಳಿಸು. ವತ್ಸ! ನಿಜವನ್ನು ಹೇಳು. ಸುಳ್ಳನ್ನಾಡಬೇಡ"–ಎಂದು ಕೇಳಿಕೊಂಡಳು. (ಶ್ಲೋಕ 60-70)

ಅದಕ್ಕೆ ಇಂದ್ರನು–"ಅಮ್ಮಾ! ನೀನು ಯಾವ ಉದ್ದೇಶದಿಂದ ವ್ರತವನ್ನು ಆಚರಿಸುತ್ತಿದ್ದೀಯೇ?–ಎಂಬುದು ನನಗೆ ತಿಳಿದುಹೋಯಿತು.

ಆದುದರಿಂದ ಸ್ವಾರ್ಥಸಾಧನೆಗಾಗಿಯೇ ನಾನು ಸ್ವರ್ಗವನ್ನು ಬಿಟ್ಟು ನಿನ್ನ ಬಳಿಗೆ ಬಂದೆನು. ಧರ್ಮಬುದ್ಧಿಯಿಂದ ನಿನ್ನ ಸೇವೆಮಾಡಲು ನಾನು ಬಂದವನಲ್ಲ. ಆದ್ದರಿಂದಲೇ ನಿನ್ನ ವ್ರತಾಚರಣೆಯಲ್ಲಿ ಸ್ವಲ್ಪ ಛಿದ್ರವು ಕಾಣಿಸಿದೊಡನೆಯೇ ನಾನು ಆ ನಿನ್ನ ಗರ್ಭವನ್ನು ತುಂಡರಿಸಿದೆನು. ಮೊದಲು ಅದನ್ನು ಏಳಾಗಿ ತುಂಡರಿಸಿದೆನು. ಆಗ ಆ ಏಳು ತುಂಡುಗಳೂ ಏಳು ಮಂದಿ ಬಾಲಕರಾದರು. ಅದಾದನಂತರ ನಾನು ಏಳು ಮಂದಿಯನ್ನೂ ಮತ್ತೆ ಏಳೇಳಾಗುವಂತೆ ತುಂಡರಿಸಿದೆನಮ್ಮಾ. ಆದರೂ ಅವರು ಸಾಯದೇ ನಲವತ್ತೊಂಬತ್ತು ಮಂದಿಯಾಗಿಬಿಟ್ಟರು. ಈ ಅತ್ಯಾಶ್ಚರ್ಯಕರವಾದ ಘಟನೆಯನ್ನು ನೋಡಿ ನಾನು ಇದು ಪರಮಪುರುಷನಾದ ಶ್ರೀಭಗವಂತನನ್ನು ಉಪಾಸನೆಮಾಡಿರುವುದರಿಂದುಂಟಾದ ಯಾವುದೋ ಸಿದ್ಧಿಯಾಗಿದೆಯೆಂದು ನಿಶ್ಚಯಿಸಿದೆನು. ಯಾರು ನಿಷ್ಕಾಮಭಾವದಿಂದ ಶ್ರೀಭಗವಂತನನ್ನು ಉಪಾಸನೆಮಾಡುತ್ತಾರೆಯೋ, ಮೋಕ್ಷವನ್ನು ಕೂಡ ಬಯಸದೇ ಆರಾಧಿಸುತ್ತಾರೆಯೋ–ಅವರು ತಾನೇ ಸ್ವಾರ್ಥಸಾಧನೆ ಮತ್ತು ಪರಾರ್ಥಸಾಧನೆ ಇವೆರಡರಲ್ಲೂ ನಿಪುಣರು? ಜಗದೀಶ್ವರನಾದ ಆ ಶ್ರೀಭಗವಂತನು ಎಲ್ಲರಿಗೂ ಆರಾಧ್ಯದೇವನು. ಎಲ್ಲರ ಆತ್ಮವೇ ಆಗಿರುವನು. ಆತನು ಪ್ರಸನ್ನನಾದರೆ ಭಕ್ತರಿಗೆ ತನ್ನನ್ನೇ ಕೊಟ್ಟುಕೊಂಡುಬಿಡುವನು. ಹೀಗಿರುವಾಗ ಯಾವ ವಿವೇಕಿಯು ತಾನೇ ಆತನನ್ನು ಆರಾಧಿಸಿ, ಅದರ ಫಲವಾಗಿ ವಿಷಯಭೋಗಗಳನ್ನು ವರವನ್ನಾಗಿ ಬೇಡಿಯಾನು? ಅಮ್ಮಾ! ಈ ವಿಷಯಭೋಗಗಳಾದರೋ ನರಕದಲ್ಲಿಯೂ ದೊರೆಯುವುವು. ವಾತ್ಸಲ್ಯಪೂರ್ಣೆಯಾದ ತಾಯೇ! ನೀನು ಎಲ್ಲ ಪ್ರಕಾರಗಳಲ್ಲಿಯೂ ನನಗೆ ಪೂಜ್ಯಳು. ನಾನು ಮೂರ್ಖತೆಯಿಂದ ದುಷ್ಟತನದ ಕೆಲಸವನ್ನು ಮಾಡಿದೆನು. ನೀನು ನನ್ನ ಅಪರಾಧವನ್ನು ಕ್ಷಮಿಸಬೇಕು. ನಿನ್ನ ಗರ್ಭವು ಖಂಡ-ಖಂಡವಾಗಿ ತುಂಡರಿಸಲ್ಪಟ್ಟಿದ್ದರಿಂದ ಒಂದು ದೃಷ್ಟಿಯಿಂದ ಸಾಯಿಸಲ್ಪಟ್ಟಿದ್ದರೂ ಮತ್ತೆ ಬದುಕಿಕೊಂಡುಬಿಟ್ಟಿದ್ದು ಒಳ್ಳೆಯ ಅದೃಷ್ಟ"–ಎಂದು ವಿಜ್ಞಾಪಿಸಿದನು.

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಮಹಾರಾಜ! ಇಂದ್ರನ ಶುದ್ಧಭಾವವನ್ನು ಕಂಡು ದಿತಿದೇವಿಗೆ ಸಂತೋಷವಾಯಿತು. ಆಕೆಯ ಅನುಜ್ಞೆಯನ್ನು ಪಡೆದು ಇಂದ್ರನು

ಮರುದ್ಗಣಗಳೊಡನೆ ಆಕೆಗೆ ನಮಸ್ಕಾರಮಾಡಿ ಸ್ವರ್ಗಕ್ಕೆ ಹೊರಟು ಹೋದನು. ರಾಜಕುಲತಿಲಕನೇ! ನೀನು ಕೇಳಿದಂತೆ ಮರುದ್ದೇವತೆಗಳ ಮಂಗಳಮಯವಾದ ಜನ್ಮವೃತ್ತಾಂತವನ್ನು ನಿನಗೆ ಸಮಗ್ರವಾಗಿ ತಿಳಿಸಿರುವೆನು. ಮತ್ತೇನನ್ನು ಹೇಳಲಿ? ಕೇಳು." (ಶ್ಲೋಕ 71-78)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಷಷ್ಠಸ್ಕಂಧದ ೧೮ನೆಯ ಅಧ್ಯಾಯವು ಮುಗಿಯಿತು.

ಷಷ್ಠಸ್ಕಂಧ ೧೯ನೆಯ ಅಧ್ಯಾಯ

ಪುಂಸವನವ್ರತದ ವಿಧಿ

ದಿತಿದೇವಿಯು ಆಚರಿಸಿದ ಪುಂಸವನವ್ರತದ ಫಲವಾಗಿ ಮರುದ್ದೇವತೆಗಳ ಅದ್ಭುತವಾದ ಜನ್ಮವು ಉಂಟಾದ ವಿಷಯವನ್ನು ಶುಕಮಹರ್ಷಿಗಳಿಂದ ಕೇಳಿ ಸಂತೋಷಗೊಂಡ ಪರೀಕ್ಷಿದ್ರಾಜನು ಅವರಲ್ಲಿ ಪ್ರಾರ್ಥನೆ ಮಾಡಿದನು:

ವ್ರತಂ ಪುಂಸವನಂ ಬ್ರಹ್ಮನ್ಭವತಾ ಯದುದೀರಿತಮ್ ।
ತಸ್ಯ ವೇದಿತುಮಿಚ್ಛಾಮಿ ಯೇನ ವಿಷ್ಣುಃ ಪ್ರಸೀದತಿ ॥೧॥

"ಮಹಾತ್ಮರೇ! ತಾವು ಇಲ್ಲಿಯವರೆಗೂ ಪುಂಸವನವ್ರತವನ್ನು ವರ್ಣನೆಮಾಡಿ ಅದರಿಂದ ಶ್ರೀಭಗವಂತನಾದ ವಿಷ್ಣುವು ಪ್ರಸನ್ನನಾಗುವನು–ಎಂದು ತಿಳಿಸಿದಿರಿ. ಈಗ ಆ ಪುಂಸವನವ್ರತದ ವಿಧಿಯೇನು?–ಎಂಬುದನ್ನು ತಿಳಿಸುವ ಕೃಪೆಮಾಡಬೇಕು."

ಶ್ರೀಶುಕಮಹರ್ಷಿಗಳು ಆ ಪ್ರಾರ್ಥನೆಗೆ ಓಗೊಟ್ಟು ಹೀಗೆಂದರು :

"ಮಹಾರಾಜ! ಈ ಪುಂಸವನವ್ರತವು ಎಲ್ಲ ಕಾಮನೆಗಳನ್ನೂ ಈಡೇರಿಸುವುದು. ಇದನ್ನು ಸ್ತ್ರೀಯರು ತಮ್ಮ-ತಮ್ಮ ಪತಿಗಳ ಅನುಮತಿಯನ್ನು ಪಡೆದು ಮಾರ್ಗಶಿರಮಾಸದ ಶುಕ್ಲಪಕ್ಷದ* ಪ್ರಥಮೆಯಿಂದ ಪ್ರಾರಂಭಿಸಬೇಕು. ಮೊದಲು ಮಂಗಳಕರವಾದ ಮರುದ್ಗಣಗಳ ಉತ್ಪತ್ತಿಯ ಕಥೆಯನ್ನು ಕೇಳಿ, ಬ್ರಾಹ್ಮಣರ ಅನುಜ್ಞೆಪಡೆದು ವ್ರತವನ್ನು ಆರಂಭಿಸ

---

* ಶುಕ್ಲೇ : ಶುಕ್ಲಪಕ್ಷದಲ್ಲಿ ಮತ್ತು ಆಕಾಶವು ಶುದ್ಧವಾಗಿರುವಾಗ, ಧನುರ್ಮಾಸದಲ್ಲಿ (ವಿಜಯಧ್ವಜೀಯ)

ಬೇಕು. ಪ್ರತಿದಿನವೂ ಬೆಳಗ್ಗಿ ಹಲ್ಲುಗಳನ್ನು ಬೆಳ್ಳಗಾಗುವಂತೆ ಉಜ್ಜಿ–ತೊಳೆದುಕೊಂಡು, ಸ್ನಾನಮಾಡಿ ವಸ್ತ್ರಾಲಂಕಾರಗಳನ್ನು ಧರಿಸಬೇಕು. ಪ್ರಾತಃಕಾಲ ಏನನ್ನಾದರೂ ತಿನ್ನುವುದಕ್ಕೆ ಮೊದಲೇ ಲಕ್ಷ್ಮೀ-ನಾರಾಯಣ ರನ್ನು ಪೂಜೆಮಾಡಬೇಕು. ಶ್ರೀಭಗವಂತಭಗವತಿಯರನ್ನು ಹೀಗೆ ಪ್ರಾರ್ಥನೆ ಮಾಡಬೇಕು : "ಪ್ರಭೋ! ನೀನು ಪೂರ್ಣಕಾಮನು. ಯಾರಿಂದಲೂ ಏನನ್ನೂ ತೆಗೆದುಕೊಳ್ಳುವುದಾಗಲೀ, ಏನನ್ನಾದರೂ ಕೊಡುವುದಾಗಲೀ ಯಾವುದೂ ಬೇಕಿಲ್ಲದವನು. ಎಲ್ಲ ವಿಭೂತಿಗಳಿಗೂ ಅಧಿಪತಿಯಾದವನು. ಸಕಲಸಿದ್ಧಿಸ್ವರೂಪನು. ನಾನು ನಿನಗೆ ಮತ್ತೆ-ಮತ್ತೆ ನಮಸ್ಕರಿಸುತ್ತೇನೆ. ಓ ನನ್ನ ಅರಾಧ್ಯದೇವನೇ! ನೀನು ಕರುಣೆ, ವಿಭೂತಿ, ತೇಜಸ್ಸು, ಮಹಿಮೆ ಮತ್ತು ವೀರ್ಯ–ಇವೇ ಮುಂತಾದ ಸಮಸ್ತಗುಣಗಳಿಂದ ಸದಾಸಂಪನ್ನನಾಗಿರುವವನು. ಇವುಗಳಿಗೇ ಭಗ ಎಂದು ಹೆಸರು. ಈ ಭಗಗಳಿಂದ ಸದಾ ಒಡಗೂಡಿರುವುದರಿಂದ ನಿನ್ನನ್ನು 'ಭಗವಂತ' ಎಂದು ಕರೆಯುತ್ತಾರೆ. ನೀನು ಸರ್ವಶಕ್ತನು. ಅಮ್ಮಾ! ಮಾತೆ! ಮಹಾಲಕ್ಷ್ಮೀ! ನೀನು ಆ ಶ್ರೀಭಗವಂತನ ಸರ್ವಗುಣಗಳೂ ನಿನ್ನಲ್ಲಿ ತುಂಬಿವೆ. ಮಹಾಭಾಗ್ಯವತಿಯಾದ ಭಗವತಿಯೇ! ಜಗನ್ಮಾತೆಯೇ! ನನ್ನಲ್ಲಿ ಪ್ರಸನ್ನಳಾಗು. ನಿನಗೆ ಮತ್ತೆ ಮತ್ತೆ ನಮಸ್ಕಾರಮಾಡುತ್ತೇನೆ." (ಶ್ಲೋಕ 2-6)

ಈ ರೀತಿಯಲ್ಲಿ ಸ್ತೋತ್ರಮಾಡಿ ಏಕಾಗ್ರವಾದ ಚಿತ್ತದಿಂದ :

ಓಂ ನಮೋ ಭಗವತೇ ಮಹಾಪುರುಷಾಯ ಮಹಾನು–ಭಾವಾಯ ಮಹಾವಿಭೂತಿಪತಯೇ ಸಹ ಮಹಾವಿಭೂತಿಭಿರ್ಬಲಿ–ಮುಪಹರಾಣೀತಿ । ಅನೇನಾಹರಹರ್ಮನ್ತ್ರೇಣ ವಿಷ್ಣೋರಾವಾಹ–ನಾರ್ಘ್ಯಪಾದೋಪಸ್ಪರ್ಶನಸ್ನಾನವಾಸ ಉಪವೀತವಿಭೂಷಣಗನ್ಧ–ಪುಷ್ಪಧೂಪದೀಪೋಪಹಾರಾದ್ಯುಪಚಾರಾಂಶ್ಚ ಸಮಾಹಿತ ಉಪಾಹ–ರೇತ್ ॥೭॥

ಓಂಕಾರಸ್ವರೂಪನೂ, ಮಹಾಪುರುಷನೂ, ಮಹಾನುಭಾವನೂ, ಮಹಾವಿಭೂತಿಗಳಿಗೆ ಸ್ವಾಮಿಯೂ ಆಗಿರುವ ಶ್ರೀಭಗವಂತನಿಗೆ ಮತ್ತು ಆತನ ಮಹಾವಿಭೂತಿಗಳಿಗೆ ನಮಸ್ಕಾರಮಾಡಿ ಅವರಿಗೆ ಪೂಜೋಪಹಾರ

ಸಾಮಗ್ರಿಗಳನ್ನು ಸಮರ್ಪಿಸುತ್ತೇನೆ–ಎಂಬೀ ಮಂತ್ರದ ಮೂಲಕ ಪ್ರತಿ ದಿನವೂ ಸ್ಥಿರವಾದ ಚಿತ್ತದಿಂದ ಶ್ರೀಭಗವಂತನಾದ ಮಹಾವಿಷ್ಣುವಿಗೆ ಆವಾಹನ, ಅರ್ಘ್ಯ, ಪಾದ್ಯ, ಆಚಮನ, ಸ್ನಾನ, ವಸ್ತ್ರ, ಯಜ್ಞೋಪವೀತ, ಆಭೂಷಣ, ಗಂಧ, ಪುಷ್ಪ, ಧೂಪ, ದೀಪ ಮತ್ತು ನೈವೇದ್ಯಗಳೇ ಮುಂತಾದ ಉಪಚಾರಗಳನ್ನು ಸಮರ್ಪಿಸುತ್ತಾ ಆತನ ಪೂಜೆಮಾಡಬೇಕು. ಉಳಿದಿರುವ ನೈವೇದ್ಯದಿಂದ–"**ಓಂ ನಮೋ ಭಗವತೇ ಮಹಾಪುರುಷಾಯ ಮಹಾ ವಿಭೂತಿಪತಯೇ ಸ್ವಾಹಾ**" (ಮಹಾವಿಭೂತಿಗಳಿಗೆ ಅಧಿಪತಿಯಾದ ಶ್ರೀಭಗವಂತನಾದ ಪರಮಪುರುಷನಿಗೆ ನಮಸ್ಕಾರವು. ಆತನಿಗೋಸ್ಕರವೇ ನಾನು ಈ ಹವಿಸ್ಸನ್ನು ಸಮರ್ಪಿಸುತ್ತೇನೆ)–ಎಂಬ ಮಂತ್ರವನ್ನು ಹೇಳಿ ಅಗ್ನಿಯಲ್ಲಿ ಹನ್ನೆರಡು ಆಹುತಿಗಳನ್ನು ಸಮರ್ಪಿಸಬೇಕು. ಎಲ್ಲ ಬಗೆಯ ಸಂಪತ್ತುಗಳನ್ನೂ ಬಯಸುವವನು–ಪ್ರತಿದಿನವೂ ಭಕ್ತಿಭಾವದಿಂದ ಶ್ರೀಭಗವತೀ-ಭಗವಂತರಾದ ಲಕ್ಷ್ಮೀ-ನಾರಾಯಣರನ್ನು ಪೂಜೆಮಾಡಬೇಕು. ಏಕೆಂದರೆ : ಅವರಿಬ್ಬರು ತಾನೇ ಸಮಸ್ತವಾದ ಅಭಿಲಾಷೆಗಳನ್ನೂ ಈಡೇರಿಸುವವರು ಮತ್ತು ಶ್ರೇಷ್ಠತಮರಾದ ವರದಾಯಕರು? ಅದಾದನಂತರ ಭಕ್ತಿಭಾವದಿಂದ ನಮ್ರನಾಗಿ ಶ್ರೀಭಗವಂತನಿಗೆ ಸಾಷ್ಟಾಂಗನಮಸ್ಕಾರವನ್ನು ಮಾಡಬೇಕು. ಹಿಂದೆ ಹೇಳಿದ ಮಂತ್ರವನ್ನು ಹತ್ತು ಬಾರಿ ಜಪಿಸಬೇಕು. ಬಳಿಕ ಈ ಕೆಳಗಿನ ಸ್ತೋತ್ರವನ್ನು ಪಾರಾಯಣಮಾಡಬೇಕು.

(ಶ್ಲೋಕ 7-10)

ಯುವಾಂ ತು ವಿಶ್ವಸ್ಯ ವಿಭೂ ಜಗತಃ ಕಾರಣಂ ಪರಮ್ ।
ಇಯಂ ಹಿ ಪ್ರಕೃತಿಃ ಸೂಕ್ಷ್ಮಾ ಮಾಯಾಶಕ್ತಿರ್ದುರತ್ಯಯಾ ॥೧೧॥

ತಸ್ಯಾ ಅಧೀಶ್ವರಃ ಸಾಕ್ಷಾತ್ತ್ವಮೇವ ಪುರುಷಃ ಪರಃ ।
ತ್ವಂ ಸರ್ವಯಜ್ಞ ಇಜ್ಯೇಯಂ ಕ್ರಿಯೇಯಂ ಫಲಭುಗ್ಭವಾನ್ ॥

ಗುಣವ್ಯಕ್ತಿರಿಯಂ ದೇವೀ ವ್ಯಞ್ಜಕೋ ಗುಣಭುಗ್ಭವಾನ್ ।
ತ್ವಂ ಹಿ ಸರ್ವಶರೀರ್ಯಾತ್ಮಾ ಶ್ರೀಃ ಶರೀರೇನ್ದ್ರಿಯಾಶಯಾ ।
ನಾಮರೂಪೇ ಭಗವತೀ ಪ್ರತ್ಯಯಸ್ತ್ವಮುಪಾಶ್ರಯಃ ॥೧೩॥

ಯಥಾ ಯುವಾಂ ತ್ರಿಲೋಕಸ್ಯ ವರದೌ ಪರಮೇಷ್ಠಿನೌ ।
ತಥಾ ಮ ಉತ್ತಮಶ್ಲೋಕ ಸನ್ತು ಸತ್ಯಾ ಮಹಾಶಿಷಃ ॥೧೪॥

"ಎಲೈ ಲಕ್ಷ್ಮೀ-ನಾರಾಯಣರೇ! ನೀವಿಬ್ಬರೂ ತಾನೇ ಸರ್ವ ವ್ಯಾಪಕರೂ ಹಾಗೂ ಇಡೀ ಜಗತ್ತಿಗೇ ಮೂಲಕಾರಣರೂ ಆಗಿದ್ದೀರಿ? ಆದರೆ ನಿಮಗೆ ಬೇರೊಂದು ಕಾರಣವಿಲ್ಲ. ಓ ಭಗವಂತನೇ! ಮಾತೆಯಾದ ಲಕ್ಷ್ಮೀದೇವಿಯು ನಿನ್ನ ಮಾಯಾಶಕ್ತಿಯಾಗಿದ್ದಾಳೆ. ಅವ್ಯಕ್ತಪ್ರಕೃತಿಯೂ ಈಕೆಯೇ. ಈಕೆಯನ್ನು ದಾಟುವುದು ಅತಿಕಷ್ಟವು. ಪ್ರಭುವೇ! ಈ ಮಹಾ ಮಾಯೆಗೆ ಅಧೀಶ್ವರನಾಗಿರುವವನು ನೀನೇ. ಸ್ವಯಂ ಪರಮಪುರುಷನೂ ನೀನೇ. ಸಮಸ್ತಯಜ್ಞಗ್ಗಳೂ ನೀನಾದರೆ–ಯಜ್ಞಕ್ರಿಯೆಯು ಈ ಶ್ರೀದೇವಿಯು. ನೀನು ಫಲದ ಭೋಕ್ತೃವಾದರೆ–ಈಕೆಯು ಆ ಫಲವನ್ನು ಉತ್ಪತ್ತಿಮಾಡುವ ಕ್ರಿಯೆಯಾಗಿದ್ದಾಳೆ. ತಾಯಿಯಾದ ಶ್ರೀಲಕ್ಷ್ಮೀದೇವಿಯು ಸತ್ತ್ವ-ರಜಸ್ಸು-ತಮಸ್ಸುಗಳೆಂಬ ಮೂರು ಗುಣಗಳ ಅಭಿವ್ಯಕ್ತಿಯು ಮತ್ತು ಅವುಗಳನ್ನು ವ್ಯಕ್ತಪಡಿಸುವವನೂ ಅವುಗಳ ಭೋಕ್ತೃವೂ ನೀನಾಗಿದ್ದೀಯೆ. ನೀನು ಸಮಸ್ತಪ್ರಾಣಿಗಳ ಆತ್ಮವು ಮತ್ತು ಲಕ್ಷ್ಮೀದೇವಿಯು ಶರೀರ, ಇಂದ್ರಿಯ ಮತ್ತು ಅಂತಃಕರಣಗಳು. ಮಾತೆಯಾದ ಲಕ್ಷ್ಮೀದೇವಿಯು ನಾಮ ಮತ್ತು ರೂಪಗಳು. ನೀನು ನಾಮ-ರೂಪಗಳೆರಡನ್ನೂ ಪ್ರಕಾಶಪಡಿಸು ವವನು ಮತ್ತು ಅವುಗಳಿಗೆ ಆಧಾರವಾಗಿರುವವನು. ಪ್ರಭೋ! ಅತ್ಯಂತ ಪವಿತ್ರವಾದ ಕೀರ್ತಿಯುಳ್ಳವನು ನೀನು. ನೀವಿಬ್ಬರೇ ಮೂರು ಲೋಕ ಗಳಿಗೂ ವರಪ್ರದಾನವನ್ನು ಮಾಡುವವರು ಮತ್ತು ಪರಮೋನ್ನತ ಸ್ಥಾನದಲ್ಲಿರುವ ಪರಮಾತ್ಮ ಸ್ವರೂಪರು. ಆದುದರಿಂದ ನನ್ನ ದೊಡ್ಡ-ದೊಡ್ಡ ಆಶೆ-ಆಕಾಂಕ್ಷೆಗಳೆಲ್ಲವೂ ನಿಮ್ಮ ಕೃಪೆಯಿಂದ ಈಡೇರಲಿ."

(ಶ್ಲೋಕ 11-14)

ಮಹಾರಾಜ ಪರೀಕ್ಷಿತ! ಹೀಗೆ ಪರಮವರಪ್ರದರಾದ ಲಕ್ಷ್ಮೀ-ನಾರಾಯಣರನ್ನು ಸ್ತೋತ್ರಮಾಡಿ, ನೈವೇದ್ಯವನ್ನು ತೆಗೆದಿಟ್ಟು, ಆಚಮನ ಮಾಡಿ ಆ ದೇವ-ದೇವಿಯರನ್ನು ಆರಾಧಿಸಬೇಕು. ಅನಂತರ ಭಕ್ತಿಭರಿತ ವಾದ ಹೃದಯದಿಂದ ಶ್ರೀಭಗವಂತ-ಭಗವತಿಯರನ್ನು ಸ್ತುತಿಸುತ್ತಾ ಯಜ್ಞಶೇಷವನ್ನು ಮೂಸಿನೋಡಿ ಮತ್ತೆ ಭಗವಂತನ ಪೂಜೆಯನ್ನು ಮಾಡಬೇಕು. ಭಗವಂತನ ಪೂಜೆಯನಂತರ ತನ್ನ ಪತಿಯನ್ನು ಸಾಕ್ಷಾತ್ ಭಗವಂತನೇ ಎಂದು ಭಾವಿಸಿ ಪರಮಪ್ರೇಮದಿಂದ ಆತನಿಗೆ ಪ್ರಿಯವಾದ

ವಸ್ತುಗಳನ್ನು ಸೇವಾರೂಪದಲ್ಲಿ ಸಮರ್ಪಿಸಬೇಕು. ಹಾಗೆಯೇ ತನ್ನ ಪತ್ನಿಗೆ ಪ್ರಿಯವಾದ ಪದಾರ್ಥಗಳನ್ನು ತಂದು ಆಕೆಗೆ ಕೊಡುವುದು ಮತ್ತು ಆಕೆಯ ಸಣ್ಣ-ದೊಡ್ಡ ಎಲ್ಲ ಪ್ರಕಾರದ ಕಾರ್ಯಗಳನ್ನೂ ಮಾಡಿಕೊಡುವುದು– ಪತಿಯ ಕರ್ತವ್ಯವೂ ಆಗಿದೆ. ಪತಿ-ಪತ್ನಿಯರಲ್ಲಿ ಯಾರಾದರೂ ಒಬ್ಬರು ಯಾವುದಾದರೊಂದು ಕಾರ್ಯವನ್ನು ಮಾಡಿದರೆ ಆ ಕಾರ್ಯದ ಫಲವು ಇಬ್ಬರಿಗೂ ಉಂಟಾಗುವುದು. ಆದುದರಿಂದ ಪತ್ನಿಗೆ ಅನಿವಾರ್ಯಕಾರಣ ದಿಂದ ಈ ವ್ರತವನ್ನು ಆಚರಿಸಲು ಅರ್ಹತೆ ಇಲ್ಲದಿದ್ದರೆ ಆಗ ಪತಿಯೇ ಸಾವಧಾನತೆಯಿಂದ ಈ ವ್ರತವನ್ನು ಅನುಷ್ಠಾನಮಾಡಬೇಕು. ಇದು ಶ್ರೀಭಗವಂತನಾದ ವಿಷ್ಣುವಿಗೆ ಸಂಬಂಧಪಟ್ಟ ವ್ರತವು. ಈ ವ್ರತವನ್ನು ಮಾಡಲು ಪ್ರತಿಜ್ಞೆಯನ್ನು ಮಾಡಿ ನಿಯಮವನ್ನು ಸ್ವೀಕರಿಸಿದ ಬಳಿಕ ಮಧ್ಯದಲ್ಲಿ ಎಂದಿಗೂ ಅದನ್ನು ನಿಲ್ಲಿಸಬಾರದು. ಈ ನಿಯಮವನ್ನು ಸ್ವೀಕರಿಸುವವರೆಲ್ಲರಿಗೂ ಪ್ರತಿದಿನವೂ ಮಾಲೆ, ಶ್ರೀಗಂಧ, ನೈವೇದ್ಯ ಮತ್ತು ಒಡವೆಗಳು–ಇತ್ಯಾದಿಗಳಿಂದ ಭಕ್ತಿಪೂರ್ವಕವಾಗಿ ಬ್ರಾಹ್ಮಣರನ್ನೂ, ಸುವಾಸಿನಿಯರನ್ನೂ ಮತ್ತು ಭಗವಂತನಾದ ಮಹಾವಿಷ್ಣುವನ್ನೂ ಆರಾಧಿಸ ಬೇಕು. ಅದಾದನಂತರ ಶ್ರೀಭಗವಂತನನ್ನು ಆತನ ಧಾಮಕ್ಕೆ ಬಿಜಯ ಮಾಡಿಸಿ ಉದ್ಯಾಪನೆ ಮಾಡಬೇಕು. ಅನಂತರ ಆತ್ಮಶುದ್ಧಿಗೋಸ್ಕರ ಮತ್ತು ಸಮಸ್ತವಾದ ಅಭಿಲಾಷೆಗಳೂ ಈಡೇರುವುದಕ್ಕೋಸ್ಕರ ಹಿಂದೆಯೇ ಅವನಿಗೆ ನಿವೇದಿತವಾಗಿದ್ದ ಪ್ರಸಾದವನ್ನು ಸೇವಿಸಬೇಕು. ಸಾಧ್ವಿಯಾದ ಪತ್ನಿಯು ಈ ವಿಧಿಯಂತೆ ಹನ್ನೆರಡು ತಿಂಗಳ ಕಾಲ (ಒಂದು ವರ್ಷ ಕಾಲ) ಆಚರಣೆ ಮಾಡಿ ಮಾರ್ಗಶಿರಮಾಸದ ಅಮಾವಾಸ್ಯೆಯಂದು ಉದ್ಯಾಪನೆಗೆ ಸಂಬಂಧ ಪಟ್ಟ ಉಪವಾಸ ಮತ್ತು ಪೂಜೆ ಮುಂತಾದುವುಗಳನ್ನು ಮಾಡಬೇಕು. ಆ ದಿವಸ ಪ್ರಾತಃಕಾಲದಲ್ಲೇ ಸ್ನಾನಮಾಡಿ ಹಿಂದಿನಂತೆಯೇ ಶ್ರೀಭಗವಂತ ನಾದ ಮಹಾವಿಷ್ಣುವನ್ನು ಪೂಜೆಮಾಡಬೇಕು. ಆಕೆಯ ಪತಿಯು ಪಾಕ ಯಜ್ಞದ ವಿಧಿಯಂತೆ ತುಪ್ಪ ಬೆರೆಸಿದ ಪಾಯಸಾನ್ನದಿಂದ ಅಗ್ನಿಯಲ್ಲಿ ಹನ್ನೆರಡು ಆಹುತಿಗಳನ್ನು ಸಮರ್ಪಿಸಬೇಕು. ಆದಾದನಂತರ, ಬ್ರಾಹ್ಮಣರು ಪ್ರಸನ್ನರಾಗಿ ಮಾಡುವ ಆಶೀರ್ವಾದಗಳನ್ನು ಆಕೆಯ ಅತ್ಯಾದರದಿಂದ ಸ್ವೀಕರಿಸಬೇಕು. ಭಕ್ತಿಯಿಂದ ತಲೆತಗ್ಗಿಸಿ ಅವರ ಅಡಿಗಳಲ್ಲಿ ನಮಸ್ಕರಿಸ

ಬೇಕು ಮತ್ತು ಅವರ ಅನುಜ್ಞೆಪಡೆದು ಭೋಜನಮಾಡಬೇಕು. ಮೊದಲು ಆಚಾರ್ಯನಿಗೆ ಭೋಜನವನ್ನು ಮಾಡಿಸಬೇಕು. ಅನಂತರ ಮೌನದಿಂದ ನೆಂಟರಿಷ್ಟರ ಜೊತೆಯಲ್ಲಿ ತಾನೂ ಊಟಮಾಡಬೇಕು. ಅದಾದನಂತರ ಹೋಮಮಾಡಿ ಮಿಕ್ಕಿರುವ ತುಪ್ಪವನ್ನು ಬೆರೆಸಿದ ಪಾಯಸಾನ್ನವನ್ನು ತನ್ನ ಪತ್ನಿಗೆ ಕೊಡಬೇಕು. ಆ ಪ್ರಸಾದವು ಆ ಸ್ತ್ರೀಗೆ ಸತ್ಪುತ್ರರನ್ನೂ ಮತ್ತು ಸೌಭಾಗ್ಯವನ್ನೂ ಅನುಗ್ರಹಿಸುವುದು. (ಶ್ಲೋಕ 15-24)

ಮಹಾರಾಜ! ಶ್ರೀಭಗವಂತನ ಉತ್ತಮೋತ್ತಮವಾದ ಈ ಪುಂಸವನ ವ್ರತವನ್ನು ಯಾವಾತನು ವಿಧಿಪೂರ್ವಕವಾಗಿ ಅನುಷ್ಠಾನಮಾಡುತ್ತಾನೆಯೋ–ಆತನಿಗೆ ಇಲ್ಲಯೇ ಆತನು ಕೋರಿದ ವಸ್ತುಗಳು ಸಿಕ್ಕುತ್ತವೆ. ಹೆಂಗಸು ಈ ವ್ರತವನ್ನು ಪಾಲಿಸಿದರೆ ಸೌಭಾಗ್ಯ, ಸಂಪತ್ತು, ಸಂತಾನ, ಕೀರ್ತಿ ಮತ್ತು ಮನೆಗಳನ್ನು ಪಡೆಯುತ್ತಾಳೆ ಮತ್ತು ಆಕೆಯ ಪತಿಯು ದೀರ್ಘಾಯುವಾಗುತ್ತಾನೆ. ಈ ವ್ರತವನ್ನು ಅನುಷ್ಠಾನಮಾಡುವ ಕನ್ಯೆಯು ಎಲ್ಲ ಶುಭಲಕ್ಷಣಗಳಿಂದ ಕೂಡಿದ ಪತಿಯನ್ನು ಪಡೆಯುತ್ತಾಳೆ ಮತ್ತು ವಿಧವೆಯು ಈ ವ್ರತದಿಂದ ಕಾಮರಹಿತಳಾಗಿ ವೈಕುಂಠಕ್ಕೆ ಹೋಗುತ್ತಾಳೆ. ಹುಟ್ಟಿದ ಮಕ್ಕಳು ಸಾಯುತ್ತಿದ್ದರೆ ಈ ವ್ರತವನ್ನು ಮಾಡಿದ ಹೆಂಗಸು ಕೂಡ ಇದರ ಪ್ರಭಾವದಿಂದ ದೀರ್ಘಾಯುವಾದ ಪುತ್ರನನ್ನು ಪಡೆಯುತ್ತಾಳೆ. ಐಶ್ವರ್ಯವಂತಳಾಗಿದ್ದರೂ ದುರದೃಷ್ಟಳಾದ ಹೆಂಗಸಿಗೆ ಸೌಭಾಗ್ಯವು ಉಂಟಾಗುತ್ತದೆ ಮತ್ತು ಕುರೂಪವುಳ್ಳವರಿಗೆ ಶ್ರೇಷ್ಠವಾದ ರೂಪವು ಉಂಟಾಗುತ್ತದೆ. ಈ ವ್ರತವನ್ನು ರೋಗಿಯು ಆಚರಿಸಿದರೆ ಅದರ ಪ್ರಭಾವದಿಂದ ರೋಗದಿಂದ ಬಿಡುಗಡೆಹೊಂದುತ್ತಾನೆ ಮತ್ತು ಬಲಿಷ್ಠವಾದ ಶರೀರ ಮತ್ತು ಶ್ರೇಷ್ಠವಾದ ಇಂದ್ರಿಯಶಕ್ತಿಯನ್ನು ಪಡೆಯುತ್ತಾನೆ. ಯಾವ ಮನುಷ್ಯನು ಮಾಂಗಲ್ಯಶ್ರಾದ್ಧಗಳಲ್ಲಿ ಇದನ್ನು ಪಠಿಸುತ್ತಾನೆಯೋ-ಅವನ ಪಿತೃಗಳೂ ಮತ್ತು ದೇವತೆಗಳೂ ಅನಂತವಾದ ತೃಪ್ತಿಯನ್ನು ಪಡೆಯುತ್ತಾರೆ. ಅವರು ಸಂತುಷ್ಟರಾಗಿ ಹವನವು ಮುಗಿದನಂತರ ವ್ರತಿಯ ಎಲ್ಲ ಇಷ್ಟಾರ್ಥಗಳನ್ನೂ ಈಡೇರಿಸಿಕೊಡುತ್ತಾರೆ. ಅವರೆಲ್ಲರೂ ಸಂತುಷ್ಟರಾಗುತ್ತಾರೆ. ಅಲ್ಲದೇ ಸಮಸ್ತಯಜ್ಞಗಳಿಗೂ ಒಬ್ಬನೇ ಭೋಕ್ತೃವಾಗಿರುವ ಶ್ರೀಭಗವಂತನಾದ ಲಕ್ಷ್ಮೀನಾರಾಯಣನೂ ಕೂಡ ಸಂತುಷ್ಟನಾಗುತ್ತಾನೆ. ವ್ರತಿಯ

ಎಲ್ಲಾ ಇಷ್ಟಾರ್ಥಗಳೂ ಈಡೇರುತ್ತವೆ. ಮಹಾರಾಜ! ನಾವು ನಿನ್ನ ಅಪೇಕ್ಷೆಯಂತೆ ನಿನಗೆ ಆದರಣೀಯವಾದ ಮತ್ತು ಪುಣ್ಯಪ್ರದವಾದ ಮರುದ್ಗಣದ ಜನ್ಮಕಥೆಯನ್ನು ಹೇಳಿಯಾಯಿತು ಮತ್ತು ಜೊತೆಯಲ್ಲಿಯೇ ದಿತಿದೇವಿಯ ಶ್ರೇಷ್ಠವಾದ ಪುಂಸವನವ್ರತದ ವರ್ಣನೆಯನ್ನೂ ಮಾಡಿಯಾಯಿತು.

(ಶ್ಲೋಕ 25-28)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಷಷ್ಠಸ್ಕಂಧದ ೧೯ನೆಯ ಅಧ್ಯಾಯವು ಮುಗಿಯಿತು.

ಷಷ್ಠಸ್ಕಂಧವು ಮುಗಿಯಿತು.

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು ॥

ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ ॥

ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ ।
ಅಧನಾಃ ಸಧನಾಃ ಸನ್ತು ಜೀವನ್ತು ಶರದಾಂ ಶತಮ್ ॥

ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ।

ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು ಓಂ ತತ್ಸತ್

ಶ್ರೀಮಹಾಗಣಪತಯೇ ನಮಃ ಶ್ರೀಮಹಾಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ಶ್ರೀಮದ್ಭಾಗವತ

ಸಪ್ತಮಸ್ಕಂಧ ೧ನೆಯ ಅಧ್ಯಾಯ

ನಾರದ-ಯುಧಿಷ್ಠಿರರ ಸಂವಾದ ಮತ್ತು ಜಯ-ವಿಜಯರ ಕಥೆ

ಜನ್ಮಾದ್ಯಸ್ಯ ಯತೋಽನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃ ದಾ ಯ ಆದಿಕವಯೇ ಮುಹ್ಯನ್ತಿ ಯತ್ಸೂರಯಃ ।
ತೇಜೋವಾರಿಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋಽಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ॥

ಪರೀಕ್ಷಿದ್ರಾಜನು ಮರುದ್ಗಣಗಳ ಜನ್ಮವೃತ್ತಾಂತವನ್ನೂ ಅದರ ಫಲಶ್ರುತಿಯನ್ನೂ ಶುಕಮುನಿಗಳಿಂದ ಕೇಳಿದ ಬಳಿಕ ಅವರಲ್ಲಿ ಹೀಗೆ ವಿಜ್ಞಾಪನೆ ಮಾಡಿದನು :

ಸಮಃ ಪ್ರಿಯಃ ಸುಹೃದ್ಬ್ರಹ್ಮನ್ಭೂತಾನಾಂ ಭಗವಾನ್ಸ್ವಯಮ್ ।
ಇನ್ದ್ರಸ್ಯಾರ್ಥೇ ಕಥಂ ದೈತ್ಯಾನವಧೀದ್ವಿಷಮೋ ಯಥಾ ॥೧॥

“ಪೂಜ್ಯರಾದ ಮಹರ್ಷಿಗಳೇ! ಶ್ರೀಭಗವಂತನಾದ ನಾರಾಯಣನು ಸರ್ವಸಮನು. ಸಮಸ್ತಪ್ರಾಣಿಗಳಿಗೂ ಪ್ರಿಯನಾದವನು ಮತ್ತು ಎಲ್ಲರಿಗೂ ಗೆಳೆಯನು. ಹೀಗಿರುವಾಗ ಆತನು ಪಕ್ಷಪಾತವುಳ್ಳವನಂತೆ ಇಂದ್ರನಿಗಾಗಿ ದೈತ್ಯರನ್ನು ಏಕೆ ವಧಿಸಿದನು?

ಸ್ವಯಂ ಪರಿಪೂರ್ಣನಾಗಿ ಕಲ್ಯಾಣಗುಣಸ್ವರೂಪನಾಗಿರುವುದರಿಂದ ಆತನಿಗೆ ದೇವತೆಗಳಿಂದ ಯಾವ ಪ್ರಯೋಜನವೂ ಇಲ್ಲ ಮತ್ತು ತ್ರಿಗುಣಾತೀತನಾಗಿರುವುದರಿಂದ ಆತನಿಗೆ ಅಸುರರಲ್ಲಿ ವೈರ-ವಿರೋಧಗಳೂ ಇರಲಾರದು. ಯಾವ ಉದ್ವೇಗವೂ ಆತನಲ್ಲಿ ಇರಲಾರದು. ಹೀಗಿದ್ದರೂ ಆತನು ದೇವತೆಗಳಿಗಾಗಿ ಅಸುರರನ್ನು ವಧಿಸಿದನು–ಎಂಬುದನ್ನು ಕೇಳಿ ಆತನಲ್ಲಿ ಸರ್ವ

ಸಮತ್ವವೇ ಮುಂತಾದ ಗುಣಗಳು ನಿಜವಾಗಿಯೂ ಇವೆಯೇ?–ಎಂದು ನನಗೆ ದೊಡ್ಡ ಸಂದೇಹವುಂಟಾಗಿದೆ. ತಾವು ಕೃಪೆಯಿಟ್ಟು ಈ ಸಂಶಯವನ್ನು ಪರಿಹರಿಸಬೇಕು." (ಶ್ಲೋಕ 2-3)

ಶ್ರೀಶುಕಮಹರ್ಷಿಗಳು ಆತನಿಗೆ ಉತ್ತರರೂಪವಾಗಿ ಹೀಗೆಂದರು :

"ಮಹಾರಾಜ! ನೀನು ಬಹಳ ಒಳ್ಳೆಯ ಪ್ರಶ್ನೆಯನ್ನೇ ಕೇಳಿರುವೆ. ಏಕೆಂದರೆ : ಇದು ಶ್ರೀಹರಿಯ ಪರಮಾದ್ಭುತವಾದ ಚಾರಿತ್ರ್ಯಕ್ಕೆ ಸಂಬಂಧ ಪಟ್ಟ ಪ್ರಶ್ನೆ. ಭಗವದ್ಭಕ್ತರ ಮಹಿಮೆಯಿಂದ ಪೂರ್ಣರಾಗಿ ಶ್ರೀಭಗವಂತನಲ್ಲಿ ಭಕ್ತಿಯನ್ನು ವೃದ್ಧಿಪಡಿಸುವ ಪ್ರಶ್ನೆಯಿದು. ಈ ಪರಮಪುಣ್ಯವಾದ ಕಥಾ ಪ್ರಸಂಗವನ್ನು ನಾರದರೇ ಮುಂತಾದ ಮಹಾತ್ಮರು ತುಂಬಾ ಪ್ರೀತಿಯಿಂದ ಹಾಡುತ್ತಿರುತ್ತಾರೆ. ಈಗ ನಾನು ನನ್ನ ಪೂಜ್ಯಪಿತೃವರ್ಯರಾದ ಕೃಷ್ಣದ್ವೈಪಾಯನಮುನಿವರೇಣ್ಯರಿಗೆ ನಮಸ್ಕಾರಮಾಡಿ ಶ್ರೀಭಗವಂತನ ಆ ಲೀಲಾಕಥೆಯನ್ನು ವರ್ಣಿಸುತ್ತೇನೆ. ನಿಜಸ್ವರೂಪದಿಂದ ಶ್ರೀಭಗವಂತನು ತ್ರಿಗುಣಾತೀತನು ; ಹುಟ್ಟಿಲ್ಲದವನು ; ವ್ಯಕ್ತಾವ್ಯಕ್ತಪ್ರಕೃತಿಗಳನ್ನು ಮೀರಿ ದವನು. ಆದರೂ ತನ್ನ ಮಾಯೆಯ ಗುಣಗಳನ್ನು ಸ್ವೀಕಾರಮಾಡಿ ಪರಸ್ಪರ ವಿರೋಧಿಗಳಾದ ರೂಪಗಳನ್ನು ತೋರ್ಪಡಿಸಿಕೊಳ್ಳುವನು. ಸತ್ತ್ವ, ರಜಸ್ಸು ಮತ್ತು ತಮಸ್ಸುಗಳು ಪ್ರಕೃತಿಯ ಗುಣಗಳೇ ಹೊರತು ಪರಮಾತ್ಮನಿಗೆ ಸೇರಿದುವುಗಳಲ್ಲ ಮತ್ತು ಈ ಗುಣಗಳು ಒಟ್ಟಿಗೇ ವೃದ್ಧಿಯನ್ನಾಗಲೀ–ಕ್ಷಯ ವನ್ನಾಗಲೀ ಹೊಂದುವುದಿಲ್ಲ. ತಾನು ಈ ತ್ರಿಗುಣಗಳಿಗೆ ಅಂಟಿಕೊಳ್ಳದೇ ಇದ್ದರೂ ಆಯಾ ಕಾಲಕ್ಕೆ ಅನುಗುಣವಾಗಿ ಶ್ರೀಭಗವಂತನು ಗುಣಗಳನ್ನು ಸ್ವೀಕರಿಸುವನು. ಸತ್ತ್ವಗುಣವು ವೃದ್ಧಿಯಾಗುವ ಸಮಯದಲ್ಲಿ ದೇವತೆ ಗಳನ್ನೂ–ಋಷಿಗಳನ್ನೂ, ರಜೋಗುಣದ ಅಭಿವೃದ್ಧಿಯ ಸಮಯದಲ್ಲಿ ದೈತ್ಯರನ್ನೂ ಮತ್ತು ತಮೋಗುಣದ ಅಭಿವೃದ್ಧಿಯ ಕಾಲದಲ್ಲಿ ಯಕ್ಷ-ರಾಕ್ಷಸ ರನ್ನೂ ತನ್ನವರನ್ನಾಗಿಸಿಕೊಂಡು ಅವರವರಿಗೆ ಏಳಿಗೆಯನ್ನುಂಟುಮಾಡು ವನು. ಅಗ್ನಿಯು–ವ್ಯಾಪಕವಾದ ಕಟ್ಟಿಗೆಯೇ ಮುಂತಾದ ಬೇರೆ ಬೇರೆ ಆಶ್ರಯಗಳಲ್ಲಿದ್ದರೂ ಅವುಗಳಿಂದ ಪ್ರತ್ಯೇಕವಾಗಿ ಕಾಣುವುದಿಲ್ಲ. ಆದರೆ ಆ ಆಶ್ರಯವನ್ನು ಪಡೆದಾಗ ಪ್ರತ್ಯೇಕವಾಗಿ ಪ್ರಕಟಗೊಳ್ಳುವುದು. ಹಾಗೆಯೇ ಪರಮಾತ್ಮನು ಎಲ್ಲ ಶರೀರಗಳಲ್ಲಿದ್ದರೂ ಪ್ರತ್ಯೇಕನಾಗಿ ತಿಳಿದುಬರುವುದಿಲ್ಲ.

ಆದರೂ ವಿವೇಕಿಗಳು ಹೃದಯಮಂಥನಮಾಡಿ ಎಲ್ಲವೂ ಕಳೆದ ಬಳಿಕ ಕಟ್ಟ ಕಡೆಗೆ ತಮ್ಮ ಹೃದಯಗಳಲ್ಲಿಯೇ ಅಂತರ್ಯಾಮಿಯ ರೂಪದಲ್ಲಿ ಆತನನ್ನು ಪಡೆದುಕೊಳ್ಳುವರು. ಶ್ರೀಭಗವಂತನು ತನ್ನ ವಾಸಕ್ಕಾಗಿ ಶರೀರವನ್ನು ಸೃಷ್ಟಿಮಾಡಿಕೊಳ್ಳುವ ಇಷ್ಟಬಂದಾಗ ರಜೋಗುಣವನ್ನು ಪ್ರೇರಿಸುತ್ತಾನೆ. ಆ ವಿಚಿತ್ರವಾದ ಜನ್ಮಗ್ರಳಲ್ಲಿ ರಮಿಸುವ ಬಯಕೆ ಬಂದಾಗ ಸತ್ತ್ವಗುಣವನ್ನು ಸೃಷ್ಟಿಸುತ್ತಾನೆ ಮತ್ತು ನಿದ್ರಿಸುವ ಕಾಮನೆಯುಂಟಾದಾಗ ತಮೋಗುಣವನ್ನು ಪ್ರೇರಿಸುತ್ತಾನೆ. ಶ್ರೀಭಗವಂತನು ಸತ್ಯಸಂಕಲ್ಪನಪ್ಪಾ. ಆತನೇ ಜಗತ್ತಿನ ಉತ್ಪತ್ತಿಗಾಗಿ ಪ್ರಕೃತಿ-ಪುರುಷರಿಗೆ ಸಹಕಾರಿಯೂ ಮತ್ತು ಆಶ್ರಯವೂ ಆಗಿರುವ ಕಾಲವನ್ನು ಸೃಷ್ಟಿಮಾಡುವನು. ಆದುದರಿಂದ ಆತನು ಕಾಲಕ್ಕೆ ಅಧೀನನಲ್ಲ. ಕಾಲವೇ ಆತನಿಗೆ ಅಧೀನವಾಗಿದೆ. ಈ ಕಾಲಸ್ವರೂಪನಾದ ಈಶ್ವರನು ಸತ್ತ್ವಗುಣವನ್ನು ಯಾವಾಗ ವೃದ್ಧಿಪಡಿಸುತ್ತಾನೆಯೋ–ಆಗ ಸತ್ತ್ವಮಯರಾದ ದೇವತೆಗಳ ಬಲವನ್ನು ಹೆಚ್ಚಿಸುವನು ಮತ್ತು ಆಗಲೇ ಪರಮಕೀರ್ತಿಶಾಲಿಯಾದ ಆತನು ದೇವಪ್ರಿಯನಾಗಿ ದೇವವಿರೋಧಿಗಳಾದ ರಜೋಗುಣಿ-ತಮೋಗುಣಿಗಳಾದ ದೈತ್ಯ-ದಾನವ-ರಾಕ್ಷಸಾದಿಗಳನ್ನು ಸಂಹರಿಸುವನು. ವಾಸ್ತವವಾಗಿ ಆತನು ಸರ್ವಸಮನೇ ಆಗಿದ್ದಾನೆ. ಎಲೈ ರಾಜೇಂದ್ರನೇ! ನಿನ್ನ ದೊಡ್ಡಪ್ಪನಾದ ಧರ್ಮರಾಜನು ರಾಜಸೂಯಯಜ್ಞ ವನ್ನು ಆಚರಿಸುತ್ತಿದ್ದಾಗ ಇದೇ ವಿಷಯದ ಬಗೆಗೆ ದೇವರ್ಷಿನಾರದರಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದನು. ಆಗ ದೇವರ್ಷಿಗಳು ಆತನಿಗೆ ತುಂಬಾ ಪ್ರೀತಿಯಿಂದ ಒಂದು ಇತಿಹಾಸವನ್ನು ಉತ್ತರವಾಗಿ ಹೇಳಿದರು. ಧರ್ಮರಾಜನಿಗೆ ಪ್ರಶ್ನೆಯು ಉದ್ಭವಿಸಲು ಕಾರಣ–ಆ ಯಜ್ಞದಲ್ಲಿ ನಡೆದ ಒಂದು ಪರಮಾದ್ಭುತವಾದ ಘಟನೆ. ಶ್ರೀಕೃಷ್ಣದ್ವೇಷಿಯಾಗಿ ಶ್ರೀಕೃಷ್ಣನಿಂದ ಸಂಹರಿಸಲ್ಪಟ್ಟ ಚೇದಿರಾಜನಾದ ಶಿಶುಪಾಲನ ಆತ್ಮವು ಶ್ರೀಭಗವಂತನಾದ ಆ ವಾಸುದೇವನಲ್ಲಿ ಹೋಗಿ ಸೇರಿಕೊಂಡಿದ್ದನ್ನು ಆತನು ಕಂಡನು. ಅದರಿಂದ ಅಚ್ಚರಿಗೊಂಡ ಯುಧಿಷ್ಠಿರನು ದೊಡ್ಡ-ದೊಡ್ಡ ಮುನಿವರ್ಯರು ಮಂಡಿಸಿದ್ದ ಆ ಮಹಾಸಭೆಯಲ್ಲಿ ದೇವರ್ಷಿನಾರದರನ್ನು ಕುರಿತು ಪ್ರಶ್ನೆಮಾಡಿದನು. (ಶ್ಲೋಕ 4-14)

ಯುಧಿಷ್ಠಿರನು ನಾರದರಲ್ಲಿ ಮಾಡಿದ ವಿಜ್ಞಾಪನೆ :

"ಇದು ಎಂತಹ ಅದ್ಭುತ ಮಹಾತ್ಮರೇ! ಶ್ರೀಕೃಷ್ಣಪರಮಾತ್ಮನಲ್ಲಿ ಸಾಯುಜ್ಯವನ್ನು ಹೊಂದುವುದು ಪರಮಭಾಗವತೋತ್ತಮರಿಗೂ ದುರ್ಲಭವಾದ ವಿಷಯ. ಹೀಗಿರುವಾಗ ಶ್ರೀಭಗವಂತನಿಗೆ ಅತಿದ್ವೇಷಿಯಾಗಿದ್ದ ಶಿಶುಪಾಲನಿಗೆ ಈ ಸದ್ಗತಿಯು ಹೇಗೆ ಉಂಟಾಯಿತು? ದೇವರ್ಷಿಗಳೇ! ಇದರ ರಹಸ್ಯವನ್ನು ನಾವೆಲ್ಲರೂ ಕೇಳಲು ಬಯಸುತ್ತಿದ್ದೇವೆ. ಹಿಂದೆ ಶ್ರೀಭಗವಂತನನ್ನು ನಿಂದಿಸಿದ ಕಾರಣ ಋಷಿಗಳು ವೇನಮಹಾರಾಜನನ್ನು ನರಕಕ್ಕೆ ತಳ್ಳಿಬಿಟ್ಟರು–ಎಂದು ಕೇಳಿದ್ದೇವೆ. ಪಾಪಿಷ್ಠನಾದ ದಮಘೋಷನ ಪುತ್ರ ಆ ಶಿಶುಪಾಲನೂ ಮತ್ತು ದುರ್ಬುದ್ಧಿಯಾದ ದಂತವಕ್ತ್ರನೂ ತೊದಲ ಮಾತುಗಳನ್ನಾಡುತ್ತಿದ್ದ ಕಾಲದಿಂದಲೂ ಶ್ರೀಭಗವಂತನಲ್ಲಿ ದ್ವೇಷವನ್ನೇ ಸಾಧಿಸುತ್ತಿದ್ದರು. ಅವಿನಾಶಿಯಾದ ಪರಬ್ರಹ್ಮ-ಮಹಾವಿಷ್ಣುವೇ ಆಗಿರುವ ಶ್ರೀಕೃಷ್ಣನನ್ನು ಬಾರಿ-ಬಾರಿಗೂ ನಿಂದಿಸುತ್ತಿದ್ದರು. ಇಂತಹ ಅವರ ನಾಲಿಗೆಗೆ ಏಕೆ ಕುಷ್ಠರೋಗವು ಬರಲಿಲ್ಲ? ಅವರು ಕಗ್ಗತ್ತಲೆಯ ನರಕಕ್ಕೆ ಏಕೆ ಹೋಗಿ ಬೀಳಲಿಲ್ಲ? ಇಷ್ಟೇ ಅಲ್ಲ. ಇದಕ್ಕೆ ವಿರುದ್ಧವಾಗಿ ಅವರಿಬ್ಬರೂ ಎಲ್ಲರೂ ನೋಡುತ್ತಿರುವಂತೆಯೇ ಅತಿದುರ್ಲಭವಾಗಿರುವ ಶ್ರೀಕೃಷ್ಣಸಾಯುಜ್ಯವನ್ನೇ ಶೀಘ್ರವಾಗಿ ಹೊಂದಿಬಿಟ್ಟರು. ಇದಕ್ಕೆ ಕಾರಣವೇನು? ಹೇಳಿ ಮಹರ್ಷಿ ಗಳೇ! ನನ್ನ ಮನಸ್ಸು ಗಾಳಿಯ ಹೊಡೆತದಿಂದ ಅಲ್ಲಾಡುತ್ತಿರುವ ದೀಪಜ್ವಾಲೆಯಂತೆ–ಈ ವಿಷಯದಲ್ಲಿ ತೂಗಾಡುತ್ತಿದೆ. ಸರ್ವಜ್ಞರಾದ ತಾವು ಈ ಘಟನೆಯ ರಹಸ್ಯವನ್ನು ನನಗೆ ತಿಳಿಸುವ ಕೃಪೆಮಾಡಿರಿ."

(ಶ್ಲೋಕ 15-20)

ನಾರದಮಹರ್ಷಿಗಳು ಆತನಿಗೆ ಹೀಗೆಂದರು :

"ಅಪ್ಪಾ ಯುಧಿಷ್ಠಿರ! ನಿಂದೆ, ಸ್ತುತಿ, ಸತ್ಕಾರ ಮತ್ತು ತಿರಸ್ಕಾರ–ಇವೆಲ್ಲವೂ ಉಂಟಾಗುವುದು ಶರೀರಕ್ಕೆ ತಾನೇ! ಈ ಶರೀರವು ಕಲ್ಪಿತವಾಗಿರುವುದಕ್ಕೆ ಕಾರಣ ಪ್ರಕೃತಿ ಮತ್ತು ಪುರುಷರ ಸರಿಯಾದ ವಿವೇಕವಿಲ್ಲದಿರುವಿಕೆಯೇ ಆಗಿದೆ. ಈ ಶರೀರವನ್ನೇ ತನ್ನ ಆತ್ಮವೆಂದು ಭಾವಿಸಿದಾಗ 'ಇದು ನಾನು ; ಇದು ನನ್ನದು' ಎಂಬ ಭಾವವು ಉಂಟಾಗುವುದು. ತನಗೆ ಏಟು ಬಿದ್ದಾಗ ಮತ್ತು ಕೆಟ್ಟ ಮಾತುಗಳನ್ನು ತನ್ನ ಬಗೆಗೆ ಕೇಳಿದಾಗ ಪೀಡೆಯು

ಉಂಟಾಗುವುದಕ್ಕೆ ಇದೇ ಕಾರಣ. ಯಾವ ಶರೀರದಲ್ಲಿ 'ಇದು ನಾನೇ' ಎಂಬ ಅಭಿಮಾನವು ಉಂಟಾಗುತ್ತದೆಯೋ–ಆ ಶರೀರವನ್ನು ವಧಿಸಿದಾಗ ಪ್ರಾಣಿಗಳಿಗೆ ತನ್ನ ವಧೆಯಾಯಿತೆಂದು ಅನ್ನಿಸುವುದು. ಆದರೆ ಶ್ರೀಭಗವಂತನಿಗೆ ಇಂತಹ ಯಾವ ಅನಿಸಿಕೆಯೂ ಇಲ್ಲ. ಅವನಿಗೆ ಯಾರಿಂದಲೂ ಯಾವುದರಿಂದಲೂ ಹಿಂಸೆಯಿಲ್ಲ. ಆತನು ಯಾರಿಗೂ ಹಿಂಸೆ ಮಾಡುವುದೂ ಇಲ್ಲ. ಆತನು ಮುಕ್ತಿಸ್ವರೂಪನು. ಸರ್ವಾತ್ಮನು. ಆತನ ವಿಷಯದಲ್ಲಿ ಹಿಂಸೆಯನ್ನು ಕಲ್ಪಿಸಲೂ ಸಾಧ್ಯವಿಲ್ಲ. ಆತನು ಇತರರಿಗೆ ದಂಡನೆಯನ್ನು ಕೊಟ್ಟರೂ–ಅದು ಅವರ ಕಲ್ಯಾಣಕ್ಕಾಗಿಯೇ. ಕ್ರೋಧದಿಂದಾಗಲೀ, ದ್ವೇಷದಿಂದಾಗಲೀ ಶ್ರೀಭಗವಂತನು ಅವರಿಗೆ ದಂಡನೆ ಕೊಡುವುದಿಲ್ಲ.

(ಶ್ಲೋಕ 21-24)

ತಸ್ಮಾದ್ವೈರಾನುಬನ್ಧೇನ ನಿರ್ವೈರೇಣ ಭಯೇನ ವಾ ।
ಸ್ನೇಹಾತ್ಕಾಮೇನ ವಾ ಯುಞ್ಜ್ಯಾತ್ಕಥಂಚಿನ್ನೇಕ್ಷತೇ ಪೃಥಕ್ ॥೨೫॥

ಯಥಾ ವೈರಾನುಬನ್ಧೇನ ಮರ್ತ್ಯಸ್ತನ್ಮಯತಾಮಿಯಾತ್ ।
ನ ತಥಾ ಭಕ್ತಿಯೋಗೇನ ಇತಿ ಮೇ ನಿಶ್ಚಿತಾ ಮತಿಃ ॥೨೬॥

ಆದುದರಿಂದ ಸುದೃಢವಾದ ವೈರಭಾರದಿಂದಾಗಲೀ, ವೈರಹೀನವಾದ ಭಕ್ತಿಭಾವದಿಂದಾಗಲೀ, ಭಯದಿಂದಾಗಲೀ, ಸ್ನೇಹದಿಂದಾಗಲೀ ಅಥವಾ ಕಾಮದಿಂದಾಗಲೀ–ಹೇಗಾದರೂ ಶ್ರೀಭಗವಂತನಲ್ಲಿ ತನ್ನ ಮನಸ್ಸನ್ನು ಪೂರ್ಣವಾಗಿ ಲಯಗೊಳಿಸಬೇಕು. ಶ್ರೀಭಗವಂತನ ದೃಷ್ಟಿಯಿಂದ ಈ ಭಾವಗಳಲ್ಲಿ ಯಾವುದೇ ಭೇದವೂ ಇಲ್ಲ. ತನ್ಮಯತೆಯು ಉಂಟಾಗುವುದು ಮುಖ್ಯ. ಮನುಷ್ಯನಿಗೆ ವೈರಭಾವದಿಂದ ಶ್ರೀಭಗವಂತನಲ್ಲಿ ಎಷ್ಟರಮಟ್ಟಿಗೆ ತನ್ಮಯತೆಯು ಉಂಟಾಗುವುದೋ ಅಷ್ಟರಮಟ್ಟಿನ ತನ್ಮಯತೆಯು ಭಕ್ತಿ ಯೋಗದಿಂದ ಉಂಟಾಗುವುದಿಲ್ಲ–ಎಂಬುದು ನನ್ನ ದೃಢವಾದ ಭಾವನೆ.

ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ ; ಕೇಳು :

ಕೀಟಃ ಪೇಶಸ್ಕೃತಾ ರುದ್ಧಃ ಕುಡ್ಯಾಯಾಂ ತಮನುಸ್ಮರನ್ ।
ಸಂರಮ್ಭಭಯಯೋಗೇನ ವಿನ್ದತೇ ತತ್ಸರೂಪತಾಮ್ ॥೨೭॥

ಕಣಜವು ತನ್ನ ಆಹಾರವಾದ ಹುಳುವನ್ನು ತಂದು ಗೋಡೆಯಲ್ಲಿ

ತನ್ನ ಗೂಡಿನಲ್ಲಿ ಕೂಡಿಹಾಕುತ್ತದೆ. ಆಗ ಆ ಹುಳುವು ಭಯದಿಂದಲೂ, ಉದ್ವೇಗದಿಂದಲೂ ಆ ಕಣಜದ ರೂಪವನ್ನೇ ಹೊಂದಿ ಅದರಂತೆಯೇ ಆಗಿಬಿಡುವುದು.

ಹೀಗೆಯೇ ಮಾಯೆಯಿಂದ ಮನುಷ್ಯವೇಷವನ್ನು ತಾಳಿರುವ ಸರ್ವೇಶ್ವರನಾದ ಭಗವಂತನಾದ ಶ್ರೀಕೃಷ್ಣನಲ್ಲಿ ವೈರಭಾವವನ್ನು ನಿರಂತರವಾಗಿ ಇಟ್ಟುಕೊಂಡಿದ್ದವರೂ ಕೂಡ ಆತನನ್ನೇ ಚಿಂತಿಸುತ್ತಾ ಪಾಪಪರಿಹಾರ ಹೊಂದಿ, ಆತನನ್ನು ಸೇರಿಕೊಂಡು, ಭಕ್ತಿಯಿಂದ ಶ್ರೀಭಗವಂತನನ್ನು ಹೊಂದುವಂತೆಯೇ–ಬಹುಮಂದಿ ಜೀವಗಳು ಕಾಮದಿಂದಲೋ, ದ್ವೇಷ ದಿಂದಲೋ, ಭಯದಿಂದಲೋ, ಸ್ನೇಹದಿಂದಲೋ ಆತನನ್ನು ಸೇರಿ ಕೊಂಡಿರುವರು. (ಶ್ಲೋಕ 28-29)

ಗೋಪ್ಯಃ ಕಾಮಾದ್ಭಯಾತ್ಕಂಸೋ
ದ್ವೇಷಾಚ್ಚೈದ್ಯಾದಯೋ ನೃಪಾಃ ।
ಸಮ್ಬನ್ಧಾದ್ವೃಷ್ಣಯಃ ಸ್ನೇಹಾ–
ದ್ಯೂಯಂ ಭಕ್ತ್ಯಾ ವಯಂ ವಿಭೋ ॥೩೦॥

ಎಲೈ ರಾಜೇಂದ್ರನೇ! ಗೋಪಿಕಾಸ್ತ್ರೀಯರು ತೀವ್ರವಾದ ಕಾಮ-ಪ್ರೇಮದಿಂದಲೂ, ಕಂಸನು ಭಯದಿಂದಲೂ, ಶಿಶುಪಾಲ-ದಂತವಕ್ತ್ರರೇ ಮುಂತಾದ ರಾಜರು ದ್ವೇಷದಿಂದಲೂ, ವೃಷ್ಣಿಗಳು ನೆಂಟಸ್ತಿಕೆಯೇ ಮುಂತಾದ ಸಂಬಂಧದಿಂದಲೂ, ನೀವು ಸ್ನೇಹಸಂಬಂಧದಿಂದಲೂ ಮತ್ತು ನಾವು ಭಕ್ತಿಯಿಂದಲೂ ಆ ಶ್ರೀಭಗವಂತನನ್ನು ಮನಸ್ಸಿನಲ್ಲಿ ಇರಿಸಿಕೊಂಡವ ರಾಗಿದ್ದೇವೆ.

'ಹಾಗಾದರೆ ಶ್ರೀಭಗವಂತನನ್ನು ದ್ವೇಷಿಸುತ್ತಿದ್ದ ವೇನನಿಗೆ ಶಿಶು ಪಾಲಾದಿಗಳಿಗೆ ಆದಂತೆ ಶ್ರೀಕೃಷ್ಣನಲ್ಲಿ ಸಾಯುಜ್ಯವು ಏಕೆ ಉಂಟಾಗಲಿಲ್ಲ?' ಎಂದರೆ : ಆತನು ಭಗವದ್ದ್ವೇಷಿಯಾಗಿದ್ದರೂ ಮೇಲೆ ಹೇಳಿದ ಆರು ಪ್ರಕಾರಗಳಲ್ಲಿ ಯಾವುದರಿಂದಲೂ ಆತನು ಶ್ರೀಭಗವಂತನನ್ನು ತನ್ಮಯನಾಗಿ ಚಿಂತಿಸಲಿಲ್ಲ. ಒಟ್ಟಿನಲ್ಲಿ ಹೇಗಾದರೂ ಯಾವುದೇ ಉಪಾಯದಿಂದಾ ದರೂ ಮನಸ್ಸನ್ನು ಶ್ರೀಭಗವಂತನಾದ ಶ್ರೀಕೃಷ್ಣನಲ್ಲಿ ತನ್ಮಯಗೊಳಿಸಬೇಕು. ಇದೂ ಅಲ್ಲದೇ ನಿಮ್ಮ ಚಿಕ್ಕಮ್ಮನ ಪುತ್ರರಾದ ಈ ಶಿಶುಪಾಲ ಮತ್ತು

ದಂತವಕ್ತ್ರರಿಬ್ಬರೂ ಶ್ರೀಭಗವಂತನಾದ ಮಹಾವಿಷ್ಣುವಿನ ಮುಖ್ಯರಾದ ಪಾರ್ಷದರೇ ಆಗಿದ್ದು ಬ್ರಾಹ್ಮಣಶಾಪದ ಕಾರಣ ಆ ದಿವ್ಯಪದದಿಂದ ಇಲ್ಲಿಗೆ ಜಾರಿದವರು."

ನಾರದರ ಆ ಉತ್ತರವನ್ನು ಕೇಳಿದ ಯುಧಿಷ್ಠಿರನು ಅವರಲ್ಲಿ ಹೀಗೆ ಮರುಪ್ರಶ್ನೆ ಹಾಕಿದನು :

"ಮಹರ್ಷಿಗಳೇ! ಶ್ರೀಭಗವಂತನ ಪಾರ್ಷದರ ಮೇಲೂ ಪ್ರಭಾವ ವನ್ನು ಬೀರಿದ ಈ ಶಾಪವನ್ನು ಕೊಟ್ಟವರಾರು? ಹೇಗೆ ಮತ್ತು ಏತಕ್ಕೆ ಈ ಶಾಪಪ್ರಸಂಗವು ಒದಗಿತು? ಶ್ರೀಹರಿಯಲ್ಲಿ ಅನನ್ಯಪ್ರೇಮಿಗಳಾಗಿದ್ದವರೂ ಹುಟ್ಟು-ಸಾವುಗಳಿಂದ ತುಂಬಿದ ಈ ಸಂಸಾರಕ್ಕೆ ಮರಳಿ ಬರುವುದೆಂದರೆ ನಂಬುವುದೇ ಕಷ್ಟ. ವೈಕುಂಠಲೋಕನಿವಾಸಿಗಳಿಗೆ ಪ್ರಾಕೃತವಾದ ಶರೀರ, ಇಂದ್ರಿಯ ಮತ್ತು ಪ್ರಾಣಗಳು ಇರುವುದೇ ಇಲ್ಲ. ಹೀಗಿರುವಾಗ ಅವರಿಗೆ ಪ್ರಾಕೃತವಾದ ದೇಹಸಂಬಂಧವು ಹೇಗೆ ಉಂಟಾಯಿತು? ತಿಳಿಸೋಣ ವಾಗಲಿ."

ದೇವರ್ಷಿನಾರದರು ಆತನಿಗೆ ಹೀಗೆಂದರು :

"ಧರ್ಮಪ್ರಭುವೇ! ಕೇಳು. ಹಿಂದೆ ಬ್ರಹ್ಮದೇವರ ಮಾನಸಪುತ್ರರಾದ ಸನಕಾದಿ ಮಹರ್ಷಿಗಳು ಮೂರು ಲೋಕಗಳಲ್ಲಿ ಯಥೇಷ್ಟವಾಗಿ ಸಂಚಾರ ಮಾಡುತ್ತಾ ಒಮ್ಮೆ ವೈಕುಂಠಕ್ಕೆ ಹೋದರು. ಆ ಮಹಾತ್ಮರು ಅತ್ಯಂತ ಪುರಾತನರಿಗಿಂತಲೂ ಹಿಂದೆ ಹುಟ್ಟಿದ ಪರಮಪ್ರಾಚೀನರು. ಆದರೂ ಐದು-ಆರು ವರ್ಷಗಳ ಹುಡುಗರಂತೆ ಕಾಣುವ ರೂಪವುಳ್ಳವರು. ವಸ್ತ್ರವನ್ನೇ ಧರಿಸಿದೇ ಇರುವವರು. ಅಂತಹ ರೂಪ-ವೇಷಗಳಲ್ಲಿದ್ದ ಅವರನ್ನು ಸಾಧಾರಣರಾದ ಶಿಶುಗಳೆಂದು ತಿಳಿದು ವೈಕುಂಠದ ಇಬ್ಬರು ದ್ವಾರಪಾಲಕರು ಅವರನ್ನು ಒಳಗೆ ಬರದಂತೆ ತಡೆದುಬಿಟ್ಟರು. ಅದರಿಂದ ಕೋಪಗೊಂಡ ಆ ಸನಕಾದಿಗಳು–"ಎಲೈ ಮೂರ್ಖರೇ! ಭಗವಂತನಾದ ಶ್ರೀವಿಷ್ಣುವಿನ ಪಾದಮೂಲವು ರಜೋಗುಣ-ತಮೋಗುಣಗಳಿಂದ ರಹಿತವಾದುದು. ಮೂರ್ಖರಾದ ನೀವು ಇಲ್ಲಿ ವಾಸಮಾಡಲು ಯೋಗ್ಯರಲ್ಲ. ಬೇಗನೆ ಇಲ್ಲಿಂದ ಪಾಪಿಷ್ಠವಾದ ಅಸುರಯೋನಿಯಲ್ಲಿ ಹೋಗಿ ಬೀಳಿರಿ"–ಎಂದು ಅವರಿಗೆ ಶಾಪವನ್ನು ಕೊಟ್ಟುಬಿಟ್ಟರು. ಹೀಗೆ ಶಪಿಸಲ್ಪಟ್ಟ ಆ ದ್ವಾರಪಾಲಕರು

ವೈಕುಂಠದಿಂದ ಕೆಳಗೆ ಬೀಳುತ್ತಿರುವುದನ್ನು ಕಂಡು ಕರುಣೆತುಂಬಿದ ಆ ಮಹಾತ್ಮರು–'ನೀವು ಮೂರು ಜನ್ಮಗಳ ಕಾಲ ಮಾತ್ರ ಈ ಶಾಪವನ್ನು ಅನುಭವಿಸಿ ಮತ್ತೆ ಇಲ್ಲಿಗೇ ಹಿಂದಿರುಗಿರಿ'–ಎಂದು ಶಾಪವಿಮೋಚನೆಯ ಕಾಲವನ್ನೂ ಸೂಚಿಸಿ ಅನುಗ್ರಹಿಸಿದರು. (ಶ್ಲೋಕ 31-38)

ಯುಧಿಷ್ಠಿರ! ಆ ಇಬ್ಬರು ದ್ವಾರಪಾಲಕರೇ ದಿತಿದೇವಿಯ ಪುತ್ರರಾಗಿ ಜನಿಸಿದರು. ದೈತ್ಯ-ದಾನವರೆಲ್ಲರಿಂದಲೂ ವಂದಿತರಾದ ಅವರಲ್ಲಿ ಹಿರಿಯವನು ಹಿರಣ್ಯಕಶಿಪುವೆಂದೂ, ಕಿರಿಯವನು ಹಿರಣ್ಯಾಕ್ಷನೆಂದೂ ಹೆಸರಿಸಲ್ಪಟ್ಟರು. ಶ್ರೀಭಗವಂತನಾದ ವಿಷ್ಣುವು ನೃರಸಿಂಹರೂಪವನ್ನು ಧರಿಸಿ ಹಿರಣ್ಯಕಶಿಪುವನ್ನು ಸಂಹರಿಸಿದನು. ಭೂಮಿಯನ್ನು ಉದ್ಧರಿಸುವಾಗ ವರಾಹಾವತಾರವನ್ನು ಕೈಗೊಂಡು ಹಿರಣ್ಯಾಕ್ಷನನ್ನು ವಧಿಸಿದನು. ಹಿರಣ್ಯಕಶಿಪುವು ತನ್ನ ಪುತ್ರನಾದ ಪ್ರಹ್ಲಾದನು ಭಗವದ್ಭಕ್ತಿಶಿರೋಮಣಿಯಾಗಿದ್ದುದನ್ನು ಕಂಡು–ಆತನನ್ನು ವಧಿಸಲು ಬಯಸಿದವನಾಗಿ ಆತನನ್ನು ಬಗೆ-ಬಗೆಯ ಯಾತನೆಗಳಿಗೆ ಒಳಪಡಿಸಿದನು. ಆದರೆ ಪ್ರಹ್ಲಾದ ಬಾಲಕನು ಸಮದರ್ಶಿಯಾಗಿ ಪ್ರಶಾಂತಹೃದಯನಾಗಿ ಸರ್ವಾತ್ಮನಾದ ಶ್ರೀಮನ್ನಾರಾಯಣನಿಗೆ ಪ್ರಿಯತಮಭಕ್ತನಾಗಿದ್ದನು. ಆದುದರಿಂದ ಆತನು ಶ್ರೀಭಗವಂತನ ತೇಜಸ್ಸು-ಪ್ರಭಾವಗಳಿಂದ ಯಾವ ಅಪಾಯಕ್ಕೂ ಒಳಗಾಗದೇ ಸುರಕ್ಷಿತನಾಗಿಯೇ ಉಳಿದನು. ಆದುದರಿಂದ ಬಗೆ-ಬಗೆಯಾಗಿ ಪ್ರಯತ್ನಿಸಿದರೂ ಹಿರಣ್ಯಕಶಿಪುವಿಗೆ ಆತನನ್ನು ವಧಿಸಲು ಸಾಧ್ಯವಾಗಲಿಲ್ಲ.

ಪುತ್ರ ಯುಧಿಷ್ಠಿರ! ಹೀಗೆ ಶ್ರೀಭಗವಂತನಿಂದ ಸಂಹರಿಸಲ್ಪಟ್ಟ ಆ ಹಿರಣ್ಯಕಶಿಪು-ಹಿರಣ್ಯಾಕ್ಷರೇ ಅನಂತರದ ಹುಟ್ಟಿನಲ್ಲಿ ವಿಶ್ರವಸಮುನಿಗಳಿಂದ ಕೇಶಿನಿಯ (ಕೈಕಸಿಯ) ಗರ್ಭದಲ್ಲಿ ಜನಿಸಿ ರಾವಣ-ಕುಂಭಕರ್ಣರೆಂಬ ಹೆಸರುಗಳಿಂದ ಪ್ರಸಿದ್ಧರಾದರು. ತಮ್ಮ ದುಷ್ಟತನದ ಪರಾಕ್ರಮದಿಂದ ಅವರು ಮೂರು ಲೋಕಗಳಿಗೂ ಕಂಟಕರಾಗಿ ಸಂತಾಪವನ್ನು ಹರಡಿದರು. ಆ ಸಮಯದಲ್ಲಿಯೂ ಶ್ರೀಭಗವಂತನು ಶಾಪದಿಂದ ಬಿಡುಗಡೆ ಮಾಡಲು ರಾಮಾವತಾರಮಾಡಿ ಅವರನ್ನು ವಧಿಸಿದನು. ನೀನು ಮುಂದೆ ಮಾರ್ಕಂಡೇಯಮಹರ್ಷಿಗಳ ಬಾಯಿಂದ ಭಗವಂತನಾದ

ಶ್ರೀರಾಮನ ಚರಿತ್ರೆಯನ್ನು ಕೇಳುವೆ. ಆ ಜಯ-ವಿಜಯರೆಂಬ ವೈಕುಂಠದ ದ್ವಾರಪಾಲಕರೇ ಈ ಜನ್ಮದಲ್ಲಿ ನಿನ್ನ ಚಿಕ್ಕಮ್ಮನ ಪುತ್ರರಾದ ಶಿಶುಪಾಲ ಮತ್ತು ದಂತವಕ್ತ್ರರ ರೂಪದಲ್ಲಿ ಕ್ಷತ್ರಿಯಕುಲದಲ್ಲಿ ಹುಟ್ಟಿದ್ದರು. ಭಗವಂತನಾದ ಶ್ರೀಕೃಷ್ಣನ ಸುದರ್ಶನಚಕ್ರದ ಪ್ರಯೋಗದಿಂದ ಮರಣಹೊಂದಿ ಅದರ ಸ್ಪರ್ಶದಿಂದ ಸಮಸ್ತಪಾಪಗಳನ್ನೂ ಕಳೆದುಕೊಂಡವರಾಗಿ ಸನಕಾದಿ ಮಹರ್ಷಿಗಳ ಶಾಪದಿಂದ ಬಿಡುಗಡೆ ಹೊಂದಿದರು. ವೈರಭಾವದಿಂದ ಅವರು ನಿರಂತರವಾಗಿಯೇ ಭಗವಂತನಾದ ಶ್ರೀಕೃಷ್ಣಪರಮಾತ್ಮನ ಚಿಂತನೆಯನ್ನು ಮಾಡುತ್ತಾ ಆ ತೀವ್ರವಾದ ತನ್ಮಯತೆಯ ಫಲವಾಗಿ ಶ್ರೀಭಗವಂತನನ್ನು ಸೇರಿಕೊಂಡರು. ಆತನ ಬಳಿಗೆ ಹೋಗಿ ಮತ್ತೆ ಎಂದಿನಂತೆ ಆತನ ಪಾರ್ಷದರಾದರು."

ನಾರದರು ಹೇಳಿದ ಹಿರಣ್ಯಕಶಿಪುವಿನ ವೃತ್ತಾಂತವನ್ನು ಕೇಳಿದ ಧರ್ಮರಾಜನು ಅವರನ್ನು–"ಮಹಾತ್ಮರೇ! ಪ್ರಹ್ಲಾದನು ಹಿರಣ್ಯಕಶಿಪುವಿನ ಪ್ರೀತಿಯ ಪುತ್ರನಾಗಿದ್ದನು ಮತ್ತು ದೊಡ್ಡ ಮಹಾತ್ಮನೂ ಆಗಿದ್ದನು. ಅಂತಹವನಲ್ಲಿ ಹಿರಣ್ಯಕಶಿಪುವು ಏಕೆ ದ್ವೇಷವನ್ನು ಬೆಳೆಸಿಕೊಂಡನು? ಆ ಪ್ರಹ್ಲಾದಕುಮಾರನು ಹೇಗೆ ಭಗವನ್ಮಯನಾದನು?–ಎಂಬೀ ವಿಷಯಗಳನ್ನು ಕೃಪೆಯಿಟ್ಟು ತಿಳಿಸಿರಿ"–ಎಂದು ಪ್ರಾರ್ಥಿಸಿದನು.

(ಶ್ಲೋಕ 39-46)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಸಪ್ತಮಸ್ಕಂಧದ ೧ನೆಯ ಅಧ್ಯಾಯವು ಮುಗಿಯಿತು.

ಸಪ್ತಮಸ್ಕಂಧ ೨ನೆಯ ಅಧ್ಯಾಯ

ಹಿರಣ್ಯಕಶಿಪುವು-ಹಿರಣ್ಯಾಕ್ಷನ ವಧೆಯಿಂದ ದುಃಖಿತರಾದ ತಾಯಿಯನ್ನೂ ಮತ್ತು ಕುಟುಂಬದವರನ್ನೂ ಸಂತೈಸಿದುದು

ನಾರದಮಹರ್ಷಿಗಳು ಧರ್ಮರಾಜನಿಗೆ ಹೇಳುತ್ತಾರೆ :

ಭ್ರಾತರ್ಯೇವಂ ವಿನಿಹತೇ ಹರಿಣಾ ಕ್ರೋಡಮೂರ್ತಿನಾ ।
ಹಿರಣ್ಯಕಶಿಪೂ ರಾಜನ್ಪರ್ಯತಪ್ಯದ್ರುಷಾ ಶುಚಾ ॥೧॥

"ಮಹಾರಾಜಯುಧಿಷ್ಠಿರನೇ! ಕೇಳು. ತನ್ನ ಸೋದರನು ಹೀಗೆ

ವರಾಹರೂಪಿಯಾದ ವಿಷ್ಣುವಿನಿಂದ ವಧಿಸಲ್ಪಡಲು ಹಿರಣ್ಯಕಶಿಪುವಿನ ಕೋಪವು ಭುಗಿಲೆದ್ದಿತು. ಶೋಕವೂ ಆತನನ್ನು ಸುಡತೊಡಗಿತು. ಕ್ರೋಧದಿಂದ ನಡುಗುತ್ತಾ ಆತನು ಬಾರಿ-ಬಾರಿಗೂ ಅವುಡುಗಳನ್ನು ಕಚ್ಚಿಕೊಳ್ಳತೊಡಗಿದನು. ಕೋಪದಿಂದ ಉರಿಯುತ್ತಿದ್ದ ಕಣ್ಣುಗಳ ಬೆಂಕಿಯ ಹೊಗೆಯಿಂದ ಬೂದುಬಣ್ಣವನ್ನು ಹೊಂದಿದ ಆಕಾಶದ ಕಡೆ ನೋಡುತ್ತಾ ಅವನು ದೈತ್ಯವೀರರನ್ನು ಸಂಬೋಧಿಸಿದನು. ಆಗ ಕರಾಳವಾದ ಕೋರೆಹಲ್ಲುಗಳಿಂದಲೂ, ಬೆಂಕಿಯನ್ನು ಉಗುಳುತ್ತಿದ್ದ ಉಗ್ರವಾದ ನೋಟದಿಂದಲೂ ಮತ್ತು ಮೇಲೆದ್ದ ಗಂಟುಗಟ್ಟಿದ ಹುಬ್ಬುಗಳಿಂದಲೂ ಭೀಕರವಾಗಿ ಕಾಣು ತ್ತಿದ್ದ ಆತನ ಮುಖವನ್ನು ನೋಡುವುದೇ ಕಷ್ಟಕರವಾಗಿತ್ತು. ತುಂಬಿದ ಸಭೆಯಲ್ಲಿ ತ್ರಿಶೂಲವನ್ನು ಕೈಯಲ್ಲೆತ್ತಿ ಝುಳಪಿಸುತ್ತಾ ದ್ವಿಮೂರ್ಧಾನ, ತ್ರ್ಯಕ್ಷ, ಶಂಬರ, ಶತಬಾಹು, ಹಯಗ್ರೀವ, ನಮುಚಿ, ಪಾಕ, ಇಲ್ವಲ, ವಿಪ್ರಚಿತ್ತಿ, ಪುಲೋಮ ಮತ್ತು ಶಕುನ–ಇವರೇ ಮುಂತಾದವರಿಗೆ ಹೇಳಿದನು :

"ಎಲೈ ದೈತ್ಯರೇ ಮತ್ತು ದಾನವರೇ! ನೀವೆಲ್ಲರೂ ನನ್ನ ಮಾತನ್ನು ಕೇಳಿ ಅನಂತರ ನನ್ನ ಆದೇಶದಂತೆ ನಡೆಯಿರಿ. ಕ್ಷುದ್ರರಾದ ನನ್ನ ಶತ್ರುಗಳು ನನಗೆ ಪರಮಪ್ರಿಯನೂ ಹಿತೈಷಿಯೂ ಆಗಿದ್ದ ಸೋದರನನ್ನು ವಿಷ್ಣುವಿನ ಮೂಲಕ ಕೊಲ್ಲಿಸಿದ್ದಾರೆ–ಎಂಬುದು ನಿಮಗೆ ತಿಳಿದೇ ಇದೆ. ಈ ವಿಷ್ಣುವು ಸರ್ವಸಮನಾಗಿದ್ದರೂ ದೇವತೆಗಳು ಮಹಾಪ್ರಯತ್ನಮಾಡಿ ಆತನನ್ನು ಒಲಿಸಿಕೊಂಡು ತಮ್ಮ ಪಕ್ಷದವನನ್ನಾಗಿ ಮಾಡಿಕೊಂಡು ಬಿಟ್ಟಿದ್ದಾರೆ. ಅದರಿಂದ ಆತನು ತನ್ನ ಸ್ವಭಾವವನ್ನು ತೊರೆದು ಮಾಯೆಯಿಂದ ವರಾಹವೇ ಮುಂತಾದ ರೂಪಗಳನ್ನು ಧರಿಸತೊಡಗಿದ್ದಾನೆ. ಹುಡುಗರಂತೆ ಚಂಚಲಬುದ್ಧಿಯುಳ್ಳವನಾಗಿ, ಯಾರು ತನ್ನನ್ನು ಸೇವೆಮಾಡಿದರೆ ಅವರ ಪಕ್ಷಕ್ಕೇ ಸೇರಿಕೊಂಡುಬಿಡುತ್ತಾನೆ. ನಾನು ನನ್ನ ಶೂಲದಿಂದ ಆತನ ಕತ್ತನ್ನು ತರಿದು ಅಲ್ಲಿಂದ ಸುರಿಯುವ ಹೇರಳವಾದ ರಕ್ತಧಾರೆಯಿಂದ ರಕ್ತಪ್ರಿಯನಾದ ನನ್ನ ತಮ್ಮನಿಗೆ ತರ್ಪಣವನ್ನು ಕೊಟ್ಟು ಶೋಕವನ್ನು ಕಳೆದುಕೊಳ್ಳುವೆನು. ದೇವತೆಗಳಿಗೆಲ್ಲಾ ಆ ವಿಷ್ಣುವೇ ಬೇರು ಮತ್ತು ಜೀವನವು. ಆದುದರಿಂದ ಆ ಮಾಯಾವಿಯಾದ ಶತ್ರುವನ್ನು ನಾನು

ಕೊಂದುಹಾಕಿಬಿಟ್ಟರೆ ಆಗ ಬುಡಕಡಿದ ಮರದ ಕೊಂಬೆಗಳಂತೆ ದೇವತೆಗಳೆಲ್ಲರೂ ತಾವಾಗಿಯೇ ಒಣಗಿಹೋಗುವರು. ಆದುದರಿಂದ ನೀವು ಈಗಲೇ ಭೂಮಿಗೆ ಹೋಗಿರಿ. ಅಲ್ಲಿ ಬ್ರಾಹ್ಮಣರ ಮತ್ತು ಕ್ಷತ್ರಿಯರ ಸಂಖ್ಯೆಯು ತುಂಬಾ ಬೆಳೆದಿದೆ. ಅಲ್ಲಿ ತಪಸ್ಸು, ಯಜ್ಞ, ಅಧ್ಯಯನ, ವ್ರತ, ದಾನಗಳೇ ಮುಂತಾದ ಶುಭಕರ್ಮಗಳನ್ನು ಯಾರು ಯಾರು ಮಾಡುತ್ತಿರುವರೋ–ಅವರೆಲ್ಲರನ್ನೂ ಕೊಂದುಹಾಕಿಬಿಡಿರಿ. ದ್ವಿಜರು ಮಾಡುವ ಧರ್ಮಕರ್ಮಗಳೇ ವಿಷ್ಣುವಿಗೆ ಬೇರಿನಂತಿವೆ. ಏಕೆಂದರೆ : ಯಜ್ಞ ಮತ್ತು ಧರ್ಮಗಳೇ ಆತನ ಸ್ವರೂಪವಾಗಿದೆ. ದೇವತೆಗಲು, ಋಷಿಗಳು, ಪಿತೃಗಳು, ಸಮಸ್ತಪ್ರಾಣಿಗಳು ಮತ್ತು ಧರ್ಮ–ಇವುಗಳಿಗೆಲ್ಲಾ ಆತನೇ ಪರಮಾಶ್ರಯನಾಗಿದ್ದಾನೆ. ಬ್ರಾಹ್ಮಣರು, ಗೋವುಗಳು, ವೇದಗಳು, ವರ್ಣಾಶ್ರಮಧರ್ಮಗಳು, ಕರ್ಮಗಳು ಎಲ್ಲೆಲ್ಲಿವೆಯೋ–ಆ ಜಾಗಗಳಿಗೆ ನೀವು ಹೋಗಿ ಅವೆಲ್ಲವನ್ನೂ ಸುಟ್ಟು ಹಾಕಿರಿ. ಕತ್ತರಿಸಿಹಾಕಿರಿ." (ಶ್ಲೋಕ 2-12)

ದೈತ್ಯರಾದರೋ ಸ್ವಭಾವದಿಂದಲೇ ದುಷ್ಟರು. ಜನರಿಗೆ ಕಷ್ಟವನ್ನು ಕೊಟ್ಟು ಅದರಿಂದ ಸುಖಪಡುವವರು. ಈಗ ರಾಜನಾದ ಹಿರಣ್ಯಕಶಿಪುವಿನ ಆಜ್ಞೆಯಿಂದ ಅವರಿಗೆ ಮತ್ತೂ ಪ್ರೋತ್ಸಾಹವುಂಟಾಯಿತು. ಅವರು ಆತನ ಆಜ್ಞೆಯನ್ನು ಶಿರಸಾವಹಿಸಿ ಕಂಡಕಂಡಲ್ಲಿ ಪ್ರಾಣಿಗಳಿಗೆ ತೊಂದರೆಗಳನ್ನು ಕೊಡಲಾರಂಭಿಸಿದರು. ನಗರಗಳಲ್ಲಿ, ಹಳ್ಳಿಗಳಲ್ಲಿ, ಹಸುಗಳು ಇರುವ ಎಡೆಗಳಲ್ಲಿ, ತೋಟಗಳಲ್ಲಿ, ಗದ್ದೆ-ಹೊಲಗಳಲ್ಲಿ, ತಿರುಗಾಡುವ ಜಾಗಗಳಲ್ಲಿ, ಋಷಿಗಳ ಆಶ್ರಮಗಳಲ್ಲಿ, ಗಣಿಗಳಲ್ಲಿ, ಬೇಸಾಯಗಾರರ ವಾಸಸ್ಥಳಗಳಲ್ಲಿ, ತಪ್ಪಲುಗಳಲ್ಲಿರುವ ಹಳ್ಳಿಗಳಲ್ಲಿ, ಗೊಲ್ಲರ ಕೇರಿಗಳಲ್ಲಿ ಮತ್ತು ವ್ಯಾಪಾರಿಗಳ ಕೇಂದ್ರಗಳಾದ ನಗರಗಳಲ್ಲಿ ಹೋಗಿ ಅಲ್ಲಿಗೆಲ್ಲಾ ಬೆಂಕಿಯನ್ನು ಹಚ್ಚಿದರು. ಕೆಲವರು ದೈತ್ಯರು ಅಗೆಯುವ-ತೋಡುವ ಶಸ್ತ್ರಾಯುಧಗಳಿಂದ ದೊಡ್ಡ-ದೊಡ್ಡ ಸೇತುವೆಗಳನ್ನೂ, ಪ್ರಾಕಾರಗಳನ್ನೂ, ನಗರದ್ವಾರಗಳನ್ನೂ ಒಡೆದು ಹಾಕಿದರು. ಮತ್ತೆ ಕೆಲವರು ಕೊಡಲಿಗಳಿಂದ ಹೂವು-ಹಣ್ಣು ಬಿಟ್ಟಿದ್ದ ಹಸಿಮರಗಳನ್ನು ಕಡಿದುಹಾಕಿದರು. ಕೆಲವರು ದೈತ್ಯರು ಉರಿಯುವ ಕೊಳ್ಳಿಗಳಿಂದ ಜನರ ಮನೆಗಳನ್ನು ಸುಟ್ಟುಹಾಕಿದರು. ಹೀಗೆ ದೈತ್ಯರು ನಿರಪರಾಧಿಗಳಾದ ಜನರಿಗೆ ತುಂಬಾ ಪೀಡೆಯನ್ನು ಕೊಡತೊಡಗಿದರು. ಆಗ

ದೇವತೆಗಳೂ ಸ್ವರ್ಗವನ್ನು ಬಿಟ್ಟು ಯಾರಿಗೂ ತಿಳಿಯದ ಹಾಗೆ ರೂಪಗಳನ್ನು ಮರೆಸಿಕೊಂಡು ಭೂಮಿಯಲ್ಲಿ ಸಂಚರಿಸತೊಡಗಿದರು. (ಶ್ಲೋಕ 13-16)

ಅಪ್ಪಾ ಯುಧಿಷ್ಠಿರ! ತನ್ನ ಸೋದರನ ಮರಣದಿಂದ ಹಿರಣ್ಯಕಶಿಪುವಿಗೆ ತುಂಬಾ ದುಃಖವಾಯಿತು. ಆತನಿಗೆ ತಿಲೋದಕವೇ ಮುಂತಾದ ಅಂತ್ಯೇಷ್ಟಿಕ್ರಿಯೆಗಳು ಆದ ಬಳಿಕ ದೇಶ-ಕಾಲಗಳನ್ನು ನಿರ್ಣಯಿಸುವುದರಲ್ಲಿ ನಿಪುಣನಾದ ಹಿರಣ್ಯಕಶಿಪುವು ಆತನ ಪುತ್ರರಾಗಿದ್ದ ಶಕುನಿ, ಶಂಬರ, ಧೃಷ್ಟ, ಭೂತಸಂತಾನ, ವೃಕ, ಕಾಲನಾಭ, ಮಹಾನಾಭ, ಹರಿಶ್ಮಶ್ರು ಮತ್ತು ಉತ್ಕಚ ಎಂಬುವರಿಗೆ ಸಮಾಧಾನಹೇಳಿದನು. ಅವರ ತಾಯಿಯಾದ ವೃಷದ್ಭಾನುವನ್ನೂ ಮತ್ತು ತನ್ನ ತಾಯಿಯಾದ ದಿತಿದೇವಿಯನ್ನೂ ಸಂತೈಸುತ್ತಾ ಹೀಗೆಂದನು: (ಶ್ಲೋಕ 17-19)

"ನನ್ನ ಪ್ರೀತಿಯ ಅಮ್ಮನೇ! ಸೊಸೆಯೇ! ಪುತ್ರರೇ! ನೀವು ಮಹಾವೀರನಾಗಿದ್ದ ಹಿರಣ್ಯಾಕ್ಷನಿಗಾಗಿ ಸ್ವಲ್ಪವೂ ಶೋಕಪಡಬಾರದು. ಏಕೆಂದರೆ : ರಣರಂಗದಲ್ಲಿ ಶತ್ರುವಿನೆದುರಿಗೆ ನಿಂತು ಹೋರಾಡುತ್ತಾ ಪ್ರಾಣತ್ಯಾಗಮಾಡುವುದೇ ವೀರಪುರುಷನು ಬಯಸುವ ಶ್ಲಾಘ್ಯವಾದ ಮರಣವು.

ಭೂತಾನಾಮಿಹ ಸಂವಾಸಃ ಪ್ರಪಾಯಾಮಿವ ಸುವ್ರತೇ ।
ದೈವೇನೈಕತ್ರ ನೀತಾನಾಮುನ್ನೀತಾನಾಂ ಸ್ವಕರ್ಮಭಿಃ ॥೨೧॥

ಅರವಟ್ಟಿಗೆಯಲ್ಲಿ ಜನರು ಯಾವಾಗಲೋ ಪರಸ್ಪರವಾಗಿ ಸೇರುವರು ಮತ್ತು ಕೊಂಚಕಾಲ ಮಾತ್ರ ಜೊತೆಯಲ್ಲಿದ್ದು ಶೀಘ್ರದಲ್ಲಿಯೇ ಅಗಲಿ ಹೋಗುವರು. ಲೋಕದಲ್ಲಿ ಜೀವಿಗಳ ಸೇರುವಿಕೆ ಮತ್ತು ಅಗಲಿಕೆಗಳೂ ಹೀಗೆಯೇ. ತಮ್ಮ ತಮ್ಮ ಕರ್ಮಾನುಗುಣವಾಗಿ ದೈವಸಂಕಲ್ಪದಿಂದ ಯಾವಾಗಲೋ ಒಂದುಗೂಡಿ ಶೀಘ್ರದಲ್ಲಿಯೇ ಅವರು ಅಗಲಿಹೋಗುವರು.

ವಾಸ್ತವವಾಗಿ ಆತ್ಮನಿಗೆ ಜನನ-ಮರಣಗಳೇ ಇಲ್ಲ. ಆತನು ನಿತ್ಯನು. ಅಳಿವಿಲ್ಲದವನು. ಶುದ್ಧನು. ಸರ್ವಗತನು, ಸರ್ವಜ್ಞನು ಮತ್ತು ದೇಹ-ಇಂದ್ರಿಯ ಮುಂತಾದುವುಗಳ ದೆಸೆಯಿಂದ ಬೇರೆಯಾಗಿರುವವನು. ಆತನು ತನ್ನ ಅವಿದ್ಯೆಯಿಂದಲೇ ದೇಹಾದಿಗಳ ಸೃಷ್ಟಿಯನ್ನು ಪಡೆದು ಭೋಗಗಳಿಗೆ ಸಾಧನವಾದ ಸೂಕ್ಷ್ಮಶರೀರವನು ಸ್ವೀಕರಿಸುವನು. ನೀರು ಅಲ್ಲಾಡುತ್ತಿದ್ದರೆ

ಅದರಲ್ಲಿ ಪ್ರತಿಬಿಂಬಿಸಿರುವ ಮರಗಳೂ ಕಂಪಿಸುತ್ತಿರುವಂತೆ ಕಾಣುತ್ತವೆ. ಕಣ್ಣುಗಳು ಸುತ್ತುತ್ತಿದ್ದರೆ ಜೊತೆಗೆ ಇಡೀ ಭೂಮಿಯೇ ಸುತ್ತುತ್ತಿರುವಂತೆ ಕಾಣಿಸುತ್ತದೆ. ಹಾಗೆಯೇ ವಿಷಯಗಳ ಕಾರಣದಿಂದಾಗಿ ಮನಸ್ಸು ಭ್ರಮಿಸುತ್ತಿದ್ದರೆ ವಾಸ್ತವವಾಗಿ ನಿರ್ವಿಕಾರನಾಗಿರುವ ಆತ್ಮನೂ ಕೂಡ ಅದರಂತೆಯೇ ಭ್ರಮಿಸುತ್ತಿರುವಂತೆ ಕಾಣುವನು. ಎಲ್ಲ ರೀತಿಗಳಲ್ಲೂ ಶರೀರರಹಿತನೇ ಆಗಿರುವ ಆತ್ಮನನ್ನು ಶರೀರವೆಂದು ತಿಳಿಯುವುದೇ ಅಜ್ಞಾನವು. ಈ ಅಜ್ಞಾನದಿಂದಲೇ ಇಷ್ಟಾನಿಷ್ಟವಸ್ತುಗಳ ಸೇರುವಿಕೆ ಮತ್ತು ಅಗಲಿಕೆಗಳು ಉಂಟಾಗುವುದು. ಇದರಿಂದಲೇ ಕರ್ಮಗಳೊಡನೆ ಸಂಬಂಧವುಂಟಾಗುವುದರಿಂದ ಸಂಸಾರದಲ್ಲಿ ಅಲೆದಾಡುತ್ತಿರಬೇಕಾಗುವುದು. ಹುಟ್ಟು-ಸಾವುಗಳು, ಬಗೆ-ಬಗೆಯ ಶೋಕಗಳು, ಅವಿವೇಕ, ಚಿಂತೆ ಮತ್ತು ವಿವೇಕದ ಮರೆವು– ಇವೆಲ್ಲಕ್ಕೂ ಈ ಅಜ್ಞಾನವೇ ಕಾರಣವು. ಈ ವಿಷಯದಲ್ಲಿ ಮಹಾತ್ಮರು ಒಂದು ಪುರಾತನವಾದ ಇತಿಹಾಸವನ್ನು ಹೇಳುತ್ತಾರೆ. ಅದರಲ್ಲಿ ಸತ್ತು ಹೋದ ಮನುಷ್ಯನ ನೆಂಟರಿಷ್ಟರಿಗೂ ಯಮಧರ್ಮರಾಜನಿಗೂ ನಡೆದ ಸಂಭಾಷಣೆಯೊಂದು ಬರುತ್ತದೆ. ಆ ಕಥೆಯನ್ನೂ ಹೇಳುತ್ತೇನೆ. ಸಾವಧಾನವಾಗಿ ಕೇಳಿರಮ್ಮಾ. (ಶ್ಲೋಕ 22-27)

ಉಶೀನರದೇಶದಲ್ಲಿ ಕೀರ್ತಿಶಾಲಿಯಾದ ಒಬ್ಬ ರಾಜನಿದ್ದನು. ಆತನ ಹೆಸರು ಸುಯಜ್ಞ. ಯುದ್ಧದಲ್ಲಿ ಶತ್ರುಗಳು ಆತನನ್ನು ಕೊಂದುಹಾಕಿಬಿಟ್ಟರು. ಆತನ ಶವದ ಸುತ್ತಲೂ ಬಂಧು-ಮಿತ್ರರು ಕುಳಿತು ಗೋಳಾಡತೊಡಗಿದರು. ರಾಜನ ರತ್ನಖಚಿತವಾದ ಕವಚವು ಹರಿದು ಚಿಂದಿಯಾಗಿತ್ತು. ಒಡವೆಗಳೂ ಮಾಲಿಕೆಗಳೂ ಚೆಲ್ಲಾಪಿಲ್ಲಿಯಾಗಿಬಿಟ್ಟಿದ್ದುವು. ಬಾಣಗಳ ಏಟುಗಳಿಂದ ಆತನ ಎದೆಯು ಸೀಳಿಹೋಗಿತ್ತು. ದೇಹವೂ ರಕ್ತದಿಂದ ತೊಯ್ದುಹೋಗಿತ್ತು. ತಲೆಗೂದಲು ಚದುರಿಹೋಗಿತ್ತು. ಕಣ್ಣುಗಳು ಕುಸಿದುಹೋಗಿದ್ದುವು. ಕೋಪದಿಂದ ಹಲ್ಲುಗಳು ತುಟಿಗಳನ್ನು ಕಚ್ಚಿಕೊಂಡಿದ್ದುವು. ಕಮಲದಂತಿದ್ದ ಮುಖವನ್ನು ಧೂಳು ಮುಚ್ಚಿಕೊಂಡಿತ್ತು. ಯುದ್ಧದಲ್ಲಿ ಆತನ ಎಲ್ಲ ಶಸ್ತ್ರಗಳೂ ಮತ್ತು ಎರಡು ತೋಳುಗಳೂ ಕಡಿದುಹೋಗಿದ್ದುವು. ವಿಧಿವಶದಿಂದ ತಮ್ಮ ಪತಿಗೆ ಒದಗಿದ ಆ ಅವಸ್ಥೆಯನ್ನು ಕಂಡು ಆ ಉಶೀನರನರೇಶನ ರಾಣಿಯರು ದುಃಖಸಾಗರದಲ್ಲಿ ಮುಳುಗಿ

ದರು. 'ಹಾ ನಾಥ! ಸತ್ತೆವು ; ಕೆಟ್ಟೆವು'-ಎಂದು ಮತ್ತೆ ಮತ್ತೆ ಎದೆಯನ್ನು ಚಚ್ಚಿಕೊಳ್ಳುತ್ತಾ ಪತಿಯ ಪಾದಗಳ ಬಳಿ ಬಿದ್ದುಬಿಟ್ಟರು. ಹಾಗೆ ಗಟ್ಟಿಯಾಗಿ ರೋದಿಸುತ್ತಿದ್ದಾಗ ಅವರು ಸ್ತನಗಳ ಮೇಲೆ ಬಳಿದುಕೊಂಡಿದ್ದ ಕುಂಕುಮ ಕೇಸರಿಯ ಲೇಪದೊಡನೆ ಸೇರಿ ಕೆಂಪಾದ ಕಣ್ಣೀರಿನ ಧಾರೆಯು ಪ್ರಿಯತಮನಾದ ಪತಿಯ ಪಾದಗಳನ್ನು ನೆನೆಸುತ್ತಿತ್ತು. ಅವರ ತಲೆಗೂದಲು ಮತ್ತು ತೊಟ್ಟಿದ್ದ ಆಭರಣಗಳು ಅಸ್ತವ್ಯಸ್ತವಾಗಿದ್ದುವು. ಅವರ ಆ ಕರುಣಾಜನಕವಾದ ವಿಲಾಪವನ್ನು ಕೇಳಿದವರೆಲ್ಲಾ ದುಃಖಪರವಶರಾಗು ತ್ತಿದ್ದರು. 'ಅಯ್ಯೋ! ವಿಧಿಯು ಎಂತಹ ನಿಷ್ಕರುಣೆಯು! ಅವನೇ ಈಗ ನಿನ್ನನ್ನು ನಮ್ಮ ಕಣ್ಣುಗಳಿಂದ ಮರೆಮಾಚಿದ್ದಾನೆ. ಪ್ರಿಯನೇ! ಪ್ರಭೋ! ಹಿಂದೆ ನೀನು ಉಶೀನರದೇಶವಾಸಿಗಳೆಲ್ಲರಿಗೂ ಜೀವನವನ್ನು ಕೊಡುತ್ತಿದ್ದೆ. ಆದರೆ ಈಗ ನಿನ್ನ ಜೀವನವನ್ನೇ ಕಳೆದುಕೊಂಡು ನಮಗೆ ದುಃಖವನ್ನೇ ಹೆಚ್ಚಿಸುತ್ತಿರುವೆ. ಪತಿದೇವ! ನಿನಗೆ ನಮ್ಮ ಮೇಲೆ ಎಷ್ಟು ಪ್ರೀತಿ! ನಮ್ಮ ಅತ್ಯಲ್ಪಸೇವೆಯನ್ನೂ ತುಂಬಾ ದೊಡ್ಡದೆಂದು ತಿಳಿಯುತ್ತಿದ್ದೆ. ಅಕಟಾ! ಈಗ ನೀನಿಲ್ಲದೇ ನಾವು ಬದುಕಿರುವುದೆಂತು? ನಾವು ನಿನ್ನ ಪಾದಗಳ ಸೇವಕಿಯರಲ್ಲವೇ? ವೀರವರನೇ! ನೀನು ಎಲ್ಲಿಗೆ ಹೋಗುತ್ತಿದ್ದೀಯೋ ಅಲ್ಲಿಗೆ ಬರುವುದಕ್ಕೆ ನಮಗೂ ಆಜ್ಞೆಯನ್ನು ನೀಡು'-ಎಂದು ಮೊದಲಾಗಿ ಹೇಳುತ್ತಾ ಅವರು ಪತಿಯ ಶವವನ್ನು ಹಿಡಿದುಕೊಂಡು ಗೋಳಾಡು ತ್ತಿದ್ದರು. ಆ ಶವವನ್ನು ದಹನಸಂಸ್ಕಾರಕ್ಕಾಗಿ ಅಲ್ಲಿಂದ ಎತ್ತಿಕೊಂಡು ಹೋಗಲು ಬಿಡುವುದಕ್ಕೂ ಅವರು ಇಷ್ಟಪಡುತ್ತಿರಲಿಲ್ಲ. ಅಷ್ಟರಲ್ಲಿಯೇ ಸೂರ್ಯನು ಅಸ್ತಮನಹೊಂದಿಬಿಟ್ಟನು. ರಾಜನ ಬಂಧು-ಮಿತ್ರರು ಹಾಗೆ ವಿಲಪಿಸುತ್ತಿರುವುದನ್ನು ಕೇಳಿ ಅವರಿಗೆ ತಿಳಿವಳಿಕೆ ಕೊಡುವುದಕೋಸ್ಕರ ಸ್ವಯಂ ಯಮಧರ್ಮರಾಜನೇ ಒಬ್ಬ ಬಾಲಕನ ವೇಷವನ್ನು ಧರಿಸಿ ಅಲ್ಲಿಗೆ ಬಂದು ಅವರಿಗೆ ಹೇಳಿದನು : (ಶ್ಲೋಕ 28-36)

ಬಾಲಕರೂಪಿಯಾದ ಯಮಧರ್ಮರಾಜನ ಉಪದೇಶ :

"ಆಹಾ! ಇದೇನಿದು! ವಯಸ್ಸಿನಲ್ಲಿ ಇಷ್ಟು ದೊಡ್ಡವರಾಗಿ ಲೋಕ ದಲ್ಲಿ ಜನರ ಬದುಕು-ಸಾವುಗಳನ್ನು ದಿನನಿತ್ಯವೂ ನೋಡುತ್ತಿದ್ದರೂ ಇವರು

ಹೀಗೆ ಮೋಹಕ್ಕೆ ಒಳಗಾಗಿದ್ದಾರಲ್ಲಾ! ಈ ಮನುಷ್ಯನು ಎಲ್ಲಿಂದ ಬಂದಿದ್ದನೋ ಅಲ್ಲಿಗೇ ಹೊರಟುಹೋದನು. ಈ ಜನರೂ ಕೂಡ ಒಂದಲ್ಲ ಒಂದು ದಿನ ಅಲ್ಲಿಗೆ ಹೋಗಲೇಬೇಕು. ಆದರೂ ಹೀಗೇಕೆ ವ್ಯರ್ಥವಾಗಿ ಇಷ್ಟು ಶೋಕಪಡುತ್ತಿದ್ದಾರೆ? ನಿಮಗಿಂತಲೂ ನಾವೇ ಎಷ್ಟೋ ಪಾಲಿನಷ್ಟು ಶ್ರೇಷ್ಠರು. ಧನ್ಯರು. ಏಕೆಂದರೆ : ತಂದೆ-ತಾಯಿಗಳು ತೊರೆದುಬಿಟ್ಟಿದ್ದರೂ ನಾವು ಎಳ್ಳಷ್ಟೂ ಚಿಂತೆಪಡುತ್ತಿಲ್ಲ. ನಾವು ದೇಹದಿಂದ ದುರ್ಬಲರಾಗಿದ್ದರೂ ತೋಳವೇ ಮುಂತಾದ ಕ್ರೂರಮೃಗಗಳು ನಮ್ಮನ್ನು ತಿಂದುಹಾಕುತ್ತಿಲ್ಲ. **'ಸ ರಕ್ಷಿತಾ ರಕ್ಷತಿ ಯೋ ಹಿ ಗರ್ಭೇ'**–ತಾಯಿಯ ಗರ್ಭದಲ್ಲಿದ್ದಾಗ ಯಾವನು ರಕ್ಷಿಸಿದನೋ–ಅವನೇ ಈ ಜೀವನದಲ್ಲೂ ನಮ್ಮನ್ನು ರಕ್ಷಿಸುತ್ತಾ ಬಂದಿರುವನು ಮತ್ತು ಮುಂದೆಯೂ ಆತನೇ ರಕ್ಷಣೆಮಾಡುವನು. ದೇವಿಯರೇ! ತನ್ನ ಇಚ್ಛಾಮಾತ್ರದಿಂದ ಈ ಜಗತ್ತನ್ನು ರಚಿಸಿ, ರಕ್ಷಿಸಿ, ಲಯಗೊಳಿಸುವ ಪ್ರಭುವಾದ ಪರಮೇಶ್ವರನಿಗೆ ಈ ಜಗತ್ತು ಒಂದು ಆಟದ ಬೊಂಬೆಯಂತೆ. ಈ ಚರಾಚರವಾದ ಜಗತ್ತನ್ನು ನಿಗ್ರಹಿಸುವುದಕ್ಕೂ, ಅನುಗ್ರಹಿಸುವುದಕ್ಕೂ ಆತನೊಬ್ಬನೇ ಸಮರ್ಥನು. ಅದೃಷ್ಟವು ಅನುಕೂಲ ವಾಗಿದ್ದರೆ ಬೀದಿಯಲ್ಲಿ ಕಳೆದುಹೋದ ವಸ್ತುವೂ ಅಲ್ಲಿ ಹಾಗೆಯೇ ಬಿದ್ದಿರು ವುದು. ಆದರೆ ಅದೇ ಅದೃಷ್ಟವು ವಿರುದ್ಧವಾದರೆ ಮನೆಯಲ್ಲಿ ಪೆಟ್ಟಿಗೆಯೊಳಗೆ ಜೋಪಾನವಾಗಿ ಇಟ್ಟಿರುವ ವಸ್ತುವೂ ಕಳೆದುಹೋಗುವುದು. ದೈವದ ದಯಾದೃಷ್ಟಿಯಿದ್ದರೆ ಜೀವವು ಬೇರಾವ ಸಹಾಯವಿಲ್ಲದೇ ಇದ್ದರೂ ಅರಣ್ಯ ದಲ್ಲಿಯೇ ಬಹಳ ದಿವಸಗಳ ಕಾಲ ಬದುಕಿರುವುದು. ಆದರೆ ಅದೇ ದೈವವು ವಿರುದ್ಧವಾದರೆ ಮನೆಯಲ್ಲಿ ಸುರಕ್ಷಿತನಾಗಿದ್ದವನೂ ಸತ್ತುಹೋಗುವನು.

ಎಲೈ ರಾಣಿಯರೇ! ಪ್ರತಿಯೊಂದು ಪ್ರಾಣಿಗೂ ಸಾವು ಅದರ ಪೂರ್ವಜನ್ಮದ ಕರ್ಮವಾಸನೆಗೆ ಅನುಗುಣವಾಗಿ ನಿರ್ದಿಷ್ಟವಾದ ಕಾಲ ದಲ್ಲಿಯೇ ಆಗುವುದು ಮತ್ತು ಅದರ ಜನ್ಮವೂ ಅದಕ್ಕನುಗುಣವಾದ ನಿರ್ದಿಷ್ಟಸಮಯದಲ್ಲೇ ಆಗುವುದು. ಆದರೆ ಆತ್ಮನು ಶರೀರದಿಂದ ಅತ್ಯಂತ ಭಿನ್ನನಾದವನು. ಆದುದರಿಂದ ಆ ಶರೀರದಲ್ಲಿಯೇ ವಾಸಮಾಡುತ್ತಿದ್ದರೂ ಅದರ ಧರ್ಮಗಳು ಆತನನ್ನು ಮುಟ್ಟಲಾರವು. (ಶ್ಲೋಕ 37-41)

ಇದಂ ಶರೀರಂ ಪುರುಷಸ್ಯ ಮೋಹಜಂ
ಯಥಾ ಪೃಥಗ್ಭೌತಿಕಮೀಯತೇ ಗೃಹಮ್ ।
ಯಥೌದಕೈಃ ಪಾರ್ಥಿವತೈಜಸೈರ್ಜನಃ
ಕಾಲೇನ ಜಾತೋ ವಿಕೃತೋ ವಿನಶ್ಯತಿ ॥೪೨॥

ಮನುಷ್ಯನು ತನ್ನ ಮನೆಯನ್ನು ತನ್ನಿಂದ ಬೇರೆ ವಸ್ತುವೆಂದೂ, ಒಂದು ಮಣ್ಣಿನ ಪದಾರ್ಥವೆಂದೂ ತಿಳಿಯುವಂತೆಯೇ–ತನ್ನ ಶರೀರವನ್ನೂ ತನ್ನಿಂದ ಬೇರೆಯಾದುದು ಮತ್ತು ಮಣ್ಣಿನಿಂದಾದ ಪದಾರ್ಥವೆಂದು ತಿಳಿಯಬೇಕು. ಆದರೆ ಮೋಹದಿಂದ ಅದನ್ನು ತಾನೇ ಎಂದು ಆತನು ಭಾವಿಸುತ್ತಾನೆ. ನೀರಿನ ಗುಳ್ಳೆಯೇ ಮುಂತಾದ ನೀರಿನ ವಿಕಾರಗಳೂ, ಮಡಕೆಯೇ ಮುಂತಾದ ಮಣ್ಣಿನ ವಿಕಾರಗಳೂ ಮತ್ತು ಒಡವೆಯೇ ಮುಂತಾದ ಚಿನ್ನದ ವಿಕಾರಗಳೂ ಯಾವುದೋ ಸಮಯವಿಶೇಷದಲ್ಲಿ ರಚಿತವಾಗಿ ರೂಪಾಂತರಗೊಂಡು ನಷ್ಟಹೊಂದುವುದಿಲ್ಲವೇ? ಹಾಗೆಯೇ ಈ ನೀರು, ಮಣ್ಣು ಮತ್ತು ತೇಜಸ್ಸುಗಳ ವಿಕಾರದಿಂದ ಆಗಿರುವ ಈ ಶರೀರವು ಯಾವುದೋ ಕಾಲದಲ್ಲಿ ಆಗಿ ರೂಪಾಂತರಗೊಂಡು ಕಡೆಗೆ ನಾಶಹೊಂದುವುದು.

ಯಥಾನಲೋ ದಾರುಷು ಭಿನ್ನ ಈಯತೇ
ಯಥಾನಿಲೋ ದೇಹಗತಃ ಪೃಥಕ್ ಸ್ಥಿತಃ ।
ಯಥಾ ನಭಃ ಸರ್ವಗತಂ ನ ಸಜ್ಜತೇ
ತಥಾ ಪುಮಾನ್ಸರ್ವಗುಣಾಶ್ರಯಃ ಪರಃ ॥೪೩॥

ಮರದಲ್ಲಿ ಅಡಗಿರುವ ವ್ಯಾಪಕವಾದ ಅಗ್ನಿಯು ಆ ಮರದಿಂದ ಬೇರೆ ಯಾದದ್ದು ಎಂಬುದು ಹೇಗೆ ಸ್ಪಷ್ಟವೋ, ವಾಯುವು ದೇಹದಲ್ಲಿದ್ದರೂ ಆ ದೇಹದಿಂದ ಬೇರೆಯಾಗಿ ಅದಕ್ಕೆ ಸಂಬಂಧಿಸದೇ ಇರುವುದು ಎಂಬುದು ಹೇಗೆ ಸ್ಪಷ್ಟವೋ, ಆಕಾಶವು ಎಲ್ಲೆಡೆಗಳಲ್ಲಿಯೂ ಒಂದೇ ರೀತಿಯಲ್ಲಿ ಎಲ್ಲದ ರಿಂದಲೂ ಬೇರೆಯಾಗಿ ಯಾವುದರ ಗುಣ-ದೋಷಗಳಿಂದಲೂ ಮುಟ್ಟ ಲ್ಪಡುವುದಿಲ್ಲವೆಂಬುದು ಹೇಗೆ ಸ್ಪಷ್ಟವೋ–ಹಾಗೆಯೇ ಎಲ್ಲ ದೇಹೇಂದ್ರಿಯ ಗಳಲ್ಲಿ ವಾಸಮಾಡುತ್ತಾ ಅವುಗಳಿಗೆ ಆಶ್ರಯವಾಗಿರುವ ಆತ್ಮವೂ ಕೂಡ ಅವುಗಳಿಂದ ಬೇರೆಯಾಗಿ ನಿರ್ಲಿಪ್ತವಾಗಿದೆಯೆಂಬುದೂ ಅಷ್ಟೇ ಸ್ಪಷ್ಟವಾಗಿದೆ.

ಎಲೈ ಮೂಢಜನರೇ! ಯಾವುದಕ್ಕೋಸ್ಕರ ನೀವೆಲ್ಲರೂ ಶೋಕ ಪಡುತ್ತಿದ್ದೀರೋ ಆ 'ಸುಯಜ್ಞ' ಎಂಬ ಹೆಸರಿನ ಶರೀರವಾದರೋ ನಿಮ್ಮ ಮುಂದೆಯೇ ಬಿದ್ದಿದೆ. ನೀವು ನೋಡುತ್ತಿದ್ದುದು ಇದನ್ನೇ. ಆದರೆ ಇದರೊಳಗೆ ಕೇಳುವವನೂ, ಮಾತನಾಡುವವನೂ ಯಾವನು ಆಗಿದ್ದನೋ ಆತನು ಹಿಂದೆ ಎಂದೂ ಯಾರಿಗೂ ಕಾಣಿಸುತ್ತಿರಲಿಲ್ಲ. ಈಗಲೂ ಆತನು ಕಾಣಿಸುತ್ತಿಲ್ಲ. ಅಂದ ಬಳಿಕ ನೀವು ಶೋಕಪಡುವುದೇಕೆ? 'ಇದರೊಳಗೆ ಮಾತನಾಡುತ್ತಿದ್ದವನು ಮತ್ತು ಕೇಳುತ್ತಿದ್ದವನು ಪ್ರಾಣನು. ಆತನು ಇದನ್ನು ಬಿಟ್ಟುಹೋದನು'–ಎಂದು ಹೇಳುವಿರೋ? ಅದೂ ಸರಿಯಲ್ಲ. ಏಕೆಂದರೆ : ಗಾಢನಿದ್ರೆಯ ಸಮಯದಲ್ಲಿ ಪ್ರಾಣನು ಇದ್ದರೂ ಆತನು ಮಾತನಾಡುವುದೂ ಇಲ್ಲ–ಕೇಳುವುದೂ ಇಲ್ಲ. ಶರೀರದಲ್ಲಿ ಎಲ್ಲ ಇಂದ್ರಿಯಗಳ ಚೇಷ್ಟೆಗಳಿಗೂ ಕಾರಣವಾಗಿರುವ ಯಾವ ಮಹಾಪ್ರಾಣ ವುಂಟೋ ಅದು ಮುಖ್ಯವಸ್ತುವಾಗಿದ್ದರೂ ಕೇಳುವುದು ಮತ್ತು ಮಾತ ನಾಡುವುದು ಆ ಪ್ರಾಣವಲ್ಲ. ಏಕೆಂದರೆ : ಪ್ರಾಣವು ಜಡವಸ್ತುವು. ದೇಹ ಮತ್ತು ಇಂದ್ರಿಯಗಳ ಮೂಲಕ ಎಲ್ಲ ಪದಾರ್ಥಗಳನ್ನೂ ದರ್ಶಿಸುತ್ತಿರುವ, ಎಲ್ಲದಕ್ಕೂ ಸಾಕ್ಷಿಯಾಗಿರುವ ಯಾವ ಆತ್ಮವುಂಟೋ–ಅದು ಶರೀರ ಮತ್ತು ಪ್ರಾಣ–ಇವೆರಡಕ್ಕಿಂತಲೂ ಬೇರೆಯಾದುದು. ಈ ಆತ್ಮನು ವ್ಯಾಪಕನು. ಪರಿಚ್ಛಿನ್ನನಲ್ಲ. ಆದರೂ ಪಂಚಭೂತ, ಇಂದ್ರಿಯ ಮತ್ತು ಮನಸ್ಸುಗಳಿಂದ ಕೂಡಿದ ದೇವ, ಮನುಷ್ಯ, ಪಶು, ಪಕ್ಷಿ ಇತ್ಯಾದಿ ರೂಪವಾದ ಉಚ್ಚ-ನೀಚ ಶರೀರಗಳನ್ನು ಧರಿಸುತ್ತಾನೆ ಮತ್ತು ತನ್ನ ವಿವೇಕಬಲದಿಂದ ಮುಕ್ತಿ ಯನ್ನೂ ಪಡೆಯುತ್ತಾನೆ. ವಾಸ್ತವವಾಗಿ ಆತನು ಇವೆಲ್ಲಕ್ಕಿಂತಲೂ ಭಿನ್ನನಾದವನು. ಆತನು ಎಲ್ಲಿಯವರೆಗೆ ಪಂಚಪ್ರಾಣಗಳು, ಪಂಚ ಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಬುದ್ಧಿ ಮತ್ತು ಮನಸ್ಸು–ಎಂಬ ಹದಿನೇಳು ತತ್ತ್ವಗಳಿಂದ ರಚಿತವಾದ ಲಿಂಗಶರೀರದೊಡನೆ ಕೂಡಿರುವನೋ–ಅಲ್ಲಿಯವರೆಗೂ ಕರ್ಮಗಳಲ್ಲಿ ಸಿಕ್ಕಿಕೊಂಡಿರುವನು. ಈ ಬಂಧನದ ಕಾರಣದಿಂದಲೇ ಮಾಯೆಯಿಂದುಂಟಾದ ಮೋಹ ಮತ್ತು ಕ್ಲೇಶ ಗಳು ನಿರಂತರವಾಗಿ ಆತನ ಬೆನ್ನುಹತ್ತಿರುವುದು. ಪ್ರಕೃತಿಯ ಗುಣಗಳನ್ನೂ ಮತ್ತು ಅವುಗಳಿಂದಾಗಿರುವ ವಸ್ತುಗಳನ್ನೂ ಪರಮಾರ್ಥವೆಂದು ತಿಳಿಯು

ವುದು ಅಥವಾ ಹೇಳುವುದು ವ್ಯರ್ಥವಾದ ಆಗ್ರಹ ಮತ್ತು ದುರಾಗ್ರಹ-ಇಂದ್ರಿಯಗಳಿಂದ ಗ್ರಹಿಸಲ್ಪಡುವುದೆಲ್ಲವೂ ಮನಸ್ಸಿನ ಮಂಡಿಗೆಗೂ ಕನಸಿನ ದೃಶ್ಯಗಳಿಗೂ ಸಮಾನವಾದುದು. ಅದು ಪಾರಮಾರ್ಥಿಕವಲ್ಲ. ಆದುದರಿಂದ ಶರೀರ ಮತ್ತು ಆತ್ಮ–ಇವುಗಳ ತತ್ತ್ವವನ್ನರಿತವನು ಶರೀರಕ್ಕಾಗಿಯೂ ಶೋಕಿಸುವುದಿಲ್ಲ ಮತ್ತು ಆತ್ಮಕ್ಕಾಗಿಯೂ ಶೋಕಪಡುವುದಿಲ್ಲ. ಏಕೆಂದರೆ: ಶರೀರವು ಅನಿತ್ಯವೇ ಆಗಿದೆಯೆಂಬುದೂ ಮತ್ತು ಆತ್ಮನು ನಿತ್ಯನೇ ಆಗಿದ್ದಾನೆ–ಎಂಬುದೂ ಆತನಿಗೆ ತಿಳಿದಿದೆ. ಆದರೆ ಜ್ಞಾನದಲ್ಲಿ ದೃಢತೆಯಿಲ್ಲದ ಕಾರಣ ಯಾರು ಶೋಕಪಡುತ್ತಾರೋ–ಅವರ ಸ್ವಭಾವವನ್ನು ಬದಲಾಯಿಸುವುದು ತುಂಬಾ ಕಷ್ಟ.

ಒಂದು ಅರಣ್ಯದಲ್ಲಿ ಒಬ್ಬ ಬೇಟೆಗಾರನಿದ್ದನು. ಆತನು ಅರಣ್ಯದ ಹಕ್ಕಿಗಳ ಪಾಲಿಗೆ (ವಿಧಿಯು ಸೃಷ್ಟಿಸಿ ಕಳುಹಿಸಿದ) ಯಮನೇ ಆಗಿದ್ದನು. ಅಲ್ಲಲ್ಲಿ ಬಲೆಯನ್ನು ಹರಡಿ ಹಕ್ಕಿಗಳಿಗೆ ಆಹಾರದ ಆಸೆ ತೋರಿಸಿ ಅವುಗಳನ್ನು ಬಲೆಯಲ್ಲಿ ಸಿಕ್ಕಿಸಿಕೊಳ್ಳುತ್ತಿದ್ದನು. ಒಂದು ದಿನ ಆತನು ಅಲ್ಲಿ ಒಂದು ಕುಲಿಂಗಪಕ್ಷಿಯ ಜೋಡಿಯು ಕಾಳು ತಿನ್ನುತ್ತಿರುವುದನ್ನು ಕಂಡನು. ಅವುಗಳಲ್ಲಿ ಅವನು ಹೆಣ್ಣುಹಕ್ಕಿಯನ್ನು ಶೀಘ್ರವಾಗಿ ಬಲೆಯಲ್ಲಿ ಹಿಡಿದುಬಿಟ್ಟನು. ಅದು ಕಾಲವಶದಿಂದ ಬಲೆಯಲ್ಲಿ ಸಿಕ್ಕಿಹಾಕಿಕೊಂಡು ಒದ್ದಾಡತೊಡಗಿತು. ತನ್ನ ಮಡದಿಯ ಆ ವಿಪತ್ತನ್ನು ಕಂಡು ಗಂಡುಹಕ್ಕಿಗೆ ಅಪಾರವಾದ ಶೋಕವುಂಟಾಯಿತು. ಅದಕ್ಕೆ ಆ ಹೆಣ್ಣುಹಕ್ಕಿಯನ್ನು ಬಿಡಿಸಲು ಸಾಧ್ಯವಾಗದಿದ್ದರೂ ಸ್ನೇಹವಶದಿಂದ ಅದಕ್ಕಾಗಿ ವಿಲಪಿಸತೊಡಗಿತು. 'ಈ ವಿಧಿಗೆ ಏನೂ ಬೇಕಾದರೂ ಮಾಡುವ ಶಕ್ತಿಯಿದೆ. ಆದರೆ ಈತನು ಅತ್ಯಂತ ನಿರ್ದಯನು. ದಯೆಯ ಲವಲೇಶವೂ ಇಲ್ಲದವನು. ನನ್ನ ಸಹಚಾರಿಣಿಯನ್ನು ಹೀಗೆ ಕಷ್ಟಕ್ಕೆ ಸಿಕ್ಕಿಸಿದನಲ್ಲಾ! ಮೊದಲನೆಯದಾಗಿ ಈಕೆಯು ಹೆಂಗಸು. ಇದಲ್ಲದೇ ದುರದೃಷ್ಟಶಾಲಿನಿಯಾದ ಈಕೆ ನನಗೋಸ್ಕರ ಶೋಕಪಡುತ್ತಾ ಅತಿದೈನ್ಯದಿಂದ ಒದ್ದಾಡುತ್ತಿದ್ದಾಳೆ. ಈ ಬಡಪಾಯಿಯನ್ನು ಹೀಗೆ ವಿಪತ್ತಿಗೆ ಸಿಕ್ಕಿಸಿರುವ ಈ ವಿಧಿಗೆ ಏನು ಪ್ರಯೋಜನ? ಹಾಗೆ ಕಾರಣವಿಲ್ಲದೇ ಕಷ್ಟಕೊಡುವುದೇ ಈತನ ಇಚ್ಛೆಯಾಗಿದ್ದರೆ ನನ್ನನ್ನೇ ಎತ್ತಿಕೊಂಡು ಹೋಗಲಿ. ಈಕೆಯನ್ನು ಬಿಟ್ಟು ನಾನು ದೈನ್ಯ.

ದುಃಖಗಳಿಂದ ಕೂಡಿದ ವಿಧುರನ ಜೀವನವನ್ನು ಹೇಗೆತಾನೇ ನಡೆಸಿಯೇನು? ಇನ್ನೂ ನನ್ನ ಮರಿಗಳ ರೆಕ್ಕೆಗಳೇ ಬಲಿತಿಲ್ಲ. ನನ್ನ ಈ ಮಡದಿಯು ಮೃತಳಾಗಿಬಿಟ್ಟರೆ ತಬ್ಬಲಿಗಳಾದ ಆ ಮಕ್ಕಳನ್ನು ನಾನು ಹೇಗೆತಾನೇ ಸಾಕಲಿ? ಅಯ್ಯೋ ಪಾಪ! ಗೂಡಿನಲ್ಲಿ ಆ ನನ್ನ ಮರಿಗಳು ಈಗ ತಾಯಿಯನ್ನು ಎದುರು ನೋಡುತ್ತಿರಬೇಕು!'–ಎಂದು ಚಿಂತೆಪಡುತ್ತಿತ್ತು. ಹೀಗೆ ತನ್ನ ಸಹಚಾರಿಣಿಯ ಅಗಲಿಕೆಯಿಂದ ಶೋಕದಲ್ಲಿ ಮುಳುಗಿದ ಆ ಗಂಡು ಹಕ್ಕಿಯು ವಿಲಪಿಸತೊಡಗಿತು. ಕಣ್ಣೀರಿನಿಂದ ಅದರ ಕಂಠವು ಕುಸಿದು ಧ್ವನಿಯೇ ಹೊರಡದಾಯಿತು. ಅದೇ ಸಮಯದಲ್ಲಿ ಹತ್ತಿರದಲ್ಲೇ ಅಡಗಿಕೊಂಡಿದ್ದ ಅದೇ ಬೇಟೆಗಾರನು–ಕಾಲನಿಂದ ಪ್ರೇರಿತನಾಗಿ–ಅದರ ಮೇಲೆ ಬಲವಾಗಿ ಬಾಣವೊಂದನ್ನು ಬಿಟ್ಟು ಅದು ಅಲ್ಲಿಯೇ ಸತ್ತು ಉರುಳುವಂತೆ ಮಾಡಿದನು.

ಎಲೈ ಮೂರ್ಖಸ್ತ್ರೀಯರೇ! ನಿಮ್ಮ ಸ್ಥಿತಿಯೂ ಹೀಗೆಯೇ ಆಗು ವುದು. ನಿಮ್ಮನ್ನೂ ಕೊಂಡೊಯ್ಯಲು ಕಾದಿರುವ ಮೃತ್ಯುವನ್ನು ನೀವು ನೋಡುತ್ತಿಲ್ಲ. ಅದಕ್ಕೇ ಇವನಿಗಾಗಿ ಹೀಗೆ ಅಳುತ್ತಾ ಎದೆ ಚಚ್ಚಿಕೊಳ್ಳು ತ್ತಿದ್ದೀರಿ. ನೀವು ಶೋಕಪರವಶರಾಗಿ ನೂರು ವರ್ಷಗಳವರೆಗೆ ಹೀಗೆಯೇ ಚಚ್ಚಿಕೊಳ್ಳುತ್ತಿದ್ದರೂ ಈತನನ್ನು ನೀವು ಪಡೆಯಲಾರಿರಿ."

ಹಿರಣ್ಯಕಶಿಪುವು ಮುಂದುವರಿದು ಹೇಳುತ್ತಾನೆ :

"ಆ ಚಿಕ್ಕ ಹುಡುಗನು ಆಡಿದ ಜ್ಞಾನಪೂರ್ಣವಾದ ಮಾತುಗಳನ್ನು ಕೇಳಿ ಎಲ್ಲರೂ ಆಶ್ಚರ್ಯದಲ್ಲಿ ಮುಳುಗಿಹೋದರು. ಈ ಎಲ್ಲ ಸಂಸಾರವೂ ಮತ್ತು ಸುಖ-ದುಃಖಗಳೂ ಅನಿತ್ಯ ಮತ್ತು ಅಪರಮಾರ್ಥಿಕ–ಎಂದು ಆ ರಾಜನ ನೆಂಟರಿಷ್ಟರಿಗೂ, ಹೆಂಡತಿಯರಿಗೂ ತಿಳಿಯಿತು. ಈ ಉಪಾಖ್ಯಾನವನ್ನು ಹೇಳಿಬಿಟ್ಟು ಯಮಧರ್ಮರಾಜನು ಅಲ್ಲಿಯೇ ಅಂತರ್ಧಾನಹೊಂದಿದನು. ಮೃತನಾಗಿದ್ದ ರಾಜನ ಬಂಧುಗಳೂ ಸಮಾಧಾನದಿಂದ ರಾಜನ ಮರಣಾನಂತರದ ಕರ್ಮಗಳನ್ನು ಮಾಡಿದರು. ಆದುದರಿಂದ ನೀವೂ ನಿಮಗೋಸ್ಕರವಾಗಲೀ, ಇತರರಿಗೋಸ್ಕರವಾಗಲೀ ಶೋಕಪಡಬೇಡಿರಿ. ಈ ಜಗತ್ತಿನಲ್ಲಿ

ಆತ್ಮನು ಯಾರು-ಆತನಿಂದ ಭಿನ್ನನಾದವನು ಯಾರು? ಸ್ವಕೀಯನು ಯಾರು-ಪರಕೀಯನು ಯಾರು? ಪ್ರಾಣಿಗಳಿಗೆ ಅಜ್ಞಾನದಿಂದಲೇ ಈ ತನ್ನವನು, ಪರಕೀಯನು-ಎಂಬ ದುರಾಗ್ರಹವು ಉಂಟಾಗಿದೆ. ಇದಕ್ಕೆ ಬೇರೇನೂ ಕಾರಣವಿಲ್ಲ."

ನಾರದರು ಹೇಳುತ್ತಾರೆ :

"ಎಲೈ ಯುಧಿಷ್ಠಿರನೇ! ಕೇಳು. ಹಿರಣ್ಯಕಶಿಪುವಿನ ಆ ಮಾತು ಗಳನ್ನು ಕೇಳಿ, ದಿತಿದೇವಿಯೂ ಮತ್ತು ಆಕೆಯ ಸೊಸೆಯೂ ಒಡನೆಯೇ ಬಂಧುಸಂಬಂಧವಾದ ಶೋಕವನ್ನು ತೊರೆದು ಪರತತ್ತ್ವಸ್ವರೂಪನಾದ ಪರಮಾತ್ಮನಲ್ಲಿ ಮನಸ್ಸನ್ನು ಇರಿಸಿದರು." (ಶ್ಲೋಕ 44-61)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಸಪ್ತಮಸ್ಕಂಧದ ೨ನೆಯ ಅಧ್ಯಾಯವು ಮುಗಿಯಿತು.

ಸಪ್ತಮಸ್ಕಂಧ ೩ನೆಯ ಅಧ್ಯಾಯ

ಹಿರಣ್ಯಕಶಿಪುವಿನ ತಪಸ್ಸು ಮತ್ತು ವರಪ್ರಾಪ್ತಿ

ನಾರದಮಹರ್ಷಿಗಳು ಪ್ರಹ್ಲಾದನ ಚರಿತ್ರೆಯನ್ನು ಮುಂದುವರಿಸುತ್ತಾ ಹೇಳುತ್ತಾರೆ :

ಹಿರಣ್ಯಕಶಿಪೂ ರಾಜನ್ನಜೇಯಮಜರಾಮರಮ್ ।
ಆತ್ಮಾನಮಪ್ರತಿದ್ವನ್ದ್ವಮೇಕರಾಜಂ ವ್ಯಧಿತ್ಸತ ॥೧॥

"ಎಲೈ ರಾಜೇಂದ್ರನೇ! ಕೇಳು. ಆ ಹಿರಣ್ಯಕಶಿಪುವು ತಾನು ಅಜೇಯನಾಗಬೇಕು. ಮುಪ್ಪು-ಸಾವುಗಳಿಲ್ಲದವನಾಗಬೇಕು. ಇಡೀ ಜಗತ್ತಿಗೆ ಏಕಚ್ಛತ್ರಾಧಿಪತಿಯಾಗಬೇಕು ಮತ್ತು ತನಗೆ ಯಾರೂ ಎದುರಾಳಿಗಳು ಇರದಂತೆ ಮಾಡಿಕೊಳ್ಳಬೇಕು-ಎಂದು ಸಂಕಲ್ಪಮಾಡಿದನು.

ಅದಕ್ಕಾಗಿ ಆತನು ಮಂದರಪರ್ವತದ ತಪ್ಪಲಿಗೆ ಹೋಗಿ ಅಲ್ಲಿ ಅತ್ಯಂತ ದಾರುಣವಾದ ತಪಸ್ಸನ್ನು ಆಚರಿಸತೊಡಗಿದನು. ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ಆಕಾಶದ ಕಡೆ ನೋಡುತ್ತಾ ಕಾಲಿನ ಹೆಬ್ಬೆರಳಿನ ಬಲದಿಂದ

ಭೂಮಿಯ ಮೇಲೆ ನಿಂತುಕೊಂಡನು. ಆಗ ಆತನ ತಲೆಯಲ್ಲಿದ್ದ ಜಟೆಗಳು ಪ್ರಳಯಕಾಲದ ಸೂರ್ಯನ ಕಿರಣಗಳಂತೆ ಥಳ-ಥಳಿಸುತ್ತಿದ್ದುವು. ಈ ರೀತಿಯಲ್ಲಿ ಅವನು ತಪಸ್ಸಿನಲ್ಲಿ ನಿರತನಾದಾಗ ದೇವತೆಗಳು ಹಿಂದಿನಂತೆ ತಮ್ಮ-ತಮ್ಮ ಸ್ಥಾನಗಳಲ್ಲಿ ನೆಲೆಗೊಂಡರು. ಹಿರಣ್ಯಕಶಿಪುವು ಬಹಳ ಕಾಲ ತಪಸ್ಸನ್ನು ಮಾಡಿದಾಗ ಆತನ ತಲೆಯಿಂದ ಹೊಗೆಯಿಂದ ಕೂಡಿದ ತಪೋಗ್ನಿಯು ಹೊರಬಂದು ಎಲ್ಲ ಕಡೆಯಲ್ಲಿಯೂ ಹರಡಿಕೊಂಡಿತು ಮತ್ತು ಮೇಲೂ, ಕೆಳಗೂ, ಅಕ್ಕ-ಪಕ್ಕಗಳಲ್ಲಿಯೂ ಇದ್ದ ಸಮಸ್ತಲೋಕ ಗಳನ್ನೂ ಸುಟ್ಟುಹಾಕತೊಡಗಿತು. ಅದರ ಜ್ವಾಲೆಯಿಂದ ನದಿಗಳೂ ಮತ್ತು ಸಮುದ್ರಗಳೂ ಕುದಿಯತೊಡಗಿದುವು. ದ್ವೀಪ ಮತ್ತು ಪರ್ವತಗಳಿಂದೊಡ ಗೂಡಿದ ಭೂಮಿಯು ನಡುಗತೊಡಗಿತು. ಗ್ರಹಗಳೂ ಮತ್ತು ಹತ್ತು ದಿಕ್ಕು ಗಳೂ ಉರಿಯತೊಡಗಿದುವು. ಸ್ವರ್ಗದಲ್ಲಿದ್ದ ದೇವತೆಗಳೂ ಸುಡತೊಡ ಗಿದರು. ಆಗ ಅವರು ಗಾಬರಿಗೊಂಡು ಬ್ರಹ್ಮಲೋಕಕ್ಕೆ ಹೋಗಿ ಬ್ರಹ್ಮ ದೇವರಲ್ಲಿ ಪ್ರಾರ್ಥಿಸಿಕೊಂಡರು : "ಎಲೈ ದೇವತಾಸಮಾರಾಧ್ಯನಾದ ಜಗದೀಶ್ವರನೇ! ನಾವು ಹಿರಣ್ಯಕಶಿಪುವು ಮಾಡುತ್ತಿರುವ ತಪಸ್ಸಿನ ಜ್ವಾಲೆ ಗಳಿಂದ ಸುಟ್ಟುಹೋಗುತ್ತಿದ್ದೇವೆ. ಸ್ವರ್ಗದಲ್ಲಿರಲು ನಮಗೆ ಸಾಧ್ಯವಾಗುತ್ತಿಲ್ಲ. ಎಲೈ ಅನಂತನೇ! ಸರ್ವಾಧ್ಯಕ್ಷನೇ! ನಿನಗೆ ಉಚಿತವೆನಿಸಿದರೆ ನಿನ್ನ ಸೇವೆ ಮಾಡುತ್ತಿರುವ ಜನಸಮಾಹವೆಲ್ಲವೂ ನಾಶಹೊಂದುವುದಕ್ಕೆ ಮೊದಲೇ ಈ ಜ್ವಾಲೆಯನ್ನು ಶಾಂತಗೊಳಿಸಿಬಿಡು. (ಶ್ಲೋಕ 2-7)

ಎಲೈ ಭಗವಂತನೇ! ನೀನು ಸರ್ವಜ್ಞನು. ಆದರೂ ಆತನು ಯಾವ ಅಭಿಪ್ರಾಯದಿಂದ ಹೀಗೆ ತಪಸ್ಸನ್ನಾಚರಿಸುತ್ತಿದ್ದಾನೆ ಎಂಬುದನ್ನು ನಮ್ಮ ಕಡೆಯಿಂದ ಅರಿಕೆಮಾಡಿಕೊಳ್ಳುತ್ತೇವೆ ; ಕೇಳೋಣವಾಗಲಿ.

'ಬ್ರಹ್ಮದೇವರು ತಮ್ಮ ತಪಸ್ಸು ಮತ್ತು ಯೋಗಗಳ ಪ್ರಭಾವದಿಂದ ಈ ಚರಾಚರಜಗತ್ತನ್ನು ಸೃಷ್ಟಿಮಾಡಿ ಎಲ್ಲ ಲೋಕಗಳಿಗೂ ಮೇಲಿರುವ ಸತ್ಯ ಲೋಕದಲ್ಲಿ ಬೆಳಗುತ್ತಿರುವಂತೆ–ನಾನೂ ಕೂಡ ನನ್ನ ಉಗ್ರವಾದ ತಪಸ್ಸಿನ ಮತ್ತು ಯೋಗದ ಪ್ರಭಾವದಿಂದ ಅದೇ ಪದವನ್ನು ಮತ್ತು ಸ್ಥಾನವನ್ನು ಗಳಿಸಬೇಕು. ಅಷ್ಟು ತಪಸ್ಸು ಮತ್ತು ಯೋಗಗಳನ್ನು ಪಡೆಯಲು ಕಾಲ

ವೆಲ್ಲಿದೆ? ಕಾಲವು ಅನಂತವಾಗಿದೆ ಮತ್ತು ಆತ್ಮವು ನಿತ್ಯವಾಗಿದೆ. ಒಂದು ಜನ್ಮದಲ್ಲಿ ಆಗದಿದ್ದರೆ ಅನೇಕಜನ್ಮಗ್ರಳಲ್ಲಾದರೂ, ಒಂದು ಯುಗದಲ್ಲಿ ಆಗ ದಿದ್ದರೆ ಮತ್ತೊಂದು ಯುಗದಲ್ಲಾದರೂ ಅದನ್ನು ಗಳಿಸಿಯೇ ಗಳಿಸುವೆನು. ನನ್ನ ತಪಸ್ಸಿನ ಶಕ್ತಿಯಿಂದ ನಾನು ಪಾಪ-ಪುಣ್ಯಗಳ ನಿಯಮಗಳನ್ನು ತಲೆಕೆಳಗು ಮಾಡುವೆನು. ಈ ಜಗತ್ತಿನಲ್ಲಿ ಹಿಂದೆ ಎಂದೂ ಇಲ್ಲದೇ ಇದ್ದಷ್ಟು ಮಟ್ಟಿಗೆ ಕ್ರಾಂತಿಯನ್ನೂ-ಬದಲಾವಣೆಯನ್ನೂ ಮಾಡಿಬಿಡುವೆನು. ವೈಷ್ಣ ವಾದಿ ಲೋಕಗಳಲ್ಲಾದರೂ ಏನು ಮಹಿಮೆಯಿದ್ದೀತು?* ಕಲ್ಪದ ಕೊನೆ ಯಲ್ಲಿ ಅವೂ ಕೂಡ ಕಾಲದ ದವಡೆಯಲ್ಲಿ ಸೇರಿಕೊಂಡು ಬಿಡುವುವು'– ಎಂಬುದು ಆತನ ವಿಚಾರವಾಗಿದೆ. ಈ ಹಠದಿಂದಲೇ ಆತನು ಘೋರವಾದ ತಪಸ್ಸನ್ನು ಆಚರಿಸುತ್ತಿದ್ದಾನೆ. ನೀವು ಮೂರು ಲೋಕಗಳಿಗೂ ಸ್ವಾಮಿ ಗಳಾಗಿದ್ದೀರಿ. ಈ ಪರಿಸ್ಥಿತಿಯಲ್ಲಿ ನಿಮಗೆ ಏನು ಉಚಿತವೆನಿಸುವುದೋ ಅದನ್ನು ಮಾಡಿರಿ. ಬ್ರಹ್ಮದೇವರೇ! ತಮ್ಮ ಈ ಸರ್ವಶ್ರೇಷ್ಠವಾದ ಪರಮೇಷ್ಠಿ ಪದವಿಯು ಇರುವುದು ಬ್ರಾಹ್ಮಣರ ಮತ್ತು ಗೋವುಗಳ ಅಭ್ಯುದಯಕ್ಕಾಗಿ, ಕಲ್ಯಾಣಕ್ಕಾಗಿ, ಸಂಪತ್ತಿಗಾಗಿ, ಕುಶಲತೆಗಾಗಿ ಮತ್ತು ವಿಜಯಕ್ಕಾಗಿ. ಆ ಪದವಿಯೇನಾದರೂ ಹಿರಣ್ಯಕಶಿಪುವಿನ ಕೈಗೆ ಸಿಕ್ಕಿಬಿಟ್ಟರೆ ಸಜ್ಜನರ ಮೇಲೆ ಸಂಕಟಗಳ ಪರ್ವತವೇ ಬಿದ್ದಂತೆ ಆಗುವುದು."

ದೇವತೆಗಳಿಂದ ಹೀಗೆ ಪ್ರಾರ್ಥಿಸಲ್ಪಟ್ಟ ಬ್ರಹ್ಮದೇವರು ಭೃಗು-ದಕ್ಷರೇ ಮುಂತಾದ ಪ್ರಜಾಪತಿಗಳೊಡನೆ ಹಿರಣ್ಯಕಶಿಪುವಿನ ಆಶ್ರಮಕ್ಕೆ ಹೋದರು. ಅಲ್ಲಿಗೆ ಹೋದಾಗ ಅವರಿಗೆ ಮೊದಲು ಆತನು ಕಣ್ಣುಗಳಿಗೆ ಬೀಳಲೇ ಇಲ್ಲ. ಏಕೆಂದರೆ : ಹುತ್ತದ ಮಣ್ಣು, ಹುಲ್ಲು ಮತ್ತು ಬಿದಿರುಮೆಳೆಗಳಿಂದ ಆತನ ದೇಹವು ಮುಚ್ಚಿಹೋಗಿತ್ತು. ಇರುವೆಗಳು ಆತನ ದೇಹದ ಮೇದಸ್ಸು, ಚರ್ಮ, ಮಾಂಸ ಮತ್ತು ರಕ್ತಗಳನ್ನು ಕಬಳಿಸಿಬಿಟ್ಟಿದ್ದುವು. ಮೋಡಗಳು

---

* ವೈಷ್ಣವಪದಗಳೆಂದರೆ : ವೈಕುಂಠಾದಿ ದಿವ್ಯಧಾಮಗಳು. ಅಳಿವಿಲ್ಲದ ಸ್ಥಾನಗಳು. ಆದರೆ ಹಿರಣ್ಯಕಶಿಪುವು ತನ್ನ ಆಸುರೀಬುದ್ಧಿಯಿಂದ ಅಳೆಯುತ್ತಾ ಅವು ಕಲ್ಪಕಾಲ ದವರೆಗೆ ಮಾತ್ರ ಇದ್ದು ಅನಂತರ ಒಡನೆಯೇ ನಷ್ಟವಾಗಿಬಿಡುವುವು–ಎಂದು ವ್ಯಾಖ್ಯಾನಮಾಡಿದ್ದಾನೆ ಅಥವಾ ಪ್ರಾಕೃತವೈಕುಂಠವನ್ನೇ ಅಪ್ರಾಕೃತ ವೈಕುಂಠವೆಂದು ಭ್ರಮೆಯಿಂದ ಆತನು ಹೀಗೆ ಹೇಳುತ್ತಿದ್ದಾನೆ. (ಶ್ಲೋಕ 11)

ಮುಚ್ಚಿರುವ ಸೂರ್ಯನಂತೆ–ಆತನು ತನ್ನ ತಪಸ್ಸಿನ ತೇಜಸ್ಸಿನಿಂದ ಲೋಕಗಳೆಲ್ಲವನ್ನೂ ಸುಟ್ಟುಹಾಕುತ್ತಿದ್ದನು. ಆತನನ್ನು ನೋಡಿ ಬ್ರಹ್ಮದೇವರಿಗೆ ಆಶ್ಚರ್ಯವುಂಟಾಯಿತು. ಅವರು ನಗುತ್ತಾ ಆತನಿಗೆ ಹೀಗೆಂದರು : "ವತ್ಸ! ಹಿರಣ್ಯಕಶಿಪುವೇ! ಏಳು, ಮೇಲೇಳು. ನಿನಗೆ ಮಂಗಳವಾಗಲಿ. ಕಶ್ಯಪಪುತ್ರನೇ! ಈಗ ನಿನ್ನ ತಪಸ್ಸು ಸಿದ್ಧಿಸಿದೆಯಪ್ಪಾ. ನಾನು ನಿನಗೆ ವರಗಳನ್ನು ಕೊಡಲೆಂದೇ ಬಂದಿದ್ದೇನೆ. ನಿನಗೆ ಇಚ್ಛೆಬಂದ ವರವನ್ನು ಕೇಳಿಕೋ. ಎಂತಹ ಅದ್ಭುತವಾದ ತಪಸ್ಸು ನಿನ್ನದು! ಸೊಳ್ಳೆ, ತಿಗಣೆ ಮುಂತಾದುವು ನಿನ್ನ ದೇಹವನ್ನೆಲ್ಲಾ ತಿಂದುಹಾಕಿಬಿಟ್ಟಿವೆ. ಅಸ್ಥಿಪಂಜರದ ಆಧಾರದಿಂದ ಮಾತ್ರವೇ ನಿನ್ನ ಪ್ರಾಣ ಉಳಿದಿದೆ. ಇಂತಹ ಕಠಿನವಾದ ತಪಸ್ಸನ್ನು ಯಾವ ಋಷಿಯೂ ಹಿಂದೆ ಮಾಡಿರಲಿಲ್ಲ ; ಮುಂದೆಯೂ ಮಾಡಲಾರನು. ದೇವತೆಗಳ ಲೆಕ್ಕದ ಒಂದು ವರ್ಷ ಕಾಲದವರೆಗೆ ನಿನ್ನಂತೆ ನೀರನ್ನೂ ಕುಡಿಯದೇ ಯಾವನು ತಾನೇ ಬದುಕಿರಲು ಸಾಧ್ಯ? ಅತ್ಯಂತ ಧೀರರಾದ ಮನುಷ್ಯರಿಗೂ ಕೂಡ ಅತಿಕಷ್ಟದಿಂದ ತಾನೇ ಇಂತಹ ತಪಸ್ಸನ್ನಾಚರಿಸಲು ಸಾಧ್ಯವಾಗುವುದು? ಈ ತಪೋನಿಷ್ಠೆಯಿಂದ ನೀನು ನನ್ನನ್ನು ವಶಪಡಿಸಿಕೊಂಡುಬಿಟ್ಟಿದ್ದೀಯೆ. ದೈತ್ಯಶಿರೋಮಣಿಯೇ! ಇದರಿಂದ ಪ್ರಸನ್ನನಾಗಿರುವ ನಾನು ನೀನು ಯಾವ ವರವನ್ನು ಬೇಡಿದರೂ ಅದನ್ನು ಕೊಡಲು ಸಿದ್ಧನಾಗಿದ್ದೇನೆ. ನೀನು ಮರಣಹೊಂದುವ ಧರ್ಮವುಳ್ಳವನು. ನಾನು ಅಮರನು. ಆದುದರಿಂದ ನಿನಗೆ ನನ್ನ ದರ್ಶನವು ನಿಷ್ಫಲವಾಗಲಾರದು." (ಶ್ಲೋಕ 8-21)

ನಾರದಮಹರ್ಷಿಗಳು ಧರ್ಮರಾಜನಿಗೆ ಹೇಳುತ್ತಿದ್ದಾರೆ :

ಎಲೈ ಯುಧಿಷ್ಠಿರನೇ! ಇಷ್ಟು ಹೇಳಿ ಬ್ರಹ್ಮದೇವರು ಇರುವೆಗಳಿಂದ ತಿನ್ನಲ್ಪಟ್ಟಿದ್ದ ಹಿರಣ್ಯಕಶಿಪುವಿನ ದೇಹದ ಮೇಲೆ ತಮ್ಮ ಕಮಂಡಲುವಿನಲ್ಲಿದ್ದ ದಿವ್ಯವೂ, ಅಮೋಘವೂ ಆದ ನೀರನ್ನು ಚುಮುಕಿಸಿದರು. ಆ ನೀರಿನ ಸ್ಪರ್ಶವಾದೊಡನೆಯೇ ಹಿರಣ್ಯಕಶಿಪುವು ಬಿದಿರುಮೆಳೆ ಮತ್ತು ಹುತ್ತಗಳ ಮಣ್ಣಿನ ಮಧ್ಯದಿಂದ ಮೇಲೆದ್ದುನಿಂತನು. ಆಗ ಆತನ ಶರೀರವು ಎಲ್ಲ ಅವಯವಗಳಿಂದಲೂ ಪೂರ್ಣವಾಗಿತ್ತು. ಬಲಸಂಪನ್ನವಾಗಿತ್ತು. ಮನಸ್ಸು-ಇಂದ್ರಿಯಗಳಲ್ಲಿ ಶಕ್ತಿಯು ತುಂಬಿಕೊಂಡಿತ್ತು. ಅಂಗಗಳು ವಜ್ರ

ದಂತೆ ಗಟ್ಟಿಯಾಗಿ ಪುಟ್ಟವಿಟ್ಟ ಚಿನ್ನದಂತೆ ಥಳ-ಥಳಿಸುತ್ತಿದ್ದುವು. ನವತಾರುಣ್ಯದ ಮೂರ್ತಿಯಾಗಿ ಆತನು ಎದ್ದುನಿಂತನು. ತನ್ನ ಮುಂದೆ ಆಕಾಶದಲ್ಲಿ ಹಂಸವಾಹನವನ್ನು ಏರಿ ಕುಳಿತಿರುವ ಬ್ರಹ್ಮದೇವರು ಆತನಿಗೆ ಕಾಣಿಸಿದರು. ಭೂಮಿಯ ಮೇಲೆ ತಲೆಯನ್ನಿರಿಸಿ ಆತನು ಅವರಿಗೆ ನಮಸ್ಕಾರಮಾಡಿದನು. ಮೇಲೆದ್ದು ಬದ್ಧಾಂಜಲಿಯಾಗಿ ವಿನಯದಿಂದ ಎವೆಮುಚ್ಚದ ಕಣ್ಣುಗಳಿಂದ ಆ ದೇವರನ್ನೇ ದಿಟ್ಟಿಸುತ್ತಾ ಗದ್ಗದವಾದ ಕಂಠದಿಂದ ಅವರನ್ನು ಸ್ತುತಿಸತೊಡಗಿದನು. ಆತನ ಕಣ್ಣುಗಳಿಂದ ಆನಂದ ಬಾಷ್ಪಗಳು ಉಕ್ಕಿಬರುತ್ತಿದ್ದುವು ಮತ್ತು ಇಡೀ ಶರೀರವು ಪುಳಕಿತವಾಗಿತ್ತು.

(ಶ್ಲೋಕ 22-25)

ಹಿರಣ್ಯಕಶಿಪುವು ಮಾಡಿದ ಬ್ರಹ್ಮಸ್ತುತಿ :

ಕಲ್ಪಾನ್ತೇ ಕಾಲಸೃಷ್ಟೇನ ಯೋಽನ್ಧೇನ ತಮಸಾವೃತಮ್ ।
ಅಭಿವ್ಯನಗ್ಜಗದಿದಂ ಸ್ವಯಂಜ್ಯೋತಿಃ ಸ್ವರೋಚಿಷಾ ॥೨೬॥

“ಪ್ರಭೋ! ಮಹಾಪ್ರಳಯಕಾಲದ ಕೊನೆಯಲ್ಲಿ ಈ ಇಡೀ ಸೃಷ್ಟಿಯು ಕಾಲದಿಂದ ಪ್ರೇರಿತವಾದ ತಮೋಗುಣದಿಂದ ಕಗ್ಗತ್ತಲೆಯಲ್ಲಿ ಮುಚ್ಚಿ ಹೋಗಿತ್ತು. ಆಗ ಸ್ವಯಂಪ್ರಕಾಶರೂಪನಾದ ನೀನೇ ನಿನ್ನ ತೇಜಸ್ಸಿನಿಂದ ಅದನ್ನು ಮತ್ತೆ ಪ್ರಕಟಗೊಳಿಸಿದೆ.*

---

* ಹಿರಣ್ಯಕಶಿಪುವು ತಾಮಸಪ್ರಕೃತಿಯವನಾದುದರಿಂದ ಬ್ರಹ್ಮದೇವರನ್ನೇ ಪರಮಾತ್ಮನೆಂದು ಸ್ತುತಿಸುತ್ತಾನೆ ಅಥವಾ ಪರಮಾತ್ಮನ ಧರ್ಮವನ್ನು ಬ್ರಹ್ಮದೇವರಲ್ಲಿ ಆರೋಪಿಸಿ ಸ್ತುತಿಸುತ್ತಿದ್ದಾನೆ–ಎಂದು ತಿಳಿಯಬೇಕು. '**ತಾಮಸತ್ವಾದ್ಬ್ರಹ್ಮಾಣ ಮೇವ ಸರ್ವಕಾರಣಂ ಸರ್ವೇಶ್ವರಂ ಮತ್ವಾ ಸ್ತೌತಿ । ಯದ್ವಾ ಪರಮೇಶ್ವರಧರ್ಮಾರೋಪೇಣ ಸ್ತುತಿಃ ॥**'

(ವೀರರಾಘವೀಯ)

ಈ ಸ್ತುತಿಯಲ್ಲಿ ಚತುರ್ಮುಖದೇವರಲ್ಲಿ ನಿಜವಾಗಿಯೂ ಯಾವ ಗುಣಗಳು ಸಂಭವಿಸುವುದಿಲ್ಲವೋ–ಆ ಗುಣಗಳನ್ನು ಅವರಲ್ಲಿ ಅಂತರ್ಯಾಮಿಯಾಗಿರುವ ಸರ್ವೋತ್ತಮನಾದ ಶ್ರೀಹರಿಯಲ್ಲಿ ಯೋಜನೆಮಾಡಬೇಕು. ಬ್ರಹ್ಮದೇವರೊಡನೆ ಏಕಕಾರ್ಯವನ್ನು ಹೊಂದಿ ಅವರೊಡನೆ ಒಂದೇ ಸ್ಥಾನದಲ್ಲಿ ಶ್ರೀಹರಿಯು ಇರುವುದರಿಂದ ಹೀಗೆ ಅನ್ವಯಿಸಿಕೊಳ್ಳಬೇಕು. ಬ್ರಹ್ಮದೇವರಿಗೇ ಯೋಗ್ಯವಾಗಿರುವ ಗುಣಗಳು ಸ್ತೋತ್ರದಲ್ಲಿದ್ದರೆ ಅವುಗಳನ್ನು ಬ್ರಹ್ಮದೇವರಿಗೇ ಅನ್ವಯಿಸಿಕೊಳ್ಳಬೇಕು. ಇಷ್ಟು ಮಾತ್ರದಿಂದಲೇ ಸ್ತೋತ್ರಕ್ಕೆ ಅಧಿಕರಣಗಳು ಬೇರೆ ಬೇರೆ ಎಂದು

ಆತ್ಮನಾ ತ್ರಿವೃತಾ ಚೇದಂ ಸೃಜತ್ಯವತಿ ಲುಮ್ಪತಿ ।
ರಜಃಸತ್ತ್ವತಮೋಧಾಮ್ನೇ ಪರಾಯ ಮಹತೇ ನಮಃ ॥೨೮॥

ನೀನೇ ನಿನ್ನ ತ್ರಿಗುಣಮಯವಾದ ರೂಪದಿಂದ ಅಥವಾ ತೇಜಸ್ಸು ನೀರು ಮತ್ತು ಪೃಥಿವಿಗಳ ಮಿಶ್ರಣದಿಂದ ಈ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳನ್ನು ಮಾಡುತ್ತೀಯೆ. ರಜೋಗುಣ, ಸತ್ತ್ವಗುಣ ಮತ್ತು ತಮೋಗುಣಗಳೆಂಬ ಈ ಮೂರು ಗುಣಗಳಿಗೆ ನೀನೇ ಆಶ್ರಯನು. ಎಲ್ಲರಿಗಿಂತಲೂ ಶ್ರೇಷ್ಠನು ಮತ್ತು ಎಲ್ಲರಿಗಿಂತಲೂ ದೊಡ್ಡವನು ನೀನು. ಇಂತಹ ನಿನಗೆ ನಮಸ್ಕಾರವು.*

ನಮ ಆದ್ಯಾಯ ಬೀಜಾಯ ಜ್ಞಾನವಿಜ್ಞಾನಮೂರ್ತಯೇ ।
ಪ್ರಾಣೇನ್ದ್ರಿಯಮನೋಬುದ್ಧಿವಿಕಾರೈರ್ವ್ಯಕ್ತಿಮೀಯುಷೇ ॥೨೯॥

ಜಗತ್ತಿಗೆ ಮೂಲಕಾರಣನಾದ ನಿನಗೆ ನಮಸ್ಕಾರವು. ಜ್ಞಾನ ವಿಜ್ಞಾನಮೂರ್ತಿಯಾದ ನಿನಗೆ ನಮಸ್ಕಾರವು. ಪ್ರಾಣ, ಇಂದ್ರಿಯ, ಮನಸ್ಸು, ಬುದ್ಧಿ–ಇವೇ ಮುಂತಾದ ವಿಕಾರಗಳಿಂದ ಪ್ರಕಟಗೊಳ್ಳುವ ನಿನಗೆ ನಮಸ್ಕಾರವು.

ತ್ವಮೀಶಿಷೇ ಜಗತಸ್ತಸ್ಥುಷಶ್ಚ
ಪ್ರಾಣೇನ ಮುಖ್ಯೇನ ಪತಿಃ ಪ್ರಜಾನಾಮ್ ।

ತಿಳಿಯಬಾರದು. ಏಕೆಂದರೆ : ಬ್ರಹ್ಮದೇವರು ಶ್ರೀಹರಿಗೆ ಅಧೀನರಾಗಿ ಆತನ ಶ್ರವಣಗಳಿಂದ ಅಂತಃಕರಣದ ಉಲ್ಲಾಸವನ್ನು ಹೊಂದಿದ್ದಾರೆ. 'ವಿಷ್ಣುವು ಬ್ರಹ್ಮದೇವರಿಗಿಂತಲೂ ಅಧಿಕನೆಂದು ತಿಳಿದಿದ್ದರೂ ಹಿರಣ್ಯಕಶಿಪುವು ವಿಷ್ಣುವು ಬ್ರಹ್ಮಾಂತರ್ಗತನಾಗಿ ಇರುವುದರಿಂದ ಹಾಗೆ ವಿಷ್ಣುಗುಣಗಳಿಂದ ಅವರನ್ನು ಸ್ತುತಿಸುತ್ತಾನೆ.

ಬ್ರಹ್ಮಣೋಽಪ್ಯಧಿಕಂ ವಿಷ್ಣುಂ ಜಾನನ್ನಪಿ ಹಿರಣ್ಯಕಃ ।
ಬ್ರಹ್ಮಾಣಂ ತದ್ಗುಣೈಃ ಸ್ತೌತಿ ತಸ್ಯವಿಷ್ಣುವಿವಕ್ಷಯಾ ॥
ಎಂದು ಆಚಾರ್ಯರು ಹೇಳುತ್ತಾರಲ್ಲವೇ! (ವಿಜಯಧ್ವಜೀಯ)

* **ಮಹತೇ=** ಮಹತ್ತತ್ತ್ವಾಭಿಮಾನಿಯಾಗಿ ಪರನಾಗಿರುವ, ಅಂದರೆ ರುದ್ರದೇವರಿಗಿಂತಲೂ ಶ್ರೇಷ್ಠನಾಗಿರುವ ಶ್ರೀಭಗವಂತನಾದ ನಿನಗೆ ಎಂದು ಅರ್ಥ.
(ವಿಜಯಧ್ವಜೀಯ)

ಮಹತೇ = ಹೇರಳವಾದ ಗುಣಗಳಿಗೆ ಆಶ್ರಯನಾದ. (ವೀರರಾಘವೀಯ)

ಚಿತ್ತಸ್ಯ ಚಿತ್ತೇರ್ಮನಇನ್ದ್ರಿಯಾಣಾಂ
ಪತಿರ್ಮಹಾನ್ಭೂತಗುಣಾಶಯೇಶಃ ॥೨೯॥

ಸೂತ್ರಾತ್ಮನಾದ ಮುಖ್ಯಪ್ರಾಣನೊಡನೆ ಕೂಡಿ ನೀನು ಚರಾಚರಾತ್ಮಕವಾದ ಜಗತ್ತನ್ನು ನಿಯಮಿಸುವ ಪ್ರಭುವಾಗಿದ್ದೀಯೆ. ಚಿತ್ತ, ಚೇತನ, ಮನಸ್ಸು ಮತ್ತು ಇಂದ್ರಿಯಗಳ ಸ್ವಾಮಿಯೂ ನೀನೇ. ಪಂಚಭೂತಗಳು, ಶಬ್ದ-ಸ್ಪರ್ಶಾದಿವಿಷಯಗಳು ಮತ್ತು ಅವುಗಳ ಸಂಸ್ಕಾರಗಳನ್ನು ರಚಿಸುವ ಮಹಾಪ್ರಭುವೂ ನೀನೇ ಆಗಿದ್ದೀಯೆ.*

ತ್ವಂ ಸಪ್ತತನ್ತೂನ್ವಿತನೋಷಿ ತನ್ವಾ
ತ್ರಯ್ಯಾ ಚಾತುರ್ಹೋತ್ರಕವಿದ್ಯಯಾ ಚ ।
ತ್ವಮೇಕ ಆತ್ಮಾತ್ಮವತಾಮನಾದಿ-
ರನನ್ತಪಾರಃ ಕವಿರನ್ತರಾತ್ಮಾ ॥೩೦॥

ವೇದರೂಪವಾದ ಶರೀರದಿಂದಲೂ ಮತ್ತು ಹೋತಾ, ಅಧ್ವರ್ಯು, ಬ್ರಹ್ಮಾ ಮತ್ತು ಉದ್ಗಾತಾ ಎಂಬ ನಾಲ್ಕು ಮಂದಿ ಋತ್ವಿಜರಿಂದ ನೆರವೇರಿಸಲ್ಪಡುವ ವಿದ್ಯೆಯಿಂದಲೂ ಅಗ್ನಿಷ್ಟೋಮವೇ ಮುಂತಾದ ಏಳು ಯಜ್ಞಗಳನ್ನು ವಿಸ್ತರಿಸುವವನು ನೀನೇ. ಎಲ್ಲ ಪ್ರಾಣಿಗಳಿಗೂ ನೀನೇ ಆತ್ಮವು. ಏಕೆಂದರೆ : ನೀನು ಅನಾದಿಯೂ, ಅನಂತನೂ, ಸರ್ವಜ್ಞನೂ ಮತ್ತು ಅಂತರ್ಯಾಮಿಯೂ ಆಗಿದ್ದೀಯೆ.[1]

---

* **ಚಿತ್ತಂ** = ಬುದ್ಧಿಃ (ವೀರರಾಘವೀಯ) ಸ್ಮರಣಶಕ್ತಿಯನ್ನು ಉಂಟುಮಾಡುವವನು ಅಥವಾ ಪ್ರಾಣಪ್ರದಾತೃವು (ವಿಜಯಧ್ವಜೀಯ) **ಪ್ರಾಣೇನ** = ಮುಖ್ಯ ಪ್ರಾಣನಿಂದ ಉಪಲಕ್ಷಿತನಾದ, ಅಂದರೆ : ಮುಖ್ಯಪ್ರಾಣಕ್ಕೂ ನಿರ್ವಾಹಕನಾಗಿರುವ (ವೀರರಾಘವೀಯ) ಮುಖ್ಯಪ್ರಾಣನೊಡನೆ (ವಿಜಯಧ್ವಜೀಯ)

1 **ಸಪ್ತತಂತೂನ್** = ಏಳು ಬಗೆಯ ವೈದಿಕಕರ್ಮಗಳನ್ನು ತನ್ಯನ್ತೇ, ವಿಸ್ತಾರ್ಯನ್ತೇ ಇತಿ ತಂತವಃ –ಅಧ್ವರ್ಯು, ಉದ್ಗಾತೃ, ಹೋತೃ, ಪ್ರಸ್ತೋತೃ, ಪ್ರತಿಹರ್ತೃ, ಬ್ರಹ್ಮಾ ಯಜಮಾನ ಎಂಬ ಏಳು ವೈದಿಕಪ್ರಯೋಗಗಳ ಅಥವಾ ಪಶುಸೋಮೇಷ್ಟಿ ಸತ್ರಾಹೀನಹೋಮೇಷ್ಟಕಚಿದಗ್ನಿಗಳೆಂಬ ಏಳು ರೂಪಗಳುಳ್ಳ ವೈದಿಕಕ್ರಿಯೆಗಳನ್ನು (ವೀರರಾಘವೀಯ)

ತ್ವಮೇವ ಕಾಲೋಽನಿಮಿಷೋ ಜನಾನಾ-
ಮಾಯುರ್ಲವಾದ್ಯಾವಯವೈಃ ಕ್ಷಿಣೋಷಿ ।
ಕೂಟಸ್ಥ ಆತ್ಮಾ ಪರಮೇಷ್ಠ್ಯಜೋ ಮಹಾಂ-
ಸ್ತ್ವಂ ಜೀವಲೋಕಸ್ಯ ಚ ಜೀವ ಆತ್ಮಾ ॥೩೧॥

ಕಾಲರೂಪಿಯಾಗಿ ನೀನೇ ಸದಾ ಎವೆಮುಚ್ಚದೇ ಎಚ್ಚರವಾಗಿರುತ್ತಾ ಕ್ಷಣ, ಲವ ಮುಂತಾದ ಕಾಲವಿಭಾಗಗಳ ಮೂಲಕ ಜನರ ಆಯುಷ್ಯವು ಕ್ಷಯಹೊಂದುವಂತೆ ಮಾಡುವೆ. ಹೀಗೆ ಮಾಡುತ್ತಿದ್ದರೂ ನೀನು ನಿರ್ವಿಕಾರನೇ ಆಗಿರುವೆ. ಏಕೆಂದರೆ : ನೀನು ಜ್ಞಾನಸ್ವರೂಪನು. ಪರಮ ಸ್ಥಾನದಲ್ಲಿರುವವನು. ಜನ್ಮರಹಿತನು ಮತ್ತು ಸಮಸ್ತಜೀವಗಳಿಗೂ ಜೀವನ ವನ್ನು ಕೊಡುವ ಅಂತರಾತ್ಮನು.*

ತ್ವತ್ತಃ ಪರಂ ನಾಪರಮಪ್ಯನೇಜ-
ದೇಜಚ್ಚ ಕಿಂಚಿದ್ವ್ಯತಿರಿಕ್ತಮಸ್ತಿ ।
ವಿದ್ಯಾಃ ಕಲಾಸ್ತೇ ತನವಶ್ಚ ಸರ್ವಾ
ಹಿರಣ್ಯಗರ್ಭೋಽಸಿ ಬೃಹತ್ತ್ರಿಪೃಷ್ಠಃ[1] ॥೩೨॥

ಮಹಾಪ್ರಭೋ! ಕಾರ್ಯರೂಪವಾದ ವಸ್ತುವಾಗಲೀ, ಕಾರಣರೂಪ ವಾದ ವಸ್ತುವಾಗಲೀ, ಚಲಿಸುವ ವಸ್ತುವಾಗಲೀ, ಚಲಿಸದೇ ಇರುವ ವಸ್ತು ವಾಗಲೀ–ಯಾವುದೂ ನಿನಗೆ ಹೊರತಾದುದಲ್ಲ. ನಿನಗೆ ಮಿಗಿಲಾದುದೂ

ಏಳು ಬಗೆಯ ಯಜ್ಞಗಳನ್ನು (ದ್ರವ್ಯ-ಮಂತ್ರ-ಕ್ರಿಯಾದೇವತೆಗಳಲ್ಲಿ ಇರುವುದರಿಂದ, ಹೊರಗಡೆಯಿಂದ ಉಪದೇಶವನ್ನು ಮಾಡುವುದರಿಂದ, ಕರ್ತೃವಾಗಿರುವುದರಿಂದ, ಮಾಡಿಸುವವನಾಗಿರುವುದರಿಂದ, ಶಸ್ತ್ರ, ಇಜ್ಯಾ, ಸ್ತುತಿ, ಪ್ರಾಯಶ್ಚಿತ್ತ ರೂಪವಾಗಿರು ವುದರಿಂದ) (ವಿಜಯಧ್ವಜೀಯ)

'ಯಜ್ಞಗಳನ್ನು' ಎಂದು (ವ್ಯಾಸತತ್ತ್ವತೀರ್ಥರ ಅಭಿಪ್ರಾಯ)

* ಕೂಟಸ್ಥಃ = ನಿರ್ವಿಕಾರಃ (ವೀರರಾಘವೀಯ ಮತ್ತು ವಿಜಯಧ್ವಜೀಯ)

1 ತ್ರಿಪೃಷ್ಠಃ = ಜಾಗ್ರತ್-ಸ್ವಪ್ನ-ಸುಷುಪ್ತಿಗಳೆಂಬ ಮೂರು ಅವಸ್ಥೆಗಳನ್ನೂ ಮೀರಿರುವವನು.
(ವಿಜಯಧ್ವಜೀಯ)

ಮೂರು ಲೋಕಗಳನ್ನೂ ದಾಟಿ ಪರಮವ್ಯೋಮದಲ್ಲಿ ನೆಲೆಸಿರುವವನು.
(ವೀರರಾಘವೀಯ ಮತ್ತು ಶ್ರೀಧರೀಯ)

ಇಲ್ಲ ಸಮಸ್ತವಿದ್ಯೆಗಳೂ ಮತ್ತು ಕಲೆಗಳೂ ನಿನ್ನ ಶರೀರಗಳೇ ಆಗಿವೆ. ತ್ರಿಗುಣಮಯವಾದ ಮಾಯೆಯನ್ನು ಮೀರಿರುವ ಅಥವ ಮೂರು ಲೋಕಗಳನ್ನೂ, ಮೂರು ಅವಸ್ಥೆಗಳನ್ನೂ ದಾಟಿ ಮೇಲೆ ಮೇಲೆ ನೆಲೆಸಿರುವ ಸ್ವಯಂ ಪರಬ್ರಹ್ಮವೇ ನೀನು. ಈ ಸ್ವರ್ಣಮಯವಾದ ಬ್ರಹ್ಮಾಂಡವು ನಿನ್ನ ಗರ್ಭದಲ್ಲೇ ಅಡಕವಾಗಿದೆ. ಆದುದರಿಂದ ನೀನು ಹಿರಣ್ಯಗರ್ಭನು. ನಿನ್ನಿಂದಲೇ ಇದನ್ನು ನೀನು ಪ್ರಕಟಪಡಿಸುತ್ತೀಯೆ.

ವ್ಯಕ್ತಂ ವಿಭೋ ಸ್ಥೂಲಮಿದಂ ಶರೀರಂ
ಯೇನೇನ್ದ್ರಿಯಪ್ರಾಣಮನೋಗುಣಾಂಸ್ತ್ವಮ್ ।
ಭುಂಕ್ಷೇ ಸ್ಥಿತೋ ಧಾಮನಿ ಪಾರಮೇಷ್ಠ್ಯೇ
ಅವ್ಯಕ್ತ ಆತ್ಮಾ ಪುರುಷಃ ಪುರಾಣಃ ॥೩೩॥

ಪ್ರಭುವೇ! ಈ ವ್ಯಕ್ತವಾಗಿರುವ ಬ್ರಹ್ಮಾಂಡವು ನಿನ್ನ ಸ್ಥೂಲಶರೀರವಾಗಿದೆ. ಇದರಿಂದ ನೀನು ಇಂದ್ರಿಯ, ಪ್ರಾಣ ಮತ್ತು ಮನಸ್ಸುಗಳ ವಿಷಯಗಳನ್ನು ಉಪಭೋಗಿಸುತ್ತಿರುವೆ. ಆದರೆ ಹೀಗೆ ಉಪಭೋಗಿಸುವಾಗಲೂ ನೀನು ನಿನ್ನ ಪರಮೈಶ್ವರ್ಯಮಯವಾದ ಸ್ವರೂಪದಲ್ಲಿಯೇ ನೆಲೆಗೊಂಡಿರುವೆ. ಏಕೆಂದರೆ : ವಾಸ್ತವವಾಗಿ ನೀನು ಪುರಾಣಪುರುಷನು. ಸ್ಥೂಲ-ಸೂಕ್ಷ್ಮಗಳನ್ನು ಮೀರಿರುವ ಬ್ರಹ್ಮಸ್ವರೂಪನೇ ಆಗಿದ್ದೀಯೆ.

ಅನನ್ತಾವ್ಯಕ್ತರೂಪೇಣ ಯೇನೇದಮಖಿಲಂ ತತಮ್ ।
ಚಿದಚಿಚ್ಛಕ್ತಿಯುಕ್ತಾಯ ತಸ್ಮೈ ಭಗವತೇ ನಮಃ ॥೩೪॥

ನೀನು ಅನಂತವೂ, ಅವ್ಯಕ್ತವೂ ಆಗಿರುವ ನಿನ್ನ ಸ್ವರೂಪದಿಂದ ಇಡೀ ಜಗತ್ತನ್ನು ವ್ಯಾಪಿಸಿಕೊಂಡಿದ್ದೀಯೇ. ಚೇತನ ಮತ್ತು ಅಚೇತನಗಳೆರಡೂ ನಿನ್ನ ಶಕ್ತಿಗಳೇ ಆಗಿವೆ. ಇಂತಹ ಓ ಶ್ರೀ ಭಗವಂತನೇ! ನಿನಗೆ ನಮಸ್ಕಾರವು.

ಯದಿ ದಾಸ್ಯಸ್ಯಭಿಮತಾನ್ವರಾನ್ಮೇ ವರದೋತ್ತಮ ।
ಭೂತೇಭ್ಯಸ್ತ್ವದ್ವಿಸೃಷ್ಟೇಭ್ಯೋ ಮೃತ್ಯುರ್ಮಾ ಭೂನ್ಮಮ ಪ್ರಭೋ ॥

ನಾನ್ತರ್ಬಹಿರ್ದಿವಾ ನಕ್ತಮನ್ಯಸ್ಮಾದಪಿ ಚಾಯುಧೈಃ ।
ನ ಭೂಮೌ ನಾಮ್ಬರೇ ಮೃತ್ಯುರ್ನ ನರೈರ್ನ ಮೃಗೈರಪಿ ॥೩೬॥

ವ್ಯಸುಭಿರ್ವಾಸುಮದ್ಭಿರ್ವಾ ಸುರಾಸುರಮಹೋರಗೈಃ ।
ಅಪ್ರತಿದ್ವನ್ದ್ವತಾಂ ಯುದ್ಧೇ ಐಕ್ಯಪತ್ಯಂ ಚ ದೇಹಿನಾಮ್ ॥೩೭॥

ವರವನ್ನು ದಯಪಾಲಿಸುವವರಲ್ಲಿ ಶ್ರೇಷ್ಠತಮನಾಗಿರುವ ಸ್ವಾಮಿಯೇ! ನೀನು ನನಗೆ ಅಭೀಷ್ಟವಾದ ವರಗಳನ್ನು ಅನುಗ್ರಹಿಸುವುದಾದರೆ–ನಾನು ಬಯಸುವ ವರಗಳು ಹೀಗಿವೆ : ನೀನು ಸೃಷ್ಟಿಸಿರುವ ಯಾವ ಪ್ರಾಣಿಯಿಂದಲೂ ನನಗೆ ಮರಣವುಂಟಾಗಬಾರದು. ಅದು ಮನುಷ್ಯನಾಗಲೀ, ಪಶುವಾಗಲೀ, ಪ್ರಾಣಿಯಾಗಿರಲೀ ಅಥವಾ ಅಪ್ರಾಣಿಯಾಗಿರಲೀ, ದೇವತೆಯಾಗಿರಲೀ, ದೈತ್ಯನಾಗಿರಲೀ ಅಥವಾ ನಾಗರೇ ಮುಂತಾದವರಾಗಿರಲೀ–ಯಾರಿಂದಲೂ ನನಗೆ ಸಾವು ಉಂಟಾಗಬಾರದು. ಒಳಗಾಗಲೀ-ಹೊರಗಾಗಲೀ, ಹಗಲಿನಲ್ಲಾಗಲೀ-ರಾತ್ರಿಯಲ್ಲಾಗಲೀ, ಯಾವುದೇ ಅಸ್ತ್ರ-ಶಸ್ತ್ರಗಳಿಂದಾಗಲೀ, ಭೂಮಿಯಲ್ಲಾಗಲೀ-ಆಕಾಶದಲ್ಲಾಗಲೀ, ಎಲ್ಲೇ ಆಗಲೀ, ಯಾವಾಗಲೇ ಆಗಲೀ, ಯಾವುದರಿಂದಲೇ ಆಗಲೀ–ನನಗೆ ಮರಣವುಂಟಾಗದಿರಲಿ. ಯುದ್ಧದಲ್ಲಿ ನನಗೆ ಎದುರಾಳಿಗಳು ಯಾರೂ ಇಲ್ಲದಿರಲಿ. ನಾನು ಎಲ್ಲ ಪ್ರಾಣಿಗಳಿಗೂ ಏಕಚ್ಛತ್ರಾಧಿಪತಿಯಾಗುವಂತೆ ಮಾಡು.

ಸರ್ವೇಷಾಂ ಲೋಕಪಾಲಾನಾಂ ಮಹಿಮಾನಂ ಯಥಾತ್ಮನಃ ।
ತಪೋಯೋಗಪ್ರಭಾವಾಣಾಂ ಯನ್ನ ರಿಷ್ಯತಿ ಕರ್ಹಿಚಿತ್ ॥೩೮॥

ಇಂದ್ರನೇ ಮುಂತಾದ ಸಮಸ್ತಲೋಕಪಾಲಕರಲ್ಲಿಯೂ ಯಾವ ಮಹಿಮೆಯುಂಟೋ–ಅಂತಹ ಮಹಿಮೆಯೇ ನನಗೂ ಇರಲಿ. ತಪಸ್ವಿಗಳಿಗೂ ಮತ್ತು ಯೋಗಿಗಳಿಗೂ ಯಾವ ಅಕ್ಷಯವಾದ ಐಶ್ವರ್ಯಗಳಿವೆಯೋ–ಅದನ್ನು ನನಗೂ ಅನುಗ್ರಹಿಸುವವನಾಗು.”

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಸಪ್ತಮಸ್ಕಂಧದ ೩ನೆಯ ಅಧ್ಯಾಯವು ಮುಗಿಯಿತು.

ಹಿರಣ್ಯಕಶಿಪುವಿನ ಅತ್ಯಾಚಾರಗಳು : ಪ್ರಹ್ಲಾದನ ಕಲ್ಯಾಣಗುಣಗಳು

ನಾರದಮಹರ್ಷಿಗಳು ಧರ್ಮರಾಜನಿಗೆ ಹೇಳುತ್ತಾರೆ :

ಏವಂ ವೃತಃ ಶತಧೃತಿರ್ಹಿರಣ್ಯಕಶಿಪೋರಥ ।
ಪ್ರಾದಾತ್ತತ್ತಪಸಾ ಪ್ರೀತೋ ವರಾಂಸ್ತಸ್ಯ ಸುದುರ್ಲಭಾನ್ ॥೧॥

ಧರ್ಮರಾಜ! ಹಿರಣ್ಯಕಶಿಪುವು ಹೀಗೆ ವರಗಳನ್ನು ಬೇಡಲು ಆತನ ತಪಸ್ಸಿನಿಂದ ಸಂತುಷ್ಟರಾಗಿದ್ದ ಬ್ರಹ್ಮದೇವರು ಆತನು ಕೇಳಿದ ಅತ್ಯಂತ ದುರ್ಲಭವಾಗಿದ್ದ ಎಲ್ಲ ವರಗಳನ್ನೂ ಆತನಿಗೆ ಅನುಗ್ರಹಿಸಿಬಿಟ್ಟರು.

"ಅಪ್ಪಾ ಹಿರಣ್ಯಕ! ನೀನು ನನ್ನಲ್ಲಿ ಬೇಡಿರುವ ವರಗಳು ಮನುಷ್ಯರಿಗೆ ತುಂಬಾ ದುರ್ಲಭ. ಅವುಗಳನ್ನು ಪಡೆಯುವುದು ಅತ್ಯಂತ ಕಷ್ಟ. ಹೀಗೆ ಅವು ಅತಿದುರ್ಲಭವಾಗಿದ್ದರೂ ನಿನಗೆ ಅವುಗಳನ್ನು ಕೊಡುತ್ತಿದ್ದೇನೆ"– ಎಂದು ಹೇಳಿ ಅನುಗ್ರಹಮಾಡಿ ಅಮೋಘವಾದ ಅನುಗ್ರಹವುಳ್ಳ ಆ ಬ್ರಹ್ಮದೇವರು ಆ ಅಸುರಶ್ರೇಷ್ಠನಿಂದ ಪೂಜಿತರಾಗಿ ಪ್ರಜಾಪತಿಗಳಿಂದ ಸ್ತೋತ್ರಮಾಡಲ್ಪಡುತ್ತಾ ತಮ್ಮ ಲೋಕಕ್ಕೆ ಹೊರಟುಹೋದರು. ಬ್ರಹ್ಮದೇವರಿಂದ ವರವು ದೊರೆತೊಡನೆಯೇ ಹಿರಣ್ಯಕಶಿಪುವಿನ ಶರೀರವು ಚಿನ್ನದಂತೆ ಥಳ-ಥಳಿಸತೊಡಗಿತು. ತಪಸ್ಸಿನಿಂದುಂಟಾಗಿದ್ದ ಕೃಶತ್ವವು ಹೋಗಿ ಹೃಷ್ಟ-ಪುಷ್ಟವಾಯಿತು. ತನ್ನ ಸಹೋದರನ ವಧೆಯನ್ನು ನೆನೆ-ನೆನೆದು ಆತನು ಶ್ರೀಭಗವಂತನನ್ನು ದ್ವೇಷಿಸತೊಡಗಿದನು. ಆ ಮಹಾದೈತ್ಯನು ಎಲ್ಲ ದಿಕ್ಕುಗಳನ್ನೂ, ಮೂರು ಲೋಕಗಳನ್ನೂ, ದೇವತೆಗಳನ್ನೂ, ಅಸುರರನ್ನೂ, ರಾಜರನ್ನೂ, ಗಂಧರ್ವರನ್ನೂ, ಗರುಡರನ್ನೂ, ಸರ್ಪರನ್ನೂ, ಸಿದ್ಧರನ್ನೂ, ಚಾರಣರನ್ನೂ, ವಿದ್ಯಾಧರರನ್ನೂ, ಋಷಿಗಳನ್ನೂ, ಪಿತೃಗಳನ್ನೂ, ಮನುಗಳನ್ನೂ, ಯಕ್ಷರನ್ನೂ, ರಾಕ್ಷಸರನ್ನೂ, ಪಿಶಾಚರಾಜರನ್ನೂ, ಪ್ರೇತಗಳನ್ನೂ, ಭೂತಪತಿಗಳನ್ನೂ ಮತ್ತು ಸಮಸ್ತಪ್ರಾಣಿಗಳ ರಾಜರನ್ನೂ ಸೋಲಿಸಿ ವಶಪಡಿಸಿಕೊಂಡುಬಿಟ್ಟನು. ಇಷ್ಟೇ ಅಲ್ಲದೇ ವಿಶ್ವವಿಜಯಿಯಾದ ಆ

ದೈತ್ಯನು ಲೋಕಪಾಲಕರ ಸ್ಥಾನ-ತೇಜಸ್ಸುಗಳನ್ನೂ ಸೆಳೆದುಕೊಂಡು ಬಿಟ್ಟನು. ಎಲ್ಲ ಸಂಪತ್ತುಗಳಿಂದಲೂ ಸಂಪನ್ನನಾದನು. ಅನಂತರ ಆತನು ನಂದನವನವೇ ಮುಂತಾದ ದಿವ್ಯವಾದ ಉದ್ಯಾನವನಗಳ ಸೌಂದರ್ಯದಿಂದ ಸಂಪನ್ನವಾಗಿದ್ದ ಸ್ವರ್ಗದಲ್ಲೇ ವಾಸಮಾಡತೊಡಗಿದನು. ಸ್ವಯಂ ವಿಶ್ವ ಕರ್ಮನೇ ರಚಿಸಿಕೊಟ್ಟ ಇಂದ್ರನ ಅರಮನೆಯೇ ಆತನ ವಾಸಸ್ಥಾನ ವಾಯಿತು. ಮೂರು ಲೋಕಗಳ ಸೌಂದರ್ಯದ ಮೂರ್ತಾಕಾರವಾಗಿ ಸರ್ವಸಂಪತ್ತುಗಳಿಗೂ ನೆಲೆವೀಡಾಗಿದ್ದ ಜಾಗವದು. ಆ ಅರಮನೆಯಲ್ಲಿ ಏರಿಳಿಯುವ ಮೆಟ್ಟಲುಗಳು ಪಚ್ಚೆಮಣಿಗಳಿಂದಲೂ, ನೆಲಗಳು ಮರಕತ ಮಣಿಗಳಿಂದಲೂ, ಗೋಡೆಗಳು ಸ್ಫಟಿಕಮಣಿಗಳಿಂದಲೂ, ಕಂಬಗಳು ವೈಡೂರ್ಯಮಣಿಗಳಿಂದಲೂ, ಆಸನಗಳು ಪದ್ಮರಾಗಮಣಿಗಳಿಂದಲೂ ನಿರ್ಮಿತವಾಗಿದ್ದುವು. ಬಣ್ಣ-ಬಣ್ಣಗಳ ತೋರಣಗಳೂ, ಹಾಲಿನಂತೆ ಬೆಳ್ಳ ಗಿದ್ದು ಮುತ್ತಿನ ಕುಚ್ಚುಗಳಿಂದ ಕೂಡಿದ್ದ ಹಾಸಿಗೆಗಳೂ ಕಂಗೊಳಿಸುತ್ತಿದ್ದುವು. ಸರ್ವಾಂಗಸುಂದರಿಯರಾಗಿದ್ದ ಅಪ್ಸರೆಯರು ಕಾಲಂದುಗೆಗಳಿಂದ ಝಣ-ಝಣಶಬ್ದಮಾಡುತ್ತಾ ರತ್ನಖಚಿತವಾದ ಭೂಮಿಯ ಮೇಲೆ ಓಡಾಡುತ್ತಿದ್ದರು. ಅದರಲ್ಲಿಯೇ ತಮ್ಮ ಸುಂದರವಾದ ಮುಖಾರವಿಂದಗಳ ಚೆಲುವನ್ನು ನೋಡಿಕೊಳ್ಳುತ್ತಿದ್ದರು. ಮಹಾಬಲಶಾಲಿಯೂ ಮಹಾ ತಪಸ್ವಿಯೂ ಆಗಿದ್ದ ಹಿರಣ್ಯಕಶಿಪುವು ಎಲ್ಲರನ್ನೂ ಜಯಿಸಿ ಏಕಚ್ಛತ್ರಾಧಿ ಪತಿಯಾಗಿ ಆ ಮಹೇಂದ್ರಭವನದಲ್ಲಿ ಯಥೇಚ್ಛವಾಗಿ ವಿಹರಿಸುತ್ತಿದ್ದನು. ಆತನ ಆಳ್ವಿಕೆಯು ಎಷ್ಟು ಕಠೋರವಾಗಿತ್ತೆಂದರೆ : ದೇವ-ದಾನವರೆಲ್ಲರೂ ಭಯಭೀತರಾಗಿ ಆತನ ಅಡಿಗಳಿಗೆ ಅಡಿಗಡಿಗೂ ನಮಸ್ಕರಿಸುತ್ತಿದ್ದರು. ಉತ್ಕಟವಾದ ಗಂಧವುಳ್ಳ ಮದ್ಯವನ್ನು ಕುಡಿದು ಮತ್ತೇರಿ ಕೆಂಪುಬಣ್ಣ ದಿಂದ ಕೂಡಿ ಮೇಲೇರಿದ್ದ ಕಣ್ಣುಗಳಿಂದ ಹೊಳೆಯುತ್ತಾ ತಪಸ್ಸು, ಯೋಗ ಮತ್ತು ಬಲಗಳಿಗೆ ಆಗರವಾಗಿದ್ದ ಆತನನ್ನು ಬ್ರಹ್ಮ-ವಿಷ್ಣು-ರುದ್ರ ರನ್ನು ಬಿಟ್ಟು ಉಳಿದ ಎಲ್ಲ ದೇವತೆಗಳೂ ಕಾಣಿಕೆಗಳನ್ನು ಕೈಗಳಿಂದ ಸಮರ್ಪಿಸುತ್ತಾ ಸೇವೆ ಮಾಡುತ್ತಿದ್ದರು. ಹಾಗೆ ತನ್ನ ಪರಾಕ್ರಮದಿಂದ ಇಂದ್ರನ ಆಸನವನ್ನು ಆಕ್ರಮಿಸಿ ಕುಳಿತಿದ್ದ ಆತನನ್ನು ವಿಶ್ವಾವಸುವೂ, ತುಂಬುರರೂ ಮತ್ತು ನಾವೂ ಎಲ್ಲರೂ ಹಾಡಿ ಹೊಗಳುತ್ತಿದ್ದೆವು.

ಗಂಧರ್ವರೂ, ಸಿದ್ಧರೂ, ಋಷಿಗಣಗಳೂ, ವಿದ್ಯಾಧರರೂ ಮತ್ತು ಅಪ್ಸರೆಯರೂ ಮತ್ತೆ ಮತ್ತೆ ಆತನನ್ನು ಸ್ತೋತ್ರಮಾಡುತ್ತಿದ್ದರು.

(ಶ್ಲೋಕ 2-14)

ಯುಧಿಷ್ಠಿರ! ವರ್ಣಾಶ್ರಮಧರ್ಮಗಳನ್ನು ಪಾಲಿಸುವ ಪುಣ್ಯಾತ್ಮರು ಮಾಡುತ್ತಿದ್ದ ದೊಡ್ಡ-ದೊಡ್ಡ ದಕ್ಷಿಣೆಗಳುಳ್ಳ ಯಜ್ಞಗಳ ಆಹುತಿಗಳೆಲ್ಲ ವನ್ನೂ ಆತನು ತನ್ನ ತೇಜಸ್ಸಿನಿಂದ ಕಿತ್ತುಕೊಂಡುಬಿಡುತ್ತಿದ್ದನು. ಭೂಮಿಯ ಏಳು ದ್ವೀಪಗಳಲ್ಲಿಯೂ ಆತನ ಅಖಂಡವಾದ ಸಾಮ್ರಾಜ್ಯವು ಹರಡಿತ್ತು. ಆತನ ರಾಜ್ಯದಲ್ಲಿ ಎಲ್ಲೆಡೆಗಳಲ್ಲಿಯೂ ಉಳುಮೆಯಿಲ್ಲದೆಯೇ ಭೂಮಿಯು ಆಹಾರದ ಬೆಳೆಯನ್ನು ಕೊಡುತ್ತಿತ್ತು. ಬಯಸಿದ ಪದಾರ್ಥಗಳೆಲ್ಲವೂ ಆತನಿಗೆ ಬಗೆ-ಬಗೆಯ ಆಶ್ಚರ್ಯಕರವಾದ ವಸ್ತುಗಳನ್ನೂ ತೋರಿಸಿ ಮನೋರಂಜನೆಯನ್ನುಂಟುಮಾಡುತ್ತಿತ್ತು. ಅದೇ ರೀತಿಯಲ್ಲಿ ಉಪ್ಪು, ಕಬ್ಬಿನಹಾಲು, ಸುರೆ, ತುಪ್ಪ, ಮೊಸರು, ಹಾಲು ಮತ್ತು ತಿಳಿನೀರಿನ ಸಮುದ್ರಗಳು ತಮ್ಮ ಪತ್ನಿಯರಾದ ನದಿಗಳೊಡನೆ ಅಲೆಗಳ ಮೂಲಕ ರತ್ನರಾಶಿಗಳನ್ನೂ ಆತನಿಗೆ ತಂದು ಸಮರ್ಪಿಸುತ್ತಿದ್ದುವು. ಪರ್ವತಗಳು ತಮ್ಮ ಕಣಿವೆ, ತಪ್ಪಲು, ಶಿಖರಗಳ ಮೂಲಕ ಆತನಿಗೆ ವಿಹಾರೋದ್ಯಾನ ಗಳನ್ನು ಒದಗಿಸುತ್ತಿದ್ದುವು. ವೃಕ್ಷಗಳು ಎಲ್ಲ ಋತುಗಳಲ್ಲಿಯೂ ಹೂವು-ಹಣ್ಣುಗಳನ್ನು ಕೊಡುತ್ತಾ ಆತನನ್ನು ಉಪಚರಿಸುತ್ತಿದ್ದುವು. ಸಮಸ್ತ ಲೋಕಪಾಲಕರ ಗುಣ-ಮಹಿಮೆಗಳನ್ನೂ ಆತನೊಬ್ಬನೇ ಧರಿಸಿದ್ದನು. ಹೀಗೆ ಎಲ್ಲ ದಿಕ್ಕುಗಳನ್ನೂ ಜಯಿಸಿ ಆತನು ಏಕಚ್ಛತ್ರಾಧಿಪತಿಯಾಗಿ ತನಗೆ ಪ್ರಿಯವಾದ ವಿಷಯಗಳನ್ನು ಯಥೇಷ್ಟವಾಗಿ ಭೋಗಿಸುತ್ತಿದ್ದನು. ಆದರೆ ವಿಷಯಸುಖಗಳನ್ನು ಎಷ್ಟೇ ಭೋಗಿಸಿದರೂ ಆತನಿಗೆ ತೃಪ್ತಿಯುಂಟಾಗಲಿಲ್ಲ. ಏಕೆಂದರೆ : ಆತನು ಕಡೆಗೂ ಇಂದ್ರಿಯಗಳ ದಾಸನೇ ಆಗಿದ್ದನು. ಹೀಗೆ ಸನಕಾದಿಮುನಿಗಳ ಶಾಪದಿಂದ ಅಸುರಯೋನಿಯಲ್ಲಿ ಹುಟ್ಟಿದ್ದ ಆತನು ಐಶ್ವರ್ಯದಿಂದ ಮತ್ತೇರಿ ದುರಹಂಕಾರಿಯಾಗಿ ಶಾಸ್ತ್ರಮರ್ಯಾದೆಯನ್ನು ಮೀರಿ ನಡೆಯುತ್ತಿರಲು–ಹಾಗೆಯೇ ಜೀವನದ ಬಹಳ ಕಾಲ ಕಳೆದು ಹೋಯಿತು. ಆತನ ಉಗ್ರವಾದ ಶಾಸನದಿಂದ ಎಲ್ಲ ಲೋಕಗಳೂ ಮತ್ತು

ಲೋಕಪಾಲಕರೂ ಗಾಬರಿಗೊಂಡರು. ಬೇರಾವ ಆಸರೆಯೂ ದೊರೆಯದಿರಲು ಅವರು ಶ್ರೀಭಗವಂತನನ್ನು ಶರಣುಹೊಂದಿದರು. (ಶ್ಲೋಕ 15-21)

ತಸ್ಮೈ ನಮೋಽಸ್ತು ಕಾಷ್ಠಾಯೈ ಯತ್ರಾತ್ಮಾ ಹರಿರೀಶ್ವರಃ ।
ಯದ್ಗತ್ವಾ ನ ನಿವರ್ತನ್ತೇ ಶಾನ್ತಾಃ ಸಂನ್ಯಾಸಿನೋಽಮಲಾಃ ॥೨೨॥

"ಎಲ್ಲರಿಗೂ ಆತ್ಮನಾಗಿ ಸರ್ವೇಶ್ವರನಾಗಿರುವ ಶ್ರೀಹರಿಯು ಎಲ್ಲಿ ಇದ್ದಾನೆಯೋ ಮತ್ತು ಎಲ್ಲಿಗೆ ಹೋದಂತಹ ಪ್ರಶಾಂತರಾದ ಮತ್ತು ನಿರ್ಮಲರಾದ ಸಂನ್ಯಾಸಿಗಳ್ಳು ಹಿಂದಿರುಗುವುದಿಲ್ಲವೋ—ಅಂತಹ ದಿಕ್ಕಿಗೆ ಅಥವಾ ಸರ್ವೋತ್ತಮವಾದ ಧಾಮಕ್ಕೆ ನಮಸ್ಕಾರವು"—ಎಂಬುದಾಗಿ ಆ ದೇವತೆಗಳು ಇಂದ್ರಿಯಗಳನ್ನು ಸಂಯಮಮಾಡಿ ಮನಸ್ಸನ್ನು ಏಕಾಗ್ರಗೊಳಿಸಿ ನಿದ್ರಾಹಾರಗಳನ್ನು ತೊರೆದು ನಿರ್ಮಲವಾದ ಮನಸ್ಸಿನಿಂದ ಶ್ರೀಭಗವಂತನನ್ನು ಆರಾಧಿಸಿದರು. ಆಗ ಅವರಿಗೆ ಸಾಧುಗಳಿಗೆ ಅಭಯ ಪ್ರದವಾಗಿ, ಮೇಘದಂತೆ ಗಂಭೀರವಾಗಿ, ದಿಕ್ಕು-ವಿದಿಕ್ಕುಗಳಲ್ಲೆಲ್ಲಾ ಪ್ರತಿ ಧ್ವನಿಬರಿಸುತ್ತಿದ್ದ ದಿವ್ಯವಾದ ಆಕಾಶವಾಣಿಯೊಂದು ಕೇಳಿಸಿತು :

ಮಾ ಭೈಷ್ಟ ವಿಬುಧಶ್ರೇಷ್ಠಾಃ ಸರ್ವೇಷಾಂ ಭದ್ರಮಸ್ತು ವಃ ।
ಮದ್ದರ್ಶನಂ ಹಿ ಭೂತಾನಾಂ ಸರ್ವಶ್ರೇಯೋಪಪತ್ತಯೇ ॥೨೫॥

---

* ಸಂನ್ಯಾಸಿಗಳು ಎಂದರೆ-ನ್ಯಾಸ (ಶರಣಾಗತಿ) ವಿದ್ಯೆಯಲ್ಲಿ ನಿಷ್ಠೆಯುಳ್ಳವರು. ಕಸ್ಮೈ ಕಾಷ್ಠಾಯೈ ನಮಃ = ಆ ದಿಕ್ಕಿಗೆ ನಮಸ್ಕಾರ ಎಂದು ಹೇಳಿರುವುದರಿಂದ ಭಗವಂತನ ದಿವ್ಯಮಂಗಳಸ್ವರೂಪವನ್ನು ಗ್ರಹಿಸುವುದು ದೇವತೆಗಳಿಗೂ ಕಷ್ಟ. ಆದುದರಿಂದ ಅವರು ಅವನು ಇರುವ ದಿಕ್ಕನ್ನೇ ಕುರಿತು ಶರಣ-ವರಣಮಾಡಿದ್ದಾರೆ. ೨೩ನೆಯ ಶ್ಲೋಕದ ನಂತರ ಈ ಕೆಳಗಿನ ಶ್ಲೋಕವು—ವೀರರಾಘವೀಯ ಮತ್ತು ವಿಜಯಧ್ವಜೀಯಗಳಲ್ಲಿ ಕಂಡು ಬರುತ್ತದೆ.

ಓಂ ನಮೋ ಭಗವತೇ ತಸ್ಮೈ ಪುರುಷಾಯ ಮಹಾತ್ಮನೇ ।
ವಿಶುದ್ಧಾನುಭವಾನಂದಸಂದೋಹಾಯ ಯತೋಽಭಯಮ್ ॥

ಪರಿಶುದ್ಧವಾದ ಆನಂದರೂಪವನ್ನು ಕರೆಯುವವನೂ, ಅಭಯಪ್ರದನೂ ಆಗಿರುವ ಮಹಾತ್ಮನಾದ ಷಾಡ್ಗುಣ್ಯಪರಿಪೂರ್ಣನಾದ ಆ ಪರಮಪುರುಷನಿಗೆ ನಮಸ್ಕಾರವು. ಮಹಾತ್ಮನೇ = ಸರ್ವಾಂತರಾತ್ಮನಾದ, ಮಹತ್ತಾದ ಅನುಕಂಪೆಯಿಂದ ಕೂಡಿದ ಮನಸ್ಸುಳ್ಳ (ವೀರರಾಘವೀಯ)

ಜ್ಞಾತಮೇತಸ್ಯ ದೌರಾತ್ಮ್ಯಂ ದೈತೇಯಾಪಸದಸ್ಯ ಚ ।
ತಸ್ಯ ಶಾನ್ತಿಂ ಕರಿಷ್ಯಾಮಿ ಕಾಲಂ ತಾವತ್ಪ್ರತೀಕ್ಷತ ॥೨೬॥

ಯದಾ ದೇವೇಷು ವೇದೇಷು ಗೋಷು ವಿಪ್ರೇಷು ಸಾಧುಷು ।
ಧರ್ಮೇ ಮಯಿ ಚ ವಿದ್ವೇಷಃ ಸ ವಾ ಆಶು ವಿನಶ್ಯತಿ ॥೨೭॥

ನಿರ್ವೈರಾಯ ಪ್ರಶಾನ್ತಾಯ ಸ್ವಸುತಾಯ ಮಹಾತ್ಮನೇ ।
ಪ್ರಹ್ಲಾದಾಯ ಯದಾ ದ್ರುಹ್ಯೇದ್ಧನಿಷ್ಯೇಽಪಿ ವರೋರ್ಜಿತಮ್ ॥

"ಎಲೈ ದೇವಶ್ರೇಷ್ಠರೇ! ಭಯಪಡಬೇಡಿರಿ. ನಿಮ್ಮೆಲ್ಲರಿಗೂ ಮಂಗಳ ವುಂಟಾಗಲಿ. ನನ್ನ ದರ್ಶನವು ಪ್ರಾಣಿಗಳಿಗೆ ಕಲ್ಯಾಣವನ್ನುಂಟುಮಾಡಿಯೇ ಮಾಡುವುದು. ಆ ದೈತ್ಯಾಧಮನ ದುಷ್ಟತನವು ನನಗೆ ಮೊದಲಿನಿಂದಲೂ ತಿಳಿದಿದೆ. ನಾನು ಆತನನ್ನು ಸಂಹಾರಮಾಡುವೆನು. ಕೊಂಚ ಕಾಲದವರೆಗೆ ಕಾಯುತ್ತಿರಿ. ಯಾವುದೇ ಪ್ರಾಣಿಯಾದರೂ ದೇವತೆಗಳು, ವೇದಗಳು, ಗೋವುಗಳು, ಬ್ರಾಹ್ಮಣರು, ಸಾಧುಸಂತರು ಮತ್ತು ಧರ್ಮ–ಇವುಗಳಲ್ಲಿ ದ್ವೇಷಮಾಡಿದರೆ ಅದು ಶೀಘ್ರದಲ್ಲೇ ನಾಶಹೊಂದುವುದು. ಆ ದೈತ್ಯನು ಯಾವಾಗ ವೈರರಹಿತನೂ, ಪ್ರಶಾಂತನೂ, ಮಹಾತ್ಮನೂ ಆಗಿರುವ ತನ್ನ ಪುತ್ರನಾದ ಪ್ರಹ್ಲಾದನಿಗೆ ದ್ರೋಹಮಾಡುವನೋ, ಅವನಿಗೆ ಅನಿಷ್ಟ ವನ್ನುಂಟುಮಾಡಲು ಬಯಸುವನೋ–ಆಗ ಆತನು ವರಗಳ ಕಾರಣ ಶಕ್ತಿಸಂಪನ್ನನಾಗಿದ್ದರೂ ನಾನು ಆತನನ್ನು ಅವಶ್ಯವಾಗಿ ಸಂಹಾರ ಮಾಡುವೆನು."

ನಾರದಮಹರ್ಷಿಗಳು ಹೇಳುತ್ತಾರೆ :

ಲೋಕಗುರುವಾದ ಶ್ರೀಭಗವಂತನು ಹೀಗೆ ಆದೇಶನೀಡಲು ದೇವತೆ ಗಳು ಆತನಿಗೆ ಪ್ರಣಾಮಮಾಡಿ ಹಿಂದಿರುಗಿದರು. ಅವರ ಉದ್ವೇಗವೆಲ್ಲವೂ ಶಾಂತವಾಗಿಬಿಟ್ಟಿತು. 'ಇನ್ನೇನು ಹಿರಣ್ಯಕಶಿಪುವು ಸತ್ತಂತೆಯೇ'–ಎಂದು ಅವರು ಭಾವಿಸಿದರು.

ಯುಧಿಷ್ಠಿರ! ದೈತ್ಯರಾಜನಾದ ಹಿರಣ್ಯಕಶಿಪುವಿಗೆ ಪರಮಾದ್ಭುತರಾದ ನಾಲ್ಕು ಮಂದಿ ಪುತ್ರರಿದ್ದರು. ಅವರಲ್ಲಿ ಪ್ರಹ್ಲಾದನು ವಯಸ್ಸಿನಲ್ಲಿ ಎಲ್ಲರಿ ಗಿಂತಲೂ ಕಿರಿಯವನು. ಆದರೆ ಸದ್ಗುಣಗಳಲ್ಲಿ ಆತನು ಎಲ್ಲರಿಗಿಂತಲೂ

ದೊಡ್ಡವನಾಗಿದ್ದನು. ಆತನು ಸತ್ಪುರುಷರನ್ನೂ ಗುರು-ಹಿರಿಯರನ್ನೂ ಭಕ್ತಿಯಿಂದ ಸೇವಿಸುತ್ತಿದ್ದನು. ಬ್ರಾಹ್ಮಣರಲ್ಲಿ ಭಕ್ತಿಯುಳ್ಳವನೂ, ಸೌಮ್ಯಸ್ವಭಾವದವನೂ, ಸತ್ಯಪ್ರತಿಜ್ಞನೂ ಮತ್ತು ಜಿತೇಂದ್ರಿಯನೂ ಆಗಿದ್ದನು. ಆ ಮಹಾತ್ಮನು ಎಲ್ಲ ಪ್ರಾಣಿಗಳನ್ನೂ ತನ್ನಂತೆಯೇ ಭಾವಿಸಿ ಅದರಂತೆ ವರ್ತಿಸುತ್ತಿದ್ದನು. ಎಲ್ಲರಿಗೂ ಏಕಮಾತ್ರಪ್ರಿಯನೂ ಮತ್ತು ನಿಜವಾದ ಹಿತೈಷಿಯೂ ಆಗಿದ್ದನು. ದೊಡ್ಡವರ ಪಾದಾರವಿಂದಗಳಲ್ಲಿ ಸೇವಕನಂತೆ ಅತ್ಯಂತವಿನಯದಿಂದ ನಡೆದುಕೊಳ್ಳುತ್ತಿದ್ದನು. ಬಡವರನ್ನು ತಂದೆಯಂತೆ ಸ್ನೇಹದಿಂದ ನೋಡಿಕೊಳ್ಳುತ್ತಿದ್ದನು. ಸಮಾನಸ್ಕಂಧರನ್ನು–ಸೋದರರರನ್ನು ಹೇಗೋ ಹಾಗೆ–ಪ್ರೀತಿಸುತ್ತಿದ್ದನು. ಗುರುಜನರನ್ನು ದೇವರಂತೆ ಕಾಣುತ್ತಿದ್ದನು. ವಿದ್ಯೆ, ಧನ, ಸೌಂದರ್ಯ ಮತ್ತು ಕುಲೀನತೆ–ಇವೆಲ್ಲವೂ ತುಂಬಿದ್ದರೂ ಅಭಿಮಾನ–ಅಹಂಕಾರಗಳು ಆತನಲ್ಲಿ ಎಳ್ಳಷ್ಟೂ ಇರಲಿಲ್ಲ. ವ್ಯಸನಗಳು ಬಂದಾಗ ಆತನ ಮನಸ್ಸು ಉದ್ವೇಗಕ್ಕೆ ಒಳಗಾಗುತ್ತಿರಲಿಲ್ಲ. ಆತನು ಶ್ರೀಭಗವಂತನನ್ನು ಬಿಟ್ಟು ಉಳಿದ ವಿಷಯಗಳಲ್ಲಿ ಅತ್ಯಂತ ನಿಃಸ್ಪೃಹನಾಗಿದ್ದನು. ಕಂಡು-ಕೇಳಿದ್ದ ಇಹಲೋಕ-ಪರಲೋಕಗಳೆರಡನ್ನೂ ನಿಸ್ಸಾರವೆಂದೂ, ತುಚ್ಛವೆಂದೂ ಭಾವಿಸಿದ್ದನು. ಆದುದರಿಂದ ಆತನ ಮನಸ್ಸಿನಲ್ಲಿ ಯಾವುದರ ವಿಷಯದಲ್ಲೂ ಲೋಭವಿರಲಿಲ್ಲ. ಇಂದ್ರಿಯ, ಪ್ರಾಣ, ಶರೀರ ಮತ್ತು ಮನಸ್ಸುಗಳನ್ನು ಆತನು ವಶದಲ್ಲಿಟ್ಟುಕೊಂಡಿದ್ದನು. ಆತನ ಮನಸ್ಸಿನಲ್ಲಿ ಎಂದೂ ಯಾವುದೇ ಪ್ರಕಾರದ ಕಾಮನೆಯೂ ಉಂಟಾಗುತ್ತಿರಲಿಲ್ಲ. ಆತನು ಹುಟ್ಟಿನಿಂದ ಅಸುರನಾಗಿದ್ದರೂ ಅಸುರೀ ಸ್ವಭಾವವು ಸ್ವಲ್ಪವೂ ಆತನಲ್ಲಿ ಇರಲಿಲ್ಲ. ಶ್ರೀಭಗವಂತನ ಗುಣಗಳು ಅನಂತವಾಗಿರುವಂತೆ–ಪ್ರಹ್ಲಾದನ ಶ್ರೇಷ್ಠಗುಣಗಳೂ ಎಲ್ಲೆಯನ್ನು ಮೀರಿದ್ದುವು. ಮಹಾತ್ಮರು ಹಿಂದಿನ ಕಾಲದಿಂದಲೂ ಆತನನ್ನು ವರ್ಣಿಸುತ್ತಾ ತಮ್ಮವನನ್ನಾಗಿಸಿಕೊಳ್ಳುತ್ತಾ ಬಂದಿದ್ದಾರೆ. ಆದರೂ ಆತನು ಇಂದಿಗೂ ಹಿಂದಿನಂತೆಯೇ ಇದ್ದಾನೆ. ದೇವತೆಗಳು ಆತನಿಗೆ ಶತ್ರುಗಳಾಗಿದ್ದರೂ ಭಕ್ತರ ಚರಿತ್ರೆಗಳನ್ನು ಕೇಳುವುದಕ್ಕಾಗಿ ಸಭೆಸೇರಿದಾಗ ಅವರು ಇತರ ಭಕ್ತರನ್ನು ಭಕ್ತೋತ್ತಮನಾದ ಪ್ರಹ್ಲಾದನಿಗೆ ಹೋಲಿಸಿ ಅವರಿಗೆ ಸನ್ಮಾನ

ಸಲ್ಲಿಸುತ್ತಾರೆ. ಹೀಗಿರುವಾಗ 'ಅಜಾತಶತ್ರು' (ಶತ್ರುಗಳೇ ಇಲ್ಲದವನು) ಎಂದು ಹೆಸರು ಪಡೆದ ನಿನ್ನಂತಹ ಭಗವದ್ಭಕ್ತರು ಆತನನ್ನು ಆರಾಧಿಸುತ್ತಾರೆಂಬುದರಲ್ಲಿ ಸಂಶಯವೇ ಇಲ್ಲ.

ಗುಣೈರಲಮಸಂಖ್ಯೇಯೈರ್ಮಾಹಾತ್ಮ್ಯಂ ತಸ್ಯ ಸೂಚ್ಯತೇ ।
ವಾಸುದೇವೇ ಭಗವತಿ ಯಸ್ಯ ನೈಸರ್ಗಿಕೀ ರತಿಃ ॥೩೬॥

ಆತನ ಮಾಹಾತ್ಮ್ಯವನ್ನು ಸೂಚಿಸಲು ಆತನಲ್ಲಿದ್ದ ಲೆಕ್ಕಿಸಲಾಗದಷ್ಟು ಸದ್ಗುಣಸಂಪತ್ತನ್ನು ಹೇಳಬೇಕಾಗಿಲ್ಲ. ಒಂದೇ ಒಂದು ಗುಣವನ್ನು ಹೇಳಿದರೂ ಸಾಕು. ಅದೇನೆಂದರೆ : ಆತನಿಗೆ ಶ್ರೀಭಗವಂತನಾದ ವಾಸುದೇವನಲ್ಲಿದ್ದ ಸಹಜವಾದ ರತಿ.

ಯುಧಿಷ್ಠಿರ! ಆ ಬಾಲಕನು ಬಾಲ್ಯದಲ್ಲಿಯೇ ಆಟ-ಪಾಟಗಳನ್ನು ಬಿಟ್ಟು ಶ್ರೀಭಗವಂತನ ಧ್ಯಾನದಲ್ಲಿ ಮಗ್ನನಾಗಿ ಜಡನಂತೆ ತನ್ಮಯನಾಗಿ ಬಿಡುತ್ತಿದ್ದನು. ಶ್ರೀಕೃಷ್ಣಪರಮಾತ್ಮನ ಅನುಗ್ರಹವೆಂಬ ಗ್ರಹವು ಆತನ ಹೃದಯವನ್ನು ಸೆಳೆದುಕೊಂಡು ಆತನಿಗೆ ಜಗತ್ತಿನ ಪರಿವೆಯೇ ಇಲ್ಲದಂತೆ ಮಾಡಿಬಿಟ್ಟಿತು. ಗೋವಿಂದನ ಆಲಿಂಗನೆಯಲ್ಲಿ ತಾನು ಇರುವುದನ್ನು ಸದಾ ಭಾವಿಸುತ್ತಿದ್ದ ಆತನಿಗೆ ತಾನು ಕೂರುವುದಾಗಲೀ, ಓಡಾಡುವುದಾಗಲೀ, ತಿನ್ನುವುದಾಗಲೀ, ಕುಡಿಯುವುದಾಗಲೀ, ನಿದ್ರಿಸುವುದಾಗಲೀ, ಮಾತನಾಡುವುದಾಗಲೀ–ಯಾವುದೂ ತಿಳಿಯುತ್ತಿರಲಿಲ್ಲ. ವೈಕುಂಠಪತಿಯು ತನ್ನನ್ನು ಅಗಲಿಹೋದನೆಂದು ಕೆಲವೊಮ್ಮೆ ಅಳುತ್ತಿದ್ದನು. ಕೆಲವೊಮ್ಮೆ ಆತನನ್ನು ಚಿಂತಿಸುತ್ತಾ ಆನಂದದಿಂದ ನಗುತ್ತಿದ್ದನು. ಹಾಡುತ್ತಿದ್ದನು. ಉತ್ಸುಕತೆಯಿಂದ ಕೂಗಿಕೊಳ್ಳುತ್ತಿದ್ದನು. ನಾಚಿಕೆಯನ್ನು ತೊರೆದು ಕುಣಿದಾಡುತ್ತಲೂ ಇದ್ದನು. ಆತನನ್ನೇ ಭಾವಿಸಿಕೊಳ್ಳುತ್ತಾ ಕೆಲವು ವೇಳೆ ತನ್ಮಯನಾಗಿ ಆತನನ್ನೇ ಅನುಕರಿಸುತ್ತಿದ್ದನು. ಕೆಲವೊಮ್ಮೆ ಒಳಗೊಳಗೇ ಶ್ರೀಭಗವಂತನ ಸ್ಪರ್ಶವನ್ನು ಅನುಭವಿಸುತ್ತಾ ರೋಮಾಂಚಿತನಾಗಿ ಸುಮ್ಮನೇ ಕುಳಿತುಬಿಡುತ್ತಿದ್ದನು. ಆತನ ಅರೆತೆರೆದ ಕಣ್ಣುಗಳು ಪ್ರೇಮದ ಮತ್ತು ಆನಂದದ ಕಂಬನಿಗಳಿಂದ ತುಂಬಿರುತ್ತಿದ್ದುವು. ಭಗವಂತನಾದ ಶ್ರೀಕೃಷ್ಣನ ಚರಣಾರವಿಂದಗಳಲ್ಲಿ ಇಂತಹ ಭಕ್ತಿಯು

ಭಗವದ್ಭಕ್ತರಾದ ಮಹಾತ್ಮರ ಸಹವಾಸಭಾಗ್ಯದಿಂದಲೇ ಆತನಿಗೆ ಉಂಟಾಯಿತು. ಅದರಿಂದ ಆತನ ಮನಸ್ಸು ಪರಮಾನಂದದಲ್ಲಿ ಮುಳುಗಿದ್ದುದು ಮಾತ್ರವಲ್ಲದೇ ದುಸ್ಸಹವಾಸದಿಂದ ದೀನರಾಗಿದ್ದ ಜನರಿಗೂ ಮತ್ತೆ ಮತ್ತೆ ಶಾಂತಿಯನ್ನು ಉಂಟುಮಾಡುತ್ತಿದ್ದಿತು. ಯುಧಿಷ್ಠಿರ! ಹೀಗೆ ಪ್ರಹ್ಲಾದನು ಶ್ರೀಭಗವಂತನ ಭಕ್ತೋತ್ತಮನೂ, ಮಹಾಭಾಗ್ಯಶಾಲಿಯೂ ಮತ್ತು ಉನ್ನತಮಟ್ಟದ ಮಹಾತ್ಮನೂ ಆಗಿದ್ದನು. ಇಂತಹ ಸಾಧುಶ್ರೇಷ್ಠನಾದ ಪುತ್ರನನ್ನೂ ಅಪರಾಧಿಯೆಂದು ಉದ್ಘೋಷಿಸಿ ಹಿರಣ್ಯಕಶಿಪುವು ಆತನಿಗೆ ಅನಿಷ್ಟವನ್ನುಂಟುಮಾಡಲು ಪ್ರಯತ್ನಿಸತೊಡಗಿದನು." (ಶ್ಲೋಕ 29-42)

ನಾರದರ ಈ ಮಾತನ್ನು ಕೇಳಿ ಧರ್ಮರಾಜನಿಗೆ ಅದಕ್ಕೆ ಕಾರಣವನ್ನು ತಿಳಿದುಕೊಳ್ಳಲು ಕುತೂಹಲವುಂಟಾಯಿತು. ಆತನು ನಾರದರನ್ನು ಕುರಿತು "ದೇವರ್ಷಿಗಳೇ! ಒಳ್ಳೆಯ ವ್ರತದಲ್ಲಿ ನಿಷ್ಠರಾದ ಮಹಾನುಭಾವರೇ! ಹಿರಣ್ಯಕಶಿಪುವು ಪ್ರಹ್ಲಾದನಿಗೆ ತಂದೆಯೇ ಆಗಿದ್ದರೂ ಪರಿಶುದ್ಧಹೃದಯನೂ ಮಹಾತ್ಮನೂ ಆಗಿದ್ದ ತನ್ನ ಆ ಪುತ್ರನಿಗೆ ಏಕೆ ದ್ರೋಹಮಾಡಿದನು? ತಂದೆಗೆ ಪುತ್ರನಲ್ಲಿ ಸ್ವಾಭಾವಿಕವಾಗಿಯೇ ಪ್ರೇಮವು ತುಂಬಿರುತ್ತದೆ. ಆತನು ಏನಾದರೂ ವಿರುದ್ಧವಾದ ಕಾರ್ಯವನ್ನು ಮಾಡಿದರೂ ಆತನಿಗೆ ತಿಳಿವಳಿಕೆ ನೀಡುವುದಕ್ಕಾಗಿ ಗದರಿಸುತ್ತಾರೆಯೇ ಹೊರತು ಶತ್ರುವಿನಂತೆ ಆತನಲ್ಲಿ ವೈರ-ವಿರೋಧಗಳನ್ನು ಮಾಡುವುದಿಲ್ಲ. ಹೀಗಿರುವಾಗ ವಿಧೇಯನೂ, ಶುದ್ಧಹೃದಯನೂ ಮತ್ತು ಗುರು-ಹಿರಿಯರಲ್ಲಿ ಭಗವದ್ಭಾವವುಳ್ಳವನೂ ಆದ ಅಂತಹ ಪುತ್ರನಲ್ಲಿ ದ್ವೇಷವನ್ನು ಹೇಗೆತಾನೇ ತಂದೆಯಾದ ಹಿರಣ್ಯಕಶಿಪುವು ಮಾಡಿಯಾನು? ತಾವು ಸರ್ವಜ್ಞರು. 'ತಂದೆಯು ದ್ವೇಷದಿಂದ ಮಗನನ್ನು ಕೊಂದುಹಾಕುವುದಕ್ಕೇ ಪ್ರಯತ್ನಿಸಿದನು'–ಎಂಬು ದನ್ನು ಕೇಳಿ ಅದಕ್ಕೆ ಕಾರಣವನ್ನು ತಿಳಿಯಲು ತುಂಬಾ ಕುತೂಹಲವಾಗಿದೆ. ತಾವು ಕೃಪೆಯಿಟ್ಟು ಈ ಕುತೂಹಲವನ್ನು ಶಮನಗೊಳಿಸಬೇಕು"–ಎಂದು ಪ್ರಾರ್ಥನೆಮಾಡಿದನು.

(ಶ್ಲೋಕ 39-46)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಸಪ್ತಮಸ್ಕಂಧದ ೪ನೆಯ ಅಧ್ಯಾಯವು ಮುಗಿಯಿತು.

ಹಿರಣ್ಯಕಶಿಪುವು ಪ್ರಹ್ಲಾದನನ್ನು ವಧಿಸಲು ಪ್ರಯತ್ನಿಸಿದುದು

ಯುಧಿಷ್ಠಿರನ ಪ್ರಶ್ನೆಗೆ ಉತ್ತರವಾಗಿ ಶ್ರೀನಾರದಮಹರ್ಷಿಗಳು ಹೀಗೆಂದರು :

ಪೌರೋಹಿತ್ಯಾಯ ಭಗವಾನ್ವೃತಃ ಕಾವ್ಯಃ ಕಿಲಾಸುರೈಃ ।
ಶಣ್ಡಾಮರ್ಕೌ ಸುತೌ ತಸ್ಯ ದೈತ್ಯರಾಜಗೃಹಾನ್ತಿಕೇ ॥೧॥

ತೌ ರಾಜ್ಞಾ ಪ್ರಾಪಿತಂ ಬಾಲಂ ಪ್ರಹ್ಲಾದಂ ನಯಕೋವಿದಮ್ ।
ಪಾಠಯಾಮಾಸತುಃ ಪಾಠ್ಯಾನನ್ಯಾಂಶ್ಚಾಸುರಬಾಲಕಾನ್ ॥೨॥

"ಯುಧಿಷ್ಠಿರ! ದೈತ್ಯರು ಭಗವಂತರಾದ ಶುಕ್ರಾಚಾರ್ಯರನ್ನು ಪುರೋಹಿತರನ್ನಾಗಿ ವರಿಸಿದ್ದರಷ್ಟೇ! ಆ ಆಚಾರ್ಯರಿಗೆ ಶಂಡ ಮತ್ತು ಅಮರ್ಕ ಎಂಬ ಇಬ್ಬರು ಪುತ್ರರಿದ್ದರು. ಅವರಿಬ್ಬರೂ ದೈತ್ಯರಾಜನ ಅರಮನೆಯ ಬಳಿಯೇ ಇದ್ದು, ಹಿರಣ್ಯಕಶಿಪುವು ಕಳುಹಿಸಿಕೊಟ್ಟ ಆತನ ನೀತಿನಿಪುಣನಾಗಿದ್ದ ಪುತ್ರ ಪ್ರಹ್ಲಾದನಿಗೂ ಮತ್ತು ಪಾಠಕಲಿಯಲು ಯೋಗ್ಯರಾಗಿದ್ದ ಅಸುರಬಾಲಕರಿಗೂ ಅರ್ಥನೀತಿಯೇ ಮುಂತಾದುವುಗಳನ್ನು ಹೇಳಿ ಕೊಡುತ್ತಿದ್ದರು.

ಪ್ರಹ್ಲಾದನು ಗುರುಗಳು ಹೇಳಿಕೊಟ್ಟ ಪಾಠವನ್ನು ಕೇಳಿ ಕಲಿತು ಅವರು ಹೇಳಿಕೊಟ್ಟಂತೆಯೇ ಅವರಿಗೆ ಒಪ್ಪಿಸುತ್ತಿದ್ದನು. ಆದರೆ ಆ ಪಾಠಗಳು ಸರಿಯೆಂದು ಆತನ ಮನಸ್ಸು ಒಪ್ಪುತ್ತಿರಲಿಲ್ಲ. ಏಕೆಂದರೆ : ತನ್ನವನು ಮತ್ತು ಪರಕೀಯನು–ಎಂಬ ಸುಳ್ಳು ಆಗ್ರಹವನ್ನು ಹೊಂದಿರುವುದೇ ಆ ಪಾಠಗಳಿಗೆ ಆಧಾರವಾಗಿತ್ತು. ಹೀಗೆಯೇ ಇರುವಾಗ ಹಿರಣ್ಯಕಶಿಪುವು ಒಂದು ದಿನ ತನ್ನ ಪುತ್ರನನ್ನು ತುಂಬಾ ಪ್ರೀತಿಯಿಂದ ತೊಡೆಯ ಮೇಲೆ ಕೂರಿಸಿಕೊಂಡು–"ಮಗು! ನಿನಗೆ ಯಾವುದು ತುಂಬಾ ಒಳ್ಳೆಯದು ಎಂದು ಅನ್ನಿಸುತ್ತದೆ? ಹೇಳು"–ಎಂದು ಪ್ರಶ್ನಿಸಿದನು. ಅದಕ್ಕೆ ಪ್ರಹ್ಲಾದನು :

ತತ್ಸಾಧು ಮನ್ಯೇಽಸುರವರ್ಯ ದೇಹಿನಾಂ
ಸದಾ ಸಮುದ್ವಿಗ್ನಧಿಯಾಮಸದ್ಗ್ರಹಾತ್ ।

ಹಿತ್ವಾತ್ಮಪಾತಂ ಗೃಹಮನ್ಧಕೂಪಂ
ವನಂ ಗತೋ ಯದ್ಧರಿಮಾಶ್ರಯೇತ ॥೫॥

"ಅಪ್ಪಾ! ಲೋಕದಲ್ಲಿರುವ ಜೀವಿಗಳು 'ನಾನು' 'ನನ್ನದು' ಎಂಬ ದುಷ್ಟವಾದ ಆಗ್ರಹದಿಂದ ಸದಾ ಚಿಂತಾಕ್ರಾಂತರಾಗಿರುತ್ತಾರೆ. ಅವರು ತಮ್ಮ ಅಧಃಪತನಕ್ಕೆ ಮೂಲಕಾರಣವಾಗಿ ಕತ್ತಲೆಯ ಬಾವಿಯಂತಿರುವ ಈ ಮನೆ-ಮಠಗಳನ್ನು ತೊರೆದು ಅರಣ್ಯಕ್ಕೆ ಹೋಗಿ ಭಗವಂತನಾದ ಶ್ರೀಹರಿಯನ್ನು ಶರಣು ಹೊಂದುವುದೇ ಸರಿ–ಎಂದು ನಾನು ತಿಳಿಯುತ್ತೇನೆ ; ಅಸುರವರೇಣ್ಯ!"–ಎಂದು ಉತ್ತರ ನೀಡಿಬಿಟ್ಟನು.

ಶ್ರೀನಾರದಮಹರ್ಷಿಗಳು ಹೇಳುತ್ತಾರೆ :

"ತನ್ನ ಪುತ್ರನು ಹೀಗೆ ಶತ್ರುಪಕ್ಷವನ್ನು ಪ್ರಶಂಸೆಮಾಡುತ್ತಾ ಅದಕ್ಕೆ ಅನುಕೂಲವಾಗಿರುವ ಮಾತುಗಳನ್ನಾಡಿದುದನ್ನು ಕೇಳಿ ಹಿರಣ್ಯಕಶಿಪುವಿಗೆ ಭಾರೀ ನಗುವು ಬಂದಿತು. 'ಇತರರು ಆಡುವ ಒಡುಕು ಮಾತುಗಳಿಂದ ಹುಡುಗರ ಬುದ್ಧಿಯು ಕೆಟ್ಟುಹೋಗುವುದು. ಗುರುಗಳ ಮನೆಯಲ್ಲಿ ವಿಷ್ಣುವಿನ ಪಕ್ಷಕ್ಕೆ ಸೇರಿದ ಯಾರೋ ಕೆಲವು ಬ್ರಾಹ್ಮಣರು ವೇಷ ಮರೆಸಿಕೊಂಡು ವಾಸಮಾಡುತ್ತಿದ್ದಾರೆಂದು ಕಾಣುತ್ತದೆ. ಅವರಿಂದ ನಮ್ಮಮಗುವಿನ ಬುದ್ಧಿಯು ವ್ಯತ್ಯಾಸಹೊಂದದಿರುವಂತೆ ಸರಿಯಾಗಿ ನೋಡಿ ಕೊಳ್ಳಿರಿ'–ಎಂದು ಆತನ ಅಧ್ಯಾಪಕರಿಗೆ ಆದೇಶವನ್ನು ನೀಡಿದನು. ದೈತ್ಯರು ಪ್ರಹ್ಲಾದನನ್ನು ಗುರುಗಳ ಮನೆಗೆ ತಲುಪಿಸಿದರು. ಆಗ ಪುರೋಹಿತರು ಆತನನ್ನು ಹತ್ತಿರಕ್ಕೆ ಕರೆದು ಸವಿಮಾತುಗಳಿಂದ ಪುಸಲಾಯಿಸುತ್ತಾ–"ಮಗು ಪ್ರಹ್ಲಾದ! ನಿನಗೆ ಮಂಗಳವಾಗಲಿ. ನಿಜವಾಗಿ ಹೇಳು. ಸುಳ್ಳುಹೇಳಬೇಡ. ನಿನ್ನ ಬುದ್ಧಿಯು ಏತಕ್ಕೆ ಹೀಗೆ ತಲೆಕೆಳಕಾಗಿ ಬಿಟ್ಟಿತು? ಬೇರೆ ಯಾವ ಹುಡುಗರಿಗೂ ಹೀಗೆ ಆಗಿಲ್ಲವಲ್ಲಾ! ಹೇಳು ; ಕುಲಮಣಿಯೇ! ನಿನ್ನ ಗುರುಗಳಾದ ನಾವು ಕೇಳುತ್ತಿದ್ದೇವೆ. ನಿನ್ನ ಬುದ್ಧಿಯು ತಾನಾಗಿಯೇ ಹೀಗೆ ಆಗಿಬಿಟ್ಟಿದೆಯೇ ಅಥವಾ ಬೇರೆ ಯಾರಾದರೂ ನಿನ್ನ ಬುದ್ಧಿಗೆ ಪ್ರಚೋದನೆ ಮಾಡಿದ್ದಾರೆಯೋ ಹೇಳು"–ಎಂದು ಕೇಳಿದರು. ಅದಕ್ಕೆ ಪ್ರಹ್ಲಾದನು ಹೀಗೆ ಉತ್ತರಿಸಿದನು :

(ಶ್ಲೋಕ 8-10)

ಸ್ವಃ ಪರಶ್ಚೇತ್ಯಸದ್ಗ್ರಾಹಃ ಪುಂಸಾಂ ಯನ್ಮಾಯಯಾ ಕೃತಃ ।
ವಿಮೋಹಿತಧಿಯಾಂ ದೃಷ್ಟಸ್ತಸ್ಮೈ ಭಗವತೇ ನಮಃ ॥೧೧॥

"ಯಾರ ಬುದ್ಧಿಯು ಮೋಹಕ್ಕೆ ಒಳಗಾಗಿದೆಯೋ–ಅವರಿಗೆ ಮಾತ್ರವೇ ಶ್ರೀಭಗವಂತನ ಮಾಯೆಯಿಂದ ಈ 'ನಾನು' 'ನನ್ನದು' ಎಂಬ ಕೆಟ್ಟ ಆಗ್ರಹವುಂಟಾಗುತ್ತದೆಯೆಂಬುದನ್ನು ನೋಡಿದ್ದೇನೆ. ಇಂತಹ ಮಾಯೆಗೆ ಅಧಿಪತಿಯಾಗಿರುವ ಶ್ರೀಭಗವಂತನಿಗೆ ನಮಸ್ಕಾರವು.

ಆ ಶ್ರೀಭಗವಂತನು ಕೃಪೆತೋರಿದಾಗಲೇ ಮನುಷ್ಯರ ಈ ಪಾಶವಿಕ ಬುದ್ಧಿಯು ನಾಶವಾಗುವುದು. 'ಇವನು ಬೇರೆ' 'ನಾನು ಬೇರೆ' ಎಂಬ ಈ ಕೆಟ್ಟ ಭೇದಭಾವವುಂಟಾಗುವುದಕ್ಕೆ ಈ ಪಶುಬುದ್ಧಿಯೇ ಕಾರಣ. ಆತ್ಮನನ್ನು ಅಜ್ಞಾನಿಗಳು 'ತನ್ನವನು ; ಪರಕೀಯನು'–ಎಂದು ಭೇದಭಾವದಿಂದ ವರ್ಣನೆಮಾಡುತ್ತಾರೆ. ಅವರಿಗೆ ಆತನನ್ನು ತಿಳಿಯಲು ಆಗದೇ ಇರುವುದು ಸರಿಯೇ ಆಗಿದೆ. ಏಕೆಂದರೆ : ಅವನ ತತ್ತ್ವವನ್ನು ತಿಳಿಯುವುದು ಬಹಳ ಕಷ್ಟ. ಬ್ರಹ್ಮದೇವರೇ ಮುಂತಾದ ದೊಡ್ಡ ವೇದಜ್ಞರೂ ಕೂಡ ಆತನ ವಿಷಯದಲ್ಲಿ ಮೋಹಕ್ಕೆ ಒಳಗಾಗುವರು. ನಿಮ್ಮ ಭಾಷೆಯಿಂದ ಹೇಳುವುದಾದರೆ–ನನ್ನ ಬುದ್ಧಿಯನ್ನು ಒಡೆದಿರುವವನು ಆ ಪರಮಾತ್ಮನೇ. ಗುರುದೇವರೇ! ಕಬ್ಬಿಣವು ಸೂಜಿಗಲ್ಲಿನ ಕಡೆಗೆ ತಾನಾಗಿಯೇ ಸೆಳೆಯಲ್ಪಡುವುದಿಲ್ಲವೇ! ಹಾಗೆಯೇ ನನ್ನ ಚಿತ್ತವೂ ಚಕ್ರಪಾಣಿಯಾದ ಶ್ರೀಭಗವಂತನ ಸ್ವತಂತ್ರವಾದ ಇಚ್ಛೆಯಂತೆ ಪ್ರಪಂಚವನ್ನು ಅಗಲಿ ಆತನ ಕಡೆಗೇ ಬಲವಂತವಾಗಿ ಸೆಳೆಯಲ್ಪಟ್ಟಿದೆ."

ಶ್ರೀ ನಾರದರು ಹೇಳುತ್ತಾರೆ :

"ಮಹಾಜ್ಞಾನಿಯಾದ ಪ್ರಹ್ಲಾದನು ಇಷ್ಟು ಹೇಳಿ ಸುಮ್ಮನಾಗಿಬಿಟ್ಟನು. ಬಡಪಾಯಿಗಳಾದ ಆ ಪುರೋಹಿತರಾದರೋ ರಾಜಸೇವಕರು ; ಪರಾಧೀನರು. ರಾಜನಿಗೆ ಹೆದರಿ ಅವರು ಪ್ರಹ್ಲಾದನ ಮೇಲೆ ಕೋಪಗೊಂಡು ಆತನನ್ನು ಗದರಿಸುತ್ತಾ ಹೀಗೆಂದರು : "ಅರೇ! ಯಾರಲ್ಲಿ? ಬೆತ್ತ ತೆಗೆದುಕೊಂಡು ಬಾರೋ. ಈತನಿಗೆ ಬುದ್ಧಿಕಲಿಸೋಣ. ಈತನು ನಮ್ಮ ಕೀರ್ತಿಗೆ ಕಳಂಕವನ್ನು ತರುತ್ತಿದ್ದಾನೆ. ಕುಲಾಂಗಾರನಾದ ಈ ದುರ್ಬುದ್ಧಿಗೆ

ನಾಲ್ಕನೆಯ ಉಪಾಯವಾದ ದಂಡವನ್ನು ಪ್ರಯೋಗಿಸುವುದೇ ಉಚಿತ ವಾಗಿದೆ. ದೈತ್ಯವಂಶವೆಂಬ ಶ್ರೀಗಂಧವೃಕ್ಷಗಳ ಕಾಡಿನಲ್ಲಿ ಈ ಮುಳ್ಳಿನ ಮರವು ಹೇಗೆ ಹುಟ್ಟಿಕೊಂಡಿತು? ಈ ಅರಣ್ಯವನ್ನು ಬುಡಸಹಿತ ಕತ್ತರಿಸಿಹಾಕುವ ವಿಷಯದಲ್ಲಿ ಕೊಡಲಿಯಂತೆ ಕೆಲಸಮಾಡುತ್ತಿರುವ ಯಾವ ವಿಷ್ಣುವುಂಟೋ ಆತನಿಗೆ ಕೊಡಲಿಯ ಕಾವಿನ ಕೆಲಸವನ್ನು ಮಾಡುತ್ತಿದ್ದಾನೆ ; ಆತನಿಗೆ ಸಹಾಯಕನಾಗುತ್ತಿದ್ದಾನೆ ; ಈ ಹುಡುಗ." ಹೀಗೆಲ್ಲಾ ಪ್ರಹ್ಲಾದನನ್ನು ಬಗೆ-ಬಗೆಯಾಗಿ ಗದರಿಸಿ, ಹೆದರಿಸಿ ಆತನಿಗೆ ಅರ್ಥ, ಧರ್ಮ ಮತ್ತು ಕಾಮ ಸಂಬಂಧವಾದ ಶಿಕ್ಷಣವನ್ನೇ ಶಂಡಾಮರ್ಕರು ಮುಂದುವರಿಸಿದರು. ಕೆಲವು ಕಾಲಾನಂತರ ಪ್ರಹ್ಲಾದನು ಸಾಮ, ದಾನ, ಭೇದ ಮತ್ತು ದಂಡಗಳೆಂಬ ನಾಲ್ಕು ಉಪಾಯಗಳಿಗೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ಗ್ರಹಿಸಿ ಯಾಗಿದೆಯೆಂಬುದು ತಿಳಿದನಂತರ ಗುರುಗಳು ಆತನನ್ನು ಆತನ ತಾಯಿಯ ಬಳಿಗೆ ಕರೆದುಕೊಂಡು ಹೋದರು. ತಾಯಿಯು ತುಂಬಾ ಪ್ರೀತಿಯಿಂದ ಆತನಿಗೆ ಮೈತೊಳೆದು ಸ್ನಾನಮಾಡಿಸಿ ಉಡಿಗೆ-ತೊಡಿಗೆಗಳಿಂದ ಅಲಂಕಾರ ಮಾಡಿದಳು. ಅನಂತರ ಗುರುಜನರು ಆತನನ್ನು ಹಿರಣ್ಯಕಶಿಪುವಿನ ಬಳಿಗೆ ಕೊಂಡೊಯ್ದರು. ಪ್ರಹ್ಲಾದನು ತನ್ನ ಪಾದಗಳಿಗೆ ಬೀಳಲು ದೈತ್ಯೇಂದ್ರನು ತನ್ನ ಆ ಪುತ್ರನಿಗೆ ಆಶೀರ್ವಾದಮಾಡಿ ಅಭಿನಂದಿಸಿ ಎರಡು ಕೈಗಳಿಂದಲೂ ಮೇಲೆತ್ತಿ ಬಹಳ ಹೊತ್ತಿನವರೆಗೆ ಆಲಿಂಗಿಸಿಕೊಂಡಿದ್ದು ಪರಮಾನಂದಭರಿತನಾದನು. ಯುಧಿಷ್ಠಿರ! ಆತನು ಪ್ರಸನ್ನವಾದ ಮುಖದಿಂದ ಪ್ರಹ್ಲಾದನನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡು ಆತನ ತಲೆಯನ್ನು ಮೂಸಿನೋಡಿದನು. ಆಗ ಆತನ ಕಣ್ಣುಗಳಿಂದ ಪ್ರೇಮದ ಆನಂದಬಾಷ್ಪಗಳು ಸುರಿ-ಸುರಿದು ಪ್ರಹ್ಲಾದನ ಶರೀರವನ್ನು ನೆನೆಸ ತೊಡಗಿತು. ಆಗ ಆತನು ಪುತ್ರನನ್ನು ಕುರಿತು–"ಮಗು ಪ್ರಹ್ಲಾದ! ಚಿರಂಜೀವಿಯಾಗು. ಇಷ್ಟು ಕಾಲದವರೆಗೆ ನೀನು ಗುರುಗಳಿಂದ ಏನು ಕಲಿತುಕೊಂಡಿದ್ದೀಯೋ ಅದರಲ್ಲಿ ಯಾವುದಾದರೂ ಒಂದು ಉತ್ತಮವಾದ ಮಾತನ್ನು ಹೇಳು ; ನೋಡೋಣ"–ಎಂದು ನುಡಿದನು. ಅದಕ್ಕೆ ಪ್ರಹ್ಲಾದಕುಮಾರನು ಹೀಗೆ ಉತ್ತರನೀಡಿದನು :

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।
ಅರ್ಚನಂ ವನ್ದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ॥೨೩॥

ಇತಿ ಪುಂಸಾರ್ಪಿತಾ ವಿಷ್ಣೌ ಭಕ್ತಿಶ್ಚೇನ್ನವಲಕ್ಷಣಾ ।
ಕ್ರಿಯತೇ ಭಗವತ್ಯದ್ಧಾ ತನ್ಮನ್ಯೇಽಧೀತಮುತ್ತಮಮ್ ॥೨೪॥

"ತೀರ್ಥರೂಪರೇ! ಶ್ರೀಭಗವಂತನಾದ ವಿಷ್ಣುವಿನ ಗುಣಗಳನ್ನೂ-ನಾಮಗಳನ್ನೂ ಕೇಳುವಿಕೆ, ಸಂಕೀರ್ತನೆ ಮಾಡುವಿಕೆ, ನಾಮ-ರೂಪಾದಿಗಳನ್ನು ಸ್ಮರಣೆ ಮಾಡುವಿಕೆ, ಪಾದಸೇವೆ ಮಾಡುವಿಕೆ, ಪೂಜೆ-ಅರ್ಚನೆ ನಮಸ್ಕಾರ ಮಾಡುವಿಕೆ, ದಾಸನಾಗಿ ಕೈಂಕರ್ಯಮಾಡುವಿಕೆ, ಸ್ನೇಹಿತನಂತೆ ಪ್ರೀತಿಸುವಿಕೆ ಮತ್ತು ಕಡೆಯದಾಗಿ ಆತ್ಮನಿವೇದನೆ ಎಂದರೆ : ತನ್ನ ಆತ್ಮವನ್ನೇ ಸಂಪೂರ್ಣವಾಗಿ ಶ್ರೀಭಗವಂತನಿಗೆ ಸಮರ್ಪಿಸಿ ಬಿಡುವಿಕೆ–ಎಂಬೀ ಒಂಬತ್ತು ಬಗೆಗಳಲ್ಲಿ ಶ್ರೀಭಗವಂತನಲ್ಲಿ ಭಕ್ತಿಭಾವವನ್ನು ಸಮರ್ಪಣೆಮಾಡುವುದು ಉತ್ತಮವಾದ ಅಧ್ಯಯನವೆಂದು ನಾನು ತಿಳಿಯುತ್ತೇನೆ."

ಪ್ರಹ್ಲಾದನ ಈ ಮಾತನ್ನು ಕೇಳಿದೊಡನೆಯೇ ಕ್ರೋಧದಿಂದ ಹಿರಣ್ಯಕಶಿಪುವಿನ ತುಟಿಗಳು ಅದುರತೊಡಗಿದುವು. ಆತನು ಗುರುಪುತ್ರನ ಕಡೆ ತಿರುಗಿ–"ಎಲೈ ಬ್ರಾಹ್ಮಣಾಧಮನೇ! ನೀನು ಎಂತಹ ಪಿತೂರಿಯನ್ನು ಮಾಡಿದ್ದೀಯೆ. ದುರ್ಬುದ್ಧಿಯವನೇ! ನನ್ನನ್ನು ಸ್ವಲ್ಪವೂ ಲಕ್ಷಿಸದೇ ಈ ಮಗುವಿಗೆ ಎಂತಹ ನಿಸ್ಸಾರವಾದ ವಿಷಯವನ್ನು ಬೋಧನೆಮಾಡಿದ್ದೀಯೇ. ನಿಶ್ಚಯವಾಗಿಯೂ ನೀನು ನನ್ನ ಶತ್ರುಗಳ ಪಕ್ಷಕ್ಕೇ ಸೇರಿರುವವನು. ಅವರನ್ನು ಆಶ್ರಯಿಸಿರುವವನು. ಪ್ರಪಂಚದಲ್ಲಿ ಸ್ನೇಹಿತರ ವೇಷಧರಿಸಿ ಒಳಗೊಳಗೇ ಶತ್ರುಗಳ ಕಾರ್ಯವನ್ನು ಮಾಡುವ ದುಷ್ಟರು ಅನೇಕಮಂದಿ ಉಂಟು. ಆದರೆ ಒಂದಲ್ಲ ಒಂದು ದಿನ ಅವರ ಕಪಟವು ಬಹಿರಂಗಕ್ಕೆ ಬಂದೇ ಬರುವುದು. ಮರೆಯಲ್ಲಿ ಯಾವನು ಪಾಪವನ್ನು ಆಚರಿಸುತ್ತಾನೆಯೋ ಆತನ ಪಾಪಗಳು ಕಾಲವಿಶೇಷದಲ್ಲಿ ರೋಗದ ರೂಪದಲ್ಲಿ ಪ್ರಕಟಗೊಂಡು ಬಿಡುವಂತೆ–ಅವರ ರಹಸ್ಯವೂ ಸಕಾಲದಲ್ಲಿ ಪ್ರಕಾಶಕ್ಕೆ ಬಂದೇ ಬರುವುದು"–ಎಂದು ಗುರುಪುತ್ರನಿಗೆ ಛೀಮಾರಿಮಾಡಿ ಗದರಿಸಿದನು. ಅದಕ್ಕೆ ಗುರುಪುತ್ರನು ಹೀಗೆ ಉತ್ತರವನ್ನು ಬಿನ್ನವಿಸಿದನು :

"ಎಲೈ ಇಂದ್ರಶತ್ರುವೇ! ನಿನ್ನ ಪುತ್ರನು ಏನನ್ನು ಹೇಳುತ್ತಿದ್ದಾನೆಯೋ–ಅದು ನಾನು ಹೇಳಿಕೊಟ್ಟದ್ದೂ ಅಲ್ಲ ; ಬೇರೆ ಯಾವನೋ ಒಬ್ಬನ ಪ್ರೇರಣೆಯಿಂದ ಬಂದುದೂ ಅಲ್ಲ. ಅದು ಇವನ ಹುಟ್ಟಿನ ಗುಣವಾಗಿದೆ. ಸಾರ್ವಭೌಮನೇ! ಕೋಪವನ್ನು ಉಪಸಂಹಾರ ಮಾಡಿಕೋ. ವ್ಯರ್ಥವಾಗಿ ನಮ್ಮ ಮೇಲೆ ದೋಷವನ್ನು ಆರೋಪಿಸಬೇಡ.

ನಾರದರು ಹೇಳುತ್ತಾರೆ :

ಯುಧಿಷ್ಠಿರ! ಗುರುಗಳು ಹೀಗೆ ಉತ್ತರ ನೀಡಲು ಹಿರಣ್ಯಕಶಿಪುವು ಮತ್ತೆ ಪ್ರಹ್ಲಾದನನ್ನು–"ಎಲವೋ! ನಿನಗೆ ಅಹಿತವನ್ನುಂಟುಮಾಡುವ ಈ ಮೋಸದ ಬುದ್ಧಿಯು ಗುರುಮುಖದಿಂದ ಬಂದಿಲ್ಲವಾದರೆ ಬೇರೆಲ್ಲಿಂದ ಬಂದಿತು?"–ಎಂದು ಪ್ರಶ್ನಿಸಿದನು. ಅದಕ್ಕೆ ಪ್ರಹ್ಲಾದನು ತಂದೆಗೆ ಹೀಗೆ ಉತ್ತರಕೊಟ್ಟನು : (ಶ್ಲೋಕ 25-29)

ಮತಿರ್ನ ಕೃಷ್ಣೇ ಪರತಃ ಸ್ವತೋ ವಾ
ಮಿಥೋಽಭಿಪದ್ಯೇತ ಗೃಹವ್ರತಾನಾಮ್ ।
ಅದಾನ್ತಗೋಭಿರ್ವಿಶತಾಂ ತಮಿಸ್ರಂ
ಪುನಃ ಪುನಶ್ಚರ್ವಿತಚರ್ವಣಾನಾಮ್ ॥೩೦॥

"ಅಪ್ಪಾ! ಸಂಸಾರಿಗಳಿಗೆ ಇಂದ್ರಿಯಗಳ ಮೇಲೆ ಹತೋಟಿಯಿಲ್ಲದಿರುವುದರಿಂದ ಅವರು ತಾವು ಅನುಭವಿಸಿದ ವಿಷಯಗಳನ್ನೇ ಮತ್ತೆ ಮತ್ತೆ ಅನುಭವಿಸುವುದಕ್ಕೋಸ್ಕರ ಸಂಸಾರವೆಂಬ ಘೋರವಾದ ನರಕದ ಕಡೆಗೆ ಹೋಗುತ್ತಿರುವರು. ಅಗಿದಿದ್ದನ್ನೇ ಮತ್ತೆ ಮತ್ತೆ ಅಗಿಯುವ ಬಡಪಾಯಿಗಳು; ಮೂರ್ಖರು. ಹೀಗೆ ಮನೆ ಮತ್ತು ಮನೆವಾರ್ತೆಗಳಲ್ಲಿ ಆಸಕ್ತರಾಗಿ ರುವ ಜನರಿಗೆ ಇತರರ ಉಪದೇಶಗಳಾಗಲೀ ಅಥವಾ ತಮ್ಮಂತೆಯೇ ಇರುವ ಜನರ ಸಹವಾಸದಿಂದಾಗಲೀ ಮನಸ್ಸು ಭಗವಂತನಾದ ಶ್ರೀಕೃಷ್ಣನಲ್ಲಿ ಆಸಕ್ತವಾಗುವುದಿಲ್ಲ.

ನ ತೇ ವಿದುಃ ಸ್ವಾರ್ಥಗತಿಂ ಹಿ ವಿಷ್ಣುಂ
ದುರಾಶಯಾ ಯೇ ಬಹಿರರ್ಥಮಾನಿನಃ ।
ಅನ್ಧಾ ಯಥಾನ್ಧೈರುಪನೀಯಮಾನಾ
ವಾಚೀಶತನ್ತ್ಯಾಮುರುದಾಮ್ನಿ ಬದ್ಧಾಃ ॥೩೧॥

ಅವರು ಇಂದ್ರಿಯಗಳಿಗೆ ಗೋಚರವಾಗುವ ಹೊರಗಿನ ವಿಷಯ ಗಳನ್ನೇ ಇಷ್ಟತಮವೆಂದು ಭಾವಿಸಿ ಮೂರ್ಖತೆಯಿಂದ ಕುರುಡರನ್ನು ಹಿಂಬಾಲಿಸುವ ಕುರುಡರಂತೆ–ಹಳ್ಳಕ್ಕೆ ಬೀಳಲು ಹೋಗುತ್ತಿರುವರು. ವೇದ ಪ್ರೋಕ್ತವಾದ ಕಾಮ್ಯಕರ್ಮಗಳೆಂಬ ಉದ್ದವಾದ ಹಗ್ಗಕ್ಕೆ ಕಟ್ಟುಬಿದ್ದಿರುವರು. 'ನಮಗೆ ಸ್ವಾರ್ಥ ಮತ್ತು ಪರಮಾರ್ಥಗಳೆರಡೂ ಭಗವಂತನಾದ ಶ್ರೀವಿಷ್ಣುವೇ ಆಗಿದ್ದಾನೆ. ಆತನನ್ನು ಹೊಂದಿದರೆ ಮಾತ್ರವೇ ಸಮಸ್ತ ಪುರುಷಾರ್ಥಗಳೂ ಸಿದ್ಧಿಸುವುವು'–ಎಂಬುದನ್ನು ಅವರು ಅರಿಯರು.

ನೈಷಾಂ ಮತಿಸ್ತಾವದುರುಕ್ರಮಾಙ್ಘ್ರಿಂ
ಸ್ಪೃಶತ್ಯನರ್ಥಾಪಗಮೋ ಯದರ್ಥಃ ।
ಮಹೀಯಸಾಂ ಪಾದರಜೋಽಭಿಷೇಕಂ
ನಿಷ್ಕಿಞ್ಚನಾನಾಂ ನ ವೃಣೀತ ಯಾವತ್ ॥೩೨॥

ಇದಕ್ಕೆ ವಿರುದ್ಧವಾಗಿ ಯಾರ ಬುದ್ಧಿಯು ಶ್ರೀಭಗವಂತನ ಚರಣ ಕಮಲಗಳನ್ನು ಮುಟ್ಟುವುದೋ–ಅವರಿಗೆ ಹುಟ್ಟು-ಸಾವುಗಳೆಂಬ ಅನರ್ಥವು ಪೂರ್ಣವಾಗಿ ನಾಶವಾಗಿಬಿಡುವುದು. ಆದರೆ ಯಾರು ವೈರಾಗ್ಯ ಶೀಲರಾದ ಮಹಾತ್ಮರ ಪಾದಧೂಳಿಯಲ್ಲಿ ಸ್ನಾನವನ್ನು ಮಾಡುವು ದಿಲ್ಲವೋ–ಅವರ ಬುದ್ಧಿಯು ಕಾಮ್ಯಕರ್ಮಗಳಲ್ಲಿ ಪೂರ್ಣವಾಗಿ ಸ್ನಾನ ಮಾಡಿದರೂ ಶ್ರೀಭಗವಂತನ ಶ್ರೀಚರಣಗಳನ್ನು ಮುಟ್ಟುವುದಿಲ್ಲ."

ಪ್ರಹ್ಲಾದನು ಇಷ್ಟು ಹೇಳಿ ಸುಮ್ಮನಾಗಲು ಹಿರಣ್ಯಕಶಿಪುವು ಕೋಪದಿಂದ ಕುರುಡನಾಗಿ ಆತನನ್ನು ತೊಡೆಯಿಂದ ಎತ್ತಿ ನೆಲದ ಮೇಲೆ ಕುಕ್ಕಿಬಿಟ್ಟನು. ಪ್ರಹ್ಲಾದನ ಮಾತನ್ನು ಆತನಿಗೆ ಸಹಿಸಲಾಗಲಿಲ್ಲ. ಆತನ ಕಣ್ಣುಗಳು ಕ್ರೋಧದಿಂದ ಕೆಂಪೇರಿದುವು. ಆತನು ತನ್ನ ಸೇವಕರಿಗೆ ಹೀಗೆ ಆದೇಶಮಾಡಿದನು : "ಎಲೈ ದೈತ್ಯರೇ! ಈತನನ್ನು ಇಲ್ಲಿಂದ ಎತ್ತಿಕೊಂಡು ಹೋಗಿ ಒಡನೆಯೇ ಕೊಂದುಹಾಕಿಬಿಡಿರಿ. ಈತನು ವಧೆಗೆ ತಾನೇ ಯೋಗ್ಯನು? ನೋಡಿ! ಈತನು ತನ್ನ ಸ್ನೇಹಿತರನ್ನೂ–ನೆಂಟರಿಷ್ಟ ರನ್ನೂ ತೊರೆದು, ತನ್ನ ಚಿಕ್ಕಪ್ಪನನ್ನೇ ಕೊಂದುಹಾಕಿದ ವಿಷ್ಣುವಿನ ಚರಣ ಗಳನ್ನು ದಾಸನಂತೆ ಪೂಜಿಸುತ್ತಿದ್ದಾನಲ್ಲಾ! ನನ್ನ ಸೋದರನನ್ನು ವಧಿಸಿದ

ವಿಷ್ಣುವೇ ಈತನ ರೂಪದಲ್ಲಿ ಬಂದಿರಬಾರದೇಕೆ? ಈಗ ಈತನು ನಂಬಿಕೆಗೆ ಯೋಗ್ಯನಲ್ಲ. ಐದು ವರ್ಷ ವಯಸ್ಸಿನವನಾಗಿರುವಾಗಲೇ ಯಾವನು ಬಿಡುವುದಕ್ಕೆ ಕಷ್ಟವಾಗಿರುವ ತನ್ನ ತಂದೆ-ತಾಯಿಗಳ ಸ್ನೇಹವನ್ನೇ ಮರೆತುಬಿಟ್ಟಿದ್ದಾನೆಯೋ–ಅಂತಹ ಕೃತಘ್ನನು ಆ ವಿಷ್ಣುವಿಗಾದರೂ ಏನು ಒಳ್ಳೆಯದನ್ನು ಮಾಡಿಯಾನು? (ಶ್ಲೋಕ 33-36)

ಪರೋಽಪ್ಯಪತ್ಯಂ ಹಿತಕೃದ್ಯಥೌಷಧಂ
ಸ್ವದೇಹಜೋಽಪ್ಯಾಮಯವತ್ಸುತೋಽಹಿತಃ ।
ಛಿನ್ದ್ಯಾತ್ತದಙ್ಗಂ ಯದುತಾತ್ಮನೋಽಹಿತಂ
ಶೇಷಂ ಸುಖಂ ಜೀವತಿ ಯದ್ವಿವರ್ಜನಾತ್ ॥೩೭॥

ಪರಕೀಯನೇ ಆದರೂ ಔಷಧದಂತೆ ಹಿತವನ್ನು ಆಚರಿಸಿದರೆ–ಆತನು ಪುತ್ರನಿಗೆ ಸಮಾನ. ತನ್ನ ಪುತ್ರನೇ ಆಗಿದ್ದರೂ ಅಹಿತವನ್ನು ಆಚರಿಸಿದರೆ–ಆತನು ರೋಗದಂತೆ ಶತ್ರುವೇ ಆಗುತ್ತಾನೆ. ಶರೀರದ ಯಾವುದಾದರೂ ಅವಯವದಿಂದ ಇಡೀ ಶರೀರಕ್ಕೆ ಹಾನಿಯುಂಟಾಗುವ ಹಾಗಿದ್ದರೆ ಅದು ಶರೀರದ ಅಂಗವೇ ಆಗಿದ್ದರೂ ಅದನ್ನು ಕತ್ತರಿಸಿಹಾಕಬೇಕು. ಏಕೆಂದರೆ : ಹಾಗೆಮಾಡಿದರೆ ಉಳಿದಿರುವ ಶರೀರಭಾಗವು ಸುಖವಾಗಿರುವುದು.

ಈತನು ಸ್ವಜನರ ವೇಷವನ್ನು ಧರಿಸಿ ಬಂದಿರುವ ಶತ್ರುವೇ ಆಗಿರುವನು. ಭೋಗಾಸಕ್ತವಾದ ಇಂದ್ರಿಯಗಳು ಯೋಗಿಗೆ ಅನಿಷ್ಟವನ್ನುಂಟು ಮಾಡುವಂತೆ–ಈತನು ನನಗೆ ಕೆಡಕನ್ನೇ ತರುವನು. ಆದುದರಿಂದ ಈತನು ತಿನ್ನುವ ಸಮಯದಲ್ಲಾಗಲೀ, ಮಲಗಿರುವ ಸಮಯದಲ್ಲಾಗಲೀ, ಕುಳಿತಿರುವ ಸಮಯದಲ್ಲಾಗಲೀ ಅಥವಾ ಬೇರಾವುದೇ ಸಮಯದಲ್ಲಾಗಲೀ ಯಾವುದಾದರೂ ಉಪಾಯದಿಂದ ಈತನನ್ನು ಕೊಂದುಹಾಕಿಬಿಡಿರಿ."

ಹಿರಣ್ಯಕಶಿಪುವು ಹೀಗೆ ಆಜ್ಞೆಯನ್ನು ನೀಡಲು–ತೀಕ್ಷ್ಣವಾದ ಕೋರೆ ದಾಡೆಗಳಿಂದಲೂ, ವಿಕರಾಳವಾದ ಮುಖದಿಂದಲೂ, ಕೆಂಬಣ್ಣದ ಗಡ್ಡ-ಮೀಸೆ-ತಲೆಗೂದಲುಗಳಿಂದಲೂ ಕೂಡಿದ್ದ ಭೀಕರಗುಣ-ರೂಪಗಳುಳ್ಳ ದೈತ್ಯರು ಕೈಗಳಲ್ಲಿ ತ್ರಿಶೂಲಗಳನ್ನು ಎತ್ತಿಕೊಂಡು–'ಕೊಲ್ಲು! ಕತ್ತರಿಸು! ಸೀಳಿಹಾಕು!'–ಎಂದು ಮೊದಲಾಗಿ ಗಟ್ಟಿಯಾಗಿ ಕೂಗಿಕೊಳ್ಳತೊಡಗಿದರು.

ಆಗ ಪ್ರಹ್ಲಾದಕುಮಾರನು ಮೌನವಾಗಿ ಸುಮ್ಮನೆ ಕುಳಿತುಕೊಂಡಿದ್ದನು. ದುಷ್ಟದೈತ್ಯರು ಆ ಮಗುವಿನ ಎಲ್ಲ ಮರ್ಮಸ್ಥಾನಗಳನ್ನೂ ಶೂಲದಿಂದ ತಿವಿಯುತ್ತಿದ್ದರು. ಆಗ ಭಕ್ತಪ್ರಹ್ಲಾದನ ಚಿತ್ತವು–ಮನಸ್ಸು ಮಾತುಗಳಿಗೆ ಅಗೋಚರನಾಗಿ, ಸರ್ವಾತ್ಮನಾಗಿ, ಸಮಸ್ತಶಕ್ತಿಗಳಿಗೂ ಆಧಾರವಾಗಿರುವ ಪರಬ್ರಹ್ಮ ಪರಮಾತ್ಮನಲ್ಲಿ ನೆಟ್ಟುಹೋಗಿತ್ತು. ಆದುದರಿಂದ ಅವರ ಏಟುಗಳೆಲ್ಲವೂ–ಭಾಗ್ಯವಿಲ್ಲದವರು ಮಾಡುವ ಮಹತ್ಕಾರ್ಯಗಳಂತೆ ವ್ಯರ್ಥವಾಗಿಬಿಟ್ಟುವು. ಶೂಲಗಳ ಪ್ರಹಾರಗಳಿಂದ ಪ್ರಹ್ಲಾದನ ಶರೀರದ ಮೇಲೆ ಯಾವ ಪರಿಣಾಮವೂ ಆಗದೇ ದೈತ್ಯರ ಪ್ರಯಾಸಗಳೆಲ್ಲಾ ನಿಷ್ಫಲವಾದುದನ್ನು ಕಂಡು ಹಿರಣ್ಯಕಶಿಪುವಿಗೆ ಭಾರೀ ಚಿಂತೆ-ಶಂಕೆಗಳು ಉಂಟಾದುವು. ಆಗ ಆತನು ಹಠತೊಟ್ಟು ಪ್ರಹ್ಲಾದನನ್ನು ಕೊಂದುಹಾಕಲು ಬಗೆ-ಬಗೆಯ ಉಪಾಯಗಳನ್ನು ಮಾಡತೊಡಗಿದನು. ಆತನು ಆ ಬಾಲಕನನ್ನು ದಿಗ್ಗಜಗಳಿಂದ ತುಳಿಸಿದನು. ವಿಷಸರ್ಪಗಳಿಂದ ಕಚ್ಚಿಸಿದನು. ಪುರೋಹಿತರಿಂದ ಮದ್ದು-ಮಾಟಗಳೇ ಮುಂತಾದ ಆಭಿಚಾರಿಕ ಪ್ರಯೋಗ ಗಳನ್ನು ಮಾಡಿಸಿದನು. ಪರ್ವತದ ಶಿಖರದಿಂದ ಕೆಳಕ್ಕೆ ತಳ್ಳಿಸಿದನು. ಶಂಬರಾಸುರನಿಂದ ಬಗೆ-ಬಗೆಯ ಮಾಯೆಗಳನ್ನು ಮಾಡಿಸಿದನು. ಕಗ್ಗತ್ತಲೆಯ ಕೋಣೆಯಲ್ಲಿ ಕೂಡಿಹಾಕಿಸಿದನು. ವಿಷಕುಡಿಸಿದನು. ಆಹಾರ ಸೇವನೆಯನ್ನು ತಪ್ಪಿಸಿದನು. ಕೊರೆಯುವ ಮಂಜಿನ ಮೇಲೂ ಧಗ-ಧಗನೆ ಉರಿಯುವ ಬೆಂಕಿಯಲ್ಲೂ ಮತ್ತೆ ಮತ್ತೆ ಹಾಕಿಸಿದನು. ಮಹಾಸಮುದ್ರದಲ್ಲಿ ಬಾರಿ-ಬಾರಿಗೂ ಬೀಳಿಸಿದನು. ಬಿರುಗಾಳಿಗೆ ತಳ್ಳಿಸಿದನು ಮತ್ತು ಪರ್ವತ ಗಳ ಕೆಳಗೆ ಅದುಮಿಸಿದನು. ಆದರೆ ಯಾವುದೇ ಉಪಾಯಗಳಿಂದಲೂ ಆತನಿಗೆ ಪಾಪರಹಿತನಾದ ತನ್ನ ಆ ಪುತ್ರನ ಕೂದಲನ್ನೂ ಅಲುಗಾಡಿಸಲು ಸಾಧ್ಯವಾಗಲಿಲ್ಲ. ಈ ನಿಷ್ಫಲತೆ-ನಿರಾಶೆಗಳಿಂದ ಹಿರಣ್ಯಕಶಿಪುವಿಗೆ ತುಂಬಾ ಚಿಂತೆಯಾಯಿತು. ಆ ಬಾಲಕನನ್ನು ವಧಿಸಲು ಆತನಿಗೆ ಬೇರಾವ ಉಪಾಯವೂ ತೋರಲಿಲ್ಲ. (ಶ್ಲೋಕ 41-44)

'ಏನಿದು ಆಶ್ಚರ್ಯ! ನಾನು ಈತನನ್ನು ಸಿಕ್ಕಾಪಟ್ಟೆಯಾಗಿ ಕೆಟ್ಟ ಮಾತುಗಳಿಂದ ಥಳಿಸಿದೆನು. ಕೊಂದುಹಾಕಲು ಹಲವಾರು ಉಪಾಯಗಳನ್ನು ಮಾಡಿದೆನು. ಆದರೂ ಈತನು ಬೇರೆ ಯಾರ ಸಹಾಯವೂ ಇಲ್ಲದೇ ನನ್ನ

ಬಳಿಯಲ್ಲೇ ಇರುತ್ತಿರುವನು. ಈತನಲ್ಲಿ ಏನೋ ಅದ್ಭುತವಾದ ಸಾಮರ್ಥ್ಯ ವಿದೆ. ಶುನಃಶೇಫನು* ತನ್ನ ತಂದೆಯ ನೀಚತನದ ದೌರ್ಜನ್ಯಗಳನ್ನು ಮರೆಯದೇ ಆತನಿಗೆ ವಿರೋಧಿಯಾದಂತೆ–ಈತನು ನಾನು ಮಾಡಿರುವ ಅಪಕಾರಗಳನ್ನು ಮರೆಯದೇ ನನಗೆ ವಿರೋಧಿಯೇ ಆಗುವನು. '**ನ ವಿಸ್ಮರತಿ ಮೇಽನಾರ್ಯಂ ಶುನಃಶೇಫ ಇವ ಪ್ರಭುಃ**' ಈತನ ಶಕ್ತಿಯನ್ನು ಅಳೆಯಲು ಸಾಧ್ಯವಾಗುವುದಿಲ್ಲ. ಈತನು ಯಾರಿಗೂ ಹೆದರುವುದಿಲ್ಲ. ಏನು ಮಾಡಿದರೂ ಸಾಯುವುದಿಲ್ಲ. ಎಂತಹ ಶಕ್ತಿ ಈತನದು! ಈತನ ವಿರೋಧದಿಂದ ಅವಶ್ಯವಾಗಿಯೂ ನನಗೆ ಮರಣವು ಒದಗುವ ಸಂಭವ ವುಂಟು. ಅಥವಾ ಹಾಗೆ ಮರಣವು ಒದಗದೆಯೂ ಇರಬಹುದು. ಏನು ಬೇಕಾದರೂ ಆಗಬಹುದು. ಈಗ ನಾನೇನು ಮಾಡುವುದು?'–ಹೀಗೆಲ್ಲಾ ಯೋಚಿಸುತ್ತಿದ್ದ ಹಿರಣ್ಯಕಶಿಪುವಿನ ಮುಖವು ಸ್ವಲ್ಪ ಬಾಡಿತು. ಆತನು ತಲೆತಗ್ಗಿಸಿ ಕುಳಿತುಕೊಂಡನು. ಹೀಗೆ ಚಿಂತೆಯಿಂದ ಕಾಂತಿಗುಂದಿದ್ದ ರಾಜನನ್ನು ಶುಕ್ರಪುತ್ರರಾದ ಶಂಡಾಮರ್ಕರು ಏಕಾಂತಪ್ರದೇಶಕ್ಕೆ ಕರೆದುಕೊಂಡು ಹೋಗಿ ಆತನಿಗೆ ಹೀಗೆಂದರು : "ಮಹಾರಾಜ! ಒಬ್ಬಂಟಿಗನಾಗಿಯೇ ಮೂರು ಲೋಕಗಳನ್ನೂ ಜಯಿಸಿ ಬಂದ ಅಸಹಾಯಶೂರನಲ್ಲವೇ ನೀನು! ನೀನು ಒಮ್ಮೆ ಹುಬ್ಬುಗಳನ್ನು ಓರೆಮಾಡಿದರೆ ಸಾಕು. ಲೋಕಪಾಲಕರೆಲ್ಲರೂ ನಡುಗಿ ಹೋಗುವರು. ಹೀಗಿರುವಾಗ ನೀನು ಚಿಂತೆಪಡಲು ಕಾರಣವೇನು? ಹಾಗೆ ನೀನು ಚಿಂತೆಪಡಲು ಯಾವ ಕಾರಣವೂ ನಮಗೆ ಕಾಣುವುದಿಲ್ಲ. ಮಕ್ಕಳು ಆಟಗಾರಿಕೆಯಲ್ಲಿ ಮಾಡುವ ಸರಿ-ತಪ್ಪುಗಳನ್ನು ಕುರಿತು ಯಾರಾದರೂ ಚಿಂತೆಪಡುವರೇ? '**ನ ವೈ ಶಿಶೂನಾಂ ಗುಣದೋಷಯೋಃ ಪದಂ**' ಗುರುಗಳಾದ ಭಾರ್ಗವರು ಬರುವವರೆಗೂ ಈತನು ಹೆದರಿ ಓಡಿಹೋಗದೇ

---

* ಶುನಃಶೇಫನು ಅಜೀಗರ್ತನ ಮಧ್ಯದ ಮಗ. ತಂದೆಯು ಆತನನ್ನು ವರುಣನ ಯಜ್ಞದಲ್ಲಿ ಬಲಿಕೊಡಲು ಹರಿಶ್ಚಂದ್ರನ ಪುತ್ರನಾದ ರೋಹಿತಾಶ್ವನಿಗೆ ಮಾರಿ ಬಿಟ್ಟಿದ್ದನು. ಆಗ ಕರುಣಾಳುವಾದ ಮಾವ ವಿಶ್ವಾಮಿತ್ರನು ಆತನನ್ನು ರಕ್ಷಣೆ ಮಾಡಿದನು. ಹಾಗೆ ರಕ್ಷಿತನಾದ ಶುನಃಶೇಫನನ್ನು ತಂದೆಯು ತನ್ನ ಬಳಿಗೆ ಬರ ಬೇಕೆಂದು ಕರೆದಾಗ ಶುನಃಶೇಫನು ಆತನ ಮಾತಿನಂತೆ ನಡೆಯಲಿಲ್ಲ. ಆತನಿಗೆ ವಿರೋಧಿಯೇ ಆಗಿ ತಂದೆಯ ಗೋತ್ರವನ್ನು ಬಿಟ್ಟು ವಿಶ್ವಾಮಿತ್ರನ ಗೋತ್ರಕ್ಕೆ ಸೇರಿ

ಇರುವಂತೆ ಈತನನ್ನು ವರುಣನ ಪಾಶಗಳಿಂದ ಕಟ್ಟಿಹಾಕಿಬಿಡು. ವಯಸ್ಸು ಆಗುತ್ತಾ ಆಗುತ್ತಾ ಮತ್ತು ಗುರು-ಹಿರಿಯರ ಸೇವೆ ಮಾಡುತ್ತಾ ಮಾಡುತ್ತಾ ಮನುಷ್ಯರಿಗೆ ಬುದ್ಧಿಬರುವುದು." (ಶ್ಲೋಕ 45-50)

ಹಿರಣ್ಯಕಶಿಪುವು 'ಹಾಗೆಯೇ ಆಗಲಿ' ಎಂದು ಗುರುಪುತ್ರರ ಸಲಹೆ ಯನ್ನು ಒಪ್ಪಿಕೊಂಡು 'ಈತನಿಗೆ ಗೃಹಸ್ಥರಾಗಿರುವ ರಾಜರು ಆಚರಿಸಬೇಕಾದ ಧರ್ಮಗಳನ್ನೇ ಉಪದೇಶಮಾಡಿರಿ'–ಎಂದು ಗುರುಪುತ್ರರಿಗೆ ಆದೇಶಮಾಡಿದನು. ಅದರಂತೆಯೇ ಶಂಡಾಮರ್ಕರು ಪ್ರಹ್ಲಾದನನ್ನು ಪಾಠಶಾಲೆಗೆ ಕರೆದುಕೊಂಡು ಹೋಗಿ ಆತನಿಗೆ ಕ್ರಮವಾಗಿ ಧರ್ಮ, ಅರ್ಥ ಮತ್ತು ಕಾಮಗಳನ್ನು ಕುರಿತು ಶಿಕ್ಷಣವನ್ನು ನೀಡತೊಡಗಿದರು. ಪ್ರಹ್ಲಾದನು ಅತ್ಯಂತನಮ್ರನಾದ ಸೇವಕನಂತೆ ಗುರುಗಳಲ್ಲಿ ವರ್ತಿಸುತ್ತಾ ಅವರ ಆ ಬೋಧನೆಯನ್ನು ಕೇಳುತ್ತಿದ್ದನು. ಆದರೆ ಆತನಿಗೆ ಗುರುಗಳು ನೀಡುತ್ತಿದ್ದ ಆ ಶಿಕ್ಷಣವು ಒಳ್ಳೆಯದೆಂದು ಎನ್ನಿಸಲಿಲ್ಲ. ಮನಸ್ಸಿಗೆ ರುಚಿಸಲಿಲ್ಲ. ಏಕೆಂದರೆ : ರಾಗ-ದ್ವೇಷಗಳೇ ಮುಂತಾದ ದ್ವಂದ್ವಗಳಲ್ಲಿಯೂ ಮತ್ತು ವಿಷಯಭೋಗಗಳಲ್ಲಿಯೂ ರಸವನ್ನನುಭವಿಸವಂತಹ ಜನರಿಗೆ ಮಾತ್ರವೇ ಆ ಶಿಕ್ಷಣವು ಯೋಗ್ಯವಾಗಿತ್ತು. ಧರ್ಮ, ಅರ್ಥ ಮತ್ತು ಕಾಮಗಳೆಂಬ ತ್ರಿವರ್ಗಗಳನ್ನು ಮಾತ್ರವೇ ಗುರುಗಳು ಅಲ್ಲಿ ಬೋಧಿಸುತ್ತಿದ್ದರು.

ಒಂದು ದಿನ ಗುರುಗಳು ಮನೆಯ ಕೆಲಸಕ್ಕಾಗಿ ಎಲ್ಲೋ ಹೊರಗೆ ಹೋಗಿದ್ದರು. ಪಾಠಕ್ಕೆ ವಿರಾಮ ಸಿಕ್ಕಿದ್ದರಿಂದ ಸಮವಯಸ್ಸಿನ ಬಾಲಕರು

ಬಿಟ್ಟನು. ಆದ್ದರಿಂದ ಆತನನ್ನು ವಿಶ್ವಾಮಿತ್ರನ ಕೃತ್ರಿಮಪುತ್ರನಾದ ದೇವರಾತನೆಂದು ಕರೆಯುತ್ತಾರೆ. ಶ್ರೀಮದ್ರಾಮಾಯಣದ ಪ್ರಕಾರ ಆತನನ್ನು ಯಜ್ಞಕ್ಕಾಗಿ ಕೊಂಡುಕೊಂಡವನು ಅಂಬರೀಷಮಹಾರಾಜ.

'ನನಗೆ ಇನ್ನೊಂದು ನೂರು ಹಸುಗಳನ್ನು ಕೊಟ್ಟರೆ ನಾನೇ ಈತನನ್ನು ಬಲಿ ಕೊಡುತ್ತೇನೆ'–ಎಂದು ತನ್ನ ತಂದೆ ಅಜೀಗರ್ತನು ಹೇಳಿದ ಕ್ರೂರವಾದ ಮಾತನ್ನು ಶುನಃಶೇಫನು ಮರೆಯಲಿಲ್ಲ. ಸಹಿಸಿಕೊಳ್ಳಲಿಲ್ಲ. ಹಾಗೆಯೇ ಈ ನನ್ನ ಪುತ್ರನೂ ನನ್ನ ಕ್ರೂರಕರ್ಮಗಳನ್ನು ಮರೆಯುವುದಿಲ್ಲ. ಅಜೀಗರ್ತನು ಮಾಡಿದ ಪುತ್ರನ ಮಾರಾಟವೆಂಬ ಅಸತ್ಕಾರ್ಯವನ್ನು ಶುನಃಶೇಫನು ಮರೆಯಲಿಲ್ಲ–ಎಂದೂ ಅರ್ಥಮಾಡಬಹುದು.

(ವಿಜಯಧ್ವಜೀಯ)

ಪ್ರಹ್ಲಾದನನ್ನು ಆಟಕ್ಕೆ ಕರೆದರು. ಪರಮಜ್ಞಾನಿಯಾಗಿದ್ದ ಪ್ರಹ್ಲಾದನು ಆ ಹುಡುಗರ ಪ್ರೇಮವನ್ನು ಕಂಡು ಸಂತೋಷಗೊಂಡು ಸವಿಮಾತುಗಳಿಂದ ಅವರನ್ನೇ ತನ್ನ ಬಳಿಗೆ ಬರಮಾಡಿಕೊಂಡನು. ಅವರ ಮತಿಯನ್ನೂ ಗತಿಯನ್ನೂ ಬಲ್ಲವನಾಗಿದ್ದ ಆ ಕುಮಾರನು ಅವರಲ್ಲಿ ಕರುಣೆದೋರಿ ನಗು ನಗುತ್ತಾ ಅವರಿಗೆ ಉಪದೇಶಮಾಡತೊಡಗಿದನು. ಅವರು ಸರಳಮನಸ್ಸುಳ್ಳ ಬಾಲಕರು. ರಾಗ-ದ್ವೇಷಪರಾಯಣರಾಗಿ ವಿಷಯಭೋಗಗಳಲ್ಲಿ ಆಸಕ್ತ ರಾಗಿರುವ ಮನುಷ್ಯರ ಉಪದೇಶ ಮತ್ತು ಕೃತಿಗಳಿಂದ ಅವರ ಬುದ್ಧಿಯು ದೂಷಿತವಾಗದೇ ಶುದ್ಧವಾಗಿತ್ತು. ಈ ಕಾರಣದಿಂದಲೂ ಮತ್ತು ಪ್ರಹ್ಲಾದ ನಲ್ಲಿದ್ದ ಗೌರವಬುದ್ಧಿಯಿಂದಲೂ ಅವರು ತಮ್ಮ ಆಟ-ಪಾಟಗಳ ಸಾಮಾನು ಗಳನ್ನು ತೊರೆದು ಆತನ ಬಳಿಗೆ ಬಂದು ಸುತ್ತಲೂ ಕುಳಿತು ಆತನ ಉಪದೇಶದಲ್ಲಿ ಮನಸ್ಸನ್ನಿಟ್ಟು ಎವೆಯಿಕ್ಕದ ಕಣ್ಣುಗಳಿಂದ ಆತನನ್ನೇ ನೋಡತೊಡಗಿದರು. ಅವರ ಬಗೆಗೆ ಕರುಣೆ ಮತ್ತು ಮೈತ್ರೀಭಾವಗಳಿಂದ ತುಂಬಿದ ಮನಸ್ಸುಳ್ಳವನಾಗಿದ್ದ ಆ ಪರಮಭಾಗವತೋತ್ತಮನಾದ ರಾಜಕುಮಾರನು ಅವರಿಗೆ ಹೇಳತೊಡಗಿದನು. (ಶ್ಲೋಕ 51-57)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಸಪ್ತಮಸ್ಕಂಧದ ೫ನೆಯ ಅಧ್ಯಾಯವು ಮುಗಿಯಿತು.

ಸಪ್ತಮಸ್ಕಂಧ ೬ನೆಯ ಅಧ್ಯಾಯ

ಪ್ರಹ್ಲಾದನು ಅಸುರಬಾಲಕರಿಗೆ ಮಾಡಿದ ಉಪದೇಶ

ಯುಧಿಷ್ಠಿರ! ಪ್ರಹ್ಲಾದನು ದೈತ್ಯಬಾಲಕರಿಗೆ ಹೀಗೆ ಉಪದೇಶಿಸಿದನು:

ಕೌಮಾರ ಆಚರೇತ್ಪ್ರಾಜ್ಞೋ ಧರ್ಮಾನ್ಭಾಗವತಾನಿಹ ।
ದುರ್ಲಭಂ ಮಾನುಷಂ ಜನ್ಮ ತದಪ್ಯಧ್ರುವಮರ್ಥದಮ್ * ॥೧॥

---

* ಇದಕ್ಕೆ ಹಿಂದೆ ಈ ಕೆಳಗಿನ ಐದು ಶ್ಲೋಕಗಳು ಶ್ರೀಮದ್ಭಾಗವತದ ಪ್ರಾಚೀನ ಪ್ರತಿಗಳಲ್ಲಿ ಕಂಡುಬರುತ್ತವೆ. ವಿಜಯಧ್ವಜೀಯದಲ್ಲಿ ಇವುಗಳನ್ನು ಮಾನ್ಯಮಾಡಿದೆ.

ಹನ್ತಾರ್ಭಕಾ ಮೇ ಶೃಣುತ ವಚೋ ವಃ ಸರ್ವತಃ ಶಿವಮ್ ।
ವಯಸ್ಯಾನ್ಪಶ್ಯತ ಮೃತಾನಿ ೀಡಾಸ್ಥಾ ಮಾ ಪ್ರಮಾದ್ಯಥ ॥೧॥

"ಗೆಳೆಯರೇ! ಈ ಪ್ರಪಂಚದಲ್ಲಿ ಮನುಷ್ಯಜನ್ಮವು ಅತ್ಯಂತದುರ್ಲಭವಾದುದು. ಅವಿನಾಶಿಯಾಗಿರುವ ಪರಮಾತ್ಮನನ್ನು ಹೊಂದಲು ಇದರಿಂದಲೇ ಸಾಧ್ಯವಾಗುವುದು. ಇದು ಯಾವಾಗ ನಾಶವಾಗಿಬಿಡುವುದೋ ಹೇಳುವುದಕ್ಕಾಗುವುದಿಲ್ಲ. ಆದುದರಿಂದ ವಿವೇಕಿಯಾದವನು ಮುಪ್ಪಿನವರೆಗೂ–ಪ್ರಾಯದವರೆಗೂ ಕಾಯದೇ ಶ್ರೀಭಗವಂತನನ್ನು ದೊರಕಿಸುವ ಭಾಗವತ ಧರ್ಮಗಳನ್ನು ಬಾಲ್ಯದಲ್ಲಿಯೇ ಅನುಷ್ಠಾನಮಾಡಬೇಕು.

ಈ ಮನುಷ್ಯಜನ್ಮದಲ್ಲಿ ಭಗವಂತನಾದ ಶ್ರೀಮಹಾವಿಷ್ಣುವಿನ ಚರಣಗಳ ಬಳಿಗೆ ಸಾರುವುದರಿಂದಲೇ–ಅವನ ಪಾದಾರವಿಂದಗಳನ್ನು ಶರಣುಹೊಂದುವುದರಿಂದಲೇ ಜೀವನಕ್ಕೆ ಸಫಲತೆ. ಅದೇ ಪರಮಪುರುಷಾರ್ಥವು. ಏಕೆಂದರೆ : ಸಮಸ್ತಪ್ರಾಣಿಗಳಿಗೂ ಸ್ವಾಮಿಯೂ, ಸ್ನೇಹಿತನೂ, ಪ್ರಿಯತಮನೂ ಮತ್ತು ಆತ್ಮವೂ ಆ ಶ್ರೀಭಗವಂತನೇ ಆಗಿದ್ದಾನೆ. ಜೀವನು ಯಾವುದೇ ಯೋನಿಯಲ್ಲಿದ್ದರೂ ಆತನಿಗೆ ಪ್ರಾರಬ್ಧಕರ್ಮಗಳಿಗೆ ಅನುಸಾರವಾಗಿ ದುಃಖವು-ಯಾವುದೇ ಪ್ರಯತ್ನವಿಲ್ಲದೇ ಇದ್ದರೂ–ತಾನಾಗಿಯೇ ಬರುವುದು. ನಿವಾರಿಸಿದರೂ ಹೋಗದೇ ಬಂದೇ ಬರುವುದು. ಇಂದ್ರಿಯಗಳಿಂದ ಭೋಗಿಸಲ್ಪಡುವ ಸುಖದ ವಿಷಯವೂ ಹೀಗೆಯೇ. ಅದು

ನ ಪುರಾ ವಿವಶಂ ಬಾಲಾ ಆತ್ಮನೋಽರ್ಥೇ ಪ್ರಿಯೈಷಿಣಃ ।
ಗುರೂಕ್ತಮಪಿ ನ ಗ್ರಾಹ್ಯಂ ಯದನರ್ಥೇಽರ್ಥಕಲ್ಪನಮ್ ॥೨॥

ಯದುಕ್ತ್ವಾ ನ ಪ್ರಬುದ್ಧ್ಯೇತ ಸುಪ್ತಸ್ತ್ವಜ್ಞಾನನಿದ್ರಯಾ ।
ನ ಶ್ರದ್ದಧ್ಯಾನ್ಮತಂ ತಸ್ಯ ಯಥಾನ್ಧೋ ಹ್ಯನ್ಧನಾಯಕಃ ॥೩॥
ಕಃ ಶತ್ರುಃ ಕ ಉದಾಸೀನಃ ಕಿಂ ಮಿತ್ರಂ ಚೇಹ ಆತ್ಮನಃ ।
ಭವತ್ಸ್ವಪಿ ನಯೈಃ ಕಿಂ ಸ್ಯಾದ್ದೈವಂ ಸಮ್ಪದ್ವಿಪತ್ಪ್ರದಮ್ ॥೪॥
ಯೋ ನ ಹಿಂಸ್ಯಾದ್ಧರ್ಮಕಾಮಮಾತ್ಮಾನಂ ಸ್ವಜನೇ ವಶಃ ।
ಪುನಃ ಶ್ರೀಲೋಕಯೋರ್ಹೇತುಃ ಸ ಮುಕ್ತಾನ್ಧೋಽತಿದುರ್ಲಭಃ ॥೫॥

ಎಲೈ ಬಾಲಕರೇ! ನನ್ನ ಮಾತನ್ನು ಕೇಳಿರಿ. ಇದರಿಂದ ನಿಮಗೆ ಎಲ್ಲ ಕಡೆಗಳಲ್ಲಿಯೂ ಮಂಗಳವುಂಟಾಗುವುದು. ಪರಮಪುರುಷಾರ್ಥವು ದೊರೆಯುವುದು. ಪರಮಶ್ರೇಯಸ್ಸು ಉಂಟಾಗುವುದು. 'ಈಗ ಬಾಲ್ಯ ; ಮುಂದೆ ನೋಡೋಣ'–ಎಂದು ಶ್ರೇಯಸ್ಸಿನ ಸಾಧನೆಯನ್ನು ಮುಂದೂಡಬಾರದು. ನಿಮ್ಮ ಜೊತೆಗಾರರು ಎಷ್ಟೋ ಮಂದಿ ಸತ್ತುಹೋಗಿರುವುದನ್ನು ನೋಡಿರಿ. ಆಟ-ಪಾಟಗಳಲ್ಲೇ ಆಸಕ್ತರಾಗಿ

ಪ್ರಯತ್ನಮಾಡದೇ ಇದ್ದರೂ ಪ್ರಾರಬ್ಧಕರ್ಮಕ್ಕೆ ತಕ್ಕಂತೆ ಬಂದೇ ಬರುವುದು. ಅದನ್ನು ತಪ್ಪಿಸಿಕೊಳ್ಳಲೂ ಸಾಧ್ಯವಾಗುವುದಿಲ್ಲ. ಹೀಗೆ ಸಾಂಸಾರಿಕ ಸುಖವು ಪ್ರಯತ್ನವಿಲ್ಲದಿದ್ದರೂ ತಾನಾಗಿಯೇ ಬರುವುದರಿಂದ ಅದನ್ನು ಪಡೆಯು ವುದಕ್ಕಾಗಿ ವಿಶೇಷಪ್ರಯತ್ನವನ್ನು ಮಾಡಬೇಕಾಗಿಲ್ಲ. ಪರಿಶ್ರಮಪಡ ಬೇಕಾಗಿಲ್ಲ. ಅದಕ್ಕಾಗಿ ಪ್ರಯಾಸವನ್ನು ಮಾಡಿದರೆ ಆಯುಸ್ಸು ಮತ್ತು ಶಕ್ತಿಗಳನ್ನು ಪೋಲುಮಾಡಿದಂತಾಗುವುದು. ಅದರಲ್ಲಿ ಆಸಕ್ತರಾದವರಿಗೆ ಶ್ರೀಭಗವಂತನ ಅಡಿದಾವರೆಗಳೆಂಬ ಪರಮಕಲ್ಯಾಣವು ದೊರೆಯುವುದಿಲ್ಲ. ಆದುದರಿಂದ ಹುಟ್ಟು-ಸಾವುಗಳು ಮುಂತಾದ ಕ್ಲೇಶಗಳಿಗೆ ಭಯಪಡುವ ಬುದ್ಧಿಶಾಲಿಯು–ತನ್ನ ಶರೀರವು ರೋಗಾದಿಗಳಿಗೆ ವಶವಾಗಿ ಮೃತ್ಯುವಿನ ದವಡೆಯನ್ನು ಪ್ರವೇಶಿಸುವುದಕ್ಕೆ ಮೊದಲೇ ಅಂದರೆ ದೇಹದಲ್ಲಿ ಆರೋಗ್ಯ ಮತ್ತು ಶಕ್ತಿಗಳು ಇರುವಾಗಲೇ–ಮೋಕ್ಷರೂಪವಾದ ಕ್ಷೇಮವನ್ನು ಪಡೆಯಲು ಪ್ರಯತ್ನಮಾಡಬೇಕು.

ಪುಂಸೋ ವರ್ಷಶತಂ ಹ್ಯಾಯುಸ್ತದರ್ಧಂ ಚಾಜಿತಾತ್ಮನಃ ।
ನಿಷ್ಫಲಂ ಯದಸೌ ರಾತ್ರ್ಯಾಂ ಶೇತೇಽನ್ಧಂ ಪ್ರಾಪಿತಸ್ತಮಃ ॥೬॥

ಮುಗ್ಧಸ್ಯ ಬಾಲ್ಯೇ ಕೌಮಾರೇ ಕ್ರೀಡತೋ ಯಾತಿ ವಿಂಶತಿಃ ।
ಜರಯಾ ಗ್ರಸ್ತದೇಹಸ್ಯ ಯಾತ್ಯಕಲ್ಪಸ್ಯ ವಿಂಶತಿಃ ॥೭॥

ಶ್ರೇಯಸ್ಸಿನ ಬಗೆಗೆ ಕುರುಡರಾಗಿ ಎಚ್ಚರತಪ್ಪದಿರಿ. ಪುರಾತನರಾದ ಬಾಲಕರು ತಮ್ಮ ಮನಸ್ಸನ್ನು ಆಟ-ಪಾಟಗಳಲ್ಲಿ ತೊಡಗಿಸುತ್ತಿರಲಿಲ್ಲ. ಬಾಲ್ಯದಿಂದಲೂ ತಮ್ಮ ಪರಮಪ್ರಯೋಜನದ ಸಿದ್ಧಿಯನ್ನೇ ಅವರು ಬಯಸುತ್ತಿದ್ದರು. ಪರಮಾತ್ಮಜ್ಞಾನ ವನ್ನೇ ಕೋರುತ್ತಿದ್ದರು. 'ನಾವೂ ಕೂಡ ಗುರುಗಳಾದ ಶಂಡಾಮರ್ಕರ ಉಪದೇಶ ದಲ್ಲಿ ಆಸಕ್ತರಾಗಿ ಅವರು ಬರುವ ಕಾಲದವರೆಗೆ ಮಾತ್ರ ಆಟವಾಡುತ್ತಿದ್ದೇವೆ'– ಎನ್ನುವಿರೋ? ಅದೂ ಸರಿಯಲ್ಲ. ಅವರು ಮೋಕ್ಷವನ್ನು ಬಿಟ್ಟು ಧರ್ಮ-ಅರ್ಥ-ಕಾಮಗಳೆಂಬ ತ್ರಿವರ್ಗವನ್ನು ಮಾತ್ರ ಬೋಧಿಸುತ್ತಿದ್ದಾರೆ. ಅದು ಸಂಸಾರಕ್ಕೇ ಕಾರಣವಾಗುವುದು. ಆದುದರಿಂದ ಗುರುಗಳು ಹೇಳಿದರೂ ಅದನ್ನು ಗ್ರಹಿಸ ಬಾರದು. ಅದರಲ್ಲಿ ನಂಬಿಕೆಯನ್ನಿಟ್ಟರೆ ಅನರ್ಥದಲ್ಲಿ ಅರ್ಥವೆಂಬ ವಿರುದ್ಧವಾದ ಭಾವನೆಯನ್ನು ಇಟ್ಟಂತಾಗುವುದು. ಯಾವನ ಮಾತುಗಳನ್ನು ಕೇಳಿದರೆ ಅಜ್ಞಾನ

ದುರಾಪೂರೇಣ ಕಾಮೇನ ಮೋಹೇನ ಚ ಬಲೀಯಸಾ ।
ಶೇಷಂ ಗೃಹೇಷು ಸಕ್ತಸ್ಯ ಪ್ರಮತ್ತಸ್ಯಾಪಯಾತಿ ಹಿ ॥೮॥

ಮನುಷ್ಯನ ಪೂರ್ಣವಾದ ಆಯುಸ್ಸು ನೂರು ವರ್ಷಗಳು. ಇಂದ್ರಿಯಗಳನ್ನು ವಶದಲ್ಲಿ ಇಟ್ಟುಕೊಳ್ಳದೇ ಇರುವವರಿಗೆ ಆ ಆಯುಸ್ಸಿನಲ್ಲಿ ಅರ್ಧಭಾಗವು ಹಾಗೆಯೇ ವ್ಯರ್ಥವಾಗಿಯೇ ಕಳೆದುಹೋಗುವುದು. ಏಕೆಂದರೆ : ಅವರು ರಾತ್ರಿಯಲ್ಲಿ ಘೋರವಾದ ತಮೋಗುಣವೆಂಬ ಅಜ್ಞಾನದಿಂದ ಕಬಳಿಸಲ್ಪಟ್ಟು ನಿದ್ರೆಮಾಡುತ್ತಿರುವರು. ಮೂರ್ಖರಿಗೆ ಅತಿಬಾಲ್ಯದಲ್ಲಿ ಯಾವುದು ಹಿತ, ಯಾವುದು ಅಹಿತ?–ಎಂಬ ಅರಿವೇ ಇರುವುದಿಲ್ಲ. ಸ್ವಲ್ಪ ವಯಸ್ಸಾಗಿ ಕೌಮಾರವೆಂಬ ಅವಸ್ಥೆಬಂದಾಗ ಆಟ-ಪಾಠ-ಕುಣಿದಾಟಗಳಲ್ಲಿ ಅವರು ಆಸಕ್ತರಾಗುತ್ತಾರೆ. ಈ ರೀತಿಯಲ್ಲಿ ಇಪ್ಪತ್ತು ವರ್ಷಗಳು ಗಮನಕ್ಕೆ ಬಾರದೆಯೇ ಕಳೆದುಹೋಗುತ್ತವೆ. ಕಡೆಯ ಇಪ್ಪತ್ತು ವರ್ಷಗಳಲ್ಲಿ ಮುಪ್ಪು ದೇಹವನ್ನು ಆಕ್ರಮಿಸಿಬಿಡುವುದರಿಂದ ಆಗ ಯಾವುದನ್ನು ಮಾಡುವುದಕ್ಕೂ ಶಕ್ತಿ ಇರುವುದಿಲ್ಲ. ಇನ್ನು ಉಳಿದಿರುವುದು ಹತ್ತು ವರ್ಷಗಳ ಸಮಯದ ಆಯುಸ್ಸು. ಅದರಲ್ಲಿ ಎಷ್ಟು ಹಾಕಿದರೂ ತುಂಬದೇ ಇರುವ ಕಾಮವೂ ಮತ್ತು ಬಲವಾಗಿ ಹಿಡಿದುಕೊಳ್ಳುವ ಮೋಹವೂ, ಮನೆಯಲ್ಲೂ ಮನೆವಾರ್ತೆಯಲ್ಲಿಯೂ ಆಸಕ್ತನಾಗಿ ಸಾವಧಾನತೆಯಿಲ್ಲದಿರುವ ಮನುಷ್ಯನನ್ನು ಆಕ್ರಮಿಸಿಕೊಳ್ಳುತ್ತವೆ. ಅವುಗಳ ಹಿಡಿತಕ್ಕೆ

ವೆಂಬ ನಿದ್ರೆಯಿಂದ ಎಚ್ಚರಿಕೆ ಉಂಟಾಗುವುದಿಲ್ಲವೋ–ಅಂತಹವನ ಮಾತನ್ನು ಸರಿಯೆಂದು ನಂಬಬಾರದು. ಹಾಗೆ ನಂಬಿದರೆ ಕುರುಡನು ಕುರುಡರನ್ನು ಒಯ್ಯುವಂತೆ ಅನರ್ಥವೇ ಉಂಟಾಗುವುದು. ಇಲ್ಲಿ ಆತ್ಮನಿಗೆ ಶತ್ರುವು ಯಾರು? ಉದಾಸೀನನು ಯಾರು? ಮಿತ್ರನಾದರೂ ಯಾರು? ನಿಮ್ಮಲ್ಲಿಯೂ ಈ ಶತ್ರು ಮುಂತಾದವರು ಯಾರುಂಟು? ಈ ಶತ್ರು-ಮಿತ್ರಾದಿಗಳನ್ನು ಬೋಧಿಸುವ ನೀತಿಶಾಸ್ತ್ರಗಳಿಂದ ಏನು ತಾನೇ ಪ್ರಯೋಜನ?–'ನೀತಿಗಳಿಂದ ಆಪತ್ತಿನ ಪರಿಹಾರವೂ, ಸಂಪತ್ತಿನ ಪ್ರಾಪ್ತಿಯೂ ಆಗುವುದಲ್ಲವೇ?' ಎಂದರೆ : ಹಾಗಲ್ಲ. ದೈವವೇ, ದೇವದೇವನಾದ ಶ್ರೀಮನ್ನಾರಾಯಣನೇ ಸಂಪತ್ತು ಮತ್ತು ವಿಪತ್ತುಗಳಿಗೆ ಆಶ್ರಯನು. ಆತನ ಅನುಗ್ರಹದಿಂದಲೇ ಅಜ್ಞಾನವೆಂಬ ವಿಪತ್ತಿನ ಪರಿಹಾರ ಮತ್ತು ಜ್ಞಾನವೆಂಬ ಸಂಪತ್ತಿನ ಲಾಭವುಂಟಾಗುವುದು. ತನ್ನ ಜನರಿಗೆ ಅಥವಾ ಇಂದ್ರಿಯಾದಿಗಳಿಗೆ ಪರವಶನಾಗದೇ ಧರ್ಮಕಾಮನಾಗಿರುವ, ತನಗೆ ಅಧರ್ಮದಿಂದ ಅಥವಾ ಪ್ರವೃತ್ತಿಧರ್ಮದಿಂದ

ಸಿಕ್ಕಿ ಅವರು ಯಾವುದು ಕರ್ತವ್ಯ, ಯಾವುದು ಕರ್ತವ್ಯವಲ್ಲ?—ಎಂಬ ಜ್ಞಾನವನ್ನೇ ಕಳೆದುಕೊಳ್ಳುವರು. ಹೀಗೆ ಉಳಿದಿರುವ ಆಯುಸ್ಸಿನ ಭಾಗವೂ ಅವರ ಕೈಬಿಟ್ಟುಹೋಗುವುದು.

ಜಿತೇಂದ್ರಿಯನಲ್ಲದೇ ಇರುವ ಯಾವನು ತಾನೇ ಆ ಮನೆ-ಮನೆ ವಾರ್ತೆಗಳಲ್ಲಿ ಆಸಕ್ತನಾಗಿ ಮಾಯಾಮಮತೆಯ ದೃಢವಾದ ಪಾಶದಲ್ಲಿ ಸಿಕ್ಕಿ ಹಾಕಿಕೊಂಡಿರುವ ತನ್ನನ್ನು ಅದರಿಂದ ಬಿಡಿಸಿಕೊಳ್ಳುವ ಸಾಹಸವನ್ನು ಮಾಡಿ ಯಾನು? ಕಳ್ಳರು, ಸೇವಕರು ಮತ್ತು ವ್ಯಾಪಾರಿಗಳು ತಮಗೆ ಅತ್ಯಂತ ಪ್ರಿಯತಮವಾಗಿರುವ ಪ್ರಾಣವನ್ನಾದರೂ ಪಣವನ್ನಾಗಿಟ್ಟು ಹಣವನ್ನು ಕೂಡಿಹಾಕುತ್ತಾರೆ. ಅವರಿಗೆ ಅದು ಪ್ರಾಣಕ್ಕಿಂತಲೂ ಹೆಚ್ಚು ಪ್ರಿಯವಾಗಿರು ವುದು. ಇಂತಹ ಹಣದ ಮೇಲಿನ ದುರಾಶೆಯನ್ನು ಯಾವನು ತಾನೇ ಬಿಡ ಬಲ್ಲನು? ಯಾವನು ತನ್ನ ಪ್ರಿಯಳಾದ ಮಡದಿಯ ಏಕಾಂತಸಹವಾಸ, ಆಕೆಯ ಪ್ರೇಮತುಂಬಿರುವ ಮಾತುಗಳು ಮತ್ತು ಸವಿಯಾದ ಸಲಹೆಗಳು— ಇವುಗಳಿಗೆ ತನ್ನನ್ನು ಕೊಟ್ಟುಕೊಂಡು ಬಂಧು-ಮಿತ್ರರ ಸ್ನೇಹಪಾಶದಲ್ಲಿ ಕಟ್ಟುಬೀಳುವನೋ ಮತ್ತು ಎಳೆಯಮಕ್ಕಳ ತೊದಲುನುಡಿಗಳಲ್ಲಿ ಲೋಭ ಹೊಂದಿರುವನೋ—ಆತನು ಅವುಗಳನ್ನು ಹೇಗೆತಾನೇ ಬಿಡಬಲ್ಲನು? ಯಾವನು ಅತ್ತೆಯ ಮನೆಗೆ ಹೋಗಿರುವ ತನ್ನ ಪ್ರಿಯಪುತ್ರಿಯರನ್ನೂ, ಪುತ್ರರನ್ನೂ, ಸೋದರ-ಸೋದರಿಯರನ್ನೂ, ದೈನ್ಯದ ಸ್ಥಿತಿಯಲ್ಲಿರುವ ತಂದೆ-ತಾಯಿಗಳನ್ನೂ, ಬಹಳ ಸುಂದರವಾಗಿ ಬಹುಮೂಲ್ಯವಾಗಿರುವ ಸಾಮಗ್ರಿಗಳಿಂದ ಸಜ್ಜುಗೊಳಿಸಲ್ಪಟ್ಟ ಮನೆಗಳನ್ನೂ, ಕುಲಪರಂಪರೆಯಿಂದ

ಹಿಂಸೆಯನ್ನುಂಟುಮಾಡಿಕೊಳ್ಳದೇ ಇಹಲೋಕದ ಸಂಪತ್ತು ಮತ್ತು ಪರಲೋಕದ ಸುಖ—ಇವೆರಡಕ್ಕೂ ಕಾರಣವಾಗುವ, ಕುರುಡುತನವನ್ನು ಬಿಟ್ಟಿರುವ ವಿವೇಕಿಯು ಲೋಕದಲ್ಲಿ ದುರ್ಲಭನು.

(ಈ ಲೋಕದಲ್ಲಿ ಪ್ರವೃತ್ತಿ-ನಿವೃತ್ತಿ ಧರ್ಮಗಳನ್ನು ಅನುಷ್ಠಾನಮಾಡಿ ಅವುಗಳ ಫಲವನ್ನು ಬಯಸದೇ ನಿರಂತರವಾಗಿ ಭಗವದ್ಭಕ್ತಿಯನ್ನು ಮಾಡುವ ಪುರುಷನೇ ಉತ್ತಮನು. 'ಅತ್ರ ಪ್ರವೃತ್ತಿನಿವೃತ್ತಿಲಕ್ಷಣೌ ಧರ್ಮಾವನುಷ್ಠಾಯ ತತ್ಫಲಾನೀ—ಚ್ಛುತ್ವೇನ ಭಗವದ್ಭಕ್ತಿಮನಿಶಂ ಕುರ್ವಾಣಃ ಪುರುಷಃ ಉತ್ತಮ ಇತಿ ತಾತ್ಪರ್ಯಂ' ಎಂದು ವಿಜಯಧ್ವಜೀಯವು ಈ ಶ್ಲೋಕದ ಸಾರವನ್ನು ಹೇಳುತ್ತದೆ.)

ಬಂದಿರುವ ಜೀವಿಕೆಯ ಸಾಧನೆಗಳನ್ನೂ, ಪಶುಗಳನ್ನೂ ಮತ್ತು ಸೇವಕ ರನ್ನೂ ನಿರಂತರವಾಗಿ ಸ್ಮರಿಸುತ್ತಿರುವನೋ–ಆತನು ಹೇಗೆತಾನೇ ಅವರನ್ನು ಬಿಟ್ಟಾನು? ಯಾವನು ಜನನೇಂದ್ರಿಯ ಮತ್ತು ರಸನೇಂದ್ರಿಯಗಳ ಸುಖ ಗಳನ್ನೇ ಸರ್ವಸ್ವವೆಂದು ಭಾವಿಸುತ್ತಾನೆಯೋ, ಯಾವನ ಭೋಗವಾಸನೆಗಳು ಪೂರ್ಣವಾಗಿ ತೃಪ್ತಿಹೊಂದಿಲ್ಲವೋ, ಯಾವನು ಲೋಭಕ್ಕೆ ಒಳಗಾಗಿ ಕರ್ಮದ ಮೇಲೆ ಕರ್ಮವನ್ನು ಆಚರಿಸುತ್ತಾ ರೇಷ್ಮೆಯ ಹುಳುವಿನಂತೆ ತನ್ನನ್ನು ಇನ್ನೂ ಬಿಗಿಯಾದ ಬಂಧನದಲ್ಲಿ ಕಟ್ಟಿಹಾಕಿಕೊಳ್ಳುತ್ತಿರುತ್ತಾನೆಯೋ ಮತ್ತು ಎಲ್ಲೆಯಿಲ್ಲದ ಮೋಹವನ್ನು ಹೊಂದಿರುತ್ತಾನೆಯೋ–ಆತನು ಹೇಗೆತಾನೇ ವಿರಕ್ತನಾಗಿ ಅವುಗಳನ್ನೆಲ್ಲಾ ತ್ಯಜಿಸಬಲ್ಲನು? (ಶ್ಲೋಕ 9-13)

ಮತ್ತೇರಿದ ಮನುಷ್ಯನು ಕುಟುಂಬದಲ್ಲಿ ಅತ್ಯಂತವಾಗಿ ಆಸಕ್ತನಾಗಿ ಅದರ ಪಾಲನೆ-ಪೋಷಣೆಗಳಿಗಾಗಿಯೇ ತನ್ನ ಅಮೂಲ್ಯವಾದ ಆಯುಸ್ಸನ್ನು ಪೋಲುಮಾಡುತ್ತಾನೆ. ಜೀವನದ ವಾಸ್ತವಿಕವಾದ ಉದ್ದೇಶವೇ ಇದರಿಂದ ನಷ್ಟಹೊಂದುತ್ತಿದೆಯೆಂಬುದನ್ನು ಆತನು ಗಮನಿಸುತ್ತಿಲ್ಲ. ಈ ಕುಟುಂಬದ ಪೋಷಣೆಯಿಂದ ಆತನಿಗೆ ಅಲ್ಪ-ಸ್ವಲ್ಪಸುಖವು ದೊರೆಯಬಹುದಾದರೂ ಆತನು ಹೋದೆಡೆಯಲ್ಲೆಲ್ಲಾ ಮುಬ್ಬಗೆಯ ತಾಪಗಳು ಆತನ ಹೃದಯ ವನ್ನು ಉರಿಸುತ್ತಿರುತ್ತವೆ. ಆದರೂ ವೈರಾಗ್ಯವು ಉಂಟಾಗುವುದಿಲ್ಲವಲ್ಲಾ! ಎಂತಹ ವಿಡಂಬನೆ! ಈ ಕುಟುಂಬದ ಮಮತೆಯಲ್ಲಿ ಮುಳುಗಿದ ಮನುಷ್ಯನ ಮನಸ್ಸು ಸದಾ ಹಣದ ಚಿಂತನೆಯಲ್ಲಯೇ ಆಸಕ್ತವಾಗಿರುತ್ತದೆ. ಮತ್ತೊಬ್ಬನ ಹಣವನ್ನು ಕದ್ದರೆ ಇಹಲೋಕದಲ್ಲೂ ಅಪಾಯ, ಪರ ಲೋಕದಲ್ಲೂ ಅಪಾಯ–ಎಂಬುದು ತಿಳಿದಿದ್ದರೂ ಇಂದ್ರಿಯಭೋಗಗಳ ಆಸೆಯಿಂದ ಆತನು ಕಳ್ಳತನವನ್ನು ಮಾಡಿಯೇ ಮಾಡುತ್ತಾನೆ. ಏಕೆಂದರೆ : ಆತನಿಗೆ ಕಾಮನೆಗಳನ್ನು ವಶದಲ್ಲಿಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ. ಎಲೈ ದೈತ್ಯರೇ! ಹೀಗೆ ತನ್ನ ಕುಟುಂಬದ ಪಾಲನೆ-ಪೋಷಣೆಗಳಲ್ಲಿಯೇ ಆಸಕ್ತನಾಗಿ ಶ್ರೀಭಗವಂತನ ಭಜನೆಯನ್ನು ಎಂದಿಗೂ ಮಾಡದೇ ಇರುವ ಮನುಷ್ಯನು ವಿದ್ವಾಂಸನಾಗಿದ್ದರೂ ಆತನಿಗೆ ಪರಮಾತ್ಮನ ಪ್ರಾಪ್ತಿ ಯುಂಟಾಗುವುದಿಲ್ಲ. ಏಕೆಂದರೆ : ಆತನು ಸ್ವಕೀಯ, ಪರಕೀಯ–ಎಂಬ

ಭೇದಭಾವನೆಯಿಂದ ಕೂಡಿರುವುದರಿಂದ ಆತನೂ ಅಜ್ಞಾನಿಯಂತೆ ತಮಸ್ಸಿನ ಗತಿಯನ್ನೇ ಹೊಂದುವನು. ಯಾವನು ಕಾಮಿನಿಯರಿಗೆ ಆಟದ ಮೃಗವಾಗಿ, ಅವರ ಮನೋರಂಜನೆಗೆ ಸಾಧನವಾಗಿ ಸಂತಾನದ ಸಂಕೋಲೆ ಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೆಯೋ–ಆ ಬಡಪಾಯಿಯು ಯಾವನೇ ಆದರೂ, ಎಲ್ಲೇ ಇದ್ದರೂ ಯಾವುದೇ ರೀತಿಯಲ್ಲೂ ಉದ್ಧಾರಹೊಂದು ವುದಿಲ್ಲ. ಆದುದರಿಂದ ಎಲೈ ದೈತ್ಯಬಂಧುಗಳೇ! ನೀವು ವಿಷಯಸುಖಗಳಲ್ಲಿ ಆಸಕ್ತರಾಗಿರುವ ದೈತ್ಯರ ಸಹವಾಸವನ್ನು ತೊರೆದು ಆದಿದೇವನಾದ ಶ್ರೀಭಗವಂತನಾದ ನಾರಾಯಣನನ್ನು ಶರಣುಹೊಂದಿರಿ. ಏಕೆಂದರೆ : ಸಂಸಾರದ ಆಸಕ್ತಿಯನ್ನು ಬಿಟ್ಟಿರುವ ಮಹಾತ್ಮರಿಗೆ ಆ ಪರಮಾತ್ಮನೇ ಪರಮಪ್ರಿಯನು ಮತ್ತು ಪರಮಗತಿಯು. (ಶ್ಲೋಕ 14-18)

ಎಲೈ ದೈತ್ಯಕುಮಾರರೇ! 'ಆ ಶ್ರೀಭಗವಂತನನ್ನು ಪ್ರಸನ್ನಗೊಳಿಸು ವುದು ತುಂಬಾ ಕಷ್ಟ. ಅದಕ್ಕಾಗಿ ಮಿತಿಮೀರಿ ಪ್ರಯತ್ನಪಡಬೇಕಾಗುತ್ತದೆ. ಆತನು ಯಾವನೋ ತಿಳಿಯದು. ಎಲ್ಲಿದ್ದಾನೋ ತಿಳಿಯದು. ಆತನನ್ನು ಹೇಗೆ ಸಾಧಿಸಬೇಕೋ ತಿಳಿಯದು'–ಎಂದು ಚಿಂತಿಸಬೇಡಿ. ಏಕೆಂದರೆ : ಆತನು ಎಲ್ಲ ಪ್ರಾಣಿಗಳ ಒಳಗಿರುವ ಆತ್ಮವೇ ಆಗಿದ್ದಾನೆ. ಎಲ್ಲೆಲ್ಲಿಯೂ ಇದ್ದಾನೆ ಮತ್ತು ಸ್ವಯಂಸಿದ್ಧನಾಗಿದ್ದಾನೆ. ಬ್ರಹ್ಮದೇವರಿಂದ ಹಿಡಿದು ಹುಲ್ಲು ಕಡ್ಡಿಯವರೆಗಿನ ಎಲ್ಲ ಸಣ್ಣ-ದೊಡ್ಡ ಪ್ರಾಣಿಗಳಲ್ಲಿಯೂ, ಪಂಚಭೂತ ಗಳಿಂದ ಆಗಿರುವ ಎಲ್ಲ ವಸ್ತುಗಳಲ್ಲಿಯೂ, ಪಂಚಭೂತಗಳಲ್ಲಿಯೂ, ಸೂಕ್ಷ್ಮವಾಗಿರುವ ಪಂಚತನ್ಮಾತ್ರೆಗಳಲ್ಲಿಯೂ, ಮಹತ್ತತ್ತ್ವದಲ್ಲಿಯೂ, ತ್ರಿಗುಣಗಳಲ್ಲಿಯೂ, ಆ ಗುಣಗಳ ಸಾಮ್ಯಾವಸ್ಥೆಯಾಗಿರುವ ಪ್ರಕೃತಿ ಯಲ್ಲಿಯೂ ಅವಿನಾಶಿಯಾದ ಆ ಒಬ್ಬನೇ ಶ್ರೀಭಗವಂತನು ಪರಮ ಸ್ವಾಮಿಯಾಗಿ ಪರಮಾತ್ಮನಾಗಿ ಬೆಳಗುತ್ತಿದ್ದಾನೆ. (ಶ್ಲೋಕ 19-21)

*** ಪ್ರತ್ಯಗಾತ್ಮಸ್ವರೂಪೇಣ ದೃಶ್ಯರೂಪೇಣ ಚ ಸ್ವಯಮ್ ।**
ವ್ಯಾಪ್ಯವ್ಯಾಪಕನಿರ್ದೇಶ್ಯೋ ಹ್ಯನಿರ್ದೇಶ್ಯೋಽವಿಕಲ್ಪಿತಃ ॥೨೨॥

---

* ಚೇತನಾರೂಪವಾದ ಪ್ರತ್ಯಗಾತ್ಮ (ಜೀವ) ವನ್ನು ಶರೀರವನ್ನಾಗಿ ಹೊಂದಿದ್ದಾನೆ ಆ ಭಗವಂತನು. ಅಚೇತನವಾದ ದೃಶ್ಯಪದಾರ್ಥಗಳೂ ಆತನ ಶರೀರವೇ ಆಗಿವೆ. ಎಣೆಯಿಲ್ಲದ ಪರಮಾತ್ಮನವನು. ಜೀವರನ್ನು ಅವರವರ ಕರ್ಮಗಳಿಗೆ ಅನುಗುಣವಾಗಿ

ಆತನು ತಾನೇ ಸರ್ವಾಂತರ್ಯಾಮಿಯಾಗಿ ಎಲ್ಲವನ್ನೂ ನೀಡುತ್ತಿರುವ ಪ್ರತ್ಯಗಾತ್ಮಸ್ವರೂಪನೂ ಆಗಿದ್ದಾನೆ. ದೃಶ್ಯರೂಪದಲ್ಲಿರುವವನೂ ಆತನೇ. ಅನಿರ್ವಚನೀಯನಾಗಿ ಯಾವ ವಿಕಲ್ಪವೂ ಇಲ್ಲದವನಾಗಿದ್ದರೂ ವ್ಯಾಪ್ಯ, ವ್ಯಾಪಕ ಎಂಬ ರೂಪಗಳಲ್ಲಿ ಆತನೇ ನಿರ್ದೇಶಿಸಲ್ಪಡುತ್ತಾನೆ.

ಕೇವಲ ಅನುಭವಸ್ವರೂಪನೂ, ಆನಂದಸ್ವರೂಪನೂ ಆ ಪರಮೇಶ್ವರನೊಬ್ಬನೇ* ಆಗಿದ್ದಾನೆ. ಗುಣ ಮುಂತಾದ ಸೃಷ್ಟಿಯನ್ನು ಮಾಡುವ ಮಾಯೆಯಿಂದಲೇ ಆತನ ಐಶ್ವರ್ಯವು ಮುಚ್ಚಲ್ಪಟ್ಟಿದೆ. ಅದು ಹೋದೊಡನೆಯೇ ಆತನ ದರ್ಶನವಾಗುವುದು. ಆದುದರಿಂದ ನೀವು ಆಸುರಭಾವವನ್ನು ಬಿಟ್ಟು ಎಲ್ಲ ಪ್ರಾಣಿಗಳಲ್ಲಿಯೂ ದಯೆಯನ್ನು ತೋರಿಸಿ, ಸ್ನೇಹವನ್ನು ತೋರಿಸಿರಿ. ಹೀಗೆ ಮಾಡಿದರೆ ಶ್ರೀಭಗವಂತನು ಪ್ರಸನ್ನನಾಗುವನು. (ಶ್ಲೋಕ 23-24)

ತುಷ್ಟೇ ಚ ತತ್ರ ಕಿಮಲಭ್ಯಮನನ್ತ ಆದ್ಯೇ
ಕಿಂ ತೈರ್ಗುಣವ್ಯತಿಕರಾದಿಹ ಯೇ ಸ್ವಸಿದ್ಧಾಃ ।
ಧರ್ಮಾದಯಃ ಕಿಮಗುಣೇನ ಚ ಕಾಙ್ಕ್ಷಿತೇನ
ಸಾರಂಜುಷಾಂ ಚರಣಯೋರುಪಗಾಯತಾಂ ನಃ ॥೨೫॥

ಅನಂತನಾದ ಆ ಆದಿನಾರಾಯಣನು ಸಂತುಷ್ಟನಾಗಿಬಿಟ್ಟರೆ ದೊರಕದೇ ಇರುವ ವಸ್ತುವು ಯಾವುದು ತಾನೇ ಇದ್ದೀತು? ಧರ್ಮ,

---

ನಿಯಮಿಸುವವನು ಮತ್ತು ವ್ಯಾಪ್ಯವಾದ ಎಲ್ಲ ಪದಾರ್ಥಗಳಲ್ಲಿಯೂ ವ್ಯಾಪಕ ರೂಪದಲ್ಲಿರುವವನು. ಶರೀರಗತವಾದ ವಿಕಾರಗಳ ಸ್ಪರ್ಶವೇ ಇಲ್ಲದವನು. ಜಾತಿ-ಗುಣಾದಿ ವಿಕಲ್ಪವಿಲ್ಲದವನು. (ವೀರರಾಘವೀಯ)

'ಪ್ರತ್ಯಗಾತ್ಮಸ್ವರೂಪೇಣ ಕಾಲರೂಪೇಣ ಚ ಸ್ವಯಮ್'–ಎಂದು ಪಾಠ.

ಎಲ್ಲ ಪದಾರ್ಥಗಳ ಒಳಗೆ ಅಂತರ್ಯಾಮಿರೂಪದಲ್ಲಿಯೂ–ಹೊರಗೆ ಕಾಲರೂಪದಲ್ಲಿಯೂ ಇರುವವನು ಆತನೇ. ತಾನೊಬ್ಬನೇ ವ್ಯಾಪ್ಯ ಮತ್ತು ವ್ಯಾಪಕ ಎಂಬುದಾಗಿ ವಿವಿಧವಾಗಿ ಕಲ್ಪಿಸಲ್ಪಡುತ್ತಾನೆ. **'ಅಂತರ್ಯಾಮೀ ಪ್ರತ್ಯಗಾತ್ಮಾ ವ್ಯಾಪ್ತಃ ಕಾಲೋ ಹರಿಃ ಸ್ಮೃತಃ ।'** (ವಿಜಯಧ್ವಜೀಯ)

* ವೀರ! ಕೇವಲ ಅನುಭವಸ್ವರೂಪವಾದ ಜ್ಞಾನಾನಂದಸ್ವರೂಪಿಯು ಆ ಶ್ರೀಭಗವಂತನು. ಆತನಿಗಿಂತಲೂ ಬೇರೊಬ್ಬ ಈಶ್ವರನಿಲ್ಲ. ಸಂಸಾರಿಗಳಿಗೆ ಮೋಹಾದಿ

ಅರ್ಥ ಮತ್ತು ಕಾಮಗಳೆಂಬ ಪುರುಷಾರ್ಥಗಳಾದರೋ ತ್ರಿಗುಣಗಳ ಪರಿಣಾಮಗಳು ಪ್ರಯಾಸವಿಲ್ಲದೇ ತಾವಾಗಿಯೇ ದೊರೆಯುವುವು. ಇನ್ನು ಉಳಿದಿರುವುದು ಮೋಕ್ಷವೆಂಬ ಪುರುಷಾರ್ಥ. ನಾವು ಶ್ರೀಭಗವಂತನ ಚರಣಾಮೃತವನ್ನು ಸೇವಿಸುತ್ತಾ ಆತನ ದಿವ್ಯನಾಮಗಳನ್ನೂ, ಗುಣಗಳನ್ನೂ ಕೀರ್ತನೆಮಾಡುತ್ತಿದ್ದರೆ ನಮಗೆ ಮೋಕ್ಷದ ಆವಶ್ಯಕತೆಯೂ ಇಲ್ಲ.

ಧರ್ಮಾರ್ಥಕಾಮ ಇತಿ ಯೋಽಭಿಹಿತಸ್ತ್ರಿವರ್ಗ
ಈಕ್ಷಾತ್ರಯೀ ನಯದಮೌ ವಿವಿಧಾ ಚ ವಾರ್ತಾ ।
ಮನ್ಯೇ ತದೇತದಖಿಲಂ ನಿಗಮಸ್ಯ ಸತ್ಯಂ
ಸ್ವಾತ್ಮಾರ್ಪಣಂ ಸ್ವಸುಹೃದಃ ಪರಮಸ್ಯ ಪುಂಸಃ ॥೨೬॥

ಶಾಸ್ತ್ರಗಳಲ್ಲಿ ಧರ್ಮ, ಅರ್ಥ, ಕಾಮಗಳೆಂಬ ಮೂರು ಪುರುಷಾರ್ಥಗಳು ವರ್ಣಿಸಲ್ಪಟ್ಟಿರುವುದು ನಿಜವೇ. ಹಾಗೆಯೇ ಆನ್ವೀಕ್ಷಕೀ (ಆತ್ಮವಿದ್ಯೆ), ವೈದಿಕಕರ್ಮಕಾಂಡ, ದಂಡನೀತಿ ಮತ್ತು ಕೃಷಿ-ವ್ಯಾಪಾರಗಳೇ ಮುಂತಾದ ಜೀವನದ ವಿವಿಧಮಾರ್ಗಗಳೂ ವೇದಗಳಲ್ಲಿ ಪ್ರತಿಪಾದಿಸಲ್ಪಟ್ಟಿವೆ. ಆದರೆ ಅವೆಲ್ಲವೂ ನಮಗೆ ಪರಮಹಿತೈಷಿಗಳಾಗಿ ಪರಮಪುರುಷನಾಗಿರುವ ಶ್ರೀಹರಿಗೆ ಆತ್ಮಾರ್ಪಣೆಮಾಡಿಕೊಳ್ಳುವ ರೂಪವನ್ನು ತಾಳಿದರೆ ಆಗ ಮಾತ್ರವೇ ನಾನು ಇವುಗಳನ್ನು ಸತ್ಯ, ಸಾರ್ಥಕ–ಎಂದು ತಿಳಿಯುತ್ತೇನೆ. ಇಲ್ಲದಿದ್ದರೆ ಇವೆಲ್ಲವೂ ನಿರರ್ಥಕವೇ.

ಜ್ಞಾನಂ ತದೇತದಮಲಂ ದುರವಾಪಮಾಹ
ನಾರಾಯಣೋ ನರಸಖಃ ಕಿಲ ನಾರದಾಯ ।

ಗುಣಗಳನ್ನುಂಟುಮಾಡುವ ಮಾಯೆಯಿಂದ ಆತನ ಐಶ್ವರ್ಯವು ಪ್ರಕಾಶಕ್ಕೆ ಬರುತ್ತಿಲ್ಲ. ಸದಾಚಾರ್ಯನ ಉಪದೇಶದಿಂದಲೇ ಆತನು ಹೊಂದಲ್ಪಡುವನು.

'ಆ ಪರಮೇಶ್ವರನು ಕೇವಲ ಅನುಭವಾನಂದಸ್ವರೂಪನಾಗಿದ್ದಾನೆ. ಆತನು ಎಲ್ಲೆಡೆಗಳಲ್ಲಿಯೂ ಸಿದ್ಧನಾಗಿದ್ದರೂ ಏಕೆ ಕಾಣುತ್ತಿಲ್ಲ?' ಎಂದರೆ : '**ತಮಸಾ ಗೂಢಮಗ್ರೇ**' ಎಂಬಂತೆ ಸತ್ತ್ವವೇ ಮುಂತಾದ ಗುಣಗಳಿಂದ ಸೃಷ್ಟಿಯನ್ನು ಮಾಡುವ ಪ್ರಕೃತಿಯು ಆತನನ್ನು ಮುಚ್ಚಿಕೊಂಡಿರುವುದರಿಂದ ಆತನು ನಮಗೆ ಗೋಚರವಾಗುತ್ತಿಲ್ಲ.

(ವಿಜಯಧ್ವಜೀಯ)

ಏಕಾನ್ತಿನಾಂ ಭಗವತಸ್ತದಕಿಞ್ಚನಾನಾಂ
ಪಾದಾರವಿನ್ದರಜಸಾಪ್ಲುತದೇಹಿನಾಂ ಸ್ಯಾತ್ ॥೨೭॥

ನಾನು ನಿಮಗೆ ಹೇಳಿರುವ ಈ ಭಾಗವತಧರ್ಮವು ಅತ್ಯಂತ ದುರ್ಲಭವಾದುದು. ಮಹರ್ಷಿಯಾದ, ನರನ ಗೆಳೆಯನಾದ ನಾರಾಯಣ ಮಹರ್ಷಿಯು ಇದನ್ನು ಶ್ರೀನಾರದಮಹರ್ಷಿಗಳಿಗೆ ಉಪದೇಶಮಾಡಿದ ನೆಂಬುದು ಪ್ರಸಿದ್ಧವಾಗಿದೆ. ಯಾರು ಶ್ರೀಭಗವಂತನಲ್ಲಿ ಅನನ್ಯಪ್ರೇಮವನ್ನು ಹೊಂದಿ, ವೈರಾಗ್ಯಸಂಪನ್ನರಾಗಿರುವ ಭಕ್ತರ ಅಡಿದಾವರೆಗಳ ಧೂಳಿನಿಂದ ತಮ್ಮದೇಹಕ್ಕೆ ಅಭಿಷೇಕಮಾಡಿಕೊಳ್ಳುತ್ತಾರೆಯೋ–ಅಂತಹವರಿಗೆಲ್ಲರಿಗೂ ಈ ಜ್ಞಾನವು ದೊರೆಯುವುದು.

ವಿಜ್ಞಾನಸಹಿತವೂ ಪರಿಶುದ್ಧವೂ ಆದ ಭಾಗವತಧರ್ಮವನ್ನು ನಾನು ಹಿಂದೆ ದೇವರಿಗೆ ಸಮನಾದ ದರ್ಶನವುಳ್ಳ ಮತ್ತು ದೇವರ ದರ್ಶನವನ್ನು ಮಾಡಿಸುವ, ಮಹಾತ್ಮರಾದ ನಾರದಮಹರ್ಷಿಗಳಿಂದ ಕೇಳಿದೆನು."

ಪ್ರಹ್ಲಾದನ ಉಪದೇಶವನ್ನು ಕೇಳಿದ ದೈತ್ಯಬಾಲಕರು ಆತನಲ್ಲಿ ಒಂದು ಪ್ರಶ್ನೆಯನ್ನಿಟ್ಟರು :

"ಗೆಳೆಯ ಪ್ರಹ್ಲಾದ! ಈ ಇಬ್ಬರು ಗುರುಪುತ್ರರನ್ನು ಬಿಟ್ಟು ಬೇರೆ ಯಾವ ಗುರುವನ್ನೂ ನಾವು ಅರಿಯೆವು ; ನೀನೂ ಅರಿಯೆ. ಗುರುಪುತ್ರರೇ ಬಾಲಕರಾದ ನಮಗೆಲ್ಲರಿಗೂ ಶಾಸಕರಾಗಿದ್ದಾರೆ. ನೀನು ಚಿಕ್ಕವಯಸ್ಸಿನ ಹುಡುಗ. ಹುಟ್ಟಿದ ದಿನ ಮೊದಲುಗೊಂಡು ಅರಮನೆಯಲ್ಲಿ ತಾಯಿಯ ಬಳಿಯೇ ಇರುತ್ತಿರುವೆ. ಹೀಗಿರುವಾಗ ನಿನಗೂ ನಾರದರಿಗೂ ಭೇಟಿ ಯಾಯಿತು–ಎನ್ನುವುದು ಹೊಂದಿಕೆಯಾಗುವುದಿಲ್ಲ. ಈ ವಿಷಯದಲ್ಲಿ ನಂಬಿಕೆಯನ್ನುಂಟುಮಾಡುವ ಸನ್ನಿವೇಶವೇನಾದರೂ ಇದ್ದರೆ ಅದನ್ನು ತಿಳಿಸಿ ನಮ್ಮ ಸಂಶಯವನ್ನು ಹೋಗಲಾಡಿಸಪ್ಪಾ." (ಶ್ಲೋಕ 28-30)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಸಪ್ತಮಸ್ಕಂಧದ ೬ನೆಯ ಅಧ್ಯಾಯವು ಮುಗಿಯಿತು.

ಸಪ್ತಮಸ್ಕಂಧ ೭ನೆಯ ಅಧ್ಯಾಯ

ತಾಯಿಯ ಗರ್ಭದಲ್ಲಿದ್ದಾಗ ನಾರದರಿಂದ ಪಡೆದ ಉಪದೇಶವನ್ನು ಪ್ರಹ್ಲಾದನು ವರ್ಣಿಸಿದುದು

ನಾರದಮಹರ್ಷಿಗಳು ಧರ್ಮರಾಜನಿಗೆ ಹೇಳುತ್ತಾರೆ :

ಏವಂ ದೈತ್ಯಸುತೈಃ ಪೃಷ್ಟೋ ಮಹಾಭಾಗವತೋಽಸುರಃ ।
ಉವಾಚ ಸ್ಮಯಮಾನಸ್ತಾನ್ಸ್ಮರನ್ಮದನುಭಾಷಿತಮ್ ॥೧॥

ಮಹಾರಾಜಯುಧಿಷ್ಠಿರ! ದೈತ್ಯಬಾಲಕರು ಹೀಗೆ ಪ್ರಶ್ನೆಮಾಡಿದಾಗ–ಆ ಪರಮಭಾಗವತೋತ್ತಮನಾದ ಅಸುರಕುಮಾರನಿಗೆ–ನಾನು ಆತನಿಗೆ ಹಿಂದೆ ಮಾಡಿದ್ದ ಉಪದೇಶವು ನೆನಪಿಗೆ ಬಂದಿತು. ಆಗ ಆತನು ಕಿರುನಗೆಯನ್ನು ಬೀರುತ್ತಾ ಅವರಿಗೆ ಹೀಗೆ ಉತ್ತರಹೇಳಿದನು :

“ನಮ್ಮ ತಂದೆಯು ತಪಸ್ಸನ್ನಾಚರಿಸುವುದಕ್ಕಾಗಿ ಮಂದರಪರ್ವತಕ್ಕೆ ಹೊರಟುಹೋದಾಗ, ದೇವತೆಗಳು ಅದೇ ತಕ್ಕ ಸಮಯವೆಂದು ಭಾವಿಸಿ ದಾನವರ ಮೇಲೆ ಯುದ್ಧಹೂಡಲು ಸಿದ್ಧರಾದರು. ‘ಇರುವೆಗಳು ಸರ್ಪವನ್ನು ತಿಂದುಹಾಕುವಂತೆ–ಲೋಕಕ್ಕೆ ಸಂತಾಪವನ್ನು ಉಂಟುಮಾಡುತ್ತಿದ್ದ ಆ ಹಿರಣ್ಯಕಶಿಪುವನ್ನು ಆತನ ಪಾಪಗಳು ತಿಂದುಹಾಕಿದುವು. ಇದು ನಮ್ಮ ಭಾಗ್ಯ’–ಎಂದು ಇಂದ್ರಾದಿದೇವತೆಗಳು ಹೇಳಿಕೊಳ್ಳತೊಡಗಿದರು. ದೇವತೆಗಳು ಮಾಡುತ್ತಿದ್ದ ಆ ದೊಡ್ಡ ಯುದ್ಧಸಿದ್ಧತೆಯ ಸಮಾಚಾರವನ್ನು ಕೇಳಿ ದೈತ್ಯಸೇನಾಪತಿಗಳು ಗಾಬರಿಗೊಂಡರು. ಅವರ ಸಾಹಸವೆಲ್ಲವೂ ಕರಗಿಹೋಯಿತು. ದೇವತೆಗಳನ್ನು ಎದುರಿಸಲು ಅವರ ಕೈಯಲ್ಲಿ ಆಗಲಿಲ್ಲ. ದೇವತೆಗಳಿಂದ ಏಟು ತಿಂದ ಅವರು ತಮ್ಮ ಹೆಂಡಿರು, ಮಕ್ಕಳು, ಗೆಳೆಯರು, ಗುರುಗಳು, ಮನೆ-ಮಠ ಮತ್ತು ಸಾಮಗ್ರಿಗಳು–ಯಾವುದರ ಯೋಚನೆಯನ್ನೂ ಮಾಡದೇ ದಿಕ್ಕು-ವಿದಿಕ್ಕುಗಳಿಗೆ ಪಲಾಯನಮಾಡಿದರು. ಪ್ರಾಣಗಳನ್ನು ಉಳಿಸಿಕೊಳ್ಳಲು ಬೇಗ-ಬೇಗನೆ ಅತ್ತಿತ್ತ ಓಡಿಹೋದರು. ಜಯವನ್ನು ಬಯಸುತ್ತಿದ್ದ ದೇವತೆಗಳು ದೈತ್ಯರಾಜನ ಅರಮನೆಯನ್ನೂ, ಪಾಳೆಯವನ್ನೂ ಕೊಳ್ಳೆಹೊಡೆದರು. ಇಂದ್ರನಾದರೋ ರಾಜನ ಪಟ್ಟಮಹಿಷಿಯಾದ

ನನ್ನ ತಾಯಿಯಾದ ಕಯಾಧುವನ್ನೇ ಸೆರೆಹಿಡಿದನು. ಭಯಗೊಂಡು ಕುರರೀ ಪಕ್ಷಿಯಂತೆ ಅಳುತ್ತಿದ್ದ ಆಕೆಯನ್ನು ಇಂದ್ರನು ಬಲಾತ್ಕಾರದಿಂದ ಕೊಂಡೊಯ್ಯುತ್ತಿದ್ದಾಗ ದೈವವಶದಿಂದ ದಾರಿಯಲ್ಲಿ ದೇವರ್ಷಿನಾರದರು ಕಾಣಿಸಿಕೊಂಡರು. ಅವರು ಇದೆಲ್ಲವನ್ನೂ ಕಂಡು–"ದೇವರಾಜ! ಈಕೆಯನ್ನು ಬಿಟ್ಟುಬಿಡು. ಈಕೆಯು ಯಾವ ಅಪರಾಧವನ್ನೂ ಮಾಡಿಲ್ಲ. ಇವಳನ್ನು ನೀನು ಹಿಡಿದುಕೊಂಡು ಹೋಗುವುದು ಉಚಿತವಲ್ಲ. ಮಹಾ ಭಾಗನೇ! ಈಕೆಯು ಪತಿವ್ರತಾಶಿರೋಮಣಿಯು ಮತ್ತು ಪರನಾರಿಯು. ಒಡನೆಯೇ ಈಕೆಯನ್ನು ಬಿಟ್ಟುಬಿಡು"–ಎಂದು ಇಂದ್ರನಿಗೆ ಆಜ್ಞೆಮಾಡಿ ದರು. ಅದಕ್ಕೆ ಇಂದ್ರನು–"ಮಹಾತ್ಮರೇ! ಈಕೆಯ ಗರ್ಭದಲ್ಲಿ ದೇವ ದ್ರೋಹಿಯಾದ ಹಿರಣ್ಯಕಶಿಪುವಿನ ಅಸಹ್ಯವಾದ ವೀರ್ಯವು ಬೆಳೆಯುತ್ತಿದೆ. ಆದುದರಿಂದ ಈಕೆಯು ಪ್ರಸವವಾಗುವವರೆಗೂ ನನ್ನ ಬಳಿಯಲ್ಲಿರಲಿ. ಮಗುವು ಹುಟ್ಟಿದೊಡನೆಯೇ ಅದನ್ನು ಕೊಂದುಹಾಕಿ ಅನಂತರ ಈಕೆಯನ್ನು ಬಿಟ್ಟುಬಿಡುವೆನು"–ಎಂದು ಅವರಲ್ಲಿ ಅರಿಕೆಮಾಡಿಕೊಂಡನು. ದೇವರ್ಷಿ ನಾರದರು–"ದೇವೇಂದ್ರ! ಈಕೆಯ ಗರ್ಭದಲ್ಲಿ ಬೆಳೆಯುತ್ತಿರುವ ಶಿಶುವು ಪರಭಾಗವತೋತ್ತಮನು. ಯಾವ ಪಾಪವೂ ಎಳ್ಳಷ್ಟೂ ಇಲ್ಲದವನು. ಮಹಾಬಲಶಾಲಿಯಾದ ಮಹಾತ್ಮನು. ಈತನನ್ನು ಕೊಲ್ಲಲು ನಿನಗೆ ಸಾಧ್ಯವಾಗುವುದಿಲ್ಲ. ಈತನ ತಾಯಿಯನ್ನು ಒಡನೆಯೇ ಬಿಟ್ಟುಬಿಡು"– ಎಂದು ಆತನಿಗೆ ತಿಳಿವಳಿಕೆನೀಡಿದರು. ಆಗ ಅವರ ಮಾತನ್ನು ಗೌರವಿಸುತ್ತಾ ಇಂದ್ರನು ನನ್ನ ತಾಯಿಯನ್ನು ಬಿಟ್ಟುಬಿಟ್ಟನು. ಇಷ್ಟಲ್ಲದೇ–'ಆಕೆಯ ಗರ್ಭದಲ್ಲಿ ದೊಡ್ಡ ಭಗವದ್ಭಕ್ತನಿದ್ದಾನೆ'–ಎಂಬುದನ್ನು ತಿಳಿದು ಆಕೆಯನ್ನು ಪ್ರದಕ್ಷಿಣೆಮಾಡಿ ತನ್ನ ಲೋಕಕ್ಕೆ ಹೊರಟುಹೋದನು. (ಶ್ಲೋಕ 2-11)

ಅನಂತರ ದೇವರ್ಷಿನಾರದರು ನನ್ನ ತಾಯಿಯನ್ನು ತಮ್ಮ ಆಶ್ರಮಕ್ಕೆ ಕರೆದುಕೊಂಡು ಹೋಗಿ ಸಮಾಧಾನಪಡಿಸಿ–"ಮಗಳೇ! ನಿನ್ನ ಪತಿಯು ತಪಸ್ಸನ್ನು ಮುಗಿಸಿಕೊಂಡು ಬರುವವರೆಗೂ ನೀನು ಇಲ್ಲಿಯೇ ಇರಮ್ಮಾ"– ಎಂದು ಕೇಳಿಕೊಂಡರು. ಆಕೆಯು 'ಅಪ್ಪಣೆ' ಎಂದು ಅವರ ಮಾತನ್ನು ಶಿರಸಾವಹಿಸಿ ನನ್ನ ತಂದೆಯವರು ಘೋರವಾದ ತಪಸ್ಸನ್ನು ಮುಗಿಸಿ ಹಿಂದಿರುಗುವವರೆಗೂ ಆ ಆಶ್ರಮದಲ್ಲಿಯೇ ಯಾವ ಅಂಜಿಕೆಯೂ ಇಲ್ಲದೆ

ವಾಸಮಾಡಿಕೊಂಡಿದ್ದಳು. ಗರ್ಭಿಣಿಯಾಗಿದ್ದ, ಪತಿವ್ರತೆಯಾದ ನನ್ನ ತಾಯಿಯು ಗರ್ಭದಲ್ಲಿದ್ದ ಶಿಶುವಾದ ನನಗೆ ಮಂಗಳವುಂಟಾಗಲಿ–ಎಂಬ ಕಾಮನೆಯಿಂದಲೂ ಮತ್ತು ತನಗೆ ಇಷ್ಟಬಂದ ಸಮಯದಲ್ಲಿ (ಅಂದರೆ ನನ್ನ ತಂದೆಯವರು ತಪಸ್ಸಿನಿಂದ ಹಿಂದಿರುಗಿದ ಬಳಿಕ) ಶಿಶುವು ಹುಟ್ಟಲಿ–ಎಂಬ ಕಾಮನೆಯಿಂದಲೂ ನಾರದಮಹರ್ಷಿಗಳನ್ನು ಅತ್ಯಂತಭಕ್ತಿಯಿಂದ ಸೇವಿಸುತ್ತಿದ್ದಳು. (ಶ್ಲೋಕ 12-14)

ಪರಮಕಾರುಣಿಕರೂ ಮತ್ತು ಸರ್ವಸಮರ್ಥರೂ ಆದ ದೇವರ್ಷಿ ನಾರದರು ನನ್ನ ತಾಯಿಗೆ ಭಾಗವತಧರ್ಮದ ರಹಸ್ಯವನ್ನೂ ಮತ್ತು ಪರಿಶುದ್ಧವಾದ ಜ್ಞಾನವನ್ನೂ ಉಪದೇಶಿಸಿದರು. ನನ್ನನ್ನೂ ಉದ್ಧರಿಸುವ ಸಲುವಾಗಿ, ನನಗೂ ಪ್ರಯೋಜನವಾಗಲಿ–ಎಂಬ ಉದ್ದೇಶದಿಂದ ಅವರು ಆಕೆಗೆ ಆಗ ಅವುಗಳನ್ನು ಉಪದೇಶಮಾಡಿದರು. ನಮ್ಮ ತಾಯಿಯು ಸ್ತ್ರೀಯಾಗಿರುವುದರಿಂದಲೂ ಮತ್ತು ಉಪದೇಶಮಾಡಿ ಬಹಳ ಕಾಲವು ಕಳೆದುಹೋದದ್ದರಿಂದಲೂ ಆ ಜ್ಞಾನದ ನೆನಪು ಆಕೆಯಲ್ಲಿ ಉಳಿಯಲಿಲ್ಲ. ಆದರೆ ನಾನು ಮಹರ್ಷಿಗಳ ಅನುಗ್ರಹಕ್ಕೆ ವಿಶೇಷವಾಗಿ ಪಾತ್ರನಾಗಿದ್ದುದರಿಂದ ನನಗೆ ಈಗಲೂ ಅದರ ನೆನಪು ಹೋಗಿಲ್ಲ. ನನ್ನ ಮಾತಿನಲ್ಲಿ ನೀವು ಶ್ರದ್ಧೆಯನ್ನಿಟ್ಟುಕೊಂಡರೆ ನಿಮಗೂ ಆ ಜ್ಞಾನವು ದೊರೆಯುವುದು. ಏಕೆಂದರೆ : ಶ್ರದ್ಧೆಯ ಬಲವಿದ್ದರೆ ಸ್ತ್ರೀಯರ ಮತ್ತು ಬಾಲಕರ ಬುದ್ಧಿಯೂ ಕೂಡ ನನ್ನ ಬುದ್ಧಿಯಂತೆಯೇ ಶುದ್ಧವಾಗಲು ಸಾಧ್ಯ. ಈಶ್ವರನ ಮೂರ್ತಿಯಾಗಿರುವ ಕಾಲನ ಪ್ರೇರಣೆಯಿಂದಲೇ ವೃಕ್ಷಗಳಲ್ಲಿ ಕಾಯಿಗಳು ಕಾಣಿಸಿಕೊಂಡು ಅಲ್ಲೇ ಇದ್ದು ಬೆಳೆದು ಹಣ್ಣಾಗಿ ಕ್ಷೀಣವಾಗಿ ನಾಶಹೊಂದುವುದಿಲ್ಲವೇ? ಹಾಗೆಯೇ ಆ ಕಾಲನ ಪ್ರೇರಣೆಯಿಂದ ದೇಹದಲ್ಲಿ ಹುಟ್ಟು, ಇರುವಿಕೆ, ಬೆಳವಣಿಗೆ, ಪರಿಣಾಮ, ಕ್ಷಯ ಮತ್ತು ನಾಶ–ಎಂಬ ಆರು ಭಾವವಿಕಾರಗಳು ಉಂಟಾಗುವುವು. ಆದರೆ ಆ ವಿಕಾರಗಳು ದೇಹಕ್ಕೆ ಉಂಟಾಗುತ್ತವೆಯೇ ಹೊರತು ಆತ್ಮನಿಗಲ್ಲ. ಆತ್ಮನಾದರೋ ನಿತ್ಯನು, ಅವಿನಾಶಿಯು, ಶುದ್ಧನು, ಏಕರೂಪನು, ಕ್ಷೇತ್ರಜ್ಞನು, ಆಶ್ರಯನು, ವಿಕಾರರಹಿತನು, ಸ್ವಯಂಪ್ರಕಾಶನು, ಎಲ್ಲಕ್ಕೂ ಕಾರಣನು, ವ್ಯಾಪಕನು, ಸಂಗರಹಿತನು ಮತ್ತು ಯಾವ ಆವರಣವೂ ಇಲ್ಲದವನು. ಈ ನಿತ್ಯತ್ವವೇ

ಮುಂತಾದ ಹನ್ನೆರಡೂ ಆತ್ಮನ ಶ್ರೇಷ್ಠವಾದ ಲಕ್ಷಣಗಳು. ಇವುಗಳ ಮೂಲಕ ಆತ್ಮತತ್ತ್ವವನ್ನು ಅರಿತ ಮನುಷ್ಯನು ಶರೀರವೇ ಮುಂತಾದುವುಗಳಲ್ಲಿ ಮೋಹದಿಂದ ಉಂಟಾಗಿರುವ 'ನಾನು' 'ನನ್ನದು' ಎಂಬ ಸುಳ್ಳು-ಸುಳ್ಳಾದ ಭಾವನೆಯನ್ನು ಬಿಟ್ಟುಬಿಡಬೇಕು. (ಶ್ಲೋಕ 15-20)

ಸ್ವರ್ಣಂ ಯಥಾ ಗ್ರಾವಸು ಹೇಮಕಾರಃ
ಕ್ಷೇತ್ರೇಷು ಯೋಗೈಸ್ತದಭಿಜ್ಞ ಆಪ್ನುಯಾತ್ ।
ಕ್ಷೇತ್ರೇಷು ದೇಹೇಷು ತಥಾತ್ಮಯೋಗೈ-
ರಧ್ಯಾತ್ಮವಿದ್ಬ್ರಹ್ಮಗತಿಂ ಲಭೇತ ॥೨೧॥

ಚಿನ್ನದ ಗಣಿಯ ಕ್ಷೇತ್ರಗಳಲ್ಲಿ ಚಿನ್ನವು ಕಲ್ಲುಗಳೊಡನೆ ಬೆರಕೆಯಾಗಿರುತ್ತದೆ. ತಜ್ಞನಾಗಿರುವ ಅಕ್ಕಸಾಲೆಯು ಅಲ್ಲಿಂದ ಅವುಗಳನ್ನು ತೆಗೆದು ಬಗೆ-ಬಗೆಯ ವಿಧಿಗಳಿಂದ ಚಿನ್ನವನ್ನು ಬೇರ್ಪಡಿಸಿ ತೆಗೆದುಕೊಳ್ಳುವನಷ್ಟೇ! ಹಾಗೆಯೇ ಅಧ್ಯಾತ್ಮತತ್ತ್ವವನ್ನು ಬಲ್ಲ ವಿವೇಕಿಯು ಆತ್ಮವನ್ನು ಪಡೆಯುವ ನಾನಾಯೋಗಗಳಿಂದ ತನ್ನ ಶರೀರವೆಂಬ ಕ್ಷೇತ್ರದಲ್ಲಿಯೇ ಆತನನ್ನು ಪ್ರತ್ಯೇಕಿಸಿ ಬ್ರಹ್ಮಪದದ ಸಾಕ್ಷಾತ್ಕಾರವನ್ನು ಪಡೆಯುವನು.

ತತ್ತ್ವಸ್ವರೂಪವನ್ನು ಬಲ್ಲ ಆಚಾರ್ಯರು ತತ್ತ್ವಗಳನ್ನು ಪರಿಗಣಿಸುವಾಗ ಮೂಲಪ್ರಕೃತಿ, ಮಹತ್ತತ್ತ್ವ, ಅಹಂಕಾರ ಮತ್ತು ಪಂಚತನ್ಮಾತ್ರೆಗಳು—ಎಂಬ ಎಂಟು ತತ್ತ್ವಗಳನ್ನು 'ಪ್ರಕೃತಿ' ಎಂದು ಕರೆಯುತ್ತಾರೆ. ಆ ಪ್ರಕೃತಿಗೆ ಸತ್ತ್ವ, ರಜಸ್ಸು ಮತ್ತು ತಮಸ್ಸು-ಎಂಬಿವು ಮೂರೂ ಗುಣಗಳು ಮತ್ತು ಹತ್ತು ಇಂದ್ರಿಯಗಳು, ಮನಸ್ಸು ಮತ್ತು ಪಂಚಮಹಾಭೂತಗಳು—ಎಂಬ ಹದಿನಾರೂ ಪ್ರಕೃತಿಯ ವಿಕಾರಗಳೆನಿಸುತ್ತವೆ. ಇವೆಲ್ಲದರಲ್ಲಿಯೂ ಅನ್ವಯ ಹೊಂದಿರುವವನು ಪುರುಷ (ಆತ್ಮ)ನೊಬ್ಬನೇ. ಇವೆಲ್ಲದರ ಸಮುದಾಯವೇ ದೇಹವು. ದೇಹದಲ್ಲಿ ಸ್ಥಾವರದೇಹ, ಜಂಗಮದೇಹ—ಎಂದು ಎರಡು ಪ್ರಕಾರಗಳು. ಈ ದೇಹದ ಒಳಗಡೆಯೇ ಪುರುಷನನ್ನು ಹುಡುಕಬೇಕು. ಅಂತಃಕರಣ, ಇಂದ್ರಿಯಗಳೇ ಮುಂತಾದ ಅನಾತ್ಮವಸ್ತುಗಳನ್ನೂ 'ಇದು ಆತ್ಮನಲ್ಲ' 'ಇದು ಆತ್ಮನಲ್ಲ' ಎಂಬ ಭಾವದಿಂದ ತೊರೆಯುತ್ತಾ ಆ ಪುರುಷನನ್ನು ಹುಡುಕಬೇಕು. ಪುರುಷನು ಇವೆಲ್ಲದರಲ್ಲಿಯೂ ಅನ್ವಯ

ಹೊಂದಿದ್ದಾನೆ. ಆದರೆ ಇವೆಲ್ಲದರಿಂದಲೂ ಆತನು ಪ್ರತ್ಯೇಕವೇ ಆಗಿದ್ದಾನೆ. ಆತನ ಇರುವಿಕೆಯಿಂದಲೇ ಇವೆಲ್ಲಾ ಇರುವುದು. ಆತನಿಲ್ಲದಿದ್ದರೆ ಇವು ಯಾವುವೂ ಇರಲು ಸಾಧ್ಯವಿಲ್ಲ–ಎಂದು ವಿವೇಚನೆಯಿಂದ ತಿಳಿಯಬೇಕು. ಇಂತಹ ಶುದ್ಧವಾದ ಬುದ್ಧಿಯಿಂದ ಪ್ರಪಂಚದ ಸೃಷ್ಟಿ, ಸ್ಥಿತಿ ಮತ್ತು ಲಯ ಗಳನ್ನು ಕುರಿತು ನಿಧಾನವಾಗಿ ವಿಚಾರಮಾಡಬೇಕು. ಆತುರಪಡದೇ ಮೆಲ್ಲ-ಮೆಲ್ಲನೆ ವಿಚಾರಮಾಡಬೇಕು. ಎಚ್ಚರದ ಸ್ಥಿತಿ, ಕನಸು ಮತ್ತು ಗಾಢನಿದ್ರೆ–ಇವು ಮೂರೂ ಬುದ್ಧಿಯ ವೃತ್ತಿಗಳು. ಈ ವೃತ್ತಿಗಳ ಮೂಲಕ ಯಾವನ ಅನುಭವವು ಉಂಟಾಗುತ್ತದೆಯೋ–ಆತನೇ ಸರ್ವಾತೀತನೂ ಸರ್ವಸಾಕ್ಷಿಯೂ ಆಗಿರುವ ಪರಮಪುರುಷನು. (ಶ್ಲೋಕ 21-25)

ಏಭಿಸ್ತ್ರಿವರ್ಣೈಃ ಪರ್ಯಸ್ತೈರ್ಬುದ್ಧಿಭೇದೈಃ ಕ್ರಿಯೋದ್ಭವೈಃ ।
ಸ್ವರೂಪಮಾತ್ಮನೋ ಬುಧ್ಯೇದ್ಗನ್ಧೈರ್ವಾಯುಮಿವಾನ್ವಯಾತ್ ॥

ವಾಸನೆಯನ್ನು ನೋಡಿ ಅದಕ್ಕೆ ಆಶ್ರಯವಾದ ವಾಯು ಎಂಬ ವಸ್ತುವು ಉಂಟು ಎಂದು ನಾವು ವಾಯುವಿನ ಅರಿವನ್ನು ಪಡೆಯುತ್ತೇವೆ. ಹಾಗೆಯೇ ಕರ್ಮಜನ್ಯವಾಗಿ ಬದಲಾವಣೆಹೊಂದುತ್ತಿರುವ ಈ ಮೂರು ಅವಸ್ಥೆಗಳ ಮೂಲಕ ಇವುಗಳಲ್ಲಿ ಸಾಕ್ಷಿಯಾಗಿ ಅನ್ವಯಹೊಂದಿರುವ ಆತ್ಮನ ಅರಿವನ್ನು ಪಡೆಯಬೇಕು.

ಆತ್ಮನನ್ನು ಶರೀರದಿಂದಲೂ, ಪ್ರಕೃತಿಯಿಂದಲೂ ಬೇರ್ಪಡಿಸಿ ಕೊಳ್ಳದೇ ಇರುವುದರಿಂದಲೇ ಈ ಗುಣ-ಕರ್ಮಗಳಿಂದ ಉಂಟಾಗುವ ಹುಟ್ಟು-ಸಾವುಗಳ ಚಕ್ರವು ಉಂಟಾಗುವುದು. ಇದು ಅಜ್ಞಾನಮೂಲ ವಾದುದು ; ಅನರ್ಥಕರವಾದುದು. ಆದರೂ ಕನಸಿನಂತೆ ಇದರ ಪ್ರೀತಿಯು ಆತ್ಮನಿಗೇ ಉಂಟಾಗುತ್ತದೆ. ಆದುದರಿಂದ ನೀವು ಎಲ್ಲಕ್ಕೂ ಮೊದಲು ಗುಣಗಳಿಗೆ ಅನುಸಾರವಾಗಿ ಆಗುವ ಈ ಕರ್ಮಗಳ ಬೀಜವನ್ನೇ ನಾಶಪಡಿಸಿ ಬಿಡಬೇಕು. ಇದರಿಂದ ಬುದ್ಧಿವೃತ್ತಿಗಳ ಪ್ರವಾಹವು ನಿಂತುಹೋಗುವುದು. ಇದನ್ನೇ 'ಯೋಗ' (ಪರಮಾತ್ಮನೊಡನೆ ಸಂಯೋಗ) ಎಂದು ಕರೆಯು ತ್ತಾರೆ. ಈ ತ್ರಿಗುಣಾತ್ಮಕವಾದ ಕರ್ಮಗಳನ್ನು ಬುಡಸಹಿತವಾಗಿ ಕಿತ್ತುಹಾಕು ವುದಕ್ಕೆ ಅಥವಾ ಬುದ್ಧಿಯ ವೃತ್ತಿಗಳ ಪ್ರವಾಹಗಳನ್ನು ತಡೆಗಟ್ಟುವುದಕ್ಕೆ

ಸಾವಿರಾರು ಉಪಾಯಗಳಿವೆ. ಆದರೆ ಯಾವುದು ಸರ್ವೇಶ್ವರನಾಗಿರುವ ಶ್ರೀಭಗವಂತನಲ್ಲಿ ಸ್ವಾಭಾವಿಕವಾದ ರತಿಯನ್ನು ಉಂಟುಮಾಡುತ್ತದೆಯೋ ಅದೇ ಇವುಗಳಲ್ಲಿ ಸರ್ವಶ್ರೇಷ್ಠವಾದ ಉಪಾಯವು. ಈ ಆಶಯವನ್ನು ಸ್ವಯಂ ಶ್ರೀಭಗವಂತನೇ ಅಪ್ಪಣೆಕೊಡಿಸಿದ್ದಾನೆ. ಭಕ್ತಿಯಿಂದ ಗುರು ಶುಶ್ರೂಷೆ ಮಾಡುವುದು ; ತನಗೆ ದೊರೆತ ಎಲ್ಲ ವಸ್ತುಗಳನ್ನೂ ಪರಮ ಪ್ರೇಮದಿಂದ ಪರಮಾತ್ಮನಿಗೆ ಸಮರ್ಪಣೆ ಮಾಡುವುದು ; ಭಗವದ್ಭಕ್ತರಾದ ಮಹಾತ್ಮರ ಸತ್ಸಂಗದಲ್ಲಿರುವುದು ; ಶ್ರೀಭಗವಂತನ ಆರಾಧನೆಯನ್ನು ಮಾಡುವುದು ; ಶ್ರದ್ಧೆ-ಭಕ್ತಿಗಳಿಂದ ಆತನ ಕಥೆಗಳನ್ನೂ, ಕಲ್ಯಾಣಗುಣ ಗಳನ್ನೂ, ಲೀಲೆಗಳನ್ನೂ ಕೀರ್ತನೆಮಾಡುವುದು ; ಆತನ ಅಡಿದಾವರೆ ಗಳನ್ನು ಧ್ಯಾನಮಾಡುವುದು ; ಗುರುಗಳ ಮೂಲಕ ದೇವರಮೂರ್ತಿ ಮುಂತಾದುವುಗಳ ದರ್ಶನ-ಪೂಜನಗಳನ್ನು ಮಾಡುವುದು–ಇವೇ ಮುಂತಾದ ಸಾಧನೆಗಳಿಂದ ಶ್ರೀಭಗವಂತನಲ್ಲಿ ಸ್ವಾಭಾವಿಕವಾದ ಪ್ರೇಮವುಂಟಾಗುವುದು. 'ಸರ್ವೇಶ್ವರನಾದ ಭಗವಂತನಾದ ಶ್ರೀಹರಿಯು ಎಲ್ಲ ಪ್ರಾಣಿಗಳಲ್ಲಿಯೂ ಬೆಳಗುತ್ತಿದ್ದಾನೆ'–ಎಂಬ ಭಾವನೆಯಿಂದ ಯಥಾ ಶಕ್ತಿಯಾಗಿ ಎಲ್ಲ ಪ್ರಾಣಿಗಳ ಇಷ್ಟಾರ್ಥಗಳನ್ನೂ ಈಡೇರಿಸಬೇಕು ಮತ್ತು ಅವುಗಳನ್ನು ಗೌರವದಿಂದ ಕಾಣಬೇಕು. ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯ–ಎಂಬ ಆರು ಶತ್ರುಗಳನ್ನೂ ಜಯಿಸಿ ಈ ರೀತಿಯ ಸಾಧನಭಕ್ತಿಯನ್ನು ಅನುಷ್ಠಾನಮಾಡುವ ಸುಕೃತಿಗಳಿಗೆ ಶ್ರೀಭಗವಂತನಾದ ವಾಸುದೇವನಲ್ಲಿ ಸಹಜವಾದ ಅನನ್ಯಪ್ರೇಮವುಂಟಾಗು ವುದು. ಶ್ರೀಭಗವಂತನು ತನ್ನ ಅವತಾರಲೀಲೆಗಳಲ್ಲಿನ ದಿವ್ಯಮಂಗಳ ವಿಗ್ರಹಗಳಿಂದ ತೋರಿದ ಪರಮಾದ್ಭುತವಾದ ಪರಾಕ್ರಮಗಳನ್ನೂ, ಆತನ ಅನುಪಮವಾದ ಗುಣಗಳನ್ನೂ ಮತ್ತು ಚರಿತ್ರೆಗಳನ್ನೂ ಕೇಳಿದಾಗ ಮನುಷ್ಯನಿಗೆ ಯಾವಾಗ ರೋಮಾಂಚನವು ಆಗಿ ಆನಂದದ ಕಣ್ಣೀರಿನಿಂದ ಕಂಠವು ಸೆರೆಬಿಗಿದು ಆತನು ಸಂಕೋಚವನ್ನು ಬಿಟ್ಟು ಗಟ್ಟಿಯಾಗಿ ಹಾಡುತ್ತಾ ಕೂಗುತ್ತಾ ಕುಣಿಯತೊಡಗುವನೋ–ಗ್ರಹವು ಹಿಡಿದ ಹುಚ್ಚನಂತೆ ಕೆಲವೊಮ್ಮೆ ನಗುತ್ತಲೂ, ಕೆಲವೊಮ್ಮೆ ಅಳುತ್ತಲೂ, ಕೆಲವೊಮ್ಮೆ ಧ್ಯಾನಿಸುತ್ತಲೂ, ಕೆಲವೊಮ್ಮೆ ಭಗವದ್ಭಾವದಿಂದ ಜನರಿಗೆ ನಮಸ್ಕರಿ

ಸುತ್ತಲೂ ವಿಚಿತ್ರವಾಗಿ ವರ್ತಿಸುವನೋ, ಶ್ರೀಭಗವಂತನಲ್ಲಿ ತನ್ಮಯನಾಗಿ ಬಾರಿ-ಬಾರಿಗೂ ನಿಟ್ಟುಸಿರುಬಿಡುತ್ತಾ ನಾಚಿಕೆಯನ್ನೂ, ಸಂಕೋಚವನ್ನೂ ಬಿಟ್ಟು 'ಹರೇ! ಜಗತ್ಪತೇ! ನಾರಾಯಣ!' ಎಂದು ಕೂಗಿಕೊಳ್ಳತೊಡಗುವನೋ–ಆಗ ಭಕ್ತಿಯೋಗದ ದಿವ್ಯಪ್ರಭಾವದಿಂದ ಆತನ ಎಲ್ಲ ಕಟ್ಟುಗಳೂ ಕತ್ತರಿಸಿಹೋಗುವುವು ಮತ್ತು ಭಗವದ್ಭಾವವನ್ನು ಅಡಿಗಡಿಗೆ ತುಂಬಿಕೊಳ್ಳುತ್ತಾ ಇರುವ ಆತನ ಹೃದಯವೂ ಭಗವದಾಕಾರವಾಗಿ ಭಗವನ್ಮಯವೇ ಆಗಿಬಿಡುವುದು. ಆಗ ಆತನ ಹುಟ್ಟು-ಸಾವುಗಳ ಭಂಡಾರವೇ ಸುಟ್ಟುಬೂದಿಯಾಗಿಬಿಡುವುದು ಮತ್ತು ಆತನು ಶ್ರೀಭಗವಂತನನ್ನು ಸೇರಿಕೊಳ್ಳುವನು. ಈ ಅಶುಭವಾದ ಸಂಸಾರದ ಕೆಸರಿನಲ್ಲಿ ಸಿಕ್ಕಿಹಾಕಿಕೊಂಡು ಅಶುಭವಾದ ಮನಸ್ಸಿನ ಅವಸ್ಥೆಯನ್ನು ಹೊಂದಿರುವ ಜೀವಕ್ಕೆ ಪರಮಾತ್ಮನ ಪ್ರಾಪ್ತಿಯಿಂದಾಗಿ ಸಂಸಾರದ ಬವಣೆ ತಪ್ಪುವುದು. ಆ ಪರಮಾತ್ಮವಸ್ತುವೇ ಪರಬ್ರಹ್ಮವೆಂದೂ ನಿರ್ವಾಣ (ಮುಕ್ತಿ) ಸುಖವೆಂದೂ ಜ್ಞಾನಿಗಳ ತಿಳಿವಳಿಕೆ ಬರುವುದು. ಆದುದರಿಂದ, ಎಲೈ ಗೆಳೆಯರೇ! ನೀವೆಲ್ಲರೂ ನಿಮ್ಮ ನಿಮ್ಮ ಹೃದಯಗಳಲ್ಲಿ ಆ ಹೃದಯೇಶ್ವರನಾದ ಶ್ರೀಭಗವಂತನನ್ನು ಭಜಿಸಿರಿ. ಎಲೈ ಅಸುರಬಾಲಕರೇ! ನಿಮ್ಮ ಹೃದಯದಲ್ಲಿಯೇ ಆಕಾಶದಂತೆ ಸದಾ ಬೆಳಗುತ್ತಿರುವ ಆ ಶ್ರೀಭಗವಂತನನ್ನು ಭಜಿಸುವುದರಲ್ಲಿ ಮಹಾಪ್ರಯಾಸವಾದರೂ ಏನಿದೆ? ಸಮಸ್ತಪ್ರಾಣಿಗಳಿಗೂ ಸಮಾನರೂಪದಲ್ಲಿ ಗೆಳೆಯನಾಗಿ, ಅವುಗಳಿಗೆ ಆತ್ಮಸ್ವರೂಪನೇ ಆಗಿರುವ ಆತನನ್ನು ಬಿಟ್ಟು ಭೋಗಸಾಮಗ್ರಿಗಳನ್ನು ಸಂಗ್ರಹಿಸುವುದರಲ್ಲಿ ತೊಡಗುವುದು ಮಹಾಮೂರ್ಖತನವಲ್ಲವೇ? ಮಿತ್ರರೇ! ಹಣ, ಹೆಂಡಿರು, ಪುತ್ರ-ಪುತ್ರಿಯರು, ಪಶುಗಳು, ಅರಮನೆ, ಭೂಮಿ, ಆನೆ, ಭಂಡಾರ, ಸಮಸ್ತಧನ ಮತ್ತು ಭೋಗಸಾಮಗ್ರಿಗಳೂ–ಕ್ಷಣಕಾಲದಲ್ಲಿ ನಾಶಹೊಂದುವಂತಹ ಈ ಮನುಷ್ಯನಿಗೆ ಏನು ತಾನೇ ಸುಖವನ್ನು ಕೊಟ್ಟಾವು? ಅವು ತಾನೇ ಕ್ಷಣಿಕ ಪದಾರ್ಥಗಳಲ್ಲವೇ? ಈ ಲೋಕದ ಸಂಪತ್ತುಗಳಂತೆಯೇ ಯಜ್ಞಗಳ ಫಲವಾಗಿ ದೊರೆಯಬಹುದಾದ ಸ್ವರ್ಗಾದಿ ಲೋಕಗಳೂ ಕ್ಷಯಹೊಂದುವುಗಳೇ ಆಗಿವೆ. ಅವುಗಳಲ್ಲಿಯೂ ಮೇಲು-ಕೀಳುಗಳುಂಟು. ಅವು ದೋಷರಹಿತವೂ ಆಗಿಲ್ಲ. ಯಾವ ದೋಷವೂ ಎಳ್ಳಷ್ಟೂ

ಇಲ್ಲದವನು ಪರಮಾತ್ಮನೊಬ್ಬನೇ. ಆತನಲ್ಲಿ ಯಾವುದೇ ದೋಷವನ್ನೂ ಯಾವನೂ ಕಂಡಿಲ್ಲ. ಕೇಳಿಯೂ ಇಲ್ಲ. ಆದುದರಿಂದ ಆತ್ಮಲಾಭಕ್ಕೋಸ್ಕರ ಆ ಪರಮೇಶ್ವರನನ್ನೇ ಅನನ್ಯಭಕ್ತಿಯಿಂದ ಭಜಿಸಿರಿ. (ಶ್ಲೋಕ 27-40)

ಇದೂ ಅಲ್ಲದೇ ತನ್ನನ್ನು ಮಹಾವಿದ್ವಾಂಸನೆಂದು ತಿಳಿದುಕೊಂಡಿರುವ ಮನುಷ್ಯನು ಈ ಲೋಕದಲ್ಲಿ ಯಾವ ಉದ್ದೇಶದಿಂದ ಬಗೆ-ಬಗೆಯ ಕರ್ಮಗಳನ್ನು ಬಾರಿ-ಬಾರಿಗೂ ಮಾಡುತ್ತಿರುವನೋ–ಆತನಿಗೆ ಆ ಇಷ್ಟಾರ್ಥವು ಈಡೇರುವುದೇ ಇಲ್ಲ. ಅಷ್ಟು ಮಾತ್ರವಲ್ಲದೇ ಅದಕ್ಕೆ ವಿರುದ್ಧವಾಗಿ ಅನಿಷ್ಟ ಫಲವೇ ಉಂಟಾಗುವುದು. ಇದರಲ್ಲಿ ಯಾವ ಸಂಶಯವೂ ಇಲ್ಲ. ಮನುಷ್ಯನು ಸುಖವನ್ನು ಪಡೆಯಬೇಕು ; ದುಃಖದಿಂದ ಬಿಡುಗಡೆ ಹೊಂದಬೇಕು–ಎಂಬ ಎರಡು ಉದ್ದೇಶಗಳಿಂದಲ್ಲವೇ ಕರ್ಮಗಳಲ್ಲಿ ತೊಡಗುವುದು? ಆದರೆ ಮೊದಲು ಯಾವ ಕಾಮನೆಯೂ ಇರದೇ ಇದ್ದ ಕಾರಣ ಸುಖದಲ್ಲಿ ಮುಳುಗಿದ್ದ ಮನುಷ್ಯನೇ ಕಾಮನೆಯ ಬಲೆಯಲ್ಲಿ ಸಿಕ್ಕಿ ಸದಾ ದುಃಖದಲ್ಲಿ ನರಳುತ್ತಿರಬೇಕಾಗುವುದೆಂಬುದನ್ನು ತಿಳಿಯಿರಿ. ಮನುಷ್ಯನು ಇಹಲೋಕದಲ್ಲಿ ಸಕಾಮಕರ್ಮಗಳನ್ನು ಆಚರಿಸಿ ತನ್ನ ಶರೀರಕ್ಕೆ ಭೋಗವನ್ನು ಕೊಡಲು ಪ್ರಯತ್ನಿಸುವನು. ಆದರೆ ಯಾವುದಕ್ಕಾಗಿ ಈತನು ಇಷ್ಟೆಲ್ಲಾ ಕಷ್ಟಪಡುತ್ತಿರುವನೋ–ಆ ದೇಹವೆಂಬುದು ಈತನದೇ ಅಲ್ಲ. ಅದು ಪರಕೀಯ ವಸ್ತು. ನಾಯಿ-ನರಿಗಳಿಗೆ ಆಹಾರವಾಗುವ ನಶಿಸುವ ಪದಾರ್ಥ. ತನ್ನದೆಂದು ತಿಳಿಯಲ್ಪಟ್ಟಿರುವ ಶರೀರದ ವಿಷಯವೇ ಹೀಗಿರುವಾಗ ಇನ್ನು ಹೆಂಡಿರು-ಮಕ್ಕಳು, ಮನೆ-ಮಠ, ಆಸ್ತಿ-ಪಾಸ್ತಿ, ಹಣ, ರಾಜ್ಯ, ಭಂಡಾರ, ಆನೆ-ಕುದುರೆಗಳು, ಮಂತ್ರಿಗಳು, ಆಳು-ಕಾಳುಗಳು, ಗುರು-ಹಿರಿಯರು ಇತ್ಯಾದಿಯಾಗಿ ತನ್ನವೆಂದು ಭಾವಿಸಲ್ಪಟ್ಟಿರುವ ಇತರ ವಸ್ತುಗಳ ಬಗೆಗೆ ಹೇಳತಕ್ಕದ್ದೇನು? ಈ ತುಚ್ಛಪದಾರ್ಥಗಳು ಶರೀರದೊಡನೆಯೇ ನಾಶಹೊಂದಿಬಿಡುವುವು. ಇವು ನೋಡುವುದಕ್ಕೆ ಪುರುಷಾರ್ಥಗಳಂತೆ ಕಂಡರೂ–ವಾಸ್ತವವಾಗಿ ಪುರುಷಾನರ್ಥಗಳೇ ಆಗಿವೆ. ಆತ್ಮನು–ತಾನೇ ನಿತ್ಯಾನಂದಮಹಾಸಾಗರವಾಗಿರುವಾಗ–ಆತನಿಗೆ ಈ ವಸ್ತುಗಳ ಆವಶ್ಯಕತೆಯಾದರೂ ಏನು? ಗರ್ಭಾಧಾನದಿಂದ ಹಿಡಿದು ಸಾಯುವವರೆಗೂ ಎಲ್ಲ ಅವಸ್ಥೆಗಳಲ್ಲಿಯೂ ತನ್ನ ಕರ್ಮಗಳಿಗೆ

ಅಧೀನನಾಗಿ ಕ್ಲೇಶಗಳನ್ನೇ ಅನುಭವಿಸುತ್ತಿರುವ ಈ ಜೀವನಿಗೆ ಸಂಸಾರದಲ್ಲಿ ಸಾರ್ಥಕವಾದರೂ ಏನಿದ್ದೀತು?–ವಿಚಾರಮಾಡಿ ನೋಡಿರಿ. ಈ ಜೀವನು ಸೂಕ್ಷ್ಮಶರೀರವನ್ನೇ ತನ್ನ ಆತ್ಮವೆಂದು ಭಾವಿಸಿ ಅದರ ಮೂಲಕ ಅನೇಕ ಕರ್ಮಗಳನ್ನು ಮಾಡುವನು. ಆ ಕರ್ಮಗಳಿಂದ ಆತನು ಮತ್ತೆ ಶರೀರವನ್ನೇ ಸ್ವೀಕರಿಸಬೇಕಾಗುವುದು. ಹೀಗೆ ಕರ್ಮದಿಂದ ಶರೀರ ಮತ್ತು ಶರೀರದಿಂದ ಕರ್ಮ–ಎಂಬ ಪರಂಪರೆಯು ನಡೆದುಬರುತ್ತಿದೆ. ಇವೆರಡಕ್ಕೂ ಕಾರಣ ಅವಿವೇಕವೇ. ಆದುದರಿಂದ ನಿಷ್ಕಾಮಭಾವದಿಂದ ಸರ್ವಕಾಮರಹಿತನಾದ, ಪರಮೇಶ್ವರನಾದ ಶ್ರೀಹರಿಯನ್ನೇ ಭಜಿಸಿರಿ. ಧರ್ಮವೇನು? ಅರ್ಥವೇನು? ಕಾಮವೇನು?–ಎಲ್ಲವೂ ಆತನನ್ನೇ ಆಶ್ರಯಿಸಿವೆ. ಅವನ ಇಚ್ಛೆಯಿಲ್ಲದೇ ಇವು ಯಾವುವೂ ದೊರೆಯಲಾರವು. ಸಮಸ್ತಭೂತಗಳಿಗೂ ಶ್ರೀಹರಿಯೇ ಈಶ್ವರನು, ಆತ್ಮವು ಮತ್ತು ಪರಮಪ್ರಿಯತಮನಾದವನು. ತಾನು ಸೃಷ್ಟಿಮಾಡಿದ ಪಂಚಭೂತಗಳಿಂದ ನಿರ್ಮಿತವಾದ ಭೂತಗಳೆಲ್ಲಕ್ಕೂ ಆತನೇ ಆದಿಕಾರಣ (ಬೀಜ) ನೆನಿಸುತ್ತಾನೆ.* ದೇವತೆಯಾಗಲೀ, ದೈತ್ಯನಾಗಲೀ, ಮನುಷ್ಯನಾಗಲೀ, ಯಕ್ಷನಾಗಲೀ ಅಥವಾ ಗಂಧರ್ವನಾಗಲೀ–ಯಾವನೇ ಆದರೂ ಶ್ರೀಭಗವಂತನ ಅಡಿದಾವರೆಗಳನ್ನು ಸೇವೆಮಾಡಿದರೆ ಆತನು ನಮ್ಮಂತೆಯೇ ಸನ್ಮಂಗಳಕ್ಕೆ ಪಾತ್ರನಾಗುವನು. (ಶ್ಲೋಕ 41-50)

ಎಲೈ ಅಸುರಬಾಲಕರೇ! ಶ್ರೀಭಗವಂತನನ್ನು ಸಂತೋಷ ಪಡಿಸುವುದಕ್ಕೆ ಬ್ರಾಹ್ಮಣತ್ವವಾಗಲೀ, ದೇವತ್ವವಾಗಲೀ, ಋಷಿತ್ವವಾಗಲೀ,

---

* **'ಕೃತಾನಾಂ ಬೀಜಸಂಜ್ಞಿತಃ'**–ಎಂಬ ಪಾಠವು ವೀರರಾಘವೀಯ–ವಿಜಯ ಧ್ವಜೀಯಗಳಲ್ಲಿದೆ. ಶ್ರೀಧರೀಯದಲ್ಲಿ **'ಕೃತಾನಾಂ ಜೀವಸಂಜ್ಞಿತಃ'**–ಎಂಬ ಪಾಠವಿದೆ. ಅದರಂತೆ ಆ ಪರಮಾತ್ಮನೇ ಪಂಚಭೂತಗಳಿಂದ ನಿರ್ಮಿತವಾದ ಈ ದೇಹದಲ್ಲಿ ಜೀವವೆಂದು ಕರೆಯಲ್ಪಡುತ್ತಾನೆ–ಎಂದು ಅರ್ಥವಾಗುತ್ತದೆ.

ಪರಮಾತ್ಮನು ಇದಕ್ಕೆಲ್ಲಾ ಬೀಜ ಎಂದರೆ–ಇದೆಲ್ಲವೂ ಆತನ ಪರಿಣಾಮ–ಎಂದು ಅಪಾರ್ಥಮಾಡಬಾರದು. ಇದನ್ನೆಲ್ಲಾ ಆತನೇ ವ್ಯಕ್ತಪಡಿಸುತ್ತಾನೆ ಎಂದು ಅದಕ್ಕೆ ಅರ್ಥ. **'ವ್ಯಂಜನಾಜ್ಜಗತೋ ವಿಷ್ಣುರ್ಬೀಜಂ ನ ಪರಿಣಾಮತಃ'**

(ವಿಜಯಧ್ವಜೀಯ)

ಸದಾಚಾರವಾಗಲೀ, ಬಗೆಬಗೆಯ ಜ್ಞಾನಗಳಾಗಲೀ, ದಾನವಾಗಲೀ, ತಪಸ್ಸಾಗಲೀ, ಯಜ್ಞವಾಗಲೀ, ಶಾರೀರಕ ಮತ್ತು ಮಾನಸಿಕವಾದ ಶುಚಿತ್ವ ವಾಗಲೀ, ದೊಡ್ಡ ದೊಡ್ಡ ವ್ರತಗಳ ಅನುಷ್ಠಾನವಾಗಲೀ–ಯಾವುದೂ ಸಮರ್ಥವಾಗುವುದಿಲ್ಲ. ಆ ಶ್ರೀಭಗವಂತನು ಪರಿಶುದ್ಧವಾದ ಭಕ್ತಿಯಿಂದ ಮಾತ್ರವೇ ಪ್ರಸನ್ನನಾಗುವನು.* ಉಳಿದುದೆಲ್ಲಾ ಕೇವಲ ವಿಡಂಬನೆಯು, ಆದುದರಿಂದ, ಎಲೈ ದಾನವಮಿತ್ರರೇ! ಬಂಧುಗಳೇ! ಸಮಸ್ತಪ್ರಾಣಿ ಗಳನ್ನೂ ನಿಮ್ಮಂತೆಯೇ ತಿಳಿದು ವರ್ತಿಸಿರಿ. ಸರ್ವಾತ್ಮನಾಗಿ–ಸರ್ವಶಕ್ತಿ ಸಂಪನ್ನನಾಗಿ ಎಲ್ಲೆಲ್ಲಿಯೂ ಬೆಳಗುತ್ತಿರುವ ಆ ಶ್ರೀಭಗವಂತನಲ್ಲಿ ಭಕ್ತಿ ಯನ್ನಿಡಿರಿ. ಶ್ರೀಭಗವಂತನ ಭಕ್ತಿಯ ಪ್ರಭಾವದಿಂದ ದೈತ್ಯರು, ಯಕ್ಷರು, ರಾಕ್ಷಸರು, ಸ್ತ್ರೀಯರು, ಶೂದ್ರರು, ಗೊಲ್ಲರು, ಪಕ್ಷಿಗಳು, ಪಶುಗಳು ಮತ್ತು ಬಹುಮಂದಿ ಪಾಪಿಜೀವರುಗಳೂ ಕೂಡ ಭಗವದ್ಭಾವವನ್ನು ಹೊಂದಿ ಬಿಟ್ಟಿದ್ದಾರೆ.[1]

ಏತಾವಾನೇವ ಲೋಕೇಽಸ್ಮಿನ್ಪುಂಸಃ ಸ್ವಾರ್ಥಃ ಪರಃ ಸ್ಮೃತಃ ।
ಏಕಾನ್ತಭಕ್ತಿರ್ಗೋವಿನ್ದೇ ಯತ್ಸರ್ವತ್ರ ತದೀಕ್ಷಣಮ್[2] ॥೫೫॥

---

* ಭಕ್ತಿಯಿಲ್ಲದಿದ್ದರೆ ಭೂತಗಳಿಗೆ ಜಾತಿವಿಶೇಷ, ವೃತ್ತಾದಿ ವಿಶೇಷಗಳಿಂದ ಯಾವ ಲಾಭವೂ ಇಲ್ಲ. (ವಿಜಯಧ್ವಜೀಯ)

1 'ಆತ್ಮೌಪಮ್ಯೇನ' = ಎಲ್ಲ ಭೂತಗಳೂ ನಿಮ್ಮಂತೆಯೇ ಭಗವಂತನಿಗೆ ಶರೀರ ಭೂತವಾಗಿವೆ–ಎಂದು ಅವುಗಳಲ್ಲಿ ದಯೆಯನ್ನಿಡಿರಿ. (ವೀರರಾಘವೀಯ)

ಆತ್ಮೌಪಮ್ಯೇನ= ಆತ್ಮಸ್ನೇಹದಂತೆ ಅನುಪಾಧಿಕವಾದ ಸ್ನೇಹದಿಂದ. (ವಿಜಯಧ್ವಜೀಯ)

ಮೂಲರೂಪನಾದ ಹರಿಯಲ್ಲಿ ಮಾತ್ರವಲ್ಲದೇ ಆತನ ಅವತಾರರೂಪಗಳಲ್ಲಿಯೂ, ಬ್ರಹ್ಮಾದಿ ಸರ್ವಭೂತಗಳಲ್ಲಿ ಅಂತರ್ಯಾಮಿಯಾಗಿರುವ ಶ್ರೀಹರಿಯಲ್ಲಿಯೂ ಮೂಲ ನಾರಾಯಣನ ಸಾದೃಶ್ಯದಿಂದ ಭಕ್ತಿಯನ್ನಿಡಿ–ಎಂಬುದಾಗಿಯೂ ದ್ವೈತ ವ್ಯಾಖ್ಯಾನವಿದೆ.

2 ಸ್ವಾರ್ಥಃ = ಪುರುಷಾರ್ಥ, ಸರ್ವತ್ರ ತದೀಕ್ಷಣಂ= ಎಲ್ಲದರಲ್ಲಿಯೂ ಆತನನ್ನು ಕಾಣುವುದು. ಎಂದರೆ : ಎಲ್ಲವನ್ನೂ ಭಗವದಾತ್ಮಕವನ್ನಾಗಿ ಭಾವಿಸುವುದು. (ವೀರರಾಘವೀಯ)

ಸರ್ವತ್ರ ತದೀಕ್ಷಣಂ = ಆ ಹರಿಯೇ ಎಲ್ಲಕ್ಕೂ ಸತ್ತೆಯನ್ನು ಕೊಡುವವನೆಂದು ತಿಳಿಯುವುದು. (ವಿಜಯಧ್ವಜೀಯ)

ಈ ಪ್ರಪಂಚದಲ್ಲಿ ಅಥವಾ ಮನುಷ್ಯಶರೀರದಲ್ಲಿ ಜೀವನು ಸಾಧಿಸ ಬೇಕಾದ ಅತಿ ದೊಡ್ಡ ಸ್ವಾರ್ಥ ಮತ್ತು ಪರಮಾರ್ಥಗಳು ಯಾವುವಪ್ಪಾ?– ಎಂದರೆ : ಭಗವಂತನಾದ ಶ್ರೀಹರಿಯಲ್ಲಿ ಅನನ್ಯವಾದ ಭಕ್ತಿಯನ್ನು ಪಡೆಯುವುದು. ಎಲ್ಲೆಡೆಗಳಲ್ಲಿಯೂ ಮತ್ತು ಎಲ್ಲದರಲ್ಲಿಯೂ ಆ ಗೋವಿಂದನನ್ನೇ ಕಾಣುವುದು.''

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಸಪ್ತಮಸ್ಕಂಧದ ೭ನೆಯ ಅಧ್ಯಾಯವು ಮುಗಿಯಿತು.

ಸಪ್ತಮಸ್ಕಂಧ ೮ನೆಯ ಅಧ್ಯಾಯ

ಶ್ರೀನರಸಿಂಹದೇವರ ಅವತಾರ : ಹಿರಣ್ಯಕಶಿಪುವಿನ ವಧೆ : ಬ್ರಹ್ಮಾದಿಗಳಿಂದ ಶ್ರೀಭಗವಂತನ ಸ್ತುತಿ

ಶ್ರೀನಾರದಮಹರ್ಷಿಗಳು ಹೇಳುತ್ತಿದ್ದಾರೆ :

ಅಥ ದೈತ್ಯಸುತಾಃ ಸರ್ವೇ ಶ್ರುತ್ವಾ ತದನುವರ್ಣಿತಮ್ ।
ಜಗೃಹುರ್ನಿರವದ್ಯತ್ವಾನ್ನೈವ ಗುರ್ವನುಶಿಕ್ಷಿತಮ್ ॥೧॥

ಅನಂತರ ದೈತ್ಯಬಾಲಕರೆಲ್ಲರೂ ಪ್ರಹ್ಲಾದಕುಮಾರನ ಪ್ರವಚನವನ್ನು ಕೇಳಿ ಅದನ್ನೇ ಸರಿಯೆಂದು ಗ್ರಹಿಸಿಕೊಂಡರು. ಏಕೆಂದರೆ : ಆ ಪ್ರವಚನವು ಸರ್ವದೋಷರಹಿತವಾಗಿತ್ತು. ಗುರುಗಳಾದ ಶಂಡಾಮರ್ಕರು ಕೊಡುತ್ತಿದ್ದ ಶಿಕ್ಷಣವು ದೋಷಪೂರಿತವಾಗಿದ್ದುದರಿಂದ ಅವರು ಅದನ್ನು ಸ್ವೀಕರಿಸಲಿಲ್ಲ.

ಆ ಎಲ್ಲ ವಿದ್ಯಾರ್ಥಿಗಳ ಬುದ್ಧಿಯೂ ಪರಮಾತ್ಮನಲ್ಲಿ ಅನನ್ಯಭಾವ ದಿಂದ ಸ್ಥಿರವಾಗಿ ಬಿಟ್ಟಿದ್ದನ್ನು ಕಂಡು ಗುರುಗಳಿಗೆ ತುಂಬಾ ಗಾಬರಿ ಯಾಯಿತು. ಅವರು ಒಡನೆಯೇ ಹಿರಣ್ಯಕಶಿಪುವಿನ ಬಳಿಗೆ ಹೋಗಿ ಆ ವಿಷಯವನ್ನು ಅರಿಕೆ ಮಾಡಿದರು. ತನ್ನ ಪುತ್ರನ ಆ ಅಸಹ್ಯವೂ ಅಪ್ರಿಯವೂ ಆಗಿದ್ದ ಅನೀತಿಯನ್ನು ಕಂಡು ದೈತ್ಯರಾಜನ ಶರೀರವು ಕ್ರೋಧದಿಂದ ನಡುಗತೊಡಗಿತು. ಪ್ರಹ್ಲಾದನನ್ನು ಆಗ ತನ್ನ ಕೈಯಿಂದಲೇ ಕೊಂದುಹಾಕ ಬೇಕೆಂದು ಆತನು ನಿಶ್ಚಯಿಸಿದನು. ಜಿತೇಂದ್ರಿಯನಾಗಿದ್ದ ಪ್ರಹ್ಲಾದ ಕುಮಾರನು ಆಗ ವಿನಯದಿಂದ ಕೈಜೋಡಿಸಿಕೊಂಡು ತಂದೆಯ ಮುಂದೆ

ಸುಮ್ಮನೆ ನಿಂತುಕೊಂಡಿದ್ದನು. ಸ್ವಭಾವದಿಂದಲೇ ಕ್ರೂರನಾದ ಹಿರಣ್ಯ ಕಶಿಪುವು ನಿಂದೆ–ತಿರಸ್ಕಾರಗಳಿಗೆ ಯೋಗ್ಯನಲ್ಲದ ಆ ಸಾಧುಶಿರೋಮಣಿ ಯನ್ನು ಕಠೋರವಾಣಿಯಿಂದ ಛಳಿಸಿ, ಏಟು ತಿಂದ ಸರ್ಪದಂತೆ ಬುಸುಗುಟ್ಟ ತೊಡಗಿದನು. ಪಾಪಿಷ್ಠವಾದ ಓರೆನೋಟದಿಂದ ಆತನನ್ನೇ ನೋಡುತ್ತಾ ಹೀಗೆಂದನು : (ಶ್ಲೋಕ 2-5)

"ಎಲ್ಲವೋ ದುಷ್ಟ! ದುರಹಂಕಾರಿ! ಮೂರ್ಖ! ಕುಲಗೆಡುಕನೇ! ಸ್ವತಃ ಕೆಟ್ಟಿರುವುದಲ್ಲದೇ ನಮ್ಮ ಕುಲದ ಬಾಲಕರನ್ನೂ ಕೆಡಿಸಲು ಬಯಸು ತ್ತಿದ್ದೀಯೆ. ನನ್ನ ಆಜ್ಞೆಯನ್ನು ಉಲ್ಲಂಘಿಸುವ ದಿಟ್ಟತನವನ್ನು ತೋರಿದ್ದೀಯೆ. ಇದೋ ನಿನ್ನನ್ನು ಈಗಲೇ ಯಮರಾಜನ ಮನೆಗೆ ಅಟ್ಟುತ್ತೇನೆ. ಎಲವೋ ಪೋರ! ನಾನು ಸ್ವಲ್ಪ ಕೋಪಗೊಂಡರೂ ಮೂರು ಲೋಕಗಳೂ ಮತ್ತು ಲೋಕಪಾಲಕರೂ ಥರ-ಥರನೆ ನಡುಗುತ್ತಾರೆ. ಹೀಗಿರುವಾಗ ನೀನು ಯಾರ ಬಲದ ಮೇಲೆ ಭಯವನ್ನು ಬಿಟ್ಟು ನನ್ನ ಶಾಸನವನ್ನು ಮುರಿದಿದ್ದೀಯೆ? ಹೇಳು."

ಅದಕ್ಕೆ ಪ್ರಹ್ಲಾದನು ಶಾಂತನಾಗಿಯೇ ಉತ್ತರಿಸಿದನು :

"ದೈತ್ಯಚಕ್ರವರ್ತಿಯೇ! ಬ್ರಹ್ಮದೇವರಿಂದ ಹಿಡಿದು ಹುಲ್ಲುಕಡ್ಡಿಯ ವರೆಗಿನ ಚರಾಚರಜೀವಿಗಳೆಲ್ಲವೂ ಶ್ರೀಭಗವಂತನಿಗೆ ಅಧೀನವಾಗಿವೆ. ಆತನೇ ಎಲ್ಲರಿಗೂ ಬಲವು. ನನ್ನ ಮತ್ತು ನಿನ್ನ ಬಲಗಳಿಗೆ ಮಾತ್ರವಲ್ಲದೇ ಇಡೀ ಪ್ರಪಂಚದಲ್ಲಿರುವ ಎಲ್ಲ ಬಲಶಾಲಿಗಳ ಬಲಗಳಿಗೂ ಆತನೇ ಬಲವು. ಎಣೆಯಿಲ್ಲದ ಮಹಾಪರಾಕ್ರಮವುಳ್ಳ ಸರ್ವಶಕ್ತಿಯಾದ ಕಾಲವೂ ಆತನೇ. ಸಮಸ್ತಪ್ರಾಣಿಗಳ ಇಂದ್ರಿಯಬಲ, ಮನೋಬಲ, ದೇಹಬಲ, ಧೈರ್ಯ ಮತ್ತು ಇಂದ್ರಿಯಗಳೂ ಕೂಡ ಆತನೇ ಆಗಿದ್ದಾನೆ. ಆ ಶ್ರೀಭಗವಂತನೇ ತನ್ನ ಶಕ್ತಿಗಳ ಮೂಲಕ ಈ ವಿಶ್ವದ ಸೃಷ್ಟಿ-ಸ್ಥಿತಿ-ಸಂಹಾರಗಳನ್ನು ಮಾಡು ತ್ತಿರುವನು. ತ್ರಿಗುಣಗಳ ಒಡೆಯನೂ ಆತನೇ. ನೀನು ನಿನ್ನ ಅಸುರ ಭಾವವನ್ನು ಬಿಟ್ಟುಬಿಡು. ಎಲ್ಲರ ವಿಷಯದಲ್ಲಿಯೂ ಸಮಾನತೆಯನ್ನು ತೋರಿಸು. ಅವಿಧೇಯವಾಗಿ ಕುಮಾರ್ಗದಲ್ಲಿಯೇ ಸಂಚಾರಮಾಡುವ ಮನಸ್ಸಿಗಿಂತಲೂ ಬೇರೆ ಶತ್ರುವಿಲ್ಲ. ಮನಸ್ಸಿನಲ್ಲಿ ಎಲ್ಲರ ವಿಷಯದಲ್ಲಿಯೂ ಸಮಾನತೆಯ ಭಾವವನ್ನು ತಂದುಕೊಳ್ಳುವುದೇ ಶ್ರೀಭಗವಂತನ ಅತಿದೊಡ್ಡ

ಪೂಜೆಯೆನಿಸುತ್ತದೆ. ತಮ್ಮ ಸರ್ವಸ್ವವನ್ನೂ ಕೊಳ್ಳೆಹೊಡೆಯುತ್ತಿರುವ ಈ ಆರು ಇಂದ್ರಿಯಗಳೆಂಬ ಶತ್ರುಗಳನ್ನು ಮೊದಲು ಗೆಲ್ಲದೇ–'ನಾವು ಹತ್ತು ದಿಕ್ಕುಗಳನ್ನೂ ಗೆದ್ದಿದ್ದೇವೆ'–ಎಂದು ಜಂಭಕೊಚ್ಚಿಕೊಳ್ಳುವವರು ಕಡು ಮೂರ್ಖರು. ಜ್ಞಾನಿಯೂ ಜಿತೇಂದ್ರಿಯನೂ ಆಗಿರುವ ಯಾವ ಮಹಾತ್ಮನು ಸಮಸ್ತಪ್ರಾಣಿಗಳಲ್ಲಿಯೂ ಸಮತೆಯ ಭಾವವನ್ನು ಸ್ಥಿರವಾಗಿ ಹೊಂದಿದ್ದಾನೆಯೋ–ಆತನಿಗೆ ಅಜ್ಞಾನದಿಂದ ಕಾಮ-ಕ್ರೋಧಾದಿ ಶತ್ರುಗಳು ಹುಟ್ಟಿಕೊಂಡರೆ ಅವರೂ ಮಡಿದು ಹೋಗುವರು. ಇನ್ನು ಹೊರಗಿನ ಶತ್ರುಗಳ ವಿಷಯವನ್ನು ಬೇರೆ ಹೇಳಬೇಕೇ? ಅವರು ಇರುವುದಕ್ಕೇ ಸಾಧ್ಯವಿಲ್ಲ."

ಪ್ರಶಾಂತನಾದ ಪ್ರಹ್ಲಾದನ ಆ ಮಾತುಗಳೂ ಹಿರಣ್ಯಕಶಿಪುವಿನಲ್ಲಿ ಕ್ಷೋಭೆಯನ್ನೇ ಹೆಚ್ಚಿಸಿದುವು. ಆತನ ಆ ಸಾಧುಶ್ರೇಷ್ಠನನ್ನು ಛೇಡಿಸುತ್ತಾ ಹೀಗೆಂದನು :

"ಎಲವೋ ಮಂದಬುದ್ಧಿಯೇ! ನೀನು ಸಾಯಲು ಬಯಸುತ್ತಿರುವೆಯೆಂಬುದು ಸ್ಪಷ್ಟ. ಏಕೆಂದರೆ : ಹೀಗೆ ಮಿತಿಮೀರಿ ಬೊಗಳುತ್ತಿದ್ದೀಯೆ. ಸಾಯಲು ಬಯಸುವ ಮನುಷ್ಯರು ವಿಪರೀತವಾಗಿ ಮಾತನಾಡುವರಷ್ಟೇ! 'ಮುಮೂರ್ಷಾಣಾಂ ಹಿ ಮನ್ದಾತ್ಮನ್ ನನು ಸ್ಯುರ್ವಿಪ್ಲವಾ ಗಿರಃ'. ದುರದೃಷ್ಟಶಾಲಿಯಾದ ಪೋರನೇ! ನನಗಿಂತಲೂ ಬೇರೆ ಇನ್ನಾವನೋ ಒಬ್ಬ ಜಗದೀಶ್ವರನುಂಟು–ಎಂದು ನೀನು ಹೇಳಿದೆಯಲ್ಲಾ! ಆ ಜಗದೀಶ್ವರನು ಎಲ್ಲಿದ್ದಾನೆ? ಹೇಳು. ಆತನು ಎಲ್ಲೆಲ್ಲಿಯೂ ಇದ್ದಾನೆಯೋ? ಹಾಗಿದ್ದರೆ ಈ ಕಂಬದಲ್ಲಿ ಆತನು ಏಕೆ ಕಾಣಿಸುತ್ತಿಲ್ಲ? ಹೀಗೆಲ್ಲಾ ಹರಟುತ್ತಿರುವ ನಿನ್ನ ತಲೆಯನ್ನು ಈಗ ನಿನ್ನ ದೇಹದಿಂದ ಬೇರ್ಪಡುವಂತೆ ಕೊಚ್ಚಿಹಾಕುತ್ತೇನೆ. ನಿನಗೆ ಸರ್ವಸ್ವವಾಗಿ, ನಿನ್ನ ಅದ್ಭುತವಾದ ಭರವಸೆಗೆ ಪಾತ್ರನಾಗಿರುವ ಆ ಹರಿಯು ಹೇಗೆ ನಿನ್ನನ್ನು ಕಾಪಾಡುತ್ತಾನೆಯೋ ನೋಡೋಣ."

ಮಹಾಬಲಶಾಲಿಯಾದ ಆ ಮಹಾದೈತ್ಯನು ಮಹಾಭಾಗವತೋತ್ತಮನಾದ ತನ್ನ ಪುತ್ರನನ್ನು ಕೋಪಾವೇಶದಿಂದ ಹೀಗೆಲ್ಲಾ ಕೆಟ್ಟ ಮಾತುಗಳಿಂದ ಥಳಿಸುತ್ತಾ ಕತ್ತಿಯನ್ನು ಎತ್ತಿಕೊಂಡು ಸಿಂಹಾಸನದಿಂದ ಮೇಲಕ್ಕೆ ಜಿಗಿದು ಕಂಬವನ್ನು ಮುಷ್ಟಿಯಿಂದ ಗುದ್ದಿದನು. ಒಡನೆಯೇ ಅಲ್ಲಿ ಇಡೀ ಬ್ರಹ್ಮಾಂಡವನ್ನೇ ಒಡೆದುಹಾಕುತ್ತಿದೆಯೋ ಎಂಬಂತಹ ಅತಿಭೀಕರವಾದ

ಶಬ್ದವು ಕೇಳಿಬಂದಿತು. ಆ ಧ್ವನಿಯು ಲೋಕಪಾಲಕರ ಲೋಕಕ್ಕೂ ತಲುಪಿದಾಗ ಅದನ್ನು ಕೇಳಿ ಬ್ರಹ್ಮಾದಿಗಳು ತಮ್ಮ ಲೋಕಗಳ ಪ್ರಳಯವೇ ಆಗುತ್ತಿದೆ–ಎಂದು ಭಾವಿಸಿದರು. ಪ್ರಹ್ಲಾದನನ್ನು ಕೊಂದುಹಾಕಲೆಂದು ಹಿರಣ್ಯಕಶಿಪುವು ಭರ್ರನೆ ಚಿಮ್ಮಿದನು. ಆದರೆ ದೈತ್ಯಸೇನಾಪತಿಗಳನ್ನೂ ಭಯದಿಂದ ನಡುಗಿಸುತ್ತಿದ್ದ ಆ ಅತ್ಯಂತ ಅಪೂರ್ವವೂ ಭೀಕರತಮವೂ ಆದ ಶಬ್ದವನ್ನು ಕೇಳಿ ಆತನು ಚಕಿತನಾಗಿ–'ಯಾರು ಹೀಗೆ ಗರ್ಜಿಸು ತ್ತಿದ್ದಾರೆ?'–ಎಂಬುದನ್ನು ನೋಡತೊಡಗಿದನು. ಆದರೆ ಆತನಿಗೆ ಸಭೆ ಯೊಳಗೆ ಶಬ್ದಮಾಡುತ್ತಿರುವ ಯಾರೂ ಆ ಕ್ಷಣದಲ್ಲಿ ಕಾಣಿಸಲಿಲ್ಲ.

(ಶ್ಲೋಕ 6-17)

ಸತ್ಯಂ ವಿಧಾತುಂ ನಿಜಭೃತ್ಯಭಾಷಿತಂ
ವ್ಯಾಪ್ತಿಂ ಚ ಭೂತೇಷವಖಿಲೇಷು ಚಾತ್ಮನಃ ।
ಅದೃಶ್ಯತಾತ್ಯದ್ಭುತರೂಪಮುದ್ವಹನ್
ಸ್ತಮ್ಭೇ ಸಭಾಯಾಂ ನ ಮೃಗಂ ನ ಮಾನುಷಮ್ ॥

ಒಡನೆಯೇ ಅಲ್ಲಿ ಸಭೆಯ ಕಂಬದಲ್ಲಿ ಅತ್ಯದ್ಭುತವಾದ ರೂಪದಿಂದ ಪ್ರಕಟಗೊಂಡ ಪರಮಪುರುಷನು–ಕೇವಲ ಮೃಗ ಎನ್ನುವಂತಿಲ್ಲ. ಕೇವಲ ಮನುಷ್ಯನೆಂದೂ ಹೇಳುವಂತಿಲ್ಲ–ಇಂತಹ ಮೃಗ-ಮಾನುಷರೂಪಗಳೆರಡೂ ಕೂಡಿದ ರೂಪದಿಂದ ಕಾಣಿಸಿಕೊಂಡನು. ತನ್ನ ಭೃತ್ಯನಾದ ಪ್ರಹ್ಲಾದ ಕುಮಾರನ ಮತ್ತು ಬ್ರಹ್ಮದೇವರ ಮಾತುಗಳನ್ನು ಸತ್ಯಗೊಳಿಸುವುದ ಕ್ಕೋಸ್ಕರವೂ ಮತ್ತು ತಾನು ಸಮಸ್ತಭೂತಗಳಲ್ಲಿಯೂ ವ್ಯಾಪಿಸಿರುವೆ ನೆಂಬುದನ್ನು ಪ್ರಮಾಣಿಸುವುದಕ್ಕೋಸ್ಕರವೂ ಸ್ವಾಮಿಯು ಹಾಗೆ ಪ್ರಕಟ ವಾದನು.

ಕಂಬದ ಮಧ್ಯದಿಂದ ಹೊರಬಂದ ಆ ಅದ್ಭುತವಾದ ಪ್ರಾಣಿಯನ್ನು ಹಿರಣ್ಯಕಶಿಪುವು ಪುನಃ ಪುನಃ ನೋಡುತ್ತಾ–'ಏನಿದು ವಿಚಿತ್ರವಾದ ಪ್ರಾಣಿ? ಮೃಗವೂ ಅಲ್ಲ. ಮನುಷ್ಯನೂ ಅಲ್ಲ. ನರ ಮತ್ತು ಸಿಂಹ–ಎರಡೂ ರೂಪ ಗಳಿಂದಲೂ ಕೂಡಿರುವ ಈ ಅಚ್ಚರಿಯ ಪ್ರಾಣಿ ಯಾವುದಿರಬಹುದು?' ಎಂದು ಯೋಚಿಸತೊಡಗಿದನು. ಆಗ ಚಿಂತೆಯಿಂದ ನುಂಗಲ್ಪಡುತ್ತಿದ್ದ

ಆತನ ಎದುರಿಗೇ ಪ್ರಭು ಶ್ರೀನರಸಿಂಹಭಗವಂತನು ಬಂದು ನಿಂತನು. ಶ್ರೀಭಗವಂತನ ರೂಪವು ಭಯಂಕರವಾಗಿತ್ತು. ಕೆಂಪಗೆ ಕಾದಿರುವ ಚಿನ್ನದಂತೆ ಹೊಳೆಯುತ್ತಿದ್ದ ಭೀಕರವಾದ ಕಣ್ಣುಗಳು, ಆಕಳಿಸುವಾಗ ಕೆದರಿ ಅಲೆಗಳಂತೆ ಅತ್ತಿತ್ತ ಆಡುತ್ತಿದ್ದ ಕೇಸರಗಳು, ಕರಾಳವಾದ ಕೋರೆದಾಡೆಗಳು, ಕತ್ತಿಯಂತೆ ಝಳಪುತ್ತಾ ಚೂರಿಯ ಅಲುಗಿನಂತೆ ತೀಕ್ಷ್ಣವಾಗಿದ್ದ ನಾಲಿಗೆ, ಓರೆಯಾದ ಹುಬ್ಬುಗಳಿಂದ ಮತ್ತೂ ಭಯಾನಕವಾಗಿದ್ದ ಮುಖ, ನಿಶ್ಚಲವಾಗಿ ಮೇಲಕ್ಕೆ ನಿಮಿರಿನಿಂತ ಕಿವಿಗಳು, ಅರಳಿದ ನಾಲಿಗೆ ಮತ್ತು ಪರ್ವತದ ಗುಹೆಯಂತೆ ಅದ್ಭುತವಾಗಿ ಕಾಣುತ್ತಿದ್ದ ಬಾಯಿ–ಇವುಗಳಿಂದ ಕೂಡಿ ರೌದ್ರತಮವಾಗಿದ್ದ ರೂಪವದು. ಸೀಳಿದ ಕೆನ್ನೆಗಳಿಂದ ಅದರ ಭೀಕರತೆಯು ಮತ್ತೂ ಹೆಚ್ಚಿತ್ತು. ಸ್ವರ್ಗವನ್ನು ಮುಟ್ಟುತ್ತಿದ್ದ ವಿಶಾಲತಮ ವಾದ ದೇಹ, ಉದ್ದವಾಗಿ ಪುಷ್ಟವಾಗಿದ್ದ ಕತ್ತು, ಅಗಲವಾದ ಎದೆ, ತೆಳುವಾದ ನಡು, ಚಂದ್ರಕಿರಣಗಳಂತೆ ಇಡೀ ಶರೀರದ ಮೇಲೆ ಥಳ-ಥಳಿಸುತ್ತಿ ದ್ದಬಿಳಿಯ ಮೈಗೂದಲುಗಳು, ಎಲ್ಲ ಕಡೆಗಳಲ್ಲಿಯೂ ಹರಡಿಕೊಂಡಿದ್ದ ನೂರಾರು ಭುಜಗಳು ಮತ್ತು ಅವುಗಳಲ್ಲಿ ಆಯುಧಗಳಂತೆ ಕಂಗೊಳಿಸುತ್ತಿದ್ದ ಉಗುರು ಗಳು–ಇವುಗಳು ರೂಪವನ್ನು ಮತ್ತೂ ಹೆಚ್ಚು ರೌದ್ರವನ್ನಾಗಿಸಿದ್ದುವು. ಆತನ ಬಳಿಗೆ ಸುಳಿಯುವುದಕ್ಕೂ ಯಾರಿಗೂ ಧೈರ್ಯವು ಬರುತ್ತಿರಲಿಲ್ಲ. ಸುದರ್ಶನಚಕ್ರವೇ ಮುಂತಾದ ತನ್ನ ಶ್ರೇಷ್ಠವಾದ ಆಯುಧಗಳಿಂದಲೂ ಮತ್ತು ವಜ್ರವೇ ಮುಂತಾದ ಇತರ ಶ್ರೇಷ್ಠವಾದ ಆಯುಧಗಳಿಂದಲೂ ಆತನು ಸಮಸ್ತದೈತ್ಯ-ದಾನವರನ್ನೂ ಓಡಿಸಿಬಿಟ್ಟನು. 'ಈತನು ಮಹಾ ಮಾಯಾವಿಯಾಗಿ ನನ್ನನ್ನು ವಧಿಸುವುದಕ್ಕೋಸ್ಕರವೇ ಈ ರೂಪ-ವೇಷ ಗಳಲ್ಲಿ ಬಂದಿರುವ ವಿಷ್ಣುವೇ ಏಕೆ ಆಗಿರಬಾರದು? ಏನಾದರೇನಂತೆ ; ಈತನ ಯಾವ ಆಟವೂ ನನ್ನಲ್ಲಿ ನಡೆಯುವುದಿಲ್ಲ'–ಎಂದು ಹೇಳಿ ಸಿಂಹ ಗರ್ಜನೆಯನ್ನು ಮಾಡುತ್ತಾ ದೈತ್ಯರಾಜನು ಗದಾಹಸ್ತನಾಗಿ ಶ್ರೀನರಸಿಂಹ ದೇವರ ಮೇಲೆ ಎಗರಿಬಿದ್ದನು. ಆದರೇನು? ಬೆಂಕಿಯನ್ನು ಆಕ್ರಮಿಸಲು ಹೋಗಿ ಮಿಡತೆಯು ಅದರಲ್ಲಿ ಬಿದ್ದು ಅದೃಶ್ಯವಾಗಿಬಿಡುವಂತೆ– ಶ್ರೀಭಗವಂತನಾದ ನರಸಿಂಹದೇವನನ್ನು ಮುತ್ತಲು ಹೋದ ಅಸುರನು ಸ್ವಾಮಿಯ ತೇಜಸ್ಸಿನಲ್ಲಿ ಮುಚ್ಚಿಹೋದನು.

(ಶ್ಲೋಕ 18-24)

ಸಮಸ್ತಶಕ್ತಿಗಳಿಗೂ ಮತ್ತು ತೇಜಸ್ಸುಗಳಿಗೂ ಆಶ್ರಯನಾಗಿರುವ ಶ್ರೀಭಗವಂತನ ವಿಷಯದಲ್ಲಿ ಇದು ಆಶ್ಚರ್ಯದ ವಿಷಯವೇನೂ ಅಲ್ಲ. ಏಕೆಂದರೆ : ಸೃಷ್ಟಿಯ ಪ್ರಾರಂಭದಲ್ಲಿ–ತನ್ನ ತೇಜಸ್ಸಿನಿಂದ ಪ್ರಳಯಕ್ಕೆ ಕಾರಣ ವಾದ ತಮೋಗುಣರೂಪವಾದ ಘೋರಾಂಧಕಾರವನ್ನು ನುಂಗಿಹಾಕಿದ ಸರ್ವಶಕ್ತನಲ್ಲವೇ ಆತನು! ಅನಂತರ ಆ ದೈತ್ಯನು ಅತಿಕ್ರೋಧದಿಂದ ದೇವನ ಬಳಿಗೆ ನೆಗೆದು ಗದೆಯನ್ನು ಬಿರುಸಿನಿಂದ ತಿರುಗಿಸಿ ಅದರಿಂದ ಸ್ವಾಮಿಯನ್ನು ಹೊಡೆದನು. ಆದರೆ ಶ್ರೀಭಗವಂತನು, ಆತನು ಏಟು ಹಾಕುತ್ತಿರುವಾಗಲೇ ಗರುಡನು ಸರ್ಪವನ್ನು ಹಿಡಿದುಕೊಳ್ಳುವಂತೆ–ಆತನನ್ನು ಧಿಡೀರನೆ ಹಿಡಿದುಬಿಟ್ಟನು. ಸ್ವಾಮಿಯು ತನ್ನ ಕೈಹಿಡಿತಕ್ಕೆ ಸಿಕ್ಕಿದ ಆತನೊಡನೆ ಆಟ ವಾಡತೊಡಗಿದ್ದಾಗ ದೈತ್ಯರಾಜನು–ಆಟವಾಡುತ್ತಿರುವ ಗರುಡನ ಹಿಡಿತ ದಿಂದ ಹಾವು ತಪ್ಪಿಸಿಕೊಳ್ಳುವಂತೆ–ಆ ಭಗವಂತನ ಕೈಹಿಡಿತದಿಂದ ತನ್ನನ್ನು ಬಿಡಿಸಿಕೊಂಡನು. ಯುಧಿಷ್ಠಿರ! ಆ ಸಮಯದಲ್ಲಿ ಲೋಕಪಾಲಕರೆಲ್ಲರೂ ಮೋಡಗಳ ಒಳಗಡೆಯಲ್ಲಿ ಅವಿತುಕೊಂಡು ಆ ಯುದ್ಧವನ್ನು ನೋಡು ತ್ತಿದ್ದರು. ಅವರ ಸ್ವರ್ಗಲೋಕವನ್ನು ಹಿರಣ್ಯಕಶಿಪುವು ಹಿಂದೆಯೇ ಕಿತ್ತು ಕೊಂಡುಬಿಟ್ಟಿದ್ದನಷ್ಟೇ! ಹಿರಣ್ಯಕಶಿಪುವು ಶ್ರೀಭಗವಂತನ ಹಿಡಿತದಿಂದ ತಪ್ಪಿಸಿಕೊಂಡುಬಿಟ್ಟಿದ್ದನ್ನು ಕಂಡು ದೇವತೆಗಳಿಗೆ ಮತ್ತೂ ಹೆದರಿಕೆ ಯಾಯಿತು. 'ನರಸಿಂಹನು ತನ್ನ ಬಲ-ವೀರ್ಯಗಳಿಗೆ ಹೆದರಿಯೇ ತನ್ನನ್ನು ಕೈಯಿಂದ ಬಿಟ್ಟುಬಿಟ್ಟನು'–ಎಂದು ಹಿರಣ್ಯಕಶಿಪುವೂ ಭಾವಿಸಿದನು. ಹೀಗೆ ವಿಚಾರಮಾಡಿದ್ದರಿಂದ ಆತನಿಗೆ ಧೈರ್ಯವು ಬಂದು ಆಯಾಸ ಪರಿಹಾರವಾಯಿತು. ಆಗ ಆತನು ಯುದ್ಧಕ್ಕಾಗಿ ಕತ್ತಿ-ಗುರಾಣಿಗಳನ್ನು ಎತ್ತಿಕೊಂಡು ಮತ್ತೆ ನರಸಿಂಹದೇವರ ಕಡೆಗೆ ನುಗ್ಗಿದನು. ಆಗ ಆತನು ಗಿಡಗನಂತೆ ಅತಿವೇಗದಿಂದ ಮೇಲಕ್ಕೂ-ಕೆಳಕ್ಕೂ ಕತ್ತಿ-ಗುರಾಣಿಗಳನ್ನು ತಿರುಗಿಸುವ ವರಸೆಯಿಂದ ಶತ್ರುವು ತನ್ನ ಮೇಲೆ ಆಕ್ರಮಣ ಮಾಡುವುದಕ್ಕೆ ಅವಕಾಶವೇ ಸಿಕ್ಕದಂತೆ ಮಾಡುತ್ತಿದ್ದನು. ಆಗ ಶ್ರೀಭಗವಂತನು ಭಯ ವುಂಟಾಗುವಂತೆ ಗಟ್ಟಿಯಾಗಿ ಅಟ್ಟಹಾಸಮಾಡಿ ಆತನ ಕಣ್ಣುಗಳನ್ನು ಮುಚ್ಚಿಸಿದನು. ಮತ್ತೆ ಅತಿರಭಸದಿಂದ ಜಗಿದು–ಸರ್ಪವು ಇಲಿಯನ್ನು ಹಿಡಿಯುವಂತೆ–ಆತನನ್ನು ಹಿಡಿದುಕೊಂಡುಬಿಟ್ಟನು. ಚರ್ಮದ ಮೇಲೆ

ವಜ್ರಾಯುಧದ ಏಟು ಬಿದ್ದಾಗಲೂ ಯಾವನ ಚರ್ಮವು ತರಚಿರಲಿಲ್ಲವೋ ಅದೇ ಹಿರಣ್ಯಕಶಿಪುವು ಆಗ ಶ್ರೀನೃಸಿಂಹನ ಪಂಜದಿಂದ ತನ್ನನ್ನು ಬಿಡಿಸಿಕೊಳ್ಳುವುದಕ್ಕಾಗಿ ಚಡಪಡಿಸತೊಡಗಿದನು. ಶ್ರೀಭಗವಂತನು ಆತನನ್ನು ಸಭೆಯ ದ್ವಾರದ ಬಳಿಗೆ ಎತ್ತಿಕೊಂಡು ಹೋಗಿ ತನ್ನ ತೊಡೆಯ ಮೇಲೆ ಹಾಕಿಕೊಂಡು–ಗರುಡನು ಮಹಾವಿಷಧಾರಿಯಾದ ಸರ್ಪವನ್ನು ಹೇಗೋ ಹಾಗೆ ಲೀಲಾಜಾಲವಾಗಿ ತನ್ನ ಉಗುರುಗಳಿಂದ ಹಿರಣ್ಯಕಶಿಪುವನ್ನು ಸೀಳಿಹಾಕಿಬಿಟ್ಟನು. ಆ ಸಮಯದಲ್ಲಿ ಕ್ರೋಧದಿಂದ ತುಂಬಿದ್ದ ಆತನ ಕರಾಳವಾದ ಕಣ್ಣುಗಳ ಕಡೆ ನೋಡುವುದಕ್ಕೂ ಯಾರಿಗೂ ಆಗುತ್ತಿರಲಿಲ್ಲ. ಆ ಉಗ್ರಮೂರ್ತಿಯು ಚಾಚಿದ ನಾಲಿಗೆಯಿಂದ ತನ್ನ ತೆರೆದಬಾಯಿಯ ಎರಡು ಮೂಲೆಗಳನ್ನೂ ನೆಕ್ಕುತ್ತಿದ್ದನು. ರಕ್ತದ ಕಣಗಳಿಂದ ಆತನ ಬಾಯಿಯೂ ಮತ್ತು ಕತ್ತಿನ ಕೇಸರಗಳೂ ಕೆಂಪಾಗುತ್ತಿದ್ದುವು. ಆನೆಯನ್ನು ಸಂಹರಿಸಿ ಅದರ ಕರುಳಿನ ಮಾಲೆಯನ್ನು ಕುತ್ತಿಗೆಗೆ ಹಾಕಿಕೊಂಡಿರುವ ಸಿಂಹದಂತೆ–ಆ ನರಸಿಂಹನು ರುದ್ರಸೌಂದರ್ಯದಿಂದ ಕಂಗೊಳಿಸುತ್ತಿದ್ದನು. ಶ್ರೀಭಗವಂತನು ತನ್ನ ತೀಕ್ಷ್ಣವಾದ ಉಗುರುಗಳಿಂದ ಹಿರಣ್ಯಕಶಿಪುವಿನ ಹೃದಯವನ್ನು ಕಿತ್ತು ನೆಲಕ್ಕೆ ಕುಕ್ಕಿದನು. ಆಗ ಹಿರಣ್ಯಕಶಿಪುವಿನ ಅನುಯಾಯಿಗಳಾದ ಸಾವಿರಾರು ಮಂದಿ ದೈತ್ಯ-ದಾನವರು ಕೈಗಳಲ್ಲಿ ಶಸ್ತ್ರಗಳನ್ನು ಎತ್ತಿಕೊಂಡು ಆತನನ್ನು ಹೊಡೆಯಲು ಬಂದರು. ಆದರೆ ಶ್ರೀಭಗವಂತನು ತನ್ನ ಭುಜಗಳೆಂಬ ಸೈನ್ಯದಿಂದಲೂ, ಉಗುರುಗಳೆಂಬ ಶಸ್ತ್ರಗಳಿಂದಲೂ ನಾಲ್ಕು ಕಡೆಗಳಲ್ಲೂ ಅವರನ್ನು ಮಡುಹಿಹಾಕಿದನು. (ಶ್ಲೋಕ 25-31)

ಯುಧಿಷ್ಠಿರ! ಆಗ ನೃಸಿಂಹಸ್ವಾಮಿಯ ಕೇಸರಗಳ ಅಪ್ಪಳಿಕೆಯ ಏಟುಗಳಿಂದ ಮೋಡಗಳು ಚದುರಿಹೋದವು. ಆತನ ಕಣ್ಣುಗಳ ಜ್ವಾಲೆಗಳಿಂದ ಗ್ರಹ-ನಕ್ಷತ್ರಗಳ ತೇಜಸ್ಸು ಕುಂದಿ ಕಸಿಯಲ್ಪಟ್ಟಿತು. ಆತನ ಉಸಿರಾಟದ ಹೊಡೆತಗಳಿಂದ ಸಮುದ್ರಗಳು ಕ್ಷೋಭೆಹೊಂದಿದುವು. ಆತನ ಸಿಂಹನಾದಕ್ಕೆ ಹೆದರಿ ದಿಗ್ಗಜಗಳು ಅರಚಿಕೊಳ್ಳತೊಡಗಿದುವು. ಆತನ ಕೇಸರಗಳ ಹೊಡೆತಗಳಿಂದ ದೇವತೆಗಳ ವಿಮಾನಗಳು ಚೆಲ್ಲಾಪಿಲ್ಲಿಯಾದುವು. ಸ್ವರ್ಗವು ಥರ-ಥರನೆ ನಡುಗಿತು. ಆತನ ಕಾಲುಗಳ ಬಲವಾದ ಘಟ್ಟನೆಗಳಿಂದ

ಭೂಮಿಯು ನಡುಗಿತು. ವೇಗದಿಂದ ಪರ್ವತಗಳು ಹಾರತೊಡಗಿದವು ಮತ್ತು ಆತನ ತೇಜಸ್ಸಿನ ಮಿಂಚಿನಿಂದ ಆಕಾಶವೂ ದಿಕ್ಕುಗಳೂ ಕಾಂತಿಗುಂದಿ ಕತ್ತಲೆ ತುಂಬಿ ಕಾಣಿಸದೇ ಹೋದುವು. ಸ್ವಾಮಿಯು ಸಭೆಯಲ್ಲಿ ಎತ್ತರವಾಗಿದ್ದ ರಾಜಸಿಂಹಾಸನದ ಮೇಲೆ ಹೋಗಿ ಕುಳಿತನು. ಆತನನ್ನು ಪ್ರತಿಭಟಿಸಲು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ಆತನ ಕ್ರೋಧವು ಹೆಚ್ಚುತ್ತಲೇ ಇತ್ತು. ತೇಜಸ್ಸಿನಿಂದ ಉದ್ದೀಪ್ತವಾಗಿ ಕೋಪದಿಂದ ತುಂಬಿದ್ದ ಆತನ ಭಯಂಕರವಾದ ಮುಖಮುದ್ರೆಯನ್ನು ಕಂಡು ಯಾರಿಗೂ ಆತನ ಬಳಿಗೆ ಹೋಗಿ ಸೇವೆಮಾಡುವ ಧೈರ್ಯಬರಲಿಲ್ಲ. (ಶ್ಲೋಕ 32-34)

ವತ್ಸ ಧರ್ಮರಾಜ! ಮೂರು ಲೋಕಗಳಿಗೂ ತಲೆನೋವಾಗಿದ್ದ ಆ ಆದಿದೈತ್ಯನು ಯುದ್ಧದಲ್ಲಿ ಶ್ರೀಭಗವಂತನಿಂದ ಸಂಹರಿಸಲ್ಪಟ್ಟನೆಂಬ ಸಮಾಚಾರವು ತಿಳಿದೊಡನೆಯೇ ಪರಮಾನಂದದಿಂದ ದೇವಸ್ತ್ರೀಯರ ಮುಖಗಳು ಅರಳಿದುವು. ಅವರು ಮತ್ತೆ ಮತ್ತೆ ಶ್ರೀಭಗವಂತನ ಮೇಲೆ ಹೂಮಳೆಯನ್ನು ಕರೆದರು. ದೇವದೇವನ ದರ್ಶನಕ್ಕಾಗಿ ವಿಮಾನಗಳಿಂದ ಬಂದ ದೇವತೆಗಳ ಸಮೂಹಗಳಿಂದ ಆಕಾಶವು ತುಂಬಿಹೋಯಿತು. ದೇವದುಂದುಭಿಗಳು ಮೊಳಗಿದುವು. ಗಂಧರ್ವರು ಗಾನಮಾಡತೊಡಗಿದರು. ಅಪ್ಸರೆಯರು-ನರ್ತನಮಾಡತೊಡಗಿದರು. ಅದೇ ಸಮಯಕ್ಕೆ ಬ್ರಹ್ಮದೇವರೂ, ಸ್ವಾಮೀ ಶಂಕರನೂ, ಇಂದ್ರನೇ ಮುಂತಾದ ದೇವತೆಗಳೂ, ಋಷಿಗಳೂ, ಪಿತೃಗಳೂ, ಸಿದ್ಧರೂ, ವಿಧ್ಯಾಧರರೂ, ಮಹಾನಾಗರೂ, ಮನುಗಳೂ, ಪ್ರಜಾಪತಿಗಳೂ, ಗಂಧರ್ವರೂ, ಅಪ್ಸರೆಯರೂ, ಚಾರಣರೂ, ಯಕ್ಷರೂ, ಕಿಂಪುರುಷರೂ, ವೇತಾಳರೂ, ಸಿದ್ಧರೂ, ಕಿನ್ನರರೂ, ಸುನಂದ-ಕುಮುದರೇ ಮುಂತಾದ ಶ್ರೀಭಗವಂತನ ಪಾರ್ಷದರೂ ಅಲ್ಲಿಗೆ ಬಂದರು. ಅವರೆಲ್ಲರೂ ತಲೆಯ ಮೇಲೆ ಕೈಗಳನ್ನು ಜೋಡಿಸಿಕೊಂಡು ಸಿಂಹಾಸನದ ಮೇಲೆ ಬೆಳಗುತ್ತಿದ್ದ ಮಹಾತೇಜೋಮೂರ್ತಿಯಾದ ಶ್ರೀನರಸಿಂಹದೇವರಿಗೆ ಸ್ವಲ್ಪ ದೂರದಲ್ಲಿಯೇ ನಿಂತುಕೊಂಡು ಬೇರೆ-ಬೇರೆಯಾಗಿ ಆತನನ್ನು ಸ್ತುತಿಸತೊಡಗಿದರು. (ಶ್ಲೋಕ 35-39)

ಬ್ರಹ್ಮದೇವರು ಮಾಡಿದ ಶ್ರೀನೃಸಿಂಹಸ್ತುತಿ :

ನತೋಽಸ್ಮ್ಯನನ್ತಾಯ ದುರನ್ತಶಕ್ತಯೇ
ವಿಚಿತ್ರವೀರ್ಯಾಯ ಪವಿತ್ರಕರ್ಮಣೇ ।

ವಿಶ್ವಸ್ಯ ಸರ್ಗಸ್ಥಿತಿಸಂಯಮಾನ್ಗುಣೈಃ
ಸ್ವಲೀಲಯಾ ಸಂದಧತೇಽವ್ಯಯಾತ್ಮನೇ ॥೪೦॥

"ಯಾವನ ಶಕ್ತಿಯ ಪಾರವನ್ನು ಕಾಣಲು ಸಾಧ್ಯವಿಲ್ಲವೋ–ಅಂತಹ ಅನಂತನಾದ ದೇವನಿಗೆ ನಮಸ್ಕಾರವು. ವಿಚಿತ್ರವಾದ ವೀರ್ಯವುಳ್ಳವನೂ, ಪವಿತ್ರವಾದ ಕರ್ಮವುಳ್ಳವನೂ, ವಿಶ್ವದ ಸೃಷ್ಟಿ-ಸ್ಥಿತಿ-ಸಂಹಾರಗಳನ್ನು ತ್ರಿಗುಣಗಳ ಮೂಲಕ ಲೀಲಾಜಾಲವಾಗಿ ಮಾಡುತ್ತಿದ್ದರೂ ಅವುಗಳ ಅಂಟಿಲ್ಲದೇ ನಿರ್ವಿಕಾರನಾಗಿರುವ ಅವ್ಯಯಾತ್ಮನೂ ಆದ ಅಚ್ಯುತನಿಗೆ ನಮಸ್ಕಾರವು."

ಶ್ರೀರುದ್ರದೇವರು ಮಾಡಿದ ಶ್ರೀನೃಸಿಂಹಸ್ತುತಿ :

ಕೋಪಕಾಲೋ ಯುಗಾನ್ತಸ್ತೇ ಹತೋಽಯಮಸುರೋಽಲ್ಪಕಃ ।
ತತ್ಸುತಂ ಪಾಹ್ಯುಪಸೃತಂ ಭಕ್ತಂ ತೇ ಭಕ್ತವತ್ಸಲ ॥೪೧॥

"ಪ್ರಭೋ! ನಿನ್ನ ಕೋಪವನ್ನು ಉಪಸಂಹಾರಮಾಡಿಕೋ. ನೀನು ಕ್ರೋಧವನ್ನು ಪ್ರಕಟಿಸುವ ಕಾಲ ಮಹಾಪ್ರಳಯವಲ್ಲವೇ? ಆದರೂ ಈ ತುಚ್ಛನಾದ ದೈತ್ಯನ ಮೇಲೆ ಕ್ರೋಧವನ್ನು ತೋರಿದೆ. ಆತನನ್ನು ಸಂಹಾರಮಾಡಿಯಾಯಿತು. ಇನ್ನು ಶಾಂತನಾಗು. ಶರಣಾಗತನಾಗಿರುವ, ಭಕ್ತೋತ್ತಮನಾದ, ಈತನ ಪುತ್ರ ಪ್ರಹ್ಲಾದನು ನಿನ್ನ ಬಳಿ ಬಂದಿದ್ದಾನೆ. ಈತನನ್ನು ಕಾಪಾಡು, ಭಕ್ತವತ್ಸಲನೇ!"

ಇಂದ್ರನು ಮಾಡಿದ ಶ್ರೀನೃಸಿಂಹಸ್ತುತಿ :

ಪ್ರತ್ಯಾನೀತಾಃ ಪರಮ ಭವತಾ ತ್ರಾಯತಾ ನಃ ಸ್ವಭಾಗಾ
ದೈತ್ಯಾಕ್ರಾನ್ತಂ ಹೃದಯಕಮಲಂ ತ್ವದ್ಗೃಹಂ ಪ್ರತ್ಯಬೋಧಿ ।

ಕಾಲಗ್ರಸ್ತಂ ಕಿಯದಿದಮಹೋ ನಾಥ ಶುಶ್ರೂಷತಾಂ ತೇ ।
ಮುಕ್ತಿಸ್ತೇಷಾಂ ನ ಹಿ ಬಹುಮತಾ ನಾರಸಿಂಹಾಪರೈಃ ಕಿಮ್ ॥೪೨॥

"ಓ ನಾರಸಿಂಹಪ್ರಭೋ! ನಮ್ಮನ್ನು ಕಾಪಾಡಿದೆ. ದೈತ್ಯನು ಅಪಹರಿಸಿದ್ದ ನಮ್ಮ ಯಜ್ಞಭಾಗಗಳೆಲ್ಲವೂ ನಮಗೆ ಹಿಂದಿರುಗುವಂತೆ ಮಾಡಿದೆ. ಆದರೆ ವಾಸ್ತವವಾಗಿ ಆ ಯಜ್ಞಭಾಗಗಳೆಲ್ಲವೂ ಅಂತರ್ಯಾಮಿಯಾಗಿರುವ

ನಿನಗೇ ಸೇರಿದುವುಗಳು. ದೈತ್ಯರ ಆತಂಕದಿಂದ ಮುಚ್ಚಿಹೋಗಿದ್ದ ನಮ್ಮ ಹೃದಯಕಮಲಗಳು ಅರಳುವಂತೆ ಮಾಡಿದೆ. ಆ ಹೃದಯಗಳೂ ನಿನ್ನ ನಿವಾಸಸ್ಥಾನಗಳೇ ಆಗಿವೆ. ನಮಗೆ ಮತ್ತೆ ದೊರಕಿರುವ ಆ ಸ್ವರ್ಗವೇ ಮುಂತಾದ ರಾಜ್ಯಗಳೆಲ್ಲವೂ ಒಂದಲ್ಲ ಒಂದು ದಿನ ಕಾಲಕ್ಕೆ ತುತ್ತಾಗಿಯೇ ಆಗುವುವು. ನಿನ್ನ ಸೇವೆಮಾಡುವ ಭಕ್ತರ ದೃಷ್ಟಿಯಲ್ಲಿ ಇವುಗಳಿಗೆ ಏನು ತಾನೇ ಬೆಲೆಯಿದ್ದೀತು? ನಿನ್ನ ಸೇವೆಯನ್ನು ಬಯಸುವ ಭಕ್ತರು ಮುಕ್ತಿಯನ್ನು ಕೂಡ ಗೌರವಿಸುವುದಿಲ್ಲ. ಇನ್ನು ಉಳಿದ ಭೋಗಗಳ ಅವಶ್ಯಕತೆಯಾದರೂ ಅವರಿಗೆ ಏನಿದ್ದೀತು?"

ಋಷಿಗಳು ಮಾಡಿದ ಶ್ರೀನೃಸಿಂಹಸ್ತುತಿ :

ತ್ವಂ ನಸ್ತಪಃ ಪರಮಮಾತ್ಥ ಯದಾತ್ಮತೇಜೋ
ಯೇನೇದಮಾದಿಪುರುಷಾತ್ಮಗತಂ ಸಸರ್ಜ ।
ತದ್ವಿಪ್ರಲುಪ್ತಮಮುನಾದ್ಯ ಶರಣ್ಯಪಾಲ
ರಕ್ಷಾಗೃಹೀತವಪುಷಾ ಪುನರನ್ವಮಂಸ್ಥಾಃ ॥೪೩॥

"ಓ ಶರಣಾಗತವತ್ಸಲನೇ! ಪುರುಷೋತ್ತಮನೇ! ನಿನ್ನಲ್ಲಿ ಲೀನವಾಗಿದ್ದ ಜಗತ್ತನ್ನು ನೀನು (ಸಂಕಲ್ಪರೂಪವಾದ) ತಪಸ್ಸಿನಿಂದಲೇ ಮತ್ತೆ ಸೃಷ್ಟಿಮಾಡಿ, ಕರುಣೆಯಿಂದ ಅದೇ ಆತ್ಮತೇಜೋರೂಪವಾದ ಶ್ರೇಷ್ಠವಾದ ತಪಸ್ಸನ್ನು ನಮಗೂ ಉಪದೇಶಮಾಡಿದೆ. ಈ ದೈತ್ಯನು ಆ ನಮ್ಮ ತಪಸ್ಸನ್ನು ಲೋಪಗೊಳಿಸಿಬಿಟ್ಟಿದ್ದನು. ಆ ತಪಸ್ಸಿನ ರಕ್ಷಣೆಗೋಸ್ಕರ ಮತ್ತೆ ಅವತಾರ ಮಾಡಿ ನೀನು ಮತ್ತೆ ಆ ತಪಸ್ಸಿನ ಉಪದೇಶವನ್ನೇ ನಮಗಾಗಿ ಅನು ಮೋದನೆ ಮಾಡಿದ್ದೀಯೆ."

ಪಿತೃದೇವತೆಗಳು ಮಾಡಿದ ಶ್ರೀನೃಸಿಂಹಸ್ತುತಿ :

ಶ್ರಾದ್ಧಾನಿ ನೋಽಧಿಬುಭುಜೇ ಪ್ರಸಭಂ ತನೂಜೈ-
ರ್ದತ್ತಾನಿ ತೀರ್ಥಸಮಯೇಽಪ್ಯಪಿಬತ್ತಿಲಾಮ್ಬು ।
ತಸ್ಯೋದರಾನ್ನಖವಿದೀರ್ಣವಪಾದ್ಯ ಆರ್ಚ್ಛ-
ತ್ತಸ್ಮೈ ನಮೋ ನೃಹರಯೇಽಖಿಲಧರ್ಮಗೋಪ್ತ್ರೇ ॥

"ಪ್ರಭೋ! ನೃಸಿಂಹದೇವ! ನಮ್ಮ ಪುತ್ರರು ನಮಗಾಗಿ ಪಿಂಡ

ಪ್ರದಾನಮಾಡಿದಾಗ ಈ ದುಷ್ಟದೈತ್ಯನು ಅವುಗಳನ್ನು ಬಲವಂತದಿಂದ ಕಿತ್ತುಕೊಂಡುಬಿಡುತ್ತಿದ್ದನು. ಅವರು ಪವಿತ್ರವಾದ ತೀರ್ಥಗಳಲ್ಲಿ ಪುಣ್ಯ ತಿಥಿಗಳಲ್ಲಿ ತರ್ಪಣವನ್ನೂ ತಿಲಾಂಜಲಿಯನ್ನೂ ಕೊಡುತ್ತಿದ್ದರೆ ಅವನ್ನೂ ಈತನು ಕಸಿದುಕೊಂಡು ಕುಡಿದುಬಿಡುತ್ತಿದ್ದನು. ಈಗ ನೀನು ನಿನ್ನ ಉಗುರುಗಳಿಂದ ಈತನ ಹೊಟ್ಟೆಯನ್ನು ಸೀಳಿಹಾಕಿ ಅವೆಲ್ಲವನ್ನೂ ಮತ್ತೆ ನಮಗೆ ಹಿಂದಿರುಗಿಸಿದಂತೆ ಆಯಿತು. ಸಕಲಧರ್ಮಗಳಿಗೂ ಏಕಮಾತ್ರ ಸಂರಕ್ಷಕನು ನೀನು. ಇಂತಹ ನಿನಗೆ ನಮೋ ನಮಃ."

ಸಿದ್ಧರು ಮಾಡಿದ ಶ್ರೀನರಸಿಂಹಸ್ತುತಿ :

ಯೋ ನೋ ಗತಿಂ ಯೋಗಸಿದ್ಧಾಮಸಾಧು-
ರಹಾರ್ಷೀದ್ಯೋಗತಪೋಬಲೇನ ।
ನಾನಾದರ್ಪಂ ತಂ ನಖೈರ್ನಿರ್ದದಾರ
ತಸ್ಮೈ ತುಭ್ಯಂ ಪ್ರಣತಾಃ ಸ್ಮೋ ನೃಸಿಂಹ ॥೪೫॥

"ಓ ನೃಸಿಂಹಸ್ವಾಮಿಯೇ! ಈ ದುಷ್ಟನು ತನ್ನ ಯೋಗ ಮತ್ತು ತಪಸ್ಸುಗಳ ಬಲದಿಂದ ನಮ್ಮ ಯೋಗಸಿದ್ಧಿಗಳನ್ನು ಕಿತ್ತುಕೊಂಡುಬಿಟ್ಟದ್ದನು. ನೀನು ನಿನ್ನ ನಖಗಳಿಂದ ಈ ದುರಹಂಕಾರಿಯನ್ನು ಸೀಳಿಹಾಕಿದೆ. ಹೀಗೆ ದುಷ್ಟದುರಹಂಕಾರಿಯನ್ನು ಸಂಹರಿಸಿ ನಮ್ಮನ್ನು ಕಾಪಾಡಿದ ನಿನ್ನ ಶ್ರೀಚರಣಗಳಿಗೆ ನಮೋ ನಮಃ."

ವಿದ್ಯಾಧರರು ಮಾಡಿದ ಶ್ರೀನರಸಿಂಹಸ್ತುತಿ :

ವಿದ್ಯಾಂ ಪೃಥಗ್ಧಾರಣಯಾನುರಾದ್ಧಾಂ
ನ್ಯಷೇಧದಜ್ಞೋ ಬಲವೀರ್ಯದೃಪ್ತಃ ।
ಸ ಯೇನ ಸಂಖ್ಯೇ ಪಶುವದ್ಧತಸ್ತಂ
ಮಾಯಾನೃಸಿಂಹಂ ಪ್ರಣತಾಃ ಸ್ಮ ನಿತ್ಯಮ್ ॥೪೬॥

"ತನ್ನ ಬಲ-ಪರಾಕ್ರಮಗಳ ಅಹಂಕಾರದಿಂದ ಮತ್ತೇರಿದ್ದ ಈ ಮೂರ್ಖನು ನಾವು ಬಗೆ-ಬಗೆಯ ಧಾರಣೆಗಳಿಂದ ಸಂಪಾದಿಸಿದ್ದ ವಿದ್ಯೆಗಳನ್ನು ವ್ಯರ್ಥಗೊಳಿಸಿಬಿಟ್ಟಿದ್ದನು. ನೀನು ಯುದ್ಧದಲ್ಲಿ ಈತನನ್ನು ಯಜ್ಞಪಶು

ವನ್ನು ಹೇಗೋ ಹಾಗೆ ಲೀಲಾಜಾಲವಾಗಿ ಬಲಿಹಾಕಿದೆ. ಇಂತಹ ಲೀಲಾ ನೃಸಿಂಹಾವತಾರಿಯಾದ ನಿನಗೆ ನಮೋ ನಮಃ."

ನಾಗರು ಮಾಡಿದ ಶ್ರೀನೃಸಿಂಹಸ್ತುತಿ :

ಯೇನ ಪಾಪೇನ ರತ್ನಾನಿ ಸ್ತ್ರೀರತ್ನಾನಿ ಹೃತಾನಿ ನಃ ।
ತದ್ವಕ್ಷಃಪಾಟನೇನಾಸಾಂ ದತ್ತಾನನ್ದ ನಮೋಽಸ್ತುತೇ ॥೪೭॥

"ಈ ಪಾಪಿಷ್ಠನು ನಮ್ಮ ಶ್ರೇಷ್ಠವಾದ ರತ್ನಗಳನ್ನೂ ಮತ್ತು ಸ್ತ್ರೀರತ್ನಗಳನ್ನೂ ಕಿತ್ತುಕೊಂಡುಬಿಟ್ಟಿದ್ದನು. ಇಂತಹ ಈತನ ಹೃದಯವನ್ನು ಸೀಳಿಹಾಕಿ ನೀನು ನಮ್ಮ ಸ್ತ್ರೀಯರಿಗೆ ಪರಮಾನಂದವನ್ನು ಉಂಟು ಮಾಡಿರುವೆ. ದುಷ್ಟಶಿಕ್ಷಕನೂ ಭಕ್ತರಿಗೆ ಆನಂದವನ್ನುಂಟುಮಾಡುವವನೂ ಆಗಿರುವ ನಿನಗೆ ನಮೋ ನಮಃ."

ಮನುಗಳು ಮಾಡಿದ ಶ್ರೀನೃಸಿಂಹಸ್ತುತಿ :

ಮನವೋ ವಯಂ ತವ ನಿರ್ದೇಶಕಾರಿಣೋ
ದಿತಿಜೇನ ದೇವ ಪರಿಭೂತಸೇತವಃ ।
ಭವತಾ ಖಲಃ ಸ ಉಪಸಂಹೃತಃ ಪ್ರಭೋ
ಕರವಾಮ ತೇ ಕಿಮನುಶಾಧಿ ಕಿಙ್ಕರಾನ್ ॥೪೮॥

"ಓ ದೇವಾಧಿದೇವನೇ! ನಾವು ನಿನ್ನ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸುವ ಮನುಗಳು. ಈ ದೈತ್ಯನು ನಮ್ಮ ಧರ್ಮಮರ್ಯಾದೆಯನ್ನು ಭಂಗಗೊಳಿಸಿಬಿಟ್ಟಿದ್ದನು. ಇಂತಹ ದುಷ್ಟನನ್ನು ಸಂಹರಿಸಿ ನಮಗೆ ಪರಮೋಪಕಾರಮಾಡಿದೆ. ಪ್ರಭುವೇ! ನಾವು ನಿನ್ನ ಸೇವಕರು. ನಿನಗೆ ಏನು ಸೇವೆಮಾಡೋಣ? ಅಪ್ಪಣೆಕೊಡಿಸು."

ಪ್ರಜಾಪತಿಗಳು ಮಾಡಿದ ಶ್ರೀನೃಸಿಂಹಸ್ತುತಿ :

ಪ್ರಜೇಶಾ ವಯಂ ತೇ ಪರೇಶಾಭಿಸೃಷ್ಟಾ
ನ ಯೇನ ಪ್ರಜಾ ವೈ ಸೃಜಾಮೋ ನಿಷಿದ್ಧಾಃ ।
ಸ ಏಷ ತ್ವಯಾ ಭಿನ್ನವಕ್ಷಾ ನು ಶೇತೇ
ಜಗನ್ಮಙ್ಗಲಂ ಸತ್ತ್ವಮೂರ್ತೇಽವತಾರಃ ॥೪೯॥

"ಪರಮೇಶ್ವರ! ನೀನು ನಮಗೆ ಪ್ರಜಾಪತಿಗಳ ಪಟ್ಟವನ್ನು ಕೊಟ್ಟಿದ್ದೀಯೆ. ಆದರೆ ನಮ್ಮ ಕಾರ್ಯವನ್ನು ಈತನು ತಡೆಗಟ್ಟಿಬಿಟ್ಟಿದ್ದನು. ಆದ್ದರಿಂದ ನಮಗೆ ನಮ್ಮ ಕರ್ತವ್ಯವಾದ ಪ್ರಜಾಸೃಷ್ಟಿಯನ್ನು ಮಾಡಲಾಗುತ್ತಿರಲಿಲ್ಲ. ನೀನು ಈತನ ಎದೆಯನ್ನು ಸೀಳಿಹಾಕಿ ಎಂದೆಂದಿಗೂ ನೆಲದ ಮೇಲೆ ಮಲಗಿರುವಂತೆ ಮಾಡಿದೆ. ಜಗತ್ತಿನ ಮಂಗಳಕ್ಕೋಸ್ಕರವೇ ಸತ್ತ್ವಮೂರ್ತಿಯಾದ ನೀನು ಈ ಅವತಾರವನ್ನು ಮಾಡಿರುವೆ."

ಗಂಧರ್ವರು ಮಾಡಿದ ಶ್ರೀನಾರಸಿಂಹಸ್ತುತಿ :

ವಯಂ ವಿಭೋ ತೇ ನಟನಾಟ್ಯಗಾಯಕಾ
ಯೇನಾತ್ಮಸಾದ್ವೀರ್ಯಬಲೌಜಸಾ ಕೃತಾಃ ।
ಸ ಏಷ ನೀತೋ ಭವತಾ ದಶಾಮಿಮಾಂ
ಕಿಮುತ್ಪಥಸ್ಥಃ ಕುಶಲಾಯ ಕಲ್ಪತೇ ॥೫೦॥

"ಪ್ರಭೋ! ನಾವು ನಿನಗೆ ಸೇರಿದ ಸಂಗೀತಗಾರರು. ನಿನಗಾಗಿ ನೃತ್ಯ-ಗೀತ-ವಾದ್ಯಗಳನ್ನು ಬಳಸುವವರು. ಈ ದೈತ್ಯನು ತನ್ನ ಬಲ-ವೀರ್ಯ-ಪರಾಕ್ರಮಗಳಿಂದ ನಮ್ಮನ್ನು ತನ್ನ ಗುಲಾಮರನ್ನಾಗಿ ಮಾಡಿಕೊಂಡು ಬಿಟ್ಟಿದ್ದನು. ಈ ದುಷ್ಟನಿಗೆ ನೀನು ಇಂತಹ ಸ್ಥಿತಿಯನ್ನುಂಟುಮಾಡಿ ತಕ್ಕ ಶಾಸ್ತಿಯನ್ನು ಮಾಡಿದೆ. ಕುಮಾರ್ಗದಲ್ಲಿ ನಡೆಯುವವನಿಗೆ ಎಂದಿಗೂ ಕಲ್ಯಾಣವುಂಟಾಗುವುದಿಲ್ಲ–ಎಂಬುದು ನಿಜವಷ್ಟೇ!"

ಚಾರಣರು ಮಾಡಿದ ಶ್ರೀನೃಸಿಂಹಸ್ತುತಿ :

ಹರೇ ತವಾಙ್ಘ್ರಿಪಙ್ಕಜಂ ಭವಾಪವರ್ಗಮಾಶ್ರಿತಾಃ ।
ಯದೇಷ ಸಾಧುಹೃಚ್ಛಯಸ್ತ್ವಯಾಸುರಃ ಸಮಾಪಿತಃ ॥೫೧॥

"ಪ್ರಭೋ! ನೀನು ಸಜ್ಜನರಿಗೆ ಹೃದಯಶೂಲೆಯಾಗಿದ್ದ ಈ ದುಷ್ಟನ ಕಥೆಯನ್ನು ಮುಗಿಸಿಬಿಟ್ಟೆ. ಆದುದರಿಂದ ನಾವು ಹುಟ್ಟು-ಸಾವುಗಳ ರೂಪವಾದ ಸಂಸಾರಚಕ್ರದ ದೆಸೆಯಿಂದ ಬಿಡುಗಡೆಯನ್ನುಂಟುಮಾಡುವ ನಿನ್ನ ಚರಣಾರವಿಂದಗಳನ್ನು ಶರಣುಹೊಂದುತ್ತೇವೆ."

ಯಕ್ಷರು ಮಾಡಿದ ಶ್ರೀನೃಸಿಂಹಸ್ತುತಿ :

ವಯಮನುಚರಮುಖ್ಯಾಃ ಕರ್ಮಭಿಸ್ತೇ ಮನೋಜ್ಞೈ-
ಸ್ತ ಇಹ ದಿತಿಸುತೇನ ಪ್ರಾಪಿತಾ ವಾಹಕತ್ವಮ್ ।
ಸ ತು ಜನಪರಿತಾಪಂ ತತ್ಕೃತಂ ಜಾನತಾ ತೇ
ನರಹರ ಉಪನೀತಃ ಪಞ್ಚತಾಂ ಪಞ್ಚವಿಂಶ ॥೫೩॥

“ನಾವು ನಮ್ಮ ಮನೋಹರವಾದ ಶ್ರೇಷ್ಠಕರ್ಮಗಳಿಂದ ನಿನ್ನ ಸೇವಕರಲ್ಲಿ ಮುಖ್ಯರೆಂದು ಪರಿಗಣಿಸಲ್ಪಟ್ಟಿದ್ದೆವು. ಆದರೆ ನೀಚನಾದ ಈ ಹಿರಣ್ಯಕಶಿಪುವು ನಮ್ಮನ್ನು ತನ್ನ ಪಲ್ಲಕ್ಕಿಯನ್ನು ಒಯ್ಯುವ ಬೋಯಿಗಳನ್ನಾಗಿ ಮಾಡಿಬಿಟ್ಟಿದ್ದನು. ಇದರಿಂದ ನಿನ್ನವರಾದ ನಮಗೆ ಉಂಟಾಗಿದ್ದ ಕಷ್ಟಗಳನ್ನು ತಿಳಿದೇ ನೀನು ಈ ದುಷ್ಟನನ್ನು ಸಂಹಾರಮಾಡಿ ಮುಗಿಸಿದೆ.”

ಕಿಂಪುರುಷರು ಮಾಡಿದ ಶ್ರೀನೃಸಿಂಹಸ್ತುತಿ :

ವಯಂ ಕಿಮ್ಪುರುಷಾಸ್ತ್ವಂ ತು ಮಹಾಪುರುಷ ಈಶ್ವರಃ ।
ಅಯಂ ಕುಪುರುಷೋ ನಷ್ಟೋ ಧಿಕ್ಕೃತಃ ಸಾಧುಭಿರ್ಯದಾ ॥೫೪॥

“ಪ್ರಭೋ! ನಾವು ಕಿಂಪುರುಷರು (ಅತ್ಯಂತ ತುಚ್ಛರಾದ ಪುರುಷರು.) ನೀನಾದರೋ ಮಹಾಪುರುಷನು. ಈ ಕುಪುರುಷನು ಸಾಧು-ಸತ್ಪುರುಷರ ಧಿಕ್ಕಾರಕ್ಕೆ ಯಾವಾಗ ಪಾತ್ರನಾದನೋ–ಆಗ ಆ ಅಸುರಾಧಮನನ್ನು ನೀನು ನಾಶಪಡಿಸಿದೆ.”

ವೈತಾಳಿಕರು ಮಾಡಿದ ಶ್ರೀನೃಸಿಂಹಸ್ತುತಿ :

ಸಭಾಸು ಸತ್ರೇಷು ತವಾಮಲಂ ಯಶೋ
ಗೀತ್ವಾ ಸಪರ್ಯಾಂ ಮಹತೀಂ ಲಭಾಮಹೇ ।
ಯಸ್ತಾಂ ವ್ಯನೈಷೀದ್ಭೃಶಮೇಷ ದುರ್ಜನೋ
ದಿಷ್ಟ್ಯಾ ಹತಸ್ತೇ ಭಗವನ್ಯಥಾಮಯಃ ॥೫೫॥

“ದೊಡ್ಡ ದೊಡ್ಡ ಸಭೆಗಳಲ್ಲಿಯೂ ಮತ್ತು ಯಜ್ಞಗಳಲ್ಲಿಯೂ ನಾವು ನಿನ್ನ ನಿರ್ಮಲವಾದ ಕೀರ್ತಿಯನ್ನು ಹಾಡಿ ಹೊಗಳಿ ಮರ್ಯಾದೆ-ಸಂಭಾವನೆಗಳನ್ನು ಪಡೆಯುತ್ತಿದ್ದೆವು. ಈ ದುಷ್ಟನು ನಮ್ಮ ಆ ಜೀವನದ ಉದ್ಯೋಗ

ವನ್ನು ನಾಶಪಡಿಸಿಬಿಟ್ಟಿದ್ದನು. ಮಹಾರೋಗದಂತಿದ್ದ ಇಂತಹ ದುರಾತ್ಮನನ್ನು ನೀನು ನಿರ್ಮೂಲಗೊಳಿಸಿರುವುದು ನಮ್ಮ ಮಹಾಭಾಗ್ಯವು."

ಕಿನ್ನರರು ಮಾಡಿದ ಶ್ರೀನೃಸಿಂಹಸ್ತುತಿ :

ವಯಮೀಶ ಕಿನ್ನರಗಣಾಸ್ತವಾನುಗಾ
ದಿತಿಜೇನ ವಿಷ್ಟಿಮಮುನಾನು ಕಾರಿತಾಃ ।
ಭವತಾ ಹರೇ ಸ ವೃಜಿನೋಽವಸಾದಿತೋ
ನರಸಿಂಹ ನಾಥ ವಿಭವಾಯ ನೋ ಭವ ॥೫೫॥

"ಪ್ರಭೋ! ನರಸಿಂಹ! ಕಿನ್ನರಗಣದವರಾದ ನಾವು ನಿನ್ನ ಸೇವಕರು. ಆದರೆ ಈ ದುಷ್ಟದೈತ್ಯನು ನಮ್ಮಿಂದ ಬಿಟ್ಟಿಕೆಲಸ ಮಾಡಿಸುತ್ತಿದ್ದನು. ಭಗವಂತ! ನೀನು ನಮ್ಮ ಮೇಲಿನ ಕರುಣೆಯಿಂದ ಇಂತಹ ಪಾಪಿಯನ್ನು ನಾಶಪಡಿಸಿದೆ. ನೀನು ಹೀಗೆಯೇ ನಮ್ಮ ಏಳಿಗೆಯನ್ನು ಉಂಟು ಮಾಡುತ್ತಿರಪ್ಪಾ."

ವಿಷ್ಣುಪಾರ್ಷದರು ಮಾಡಿದ ಶ್ರೀನೃಸಿಂಹಸ್ತುತಿ :

ಅದ್ಯೈತದ್ಧರಿನರರೂಪಮದ್ಭುತಂ ತೇ
ದೃಷ್ಟಂ ನಃ ಶರಣದ ಸರ್ವಲೋಕಶರ್ಮ ।
ಸೋಽಯಂ ತೇ ವಿಧಿಕರ ಈಶ ವಿಪ್ರಶಪ್ತ-
ಸ್ತಸ್ಯೇದಂ ನಿಧನಮನುಗ್ರಹಾಯ ವಿದ್ಮಃ ॥೫೬॥

"ಓ ಶರಣಾಗತವತ್ಸಲ! ಸಮಸ್ತಲೋಕಗಳಿಗೂ ಸುಖ-ಶಾಂತಿಗಳನ್ನುಂಟುಮಾಡುವ ನಿನ್ನ ಈ ಅದ್ಭುತವಾದ ನರಸಿಂಹರೂಪವನ್ನು ಇಂದು ನೋಡಿದೆವು. ಭಗವಂತ! ಈ ದೈತ್ಯನು ನಿನ್ನ ಆಜ್ಞೆಯನ್ನು ಪಾಲಿಸುವ ಸೇವಕನೇ ಆಗಿದ್ದು ಸನಕಾದಿಗಳ ಶಾಪಕ್ಕೆ ತುತ್ತಾದನು. ಈಗ ನೀನು ಪರಮಕರುಣೆಯಿಂದ ಈತನ ಉದ್ಧಾರಕ್ಕಾಗಿಯೇ ಈತನನ್ನು ವಧಿಸಿದ್ದೀಯೆ–ಎಂದು ನಾವು ತಿಳಿಯುತ್ತೇವೆ."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಸಪ್ತಮಸ್ಕಂಧದ ೮ನೆಯ ಅಧ್ಯಾಯವು ಮುಗಿಯಿತು.

ಪ್ರಹ್ಲಾದನು ಮಾಡಿದ ಶ್ರೀನರಸಿಂಹದೇವರ ಸ್ತುತಿ

ನಾರದರು ಧರ್ಮರಾಜನಿಗೆ ಹೇಳುತ್ತಾರೆ :

ಏವಂ ಸುರಾದಯಃ ಸರ್ವೇ ಬ್ರಹ್ಮರುದ್ರಪುರಃಸರಾಃ ।
ನೋಪೈತುಮಶಕನ್ಮನ್ಯುಸಂರಮ್ಭಂ ಸುದುರಾಸದಮ್ ॥೧॥

ಹೀಗೆ ಬ್ರಹ್ಮದೇವರು, ರುದ್ರದೇವರು–ಮುಂತಾದ ದೇವತಾಗಣ ಗಳೆಲ್ಲರೂ ಶ್ರೀಭಗವಂತನಾದ ನೃಸಿಂಹನನ್ನು ಸ್ತೋತ್ರಮಾಡಿದರೂ ಆತನ ಕ್ರೋಧಾವೇಶವನ್ನು ಶಮನಗೊಳಿಸಲು ಅವರಿಗೆ ಸಾಧ್ಯವಾಗಲಿಲ್ಲ. ಆತನ ಬಳಿಗೆ ಹೋಗುವುದಕ್ಕೂ ಅವರಿಗೆ ಶಕ್ಯವಾಗಲಿಲ್ಲ. ಆತನನ್ನು ಹೊಂದುವುದು ಅತಿಕಷ್ಟಸಾಧ್ಯವಾಗಿತ್ತು.

ಆಗ ದೇವತೆಗಳು ಸ್ವಯಂ ಲಕ್ಷ್ಮೀದೇವಿಯನ್ನೇ ಅಲ್ಲಿಗೆ ಕಳುಹಿಸಿದರು. ಅದು ಹಿಂದೆಂದೂ ಕಂಡಿಲ್ಲದ ಕೇಳಿಲ್ಲದ ಅತ್ಯದ್ಭುತರೂಪವಾಗಿದ್ದುದರಿಂದ ಈಕೆಯೂ ಕೂಡ ಶಂಕೆಗೊಂಡು ಆತನ ಬಳಿಗೆ ಸುಳಿಯಲಿಲ್ಲ. ಆಗ ಬ್ರಹ್ಮದೇವರು ತಮ್ಮ ಬಳಿಯಲ್ಲೇ ನಿಂತಿದ್ದ ಪ್ರಹ್ಲಾದಕುಮಾರನಿಗೆ 'ಮಗು! ನಿನ್ನ ತಂದೆಯ ವಿಷಯದಲ್ಲಿ ಕೋಪಗೊಂಡಿರುವ ಪ್ರಭುವನ್ನು ಶಾಂತಗೊಳಿಸು'–ಎಂದು ಹೇಳಿ ಆತನನ್ನು ಶ್ರೀಭಗವಂತನ ಬಳಿಗೆ ಕಳುಹಿಸಿದರು. ಪರಮಭಾಗವತಶ್ರೇಷ್ಠನಾದ ಆ ಬಾಲಕನು 'ಅಪ್ಪಣೆ'– ಎಂದು ಹೇಳಿ ಮೆಲ್ಲಗೆ ಸ್ವಾಮಿಯ ಬಳಿಗೆ ಹೋಗಿ ಕೈಜೋಡಿಸಿಕೊಂಡು ಭೂಮಿಯ ಮೇಲೆ ಸಾಷ್ಟಾಂಗಪ್ರಣಾಮಮಾಡಿದನು. ಹೀಗೆ ಆ ಬಾಲಕನು ತನ್ನ ಪಾದಮೂಲದಲ್ಲಿ ಅಡ್ಡಬಿದ್ದುಕೊಂಡಿರುವುದನ್ನು ಕಂಡು ದೇವದೇವನ ಹೃದಯವು ಕರುಣೆಯಿಂದ ತುಂಬಿಹೋಯಿತು. ಆತನು ಆ ಬಾಲಕನನ್ನು ಎಬ್ಬಿಸಿ ಕಾಳಸರ್ಪಕ್ಕೆ ಹೆದರಿದವರಿಗೆ ಅಭಯಪ್ರದಾನವನ್ನು ಮಾಡುವ ತನ್ನ ಹಸ್ತಕಮಲವನ್ನು ಆತನ ಶಿರಸ್ಸಿನಲ್ಲಿ ಇರಿಸಿದನು. ಆ ಕರಕಮಲದ ಸ್ಪರ್ಶವಾದೊಡನೆಯೇ ಪ್ರಹ್ಲಾದನಲ್ಲಿ ಉಳಿದಿದ್ದ ಅಲ್ಪ-ಸ್ವಲ್ಪ ಅಶುಭ ಸಂಸ್ಕಾರಗಳೂ ತೊಳೆದುಹೋದುವು. ಒಡನೆಯೇ ಆತನಿಗೆ ಪರಮಾತ್ಮನ ತತ್ತ್ವದ ಸಾಕ್ಷಾತ್ಕಾರವಾಯಿತು. ಪರಮಪ್ರೇಮದ ಆನಂದದಲ್ಲಿ ಮುಳುಗಿ

ಆತನು ಶ್ರೀನೃಸಿಂಹನ ಕರಕಮಲವನ್ನು ತನ್ನ ಹೃದಯದಲ್ಲಿ ಧರಿಸಿಕೊಂಡನು. ಆತನ ಇಡೀ ಶರೀರವು ರೋಮಾಂಚಿತವಾಗಿತ್ತು. ಹೃದಯದಲ್ಲಿ ಪ್ರೇಮವು ತುಂಬಿ ಕಣ್ಣುಗಳಿಂದ ಆನಂದಬಾಷ್ಪಗಳು ಹರಿಯತೊಡಗಿದುವು.

ಕಣ್ಣುಗಳನ್ನು ಆ ಶ್ರೀಭಗವಂತನಲ್ಲಿಯೇ ನೆಲೆಗೊಳಿಸಿ ಏಕಾಗ್ರವಾದ ಮನಸ್ಸಿನಿಂದ ಸಮಾಧಿಯನ್ನು ಹೊಂದಿದ ಆ ಭಾಗವತವರೇಣ್ಯನು ಪ್ರೇಮದಿಂದ ಗದ್ಗದವಾದ ಕಂಠದಿಂದ ಪರಮಾತ್ಮನನ್ನು ಹೀಗೆ ಸ್ತುತಿಸಿದನು: (ಶ್ಲೋಕ 2-7)

ಬ್ರಹ್ಮಾದಯಃ ಸುರಗಣಾ ಮುನಯೋಽಥ ಸಿದ್ಧಾಃ
ಸತ್ತ್ವೈಕತಾನಮತಯೋ ವಚಸಾಂ ಪ್ರವಾಹೈಃ ।
ನಾರಾಧಿತುಂ ಪುರುಗುಣೈರಧುನಾಪಿ ಪಿಪ್ರುಃ
ಕಿಂ ತೋಷ್ಟುಮರ್ಹತಿ ಸ ಮೇ ಹರಿರುಗ್ರಜಾತೇಃ ॥೮॥

"ಬ್ರಹ್ಮಾದಿದೇವತೆಗಳ, ಋಷಿ-ಮುನಿಗಳ ಮತ್ತು ಸಿದ್ಧಪುರುಷರ ಬುದ್ಧಿಯು ಸದಾ ಸತ್ತ್ವಗುಣದಲ್ಲಿಯೇ ನೆಲೆಸಿರುವುದು. ಅಂತಹವರೂ ನಾನಾಗುಣಾತಿಶಯಗಳಿಂದ ತುಂಬಿದ ತಮ್ಮ ಸ್ತೋತ್ರಗಂಗೆಯ ಪ್ರವಾಹ ಗಳಿಂದ ಯಾವ ಭಗವಂತನನ್ನು ಇನ್ನೂ ಸಂತೋಷಪಡಿಸಲು ಶಕ್ಯ ವಾಗಿಲ್ಲವೋ–ಅಂತಹ ಶ್ರೀಹರಿಯನ್ನು ಉಗ್ರವಾದ ಅಸುರಜಾತಿಯಲ್ಲಿ ಹುಟ್ಟಿರುವ ನಾನು ಸಂತೋಷಪಡಿಸಲು ಸಾಧ್ಯವೇ?

ಮನ್ಯೇ ಧನಾಭಿಜನರೂಪತಪಃಶ್ರುತೌಜ-
ಸ್ತೇಜಃಪ್ರಭಾವಬಲಪೌರುಷಬುದ್ಧಿಯೋಗಾಃ।
ನಾರಾಧನಾಯ ಹಿ ಭವನ್ತಿ ಪರಸ್ಯ ಪುಂಸೋ
ಭಕ್ತ್ಯಾ ತುತೋಷ ಭಗವಾನ್ಗಜಯೂಥಪಾಯ ॥೯॥

(ಆದರೂ ಭಗವಂತನು ಭಕ್ತಿಪ್ರಿಯನಾದುದರಿಂದ ನಾನು ಇವನನ್ನು ಸ್ತುತಿಸಲು ಪ್ರಯತ್ನಿಸುತ್ತೇನೆ.) ಧನಸಂಪತ್ತು, ಕುಲೀನತೆ, ರೂಪ, ತಪಸ್ಸು, ವಿದ್ಯೆ, ಓಜಸ್ಸು, ತೇಜಸ್ಸು, ಪ್ರಭಾವ, ಬಲ, ಪೌರುಷ, ಬುದ್ಧಿ ಮತ್ತು ಯೋಗ–ಇವು ಯಾವುವೂ ಈ ಪರಮಪುರುಷನನ್ನು ಸಂತೋಷಪಡಿಸಲಾರವು–ಎಂದು ನಾನು ಭಾವಿಸುತ್ತೇನೆ. ಭಕ್ತಿಯೇ ಈತ

ನನ್ನು ಪ್ರಸನ್ನಗೊಳಿಸುವ ಪರಮೋಪಾಯ. ಏಕೆಂದರೆ : ಶ್ರೀಭಗವಂತನು ತಿರ್ಯಕ್ಪ್ರಾಣಿಯಾದ ಗಜರಾಜನ ವಿಷಯದಲ್ಲಿಯೂ–ಆತನ ಭಕ್ತಿಯ ಕಾರಣದಿಂದ–ಪ್ರಸನ್ನನಾದನಲ್ಲವೇ!

ವಿಪ್ರಾದ್ದ್ವಿಷಡ್ಗುಣಯುತಾದರವಿನ್ದನಾಭ-
ಪಾದಾರವಿನ್ದವಿಮುಖಾಚ್ಛ್ವಪಚಂ ವರಿಷ್ಠಮ್ ।
ಮನ್ಯೇ ತದರ್ಪಿತಮನೋವಚನೇಹಿತಾರ್ಥ-
ಪ್ರಾಣಂ ಪುನಾತಿ ಸ ಕುಲಂ ನ ತು ಭೂರಿಮಾನಃ ॥೧೦॥

ಭಗವಂತನಾದ ಪದ್ಮನಾಭನ ಪಾದಾರವಿಂದಗಳಮೇಲಿನ ಭಕ್ತಿಗೆ ವಿರುದ್ಧವಾಗಿದ್ದರೆ–ಆತನು ಈ ಹನ್ನೆರಡು ಗುಣಗಳಿಂದ ಕೂಡಿದ ಬ್ರಾಹ್ಮಣನೇ ಆಗಿದ್ದರೂ ಶ್ರೇಷ್ಠನಲ್ಲ. ತನ್ನ ಮನಸ್ಸು, ಮಾತು, ಕೃತಿ, ಕಾಮ, ಅರ್ಥ ಮತ್ತು ಪ್ರಾಣಗಳನ್ನು ಭಗವಂತನ ಚರಣಗಳಲ್ಲಿ ಸಮರ್ಪಣೆ ಮಾಡಿರುವವನು ಚಂಡಾಲನೇ ಆದರೂ–ಆತನು ಇಂತಹ ಭಗವದ್ಭಕ್ತಿರಹಿತ ನಾದ ಬ್ರಾಹ್ಮಣನಿಗಿಂತಲೂ ಶ್ರೇಷ್ಠನೆಂದು ನಾನು ತಿಳಿಯುತ್ತೇನೆ. ಏಕೆಂದರೆ : ಆ ಭಕ್ತೋತ್ತಮನಾದ ಚಂಡಾಲನು ತನ್ನನ್ನು ಮಾತ್ರವಲ್ಲದೇ ತನ್ನ ಕುಲವನ್ನೂ ಪವಿತ್ರಗೊಳಿಸುತ್ತಾನೆ. ದುರಭಿಮಾನಿಯಾದ ಬ್ರಾಹ್ಮಣನಾದರೋ ತನ್ನನ್ನು ಕೂಡ ಪವಿತ್ರಗೊಳಿಸಿಕೊಳ್ಳಲಾರನು.

ನೈವಾತ್ಮನಃ ಪ್ರಭುರಯಂ ನಿಜಲಾಭಪೂರ್ಣೋ
ಮಾನಂ ಜನಾದವಿದುಷಃ ಕರುಣೋ ವೃಣೀತೇ ।
ಯದ್ಯಜ್ಜನೋ ಭಗವತೇ ವಿದಧೀತ ಮಾನಂ
ತಚ್ಚಾತ್ಮನೇ ಪ್ರತಿಮುಖಸ್ಯ ಯಥಾ ಮುಖಶ್ರೀಃ ॥೧೧॥

ಸ್ವಸ್ವರೂಪದಲ್ಲಿದ್ದು ಅದರ ಅನುಭವದಲ್ಲಿಯೇ ಪರಿಪೂರ್ಣನಾಗಿ ರುವ ಆ ಮಹಾಪ್ರಭುವಿಗೆ ಕ್ಷುದ್ರಪುರುಷರು ಮಾಡುವ ಆರಾಧನೆಯ ಅಪೇಕ್ಷೆಯೇನೂ ಇಲ್ಲ. ಆದರೂ ಕರುಣಾಪೂರ್ಣನಾಗಿರುವ ಈತನು ಭಕ್ತರ ಹಿತಕ್ಕಾಗಿ ಅವರು ಮಾಡುವ ಪೂಜೆಯನ್ನು ಸರಳಹೃದಯದಿಂದ ಸ್ವೀಕರಿಸು ತ್ತಾನೆ. ಮುಖವು ಸುಂದರವಾಗಿದ್ದರೆ ಅದು ಕನ್ನಡಿಯಲ್ಲಿ ಕಾಣುವ ತನ್ನ ಪ್ರತಿಬಿಂಬವನ್ನೂ ಸುಂದರವಾಗಿಸುತ್ತದೆ. ಹಾಗೆಯೇ ಶ್ರೀಭಗವಂತನನ್ನು

ಸತ್ಯ-ಶಿವ-ಸುಂದರವಾಗಿ ಪೂಜಿಸಿದರೆ ಆ ಸತ್ಯ-ಶಿವ-ಸೌಂದರ್ಯಗಳು ಪೂಜಿಸುವ ಭಕ್ತನಿಗೇ ಬಂದು ಸೇರುತ್ತವೆ. **'ಯದ್ಯಜ್ಜನೋ ಭಗವತೇ ವಿದಧೀತ ಮಾನಂ ತಚ್ಚಾತ್ಮನೇ ಪ್ರತಿಮುಖಸ್ಯ ಯಥಾ ಮುಖಶ್ರೀಃ'**

ತಸ್ಮಾದಹಂ ವಿಗತವಿಕ್ಲವ ಈಶ್ವರಸ್ಯ
ಸರ್ವಾತ್ಮನಾ ಮಹಿ ಗೃಣಾಮಿ ಯಥಾಮನೀಷಮ್ ।
ನೀಚೋಽಜಯಾ ಗುಣವಿಸರ್ಗಮನುಪ್ರವಿಷ್ಟಃ
ಪೂಯೇತ ಯೇನ ಹಿ ಪುಮಾನನುವರ್ಣಿತೇನ ॥೧೨॥

ಆದುದರಿಂದ ನಾನು ಶ್ರೀಭಗವಂತನನ್ನು ಸ್ತುತಿಸುವುದಕ್ಕೆ ಅತ್ಯಂತ ಅನರ್ಹನೂ ಅನಧಿಕಾರಿಯೂ ಆಗಿದ್ದರೂ—ನನ್ನ ಬುದ್ಧಿಶಕ್ತಿಗೆ ಅನುಗುಣವಾಗಿ ಯಾವ ಶಂಕೆಯೂ ಇಲ್ಲದೇ ಈತನ ಮಹಿಮೆಯನ್ನು ಸ್ತುತಿಸುತ್ತೇನೆ. ಈ ಮಹಿಮೆಯ ಗಾನಕ್ಕೆ ಎಷ್ಟು ಪ್ರಭಾವವಿದೆಯೆಂದರೆ : ಅವಿದ್ಯೆಯ ಕಾರಣದಿಂದ ಸಂಸಾರಚಕ್ರದಲ್ಲಿ ಸಿಕ್ಕಿಕೊಂಡಿರುವ ಜೀವನು ಈ ಮಹಿಮೆಯ ಗಾನದಿಂದ ಒಡನೆಯೇ ಪವಿತ್ರನಾಗಿಬಿಡುವನು.

ಸರ್ವೇ ಹ್ಯಮೀ ವಿಧಿಕರಾಸ್ತವ ಸತ್ತ್ವಧಾಮ್ನೋ
ಬ್ರಹ್ಮಾದಯೋ ವಯಮಿವೇಶ ನ ಚೋದ್ವಿಜನ್ತಃ ।
ಕ್ಷೇಮಾಯ ಭೂತಯ ಉತಾತ್ಮಸುಖಾಯ ಚಾಸ್ಯ
ವಿಕ್ರೀಡಿತಂ ಭಗವತೋ ರುಚಿರಾವತಾರೈಃ ॥೧೩॥

ಪ್ರಭೋ! ಶುದ್ಧಸತ್ತ್ವಗುಣಕ್ಕೆ ನೆಲೆಯಾಗಿರುವ ಈ ಬ್ರಹ್ಮಾದಿ ದೇವತೆಗಳು ವಿಧೇಯಕಿಂಕರರಾಗಿ ನಿನ್ನನ್ನು ಸೇವಿಸುತ್ತಾರೆ. ಇವರು ನಮ್ಮಂತೆ ಉದ್ವೇಗವಿಲ್ಲದೇ ದ್ವೇಷವಿಲ್ಲದೇ ನಿನ್ನ ಸೇವೆಯನ್ನು ಮಾಡುತ್ತಾರೆ. ನೀನು ಅತಿಸುಂದರವಾದ ದೊಡ್ಡ ದೊಡ್ಡ ಅವತಾರಗಳನ್ನು ಮಾಡಿ ಕಲ್ಯಾಣವನ್ನೂ, ಏಳಿಗೆಯನ್ನೂ, ಆತ್ಮಾನಂದವನ್ನೂ ಅನುಗ್ರಹಿಸುವುದಕ್ಕಾಗಿ ಬಗೆ-ಬಗೆಯ ಲೀಲೆಗಳನ್ನು ಮಾಡುತ್ತೀಯೇ. ಈ ನರಸಿಂಹಾವತಾರವೂ ಅಂತಹ ದಿವ್ಯಲೀಲೆಯೇ ಆಗಿದೆ.

ತದ್ಯಚ್ಛ ಮನ್ಯುಮಸುರಶ್ಚ ಹತಸ್ತ್ವಯಾದ್ಯ
ಮೋದೇತ ಸಾಧುರಪಿ ವೃಶ್ಚಿಕಸರ್ಪಹತ್ಯಾ ।
ಲೋಕಾಶ್ಚ ನಿರ್ವೃತಿಮಿತಾಃ ಪ್ರತಿಯನ್ತಿ ಸರ್ವೇ
ರೂಪಂ ನೃಸಿಂಹ ವಿಭವಾಯ ಜನಾಃಸ್ಮರನ್ತಿ ॥೧೪॥

ಯಾವ ಅಸುರನನ್ನು ವಧಿಸುವುದಕ್ಕಾಗಿ ನೀನು ಕ್ರೋಧವನ್ನು ತಂದುಕೊಂಡಿದ್ದೆಯೋ–ಆತನ ಸಂಹಾರವನ್ನು ಈಗ ಮಾಡಿಯಾಯಿತಲ್ಲಾ! ಇನ್ನು ನೀನು ಶಾಂತನಾಗು ಸ್ವಾಮಿ! ಈ ಅಸುರನ ಸಂಹಾರದಿಂದ ಎಲ್ಲ ಜನರಿಗೂ ಸಂತೋಷವಾಗಿದೆ. ಚೇಳು-ಹಾವುಗಳು ಸತ್ತರೆ ಅದರಿಂದ ಸಾಧುಗಳಿಗೂ ಸಂತೋಷವುಂಟಾಗುವುದಿಲ್ಲವೇ! ಅದರಂತೆ ಸಂತುಷ್ಟರಾದ ಎಲ್ಲ ಜೀವಿಗಳೂ ಈಗ ನಿನ್ನ ಶಾಂತಸ್ವರೂಪವನ್ನು ದರ್ಶನಮಾಡಲು ಬಯಸುತ್ತಿದ್ದಾರೆ. ಓ ನಾರಸಿಂಹ! ಭಕ್ತಜನರು ಭಯದಿಂದ ಬಿಡುಗಡೆ ಹೊಂದಲು ನಿನ್ನ ಈ ರೂಪವನ್ನು ಸ್ಮರಿಸುತ್ತಾರೆ.

ನಾಹಂ ಬಿಭೇಮ್ಯಜಿತ ತೇಽತಿಭಯಾನಕಾಸ್ಯ-
ಜಿಹ್ವಾರ್ಕನೇತ್ರಭ್ರುಕುಟೀರಭಸೋಗ್ರದಂಷ್ಟ್ರಾತ್ ।
ಆನ್ತ್ರಸ್ರಜಃ ಕ್ಷತಜಕೇಸರಶಙ್ಕುಕರ್ಣಾ
ನ್ನಿರ್ಹ್ರಾದಭೀತದಿಗಿಭಾದರಿಭಿನ್ನಖಾಗ್ರಾತ್ ॥೧೫॥

ಓ ಪರಮಾತ್ಮ! ನಿನ್ನ ಮುಖವು ಅತಿಭಯಂಕರವಾಗಿದೆ. ನಾಲಿಗೆಯು ಭೀಕರವಾಗಿ ಹೊರಕ್ಕೆ ಚಾಚಿದೆ. ಕಣ್ಣುಗಳು ಸೂರ್ಯನಂತೆ ಉಗ್ರವಾಗಿ ಜ್ವಲಿಸುತ್ತಿವೆ. ಹುಬ್ಬುಗಳು ಮೇಲೆದ್ದಿವೆ. ಕೋರೆದಾಡೆಗಳು ಕೂರಾಗಿವೆ. (ತೀಕ್ಷ್ಣವಾಗಿವೆ.) ಹಾಗೆಯೇ ನೀನು ಧರಿಸಿರುವ ಕರುಳುಗಳ ಮಾಲೆ, ರಕ್ತದಿಂದ ತೋಯ್ದಿರುವ ಕೇಸರುಗಳು, ಮೇಲಕ್ಕೆ ನಿಮಿರಿ ನೇರವಾಗಿ ನಿಂತಿರುವ ಗೂಟದಂತಹ ಕಿವಿಗಳು, ದಿಗ್ಗಜಗಳನ್ನು ಭಯಪಡಿಸುವ ಸಿಂಹಗರ್ಜನೆ ಮತ್ತು ಶತ್ರುಗಳನ್ನು ಸೀಳಿಹಾಕುವಂತಹ ಉಗುರುಗಳು– ಇವೆಲ್ಲಾ ಅತಿಭಯಂಕರವಾಗಿದ್ದರೂ ನಾನು ಇವುಗಳನ್ನು ಕಂಡು ಸ್ವಲ್ಪವೂ ಭಯಪಡುತ್ತಿಲ್ಲ, ಭಗವಂತ!

ತ್ರಸ್ತೋಽಸ್ಮ್ಯಹಂ ಕೃಪಣವತ್ಸಲ ದುಃಸಹೋಗ್ರ-
ಸಂಸಾರಚಕ್ರಕದನಾದ್ಗ್ರಸತಾಂ ಪ್ರಣೀತಃ ।

ಬದ್ಧಃ ಸ್ವಕರ್ಮಭಿರುಶತ್ತಮ ತೇಽಙ್ಘ್ರಿಮೂಲಂ
ಪ್ರೀತೋಽಪವರ್ಗಶರಣಂ ಹ್ವಯಸೇ ಕದಾ ನು ॥೧೬॥

ಆದರೆ ನಾನು ಈ ಅಸಹ್ಯವೂ ಮತ್ತು ಉಗ್ರವೂ ಆಗಿರುವ ಸಂಸಾರ ಚಕ್ರಕ್ಕೆ ಮಾತ್ರ ಭಯಪಡುತ್ತೇನೆ. ಕರ್ಮಪಾಶಗಳಿಗೆ ಸಿಲುಕಿ ಈ ಭಯಂಕರವಾದ ಜಂತುಗಳ ಮಧ್ಯೆ ಬಿದ್ದಿದ್ದೇನೆ. ಓ ದೀನಬಂಧುವೇ! ನೀನು ಪ್ರಸನ್ನನಾಗಿ ಸಮಸ್ತಜೀವಗಳಿಗೂ ಏಕೈಕರಕ್ಷಕನಾಗಿ ಮೋಕ್ಷ ಸ್ವರೂಪವೇ ಆಗಿರುವ ನಿನ್ನ ಪಾದಾರವಿಂದಗಳ ನೆರಳಿಗೆ ಎಂದು ನನ್ನನ್ನು ಕರೆಸಿಕೊಳ್ಳುವೆ?

ಯಸ್ಮಾತ್ಪ್ರಿಯಾಪ್ರಿಯವಿಯೋಗಸಯೋಗಜನ್ಮ-
ಶೋಕಾಗ್ನಿನಾ ಸಕಲಯೋನಿಷು ದಹ್ಯಮಾನಃ ।
ದುಃಖೌಷದಂ ತದಪಿ ದುಃಖಮತದ್ಧಿಯಾಂ
ಭೂಮನ್ಭ್ರಮಾಮಿ ವದ ಮೇ ತವ ದಾಸ್ಯಯೋಗಮ್ ॥

ಪ್ರಭೋ! ಅನಂತ! ನಾನು ಯಾವ ಯಾವ ಯೋನಿಗಳಲ್ಲಿ ಇಲ್ಲಿಯ ವರೆಗೂ ಹುಟ್ಟಿದ್ದೆನೋ ಅವೆಲ್ಲದರಲ್ಲೂ ಇಷ್ಟಪದಾರ್ಥಗಳ ಅಗಲಿಕೆ ಮತ್ತು ಅನಿಷ್ಟಪದಾರ್ಥಗಳ ಸಂಯೋಗದಿಂದುಂಟಾಗುವ ಶೋಕದ ಬೆಂಕಿ ಯಲ್ಲಿ ಬೆಂದುಹೋಗುತ್ತಾ ಬಂದಿದ್ದೇನೆ. ಈ ದುಃಖಗಳನ್ನು ಹೋಗಲಾಡಿ ಸಲು ಬಳಸಿದ ಔಷಧಿಗಳೂ ದುಃಖರೂಪಗಳೇ ಆಗಿವೆ. ಸ್ವಸ್ವರೂಪಕ್ಕೆ ಬೇರೆಯಾದ ವಸ್ತುಗಳನ್ನು ಸ್ವಸ್ವರೂಪವೆಂದು ತಿಳಿದು ಎಂದಿನಿಂದ ಅಲೆದಾ ಡುತ್ತಾ ಬಂದಿದ್ದೇನೆಯೋ ನಾನು ಕಾಣೆ. ಇದರ ಪರಿಹಾರಕ್ಕಾಗಿ ನಿನ್ನ ಸೇವೆಯನ್ನೂ, ನಿನ್ನ ಭಕ್ತಿಯನ್ನು ಪಡೆಯುವ ಸಾಧನವನ್ನೂ ಕರುಣಿಸು, ಕರುಣಾಳುವೇ!

ಸೋಽಹಂ ಪ್ರಿಯಸ್ಯ ಸುಹೃದಃ ಪರದೇವತಾಯಾ
ಲೀಲಾಕಥಾಸ್ತವ ನೃಸಿಂಹ ವಿರಿಞ್ಚಗೀತಾಃ ।
ಅಞ್ಜಸ್ತಿತರ್ಮ್ಯನುಗೃಣನ್ಗುಣವಿಪ್ರಮುಕ್ತೋ
ದುರ್ಗಾಣಿ ತೇ ಪದಯುಗಾಲಯಹಂಸಸಙ್ಗಃ ॥೧೮॥

ಪ್ರಭೋ! ನೀನು ನಮಗೆ ಅತ್ಯಂತಪ್ರಿಯನಾದವನು. ನಿರ್ವ್ಯಾಜವಾಗಿ

ನಮಗೆ ಹಿತವನ್ನು ಬಯಸುವ ಪರಮಮಿತ್ರನು. ಎಲ್ಲರಿಗೂ ಪರಮಾರಾಧ್ಯನಾಗಿರುವ ಪರದೇವತೆಯು. ಬ್ರಹ್ಮದೇವರೂ ಕೂಡ ಗಾನ ಮಾಡಿರುವ ನಿನ್ನ (ಅವತಾರ) ಲೀಲಾಕಥೆಗಳನ್ನು ಗಾನಮಾಡುತ್ತಾ ನಾನು ಅತ್ಯಂತಸುಲಭವಾಗಿ ರಾಗವೇ ಮುಂತಾದ ಪ್ರಾಕೃತಗುಣಗಳಿಂದ ಬಿಡುಗಡೆ ಹೊಂದಿ ಸಂಸಾರದ ಸಂಕಷ್ಟಗಳನ್ನು ದಾಟಿಬಿಡುವೆನು. ಏಕೆಂದರೆ : ನಿನ್ನ ಅಡಿದಾವರೆಗಳಲ್ಲಿ ವಾಸಮಾಡುವ ಭಕ್ತರಾದ ಪರಮಹಂಸರಾದ ಮಹಾತ್ಮರ ಸಂಗವು ನನಗೆ ದೊರೆಯುತ್ತಲೇ ಇರುವುದು.

ಬಾಲಸ್ಯ ನೇಹ ಶರಣಂ ಪಿತರೌ ನೃಸಿಂಹ
ನಾರ್ತಸ್ಯ ಚಾಗದಮುದನ್ವತಿ ಮಜ್ಜತೋ ನೌಃ ।
ತಪ್ತಸ್ಯ ತತ್ಪ್ರತಿವಿಧಿರ್ಯ ಇಹಾಞ್ಜಸೇಷ್ಟ-
ಸ್ತಾವದ್ವಿಭೋ ತನುಭೃತಾಂ ತ್ವದುಪೇಕ್ಷಿತಾನಾಮ್ ॥

ಓ ಭಗವಂತನ! ಈ ಲೋಕದಲ್ಲಿ ದುಃಖದಲ್ಲಿ ಸಿಕ್ಕಿಕೊಂಡಿರುವ ಜೀವಗಳ ದುಃಖಗಳನ್ನು ಹೋಗಲಾಡಿಸಲು ಅನೇಕವಾದ ಉಪಾಯಗಳು ಮಾಡಲ್ಪಡುತ್ತವೆ. ಆದರೆ ನೀನು ಉಪೇಕ್ಷೆಮಾಡಿದ್ದೇ ಆದರೆ ಆ ಉಪಾಯಗಳು ಒಂದು ಕ್ಷಣಕಾಲ ಮಾತ್ರ ಇರಬಲ್ಲವು. ಅವುಗಳಿಂದ ಶಾಶ್ವತ ವಾದ ರಕ್ಷಣೆಯು ದೊರೆಯುವುದಿಲ್ಲ. ನೀನು ಉಪೇಕ್ಷೆಮಾಡಿದ್ದೇ ಆದರೆ ತಂದೆ-ತಾಯಿಗಳೂ ತಮ್ಮ ಬಾಲಕನನ್ನು ರಕ್ಷಿಸಲಾರರು ; ಔಷಧಿಯು ರೋಗವನ್ನು ಹೋಗಲಾಡಿಸಲಾರದು ಮತ್ತು ಹಡಗು ಕಡಲಿನಲ್ಲಿ ಮುಳುಗುತ್ತಿರುವವನನ್ನು ರಕ್ಷಿಸಲಾರದು.

ಯಸ್ಮಿನ್ಯತೋ ಯರ್ಹಿ ಯೇನ ಚ ಯಸ್ಯ ಯಸ್ಮಾ-
ದ್ಯಸ್ಮೈ ಯಥಾ ಯದುತ ಯಸ್ತ್ವಪರಃ ಪರೋ ವಾ ।
ಭಾವಃ ಕರೋತಿ ವಿಕರೋತಿ ಪೃಥಕ್ಸ್ವಭಾವಃ
ಸಂಚೋದಿತಸ್ತದಖಿಲಂ ಭವತಃ ಸ್ವರೂಪಮ್ ॥೨೦॥

ಬೇರೆ ಬೇರೆ ಸ್ವಭಾವಗಳುಳ್ಳ ಬ್ರಹ್ಮದೇವರು ಮತ್ತು ಕಾಲವೇ ಮುಂತಾದ ಯಾವ ಕರ್ತೃಗಳುಂಟೋ–ಅವರೆಲ್ಲರನ್ನೂ ಪ್ರೇರಿಸುವವನು ನೀನೇ ಆಗಿದ್ದೀಯೆ. ನಿನ್ನ ಪ್ರೇರಣೆಯಿಂದ ಅವರು ಯಾವುದನ್ನು ಆಧರಿಸಿ

ಯಾವ ಕಾರಣದಿಂದ, ಯಾವ ಉಪಕರಣಗಳಿಂದ, ಯಾವ ಸಮಯದಲ್ಲಿ, ಯಾವ ಸಾಧನಗಳಿಂದ, ಯಾವ ಸಹಾಯದಿಂದ, ಯಾವ ಪ್ರಯೋಜನಕ್ಕಾಗಿ, ಯಾವ ವಿಧಿಯಿಂದ, ಏನೇನನ್ನು ಸೃಷ್ಟಿಸುತ್ತಾರೆಯೋ ಅಥವಾ ವಿಕಾರಗೊಳಿಸುತ್ತಾರೆಯೋ–ಅವೆಲ್ಲವೂ ನಿನ್ನ ಸ್ವರೂಪವೇ ಆಗಿದೆ.

ಮಾಯಾ ಮನಃ ಸೃಜತಿ ಕರ್ಮಮಯಂ ಬಲೀಯಃ
ಕಾಲೇನ ಚೋದಿತಗುಣಾನುಮತೇನ ಪುಂಸಃ ।
ಛನ್ದೋಮಯಂ ಯದಜಯಾರ್ಪಿತಷೋಡಶಾರಂ
ಸಂಸಾರಚಕ್ರಮಜ ಕೋಽತಿತರೇತ್ತ್ವದನ್ಯಃ* ॥೨೧॥

ಓ ಜನ್ಮರಹಿತನಾದ ಪ್ರಭುವೇ! ಪುರುಷನ ಅನುಮತಿಯಂತೆ ಕಾಲದ ಮೂಲಕ ತ್ರಿಗುಣಗಳಲ್ಲಿ ಕ್ಷೋಭೆಯುಂಟಾಗಲು ಆ ಕಾಲದಿಂದೊಡಗೂಡಿದ ಪ್ರಕೃತಿಯು ಮನಸ್ಸನ್ನು ಸೃಷ್ಟಿಮಾಡುವುದು. ಈ ಮನಸ್ಸು ಮಹಾ ಬಲಶಾಲಿಯಾದುದು ; ಕರ್ಮಮಯವಾದುದು ; ನಿಗ್ರಹಿಸಲು ಅತಿಕಷ್ಟವಾದುದು ; ನಾನಾವಿಕಾರಮಯವಾದುದು ಮತ್ತು ಛಂದೋಮಯವಾದುದು. ಇಂತಹ ಮನಸ್ಸಿನಿಂದ ನಿರ್ಮಿತವಾಗಿ ಹತ್ತು ಇಂದ್ರಿಯಗಳು ಮತ್ತು ಐದು ತನ್ಮಾತ್ರೆಗಳು ಎಂಬ ವಿಕಾರರೂಪವಾದ ಹದಿನಾರು ಅರೆಪಟ್ಟಿಗಳಿಂದ ಕೂಡಿರುವ ಈ ಸಂಸಾರಚಕ್ರವನ್ನು ನಿನ್ನಿಂದ ಬೇರ್ಪಟ್ಟ ಯಾವನು ತಾನೇ ದಾಟಿಹೋದಾನು?

---

* **ತ್ವದನ್ಯಃ ಕೋ ವಾ ಅತಿತರೇತ್** = ನಿನ್ನಿಂದ ಭಿನ್ನನಾದ ಯಾವ ಮನುಷ್ಯನು ತಾನೇ ಅಂದರೆ ನಿನ್ನಲ್ಲಿ ಅದ್ವೈತವನ್ನು ಹೊಂದದೇ ಇರುವ ಯಾವನು ತಾನೇ ದಾಟಿಯಾನು? 'ಉದರಮಂತರಂ ಕುರುತೇ'–ಎಂಬ ಶ್ರುತಿಯಂತೆ ತನಗೂ ಪರಮಾತ್ಮನಿಗೂ ಸ್ವಲ್ಪವಾದರೂ ಭೇದವನ್ನು ಭಾವಿಸಿದರೆ ಭಯವುಂಟಾಗುವುದು. ಸಂಸಾರವನ್ನು ದಾಟಲು ಸಾಧ್ಯವಾಗುವುದಿಲ್ಲ. (ಅದ್ವೈತಪರವಾದ ಅರ್ಥ)

ತ್ವದನ್ಯಃ = ಎಂದರೆ ನಿನ್ನೊಡನೆ ಸೇರದೇ ಇರುವವನು, ನಿನ್ನನ್ನು ಆಶ್ರಯಿಸದೇ ಇರುವವನು, ನಿನ್ನೊಡನೆ ನೈರಂತರ್ಯವನ್ನು ಹೊಂದದೇ ಇರುವವನು, ಅಂತಹವನಿಗೆ ಸಂಸಾರವನ್ನು ದಾಟಲು ಸಾಧ್ಯವಿಲ್ಲ. ಅಂದರೆ : ನಿನ್ನಲ್ಲಿ ಅನನ್ಯಭಾವವುಳ್ಳವನು ದಾಟಿಯೇ ದಾಟುತ್ತಾನೆ–ಎಂಬುದು ವಿಶಿಷ್ಟಾದ್ವೈತಭಾಷ್ಯ. (ವೀರರಾಘವೀಯ)

ತ್ವದನ್ಯಃ = ನಿನ್ನ ಅನುಗ್ರಹವಿಲ್ಲದವನು. ಭಕ್ತಿಯಿಂದುಂಟಾದ ಶ್ರೀಹರಿಯ ಅನು

ಸ ತ್ವಂ ಹಿ ನಿತ್ಯವರ್ಜಿತಾತ್ಮಗುಣಃ ಸ್ವಧಾಮ್ನಾ
ಕಾಲೋ ವಶೀಕೃತವಿಸೃಜ್ಯವಿಸರ್ಗಶಕ್ತಿಃ ।
ಚಕ್ರೇ ವಿಸೃಷ್ಟಮಜಯೇಶ್ವರ ಷೋಡಶಾರೇ
ನಿಷ್ಪೀಡ್ಯಮಾನಮುಪಕರ್ಷ ವಿಭೋ ಪ್ರಪನ್ನಮ್ ॥೨೨॥

ಎಲೈ ಸರ್ವಶಕ್ತನಾದ ಪ್ರಭುವೇ! ಮಾಯೆಯು ಈ ಹದಿನಾರು ಅರೆಕಾಲುಪಟ್ಟಿಗಳಿಂದ ಕೂಡಿದ ಸಂಸಾರಚಕ್ರಕ್ಕೆ ನನ್ನನ್ನು ಹಾಕಿ ಕಬ್ಬನ್ನು ಅರೆಯುವಂತೆ ಅರೆದುಹಾಕುತ್ತಿದೆ. ನೀನಾದರೋ ಸರ್ವವನ್ನೂ ವಶದಲ್ಲಿಟ್ಟು ಕೊಂಡಿರುವವನು. ನಿನ್ನ ಶಕ್ತಿಯಿಂದ ಬುದ್ಧಿಯ ಸಮಸ್ತಗುಣಗಳನ್ನೂ ಸದಾ ಗೆದ್ದವನಾಗಿ ಕಾಲರೂಪದಿಂದ ಸಾಧ್ಯ-ಸಾಧನಗಳೆಲ್ಲವನ್ನೂ ಸ್ವಾಧೀನ ದಲ್ಲಿಟ್ಟುಕೊಂಡಿರುವ ಸರ್ವಶಕ್ತನು. ಇಂತಹ ನಿನ್ನನ್ನು ನಾನು ಶರಣು ಹೊಂದಿದ್ದೇನೆ. ನನ್ನನ್ನು ಈ ಮಾಯಾಚಕ್ರದಿಂದ ದಾಟಿಸಿ ನಿನ್ನ ಸನ್ನಿಧಿಗೆ ಸೆಳೆದುಕೋ, ಸ್ವಾಮಿ!

ದೃಷ್ಟಾ ಮಯಾ ದಿವಿ ವಿಭೋಽಖಿಲಧಿಷ್ಣ್ಯಪಾನಾ-
ಮಾಯುಃ ಶ್ರಿಯೋ ವಿಭವ ಇಚ್ಛತಿ ಯಾಞ್ಜನೋಽಯಮ್ ।

ಗ್ರಹವಿಲ್ಲದವನು. ಇಂತಹವನು ಸಂಸಾರಚಕ್ರವನ್ನು ಖಂಡಿತವಾಗಿಯೂ ದಾಟ ಲಾಗುವುದಿಲ್ಲ. (ವಿಜಯಧ್ವಜೀಯ)

ಅಥವಾ 'ಅತಿತರೇತ್' ಎಂಬ ಪದಕ್ಕೆ 'ದಾಟಿಸಿಯಾನು' ಎಂಬ ಅರ್ಥಮಾಡಿದರೆ ನಿನ್ನನ್ನು ಬಿಟ್ಟು ಬೇರೆ ಯಾವನು ತಾನೇ ಈ ಸಂಸಾರಚಕ್ರವನ್ನು ದಾಟಿಸಿಯಾನು? ಎಂಬ ಅಭಿಪ್ರಾಯ. (ಬಾಗಲಿಂಗಂಪಲ್ಲಿ ಪ್ರಕಾಶನದ ದ್ವೈತಭಾಷ್ಯದ ಟಿಪ್ಪಣಿ)

ಛಂದೋಮಯಂ ಸಂಸಾರಚಕ್ರಂ = ಅನೇಕ ನಾಮ-ರೂಪಗಳಲ್ಲಿ ಆಸಕ್ತವಾಗಿರುವ ಸಂಸಾರಚಕ್ರವನ್ನು (ಶ್ರೀಧರೀಯ)

ಸಂಕಲ್ಪ-ವಿಕಲ್ಪಲಕ್ಷಣರೂಪವಾದ ಇಚ್ಛಾತ್ಮಕವಾದ ಮನಸ್ಸಿನಿಂದ ನಿರ್ಮಿತವಾದ ಸಂಸಾರಚಕ್ರವನ್ನು (ವಿಜಯಧ್ವಜೀಯ)

ಸತ್ವಗುಣಪ್ರಾಚುರ್ಯದಿಂದ ಶಾಸ್ತ್ರಗಳು ಹೇಳುವ ಸಾಧನಗಳಿಂದ ಪ್ರಚುರವಾಗುವ. ಮನಸ್ಸಿನಲ್ಲಿ ಸತ್ವಗುಣಪ್ರಾಚುರ್ಯದಿಂದ ಭಗವಂತನ ಅಭಿಮುಖ್ಯವುಂಟಾದಾಗ ಸಂಸಾರಚಕ್ರವನ್ನು ಸುಲಭವಾಗಿ ದಾಟಬಹುದು. (ವೀರರಾಘವೀಯ)

ಯೇಽಸ್ಮತ್ಪಿತುಃ ಕುಪಿತಹಾಸವಿಜೃಮ್ಭಿತಭ್ರೂ-
ವಿಸ್ಫೂರ್ಜಿತೇನ ಲುಲಿತಾಃ ಸ ತು ತೇ ನಿರಸ್ತಃ ॥೨೩॥

ಓ ಭಗವಂತ! ಸಂಸಾರದ ಜನರು ಯಾವುದನ್ನು ಪಡೆಯುವುದಕ್ಕಾಗಿ ಹಾತೊರೆಯುತ್ತಿದ್ದಾರೆಯೋ–ಅಂತಹ ಸ್ವರ್ಗದಲ್ಲಿ ದೊರೆಯುವ ಸಮಸ್ತ ಲೋಕಪಾಲಕರ ಆಯುಸ್ಸು, ಸಂಪತ್ತು ಮತ್ತು ಐಶ್ವರ್ಯ ಎಲ್ಲವನ್ನೂ ನಾನು ನೋಡಿಯಾಯಿತು. ನನ್ನ ತಂದೆಯು ಸ್ವಲ್ಪ ಕೋಪಗೊಂಡು ನಕ್ಕಾಗ ಆತನ ಹುಬ್ಬುಗಳು ಸ್ವಲ್ಪ ಓರೆಯಾದರೆ ಸಾಕು–ಅವೆಲ್ಲವೂ ಚೆಲ್ಲಾಪಿಲ್ಲಿಯಾಗಿ ಚದುರಿಹೋಗುತ್ತಿದ್ದುವು. ಅಂತಹ ಮಹಾಪರಾಕ್ರಮಶಾಲಿಯಾದ ನನ್ನ ತಂದೆಯನ್ನೇ ನೀನು ಸಂಹಾರಮಾಡಿಬಿಟ್ಟೆ.

ತಸ್ಮಾದಮೂಸ್ತನುಭೃತಾಮಹಮಾಶಿಷೋಜ್ಞ
ಆಯುಃ ಶ್ರಿಯಂ ವಿಭವಮೈನ್ದ್ರಿಯಮಾವಿರಿಞ್ಚಾತ್ ।
ನೇಚ್ಛಾಮಿ ತೇ ವಿಲುಲಿತಾನುರುವಿಕ್ರಮೇಣ
ಕಾಲಾತ್ಮನೋಪನಯ ಮಾಂ ನಿಜಭೃತ್ಯಪಾರ್ಶ್ವಮ್ ॥

ಆದುದರಿಂದ ನಾನು, ಪ್ರಾಣಿಗಳು ಬಯಸುವಂತಹ ಬ್ರಹ್ಮಲೋಕ ಪರ್ಯಂತವಾದ ಆಯುಸ್ಸು, ಸಂಪತ್ತು, ಐಶ್ವರ್ಯ ಮತ್ತು ಇಂದ್ರಿಯಗಳ ಭೋಗ–ಇವು ಯಾವುದನ್ನೂ ಅಪೇಕ್ಷಿಸುವುದಿಲ್ಲ. ನೀನು ಮಹಾಬಲಶಾಲಿ ಯಾದ ಕಾಲದ ರೂಪವನ್ನು ಧರಿಸಿ ಅವೆಲ್ಲವನ್ನೂ ಕಬಳಿಸುವೆಯೆಂಬುದು ನನಗೆ ಗೊತ್ತು. ಆದುದರಿಂದ ನಿನ್ನ ಸೇವಕರ ಸನ್ನಿಧಿಗೆ ನನ್ನನ್ನು ಕರೆದುಕೊಂಡುಹೋಗು–ಎಂದಿಷ್ಟನ್ನೇ ನಾನು ಬೇಡುವೆನಪ್ಪಾ.

ಕುತ್ರಾಶಿಷಃ ಶ್ರುತಿಸುಖಾ ಮೃಗತೃಷ್ಣಿರೂಪಾಃ
ಕ್ವೇದಂ ಕಲೇವರಮಶೇಷರುಜಾಂ ವಿರೋಹಃ ।
ನಿರ್ವಿದ್ಯತೇ ನ ತು ಜನೋ ಯದಪೀತಿ ವಿದ್ವಾ-
ನ್ಕಾಮಾನಲಂ ಮಧುಲವೈಃ ಶಮಯನ್ದುರಾಪೈಃ ॥೨೫॥

ವಿಷಯಸುಖಭೋಗಗಳ ಮಾತುಗಳು ಕೇಳುವುದಕ್ಕೇನೋ ತುಂಬಾ ಚೆನ್ನಾಗಿರುತ್ತವೆ. ಆದರೆ ವಾಸ್ತವವಾಗಿ ಅವು ಬಿಸಿಲ್ಗುದುರೆಯ ನೀರಿಗೆ ಸಮ ವಾದುವು. ಅವುಗಳನ್ನು ಭೋಗಿಸಲು ಸಾಧನವಾದ ಶರೀರವಾದರೂ ಇಷ್ಟ

ಪಡಲು ಯೋಗ್ಯವಾದುದೇ? ಎಂದರೆ : ಅದು ಎಲ್ಲ ರೋಗಗಳಿಗೂ ನೆಲೆ ವೀಡಾಗಿದೆ. ಇವೆರಡೂ ಅನಿತ್ಯವೆಂದೂ ಅಸಾರವೆಂದೂ ತಿಳಿದಿದ್ದರೂ ಕೂಡ ಮನುಷ್ಯನಿಗೆ ಇವುಗಳಲ್ಲಿ ವೈರಾಗ್ಯವುಂಟಾಗುವುದಿಲ್ಲ. ಆತನು ಅತಿಕಷ್ಟದಿಂದ ದೊರೆಯುವ ವಿಷಯಭೋಗಗಳ ಸಣ್ಣ-ಸಣ್ಣ ಸಿಹಿಜೇನಿನ ತೊಟ್ಟುಗಳಿಂದ ತನ್ನ ಕಾಮವೆಂಬ ಅಗ್ನಿಯನ್ನು ಆರಿಸಲು ಪ್ರಯತ್ನಪಡುತ್ತಿದ್ದಾನೆ.

ಕ್ವಾಹಂ ರಜಃಪ್ರಭವ ಈಶ ತಮೋಽಧಿಕೇಽಸ್ಮಿನ್
ಜಾತಃ ಸುರೇತರಕುಲೇ ಕ್ವ ತವಾನುಕಮ್ಪಾ ।
ನ ಬ್ರಹ್ಮಣೋ ನ ತು ಭವಸ್ಯ ನ ವೈ ರಮಾಯಾ
ಯನ್ಮೇಽರ್ಪಿತಃ ಶಿರಸಿ ಪದ್ಮಕರಃ ಪ್ರಸಾದಃ ॥೨೬॥

ಪ್ರಭೋ! ತಮೋಗುಣದ ಪರಮಾಧಿಕ್ಯದಿಂದ ಕೂಡಿರುವ ಅಸುರಯೋನಿಯಲ್ಲಿ ರಜೋಗುಣದಿಂದ ಕೂಡಿ ಜನಿಸಿದ ನಾನೆಲ್ಲಿ? ನಿನ್ನ ಪರಮಶ್ರೇಷ್ಠವಾದ ಅನನ್ಯರಾದ ಕೃಪೆಯೆಲ್ಲಿ? ಎಂತಹ ಧನ್ಯನು ನಾನು! ಬ್ರಹ್ಮದೇವರು, ಶಂಕರಪ್ರಭು ಮತ್ತು ಮಹಾಲಕ್ಷ್ಮಿ–ಇವರ ಶಿರಸ್ಸಿನ ಮೇಲೂ ಇರಿಸದೇ ಇದ್ದ ಸಕಲಸಂತಾಪಹರವಾದ ನಿನ್ನ ಅನುಗ್ರಹಹಸ್ತಪದ್ಮವನ್ನು ನನ್ನ ತಲೆಯ ಮೇಲೆ ಇರಿಸಿದೆಯಲ್ಲಾ!

ನೈಷಾ ಪರಾವರಮತಿರ್ಭವತೋ ನನು ಸ್ಯಾ-
ಜ್ಜನ್ತೋರ್ಯಥಾತ್ಮಸುಹೃದೋ ಜಗತಸ್ತಥಾಪಿ ।
ಸಂಸೇವಯಾ ಸುರತರೋರಿವ ತೇ ಪ್ರಸಾದಃ
ಸೇವಾನುರೂಪಮುದಯೋ ನ ಪರಾವರತ್ವಮ್ ॥೨೭॥

ನೀನು ಎಲ್ಲರಿಗೂ ಆತ್ಮನಾಗಿ ಎಲ್ಲರಿಗೂ ನಿಷ್ಕಾರಣಪ್ರೀತಿಯುಳ್ಳ ಮಿತ್ರನಾಗಿದ್ದೀಯೆ. ಆದುದರಿಂದ ನಿನಗೆ ಇತರ ಸಂಸಾರಿಜೀವಗಳಲ್ಲಿರುವಂತೆ ಮೇಲು-ಕೀಳು ಎಂಬ ಭೇದಭಾವನೆಯಿಲ್ಲ. ಆದರೂ ನೀನು ಕಲ್ಪವೃಕ್ಷದಂತೆ ಸೇವೆಮಾಡುವವರಲ್ಲಿ ತಾನೇ ಕರುಣೆ-ಅನುಗ್ರಹಗಳನ್ನು ಹರಿಸುವೆ? ತಮ್ಮ ತಮ್ಮ ಸೇವೆಗೆ ಅನುಗುಣವಾಗಿ ಅವರು ನಿನ್ನ ಅನುಗ್ರಹವನ್ನು ಸಂಪಾದಿಸುವರು. ಆ ಅನುಗ್ರಹಕ್ಕೆ ಜಾತಿ, ಕುಲ, ವಿದ್ಯೆ ಮುಂತಾದುವುಗಳಿಂದ ಬರುವ ಮೇಲು-ಕೀಳುಭಾವನೆಗಳು ಕಾರಣವಾಗುವುದಿಲ್ಲ.

ಏವಂ ಜನಂ ನಿಪತಿತಂ ಪ್ರಭವಾಹಿಕೂಪೇ
ಕಾಮಾಭಿಕಾಮಮನು ಯಃ ಪ್ರಪತನ್ಪ್ರಸಙ್ಗಾತ್ ।
ಕೃತ್ವಾತ್ಮಸಾತ್ಸುರರ್ಷಿಣಾ ಭಗವನ್ಗೃಹೀತಃ
ಸೋಽಹಂ ಕಥಂ ನು ವಿಸೃಜೇ ತವ ಭೃತ್ಯಸೇವಾಮ್ ॥

ಓ ಭಗವಂತನೇ! ಸಂಸಾರವೆಂಬುದು ಒಂದು ಕತ್ತಲೆ ತುಂಬಿರುವ ಪಾಳುಬಾವಿ. ಕಾಲವೆಂಬ ಸರ್ಪವು ಅದರಲ್ಲಿ ಬೀಳುವವರನ್ನು ಕಚ್ಚಿಹಾಕಲು ಸದಾ ಸಿದ್ಧವಾಗಿರುವುದು. ವಿಷಯಭೋಗಗಳನ್ನು ಬಯಸುವ ಜನರು ಅದರಲ್ಲಿ ಬಿದ್ದು ನರಳುವರು. ಆದರೆ, ಪ್ರಭೋ! ದೇವರ್ಷಿಗಳಾದ ನಾರದರು ನನ್ನನ್ನು ತಮ್ಮವನನ್ನಾಗಿ ಮಾಡಿಕೊಂಡು ಈ ಸಂಸಾರಕೂಪದ ಮತ್ತು ಕಾಲಸರ್ಪದ ದೆಸೆಯಿಂದ ರಕ್ಷಿಸಿಬಿಟ್ಟರು. ಹೀಗಿರುವಾಗ ನಾನು ನಿನ್ನ ಭಕ್ತಜನರ ಸೇವೆಯನ್ನು ಹೇಗೆತಾನೇ ಬಿಟ್ಟೇನು?

ಮತ್ಪ್ರಾಣರಕ್ಷಣಮನನ್ತ ಪಿತುರ್ವಧಶ್ಚ
ಮನ್ಯೇ ಸ್ವಭೃತ್ಯಋಷಿವಾಕ್ಯಮೃತಂ ವಿಧಾತುಮ್ ।
ಖಡ್ಗಂ ಪ್ರಗೃಹ್ಯ ಯದವೋಚದಸದ್ವಿಧಿತ್ಸು-
ಸ್ತ್ವಾಮೀಶ್ವರೋ ಮದಪರೋಽವತು ಕಂ ಹರಾಮಿ ॥

ಓ ಅನಂತಪ್ರಭುವೇ! ನನ್ನ ತಂದೆಯು ಅಸತ್ಕಾರ್ಯವನ್ನು ಮಾಡುವುದಕ್ಕಾಗಿ ನಡುಕಟ್ಟಿ ಕೈಯಲ್ಲಿ ಖಡ್ಗವನ್ನು ಹಿಡಿದುಕೊಂಡು 'ಎಲವೋ! ನನ್ನನ್ನು ಬಿಟ್ಟು ಬೇರೆ ದೇವರು ಇದ್ದರೆ ನಿನ್ನನ್ನು ಅವನು ಕಾಪಾಡಲಿ. ನಾನು ನಿನ್ನ ತಲೆಯನ್ನು ಕೊಚ್ಚಿಹಾಕುತ್ತೇನೆ'–ಎಂದು ಹೇಳತೊಡಗಿದಾಗ, ನೀನು ಆತನನ್ನು ಸಂಹರಿಸಿ ನನ್ನನ್ನು ಕಾಪಾಡಿದೆ. ನನ್ನನ್ನು ಕಾಪಾಡುವುದಕ್ಕಾಗಿ ಒಂದು ದೃಷ್ಟಿಯಿಂದ ನೀನು ಅವನನ್ನು ವಧಿಸಿದೆಯಾದರೂ–ಮೂಲತಃ ನೋಡಿದರೆ ನಿನ್ನ ಭೃತ್ಯರಾದ ಸನಕಾದಿ ಮಹರ್ಷಿಗಳ ಮಾತನ್ನು ಈಡೇರಿಸಿ ಸತ್ಯಗೊಳಿಸುವುದಕ್ಕಾಗಿಯೇ ಹಾಗೆ ಈತನನ್ನು ಸಂಹರಿಸಿದೆಯೆಂದು ನಾನು ಭಾವಿಸುತ್ತೇನೆ.

ಏಕಸ್ತ್ವಮೇವ ಜಗದೇತದಮುಷ್ಯ ಯತ್ತ್ವ-
ಮಾದ್ಯನ್ತಯೋಃ ಪೃಥಗವಸ್ಯಸಿ ಮಧ್ಯತಶ್ಚ ।

ಸೃಷ್ಟ್ವಾ ಗುಣವ್ಯತಿಕರಂ ನಿಜಮಾಯಯೇದಂ
ನಾನೇವ ತೈರವಸಿತಸ್ತದನುಪ್ರವಿಷ್ಟಃ ॥೩೦॥

ಸ್ವಾಮಿ! ಸಂಪೂರ್ಣಜಗತ್ತೆಲ್ಲವೂ ನೀನೊಬ್ಬನೇ ಆಗಿದ್ದೀಯೆ. ಎಲ್ಲವೂ ನಿನ್ನ ವಿಸ್ತಾರವೇ ಆಗಿದೆ. ಅದರ ಆದಿಯಲ್ಲಿಯೂ, ಅಂತ್ಯ ದಲ್ಲಿಯೂ ಮತ್ತು ಮಧ್ಯದಲ್ಲಿಯೂ ನೀನೇ ಇರುತ್ತಿದ್ದೀಯೆ. ನಿನ್ನ ಮಾಯಾ ಶಕ್ತಿಯಿಂದ ಈ ತ್ರಿಗುಣಾತ್ಮಕವಾದ ಜಗತ್ತನ್ನು ಸೃಷ್ಟಿಮಾಡಿ ಅದರಲ್ಲಿ ಒಳ ಹೊಕ್ಕು ಒಬ್ಬನೇ ಆಗಿದ್ದರೂ ನಾನಾರೂಪಗಳಲ್ಲಿರುವಂತೆ ತೋರುತ್ತಿರುವೆ.

ತ್ವಂ ವಾ ಇದಂ ಸದಸದೀಶ ಭವಾಂಸ್ತತೋಽನ್ಯೋ
ಮಾಯಾ ಯದಾತ್ಮಪರಬುದ್ಧಿರಿಯಂ ಹ್ಯಪಾರ್ಥಾ ।
ಯದ್ಯಸ್ಯ ಜನ್ಮ ನಿಧನಂ ಸ್ಥಿತಿರೀಕ್ಷಣಂ ಚ
ತದ್ವೈ ತದೇವ ವಸುಕಾಲವದಷ್ಟಿತರ್ವೋಃ ॥೩೧॥

ಸದಸದಾತ್ಮಕವಾದ ಈ ಜಗತ್ತು ಮತ್ತು ಇದಕ್ಕಿಂತಲೂ ಬೇರೆಯಾಗಿರುವ ಪರತತ್ತ್ವವೂ ಎಲ್ಲವೂ ನೀನೇ ಆಗಿರುವೆ. ಆದುದರಿಂದ ತನ್ನವನು ಮತ್ತು ಪರಕೀಯನು ಎಂದು ಭೇದವನ್ನೆಣಿಸುವುದು–ಅನರ್ಥವಾದ ಮಾಯೆಯ ಪ್ರಭಾವದಿಂದ. ಮೂಲದೃಷ್ಟಿಯಿಂದ ನೋಡಿದಾಗ ನೀನು ನಿನ್ನ ಸೃಷ್ಟಿಯಿಂದ ಬೇರೆಯೇನೂ ಅಲ್ಲ. ಬೀಜ-ವೃಕ್ಷಗಳಿಗೆ ಹೇಗೆ ಭೇದವಿಲ್ಲವೋ ಹಾಗೆಯೇ ನಿನಗೂ ಜಗತ್ತಿಗೂ ಭೇದವಿಲ್ಲ. ಯಾವುದರಿಂದ ಯಾವುದಕ್ಕೆ ಸೃಷ್ಟಿ-ಸ್ಥಿತಿ-ಲಯ ಮತ್ತು ಪ್ರಕಾಶಗಳುಂಟಾಗುತ್ತವೆಯೋ–ಅದನ್ನು 'ಅದು' ಎಂದೇ ಕರೆಯಬೇಕು. (ಈ ಸದಸದಾತ್ಮಕವಾದ ಜಗತ್ತನ್ನು ಸೃಷ್ಟಿಸಿದವನು ನೀನೇ. ರಕ್ಷಿಸುವವನೂ ನೀನೇ. ಲಯಗೊಳಿಸುವವನೂ ನೀನೇ ಮತ್ತು ಅದಕ್ಕೆ ಪ್ರಕಾಶನೀಡುತ್ತಿರುವವನೂ ನೀನೇ ಆಗಿರುವುದರಿಂದ ಈ ಜಗತ್ತೆಲ್ಲವೂ ನೀನೇ.)

ನ್ಯಸ್ಯೇದಮಾತ್ಮನಿ ಜಗದ್ವಿಲಯಾಮ್ಬುಮಧ್ಯೇ
ಶೇಷೇಽತ್ಮನಾ ನಿಜಸುಖಾನುಭವೋ ನಿರೀಹಃ ।
ಯೋಗೇನ ಮೀಲಿತದೃಗಾತ್ಮನಿಪೀತನಿದ್ರ–
ಸ್ತುರ್ಯೇ ಸ್ಥಿತೋ ನ ತು ತಮೋ ನ ಗುಣಾಂಶ್ಚಯುಂಕ್ಷೇ ॥

ಓ ಭಗವಂತನೇ! ನೀನು ಈ ಇಡೀ ವಿಶ್ವವನ್ನು ನಿನ್ನಲ್ಲಿಯೇ ಸೇರಿಸಿಕೊಂಡು ಆತ್ಮಸುಖವನ್ನನುಭವಿಸುತ್ತಾ ಯಾವ ವ್ಯಾಪಾರವೂ ಇಲ್ಲದೇ ಪ್ರಳಯಜಲದ ಮಧ್ಯದಲ್ಲಿ ಪವಡಿಸುವೆ. ಆಗ ನೀನು ನಿನ್ನ ಸ್ವತಃಸಿದ್ಧವಾದ ಯೋಗದಿಂದ ಹೊರಗಣ್ಣುಗಳನ್ನು ಮುಚ್ಚಿಕೊಂಡು ನಿನ್ನ ಸ್ವರೂಪಪ್ರಕಾಶ ದಲ್ಲಿ ನಿದ್ರೆಯನ್ನು ಲಯಗೊಳಿಸಿ ತುರೀಯವಾದ ಪರಬ್ರಹ್ಮಪದದಲ್ಲಿ ನೆಲೆಸಿರುವೆ. ಆ ಸಮಯದಲ್ಲಿ ನೀನು ತಮೋಗುಣದಿಂದ ಕೂಡಿರುವುದಿಲ್ಲ. ವಿಷಯಗಳನ್ನು ಸ್ವೀಕರಿಸುವುದಿಲ್ಲ. **'ತುರ್ಯೇ ಸ್ಥಿತೋ ನ ತು ತಮೋ ನ ಗುಣಾಂಶ್ಚ ಯುಂಕ್ಷೇ'**

ತಸ್ಯೈವ ತೇ ವಪುರಿದಂ ನಿಜಕಾಲಶಕ್ತ್ಯಾ
ಸಂಚೋದಿತಪ್ರಕೃತಿಧರ್ಮಣ ಆತ್ಮಗೂಢಮ್ ।
ಅಮ್ಭಸ್ಯನನ್ತಶಯನಾದ್ವಿರಮತ್ಸಮಾಧೇ-
ರ್ನಾಭೇರಭೂತ್ಸ್ವಕಣಿಕಾವಟವನ್ಮಹಾಬ್ಜಮ್ ॥೩೩॥

ನೀನು ನಿನ್ನ ಕಾಲಶಕ್ತಿಯಿಂದ ಪ್ರಕೃತಿಯ ಗುಣಗಳನ್ನು ಪ್ರೇರಿಸುವುದ ರಿಂದ ಈ ಇಡೀ ಬ್ರಹ್ಮಾಂಡವು ನಿನ್ನ ಶರೀರವೇ ಆಗಿದೆ. ಸೃಷ್ಟಿಗೆ ಮೊದಲು ಇದು ನಿನ್ನಲ್ಲಿ ಲಯಗೊಂಡಿತ್ತು. ಪ್ರಳಯಜಲದಲ್ಲಿ ಶೇಷಶಯನದ ಮೇಲೆ ಪವಡಿಸಿದ ನೀನು ಯೋಗನಿದ್ರಾಸಮಾಧಿಯನ್ನು ಬಿಟ್ಟಾಗ ಆಲದ ಬೀಜ ದಿಂದ ವಿಶಾಲವಾದ ಆಲದಮರವು ಹೊರಬರುವಂತೆ ನಿನ್ನ ಹೊಕ್ಕಳಿನಿಂದ ಬ್ರಹ್ಮಾಂಡಕಮಲವು ಹುಟ್ಟಿಕೊಂಡಿತು.

ತತ್ಸಮ್ಭವಃ ಕವಿರತೋಽನ್ಯದಪಶ್ಯಮಾನ-
ಸ್ತ್ವಾಂ ಬೀಜಮಾತ್ಮನಿ ತತಂ ಸ್ವಬಹಿರ್ವಿಚಿನ್ತ್ಯ ।
ನಾವಿನ್ದದಬ್ದಶತಮಪ್ಸು ನಿಮಜ್ಜಮಾನೋ
ಜಾತೇಽಙ್ಕುರೇ ಕಥಮು ಹೋಪಲಭೇತ ಬೀಜಮ್ ॥

ಅದರಲ್ಲಿ ಸೂಕ್ಷ್ಮವೂ ವ್ಯಾಪಕವೂ ಆದ ಜ್ಞಾನವುಳ್ಳ ಕವಿಯಾದ ಬ್ರಹ್ಮದೇವರು ಪ್ರಕಟಗೊಂಡರು. ಆಗ ಅವರಿಗೆ ಆ ಕಮಲದ ಹೊರತು ಬೇರೇನೂ ಕಾಣಿಸಲಿಲ್ಲ. ತಮ್ಮಲ್ಲಿಯೇ ಬೀಜರೂಪದಿಂದ ವ್ಯಾಪಕನಾಗಿದ್ದ ನಿನ್ನನ್ನು ಅವರು ತಿಳಿಯದೇ ಹೋದರು. ನಿನ್ನನ್ನು ತಮ್ಮಿಂದ ಹೊರಗಿನ

ವನು ಎಂದು ಭಾವಿಸಿ ಪ್ರಳಯಜಲದೊಳಗೆ ಮುಳುಗಿ ನೂರು ವರ್ಷಗಳ ಕಾಲ ನಿನ್ನನ್ನು ಹುಡುಕುತ್ತಿದ್ದರು. ಆಗ ಅವರಿಗೆ ಏನೂ ಸಿಕ್ಕಲಿಲ್ಲ. ಹೇಗೆ ತಾನೇ ಸಿಕ್ಕೀತು? ಬೀಜವು ಮೊಳಕೆಯಾಗಿ ಬೆಳೆದುಬಿಟ್ಟ ಬಳಿಕ ಅದರಲ್ಲಿ ವ್ಯಾಪಿಸಿಕೊಂಡಿರುವ ಬೀಜವನ್ನು ಆ ಮೊಳಕೆಯಿಂದ ಹೊರಗಿನ ವಸ್ತುವಿ ನಂತೆ ಪ್ರತ್ಯೇಕವಾಗಿ ನೋಡಲು ಹೇಗೆ ಸಾಧ್ಯವಾದೀತು?

ಸ ತ್ವಾತ್ಮಯೋನಿರತಿವಿಸ್ಮಿತ ಆಸ್ಥಿತೋಽಬ್ಜಂ
ಕಾಲೇನ ತೀವ್ರತಪಸಾ ಪರಿಶುದ್ಧಭಾವಃ ।
ತ್ವಾಮಾತ್ಮನೀಶ ಭುವಿ ಗನ್ಧಮಿವಾತಿಸೂಕ್ಷ್ಮಂ
ಭೂತೇನ್ದ್ರಿಯಾಶಯಮಯೇ ವಿತತಂ ದದರ್ಶ ॥೩೫॥

ಆಗ ಬ್ರಹ್ಮದೇವರಿಗ ತುಂಬಾ ಆಶ್ಚರ್ಯವಾಯಿತು. ಸೋತು ಸಪ್ಪೆಯಾದರು. ಅವರು ಮತ್ತೆ ಕಮಲದ ಮೇಲೆ ಬಂದು ಕುಳಿತುಕೊಂಡು ಬಿಟ್ಟರು. ಬಹಳ ಕಾಲ ಕಳೆದ ಬಳಿಕ ತೀವ್ರವಾದ ತಪಸ್ಸನ್ನು ಆಚರಿಸಿ ದುದರಿಂದ ಅವರ ಹೃದಯವು ಶುದ್ಧವಾಯಿತು. ಆಗ ಅವರಿಗೆ ಭೂತ, ಇಂದ್ರಿಯ ಮತ್ತು ಅಂತಃಕರಣರೂಪವಾದ ತಮ್ಮ ದೇಹದೊಳಗೇ ಹಾಸು-ಹೊಕ್ಕಾಗಿ ತುಂಬಿಕೊಂಡಿದ್ದ ನಿನ್ನ ಸೂಕ್ಷ್ಮರೂಪದ ಸಾಕ್ಷಾತ್ಕಾರವಾಯಿತು. ಪೃಥಿವಿಯಲ್ಲಿ ವ್ಯಾಪಿಸಿಕೊಂಡಿರುವ ಅದರ ಅತಿಸೂಕ್ಷ್ಮವಾದ ತನ್ಮಾತ್ರೆಯಾದ ಗಂಧವನ್ನು ತಿಳಿಯುವಂತೆಯೇ ತಮ್ಮಲ್ಲಿ ವ್ಯಾಪಿಸಿಕೊಂಡಿದ್ದ ಸೂಕ್ಷ್ಮತಮರೂಪಿಯಾದ ನಿನ್ನನ್ನು ಅವರು ಕಂಡುಕೊಂಡರು.

ಏವಂ ಸಹಸ್ರವದನಾಙ್ಘ್ರಿಶಿರಃಕರೋರು-
ನಾಸಾಸ್ಯಕರ್ಣನಯನಾಭರಣಾಯುಧಾಢ್ಯಮ್ ।
ಮಾಯಾಮಯಂ ಸದುಪಲಕ್ಷಿತಸನ್ನಿವೇಶಂ
ದೃಷ್ಟ್ವಾ ಮಹಾಪುರುಷಮಾಪ ಮುದಂ ವಿರಿಞ್ಚಃ ॥೩೬॥

ನಿನ್ನ ಲೀಲಾಮಯಮೂರ್ತಿಯಾದ ವಿರಾಟ್‌ಪುರುಷರೂಪದ ಸಾಕ್ಷಾತ್ಕಾರವೂ ಅವರಿಗೆ ಆಯಿತು. ಸಾವಿರಾರು ಮುಖಗಳು, ಸಾವಿರಾರು ತಲೆಗಳು, ಸಾವಿರಾರು ಕಿವಿ-ಕಣ್ಣು-ಮೂಗು-ಬಾಯಿಗಳು, ಸಾವಿರಾರು ಕೈ-ಕಾಲುಗಳು ಮತ್ತು ಸಾವಿರಾರು ಭೂಷಣಾಯುಧಗಳಿಂದ ಕೂಡಿ

ಹದಿನಾಲ್ಕು ಲೋಕಗಳನ್ನೂ ತನ್ನ ಅಂಗಾಂಗಗಳ ರೂಪದಲ್ಲಿ ಹೊಂದಿದ್ದ ಅದ್ಭುತವಾದ ರೂಪವದು. ಮಹಾಪುರುಷನಾದ ನಿನ್ನ ಆ ರೂಪವನ್ನು ನೋಡಿ ಬ್ರಹ್ಮದೇವರಿಗೆ ತುಂಬಾ ಆನಂದವುಂಟಾಯಿತು.

ತಸ್ಮೈ ಭವಾನ್ಹಯಶಿರಸ್ತನುವಂ ಚ ಬಿಭ್ರ-
ದ್ವೇದದ್ರುಹಾವತಿಬಲೌ ಮಧುಕೈಟಭಾಖ್ಯೌ ।
ಹತ್ವಾನಯಚ್ಛ್ರುತಿಗಣಾಂಸ್ತು ರಜಸ್ತಮಶ್ಚ
ಸತ್ತ್ವಂ ತವ ಪ್ರಿಯತಮಾಂ ತನುಮಾಮನನ್ತಿ ॥೩೭॥

ಆದರೆ ಆಗ ಅವರಿಗೆ ಒಂದು ಕಷ್ಟದ ಪ್ರಸಂಗ ಒದಗಿತು. ರಜೋಗುಣ ಮತ್ತು ತಮೋಗುಣರೂಪರಾದ ಮಧು ಮತ್ತು ಕೈಟಭರೆಂಬ ಮಹಾ ಬಲಶಾಲಿಗಳಾದ ಇಬ್ಬರು ದೈತ್ಯರು ಬ್ರಹ್ಮದೇವರ ಕಣ್ಣೆನಂತಿದ್ದ ವೇದಗಳನ್ನು ಅಪಹರಿಸಿಕೊಂಡು ಹೋಗಿಬಿಟ್ಟರು. ಆಗ ನೀನು ಹಯಗ್ರೀವದೇವರ ರೂಪದಲ್ಲಿ ಅವತರಿಸಿ ಆ ಆದಿದೈತ್ಯರಿಬ್ಬರನ್ನೂ ಸಂಹಾರಮಾಡಿ ಬ್ರಹ್ಮ ದೇವರಿಗೆ ವೇದಗಳನ್ನು ಹಿಂದಿರುಗಿಸಿದೆ. ಹೀಗೆ ರಜೋಗುಣ-ತಮೋಗುಣಗಳನ್ನು ನಿಗ್ರಹಿಸಿದ ಸತ್ತ್ವವೇ ನಿನಗೆ ಪ್ರಿಯವಾದ ದೇಹವೆಂದು ಜ್ಞಾನಿಗಳು ಹೇಳುತ್ತಾರೆ.

ಇತ್ಥಂ ನೃತಿರ್ಯಗೃಷಿದೇವಝಷಾವತಾರೈ-
ರ್ಲೋಕಾನ್ವಿಭಾವಯಸಿ ಹಂಸಿ ಜಗತ್ಪ್ರತೀಪಾನ್ ।
ಧರ್ಮಂ ಮಹಾಪುರುಷ ಪಾಸಿ ಯುಗಾನುವೃತ್ತಂ
ಛನ್ನಃ ಕಲೌ ಯದಭವಸ್ತ್ರಿಯುಗೋಽಥ ಸ ತ್ವಮ್ ॥

ಎಲೈ ಮಹಾಪುರುಷನೇ! ಹೀಗೆ ನೀನು ಮನುಷ್ಯರೂಪ, ಪಶು-ಪಕ್ಷಿಗಳ ರೂಪ, ಋಷಿರೂಪ, ದೇವತಾರೂಪ, ಮತ್ಸ್ಯರೂಪಗಳೇ ಮುಂತಾದ ನಾನಾರೂಪಗಳಲ್ಲಿ ಅವತಾರಮಾಡಿ ಲೋಕಗಳನ್ನು ರಕ್ಷಿಸುವೆ ಮತ್ತು ಜಗತ್ತಿಗೆ ದ್ರೋಹಮಾಡುವವರನ್ನು ನಿಗ್ರಹಿಸುವೆ. ಆ ಅವತಾರಗಳ ಮೂಲಕ ನೀನು ಪ್ರತಿಯುಗದಲ್ಲಿಯೂ ಅವರವರ ಧರ್ಮವನ್ನು ರಕ್ಷಿಸು ತ್ತೀಯೆ. ಹೀಗೆ ಮೂರು ಯುಗಗಳಲ್ಲಿಯೂ ಪ್ರಕಟಗೊಂಡು ಕಲಿಯುಗ

ದಲ್ಲಿ ಮಾತ್ರ ಮರೆಸಿಕೊಂಡಿರುವುದರಿಂದ ನಿನ್ನನ್ನು 'ತ್ರಿಯುಗ'ನೆಂದೂ ಕರೆಯುತ್ತಾರೆ.

ನೈತನ್ಮನಸ್ತವ ಕಥಾಸು ವಿಕುಣ್ಠನಾಥ
ಸಮ್ಪ್ರೀಯತೇ ದುರಿತದುಷ್ಟಮಸಾಧು ತೀವ್ರಮ್ ।
ಕಾಮಾತುರಂ ಹರ್ಷಶೋಕಭಯೈಷಣಾರ್ತಂ
ತಸ್ಮಿನ್ಕಥಂ ತವ ಗತಿಂ ವಿಮೃಶಾಮಿ ದೀನಃ ॥೩೯॥

ಸ್ವಾಮಿ! ವೈಕುಂಠಪತಿಯೇ! ನನ್ನ ಈ ಮನಸ್ಸು ನಿನ್ನ ಕಥೆಗಳನ್ನು ಕೇಳಿ ರಸಾನುಭವವನ್ನು ಮಾಡುತ್ತಿಲ್ಲ. ಪಾಪವಾಸನೆಗಳಿಂದ ಕಲುಷ ಗೊಂಡಿದೆ. ದುಷ್ಟತನದಿಂದ ತುಂಬಿದೆ. ಸಾಮಾನ್ಯವಾಗಿ ಕಾಮಾತುರ ವಾಗಿಯೇ ಇದ್ದು ಸುಖ, ದುಃಖ, ಭಯ, ಇಹಲೋಕ-ಪರಲೋಕ, ಹಣ, ಹೆಂಡತಿ, ಮಕ್ಕಳು–ಮುಂತಾದ ಚಿಂತೆಗಳಲ್ಲಿಯೇ ಮುಳುಗಿ ಕಳವಳಪಡು ತ್ತಿದೆ. ದೀನನಾಗಿರುವ ನಾನು ಇಂತಹ ದುಷ್ಟ, ಪಾಪಿಷ್ಠ ಮತ್ತು ಕಾಮಾಂಧ ವಾಗಿರುವ ನನ್ನ ಮನಸ್ಸಿನಿಂದ ನಿನ್ನ ಸ್ವರೂಪವನ್ನು ಹೇಗೆ ಚಿಂತಿಸಲಾದೀತು?

ಜಿಹ್ವೈಕತೋಽಚ್ಯುತ ವಿಕರ್ಷತಿ ಮಾವಿತೃಪ್ತಾ
ಶಿಶ್ನೋಽನ್ಯತಸ್ತ್ವಗುದರಂ ಶ್ರವಣಂ ಕುತಶ್ಚಿತ್ ।
ಘ್ರಾಣೋಽನ್ಯತಶ್ಚಪಲದೃಕ್ಕ್ವ ಚ ಕರ್ಮಶಕ್ತಿ-
ರ್ಬಹ್ವ್ಯಃ ಸಪತ್ನ್ಯ ಇವ ಗೇಹಪತಿಂ ಲುನನ್ತಿ ॥೪೦॥

ಓ ಅಚ್ಯುತ! ಎಂದೆಂದಿಗೂ ತೃಪ್ತಿಹೊಂದದೇ ಇರುವ ಈ ನಾಲಿಗೆ ನನ್ನನ್ನು ಒಂದು ಕಡೆಗೆ (ರಸ ಮತ್ತು ಮಾತುಗಳ ಕಡೆಗೆ) ಎಳೆಯುತ್ತಿದ್ದು ಜನನೇಂದ್ರಿಯವು ಮತ್ತೊಂದು ಕಡೆಗೆ ಸೆಳೆಯುತ್ತಿದೆ. ಹಾಗೆಯೇ ಚರ್ಮ, ಹೊಟ್ಟೆ, ಕಿವಿ–ಮುಂತಾದುವು ಇನ್ನೊಂದು ಕಡೆಗೆ ಸೆಳೆಯುತ್ತಿವೆ. ಮೂಗು ಒಂದು ಕಡೆಗೂ, ಚಪಲವಾದ ಕಣ್ಣು ಬೇರೊಂದು ಕಡೆಗೂ ಎಳೆದುಕೊಂಡು ಹೋಗುತ್ತಿವೆ. ಹೀಗಿರುವಾಗ ನಿನ್ನ ಕರ್ಮಗಳನ್ನು ಮಾಡುವ ಶಕ್ತಿ ನನಗೆ ಎಲ್ಲಿಂದ ಬರಬೇಕು? ಗೃಹಸ್ಥನಾದ ಪತಿಯನ್ನು ಆತನ ಬಹುಮಂದಿ ಹೆಂಡಿರು ತಮ್ಮ ತಮ್ಮ ಕಡೆಗೆ ಬರಬೇಕೆಂದು ಕಿತ್ತಾಡುವಂತೆ–ಈ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳು ನನ್ನನ್ನು ಕಿತ್ತಾಡುತ್ತಿವೆ. ಸ್ವಾಮಿ! '**ಬಹ್ವ್ಯಃ ಸಪತ್ನ್ಯ ಇವ ಗೇಹಪತಿಂ ಲುನನ್ತಿ**'

ಏವಂ ಸ್ವಕರ್ಮಪತಿತಂ ಭವವೈತರಣ್ಯಾ-
ಮನ್ಯೋನ್ಯಜನ್ಮಮರಣಾಶನಭೀತಭೀತಮ್ ।
ಪಶ್ಯಞ್ಜನಂ ಸ್ವಪರವಿಗ್ರಹವೈರಮೈತ್ರಂ
ಹನ್ತೇತಿ ಪಾರಚರ ಪೀಪೃಹಿ ಮೂಢಮದ್ಯ ॥೪೧॥

ಹೀಗೆ ಈ ಜೀವನು ತನ್ನ ಕರ್ಮಗಳಲ್ಲಿ ಸಿಕ್ಕಿಹಾಕಿಕೊಂಡು ಸಂಸಾರ ವೆಂಬ ವೈತರಣೀನದಿಯಲ್ಲಿ ಬಿದ್ದು ತೊಳಲುತ್ತಿದ್ದಾನೆ. ಹುಟ್ಟಿದನಂತರ ಸಾವು, ಸಾವಿನನಂತರ ಹುಟ್ಟು-ಎಂಬ ಇವೆರಡರ ಮೂಲಕ ಕರ್ಮಗಳನ್ನು ಭೋಗಿಸಿ ಭೋಗಿಸಿ ಭಯಭೀತನಾಗಿಬಿಟ್ಟಿದ್ದಾನೆ. ಈತನು ತನ್ನವನು, ಈತನು ಪರಕೀಯನು–ಎಂಬ ಭೇದಭಾವನೆಯಿಂದ ಕೂಡಿ ಕೆಲವರೊಡನೆ ವೈರವನ್ನು ಸಾಧಿಸುತ್ತಾನೆ. ಈ ಮೂಢವಾದ ಜೀವಿಗಳ ವಿಷಯದಲ್ಲಿ ನೀನು ಕರುಣೆಯಿಂದ ಕರಗಬೇಕು. ಸ್ವಾಮಿ! ಸಂಸಾರವೆಂಬ ಸಮುದ್ರದ ಪಾರ ದಲ್ಲಿಯೇ ಸದಾ ಇರುವವನು ನೀನು. ಈ ಪ್ರಾಣಿಗಳನ್ನೂ ಅಲ್ಲಿಗೆ ದಾಟಿಸು.

ಕೋ ನ್ವತ್ರ ತೇಽಖಿಲಗುರೋ ಭಗವನ್ಪ್ರಯಾಸ
ಉತ್ತಾರಣೇಽಸ್ಯ ಭವಸಮ್ಭವಲೋಪಹೇತೋಃ ।
ಮೂಢೇಷು ವೈ ಮಹದನುಗ್ರಹ ಆರ್ತಬನ್ಧೋ
ಕಿಂ ತೇನ ತೇ ಪ್ರಿಯಜನಾನನುಸೇವತಾಂ ನಃ ॥೪೨॥

ಎಲೈ ಜಗದ್ಗುರುವೇ! ನೀನು ಈ ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ರಕ್ಷಣೆಗಳನ್ನು ಮಾಡುತ್ತಿರುವ ಪ್ರಭು. ಇಂತಹ ನಿನಗೆ ಈ ಜೀವಗಳನ್ನು ಭವಸಾಗರದಿಂದ ದಾಟಿಸುವುದರಲ್ಲಿ ಪ್ರಯಾಸವೇನು? ಎಲೈ ದೀನಜನ ಬಂಧುವೇ! ದಾರಿಗಾಣದೇ ಅಲೆದಾಡುತ್ತಿರುವ ಮೂಢಜನರು ತಾನೇ ಮಹಾಪುರುಷರ ಅನುಗ್ರಹಕ್ಕೆ ವಿಶೇಷವಾಗಿ ಪಾತ್ರರಾಗಬೇಕು! ನಮಗೆ ಅದರ ಆವಶ್ಯಕತೆಯೇನೂ ಇಲ್ಲ. ಏಕೆಂದರೆ : ನಮ್ಮ ದಾರಿ ಸರಿಯಾಗಿದೆ. ನಿನಗೆ ಪ್ರಿಯವಾದ ಭಕ್ತಜನರ ಸೇವೆಯಲ್ಲಿ ನಾವು ತೊಡಗಿರುವುದರಿಂದ ನಮಗೆ ಎಂದಿಗೂ ಚಿಂತೆಗೆ ಅವಕಾಶವಿಲ್ಲ.

ನೈವೋದ್ವಿಜೇ ಪರ ದುರತ್ಯಯವೈತರಣ್ಯಾ-
ಸ್ತ್ವದ್ವೀರ್ಯಗಾಯನಮಹಾಮೃತಮಗ್ನಚಿತ್ತಃ ।

ಶೋಚೇ ತತೋ ವಿಮುಖಚೇತಸ ಇನ್ದ್ರಿಯಾರ್ಥ
ಮಾಯಾಸುಖಾಯ ಭರಮುದ್ವಹತೋ ವಿಮೂಢಾನ್ ॥

ಎಲೈ ಪರಮಾತ್ಮನೇ! ಈ ಸಂಸಾರವೆಂಬ ವೈತರಣೀನದಿಯನ್ನು ದಾಟುವುದು ಇತರರಿಗೆ ನಿಜವಾಗಿಯೂ ಕಷ್ಟವೇ. ಆದರೆ ನಾನು ಇದಕ್ಕೆ ಸ್ವಲ್ಪವೂ ಭಯಪಡುವುದಿಲ್ಲ. ನನ್ನ ಚಿತ್ತವು ಈ ವೈತರಣಿಯನ್ನು ಕುರಿತು ಚಿಂತಿಸುವುದಿಲ್ಲ. ಏಕೆಂದರೆ : ಅದು ಸ್ವರ್ಗದ ಅಮೃತವನ್ನು ತಿರಸ್ಕಾರ ಮಾಡುವ ಪರಮಾಮೃತಸ್ವರೂಪವಾದ ನಿನ್ನ ದಿವ್ಯಲೀಲೆಗಳನ್ನು ಚಿಂತಿಸುವುದರಲ್ಲಿಯೇ ಸದಾ ಆಸಕ್ತವಾಗಿರುವುದು. ಆದರೆ ನಿನಗೆ ವಿಮುಖರಾಗಿ, ಇಂದ್ರಿಯಗಳು ಕೊಡುವ ಮಾಯಾಮಯವಾದ ಸುಖವನ್ನು ಪಡೆಯುವುದಕ್ಕೋಸ್ಕರ ತಮ್ಮ ತಲೆಯ ಮೇಲೆ ಇಡೀ ಜಗತ್ತಿನ ಭಾರವನ್ನು ಹೊರುತ್ತಿರುವ ಮೂಢಪ್ರಾಣಿಗಳನ್ನು ನೋಡಿದರೆ ನನಗೆ 'ಅಯ್ಯೋ!' ಅನ್ನಿಸುತ್ತದೆ. ಅವುಗಳಿಗಾಗಿ ನಾನು ಶೋಕಪಡುತ್ತಿದ್ದೇನೆ.

ಪ್ರಾಯೇಣ ದೇವ ಮುನಯಃ ಸ್ವವಿಮುಕ್ತಿಕಾಮಾ
ಮೌನಂ ಚರನ್ತಿ ವಿಜನೇ ನ ಪರಾರ್ಥನಿಷ್ಠಾಃ ।
ನೈತಾನ್ವಿಹಾಯ ಕೃಪಣಾನ್ವಿಮುಮುಕ್ಷ ಏಕೋ
ನಾನ್ಯಂ ತ್ವದಸ್ಯ ಶರಣಂ ಭ್ರಮತೋಽನುಪಶ್ಯೇ ॥೪೪॥

ಪ್ರಭುವೇ! ದೊಡ್ಡ ದೊಡ್ಡ ಋಷಿ-ಮುನಿಗಳಾದರೋ ಸಾಮಾನ್ಯ ವಾಗಿ ತಮ್ಮ ಮುಕ್ತಿಗೋಸ್ಕರ ನಿರ್ಜನವಾದ ಅರಣ್ಯಕ್ಕೆ ಹೋಗಿ ಅಲ್ಲಿ ಮೌನವ್ರತವನ್ನು ಅವಲಂಬಿಸುತ್ತಾರೆ. ಇತರರ ಒಳ್ಳೆಯದಕ್ಕಾಗಿ ಯಾವ ಪ್ರಯತ್ನವನ್ನೂ ಅವರು ಮಾಡುವುದಿಲ್ಲ. ಆದರೆ ನನ್ನ ಸ್ಥಿತಿಯೇ ಬೇರೆ. ನಾನು ದಾರಿತಪ್ಪಿರುವ ಈ ಬಡಪಾಯಿಗಳನ್ನು ಬಿಟ್ಟು ಒಬ್ಬಂಟಿಕನಾಗಿಯೇ ಮುಕ್ತಿಹೊಂದಲು ಬಯಸುವುದಿಲ್ಲ. ಹೀಗೆ ಅಲೆದಾಡುತ್ತಿರುವ ಈ ಪ್ರಾಣಿಗಳಿಗೆ ನಿನ್ನ ಹೊರತಾಗಿ ಬೇರೆ ಯಾವ ರಕ್ಷಕರೂ ನನಗೆ ಕಂಡು ಬರುತ್ತಿಲ್ಲ.

ಯನ್ಮೈಥುನಾದಿ ಗೃಹಮೇಧಿಸುಖಂ ಹಿ ತುಚ್ಛಂ
ಕಣ್ಡೂಯನೇನ ಕರಯೋರಿವ ದುಃಖದುಃಖಮ್ ।

ತೃಪ್ಯನ್ತಿ ನೇಹ ಕೃಪಣಾ ಬಹುದುಃಖಭಾಜಃ
ಕಣ್ಡೂತಿವನ್ಮನಸಿಜಂ ವಿಷಹೇತ ಧೀರಃ ॥೪೫॥

ಗೃಹಸ್ಥರಿಗೆ ಸಿಕ್ಕುವ ಮೈಥುನಸುಖವೇ ಮುಂತಾದುವು ಅತ್ಯಂತ ತುಚ್ಛ ಮತ್ತು ದುಃಖಕರವಾದುವು. ಅದು ನವೆಯನ್ನು ಹೋಗಲಾಡಿಸಿಕೊಳ್ಳಲು ಎರಡು ಕೈಗಳಿಂದ ಮೈ ಕೆರೆದುಕೊಳ್ಳುವ ಸುಖಕ್ಕೆ ಸಮವಾಗಿದೆ. ಮೊದಲು ಸ್ವಲ್ಪ ಸುಖವಾಗಿ ಕಂಡರೂ ಅನಂತರ ಮಹಾದುಃಖರೂಪವೇ ಆಗುವುದು. ಆದರೆ ದುರದೃಷ್ಟವೇನೆಂದರೆ : ಈ ತಪ್ಪುದಾರಿಗೆ ಬಿದ್ದ ಬಡಪಾಯಿಗಳು ಬಹಳ ದುಃಖವನ್ನು ಅನುಭವಿಸಿದರೂ ಈ ವಿಷಯಸುಖಗಳನ್ನು ಸಾಕೆಂದು ಬಿಡುವುದಿಲ್ಲ. ಧೀರಪುರುಷರಾದರೋ ತುರಿಕೆಯ ನವೆಯನ್ನು ಸಹಿಸಿಕೊಳ್ಳುವಂತೆ–ಈ ಕಾಮಾದಿವೇಗಗಳನ್ನು ಸಹಿಸಿಕೊಳ್ಳುವರು. ಹಾಗೆ ಸಹಿಸಿಕೊಂಡರೆ ಅದು ನಾಶಹೊಂದುವುದು.

ಮೌನವ್ರತಶ್ರುತತಪೋಽಧ್ಯಯನಸ್ವಧರ್ಮ-
ವ್ಯಾಖ್ಯಾರಹೋಜಪಸಮಾಧಯ ಆಪವರ್ಗ್ಯಾಃ ।
ಪ್ರಾಯಃ ಪರಂ ಪುರುಷ ತೇ ತ್ವಜಿತೇನ್ದ್ರಿಯಾಣಾಂ
ವಾರ್ತಾ ಭವನ್ತ್ಯುತ ನ ವಾತ್ರ ತು ದಾಮ್ಭಿಕಾನಾಮ್ ॥

ಎಲೈ ಪುರುಷೋತ್ತಮನೇ! ಮೌನ, ಬ್ರಹ್ಮಚರ್ಯ, ಶಾಸ್ತ್ರಶ್ರವಣ, ತಪಸ್ಸು, ಅಧ್ಯಯನ, ಸ್ವಧರ್ಮಪಾಲನೆ, ಯುಕ್ತಿಪೂರ್ವಕವಾಗಿ ಶಾಸ್ತ್ರಗಳಿಗೆ ವ್ಯಾಖ್ಯಾನಮಾಡುವುದು, ಏಕಾಂತಸೇವನೆ, ಜಪ ಮತ್ತು ಸಮಾಧಿ ಎಂಬೀ ಹತ್ತೂ ಮೋಕ್ಷಕ್ಕೆ ಸಾಧನಗಳೆಂದು ಪ್ರಸಿದ್ಧವಾಗಿವೆ. ಆದರೆ ಯಾವನಿಗೆ ಇಂದ್ರಿಯಗಳು ಹತೋಟಿಯಲ್ಲಿರುವುದಿಲ್ಲವೋ–ಆತನಿಗೆ ಇವು ಸಾಮಾನ್ಯವಾಗಿ ಕೃಷಿ, ವ್ಯಾಪಾರ ಮುಂತಾದುವುಗಳಂತೆ ಜೀವನನಡೆಸುವ ವೃತ್ತಿಗಳು ಮಾತ್ರವೇ ಆಗಿಬಿಡುವುವು. ದಾಂಭಿಕರಿಗಾದರೋ ಅವರ ಮೋಸವು ಬಯಲಾಗುವವರೆಗೂ ಜೀವನೋಪಾಯಗಳಾಗಿದ್ದು ಅನಂತರ ಯಾವ ಪ್ರಯೋಜನಕ್ಕೂ ಬರದೇ ಹೋಗುವುವು.

ರೂಪೇ ಇಮೇ ಸದಸತೀ ತವ ವೇದಸೃಷ್ಟೇ
ಬೀಜಾಙ್ಕುರಾವಿವ ನ ಚಾನ್ಯದರೂಪಕಸ್ಯ ।

ಯುಕ್ತಾಃ ಸಮಕ್ಷಮುಭಯತ್ರ ವಿಚಿನ್ವತೇ ತ್ವಾಂ
ಯೋಗೇನ ವಹ್ನಿಮಿವ ದಾರುಷು ನಾನ್ಯತಃ ಸ್ಯಾತ್ ॥

ನಿನಗೆ ಬೀಜ ಮತ್ತು ಅದರ ಮೊಳಕೆಗಳಂತೆ ಸತ್, ಅಸತ್ (ವ್ಯಕ್ತ-ಅವ್ಯಕ್ತ ಅಥವಾ ಕಾರ್ಯ-ಕಾರಣ) ಎಂಬ ಎರಡು ರೂಪಗಳುಂಟೆಂದು ವೇದಗಳು ಹೇಳುತ್ತವೆ. ವಾಸ್ತವವಾಗಿ ನಿನಗೆ ಯಾವ (ಪ್ರಾಕೃತ) ರೂಪವೂ ಇಲ್ಲ. ಆದರೆ ನಿನ್ನ ಜ್ಞಾನವನ್ನು ಪಡೆಯುವುದಕ್ಕೆ ಈ ಕಾರ್ಯ-ಕಾರಣ ರೂಪಗಳನ್ನು ಬಿಟ್ಟು ಬೇರಾವ ಸಾಧನವೂ ಇಲ್ಲ. ಕಟ್ಟಿಗೆಗಳನ್ನು ಕಡೆದು ಬೆಂಕಿಯನ್ನು ಪಡೆಯುವಂತೆ–ಯೋಗಿಗಳು ಭಕ್ತಿಯೋಗದಿಂದ ಈ ಸತ್ ಮತ್ತು ಅಸತ್ ಎರಡರಲ್ಲಿಯೂ ನಿನ್ನನ್ನು ಹುಡುಕಿ ಪಡೆಯುತ್ತಾರೆ. ಏಕೆಂದರೆ: ವಾಸ್ತವವಾಗಿ ಇವೆರಡೂ ನಿನ್ನಿಂದ ಬೇರೆಯಲ್ಲ. ನಿನ್ನ ರೂಪಗಳೇ ಆಗಿವೆ.

ತ್ವಂ ವಾಯುರಗ್ನಿರವನಿರ್ವಿಯದಮ್ಬುಮಾತ್ರಾಃ
ಪ್ರಾಣೇನ್ದ್ರಿಯಾಣಿ ಹೃದಯಂ ಚಿದನುಗ್ರಹಶ್ಚ ।
ಸರ್ವಂ ತ್ವಮೇವ ಸಗುಣೋ ವಿಗುಣಶ್ಚ ಭೂಮ-
ನ್ನಾನ್ಯತ್ತ್ವದಸ್ತ್ಯಪಿ ಮನೋವಚಸಾ ನಿರುಕ್ತಮ್ ॥೪೮॥

ಪ್ರಭೋ! ಅನಂತ! ವಾಯು, ಅಗ್ನಿ, ಪೃಥಿವೀ, ಆಕಾಶ, ಜಲ, ಐದು ತನ್ಮಾತ್ರೆಗಳು, ಪ್ರಾಣ, ಇಂದ್ರಿಯಗಳು, ಮನಸ್ಸು, ಚಿತ್ತ, ಅಹಂಕಾರ, ಸಂಪೂರ್ಣಜಗತ್ತು ಮತ್ತು ಸಗುಣ, ನಿರ್ಗುಣ–ಇವೆಲ್ಲವೂ ನೀನು ಮಾತ್ರವೇ. ಇನ್ನೇನು ಹೇಳುವುದು? ಮನಸ್ಸು ಮತ್ತು ಮಾತುಗಳ ಮೂಲಕ ಯಾವುದು ನಿರೂಪಿಸಲ್ಪಡುತ್ತದೆಯೋ–ಅದೆಲ್ಲವೂ ನೀನೇ. ಅದಾವುದೂ ನಿನ್ನಿಂದ ಬೇರೆಯಲ್ಲ.

ನೈತೇ ಗುಣಾ ನ ಗುಣಿನೋ ಮಹದಾದಯೋ ಯೇ
ಸರ್ವೇ ಮನಃಪ್ರಭೃತಯಃ ಸಹದೇವಮರ್ತ್ಯಾಃ ।
ಆದ್ಯನ್ತವನ್ತ ಉರುಗಾಯ ವಿದನ್ತಿ ಹಿ ತ್ವಾ-
ಮೇವಂ ವಿಮೃಶ್ಯ ಸುಧಿಯೋ ವಿರಮನ್ತಿ ಶಬ್ದಾತ್ ॥

ವಿಶಾಲವಾದ ಕೀರ್ತಿಯುಳ್ಳ ಮಹಾವಿಷ್ಣುವೇ! ಈ ಸತ್ವವೇ

ಮುಂತಾದ ಗುಣಗಳಿಗಾಗಲೀ ಮತ್ತು ಈ ಗುಣಗಳ ಪರಿಣಾಮಗಳಾದ ಮಹತ್ತತ್ತ್ವ, ದೇವತೆ, ಮನುಷ್ಯ ಮತ್ತು ಮನಸ್ಸೇ ಮುಂತಾದ ಯಾವುದಕ್ಕಾಗಲೀ–ನಿನ್ನನ್ನು ತಿಳಿಯುವ ಸಾಮರ್ಥ್ಯವಿಲ್ಲ. ಏಕೆಂದರೆ : ನಾಮಗಳಿಗೆಲ್ಲಾ ಆದಿ-ಅಂತಗಳಿವೆ. ನೀನಾದರೋ ಅನಾದಿಯು ಮತ್ತು ಅನಂತನು. ಹೀಗೆ ವಿಚಾರಮಾಡಿ ಜ್ಞಾನಿಗಳು ಶಬ್ದಜಾಲವನ್ನು ನಿಲ್ಲಿಸಿ ಮೌನವಾಗುವರು.

ತತ್ತೇಽರ್ಹತ್ತಮನಮಃಸ್ತುತಿಕರ್ಮಪೂಜಾಃ
ಕರ್ಮ ಸ್ಮೃತಿಶ್ಚರಣಯೋಃ ಶ್ರವಣಂ ಕಥಾಯಾಮ್ ।
ಸಂಸೇವಯಾ ತ್ವಯಿ ವಿನೇತಿ ಷಡಙ್ಗಯಾ ಕಿಂ
ಭಕ್ತಿಂ ಜನಃ ಪರಮಹಂಸಗತೌ ಲಭೇತ ॥೫೦॥

ಎಲೈ ಪೂಜ್ಯತಮನಾದ ಪರಮಾತ್ಮನೇ! ನಿನ್ನ ಪೂಜೆಗೆ–ನಮಸ್ಕಾರ, ಸ್ತುತಿ, ಸಮಸ್ತಕಾರ್ಯಗಳನ್ನೂ ನಿನಗೆ ಸಮರ್ಪಣಮಾಡುವಿಕೆ, ಸೇವಾ ಪೂಜೆ, ಚರಣಕಮಲಗಳ ಚಿಂತನೆ ಮತ್ತು ಕಥಾಶ್ರವಣ–ಎಂಬ ಆರು ಅಂಗಗಳುಂಟು. ಈ ಆರು ಅಂಗಗಳನ್ನೂ ಸೇವಿಸದಿದ್ದರೆ ನಿನ್ನ ಪಾದಾರವಿಂದಗಳಲ್ಲಿ ಭಕ್ತಿಯು ಹೇಗೆ ಉಂಟಾದೀತು? ಪ್ರಭೋ! ನೀನಾದರೋ ನಿನಗೆ ಪರಮಪ್ರಿಯರಾದ ಭಕ್ತಜನರಿಗೆ, ಪರಮಹಂಸಜನರಿಗೆ ಸರ್ವಸ್ವವೇ ಆಗಿದ್ದೀಯೆ."

ಶ್ರೀನಾರದಮಹರ್ಷಿಗಳು ಹೇಳುತ್ತಾರೆ :

ಏತಾವದ್ವರ್ಣಿತಗುಣೋ ಭಕ್ತ್ಯಾ ಭಕ್ತೇನ ನಿರ್ಗುಣಃ ।
ಪ್ರಹ್ಲಾದಂ ಪ್ರಣತಂ ಪ್ರೀತೋ ಯತಮನ್ಯುರಭಾಷತ ॥೫೧॥

ಹೀಗೆ ಭಕ್ತಶ್ರೇಷ್ಠನಾದ ಪ್ರಹ್ಲಾದನು ಪ್ರಕೃತಿ ಮತ್ತು ಪ್ರಾಕೃತ ಗುಣಗಳಿಂದ ರಹಿತನಾದ ಪರಮಾತ್ಮನ ಸ್ವರೂಪ-ಗುಣಗಳನ್ನು ಪರಮ ಪ್ರೇಮದಿಂದ ಸ್ತೋತ್ರಮಾಡಿ ಆತನ ಪಾದಾರಾವಿಂದಗಳಿಗೆ ನಮಸ್ಕರಿಸಿದನು. ಆಗ ಭಗವಂತನ ಕ್ರೋಧವು ಶಾಂತವಾಗಿ ಆತನು ಅತ್ಯಂತ ಪ್ರೇಮ ಮತ್ತು ಪ್ರಸನ್ನತೆಗಳಿಂದ ಪ್ರಹ್ಲಾದನಿಗೆ ಹೀಗೆಂದನು :

ಪ್ರಹ್ಲಾದ ಭದ್ರ ಭದ್ರಂ ತೇ ಪ್ರೀತೋಽಹಂ ತೇಽಸುರೋತ್ತಮ ।
ವರಂ ವೃಣೀಷ್ವಾಭಿಮತಂ ಕಾಮಪೂರೋಽಸ್ಮ್ಯಹಂ ನೃಣಾಮ್ ॥

"ಭದ್ರ ಪ್ರಹ್ಲಾದ! ನಿನಗೆ ಮಂಗಳವಾಗಲಿ. ಅಸುರೋತ್ತಮನೇ! ನನಗೆ ನಿನ್ನಲ್ಲಿ ತುಂಬಾ ಪ್ರೀತಿ-ಸಂತೋಷಗಳು ಉಂಟಾಗಿವೆಯಪ್ಪಾ. ನಿನಗೆ ಏನು ಬೇಕೋ ಆ ವರವನ್ನು ಕೇಳಿಕೋ. ನಾನು ಜೀವಿಗಳ ಯಾವುದೇ ಇಚ್ಛೆಯನ್ನಾದರೂ ಈಡೇರಿಸುವವನು.

ಮಾಮಪ್ರೀಣತ ಆಯುಷ್ಮನ್ದರ್ಶನಂ ದುರ್ಲಭಂ ಹಿ ಮೇ ।
ದೃಷ್ಟ್ವಾ ಮಾಂ ನ ಪುನರ್ಜನ್ತುರಾತ್ಮಾನಂ ತಪ್ತುಮರ್ಹತಿ ॥೫೩॥

ಆಯುಷ್ಮಂತನೇ! ಯಾವನು ನನ್ನನ್ನು ಪ್ರಸನ್ನಗೊಳಿಸುವುದಿಲ್ಲವೋ ಆತನಿಗೆ ನನ್ನ ದರ್ಶನವು ಸಿಕ್ಕುವುದು ಬಹಳ ಕಷ್ಟ. ಆದರೆ ನನ್ನ ದರ್ಶನವು ಒದಗಿಬಿಟ್ಟಿತೆಂದರೆ ಸಾಕು. ಪ್ರಾಣಿಗಳ ಹೃದಯಗಳಲ್ಲಿ ಯಾವುದೇ ಪಾಪವೂ ಇರುವುದಿಲ್ಲ.

ಪ್ರೀಣನ್ತಿ ಹ್ಯಥ ಮಾಂ ಧೀರಾಃ ಸರ್ವಭಾವೇನ ಸಾಧವಃ ।
ಶ್ರೇಯಸ್ಕಾಮಾ ಮಹಾಭಾಗಾಃ ಸರ್ವಾಸಾಮಾಶಿಷಾಂ ಪತಿಮ್ ॥

ನಾನು ಎಲ್ಲ ಅಭಿಲಾಷೆಗಳನ್ನೂ ಈಡೇರಿಸುವವನು. ಆದುದರಿಂದ ಕಲ್ಯಾಣವನ್ನು ಬಯಸುವ ಎಲ್ಲ ಭಾಗ್ಯವಂತರಾದ ಸಾಧು-ಸಜ್ಜನರೂ ಜಿತೇಂದ್ರಿಯರಾಗಿ ತಮ್ಮ ಸಮಸ್ತವೃತ್ತಿಗಳಿಂದಲೂ ನನ್ನನ್ನು ಪ್ರಸನ್ನ ಗೊಳಿಸುವುದಕ್ಕೇ ಪ್ರಯತ್ನಿಸುವರು."

ಏವಂ ಪ್ರಲೋಭ್ಯಮಾನೋಽಪಿ ವರೈರ್ಲೋಕಪ್ರಲೋಭನೈಃ ।
ಏಕಾನ್ತಿತ್ವಾದ್ಭಗವತಿ ನೈಚ್ಛತ್ತಾನಸುರೋತ್ತಮಃ ॥೫೫॥

ಅಸುರಕುಲಭೂಷಣನಾದ ಪ್ರಹ್ಲಾದನಿಗೆ ಶ್ರೀಭಗವಂತನು ಹೀಗೆಲ್ಲಾ ಲೋಕವೆಲ್ಲವೂ ಬಯಸುವ ಹಿರಿದಾದ ವರಗಳ ಆಸೆಯನ್ನು ತೋರಿದರೂ, ಭಗವಂತನ ಅನನ್ಯಭಕ್ತನಾದ ಆ ಮಹಾತ್ಮನು ಯಾವ ಆಸೆಗೂ ಒಳಗಾಗ ಲಿಲ್ಲ. ಯಾವ ವರವನ್ನೂ ಬಯಸಲಿಲ್ಲ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಸಪ್ತಮಸ್ಕಂಧದ ೯ನೆಯ ಅಧ್ಯಾಯವು ಮುಗಿಯಿತು.

ಸಪ್ತಮಸ್ಕಂಧ ೧೦ನೆಯ ಅಧ್ಯಾಯ

ಪ್ರಹ್ಲಾದನ ರಾಜ್ಯಾಭಿಷೇಕ ಮತ್ತು ತ್ರಿಪುರದಹನದ ಕಥೆ

ಶ್ರೀನಾರದರು ಧರ್ಮರಾಜನಿಗೆ ಹೇಳುತ್ತಾರೆ :

ಭಕ್ತಿಯೋಗಸ್ಯ ತತ್ಸರ್ವಮನ್ತರಾಯತಯಾರ್ಭಕಃ ।
ಮನ್ಯಮಾನೋ ಹೃಷೀಕೇಶಂ ಸ್ಮಯಮಾನ ಉವಾಚ ಹ ॥೧॥

ಶ್ರೀನರಸಿಂಹದೇವರು ಆಸೆ ಹುಟ್ಟಿಸಿದಂತೆ ವರಗಳನ್ನು ಬೇಡುವುದೆಲ್ಲವೂ ಪ್ರೇಮಲಕ್ಷಣವಾದ ಭಕ್ತಿಯೋಗಕ್ಕೆ ವಿರುದ್ಧ–ಎಂದು ಭಕ್ತ ಬಾಲಕ ಪ್ರಹ್ಲಾದನು ಮನಗಂಡಿದ್ದನು. ಆದುದರಿಂದ ಆತನು ನಸುನಗುತ್ತಾ ಶ್ರೀಭಗವಂತನಲ್ಲಿ ಹೀಗೆ ವಿಜ್ಞಾಪಿಸಿದನು :

"ಪ್ರಭೋ! ಈಗಾಗಲೇ ಕಾಮಭೋಗಗಳಲ್ಲಿ ಆಸಕ್ತನಾಗಿರುವ ನನಗೆ ಈ ವರಗಳ ಮೂಲಕ ಇನ್ನೂ ಆಸೆ ಹುಟ್ಟಿಸಬೇಡವಪ್ಪಾ. ಆ ಭೋಗಗಳ ಸಂಗಕ್ಕೆ ಹೆದರಿ ಅವುಗಳಲ್ಲಿ ವೈರಾಗ್ಯವನ್ನು ತಾಳಿ ಬಿಡುಗಡೆಹೊಂದುವುದ ಕ್ಕಾಗಿ ನಿನ್ನನ್ನು ಶರಣುಹೊಂದಿದ್ದೇನೆ. ಭಗವಂತ! ನನ್ನಲ್ಲಿ ಸೇವಕನಲ್ಲಿರ ಬೇಕಾದ ಲಕ್ಷಣಗಳು ಇವೆಯೇ, ಇಲ್ಲವೇ–ಎಂಬುದನ್ನು ಪರೀಕ್ಷೆಮಾಡು ವುದಕ್ಕಾಗಿ ಭಕ್ತನಾದ ನನಗೆ ವರಗಳನ್ನು ಬೇಡಿಕೊಳ್ಳಲು ಅಪ್ಪಣೆಕೊಡಿಸಿ ದ್ದೀಯೆ. ಈ ವಿಷಯಭೋಗಗಳು ಹೃದಯದ ಗಂಟನ್ನು ಮತ್ತೂ ಬಲ ಪಡಿಸುವುವು ಮತ್ತು ಮತ್ತೆ ಮತ್ತೆ ಹುಟ್ಟು-ಸಾವುಗಳ ರೂಪವಾಗಿ ಸಂಸಾರಕ್ಕೆ ಕಾರಣವಾಗುವುವು. (ಶ್ಲೋಕ 2-3)

ನಾನ್ಯಥಾ ತೇಽಖಿಲಗುರೋ ಘಟೇತ ಕರುಣಾತ್ಮನಃ ।
ಯಸ್ತ ಆಶಿಷ ಆಶಾಸ್ತೇ ನ ಸ ಭೃತ್ಯಃ ಸ ವೈ ವಣಿಕ್ ॥೪॥

ಸಮಸ್ತರಿಗೂ ಗುರುವಾದ ಭಗವಂತನೇ! 'ವರಗಳನ್ನು ಬೇಡಿಕೋ' ಎಂದು ನೀನು ನನಗೆ ಅಪ್ಪಣೆ ಕೊಡಿಸಿರುವೆಯಲ್ಲಾ! ಆ ಬಗೆಗೆ ನಿನಗೆ ನನ್ನನ್ನು ಪರೀಕ್ಷೆಮಾಡುವುದಲ್ಲದೇ ಬೇರೆ ಯಾವ ಉದ್ದೇಶವೂ ಇರಲಾರದು. ಏಕೆಂದರೆ : ನೀನು ಪರಮಕಾರುಣಿಕನು. ನಿನ್ನ ಸೇವಕನೆಂದು ಕರೆಯಲ್ಪಡುವ ಯಾವನಾದರೂ ನಿನ್ನನ್ನು 'ವರಗಳನ್ನು ಕೊಡು' ಎಂದು ಬೇಡಿದ್ದೇ ಆದರೆ–ಆತನು ನಿಜವಾಗಿಯೂ ಸೇವಕನಲ್ಲ, ವರ್ತಕನು.

ಸ್ವಾಮಿಯಿಂದ ತನ್ನ ಕಾಮನೆಗಳನ್ನು ಈಡೇರಿಸಿಕೊಳ್ಳಲು ಬಯಸುವವನು–ಭೃತ್ಯನೂ ಅಲ್ಲ ; ಒಡೆಯನಾಗಿರುವುದಕ್ಕೋಸ್ಕರ ಸೇವಕನ ಕಾಮನೆಗಳನ್ನು ಈಡೇರಿಸುವವನು–ಒಡೆಯನೂ ಅಲ್ಲ. ಪ್ರಭೋ! ನಾನು ಯಾವ ಆಸೆಯೂ ಇಲ್ಲದೇ ನಿನ್ನನ್ನು ಸೇವಿಸುವ ನಿಷ್ಕಾಮಸೇವಕನು ಮತ್ತು ನೀನು ಯಾವುದನ್ನೂ ನನ್ನಿಂದ ಬಯಸದ ನಿರಪೇಕ್ಷನಾದ ಪ್ರಭುವು. ನಿನಗೂ ನನಗೂ ಇರುವ ಸಂಬಂಧವು ರಾಜನಿಗೂ ಆತನ ಭೃತ್ಯರಿಗೂ ಇರುವ ಸಂಬಂಧದಂತಲ್ಲ. ವರದಾನಿಗಳಿಗೆ ಶಿರೋಮಣಿಯಾದ ಸ್ವಾಮಿಯೇ! ನನಗಿಷ್ಟವಾದ ವರವನ್ನು ಕೊಟ್ಟೇಕೊಡುವ ಇಚ್ಛೆಯು ನಿನಗಿದ್ದ ಪಕ್ಷದಲ್ಲಿ 'ನನ್ನ ಹೃದಯದಲ್ಲಿ ಯಾವುದೇ ಕಾಮನೆಯ ಬೀಜವೂ ಮೊಳೆಯದಿರಲಿ'– ಎಂಬ ವರವನ್ನು ಬೇಡುತ್ತೇನೆ. ಭಗವಂತ! ಹೃದಯದಲ್ಲಿ ಯಾವುದಾದರೂ ಕಾಮನೆಯು ಹುಟ್ಟಿದೊಡನೆಯೇ ಇಂದ್ರಿಯ, ಮನಸ್ಸು, ಪ್ರಾಣ, ದೇಹ, ಧರ್ಮ, ಧೈರ್ಯ, ಬುದ್ಧಿ, ಲಜ್ಜೆ, ಸಂಪತ್ತು, ಕಾಂತಿ, ತೇಜಸ್ಸು, ಸ್ಮೃತಿ ಮತ್ತು ಸತ್ಯ–ಇವುಗಳೆಲ್ಲವೂ ನಾಶಹೊಂದಿಬಿಡುವುವು. ಎಲೈ ಪುಂಡರೀಕಾಕ್ಷನೇ! ಮನುಷ್ಯನು ಮನಸ್ಸಿನಲ್ಲಿರುವ ಕಾಮನೆಗಳೆಲ್ಲವನ್ನೂ ಯಾವಾಗ ಪೂರ್ಣವಾಗಿ ತ್ಯಜಿಸಿಬಿಡುತ್ತಾನೆಯೋ–ಆಗ ತಾನೇ ಅವನು ಭಗವದ್ಭಾವವನ್ನು ಹೊಂದಲು ಸಮರ್ಥನಾಗುವನು? (ಶ್ಲೋಕ 5-9)

ನಮೋ ಭಗವತೇ ತುಭ್ಯಂ ಪುರುಷಾಯ ಮಹಾತ್ಮನೇ ।
ಹರಯೇಽದ್ಭುತಸಿಂಹಾಯ ಬ್ರಹ್ಮಣೇ ಪರಮಾತ್ಮನೇ ॥೧೦॥

ಓ ಭಗವಂತ! ನಿನಗೆ ನಮಸ್ಕಾರವು. ಪರಮಪುರುಷ! ಮಹಾತ್ಮನೇ! ಅದ್ಭುತಸಿಂಹದ ರೂಪವನ್ನು ಧರಿಸಿರುವ ಶ್ರೀಹರಿಯೇ! ಪರಮ ಬ್ರಹ್ಮ ಪರಮಾತ್ಮನೇ! ನಿನಗೆ ನಮೋ ನಮಃ."

ಹೀಗೆ ಅರಿಕೆಮಾಡಿಕೊಂಡ ಭಕ್ತಶಿಶುವಿಗೆ ಅನುಗ್ರಹಮಾಡುತ್ತಾ ಶ್ರೀನರಸಿಂಹದೇವರು ಆತನಿಗೆ ಹೀಗೆಂದರು :

ನೈಕಾನ್ತಿನೋ ಮೇ ಮಯಿ ಜಾತ್ವಿಹಾಶಿಷ
ಆಶಾಸತೇಽಮುತ್ರ ಚ ಯೇ ಭವದ್ವಿಧಾಃ ।

ಅಥವಾ ಮನ್ವನ್ತರಮೇತದತ್ರ
ದೈತ್ಯೇಶ್ವರಾಣಾಮನುಭುಙ್ಕ್ಷ್ವ ಭೋಗಾನ್ ॥೧೧॥

“ಮಗು ಪ್ರಹ್ಲಾದ! ನಿನ್ನಂತಹ ಪರಮೈಕಾಂತಿಭಕ್ತರು ಇಹಲೋಕದ ಅಥವಾ ಪರಲೋಕದ ಯಾವುದೇ ವಸ್ತುವನ್ನೂ ಕಾಮಿಸುವುದಿಲ್ಲ. ಆದರೂ ನೀನು ಒಂದು ಮನ್ವಂತರಕಾಲದವರೆಗೆ (ನನ್ನ ಸಂತೋಷಕ್ಕೋಸ್ಕರ) ಈ ಲೋಕದಲ್ಲಿ ದೈತ್ಯಸಾರ್ವಭೌಮರಿಗೆ ತಕ್ಕುದಾದ ಎಲ್ಲ ಭೋಗಗಳನ್ನೂ ಅನುಭವಿಸು.

ಕಥಾ ಮದೀಯಾ ಜುಷಮಾಣಃ ಪ್ರಿಯಾಸ್ತ್ವ-
ಮಾವೇಶ್ಯ ಮಾಮಾತ್ಮನಿ ಸನ್ತಮೇಕಮ್ ।
ಸರ್ವೇಷು ಭೂತೇಷ್ವಧಿಯಜ್ಞಮೀಶಂ
ಯಜಸ್ವ ಯೋಗೇನ ಚ ಕರ್ಮ ಹಿನ್ವನ್ ॥೧೨॥

ಸಮಸ್ತಪ್ರಾಣಿಗಳ ಹೃದಯಗಳಲ್ಲಿಯೂ ಈಶ್ವರರೂಪದಲ್ಲಿದ್ದು ಯಜ್ಞಫಲಗಳನ್ನು ಅನುಭವಿಸುವವನು ನಾನೇ. ನೀನು ಇಂತಹ ನನ್ನನ್ನು ನಿನ್ನ ಹೃದಯದಲ್ಲಿ ಸದಾ ನೋಡುತ್ತಾ ನನಗೆ ಅತ್ಯಂತಪ್ರಿಯವಾಗಿರುವ ನನ್ನ ಕಥೆಗಳನ್ನು ಕೇಳುತ್ತಾ ಇರು. ಕರ್ಮಗಳ ಮೂಲಕವೂ ನನ್ನನ್ನೇ ಆರಾಧಿಸುತ್ತಿರು. ಹೀಗೆ ನಿನ್ನ (ಸುಖರೂಪವಾದ) ಪ್ರಾರಬ್ಧಕರ್ಮವನ್ನು ಲಯಹೊಂದಿಸು.

ಭೋಗೇನ ಪುಣ್ಯಂ ಕುಶಲೇನ ಪಾಪಂ
ಕಲೇವರಂ ಕಾಲಜವೇನ ಹಿತ್ವಾ ।
ಕೀರ್ತಿಂ ವಿಶುದ್ಧಾಂ ಸುರಲೋಕಗೀತಾಂ
ವಿತಾಯ ಮಾಮೇಷ್ಯಸಿ ಮುಕ್ತಬನ್ಧಃ ॥೧೩॥

ಭೋಗಗಳನ್ನು ಅನುಭವಿಸುವುದರ ಮೂಲಕ ಪುಣ್ಯಕರ್ಮಗಳ ಫಲವನ್ನೂ ಮತ್ತು ಕಾಮರಹಿತವಾದ ಕುಶಲಕರ್ಮದಿಂದ ಪಾಪವನ್ನೂ ಕಳೆದುಕೋ ಮತ್ತು ಸಮಯವು ಬಂದಾಗ ಶರೀರವನ್ನು ತ್ಯಜಿಸಿ ಸಮಸ್ತ ಬಂಧನಗಳಿಂದಲೂ ಬಿಡುಗಡೆ ಹೊಂದಿ ನನ್ನ ಬಳಿಗೆ ಬರುವೆಯಂತೆ.

ವತ್ಸ! ಭಾಗವತೋತ್ತಮನಾದ ನಿನ್ನ ಪರಿಶುದ್ಧವಾದ ಕೀರ್ತಿಯು ದೇವಲೋಕದಲ್ಲಿಯೂ ಗಾನಮಾಡಲ್ಪಡುವುದು.

ಯ ಏತತ್ಕೀರ್ತಯೇನ್ಮಹ್ಯಂ ತ್ವಯಾ ಗೀತಮಿದಂ ನರಃ ।
ತ್ವಾಂ ಚ ಮಾಂ ಚ ಸ್ಮರನ್ಕಾಲೇ ಕರ್ಮಬನ್ಧಾತ್ಪ್ರಮುಚ್ಯತೇ ॥೧೪॥

ಈಗ ನೀನು ನನ್ನನ್ನು ಕುರಿತು ಮಾಡಿದ ಸ್ತೋತ್ರವನ್ನು ಕೀರ್ತನೆ ಮಾಡುತ್ತಾ ಜೊತೆಯಲ್ಲಿಯೇ ನನ್ನನ್ನೂ ಮತ್ತು ನಿನ್ನನ್ನೂ ಯಾವನು ಸ್ಮರಣೆ ಮಾಡುವನೋ–ಆತನು ಸಮಯ ಬಂದಾಗ ಎಲ್ಲ ಕರ್ಮಗಳ ಕಟ್ಟುಗಳ ದೆಸೆಯಿಂದಲೂ ಬಿಡುಗಡೆಹೊಂದುವನು."

ಇದನ್ನು ಕೇಳಿದ ಪ್ರಹ್ಲಾದನು ಶ್ರೀಭಗವಂತನಲ್ಲಿ ಹೀಗೆ ಅರಿಕೆ ಮಾಡಿಕೊಂಡನು :

"ವರವನ್ನು ಅನುಗ್ರಹಿಸುವವರಿಗೆಲ್ಲಾ ಸ್ವಾಮಿಯಾಗಿರುವ ಮಹಾ ಪ್ರಭು ಮಹೇಶ್ವರನೇ! ನಾನು ನಿನ್ನಲ್ಲಿ ಒಂದು ವರವನ್ನು ಮಾತ್ರ ಬೇಡುವೆನು. ನನ್ನ ತಂದೆಯು–ನೀನು ಸರ್ವಶಕ್ತನಾದ ಚರಾಚರಗುರು–ಎಂಬುದನ್ನು ಅರಿಯದೇ, ನಿನ್ನ ಈಶ್ವರೀಯ ತೇಜಸ್ಸನ್ನೂ ತಿಳಿಯದೇ ನಿನ್ನನ್ನು ಮನಸ್ವಿಯಾಗಿ ನಿಂದಿಸಿದನು. 'ಈ ವಿಷ್ಣುವು ನನ್ನ ಸೋದರನನ್ನು ಕೊಂದುಹಾಕಿದನು'–ಎಂಬ ಸುಳ್ಳು ದೃಷ್ಟಿಯನ್ನು ಇಟ್ಟುಕೊಂಡಿದ್ದರಿಂದ ಕೋಪದ ವೇಗವನ್ನು ಈತನು ಸಹಿಸಿಕೊಳ್ಳಲಾರದೇ ಹೋದನು. ಇದಕ್ಕೋಸ್ಕರವೇ ಈತನು ನಿನ್ನ ಭಕ್ತನೆಂಬ ಕಾರಣದಿಂದ ನನಗೂ ದ್ರೋಹ ಮಾಡಿದನು. ಓ ದೀನಬಂಧುವೇ! ನಿನ್ನ ದೃಷ್ಟಿಯು ಇವನ ಮೇಲೆ ಹರಿದಿರುವುದರಿಂದ ಈತನು ಈಗಾಗಲೇ ಪವಿತ್ರನಾಗಿ ಬಿಟ್ಟನು. ಆದರೂ ಶೀಘ್ರದಲ್ಲಿ ನಾಶಹೊಂದದೇ ಇರುವ ತನ್ನ ದುಸ್ತರವಾದ ದೋಷದ ದೆಸೆಯಿಂದ ಈತನು ಶುದ್ಧನಾಗಿಬಿಡಲಿ–ಎಂಬ ಒಂದು ವರವನ್ನು ಮಾತ್ರ ನನಗೆ ದಯಪಾಲಿಸು." (ಶ್ಲೋಕ 15-17)

ಭಕ್ತೋತ್ತಮನ ಪ್ರಾರ್ಥನೆಗೆ ಉತ್ತರಕೊಡುತ್ತಾ ಶ್ರೀಭಗವಂತನು ಹೀಗೆಂದನು :

"ಎಲೈ ಪಾಪರಹಿತನಾದ ಕುಮಾರನೇ! ಹಿರಣ್ಯಕಶಿಪುವು (ನಿನ್ನ

ತಂದೆಯಾದ ಕಾರಣದಿಂದ) ಈಗಾಗಲೇ ಪವಿತ್ರನಾಗಿಬಿಟ್ಟಿದ್ದಾನೆ. ಈತನು ಮಾತ್ರವಲ್ಲದೇ ಈತನಿಗೆ ಹಿಂದೆ ಇಪ್ಪತ್ತೊಂದು ಮಂದಿ ವಂಶೀಕರೂ ಇದ್ದುದಾದರೆ ಅವರೂ ಪವಿತ್ರರಾಗಿ ಬಿಡುತ್ತಿದ್ದರು. ಏಕೆಂದರೆ : ಈತನ ಪುತ್ರನಾಗಿ ಕುಲಪಾವನನಾದ ನೀನು ಜನ್ಮತಾಳಿರುವೆ. ಪ್ರಶಾಂತರೂ, ಸಮದರ್ಶಿಗಳೂ ಮತ್ತು ಸುಖವಾಗಿ ಸದಾಚಾರವನ್ನು ಪಾಲಿಸುವವರೂ ಆದ ನನ್ನ ಭಕ್ತ ಜನರು ಎಲ್ಲಿಯೇ ವಾಸಮಾಡುತ್ತಿದ್ದರೂ, ಅತ್ಯಂತ ಕೆಳಮಟ್ಟದ ಹುಟ್ಟಿನವರೇ ಆಗಿದ್ದರೂ–ಅವರೂ ಪವಿತ್ರರಾಗಿ ಇತರರನ್ನೂ ಪವಿತ್ರಗೊಳಿಸುತ್ತಾರೆ. ಎಲೈ ದೈತ್ಯೇಂದ್ರನೇ! ನನ್ನಲ್ಲಿರುವ ಭಕ್ತಿಭಾವದಿಂದ ಕಾಮನೆಗಳನ್ನು ಕಳೆದುಕೊಂಡಿರುವ ಅವರು ಎಲ್ಲದರಲ್ಲೂ ಆತ್ಮಭಾವವನ್ನು ಹೊಂದಿರುವುದರಿಂದ ಚಿಕ್ಕ ಪ್ರಾಣಿಗೇ ಆಗಲೀ, ದೊಡ್ಡ ಪ್ರಾಣಿಗೇ ಆಗಲೀ-ಯಾವುದಕ್ಕೂ ಹಿಂಸೆಮಾಡುವುದಿಲ್ಲ. ಪ್ರಪಂಚದಲ್ಲಿ ಯಾರು ನಿನ್ನ ಅನುಯಾಯಿಗಳಾಗುವರೋ ಅವರೂ ನನ್ನ ಭಕ್ತರಾಗಿಬಿಡುವರು. ಮಗು! ನೀನು ನನ್ನ ಸರ್ವಭಕ್ತರಿಗೂ ಆದರ್ಶಪುರುಷನಾಗಿದ್ದೀಯೆ. ನನ್ನ ಅಂಗಗಳ ಸ್ಪರ್ಶದಿಂದ ನಿನ್ನ ತಂದೆಯು ಈಗಲೇ ಪೂರ್ಣವಾಗಿ ಪವಿತ್ರನಾಗಿಬಿಟ್ಟಿದ್ದಾನೆ. ಆದರೂ ನೀನು ಈತನಿಗೆ ಅಂತ್ಯೇಷ್ಟಿಕರ್ಮವನ್ನು ಮಾಡು. ನಿನ್ನಂತಹ ಸತ್ಸಂತಾನವನ್ನು ಪಡೆದ ಕಾರಣ ಈತನು ಉತ್ತಮೋತ್ತಮಲೋಕಗಳನ್ನು ಹೊಂದುವನು. ವತ್ಸ! ನೀನು ನಿನ್ನ ತಂದೆಯ ಸ್ಥಾನದಲ್ಲಿ ಪಟ್ಟಾಭಿಷಿಕ್ತನಾಗು ಮತ್ತು ವೇದವಾದಿಗಳಾದ ಮುನಿಗಳ ಆಜ್ಞೆಯಂತೆ ನನ್ನಲ್ಲಿ ನಿನ್ನ ಮನಸ್ಸನ್ನಿರಿಸಿ ನನ್ನನ್ನು ಶರಣುಹೊಂದಿ, ನನಗೋಸ್ಕರವಾಗಿಯೇ ನಿನ್ನ ಸರ್ವಕರ್ಮಗಳನ್ನೂ ಮಾಡುತ್ತಿರು.” (ಶ್ಲೋಕ 18-23)

ಶ್ರೀನಾರದಮಹರ್ಷಿಗಳು ಹೇಳುತ್ತಾರೆ :

ಯುಧಿಷ್ಠಿರ! ಭಗವಂತನ ಆಜ್ಞೆಯಂತೆ ಪ್ರಹ್ಲಾದನು ತನ್ನ ತಂದೆಗೆ ಅಂತ್ಯೇಷ್ಟಿಸಂಸ್ಕಾರವನ್ನು ಮಾಡಿದನು. ಅನಂತರ ಬ್ರಾಹ್ಮಣರು ಆತನಿಗೆ ಪಟ್ಟಾಭಿಷೇಕವನ್ನು ಮಾಡಿದರು. ಆಗ ದೇವತೆಗಳಿಂದಲೂ, ಋಷಿ ಗಳಿಂದಲೂ ಒಡಗೂಡಿದ ಬ್ರಹ್ಮದೇವರು–ನರಸಿಂಹದೇವರ ಪ್ರಸನ್ನವಾದ ಮುಖವನ್ನು ಕಂಡು ಸಂತೋಷಗೊಂಡು ಪವಿತ್ರವಾಣಿಗಳಿಂದ ಆತನನ್ನು ಸ್ತುತಿಸಿ ಆತನಲ್ಲಿ ಹೀಗೆ ವಿಜ್ಞಾಪಿಸಿದರು :

"ದೇವತೆಗಳಿಗೂ ಆರಾಧ್ಯನಾಗಿರುವ ಶ್ರೀಭಗವಂತನೇ! ಸರ್ವಾಂತರ್ಯಾಮಿಯೂ, ಜೀವಿಗಳಿಗೆ ಜೀವನವನ್ನು ದಯಪಾಲಿಸುವವನೂ ಆಗಿರುವ ನನ್ನ ಪೂಜ್ಯತಂದೆಯೇ! ಜನರಿಗೆ ಮಿತಿಮೀರಿ ಕಷ್ಟಗಳನ್ನು ಕೊಡುತ್ತಿದ್ದ ಈ ಪಾಪಿ ದೈತ್ಯನನ್ನು ನೀನು ಸಂಹಾರಮಾಡಿದ್ದು ತುಂಬಾ ಒಳ್ಳೆಯದಾಯಿತು. ಇದು ಎಲ್ಲರ ಭಾಗ್ಯ. 'ನಾನು ಸೃಷ್ಟಿಸಿದ ಯಾವುದೇ ಪ್ರಾಣಿಯಿಂದಲೂ ನಿನಗೆ ಸಾವಿಲ್ಲದಿರಲಿ'–ಎಂದು ನಾನು ಈತನಿಗೆ ವರವನ್ನು ಕೊಟ್ಟಿದ್ದೆನು. ಅದರಿಂದ ಕೊಬ್ಬಿದ ಈತನು ತಪಸ್ಸು, ಯೋಗ ಮತ್ತು ಬಲಗಳಿಂದ ಮತ್ತೇರಿ ವೇದವಿಧಿಗಳನ್ನು ನಿರ್ಮೂಲಗೊಳಿಸಿಬಿಟ್ಟನು. ಈತನ ಪುತ್ರನಾದ, ಪರಮಭಾಗವತೋತ್ತಮನಾದ, ಪರಿಶುದ್ಧಹೃದಯನಾದ ಮಗು ಪ್ರಹ್ಲಾದನನ್ನು ಸಾವಿನ ದವಡೆಯಿಂದ ನೀನು ಬಿಡಿಸಿದ್ದು ಮಹಾಭಾಗ್ಯವೇ ಸರಿ. ಈಗ ಈತನು ನಿನ್ನನ್ನು ಶರಣುಹೊಂದಿರುವುದೂ ಕೂಡ ಅತ್ಯಂತ ಆನಂದದ ಮತ್ತು ಮಂಗಳಕರವಾದ ವಿಷಯವೇ ಆಗಿದೆ. ಶ್ರೀಭಗವಂತನೇ! ನಿನ್ನ ಈ ನೃಸಿಂಹರೂಪವನ್ನು ಏಕಾಗ್ರವಾದ ಮನಸ್ಸಿನಿಂದ ಯಾವನು ಧ್ಯಾನಿಸುತ್ತಾನೆಯೋ–ಆತನು ಎಲ್ಲ ಬಗೆಯ ಭಯಗಳ ದೆಸೆಯಿಂದಲೂ ರಕ್ಷಿತನಾಗುವನು. ಕೊಲ್ಲುವ ಇಚ್ಛೆಯಿಂದ ಮೃತ್ಯುವೇ ಆತನ ಬಳಿಗೆ ಬಂದರೂ ಆತನಿಗೆ ಯಾವ ಕೆಡುಕನ್ನೂ ಮಾಡಲಾರದು." (ಶ್ಲೋಕ 24-29)

ಇದನ್ನು ಕೇಳಿ ಶ್ರೀನರಸಿಂಹದೇವರು ಬ್ರಹ್ಮದೇವರನ್ನು ಕುರಿತು ಹೇಳಿದರು :

ಮೈವಂ ವರೋಽಸುರಾಣಾಂ ತೇ ಪ್ರದೇಯಃ ಪದ್ಮಸಮ್ಭವ ।
ವರಃ ಕ್ರೂರನಿಸರ್ಗಾಣಾಮಹೀನಾಮಮೃತಂ ಯಥಾ ॥೩೦॥

"ಎಲೈ ಬ್ರಹ್ಮನೇ! ನೀನು ದೈತ್ಯರಿಗೆ ಇಂತಹ ವರವನ್ನು ಕೊಡಕೂಡದು. ಸ್ವಭಾವದಿಂದಲೇ ಯಾರು ಕ್ರೂರಿಗಳಾಗಿದ್ದಾರೆಯೋ ಅವರಿಗೆ ವರವನ್ನು ಕೊಟ್ಟರೆ ವಿಷದ ಹಾವುಗಳಿಗೆ ಹಾಲೆರೆದಂತೆ ಆಗುವುದು."

ನಾರದಮಹರ್ಷಿಗಳು ಹೇಳುತ್ತಾರೆ :

ಯುಧಿಷ್ಠಿರ! ಹೀಗೆ ಶ್ರೀನರಸಿಂಹದೇವರು ಬ್ರಹ್ಮದೇವರ ಪೂಜೆಯನ್ನು ಸ್ವೀಕರಿಸಿ ಯಾವ ಪ್ರಾಣಿಗಳಿಗೂ ಕಾಣಿಸದಿರುವಂತೆ ಅಲ್ಲಿಯೇ

ಅಂತರ್ಧಾನಹೊಂದಿದರು. ಅನಂತರ ಪ್ರಹ್ಲಾದನು, ಶ್ರೀಭಗವಂತನ ಅಂಶ ಕಲೆಗಳಾಗಿರುವ ಬ್ರಹ್ಮದೇವರು, ರುದ್ರದೇವರು, ಪ್ರಜಾಪತಿಗಳು ಮತ್ತು ದೇವತೆಗಳು–ಎಲ್ಲರಿಗೂ ಪೂಜೆಮಾಡಿ ತಲೆಯನ್ನು ನೆಲಕ್ಕೆ ಸೋಕಿಸಿ ಸಾಷ್ಟಾಂಗಪ್ರಣಾಮಗಳನ್ನು ಮಾಡಿದನು. ಆಗ ಶುಕ್ರಾಚಾರ್ಯರೇ ಮುಂತಾದ ಮುನಿಗಳೊಡನೆ ಬ್ರಹ್ಮದೇವರು ಪ್ರಹ್ಲಾದನನ್ನು ಸಮಸ್ತ ದಾನವರಿಗೂ ಮತ್ತು ದೈತ್ಯರಿಗೂ ಅಧಿಪತಿಯನ್ನಾಗಿ ಮಾಡಿದರು. ಅನಂತರ ಬ್ರಹ್ಮಾದಿದೇವತೆಗಳು ಪ್ರಹ್ಲಾದನನ್ನು ಅಭಿನಂದಿಸಿ, ಆತನಿಗೆ ಆಶೀರ್ವಾದ ಮಾಡಿ, ಆತನ ಪೂಜೆಯನ್ನು ಸ್ವೀಕಾರಮಾಡಿ ತಮ್ಮ-ತಮ್ಮ ಲೋಕಗಳಿಗೆ ತೆರಳಿದರು.
(ಶ್ಲೋಕ 31-34)

ಎಲೈ ಯುಧಿಷ್ಠಿರನೇ! ಹೀಗೆ ಮಹಾವಿಷ್ಣುವಿನ ಪಾರ್ಷದರಾದ ಜಯ-ವಿಜಯರು ದಿತಿಯ ಪುತ್ರರಾಗಿ ಜನಿಸಿ ಅಸುರರಾದರು. ವೈರಭಾವ ದಿಂದ ತನ್ನನ್ನು ಹೃದಯದಲ್ಲಿ ಧ್ಯಾನಮಾಡುತ್ತಾ ಇದ್ದ ಅವರನ್ನು ಅವರ ಉದ್ಧಾರಕ್ಕೋಸ್ಕರ ಶ್ರೀಹರಿಯು ವಧಿಸಿದನು. ಮತ್ತೆ ಅವರು ಋಷಿಶಾಪ ದಿಂದ ರಾವಣ-ಕುಂಭಕರ್ಣರೆಂಬ ರಾಕ್ಷಸರ ರೂಪದಲ್ಲಿ ಜನಿಸಿ ಶ್ರೀರಾಮ ಚಂದ್ರನ ಪರಾಕ್ರಮಗಳಿಂದ ಸಂಹರಿಸಲ್ಪಟ್ಟರು. ಯುದ್ಧದಲ್ಲಿ ಶ್ರೀರಾಮ ಚಂದ್ರನ ಬಾಣಗಳಿಂದ ಸೀಳಲ್ಪಟ್ಟಹೃದಯರಾಗಿ ಹಿಂದಿನ ಹುಟ್ಟಿನಲ್ಲಿ ಹೇಗೋ ಹಾಗೆ ಚಿತ್ತದಲ್ಲಿ ಆತನನ್ನೇ ಇರಿಸಿಕೊಂಡು ದೇಹವನ್ನು ತ್ಯಜಿಸಿ ದರು. ಅವರೇ ಈಗ ಶಿಶುಪಾಲ ಮತ್ತು ದಂತವಕ್ತ್ರರ ರೂಪದಲ್ಲಿ ಮತ್ತೆ ಜನಿಸಿದರು. ಶ್ರೀಹರಿಯಲ್ಲಿ ವೈರಸಂಬಂಧವನ್ನು ಇಟ್ಟುಕೊಂಡಿದ್ದ ಅವರು ನೀನು ನೋಡುತ್ತಿರುವಂತೆಯೇ ಆತನಲ್ಲಿ ಸೇರಿಕೊಂಡರು. ಎಲೈ ಧರ್ಮರಾಜನೇ! ಶ್ರೀಕೃಷ್ಣನಲ್ಲಿ ವೈರಸಂಬಂಧವನ್ನು ಹೊಂದಿದ್ದ ಎಲ್ಲ ರಾಜರೂ ಅಂತ್ಯಸಮಯದಲ್ಲಿ ಶ್ರೀಕೃಷ್ಣನ ಸ್ಮರಣೆಮಾಡುತ್ತಾ ಆತನ ಸಾರೂಪ್ಯವನ್ನು ಹೊಂದಿದರು. ದುಂಬಿಯು ಹಿಡಿದುತಂದು ಗೂಡಿನಲ್ಲಿ ಕೂಡಿಹಾಕಿದ ಹುಳುವು ಭಯದಿಂದ ದುಂಬಿಯನ್ನೇ ಚಿಂತಿಸುತ್ತಾ ದುಂಬಿಯ ರೂಪವನ್ನೇ ತಾಳುವಂತೆ–ಅವರು ವೈರದಿಂದ ಶ್ರೀಕೃಷ್ಣನನ್ನೇ ಧ್ಯಾನಿಸುತ್ತಾ ಆತನ ಸಾರೂಪ್ಯವನ್ನು ಪಡೆದರು. ಶ್ರೀಭಗವಂತನ ಪ್ರಿಯಭಕ್ತರು ತಮ್ಮ ಅನನ್ಯಭಕ್ತಿಯಿಂದ ಶ್ರೀಭಗವಂತನ ತಾದಾತ್ಮ್ಯವನ್ನು ಹೊಂದುವಂತೆಯೇ

ಶಿಶುಪಾಲನೇ ಮುಂತಾದ ರಾಜರು ವೈರಭಾವದಿಂದ ಆತನನ್ನು ಅನನ್ಯವಾಗಿ ಚಿಂತಿಸುತ್ತಾ ಆತನ ಸಾರೂಪ್ಯವನ್ನ ಹೊಂದಿದರಪ್ಪಾ. (ಶ್ಲೋಕ 35-40)

ಪ್ರಿಯ ಯುಧಿಷ್ಠಿರ! 'ಶ್ರೀಭಗವಂತನನ್ನು ದ್ವೇಷಿಸುತ್ತಿದ್ದ ಶಿಶು ಪಾಲನೇ ಮುಂತಾದವರಿಗೆ ಶ್ರೀಭಗವಂತನ ಸಾಮ್ಯರೂಪವು ಹೇಗೆ ಉಂಟಾಯಿತು?'–ಎಂದು ನೀನು ಕೇಳಿದ ಪ್ರಶ್ನೆಗೆ ನಾನು ಉತ್ತರ ಹೇಳಿಯಾಯಿತು. ಆದಿದೈತ್ಯರಾಗಿದ್ದ ಹಿರಣ್ಯಾಕ್ಷ-ಹಿರಣ್ಯಕಶಿಪುಗಳ ವಧೆಯನ್ನು ವರ್ಣಿಸುವ ಈ ಕಥೆಯು ಬ್ರಹ್ಮಣ್ಯದೇವನಾದ ಶ್ರೀಕೃಷ್ಣಪರಮಾತ್ಮನ ಪರಮಪವಿತ್ರವಾದ ಅವತಾರಚರಿತ್ರೆಗೆ ಸಂಬಂಧಪಟ್ಟಿರುವುದು. ಈ ಪ್ರಸಂಗದಲ್ಲಿ ಮಹಾಭಾಗವತೋತ್ತಮನಾದ ಪ್ರಹ್ಲಾದನ ಚರಿತ್ರೆಯನ್ನೂ, ಭಕ್ತಿ-ಜ್ಞಾನ-ವೈರಾಗ್ಯಗಳನ್ನೂ, ಪ್ರಪಂಚದ ಸೃಷ್ಟಿ-ಸ್ಥಿತಿ-ಪ್ರಳಯಗಳ ಸ್ವಾಮಿಯಾದ ಶ್ರೀಹರಿಯ ಯಥಾರ್ಥವಾದ ಸ್ವರೂಪವನ್ನೂ, ದಿವ್ಯಗುಣಗಳನ್ನೂ, ಲೀಲೆಗಳನ್ನೂ ವರ್ಣನೆಮಾಡಿದ್ದೇನೆ. ದೇವತೆಗಳ ಮತ್ತು ದೈತ್ಯರ ಪದವಿಗಳಲ್ಲಿ ಕಾಲಕ್ರಮದಲ್ಲಿ ಯಾವ ದೊಡ್ಡ ಪರಿವರ್ತನೆಯಾಗುತ್ತಿದೆಯೆಂಬುದನ್ನೂ ನಿರೂಪಣೆ ಮಾಡಿಯಾಗಿದೆ. ಶ್ರೀಭಗವಂತನನ್ನು ದೊರಕಿಸುವ ಭಾಗವತ ಮಹಾಧರ್ಮವನ್ನೂ ವರ್ಣಿಸಿದ್ದೇನೆ. ಆಧ್ಯಾತ್ಮಕ್ಕೆ ಸಂಬಂಧಪಟ್ಟಂತೆ ತಿಳಿಯಬೇಕಾದ ವಿಷಯಗಳನ್ನೂ ಇಲ್ಲಿ ಹೇಳಿದೆ. ಶ್ರೀಭಗವಂತನ ಪರಾಕ್ರಮದಿಂದ ಪೂರ್ಣವಾಗಿರುವ ಈ ಪವಿತ್ರವಾದ ಆಖ್ಯಾನವನ್ನು ಶ್ರದ್ಧೆಯಿಂದ ಸಂಕೀರ್ತನೆ ಮಾಡುವ ಮತ್ತು ಕೇಳುವ ಮನುಷ್ಯರು ಕರ್ಮಬಂಧನದಿಂದ ಬಿಡುಗಡೆ ಹೊಂದುವರು. ಆದಿಪುರುಷನಾದ ಶ್ರೀಮನ್ನಾರಾಯಣನ ನೃಸಿಂಹಾವತಾರ ಲೀಲೆಯನ್ನೂ, ಸೇನಾಪತಿಸಹಿತನಾದ ದೈತ್ಯೇಂದ್ರನಾದ ಹಿರಣ್ಯಕಶಿಪುವಿನ ವಧೆಯನ್ನೂ, ಹಾಗೆಯೇ ಸಜ್ಜನಶಿರೋಮಣಿಯಾದ ಪ್ರಹ್ಲಾದನ ಪಾವನವಾದ ಪ್ರಭಾವವನ್ನೂ ಏಕಾಗ್ರವಾದ ಮನಸ್ಸಿನಿಂದ ಯಾವನು ಓದುತ್ತಾನೆಯೋ ಮತ್ತು ಕೇಳುತ್ತಾನೆಯೋ–ಆತನು ಶ್ರೀಭಗವಂತನ ಅಭಯಪ್ರದವಾದ ಶ್ರೀವೈಕುಂಠಧಾಮವನ್ನು ಹೊಂದುವನು. (ಶ್ಲೋಕ 41-47)

ಯೂಯಂ ನೃಲೋಕೇ ಬಲ ಭೂರಿಭಾಗಾ
ಲೋಕಂ ಪುನಾನಾ ಮುನಯೋಽಭಿಯನ್ತಿ ।

ಯೇಷಾಂ ಗೃಹಾನಾವಸತೀತಿ ಸಾಕ್ಷಾ-
ದ್ಗೂಢಂ ಪರಂ ಬ್ರಹ್ಮ ಮನುಷ್ಯಲಿಙ್ಗಮ್ ॥೪೮॥

ಯುಧಿಷ್ಠಿರ! ಮನುಷ್ಯಲೋಕದಲ್ಲಿ ನೀವೇ ಮಹಾಭಾಗ್ಯಶಾಲಿಗಳಪ್ಪಾ! ಏಕೆಂದರೆ : ನಿಮ್ಮ ಮನೆಯಲ್ಲಿ ಸಾಕ್ಷಾತ್ ಪರಬ್ರಹ್ಮ-ಪರಮಾತ್ಮನೇ ಮನುಷ್ಯರೂಪವನ್ನು ಧರಿಸಿ ಗುಪ್ತನಾಗಿ ವಾಸಮಾಡುತ್ತಿದ್ದಾನೆ. ಆದ್ದರಿಂದಲೇ ಜಗತ್ತನ್ನು ಪಾವನಮಾಡುವ ಋಷಿ-ಮುನಿಗಳು ಮತ್ತೆ-ಮತ್ತೆ ಆತನ ದರ್ಶನಕ್ಕಾಗಿ ನಾಲ್ಕು ಕಡೆಗಳಿಂದಲೂ ನಿಮ್ಮ ಬಳಿಗೆ ಬರುತ್ತಿದ್ದಾರೆ.

ಸ ವಾ ಅಯಂ ಬ್ರಹ್ಮ ಮಹದ್ವಿಮೃಗ್ಯ-
ಕೈವಲ್ಯನಿರ್ವಾಣಸುಖಾನುಭೂತಿಃ ।
ಪ್ರಿಯಃ ಸುಹೃದ್ವಃ ಖಲು ಮಾತುಲೇಯ
ಆತ್ಮಾರ್ಹಣೀಯೋ ವಿಧಿಕೃದ್ಗುರುಶ್ಚ ॥೪೯॥

ದೊಡ್ಡ-ದೊಡ್ಡ ಮಹಾಪುರುಷರು ಯಾವನನ್ನು ನಿರಂತರವಾಗಿ ಹುಡುಕುತ್ತಿರುವರೋ, ಯಾವನು ಮಾಯೆಯ ಲೇಶವೂ ಇಲ್ಲದ ಪರಮ ಶಾಂತ–ಪರಮಾನಂದಾನುಭವಸ್ವರೂಪ–ಪರಬ್ರಹ್ಮಪರಮಾತ್ಮನೇ ಆಗಿದ್ದಾನೆಯೋ–ಆತನೇ ನಿಮಗೆ ಪ್ರಿಯತಮನೂ, ಸೋದರಮಾವನ ಮಗನೂ, ವಿಧೇಯನೂ, ಗುರುವೂ, ಪೂಜ್ಯನೂ, ಆತ್ಮನೂ ಆಗಿರುವ ಶ್ರೀಕೃಷ್ಣನಲ್ಲವೇ!

ನ ಯಸ್ಯ ಸಾಕ್ಷಾದ್ಭವಪದ್ಮಜಾದಿಭೀ
ರೂಪಂ ಧಿಯಾ ವಸ್ತುತಯೋಪವರ್ಣಿತಮ್ ।
ಮೌನೇನ ಭಕ್ತ್ಯೋಪಶಮೇನ ಪೂಜಿತಃ
ಪ್ರಸೀದತಾಮೇಷ ಸ ಸಾತ್ವತಾಂ ಪತಿಃ ॥೫೦॥

‘ಇವನು ಹೀಗೆಯೇ ಇದ್ದಾನೆ. ಇದೇ ಇವನ ಪರಮಾರ್ಥ ಸ್ವರೂಪ’–ಎಂದು ಈತನನ್ನು ಬ್ರಹ್ಮ-ರುದ್ರಾದಿಗಳಿಗೂ–ತಮ್ಮ ಬುದ್ಧಿ ಶಕ್ತಿಯಿಂದ ವರ್ಣಿಸಲು ಹೇಗೆ ಶಕ್ಯವಾದೀತು? ನಾವಾದರೋ ಮೌನ, ಭಕ್ತಿ ಮತ್ತು ಸಂಯಮಗಳ ಮೂಲಕವೇ ಈತನ ಪೂಜೆಯನ್ನು ಮಾಡು

ತ್ತೇವೆ. ನಮ್ಮ ಈ ಪೂಜೆಯನ್ನು ಕರುಣೆಯಿಂದ ಸ್ವೀಕರಿಸಿ ಭಕ್ತವತ್ಸಲನಾದ ಯಾದವೇಂದ್ರ ಶ್ರೀಭಗವಂತನು ನಮ್ಮಲ್ಲಿ ಪ್ರಸನ್ನನಾಗಲಿ.

ಎಲೈ ಯುಧಿಷ್ಠಿರನೇ! ಹಿಂದೆ ಮಹಾಮಾಯಾವಿಯಾದ ಮಯಾಸುರನು ಶ್ರೀ ರುದ್ರದೇವರ ಕೀರ್ತಿಗೆ ಕಳಂಕವನ್ನು ತರಲು ಬಯಸಿದಾಗ ಈ ಶ್ರೀಭಗವಂತನೇ ಅವರ ಕೀರ್ತಿಯನ್ನು ಮತ್ತೆ ರಕ್ಷಿಸಿ ವಿಸ್ತಾರಪಡಿಸಿದನು."

ನಾರದಮಹರ್ಷಿಗಳು ಹೇಳಿದ ಶ್ರೀ ರುದ್ರದೇವರು, ಶ್ರೀಹರಿ ಮತ್ತು ಮಯಾಸುರ–ಇವರ ವಿಷಯವಾದ ಮಾತು ಯುಧಿಷ್ಠಿರನಲ್ಲಿ ಕುತೂಹಲವನ್ನು ಕೆರಳಿಸಿತು. ಆತನು ನಾರದರಲ್ಲಿ–"ಮಹರ್ಷಿಗಳೇ! ಮಯದಾನವನು ಯಾವ ಕಾರ್ಯದಲ್ಲಿ ಜಗದೀಶ್ವರನಾದ ಶ್ರೀ ರುದ್ರದೇವರ ಯಶಸ್ಸನ್ನು ಕೆಡಿಸಲು ಪ್ರಯತ್ನಿಸಿದನು? ಭಗವಂತನಾದ ಶ್ರೀಕೃಷ್ಣನು ಆ ಯಶಸ್ಸನ್ನು ಹೇಗೆ ರಕ್ಷಿಸಿದನು?–ಎಂಬುದನ್ನು ಕೃಪೆಯಿಟ್ಟು ತಿಳಿಸಬೇಕು"–ಎಂದು ಪ್ರಾರ್ಥಿಸಿದನು. (ಶ್ಲೋಕ 51-52)

ನಾರದರು ಆತನಿಗೆ ಆ ಘಟನೆಯನ್ನು ಹೀಗೆ ವರ್ಣಿಸಿದರು.

"ಯುಧಿಷ್ಠಿರ! ಹಿಂದೆ ಒಂದು ಬಾರಿ ಶ್ರೀಕೃಷ್ಣಪರಮಾತ್ಮನ ಶಕ್ತಿಯಿಂದ ವೃದ್ಧಿಹೊಂದಿದ ದೇವತೆಗಳು ಯುದ್ಧದಲ್ಲಿ ಅಸುರರನ್ನು ಜಯಿಸಿದರು. ಆಗ ಎಲ್ಲ ಅಸುರರೂ ಮಾಯಾವಿಗಳಿಗೆ ಪರಮಗುರುವಾದ ಮಯಾಸುರನನ್ನು ಶರಣುಹೊಂದಿದರು. ಮಹಾಶಕ್ತಿಶಾಲಿಯಾದ ಆ ಮಯನು ಕ್ರಮವಾಗಿ ಚಿನ್ನ, ಬೆಳ್ಳಿ, ಮತ್ತು ಕಬ್ಬಿಣಗಳಿಂದ ಮೂರು ವಿಚಿತ್ರವಾದ ವಿಮಾನಗಳನ್ನು ಅವರಿಗೆ ನಿರ್ಮಿಸಿಕೊಟ್ಟನು. ಅವು ಪುರಗಳ ರೂಪಗಳಲ್ಲಿದ್ದ ಮಹಾವಿಮಾನಗಳು. ಯಾವಾಗ ಬರುತ್ತವೆ? ಯಾವಾಗ ಹೋಗುತ್ತವೆ?–ಎಂಬುದೇ ತಿಳಿಯಲಿಕ್ಕಾಗದ ಅದ್ಭುತವಾದ ನಗರವಿಮಾನಗಳು ; ಅಪರಿಮಿತವಾದ ಸಾಮಾಗ್ರಿಗಳಿಂದ ತುಂಬಿದ ಆಶ್ಚರ್ಯಕರವಾದ ಪುರವಿಮಾನಗಳು. ದೈತ್ಯಸೇನಾಪತಿಗಳಿಗೆ ತ್ರಿಲೋಕಗಳ ಮೇಲೂ ಮತ್ತು ಲೋಕಪಾಲಕರ ಮೇಲೂ ವೈರವು ತುಂಬಿತ್ತು. ಅದನ್ನು ಸ್ಮರಿಸಿದ ಅವರು ಆ ವಿಮಾನ ಗಳಲ್ಲಿ ಗುಟ್ಟಾಗಿ ಅಡಗಿದ್ದು ಅವುಗಳ ಮೂಲಕ ಎಲ್ಲ ಲೋಕಗಳನ್ನೂ ನಾಶಪಡಿಸತೊಡಗಿದರು. ಆಗ ಲೋಕಪಾಲಕಸಹಿತರಾದ ಸಮಸ್ತಪ್ರಜೆಗಳೂ

ಭಗವಂತನಾದ ಶಂಕರನನ್ನು ಶರಣುಹೊಂದಿ–"ಪ್ರಭೋ! ದೇವಾಧಿದೇವ! ತ್ರಿಪುರಗಳಲ್ಲಿ ವಾಸಮಾಡುತ್ತಿರುವ ಅಸುರರಿಂದ ನಮ್ಮನ್ನು ಕಾಪಾಡು. ತ್ರಾಹಿ ನ ಸ್ತಾವಕಾನ್ದೇವ ವಿನಷ್ಟಾನ್ ತ್ರಿಪುರಾಲಯೈಃ"–ಎಂದು ಆತನಲ್ಲಿ ಮೊರೆಯಿಟ್ಟರು. ಭಗವಂತನಾದ ಶಂಕರನು 'ಹೆದರಬೇಡಿರಿ' ಎಂದು ಕರುಣೆಯಿಂದ ಅವರಿಗೆ ಅಭಯಪ್ರದಾನಮಾಡಿ ತನ್ನ ಬಿಲ್ಲಿನಲ್ಲಿ ಬಾಣವನ್ನು ಹೂಡಿ ಆ ಮೂರು ಪುರಗಳ ಮೇಲೆ ಅದನ್ನು ಪ್ರಯೋಗಿಸಿದನು. ಆತನ ಆ ಬಾಣದಿಂದ ಸೂರ್ಯಮಂಡಲದಿಂದ ಹೊರಬರುವ ಕಿರಣಗಳಂತಹ ನೂರಾರು ಬಾಣಗಳು ಹೊರಕ್ಕೆ ಬಂದುವು. ಅವುಗಳಿಂದ ಬೆಂಕಿಯ ಜ್ವಾಲೆ ಗಳೇ ಹೊರಬರುವಂತೆ ಕಾಣುತ್ತಿತ್ತು. ಅವುಗಳಿಂದ ಆಕ್ರಮಿಸಲ್ಪಟ್ಟ ತ್ರಿಪುರ ಗಳು ನೋಟಕ್ಕೆ ಬರದೇ ಹೋದುವು. ತ್ರಿಪುರಗಳಲ್ಲಿದ್ದ ವಿಮಾನವಾಸಿ ಗಳೆಲ್ಲರೂ ಆ ಅಗ್ನಿಸ್ಪರ್ಶದಿಂದ ಪ್ರಾಣ ನೀಗಿ ಬಿದ್ದುಬಿಟ್ಟರು. ಆದರೆ ಮಹಾ ಯೋಗಿಯಾದ ಮಯಾಸುರನು ಹಾಗೆ ಸತ್ತ ಅಸುರರೆಲ್ಲರನ್ನೂ ಎತ್ತಿ ಕೊಂಡು ಹೋಗಿ ತಾನು ನಿರ್ಮಿಸಿದ್ದ ಒಂದು ಸಿದ್ಧಾಮೃತರಸದ ಬಾವಿಯಲ್ಲಿ ಹಾಕಿದನು. ಸಿದ್ಧಾಮೃತರಸವು ಸೋಕಿದೊಡನೆಯೇ ಅಸುರರು ತೇಜಸ್ವಿಗಳಾಗಿ ವಜ್ರದಂತೆ ದೃಢವಾದ ದೇಹಗಳೊಡನೆ ಜೀವಿಸಿ ಎದ್ದು ಬಂದರು. ಅವರು ಮೋಡಗಳನ್ನು ಚದುರಿಸುವ ಮಿಂಚಿನ ಬೆಂಕಿಯಂತೆ ಎದ್ದು ನಿಂತರು.

ಭಗವಂತನಾದ ಮಹಾದೇವನು ತನ್ನ ಸಂಕಲ್ಪವು ಭಗ್ನವಾದುದಕ್ಕಾಗಿ ಚಿಂತೆಗೀಡಾದುದನ್ನು ಶ್ರೀಭಗವಂತನಾದ ಮಹಾವಿಷ್ಣುವು ಗಮನಿಸಿ, ಆ ಅಸುರರನ್ನು ಜಯಿಸುವುದಕ್ಕೆ ಒಂದು ಯುಕ್ತಿಯನ್ನು ಹೂಡಿದನು. ವಿಷ್ಣುವು ಒಂದು ಹಸುವಿನ ರೂಪವನ್ನು ತಾಳಿದನು. ಬ್ರಹ್ಮದೇವರು ಅದರ ಕರುವಿನ ರೂಪವನ್ನು ತಾಳಿದರು. ಅವರಿಬ್ಬರೂ ಮಧ್ಯಾಹ್ನದ ಸಮಯದಲ್ಲಿ ಆ ತ್ರಿಪುರಗಳಿಗೆ ಪ್ರವೇಶಮಾಡಿ ಆ ಸಿದ್ಧಾಮೃತರಸದ ಬಾವಿಗಳಲ್ಲಿದ್ದ ಅಮೃತವನ್ನೆಲ್ಲಾ ಕುಡಿದುಬಿಟ್ಟರು. ಆ ಬಾವಿಗಳ ರಕ್ಷಕರಾದ ದೈತ್ಯರು ಆ ಹಸು-ಕರುಗಳನ್ನು ನೋಡುತ್ತಿದ್ದರೂ ಶ್ರೀಭಗವಂತನ ಮಾಯೆಯಿಂದ ಮೋಹಿತರಾಗಿ ಅವುಗಳನ್ನು ತಡೆಯದೇ ಹೋದರು. ಮಹಾಯೋಗಿ ಯಾದ ಮಯಾಸುರನಿಗೆ ಸಮಾಚಾರವು ತಿಳಿಯಿತು. ಆದರೆ ಇದು

ಶ್ರೀಭಗವಂತನ ಲೀಲೆಯೆಂದು ಅರಿತ ಆತನಿಗೆ ಶೋಕವುಂಟಾಗಲಿಲ್ಲ. ಶೋಕದಲ್ಲಿ ಮುಳುಗಿದ ಅಮೃತರಕ್ಷಕರಿಗೆ ಅವನು–"ಎಲೈ ಸೋದರರೇ! ದೇವತೆಗಳಾಗಲೀ, ಅಸುರರಾಗಲೀ, ಮನುಷ್ಯರಾಗಲೀ ಅಥವಾ ಯಾವುದೇ ಪ್ರಾಣಿಯೇ ಆಗಲೀ–ತನಗಾಗಲೀ, ಇತರರಿಗಾಗಲೀ ಇಬ್ಬರಿಗೂ ವಿಧಿಯು ಏರ್ಪಡಿಸಿರುವ ಪ್ರಾರಬ್ಧಕರ್ಮವನ್ನು ನಾಶಪಡಿಸಲಾರರು. ಏನು ಆಗ ಬೇಕಾಗಿತ್ತೋ ಅದು ಆಗಿ ಹೋಯಿತು. ಈಗ ಶೋಕಪಟ್ಟು ಪ್ರಯೋಜನ ವೇನು?"–ಎಂದು ಹೇಳಿ ಸಂತೈಸಿದನು. ಒಡನೆಯೇ ಶ್ರೀಭಗವಂತನಾದ ಮಹಾವಿಷ್ಣುವು ತನ್ನ ಶಕ್ತಿಗಳ ಮೂಲಕ ಭಗವಂತನಾದ ಶ್ರೀಶಂಕರನಿಗೆ ಯುದ್ಧದ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಟ್ಟನು. (ಶ್ಲೋಕ 53-65)

ಧರ್ಮಜ್ಞಾನವಿರಕ್ತ್ಯದ್ಧಿತಪೋವಿದ್ಯಾಕ್ರಿಯಾದಿಭಿಃ ।
ರಥಂಸೂತಂ ಧ್ವಜಂ ವಾಹಾನ್ಧನುರ್ವರ್ಮ ಶರಾದಿ ಯತ್ ॥೬೬॥

ಆತನು ಧರ್ಮದಿಂದ ರಥವನ್ನೂ, ಜ್ಞಾನದಿಂದ ಅದರ ಸಾರಥಿ ಯನ್ನೂ, ವೈರಾಗ್ಯದಿಂದ ಧ್ವಜವನ್ನೂ, ಐಶ್ವರ್ಯದಿಂದ ರಥದ ಕುದುರೆ ಗಳನ್ನೂ, ತಪಸ್ಸಿನಿಂದ ಧನುಸ್ಸನ್ನೂ, ವಿದ್ಯೆಯಿಂದ ಕವಚವನ್ನೂ, ಕ್ರಿಯೆ ಯಿಂದ ಬಾಣವನ್ನೂ ಮತ್ತು ತನ್ನ ಇತರ ಶಕ್ತಿಗಳಿಂದ ಯುದ್ಧಕ್ಕೆ ಬೇಕಾದ ಇತರ ವಸ್ತಗಳನ್ನೂ ಶ್ರೀರುದ್ರದೇವರಿಗೆ ನಿರ್ಮಿಸಿಕೊಟ್ಟನು.

ಭಗವಂತನಾದ ಶಂಕರನು ಆ ಸಾಮಗ್ರಿಗಳಿಂದ ಸನ್ನದ್ಧನಾಗಿ ರಥವನ್ನೇರಿ ಬಿಲ್ಲು-ಬಾಣಗಳನ್ನು ಧರಿಸಿದನು. ಅಭಿಜಿನ್ಮುಹೂರ್ತದಲ್ಲಿ ಬಿಲ್ಲಿಗೆ ಬಾಣವನ್ನು ಹೂಡಿ ಪ್ರಯೋಗಮಾಡಿ ದುರ್ಭೇದ್ಯವಾಗಿದ್ದ ಆ ಮೂರು ಪುರಗಳನ್ನೂ ಸುಟ್ಟು ಬೂದಿಮಾಡಿದನು. ಒಡನೆಯೇ ಸ್ವರ್ಗದಲ್ಲಿ ದೇವದುಂದುಭಿಗಳು ಮೊಳಗಿದುವು. ನೂರಾರು ವಿಮಾನಗಳು ರುದ್ರದೇವ ರನ್ನು ಅಭಿನಂದಿಸಲು ನೆರೆದುವು. ದೇವತೆಗಳೂ, ಋಷಿಗಳೂ, ಪಿತೃಗಳೂ ಮತ್ತು ಸಿದ್ಧೇಶ್ವರರೂ ಆನಂದದಿಂದ ಜಯ-ಜಯಕಾರಗಳನ್ನು ಮಾಡುತ್ತಾ ಹೂಮಳೆಯನ್ನು ಕರೆಯತೊಡಗಿದರು. ಅಪ್ಸರೆಯರು ಹಾಡುತ್ತಾ ಕುಣಿ ದಾಡಿದರು. ಯುಧಿಷ್ಠಿರ! ಈ ರೀತಿಯಲ್ಲಿ ಆ ಮೂರು ಪುರಗಳನ್ನೂ ಸುಟ್ಟು ಬೂದಿಮಾಡಿ ಭಗವಂತನಾದ ಶಂಕರನು 'ತ್ರಿಪುರಾರಿ' ಎಂಬ ಹೆಸರನ್ನು

ಗಳಿಸಿದನು ಮತ್ತು ಬ್ರಹ್ಮಾದಿದೇವತೆಗಳ ಸ್ತುತಿಯನ್ನು ಕೇಳುತ್ತಾ ಆತನು ತನ್ನ ಧಾಮಕ್ಕೆ ದಯಮಾಡಿಸಿದನು. (ಶ್ಲೋಕ 67-70)

ಏವಂ ವಿಧಾನ್ಯಸ್ಯ ಹರೇಃ ಸ್ವಮಾಯಯಾ
ವಿಡಮ್ಬಮಾನಸ್ಯ ನೃಲೋಕಮಾತ್ಮನಃ ।
ವೀರ್ಯಾಣಿ ಗೀತಾನ್ಯೃಷಿಭಿರ್ಜಗದ್ಗುರೋ-
ರ್ಲೋಕಾನ್ಪುನಾನಾನ್ಯಪರಂ ವದಾಮಿ ಕಿಮ್ ॥೭೧॥

ಜಗತ್ತಿಗೇ ಗುರುವಾದ ಶ್ರೀಕೃಷ್ಣಪರಮಾತ್ಮನು ಹೀಗೆ ತನ್ನ ಮಾಯೆಯಿಂದ ನಾನಾ ಮಾನುಷಲೀಲೆಗಳನ್ನು ತೋರಿಸುತ್ತಾನೆ. ಋಷಿಗಳು ಪರಮಪಾವನವಾದ ಆ ನಾನಾಲೀಲೆಗಳನ್ನು ಹಾಡುತ್ತಿರುವರು. ಈಗ ನಾನು ನಿನಗೆ ಮತ್ತೇನು ಹೇಳಲಿ ; ಕೇಳು."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಸಪ್ತಮಸ್ಕಂಧದ ೧೦ನೆಯ ಅಧ್ಯಾಯವು ಮುಗಿಯಿತು.

ಸಪ್ತಮಸ್ಕಂಧ ೧೧ನೆಯ ಅಧ್ಯಾಯ

ಮನುಷ್ಯಧರ್ಮ, ವರ್ಣಧರ್ಮ ಮತ್ತು ಸ್ತ್ರೀಧರ್ಮಗಳ ನಿರೂಪಣೆ

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಶ್ರುತ್ವೇಹಿತಂ ಸಾಧುಸಭಾಸಭಾಜಿತಂ
ಮಹತ್ತಮಾಗ್ರಣ್ಯ ಉರುಕ್ರಮಾತ್ಮನಃ ।
ಯುಧಿಷ್ಠಿರೋ ದೈತ್ಯಪತೇರ್ಮುದಾ ಯುತಃ
ಪಪ್ರಚ್ಛ ಭೂಯಸ್ತನಯಂ ಸ್ವಯಮ್ಭುವಃ ॥೧॥

ಭಗವನ್ಮಯನಾದ ದೈತ್ಯೇಂದ್ರನಾದ ಪ್ರಹ್ಲಾದನ ವಿಷಯವಾಗಿ ಸಾಧುಸಭೆಗಳಲ್ಲಿ ಸಂಭಾವಿತವಾದ ಪವಿತ್ರವಾದ ಚರಿತ್ರೆಯನ್ನು ಕೇಳಿ ಸಜ್ಜನ ಶಿರೋಮಣಿಯಾದ ಧರ್ಮರಾಜನಿಗೆ ಪರಮಾನಂದವುಂಟಾಯಿತು. ಆತನು ಬ್ರಹ್ಮಪುತ್ರರಾದ ನಾರದರನ್ನು ಮತ್ತೆ ಹೀಗೆ ಪ್ರಶ್ನೆ ಮಾಡಿದನು :

"ಪೂಜ್ಯರೇ! ವರ್ಣಧರ್ಮ ಮತ್ತು ಆಶ್ರಮಧರ್ಮಗಳ ಆಚಾರ

ಗಳಿಂದ ಕೂಡಿದ ಮನುಷ್ಯರು ಸನಾತನಧರ್ಮವನ್ನು ಕೇಳಲು ಬಯಸು ತ್ತಾರೆ. ಏಕೆಂದರೆ : ಧರ್ಮದಿಂದಲೇ ಮನುಷ್ಯನಿಗೆ ಪರಮಪುರುಷನು ದೊರೆಯುವನು. ದಯಮಾಡಿ ಅದನ್ನು ಉಪದೇಶಮಾಡಿರಿ. ತಾವು ಪ್ರಜಾಪತಿಯಾದ ಬ್ರಹ್ಮದೇವರ ಸಾಕ್ಷಾತ್ ಪುತ್ರರು. ತಪಸ್ಸು, ಯೋಗ ಮತ್ತು ಸಮಾಧಿಗಳಿಂದ ಅವರ ಇತರ ಪುತ್ರರಿಗಿಂತಲೂ ಹೆಚ್ಚಾಗಿ ಸಂಭಾವಿತರಾದರವರು. ಧರ್ಮದ ಅತ್ಯಂತಗುಪ್ತವಾದ ರಹಸ್ಯವನ್ನು ತಮ್ಮಂತಹ ನಾರಾಯಣಪರಾಯಣರೂ, ದಯಾಳುಗಳೂ, ಶಾಂತರೂ ಆದ ಬ್ರಾಹ್ಮಣರು ತಾನೇ ಯಥಾರ್ಥವಾಗಿ ತಿಳಿದುಕೊಂಡಿರುವರು! ಅಷ್ಟು ಪ್ರಾಮಾಣಿಕವಾಗಿ ಅದನ್ನು ಇತರರು ಅರಿಯರು."

ಹೀಗೆ ಅರಿಕೆಮಾಡಿಕೊಂಡ ಧರ್ಮರಾಜನಿಗೆ ಉತ್ತರನೀಡುತ್ತಾ ನಾರದ ಮಹರ್ಷಿಗಳು ಹೀಗೆಂದರು :

"ಧರ್ಮಪುತ್ರ! ಸಮಸ್ತಧರ್ಮಗಳಿಗೂ ಕಾರಣರಾಗಿರುವ ಬ್ರಹ್ಮದೇವರಿಗೂ ಮತ್ತು ಉತ್ಪತ್ತಿರಹಿತನಾದ ಪರಮಾತ್ಮನಿಗೂ ನಮಸ್ಕಾರವು. ಆ ಭಗವಂತನಾದ ನಾರಾಯಣನು ಲೋಕಕಲ್ಯಾಣಕ್ಕಾಗಿ ತನ್ನ ಅಂಶದಿಂದ ಧರ್ಮನಿಗೂ ಮತ್ತು ದಕ್ಷಪುತ್ರಿಯಾದ ಮೂರ್ತಿದೇವಿಗೂ ಪುತ್ರನಾಗಿ ಅವತಾರಮಾಡಿ, ಬದರಿಕಾಶ್ರಮದಲ್ಲಿ ತಪಸ್ಸನ್ನು ಆಚರಿಸುತ್ತಿದ್ದಾನೆ. ಆ ನಾರಾಯಣಮುನಿಯ ಬಾಯಿಂದಲೇ ನಾನು ಕೇಳಿರುವ ಸನಾತನವಾದ ಧರ್ಮವನ್ನು ಹೇಳುತ್ತೇನೆ ; ಕೇಳು : (ಶ್ಲೋಕ 2-6)

ಧರ್ಮಮೂಲಂ ಹಿ ಭಗವಾನ್ಸರ್ವವೇದಮಯೋ ಹರಿಃ ।
ಸ್ಮೃತಂ ಚ ತದ್ವಿದಾಂ ರಾಜನ್ಯೇನ ಚಾತ್ಮಾ ಪ್ರಸೀದತಿ ॥೭॥

ಸರ್ವವೇದಸ್ವರೂಪನಾದ ಶ್ರೀಭಗವಂತನಾದ ಶ್ರೀಹರಿಯೂ, ಅವನ ತತ್ತ್ವವನ್ನರಿತ ಮಹರ್ಷಿಗಳು ರಚಿಸಿದ ಸ್ಮೃತಿಗಳೂ ಮತ್ತು ಯಾವುದರಿಂದ ಮನಸ್ಸಿಗೆ ಪ್ರಸನ್ನತೆಯುಂಟಾಗುತ್ತದೆಯೋ–ಅಂತಹ ಕರ್ಮವೂ ಧರ್ಮಕ್ಕೆ ಮೂಲವಾಗಿವೆ.

ಎಲೈ ರಾಜನೇ! ಧರ್ಮಕ್ಕೆ ಮೂವತ್ತು ಲಕ್ಷಣಗಳನ್ನು ಶಾಸ್ತ್ರಗಳು ಹೇಳುತ್ತವೆ. ಸತ್ಯ, ದಯೆ, ತಪಸ್ಸು, ಶೌಚ, ಸಹನೆ, ಉಚಿತ ಮತ್ತು

ಅನುಚಿತಗಳ ವಿಚಾರ, (ಶಮ) ಒಳ ಇಂದ್ರಿಯಗಳ ಸಂಯಮ, (ದಮ) ಹೊರ ಇಂದ್ರಿಯಗಳ ಸಂಯಮ, ಅಹಿಂಸೆ, ಬ್ರಹ್ಮಚರ್ಯ, ತ್ಯಾಗ, ಸ್ವಾಧ್ಯಾಯ, ಸರಳತೆ, ಸಂತೋಷ, ಸಮದೃಷ್ಟಿ, ಸೇವೆ, ಮೆಲ್ಲ-ಮೆಲ್ಲಗೆ ಗ್ರಾಮ್ಯಭೋಗಗಳನ್ನು ತೊರೆಯುತ್ತಾ ಬರುವುದು, ಮನುಷ್ಯರು ಅಭಿಮಾನ ದಿಂದ ಮಾಡುವ ಪ್ರಯತ್ನಗಳು ವಿರುದ್ಧವಾದ ಫಲವನ್ನೇ ಕೊಡು ವುವು–ಎಂಬುದನ್ನು ವಿಚಾರಕ್ಕೆ ತಂದುಕೊಳ್ಳುವುದು, ಮೌನ, ಆತ್ಮಚಿಂತನೆ, ತಾನು ಸಂಪಾದಿಸಿದ ಅನ್ನವೇ ಮುಂತಾದ ಪದಾರ್ಥಗಳನ್ನು ಪ್ರಾಣಿಗಳಿಗೆ ಯೋಗ್ಯವಾದ ರೀತಿಯಲ್ಲಿ ಹಂಚಿಕೊಡುವುದು, ಎಲ್ಲ ಪ್ರಾಣಿಗಳಲ್ಲಿಯೂ ಮತ್ತು ವಿಶೇಷವಾಗಿ ಮನುಷ್ಯರಲ್ಲಿ ಆತ್ಮಭಾವವನ್ನೂ–ದೇವತಾಭಾವವನ್ನೂ ಇಟ್ಟುಕೊಳ್ಳುವುದು, ಸಂತರಿಗೆಲ್ಲರಿಗೂ ಗತಿಯಾಗಿರುವ ಶ್ರೀಭಗವಂತನ ವಿಷಯದಲ್ಲಿ ಶ್ರವಣಭಕ್ತಿ, ಕೀರ್ತನಭಕ್ತಿ, ಸ್ಮರಣಭಕ್ತಿ, ಸೇವಾಭಕ್ತಿ, ಪೂಜಾ ಭಕ್ತಿ, ನಮಸ್ಕಾರಭಕ್ತಿ, ದಾಸ್ಯಭಕ್ತಿ, ಸಖ್ಯಭಕ್ತಿ ಮತ್ತು ಆತ್ಮಸಮರ್ಪಣೆಯೆಂಬ ಭಕ್ತಿ–ಎಂಬ ಒಂಬತ್ತು ಬಗೆಯ ಭಕ್ತಿಗಳನ್ನು ಆಚರಿಸುವುದು–ಎಂಬಿವೇ ಧರ್ಮದ ಆ ಮೂವತ್ತು ಲಕ್ಷಣಗಳು. ಈ ಮೂವತ್ತನ್ನೂ ಆಚರಿಸುವುದು ಎಲ್ಲ ಮನುಷ್ಯರ ಪರಮಧರ್ಮವು. ಈ ಧರ್ಮವನ್ನು ಪಾಲಿಸುವುದರಿಂದ ಸರ್ವಾತ್ಮನಾದ ಶ್ರೀಭಗವಂತನು ಪ್ರಸನ್ನನಾಗುವನು. (ಶ್ಲೋಕ 8-12)

ಯುಧಿಷ್ಠಿರ! ಯಾರು ತಮ್ಮ ವಂಶಪರಂಪರೆಯಿಂದ ವಿಚ್ಛಿತಿ ಯಿಲ್ಲದೇ ಸಂಸ್ಕಾರಗಳನ್ನು ಪಡೆಯುತ್ತಾ ಬ್ರಹ್ಮದೇವರಿಂದ 'ದ್ವಿಜ'ರೆಂದು ಸ್ವೀಕರಿಸಲ್ಪಟ್ಟಿದ್ದಾರೋ–ಅಂತಹವರು 'ದ್ವಿಜ'ರೆಂದು ಕರೆಯಲ್ಪಡುತ್ತಾರೆ. ಹೀಗೆ ಜನ್ಮ ಮತ್ತು ಕರ್ಮಗಳಿಂದ ಶುದ್ಧರಾಗಿರುವ ದ್ವಿಜರಿಗೆ ಯಜ್ಞ, ಅಧ್ಯಯನ, ದಾನ ಮತ್ತು ಬ್ರಹ್ಮಚರ್ಯಗಳೇ ಮುಂತಾದ ಎಲ್ಲ ಆಶ್ರಮ ಗಳ ಧರ್ಮಗಳೂ ವಿಹಿತವಾಗಿವೆ. ಈ ಕರ್ಮಗಳಲ್ಲಿ ಅಧ್ಯಯನ, ಅಧ್ಯಾಪನ, ದಾನಮಾಡುವಿಕೆ, ದಾನ ಸ್ವೀಕರಿಸುವಿಕೆ, ಯಜ್ಞಮಾಡುವಿಕೆ, ಯಜ್ಞ ಮಾಡಿಸುವಿಕೆ–ಎಂಬ ಆರೂ ಬ್ರಾಹ್ಮಣನಿಗೆ ಸೇರಿವೆ. ಕ್ಷತ್ರಿಯನು ದಾನ ವನ್ನು ಸ್ವೀಕರಿಸಬಾರದು*. ಪ್ರಜೆಗಳನ್ನು ಸಂರಕ್ಷಿಸುವ ಕ್ಷತ್ರಿಯನು

---

* **ಅವಿಪ್ರಾತ್ ಕರಾದಿಭಿಃ =** ಬ್ರಾಹ್ಮಣನನ್ನು ಬಿಟ್ಟು ಉಳಿದವರಿಂದ ಕಂದಾಯ,

ಬ್ರಾಹ್ಮಣನನ್ನು ಬಿಟ್ಟು ಉಳಿದವರಿಂದ ಯಥೋಚಿತವಾಗಿ ಕಂದಾಯ, ಕಪ್ಪ-ಕಾಣಿಕೆ, ತೆರಿಗೆ ಮುಂತಾದುವುಗಳನ್ನು ಸ್ವೀಕರಿಸಿ ತನ್ನ ಜೀವನವನ್ನು ನಿರ್ವಹಿಸಬೇಕು. ವೈಶ್ಯನು ಸದಾ ಬ್ರಾಹ್ಮಣರ ಅನುಯಾಯಿಯಾಗಿದ್ದು ಗೋರಕ್ಷಣೆ, ಕೃಷಿ ಮತ್ತು ವ್ಯಾಪಾರಗಳ ಮೂಲಕ ಜೀವನವನ್ನು ನಡೆಸಬೇಕು. ಶೂದ್ರನಿಗೆ ದ್ವಿಜರ ಸೇವೆಯನ್ನು ಮಾಡುವುದೇ ಧರ್ಮವು. ಆತನ ಯಜಮಾನನೇ ಆತನ ಜೀವನವನ್ನು ನಿರ್ವಹಿಸಬೇಕು. ಬ್ರಾಹ್ಮಣ ನಿಗೆ ಶಾಲೀನವೃತ್ತಿ, ಯಾಯಾವರವೃತ್ತಿ, ಶಿಲವೃತ್ತಿ ಮತ್ತು ಉಂಛವೃತ್ತಿ– ಎಂಬ ನಾಲ್ಕು ಬಗೆಯ ವೃತ್ತಿಗಳು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿವೆ. ಇವುಗಳಲ್ಲಿ ಮುಂದು-ಮುಂದಿನದು ಹಿಂದು-ಹಿಂದಿನದಕ್ಕಿಂತಲೂ ಶ್ರೇಷ್ಠವೆಂದು ತಿಳಿಯ ಬೇಕು. ಕೆಳವರ್ಣದ ಮನುಷ್ಯನು ಆಪತ್ಕಾಲವಿಲ್ಲದೇ ಇರುವಾಗ ಉತ್ತಮ ವರ್ಣದವರ ವೃತ್ತಿಯನ್ನು ಅವಲಂಬಿಸಬಾರದು. ಕ್ಷತ್ರಿಯನು ದಾನ ತೆಗೆದುಕೊಳ್ಳುವುದೊಂದನ್ನು ಬಿಟ್ಟು ಉಳಿದ ಬ್ರಾಹ್ಮಣವೃತ್ತಿಗಳನ್ನು ಅವಲಂಬಿಸಬಹುದು. ಆಪತ್ಕಾಲದಲ್ಲಿ ಎಲ್ಲರೂ ಎಲ್ಲರ ವೃತ್ತಿಗಳನ್ನೂ ಅವಲಂಬಿಸಬಹುದು. ಋತ, ಅಮೃತ, ಮೃತ, ಪ್ರಮೃತ ಮತ್ತು ಸತ್ಯಾ ನೃತ ಇವುಗಳಲ್ಲಿ ಯಾವುದಾದರೂ ಒಂದು ವೃತ್ತಿಯನ್ನು ಅವಲಂಬಿಸ ಬಹುದು. ಆದರೆ ಶ್ವವೃತ್ತಿಯನ್ನು (ನಾಯಿಯಂತಹ ದಾಸ್ಯವೃತ್ತಿಯನ್ನು) ಎಂದಿಗೂ ಆಶ್ರಯಿಸಬಾರದು. ಅಂಗಡಿಬೀದಿಯಲ್ಲಿ ಬಿದ್ದಿರುವ ಧಾನ್ಯ ಕಣ (ಉಂಛ)ಗಳನ್ನು ಮತ್ತು ಗದ್ದೆ-ಹೊಲಗಳಲ್ಲಿ ಬಿದ್ದಿರುವ ಧಾನ್ಯಕಣ (ಶಿಲ)ಗಳನ್ನು ಆರಿಸಿಕೊಂಡು ಶಿಲೋಂಛವೃತ್ತಿಯಿಂದ ಜೀವನ ನಿರ್ವಹಿಸುವುದಕ್ಕೆ 'ಋತ' ಎಂದು ಹೆಸರು. 'ಅಮೃತ' ಎಂದರೆ

ಕಪ್ಪ-ಕಾಣಿಕೆಗಳನ್ನು ರಾಜನು ಸ್ವೀಕರಿಸಬೇಕು. ಹಾಗಾದರೆ ಬ್ರಾಹ್ಮಣನಿಂದ ರಾಜನ ರಾಜ್ಯಕ್ಕೆ ಆದಾಯವಿಲ್ಲವೇ? ಎಂದರೆ : **'ತಪಃಷಡ್ಭಾಗಮಕ್ಷಯ್ಯಂ ದದತ್ಯಾರಣ್ಯಕಾ ಹಿ ನಃ'** ಎಂದು ಶಾಕುಂತಲದಲ್ಲಿ ಕಾಳಿದಾಸನು ಹೇಳಿರುವಂತೆ ತಪಸ್ವಿ ಗಳಾದ ಬ್ರಾಹ್ಮಣರು ತಮ್ಮ ತಪಸ್ಸಿನ ಆರನೆಯ ಒಂದು ಭಾಗವನ್ನು ರಾಜನಿಗೆ ಕೊಟ್ಟೇ ಕೊಡುತ್ತಾರೆ. ಆದುದರಿಂದ ಅವರಿಂದ ಬೇರೆ ಬಗೆಯ ಕಂದಾಯ ಗಳನ್ನು ರಾಜನು ಕೇಳಬಾರದು. ಬ್ರಾಹ್ಮಣರು ತಪಸ್ಸನ್ನಾಚರಿಸದೇ ಬೇರೆ ವೃತ್ತಿ ಗಳಲ್ಲಿದ್ದರೆ ಅವರಿಂದ ರಾಜನು ಕಂದಾಯ-ತೆರಿಗೆಗಳನ್ನು ತೆಗೆದುಕೊಳ್ಳಬಹುದು.

ಯಾರನ್ನೂ ಯಾಚಿಸದೇ ತಾನಾಗಿಯೇ ಏನು ದೊರಕುವುದೋ ಅಷ್ಟರಿಂದಲೇ ಜೀವನ ನಿರ್ವಹಿಸುವ ಶಾಲೀನವೃತ್ತಿ.* ಪ್ರತಿನಿತ್ಯವೂ ಆಯಾ ದಿನಕ್ಕೆ ಎಷ್ಟುಬೇಕೋ ಅಷ್ಟನ್ನು ಮಾತ್ರ ಬೇಡಿ ಜೀವನಯಾತ್ರೆಯನ್ನು ನಡೆಸುವುದಕ್ಕೆ 'ಮೃತ' ಎಂದು ಹೆಸರು. ಕೃಷಿ, ವ್ಯಾಪಾರ ಮುಂತಾದುವುಗಳಿಂದ ಜೀವನ ನಿರ್ವಹಿಸುವ 'ವಾರ್ತಾ' ವೃತ್ತಿಗೆ 'ಪ್ರಮೃತ' ಎಂದು ಹೆಸರು. (ವಾಣಿಜ್ಯ-ವ್ಯಾಪಾರವು) 'ಸತ್ಯಾನೃತ' ಎನಿಸುತ್ತದೆ ಮತ್ತು ಕೆಳವರ್ಣದ ಸೇವೆ ಮಾಡುವುದು 'ಶ್ವವೃತ್ತಿ' ಎಂದು ಕರೆಯಲ್ಪಡುತ್ತದೆ. ಬ್ರಾಹ್ಮಣ ಮತ್ತು ಕ್ಷತ್ರಿಯರು ಅತಿನಿಂದ್ಯವಾದ ಈ ಕಡೆಯ ವೃತ್ತಿಯನ್ನು ಎಂದಿಗೂ ಆಶ್ರಯಿಸಬಾರದು. ಏಕೆಂದರೆ : ಬ್ರಾಹ್ಮಣನು ಸರ್ವವೇದ ಮಯನಾಗಿದ್ದಾನೆ ಮತ್ತು ಕ್ಷತ್ರಿಯರಾಜನು ಸರ್ವದೇವಮಯನಾಗಿದ್ದಾನೆ.
(ಶ್ಲೋಕ 13-20)

ಶಮ, ದಮ, ತಪಸ್ಸು, ಶೌಚ (ಒಳ ಮತ್ತು ಹೊರ ಶುಚಿತ್ವ), ಸಂತೋಷ, ಕ್ಷಮೆ, ಸರಳತೆ, ಜ್ಞಾನ, ದಯೆ, ಭಗವತ್ಪರಾಯಣತೆ ಮತ್ತು ಸತ್ಯ–ಎಂಬಿವು ಬ್ರಾಹ್ಮಣನ ಲಕ್ಷಣಗಳು. ಶೌರ್ಯ (ಯುದ್ಧದಲ್ಲಿ ಉತ್ಸಾಹ), ವೀರ್ಯ (ಪರಾಕ್ರಮ), ಧೈರ್ಯ, ತೇಜಸ್ಸು, ತ್ಯಾಗ, ಮನೋಜಯ, ಕ್ಷಮೆ, ಬ್ರಾಹ್ಮಣರಲ್ಲಿ ಭಕ್ತಿ, ಅನುಗ್ರಹ ಮತ್ತು ಪ್ರಜೆ ಗಳನ್ನು ರಕ್ಷಿಸುವಿಕೆ–ಇವು ಕ್ಷತ್ರಿಯನ ಲಕ್ಷಣಗಳು. ದೇವತೆಗಳೆಲ್ಲರೂ, ಗುರು

---

* ಶಾಲೀನವೃತ್ತಿ ಎಂದರೆ ಯಜ್ಞಮಾಡಿಸುವುದು, ಅಧ್ಯಯನ ಮಾಡಿಸುವುದು– ಇವುಗಳಿಂದ ದೊರೆತ ಸಂಪತ್ತಿನಿಂದ ಜೀವಿಸುವಿಕೆ. ಯಾಯಾವರ–ಎಂದರೆ ಯಾರನ್ನೂ ಯಾಚಿಸದೇ ತಾನಾಗಿಯೇ ಏನು ಸಮರ್ಪಿಸಲ್ಪಡುತ್ತದೆಯೋ–ಅದರಿಂದ ಜೀವನವನ್ನು ನಿರ್ವಹಣೆಮಾಡುವಿಕೆ. ಮೃತ–ಎಂದರೆ ಪ್ರತಿದಿನವೂ ಆಯಾ ದಿನಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ಧಾನ್ಯ ಮುಂತಾದುವುಗಳನ್ನು ಸ್ವೀಕರಿಸಿ, ಅದನ್ನು ಸಂಗ್ರಹಿಸಿ ಇಡದೇ ಆಯಾ ದಿನದ ಜೀವನಯಾತ್ರೆಯನ್ನು ನಿರ್ವಹಿಸುವುದು. ರೈತನು ಗದ್ದೆ-ಹೊಲಗಳಲ್ಲಿ ಪೈರನ್ನು ಕೊಯ್ದು ಧಾನ್ಯವನ್ನು ಮನೆಗೆ ಕೊಂಡೊಯ್ದ ಬಳಿಕ ಅಲ್ಲಿ ಕಣದಲ್ಲಿ ಬಿದ್ದಿರುವ ಧಾನ್ಯಕ್ಕೆ 'ಶಿಲ' ಎಂದು ಹೆಸರು. ಪೇಟೆಯಲ್ಲಿ ಬಿದ್ದಿರುವ ಧಾನ್ಯಕಣಗಳಿಗೆ 'ಉಂಛ' ಎಂದು ಹೆಸರು. ಈ ಶಿಲ ಮತ್ತು ಉಂಛಗಳನ್ನು ಮಾತ್ರ ಸಂಗ್ರಹಿಸಿ ಯಾರ ಹಂಗೂ ಇಲ್ಲದೇ ನಡೆಸುವ ಜೀವನಕ್ಕೆ 'ಶಿಲೋಂಛನ' ಎಂದು ಹೆಸರು.

ಗಳಲ್ಲೂ ಮತ್ತು ಶ್ರೀಭಗವಂತನಲ್ಲೂ ಭಕ್ತಿ, ಅರ್ಥ-ಧರ್ಮ-ಕಾಮ–ಎಂಬ ಮೂರು ಪುರುಷಾರ್ಥಗಳ ರಕ್ಷಣೆ, ಆಸ್ತಿಕತೆ, ಉದ್ಯೋಗಶೀಲತ್ವ ಮತ್ತು ವ್ಯಾವಹಾರಿಕವಾದ ನಿಪುಣತೆ–ಎಂಬಿವು ವೈಶ್ಯನ ಲಕ್ಷಣಗಳು. ಉಚ್ಚ ವರ್ಣದವರಲ್ಲಿ ವಿನಯದಿಂದ ವರ್ತಿಸುವಿಕೆ, ಪವಿತ್ರತೆ, ಕಪಟವಿಲ್ಲದೇ ಒಡೆಯನ ಸೇವೆಸಲ್ಲಿಸುವಿಕೆ, ವೈದಿಕಮಂತ್ರರಹಿತವಾದ ಯಜ್ಞಗಳ ಆಚರಣೆ, ಕಳ್ಳತನ ಮಾಡದೇ ಇರುವಿಕೆ, ಸತ್ಯ ಮತ್ತು ಗೋ-ಬ್ರಾಹ್ಮಣರ ರಕ್ಷಣೆಯನ್ನು ಮಾಡುವಿಕೆ ಇವು ಶೂದ್ರನ ಲಕ್ಷಣಗಳು. (ಶ್ಲೋಕ 21-24)

ಪತಿಯ ಶುಶ್ರೂಷೆ ಮಾಡುವಿಕೆ, ಅನುಕೂಲವಾಗಿರುವಿಕೆ, ಪತಿಯ ನೆಂಟರಿಷ್ಟರನ್ನು ಪ್ರಸನ್ನವಾಗಿ ಇರಿಸುವಿಕೆ, ಸದಾ ಪತಿಯ ನಿಯಮಗಳನ್ನು ರಕ್ಷಣೆ ಮಾಡುವಿಕೆ–ಇವಿಷ್ಟೂ ಪತಿಯನ್ನು ದೇವರೆಂದು ಭಾವಿಸುವ ಪತಿವ್ರತಾಸ್ತ್ರೀಯರ ಲಕ್ಷಣಗಳು. ಸಾಧ್ವಿಯಾದ ಹೆಂಗಸು ಮನೆಯನ್ನು ಗುಡಿಸಿ ಒರೆಸುವುದು, ಸಾರಿಸುವುದು, ಮಂಡಲರಂಗವಲ್ಲಿಗಳಿಂದ ಮನೆಯನ್ನು ಸುಂದರವಾಗಿ ಇಡುವಿಕೆ, ಮನೋಹರವಾದ ಉಡಿಗೆ-ತೊಡಿಗೆಗಳಿಂದ ಅಲಂಕಾರಮಾಡಿಕೊಳ್ಳುವಿಕೆ, ಸಾಮಗ್ರಿಗಳನ್ನು ಶುದ್ಧವಾಗಿ ಚೊಕ್ಕಟವಾಗಿಡುವಿಕೆ–ಮುಂತಾದ ಕರ್ತವ್ಯಗಳನ್ನು ಚೆನ್ನಾಗಿ ಪಾಲಿಸಬೇಕು. ತನ್ನ ಪತಿಯ ಸಣ್ಣ ಮತ್ತು ದೊಡ್ಡ ಇಷ್ಟಗಳನ್ನು ಆಕೆಯ ಸಮಯಾನುಸಾರವಾಗಿ ಈಡೇರಿಸಬೇಕು. ವಿನಯ, ಇಂದ್ರಿಯಸಂಯಮ, ಸತ್ಯ ಮತ್ತು ಪ್ರಿಯ ವಚನಗಳಿಂದ ಪ್ರೇಮಪೂರ್ವಕವಾಗಿ ಪತಿಯ ಸೇವೆಮಾಡುವಿಕೆ–ಇವೂ ಆಕೆಯ ಧರ್ಮಗಳು. ಸಿಕ್ಕಿದಷ್ಟು ದ್ರವ್ಯಗಳಿಂದಲೇ ಸಂತೋಷಪಟ್ಟುಕೊಳ್ಳಬೇಕು. ಸತ್ಯವೂ ಮತ್ತು ಪ್ರಿಯವೂ ಆದ ಮಾತುಗಳನ್ನೇ ಆಡಬೇಕು. ತನ್ನ ಕರ್ತವ್ಯಗಳ ವಿಷಯದಲ್ಲಿ ಎಚ್ಚರವಾಗಿರಬೇಕು. ಪತಿವ್ರತೆಯಾಗಿ ಪ್ರೇಮದಿಂದ ತುಂಬಿದವಳಾಗಿ, ಪತಿಯು ಧರ್ಮಭ್ರಷ್ಟನಾಗದೇ ಇದ್ದರೆ ಆತನ ಸಹವಾಸವನ್ನು ಮಾಡಬೇಕು. ಹೆಂಡತಿಯು ಲಕ್ಷ್ಮೀದೇವಿಯಂತೆ ಪತಿಪರಾಯಣೆಯಾಗಿ, ಆತನನ್ನು ಸಾಕ್ಷಾತ್ ಶ್ರೀಭಗವಂತನೆಂದು ಭಾವಿಸಿ ಆತನ ಸೇವೆಯನ್ನು ಮಾಡುತ್ತಿದ್ದರೆ ಆಕೆಯ ಪತಿಯು ವೈಕುಂಠಲೋಕದಲ್ಲಿ ಶ್ರೀಭಗವಂತನ ಸಾರೂಪ್ಯವನ್ನು ಹೊಂದುವನು ಮತ್ತು ಆಕೆಯು

ನಾರಾಯಣನೊಡನೆ ಲಕ್ಷ್ಮೀದೇವಿಯು ಹೇಗೋ ಹಾಗೆ ಆತನೊಡನೆ ಆನಂದವಾಗಿರುವಳು. (ಶ್ಲೋಕ 25-29)

ಧರ್ಮರಾಜ! ಕಳ್ಳತನವೇ ಮುಂತಾದ ಪಾಪಗಳನ್ನು ಆಚರಿಸದೇ ಇರುವ ಸತ್ಪುರುಷರಾದ ಅಂತ್ಯಜರಿಗೂ ಮತ್ತು ವರ್ಣಸಾಂಕರ್ಯದಿಂದ ಹುಟ್ಟಿದ ಜಾತಿಗಳಿಗೂ ಅವರವರ ವಂಶಪರಂಪರೆಯಿಂದ ಬಂದಿರುವ ವೃತ್ತಿಗಳೇ ಜೀವನೋಪಾಯಗಳು. ವೇದಜ್ಞರಾದ ಮಹರ್ಷಿಗಳು ಸಾಮಾನ್ಯವಾಗಿ ಪ್ರತಿಯುಗದಲ್ಲಿಯೂ ಮನುಷ್ಯರ ಸ್ವಭಾವಕ್ಕೆ ಅನುಗುಣ ವಾಗಿ ಧರ್ಮದ ವ್ಯವಸ್ಥೆಯನ್ನು ಮಾಡಿದ್ದಾರೆ. ಆ ಧರ್ಮವೇ ಅವರಿಗೆ ಇಹಲೋಕ-ಪರಲೋಕಗಳೆರಡರಲ್ಲೂ ಮಂಗಳವನ್ನುಂಟುಮಾಡುವುದು. ತನಗೆ ಸ್ವಾಭಾವಿಕವಾದ ವೃತ್ತಿಯನ್ನು ಆಶ್ರಯಿಸಿ ಸ್ವಧರ್ಮವನ್ನು ಪಾಲನೆ ಮಾಡುವ ಮನುಷ್ಯನು ಮೆಲ್ಲ-ಮೆಲ್ಲನೆ ಆ ಸ್ವಾಭಾವಿಕಕರ್ಮಗಳನ್ನು ಮೀರಿದವನಾಗಿ ತ್ರಿಗುಣಾತೀತನೇ ಆಗಿಬಿಡುವನು. ಮಹಾರಾಜನೇ! ಮತ್ತೆ ಮತ್ತೆ ಉಳುವುದರಿಂದ ಕ್ಷೇತ್ರವು ಶಕ್ತಿಹೀನವಾಗಿಬಿಡುವುದು. ಅದರಲ್ಲಿ ಮೊಳಕೆ-ಚಿಗುರುಗಳು ಹುಟ್ಟುವುದು ನಿಂತುಹೋಗುವುದು. ಇಷ್ಟೇ ಅಲ್ಲ ; ಅದರಲ್ಲಿ ಬಿತ್ತಿದ್ದ ಬೀಜವೂ ನಷ್ಟವಾಗಿಬಿಡುವುದಲ್ಲವೇ? ಹಾಗೆಯೇ ವಾಸನೆಗಳ ಭಂಡಾರವಾಗಿರುವ ಈ ಚಿತ್ತವು ವಿಷಯಗಳನ್ನು ಮಿತಿಮೀರಿ ಸೇವಿಸುವುದರಿಂದ ಆ ಬಗೆಗೆ ಬೇಸರಹೊಂದಿಬಿಡುವುದು. ಆದರೆ ಇಂದ್ರಿಯ ಭೋಗಗಳನ್ನು ಅಲ್ಪಪ್ರಮಾಣದಲ್ಲಿ ಸೇವಿಸಿದರೆ ಹೀಗಾಗುವುದಿಲ್ಲ. ಒಂದೊಂದೇ ತೊಟ್ಟು ತುಪ್ಪವನ್ನು ಹಾಕುತ್ತಿದ್ದರೆ ಬೆಂಕಿಯು ಆರುವುದಿಲ್ಲ. ಆದರೆ ಒಟ್ಟಿಗೇ ಹೆಚ್ಚು ತುಪ್ಪವನ್ನು ಸುರಿದುಬಿಟ್ಟರೆ ಅದು ನಂದಿಹೋಗು ವುದು. ಹಾಗೆಯೇ ಇಂದ್ರಿಯಭೋಗಗಳನ್ನೇ ಸ್ವಲ್ಪ ಸ್ವಲ್ಪ ಸೇವಿಸಿದರೆ ಇಂದ್ರಿಯಶಕ್ತಿಯು ಕುಂದುವುದಿಲ್ಲ. ಒಬ್ಬ ಮನುಷ್ಯನ ವರ್ಣಕ್ಕೆ ಯಾವ ಲಕ್ಷಣಗಳನ್ನು ಹೇಳಿದೆಯೋ–ಅದು ಮತ್ತೊಂದು ವರ್ಣದವರಲ್ಲಿದ್ದರೆ ಅವರನ್ನೂ ಆ ವರ್ಣದವರೆಂದೇ ತಿಳಿಯಬೇಕು." (ಶ್ಲೋಕ 30-35)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಸಪ್ತಮಸ್ಕಂಧದ ೧೧ನೆಯ ಅಧ್ಯಾಯವು ಮುಗಿಯಿತು.

ಬ್ರಹ್ಮಚರ್ಯ ಮತ್ತು ವಾನಪ್ರಸ್ಥಾಶ್ರಮಗಳ ನಿಯಮಗಳು

ನಾರದಮಹರ್ಷಿಗಳು ಹೇಳುತ್ತಾರೆ :

ಬ್ರಹ್ಮಚಾರೀ ಗುರುಕುಲೇ ವಸನ್ದಾನ್ತೋ ಗುರೋರ್ಹಿತಮ್ ।
ಆಚರನ್ದಾಸವನ್ನೀಚೋ ಗುರೌ ಸುದೃಢಸೌಹೃದಃ ॥೧॥

"ಎಲೈ ಧರ್ಮರಾಜನೇ! ಬ್ರಹ್ಮಚರ್ಯ ಮತ್ತು ವಾನಪ್ರಸ್ಥಾಶ್ರಮಗಳ ಧರ್ಮಗಳನ್ನು ಹೇಳುತ್ತೇನೆ, ಕೇಳು :

ಬ್ರಹ್ಮಚಾರಿಯು ಗುರುಕುಲದಲ್ಲಿ ವಾಸಮಾಡುತ್ತಾ ಜಿತೇಂದ್ರಿಯನಾಗಿ ಗುರುಗಳಿಗೆ ಹಿತವಾದ ಕಾರ್ಯಗಳನ್ನು ಮಾಡಬೇಕು. ತನ್ನನ್ನು ಅವರ ದಾಸನೆಂದೂ, ಅವರಿಗಿಂತ ಚಿಕ್ಕವನೆಂದೂ ತಿಳಿದು ಅವರಲ್ಲಿ ದೃಢಭಕ್ತಿಯಿಂದ ಕೂಡಿ ಅವರ ಸೇವೆ-ಶುಶ್ರೂಷೆಗಳನ್ನು ಮಾಡುತ್ತಿರಬೇಕು.

ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ಗುರುಗಳನ್ನೂ ಅಗ್ನಿಯನ್ನೂ ಮತ್ತು ದೇವಶ್ರೇಷ್ಠರನ್ನೂ ಉಪಾಸನೆಮಾಡಬೇಕು. ಎರಡು ಸಂಧ್ಯಾಕಾಲ ಗಳಲ್ಲಿಯೂ ಮೌನಿಯಾಗಿದ್ದು ಏಕಾಗ್ರಮನಸ್ಸಿನಿಂದ ಗಾಯತ್ರಿಯನ್ನು ಜಪಿಸುತ್ತಾ ಸಂಧ್ಯಾವಂದನೆಮಾಡಬೇಕು. ಗುರುಗಳು ಯಾವಾಗ ಕರೆಯು ತ್ತಾರೆಯೋ ಆಗಲೇ ಮನಸ್ಸು-ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟು ಕೊಂಡು ಶಿಸ್ತಿನಿಂದ ಕೂಡಿ ಅವರಿಂದ ವೇದಗಳನ್ನು ಕಲಿಯಬೇಕು. ವೇದಪಠನದ ಆರಂಭದಲ್ಲಿಯೂ ಮತ್ತು ಕಡೆಯಲ್ಲಿಯೂ ಅವರ ಚರಣಗಳಲ್ಲಿ ತಲೆತಗ್ಗಿಸಿ ನಮಸ್ಕಾರಮಾಡಬೇಕು. ಶಾಸ್ತ್ರಗಳು ಹೇಳಿರು ವಂತೆ ಮೌಂಜಿ, ಕೃಷ್ಣಾಜಿನ, ವಸ್ತ್ರ, ಜಟೆ ಅಥವಾ ಶಿಖೆ, ದಂಡ, ಕಮಂಡಲು, ಮತ್ತು ಯಜ್ಞೋಪವೀತಗಳನ್ನು ಧರಿಸಬೇಕು. ಕೈಯಲ್ಲಿ ದರ್ಭೆಯ ಪವಿತ್ರವನ್ನು ಧರಿಸಿರಬೇಕು. ಸಾಯಂಕಾಲ ಮತ್ತು ಪ್ರಾತಃಕಾಲ ಗಳಲ್ಲಿ ಭಿಕ್ಷೆಯನ್ನು ಮಾಡಿ ಭಿಕ್ಷೆಯಲ್ಲಿ ದೊರೆತ ಪದಾರ್ಥವನ್ನು ಗುರು ಗಳಿಗೆ ಸಮರ್ಪಿಸಬೇಕು. ಅವರು ಅನುಜ್ಞೆಕೊಟ್ಟರೆ ಅದನ್ನು ಸೇವಿಸ ಬೇಕು. ಇಲ್ಲದಿದ್ದರೆ ಉಪವಾಸಮಾಡಬೇಕು. ಶೀಲವಂತನಾಗಿರಬೇಕು.

ಮಿತವಾಗಿ ಭೋಜನಮಾಡಬೇಕು. ಶ್ರದ್ಧೆಯನ್ನು ಇಟ್ಟುಕೊಂಡಿರಬೇಕು. ಇಂದ್ರಿಯಗಳನ್ನು ವಶದಲ್ಲಿಟ್ಟುಕೊಳ್ಳಬೇಕು. ಸ್ತ್ರೀಯರೊಡನೆಯೂ ಮತ್ತು ಸ್ತ್ರೀಯರಿಗೆ ವಶರಾದವರೊಡನೆಯೂ ಕೆಲಸಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರವೇ ವ್ಯವಹಾರವನ್ನಿಟ್ಟುಕೊಳ್ಳಬೇಕು. ಗೃಹಸ್ಥನಾಗದೇ ಬ್ರಹ್ಮಚರ್ಯದ ಮಹಾವ್ರತದಲ್ಲಿರುವವನು ಹೆಂಗಸರೊಡನೆ ಚರ್ಚೆಯಿಂದಲೂ ದೂರ ವಾಗಿರಬೇಕು. ಏಕೆಂದರೆ : ಇಂದ್ರಿಯಗಳು ಬಹಳ ಬಲಶಾಲಿಗಳು. ಪ್ರಯತ್ನಪೂರ್ವಕವಾಗಿ ಸಾಧನೆಮಾಡುವವನ ಮನಸ್ಸನ್ನು ಕೂಡ ಅವು ಕಲಕಿ, ತಮ್ಮ ಕಡೆಗೆ ಸೆಳೆದುಕೊಳ್ಳುತ್ತವೆ. ಗುರುಪತ್ನಿಯರು ಯುವತಿಯರಾಗಿದ್ದರೆ ಅವರಿಂದ ತಲೆಬಾಚಿಸಿಕೊಳ್ಳುವುದು, ಕೈ-ಕಾಲುಗಳನ್ನು ಒತ್ತಿಸಿಕೊಳ್ಳುವುದು, ಎಣ್ಣೆಹಚ್ಚಿಸಿಕೊಳ್ಳುವುದು, ನೀರೆರೆಸಿಕೊಳ್ಳುವುದು–ಮುಂತಾದುವುಗಳನ್ನು ಮಾಡಿಸಿಕೊಳ್ಳಬಾರದು. ಹೆಂಗಸರನ್ನು ಬೆಂಕಿಗೂ–ಪುರುಷರನ್ನು ತುಪ್ಪದ ಗಡಿಗೆಗೂ ಹೋಲಿಸಬಹುದು. ಅವುಗಳ ಸೇರುವಿಕೆ ಅಪಾಯಕರವಾದುದು. ತನ್ನ ಸ್ವಂತ ಮಗಳ ಜೊತೆಯಲ್ಲಿ ಕೂಡ ಏಕಾಂತದಲ್ಲಿರಬಾರದು. ಆಕೆಯು ಏಕಾಂತದಲ್ಲಿ ಇಲ್ಲದೇ ಇರುವಾಗಲೂ ಅವಶ್ಯಕವಾದಷ್ಟು ಹೊತ್ತು ಮಾತ್ರ ಆಕೆಯೊಡನೆ ಇರಬೇಕು. ಈ ಜೀವನಿಗೆ ಎಲ್ಲಿಯವರೆಗೆ ಆತ್ಮಸಾಕ್ಷಾತ್ಕಾರವುಂಟಾಗಿ 'ದೇಹ ಮತ್ತು ಇಂದ್ರಿಯಗಳು ನಿಜವಾಗಿಯೂ ಆತ್ಮನಲ್ಲ. ಅವುಗಳಲ್ಲಿ ಆತ್ಮಭಾವವು ಕಲ್ಪಿತವೇ ಹೊರತು ವಾಸ್ತವಿಕವಲ್ಲ'–ಎಂಬ ನಿಶ್ಚಯವುಂಟಾಗಿ 'ನಾನು ಪುರುಷ, ಈಕೆಯು ಹೆಂಗಸು'–ಎಂಬ ದ್ವೈತಭಾವನೆಯು ತೊಲಗುವುದಿಲ್ಲವೋ–ಅಲ್ಲಿಯ ವರೆಗೂ ಆತನು ಸ್ತ್ರೀಸಹವಾಸದಲ್ಲಿದ್ದರೆ ಖಂಡಿತವಾಗಿಯೂ ಆತನಿಗೆ ಸ್ತ್ರೀಯಲ್ಲಿ ಆಕೆಯು ಭೋಗ್ಯವಸ್ತುವೆಂಬ ಬುದ್ಧಿಯು ಉಂಟಾಗಿಯೇ ಆಗುವುದು.

(ಶ್ಲೋಕ 2-10)

ಈ ಶೀಲರಕ್ಷಣೆಯೇ ಮುಂತಾದ ಗುಣಗಳು ಗೃಹಸ್ಥನಿಗೂ ಮತ್ತು ಸಂನ್ಯಾಸಿಗೂ ಕೂಡ ನಿಯಮಿತವಾಗಿವೆ. ಗುರುಕುಲದಲ್ಲಿದ್ದು ಗುರುವಿನ ಸೇವೆ-ಶುಶ್ರೂಷೆಗಳಲ್ಲಿಯೇ ನಿರತನಾಗಿರುವುದು ಗೃಹಸ್ಥನಿಗೆ ವೈಕಲ್ಪಿಕ, ಅನಿವಾರ್ಯವಲ್ಲ. ಏಕೆಂದರೆ : ಅವನು ಋತುಕಾಲದಲ್ಲಿ ಪತ್ನೀಸಂಗಮ ವನ್ನು ಮಾಡುವುದು ಶಾಸ್ತ್ರೀಯವೇ ಆಗಿದೆ. ಬ್ರಹ್ಮಚರ್ಯವ್ರತದಲ್ಲಿರು

ವವನು ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳಬಾರದು. ಮೈಗೆ ಎಣ್ಣೆ ಹಚ್ಚಿಕೊಳ್ಳ ಬಾರದು. ಹೆಂಗಸರ ಚಿತ್ರವನ್ನು ಬರೆಯಬಾರದು. ಮಾಂಸ-ಮದ್ಯಗಳನ್ನು ಸೇವಿಸಲೇಕೂಡದು. ಹೂವುಗಳಮಾಲೆ, ಅತ್ತರು, ಗಂಧ ಮತ್ತು ಭೂಷಣಗಳನ್ನು ತೊರೆಯಬೇಕು. ಹೀಗೆ ಗುರುಕುಲದಲ್ಲಿದ್ದು ದ್ವಿಜರು ತಮ್ಮ ಶಕ್ತಿ ಮತ್ತು ಅವಶ್ಯಕತೆಗೆ ಅನುಗುಣವಾಗಿ ವೇದಗಳನ್ನೂ, ವೇದಾಂಗಗಳಾದ ಶಿಕ್ಷೆ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ ಮತ್ತು ಕಲ್ಪಗಳನ್ನೂ, ಉಪನಿಷತ್ತುಗಳನ್ನೂ ಅಧ್ಯಯನಮಾಡಿ ಜ್ಞಾನವನ್ನು ಸಂಪಾದಿಸಬೇಕು. ಅನಂತರ ಸಾಮರ್ಥ್ಯವಿದ್ದರೆ ಗುರುವಿಗೆ ಆತನು ಕೇಳಿದಷ್ಟು ದಕ್ಷಿಣೆಯನ್ನು ಸಮರ್ಪಣೆಮಾಡಿ ಆತನ ಅನುಮತಿಯನ್ನು ಪಡೆದು ಗೃಹಸ್ಥನಾಗಬೇಕು ಅಥವಾ ಜೀವಮಾನಪೂರ್ತಿಯಾಗಿ ನೈಷ್ಠಿಕಬ್ರಹ್ಮಚಾರಿಯಾಗಿ ಗುರುವಿನ ಆಶ್ರಮದಲ್ಲಿಯೇ ಇದ್ದುಬಿಡಬೇಕು. ಶ್ರೀಭಗವಂತನು ಸ್ವರೂಪದಿಂದಲೇ ಎಲ್ಲದರಲ್ಲಿಯೂ ಅಂತರ್ಯಾಮಿಯಾಗಿದ್ದಾನೆ. ಯಾವುದರಲ್ಲೂ ಹೊಸ ದಾಗಿ ಪ್ರವೇಶಮಾಡುವುದಿಲ್ಲ. ಆದರೂ ಆತನು ಅಗ್ನಿಯಲ್ಲೂ, ಗುರುವಿನಲ್ಲೂ, ಆತ್ಮನಲ್ಲೂ ಮತ್ತು ಪ್ರಾಣಿಗಳಲ್ಲೂ ತನ್ನ ವಿಭೂತಿಗಳಾದ ದೇವತೆಗಳೊಡನೆ ಪ್ರವೇಶಮಾಡಿರುವನೋ ಎಂಬಂತೆ ವಿಶೇಷವಾಗಿ ಬೆಳಗುತ್ತಿದ್ದಾನೆ–ಎಂದು ಭಾವಿಸಿ ಅವುಗಳನ್ನು ಪರಮಾತ್ಮಭಾವದಿಂದ ನೋಡಬೇಕು. ಈ ರೀತಿಯಲ್ಲಿ ಆಚರಿಸುವವನು ಬ್ರಹ್ಮಚಾರಿಯಾಗಲೀ, ವಾನಪ್ರಸ್ಥನಾಗಲೀ ಅಥವಾ ಗೃಹಸ್ಥನೇ ಆಗಲೀ–ಆತನಿಗೆ ವಿಶೇಷವಾದ ಅನುಭವಜ್ಞಾನವುಂಟಾಗಿ ಆತನು ಪರಬ್ರಹ್ಮವನ್ನು ಹೊಂದುವನು.

(ಶ್ಲೋಕ 11-16)

ಈಗ ನಾನು ಋಷಿಗಳು ಅಭಿಪ್ರಾಯಪಟ್ಟಿರುವಂತೆ ವಾನಪ್ರಸ್ಥಾಶ್ರ ಮದ ಧರ್ಮವನ್ನು ಹೇಳುತ್ತೇನೆ ; ಕೇಳು : ಈ ಧರ್ಮವನ್ನು ಆಚರಿಸುವ ವಾನಪ್ರಸ್ಥಾಶ್ರಮಿಯು ಅನಾಯಾಸವಾಗಿಯೇ ಋಷಿಗಳ ಲೋಕವಾದ ಮಹರ್ಲೋಕವನ್ನು ಹೊಂದುವನು.* ವಾನಪ್ರಸ್ಥಾಶ್ರಮಿಯು, ಉತ್ತಿರುವ

---

* ನಿಷ್ಕಾಮನಾಗಿ ಭಗವದರ್ಪಣಬುದ್ಧಿಯಿಂದ ಯಾವುದೇ ಆಶ್ರಮದ ಧರ್ಮ ಗಳನ್ನು ಸರಿಯಾಗಿ ಆಚರಿಸಿದರೂ ಆತನಿಗೆ ಪರಮಪದದ ಪ್ರಾಪ್ತಿಯುಂಟು. ಇದೇ

ನೆಲದಲ್ಲಿ ಬೆಳೆದ ಧಾನ್ಯವೇ ಮುಂತಾದ ಆಹಾರಗಳನ್ನು ಸೇವಿಸಬಾರದು. ಉಳುಮೆಯಿಲ್ಲದ ನೆಲದಲ್ಲಿ ಬೆಳೆದಿದ್ದರೂ ಅದು ಅಕಾಲದಲ್ಲಿ ಪಕ್ವವಾದ ಧಾನ್ಯವೇ ಮುಂತಾದ ಆಹಾರವಾಗಿದ್ದರೆ–ಅವನ್ನೂ ತಿನ್ನಕೂಡದು. ಬೆಂಕಿಯಲ್ಲಿ ಪಕ್ವವಾದ ಆಹಾರವನ್ನಾಗಲೀ, ಹಸಿಯ ಧಾನ್ಯವನ್ನಾಗಲೀ ತಿನ್ನಬಾರದು. ಸೂರ್ಯನ ಬಿಸಿಲಿನಿಂದ ಪಕ್ವವಾಗಿರುವ ಗೆಡ್ಡೆ-ಗೆಣಸು-ಹಣ್ಣು ಮುಂತಾದುವುಗಳನ್ನೇ ಸೇವಿಸಬೇಕು. ಕಾಡುಗಳಲ್ಲಿ ತನಗೆ ತಾನೇ ಬೆಳೆದ ಧಾನ್ಯಗಳಿಂದ ಆಯಾ ಕಾಲಕ್ಕೆ ಶಾಸ್ತ್ರದಲ್ಲಿ ವಿಹಿತವಾಗಿರುವಂತೆ ಚರು, ಪರೋಡಾಶ–ಮುಂತಾದುವುಗಳನ್ನು ಹೋಮಮಾಡಬೇಕು. ನಿತ್ಯ-ನೈಮಿತ್ತಕಕರ್ಮಗಳನ್ನು ಆಚರಿಸಬೇಕು. ಹೊಸದಾದ ಗೆಡ್ಡೆ-ಗೆಣಸು-ಧಾನ್ಯ ಇತ್ಯಾದಿಗಳು ದೊರಕಿದರೆ ಹಿಂದೆ ಸಂಗ್ರಹಿಸಿಟ್ಟಿದ್ದ ಹಳೆಯ ಆಹಾರವನ್ನು ತೊರೆದುಬಿಡಬೇಕು. ಅಗ್ನಿಹೋತ್ರದ ಅಗ್ನಿಯನ್ನು ರಕ್ಷಿಸುವುದಕ್ಕಾಗಿಯೇ ಮನೆಯನ್ನಾಗಲೀ, ಗುಡಿಸಿಲನ್ನಾಗಲೀ, ಗಿರಿಗುಹೆಯನ್ನಾಗಲೀ ಆಶ್ರಯಿಸಬೇಕು. ಚಳಿ, ಗಾಳಿ, ಮಳೆ, ಬಿಸಿಲುಗಳನ್ನು ತಾನು ಸಹಿಸಿಕೊಳ್ಳಬೇಕು. ತಲೆಯಲ್ಲಿ ಜಟೆಯನ್ನು ಬೆಳೆಸಿಕೊಳ್ಳಬೇಕು. ಕೂದಲು, ಉಗುರು, ಗಡ್ಡ, ಮೀಸೆ, ಕೊಳೆಗಳನ್ನು ದೇಹದಿಂದ ತೆಗೆಯಬಾರದು. ಕಮಂಡಲು, ಕೃಷ್ಣಾಜಿನ, ದಂಡ, ನಾರುಮಡಿ ಮತ್ತು ಅಗ್ನಿಹೋತ್ರದ ಸಾಮಗ್ರಿಗಳನ್ನು ಮಾತ್ರವೇ ತನ್ನ ಬಳಿ ಇಟ್ಟುಕೊಳ್ಳಬೇಕು. ವಿಚಾರಶೀಲನಾದ ಮನುಷ್ಯನು ಈ ವಾನಪ್ರಸ್ಥಧರ್ಮನಿಯಮಗಳನ್ನು ಹನ್ನೆರಡು, ಎಂಟು, ನಾಲ್ಕು, ಎರಡು ಅಥವಾ ಒಂದು ವರ್ಷಗಳ ಕಾಲದವರೆಗಾದರೂ ಪಾಲಿಸಬೇಕು. ಇಲ್ಲಿ ಒಂದು ಎಚ್ಚರಿಕೆಯ ಮಾತು. ಮಿತಿಮೀರಿ ತಪಸ್ಸುಮಾಡುವುದರಿಂದ ಆಯಾಸವನ್ನು ಸಹಿಸಲಾರದೇ ಬುದ್ಧಿಯು ಕೆಟ್ಟುಹೋಗಬಹುದು. ಹಾಗೆ ಆಗದಂತೆ

ಸ್ಕಂಧದ ಹದಿನೈದನೆಯ ಅಧ್ಯಾಯದಲ್ಲಿ ಭಗವದರ್ಪಣಬುದ್ಧಿಯಿಂದ ನಿಷ್ಕಾಮವಾಗಿ ಕರ್ಮಗಳನ್ನಾಚರಿಸುವ ಗೃಹಸ್ಥಾಶ್ರಮಿಗೂ ಕೂಡ ಸಂನ್ಯಾಸಿಗೆ ದೊರೆಯುವ ಪರಮಪದಪ್ರಾಪ್ತಿಯನ್ನು ಹೇಳಿದೆ.

ಧರ್ಮಸ್ತೇ ಗೃಹಮೇಧೀಯೋ ವರ್ಣಿತಃ ಪಾಪನಾಶನಃ ।
ಗೃಹಸ್ಥೋ ಯೇನ ಪದವೀಮಞ್ಜಸಾ ನ್ಯಾಸಿನಾಮಿಯಾತ್ ॥

ಯಥಾಶಕ್ತಿಯಾಗಿ ಈಗ ತಾನೇ ಹೇಳಿರುವಂತೆ ಸಾಧ್ಯವಾದಷ್ಟು ಕಾಲ ಈ ತಪಸ್ಸನ್ನಾಚರಿಸಬೇಕು. (ಶ್ಲೋಕ 17-22)

ವಾನಪ್ರಸ್ಥಾಶ್ರಮವನ್ನು ಕೈಗೊಂಡಿರುವ ಮನುಷ್ಯನಿಗೆ ರೋಗದ ಅಥವಾ ಮುಪ್ಪಿನ ಕಾರಣದಿಂದ ತನ್ನ ಕರ್ಮವನ್ನು ಪೂರ್ಣಗೊಳಿಸಲು ಸಾಧ್ಯವಾಗದಿದ್ದರೆ ಮತ್ತು ಅಧ್ಯಾತ್ಮವಿದ್ಯೆಯನ್ನು ಸಾಧಿಸುವ ಸಾಮರ್ಥ್ಯವೂ ಇಲ್ಲದೇ ಹೋದರೆ–ಆತನು ಕೊನೆಯವರೆಗೂ ಉಪವಾಸವೇ ಮುಂತಾದ ವ್ರತವನ್ನು ಆಚರಿಸಬೇಕು. ಆ ವ್ರತವನ್ನು ಕೈಗೊಳ್ಳುವುದಕ್ಕೆ ಮೊದಲೇ ಆತನು ತನ್ನ ಆಹವನೀಯವೇ ಮುಂತಾದ ಅಗ್ನಿಗಳನ್ನು ತನ್ನ ಆತ್ಮದಲ್ಲಿ ಲಯಗೊಳಿಸಿಕೊಂಡು ಬಿಡಬೇಕು. ಅಹಂಕಾರ ಮತ್ತು ಮಮಕಾರಗಳನ್ನು ತೊರೆದು ಶರೀರವನ್ನು ಅದರ ಕಾರಣವಾದ ತತ್ತ್ವಗಳಲ್ಲಿ ಯಥೋಚಿತವಾಗಿ ಚೆನ್ನಾಗಿ ಲಯಗೊಳಿಸಬೇಕು. ಆ ಜಿತೇಂದ್ರಿಯನು ತನ್ನ ಶರೀರದೊಳಗಿರುವ ಆಕಾಶಗಳನ್ನು ಮಹಾಕಾಶದಲ್ಲಿಯೂ, ಪ್ರಾಣಗಳನ್ನು ವಾಯುವಿನಲ್ಲಿಯೂ, ಶಾಖವನ್ನು ತೇಜಸ್ಸಿನಲ್ಲಿಯೂ, ರಕ್ತ-ಕಫ-ಕೀವು ಮುಂತಾದ ಜಲಕ್ಕೆ ಸೇರಿದ ತತ್ತ್ವಗಳನ್ನು ಜಲದಲ್ಲಿಯೂ ಮತ್ತು ಮೂಳೆಯೇ ಮುಂತಾದ ಘನಪದಾರ್ಥಗಳನ್ನು ಪೃಥಿವೀತತ್ತ್ವದಲ್ಲಿಯೂ ಲಯಗೊಳಿಸಿ ಬಿಡಬೇಕು. ಹೀಗೆಯೇ ವಾಗಿಂದ್ರಿಯವನ್ನೂ ಮತ್ತು ಅದರ ಕರ್ಮವಾದ ಮಾತನ್ನೂ ಅದಕ್ಕೆ ಅಧಿಷ್ಠಾತೃದೇವತೆಯಾದ ಅಗ್ನಿಯಲ್ಲಿಯೂ ಲಯಗೊಳಿಸಬೇಕು. ಕೈ ಮತ್ತು ಅದರ ಕರ್ಮವಾದ ಶಿಲ್ಪವನ್ನು ಇಂದ್ರನಲ್ಲಿಯೂ, ಚರಣವನ್ನು ಮತ್ತು ಅದರ ಕರ್ಮವಾದ ಗತಿಯನ್ನು ಕಾಲಸ್ವರೂಪನಾದ ಶ್ರೀವಿಷ್ಣುವಿನಲ್ಲಿಯೂ, ರತಿಕ್ರಿಯೆಯನ್ನು ಮತ್ತು ಅದರ ಅಂಗವಾದ ಉಪಸ್ಥವನ್ನು ಪ್ರಜಾಪತಿಯಲ್ಲಿಯೂ ಮತ್ತು ಗುದವನ್ನೂ ಅದರ ಕರ್ಮವಾದ ಮಲವಿಸರ್ಜನೆಯನ್ನೂ ಅವುಗಳಿಗೆ ಆಶ್ರಯವಾದ ಮೃತ್ಯುದೇವತೆಯಲ್ಲಿಯೂ ಲಯಗೊಳಿಸಬೇಕು. ಕಿವಿಗಳನ್ನೂ ಮತ್ತು ಅವುಗಳಿಂದ ಕೇಳಲ್ಪಡುವ ಶಬ್ದವನ್ನೂ ದಿಕ್ಕುಗಳೆಂಬ ದೇವತೆಯಲ್ಲಿಯೂ, ಸ್ಪರ್ಶವನ್ನೂ ಚರ್ಮೇಂದ್ರಿಯವನ್ನೂ ವಾಯುವಿನಲ್ಲಿಯೂ, ನೇತ್ರಸಹಿತವಾದ ರೂಪವನ್ನು ಜ್ಯೋತಿಯಲ್ಲಿಯೂ, ರಸಗಳಿಂದ ಕೂಡಿದ ರಸನೇಂದ್ರಿಯವಾದ ನಾಲಿಗೆಯನ್ನು ಜಲದಲ್ಲಿಯೂ ಮತ್ತು ಘ್ರಾಣೇಂದ್ರಿಯವನ್ನೂ ಅದರ

ಮೂಲಕ ವೇದ್ಯವಾಗುವ ಗಂಧವನ್ನು ಪೃಥಿವೀತತ್ತ್ವದಲ್ಲಿಯೂ ಲಯಗೊಳಿಸಬೇಕು. ಮನೋರಥರಹಿತವಾದ ಮನಸ್ಸನ್ನು ಚಂದ್ರನಲ್ಲಿಯೂ, ತಿಳಿವಳಿಕೆಗೆ ಬರುವ ವಿಷಯಗಳಿಂದೊಡಗೂಡಿದ ಬುದ್ಧಿಯನ್ನು ಬ್ರಹ್ಮದೇವರಲ್ಲಿಯೂ ಮತ್ತು ಅಹಂಕಾರ-ಮಮಕಾರಗಳಿಂದ ಕೂಡಿದ ಅಹಂಕಾರವನ್ನು ಅದರ ದೇವತೆಯಾದ ರುದ್ರದೇವರಲ್ಲಿಯೂ ಲಯಗೊಳಿಸಬೇಕು. ಹಾಗೆಯೇ ಚೇತನದಿಂದ ಕೂಡಿದ ಚಿತ್ತವನ್ನು ಕ್ಷೇತ್ರಜ್ಞ (ಜೀವ)ನಲ್ಲೂ ಮತ್ತು ಗುಣಗಳ ಕಾರಣದಿಂದ ವಿಕಾರಿಯಂತೆ ಕಾಣುವ ಜೀವವನ್ನು ಪರಬ್ರಹ್ಮದಲ್ಲಿಯೂ ಲಯಗೊಳಿಸಿಬಿಡಬೇಕು. ಜೊತೆಯಲ್ಲಿಯೇ ಪೃಥ್ವೀತತ್ತ್ವವನ್ನು ಜಲದಲ್ಲಿಯೂ, ಜಲವನ್ನು ಅಗ್ನಿಯಲ್ಲಿಯೂ, ಅಗ್ನಿಯನ್ನು ವಾಯುವಿನಲ್ಲಿಯೂ, ವಾಯುವನ್ನು ಆಕಾಶದಲ್ಲಿಯೂ, ಆಕಾಶವನ್ನು ಅಹಂಕಾರತತ್ತ್ವದಲ್ಲಿಯೂ, ಅಹಂಕಾರವನ್ನು ಮಹತ್ತತ್ತ್ವದಲ್ಲಿಯೂ, ಮಹತ್ತತ್ತ್ವವನ್ನು ಅವ್ಯಕ್ತದಲ್ಲಿಯೂ ಮತ್ತು ಅವ್ಯಕ್ತವನ್ನು ಅವಿನಾಶಿಯಾದ ಪರಮಾತ್ಮನಲ್ಲಿಯೂ ಲಯಗೊಳಿಸಿಬಿಡಬೇಕು. (ಶ್ಲೋಕ 23-30)

ಇತ್ಯಕ್ಷರತಯಾತ್ಮಾನಂ ಚಿನ್ಮಾತ್ರಮವಶೇಷಿತಮ್ ।
ಜ್ಞಾತ್ವಾದ್ವಯೋऽಥ ವಿರಮೇದ್ದಗ್ಧಯೋನಿರಿವಾನಲಃ ॥೩೧॥

ಹೀಗೆ ಲಯಗೊಳಿಸುತ್ತಾ ಕೊನೆಗೆ ಉಳಿದುಕೊಳ್ಳುವ ಚಿನ್ಮಾತ್ರನೂ, ಅಕ್ಷರನೂ* ಆದ ಆತ್ಮನನ್ನು ಅದ್ವಿತೀಯತತ್ತ್ವವನ್ನಾಗಿ ತಿಳಿದು–ತನಗೆ ಆಶ್ರಯವಾದ ಕಟ್ಟಿಗೆ ಮುಂತಾದುವು ಉರಿದು ಬೂದಿಯಾದ ಬಳಿಕ ಶಾಂತವಾಗಿ ತನ್ನ ಸ್ವರೂಪದಲ್ಲಿ ನೆಲೆಗೊಳ್ಳುವ ಅಗ್ನಿಯಂತೆ–ಸ್ವಸ್ವರೂಪದಲ್ಲಿ ನೆಲೆಗೊಂಡು ಮುಕ್ತನಾಗಬೇಕು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಸಪ್ತಮಸ್ಕಂಧದ ೧೨ನೆಯ ಅಧ್ಯಾಯವು ಮುಗಿಯಿತು.

---

* ಅಕ್ಷರವೆಂದು ಕರೆಯಲ್ಪಡುವ ಚಿತ್ಪ್ರಕೃತಿಯಲ್ಲಿದ್ದು ನಿತ್ಯತ್ವ–ಹೇತುತ್ವಾದಿಗಳಿಂದ ಅಕ್ಷರನೆಂದು ಕರೆಯಲ್ಪಡುವ ಪರಮಾತ್ಮನನ್ನು ಸೃಷ್ಟ್ಯಾದಿವ್ಯಾಪಾರಗಳಲ್ಲಿ ಉದಾಸೀನನೆಂದು ತಿಳಿದು ಅದ್ವಯನಾಗಿ ಎಂದರೆ–ಹರಿವ್ಯತಿರಿಕ್ತವಸ್ತುಗಳಿಗೆ ಸ್ವಾತಂತ್ರ್ಯವುಂಟು–ಎಂಬ ಸ್ಮರಣೆಯಿಂದ ರಹಿತನಾಗಿ ಉಳಿದುದೆಲ್ಲವನ್ನೂ ಬಿಡ

ಯತಿಧರ್ಮದ ನಿರೂಪಣೆ ಮತ್ತು ಪ್ರಹ್ಲಾದ-ಅವಧೂತರ ಸಂವಾದ

ನಾರದಮಹರ್ಷಿಗಳು ಹೇಳುತ್ತಾರೆ :

ಕಲ್ಪಸ್ತ್ವೇವಂ ಪರಿವ್ರಜ್ಯ ದೇಹಮಾತ್ರಾವಶೇಷಿತಃ ।
ಗ್ರಾಮೈಕರಾತ್ರವಿಧಿನಾ ನಿರಪೇಕ್ಷಶ್ಚರೇನ್ಮಹೀಮ್ ॥೧॥

ಎಲೈ ಕೌಂತೇಯನೇ! ಕೇಳು : ನಾನು ಈಗ ಹೇಳಿದ ವಾನಪ್ರಸ್ಥ ಮುನಿಗೆ ಸಾಮರ್ಥ್ಯವಿದ್ದರೆ ಆತನು ದೇಹವನ್ನು ಬಿಟ್ಟು ಉಳಿದೆಲ್ಲವನ್ನೂ ತ್ಯಾಗಮಾಡಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಬೇಕು. ಎಲ್ಲ ಅಪೇಕ್ಷೆಗಳನ್ನೂ ತೊರೆದು (ಕೇವಲ ಮೋಕ್ಷವನ್ನು ಅಪೇಕ್ಷಿಸುತ್ತಾ) ಒಂದು ಹಳ್ಳಿಯಲ್ಲಿ ಒಂದು ರಾತ್ರಿ ಮಾತ್ರ ತಂಗಬೇಕು–ಎಂಬ ನಿಯಮವನ್ನು ಕೈಗೊಂಡು ಭೂಮಿಯಲ್ಲಿ ಸಂಚರಿಸುತ್ತಿರಬೇಕು.

ವಸ್ತ್ರವನ್ನು ಧರಿಸುವ ಹಾಗಿದ್ದರೆ ಗುಹ್ಯಾಂಗಗಳನ್ನು ಮುಚ್ಚು ವಂತಹ ಕೌಪೀನವನ್ನು ಮಾತ್ರ ಧರಿಸಬೇಕು. ಆಪತ್ತು ಇಲ್ಲದಿದ್ದರೆ ದಂಡ-ಕಮಂಡಲಗಳೇ ಮುಂತಾದ ಆಶ್ರಮದ ಇತರ ಚಿಹ್ನೆಗಳನ್ನು ಬಿಟ್ಟು ತಾನು ಹಿಂದೆ ತ್ಯಜಿಸಿದ ಬೇರೆ ಯಾವುದೇ ಪದಾರ್ಥವನ್ನೂ ಪರಿಗ್ರಹಿಸ ಬಾರದು. ಸಂನ್ಯಾಸಿಯು ಎಲ್ಲ ಪ್ರಾಣಿಗಳಿಗೂ ಹಿತವನ್ನು ಬಯಸಬೇಕು. ಶಾಂತನಾಗಿರಬೇಕು. ಭಗವತ್ಪರಾಯಣನಾಗಿರಬೇಕು ಮತ್ತು ಬೇರೆ ಯಾವು ದನ್ನೂ ಅವಲಂಬಿಸದೇ ತನ್ನ ಆತ್ಮಸ್ವರೂಪದಲ್ಲಿಯೇ ರಮಿಸುತ್ತಾ ಒಬ್ಬಂಟಿಗನಾಗಿಯೇ ಸಂಚರಿಸುತ್ತಿರಬೇಕು. ಈ ಇಡೀ ವಿಶ್ವವನ್ನು, ಸದಸತ್ತುಗಳನ್ನು ಮೀರಿರುವ ಅಳಿವಿಲ್ಲದ ಪರಬ್ರಹ್ಮದಲ್ಲಿ ಕಾಣಬೇಕು. ಅದು ಪರಬ್ರಹ್ಮವನ್ನು ಆಧರಿಸಿದೆಯೆಂದು ತಿಳಿಯಬೇಕು. ಹಾಗೆಯೇ ಈ

ಬೇಕು. ಆತನಿಗೆ ತತ್ತ್ವಜ್ಞಾನಕ್ಕಿಂತಲೂ ಬೇರೆ ಯಾವ ಕೆಲಸವೂ ಇಲ್ಲ.

'ನ ಹರಿಸ್ಮರತಃ ಕೃತ್ಯಂ ದಗ್ಧೇನ್ಧನಹುತಾಶನಮ್ ।' (ವಿಜಯಧ್ವಜೀಯ)

ಪ್ರತ್ಯಗಾತ್ಮನನ್ನು ಅಕ್ಷರಾತ್ಮಕ (ಪರಮಾತ್ಮಾತ್ಮಕ) ನೆಂದು ಭಾವಿಸಿ ಧರ್ಮಾನುಷ್ಠಾನದಲ್ಲಿ ಅಶಕ್ತನಾದವನೂ ಈ ವಿಷಯವನ್ನು ಅನುಸಂಧಾನಮಾಡುತ್ತಾ ವಾನಪ್ರಸ್ಥನು ದೇಹ ತ್ಯಾಗಕ್ಕಾಗಿ ಅನಶನವ್ರತವನ್ನು ಮಾಡಬೇಕು. (ವೀರರಾಘವೀಯ)

ಜಗತ್ತಿನಲ್ಲಿ ಎಲ್ಲೆಲ್ಲಿಯೂ ಪರಬ್ರಹ್ಮ-ಪರಮಾತ್ಮನೇ ತುಂಬಿರುವನೆಂಬು ದನ್ನೂ ನೋಡುತ್ತಿರಬೇಕು. ಆತ್ಮದರ್ಶಿಯಾದ ಸಂನ್ಯಾಸಿಯು ಸುಷುಪ್ತಿಯ (ಗಾಢನಿದ್ರೆ) ಮತ್ತು ಎಚ್ಚರದ ಸ್ಥಿತಿಗಳ ಸಂಧಿಯಲ್ಲಿ ಸ್ವಸ್ವರೂಪವನ್ನು ಅನುಭವಿಸಬೇಕು. ಬಂಧ ಮತ್ತು ಮೋಕ್ಷ ಇವೆರಡೂ ಕೇವಲ ಮಾಯೆ–ಎಂದು ತಿಳಿಯಬೇಕು. ನಿಶ್ಚಿತವಾಗಿ ಬಂದೇ ಬರುವ ಮೃತ್ಯುವನ್ನೂ ಅಭಿನಂದನೆಮಾಡಬಾರದು. ಅನಿಶ್ಚಿತವಾಗಿರುವ ಜೀವನವನ್ನೂ ಅಭಿನಂದಿಸ ಬಾರದು. ಸಮಸ್ತಪ್ರಾಣಿಗಳ ಉತ್ಪತ್ತಿ ಮತ್ತು ನಾಶಗಳಿಗೆ ಕಾರಣವಾಗಿರುವ ಕಾಲವನ್ನೇ ಎದುರು ನೋಡುತ್ತಿರಬೇಕು. ಅಸತ್ತನ್ನು ಪ್ರತಿಪಾದನೆಮಾಡುವ ಶಾಸ್ತ್ರಗಳನ್ನು ಪ್ರೀತಿಸಬಾರದು. ತನ್ನ ಜೀವನಯಾತ್ರೆಗಾಗಿ ಯಾವುದೇ ಉದ್ಯೋಗವನ್ನೂ ಅವಲಂಬಿಸಬಾರದು. ಕೇವಲ ವಾದ-ವಿವಾದಗಳಿಗಾಗಿ ತರ್ಕಗಳನ್ನು ಮಾಡಬಾರದು. ಪ್ರಪಂಚದಲ್ಲಿ ಯಾರ ಪಕ್ಷವನ್ನೂ ವಹಿಸಬಾರದು. ಬಹಳ ಹೆಚ್ಚು ಗ್ರಂಥಗಳನ್ನು ಅಭ್ಯಾಸ ಮಾಡಕೂಡದು. ವ್ಯಾಖ್ಯಾನ-ಉಪನ್ಯಾಸಗಳನ್ನು ಮಾಡಬಾರದು. ಅವುಗಳಲ್ಲಿ ಅಧಿಕವಾದ ಆಸಕ್ತಿ ಇರಬಾರದು. ದೊಡ್ಡ ದೊಡ್ಡ ಕೆಲಸಗಳನ್ನೂ, ಯೋಜನೆಗಳನ್ನೂ ಕೈಗೊಳ್ಳಕೂಡದು. ಶಾಂತನೂ, ಸಮದರ್ಶಿಯೂ, ಮಹಾತ್ಮನೂ ಆಗಿರುವ ಸಂನ್ಯಾಸಿಗೆ ಸಾಮಾನ್ಯವಾಗಿ ಯಾವ ಆಶ್ರಮದ ಬಂಧನವೂ ಧರ್ಮಕ್ಕೆ ಕಾರಣವಾಗುವುದಿಲ್ಲ. ಆತನು ತನ್ನ ಆಶ್ರಮದ ಚಿಹ್ನೆಗಳನ್ನು ಕೂಡ ಬೇಕಾದರೆ ಇಟ್ಟುಕೊಳ್ಳಬಹುದು ; ಬೇಡವಾದರೆ ಬಿಟ್ಟುಬಿಡಬಹುದು. ಯಾವುದೇ ಆಶ್ರಮಚಿಹ್ನೆಗಳೂ ಇಲ್ಲದೇ ಇಂತಹವನೆಂದು ತನ್ನನ್ನೂ ಪ್ರಕಟಿಸಿಕೊಳ್ಳದೇ ಆತ್ಮಾನುಸಂಧಾನದಲ್ಲಿಯೇ ನಿರತನಾಗಿರಬೇಕು. ಮಹಾ ಜ್ಞಾನಿಯಾಗಿದ್ದರೂ ಹುಚ್ಚನಂತೆಯೂ, ಬಾಲಕನಂತೆಯೂ ಕಾಣಿಸಿಕೊಳ್ಳ ಬೇಕು. ಕವಿ (ಜ್ಞಾನಿ)ಯಾಗಿ–ಸುಂದರವಾಗಿ ವೈದುಷ್ಯಪೂರ್ವಕವಾಗಿ ಮಾತನಾಡಬಲ್ಲವ ನಾಗಿದ್ದರೂ ಇತರರಿಗೆ ಮೂಗನಂತೆ ತನ್ನನ್ನು ತೋರಿಸಿಕೊಳ್ಳಬೇಕು.

(ಶ್ಲೋಕ 2-10)

ಧರ್ಮರಾಜ! ಈ ವಿಷಯವನ್ನು ಕುರಿತು ಜ್ಞಾನಿಗಳು ಒಂದು ಪುರಾತನವಾದ ಇತಿಹಾಸವನ್ನು ಹೇಳುತ್ತಾರೆ. ಅದು ಅವಧೂತಶಿಖಾ ಮಣಿಗಳಾದ ದತ್ತಾತ್ರೇಯರಿಗೂ–ಭಕ್ತಶ್ರೇಷ್ಠನಾದ ಪ್ರಹ್ಲಾದನಿಗೂ ನಡೆದ

ಸಂಭಾಷಣೆಯ ರೂಪದಲ್ಲಿದೆ. ಅದನ್ನು ಹೇಳುತ್ತೇನೆ, ಕೇಳಪ್ಪಾ!* ಒಂದು ಸಲ ಶ್ರೀಭಗವಂತನಿಗೆ ಪ್ರಿಯನಾದ ದೈತ್ಯರಾಜ ಪ್ರಹ್ಲಾದನು ತನ್ನ ಕೆಲವು ಮಂತ್ರಿಗಳೊಡನೆ ಜನರ ಮನಸ್ಸನ್ನು ತಿಳಿದುಕೊಳ್ಳುವುದಕ್ಕೋಸ್ಕರ ಲೋಕಸಂಚಾರಮಾಡುತ್ತಿದ್ದನು. ಆಗ ಆತನಿಗೆ ಸಹ್ಯಪರ್ವತದ ತಪ್ಪಲಿನಲ್ಲಿ ಕಾವೇರೀನದಿಯ ದಡದಲ್ಲಿ ನೆಲದ ಮೇಲೆ ಮಲಗಿದ್ದ ಒಬ್ಬ ಮುನಿಯು ದೃಷ್ಟಿಗೆ ಬಿದ್ದನು. ಆ ಮುನಿಯ ಮೈಮೇಲೆ ಧೂಳು ತುಂಬಿಕೊಂಡಿದ್ದು ಅದರಿಂದ ಆತನ ಶುದ್ಧವಾದ ತೇಜಸ್ಸು ಮರೆಯಾಗಿತ್ತು. ಆತನ ಕರ್ಮಗಳಿಂದಾಗಲೀ, ಆಕಾರದಿಂದಾಗಲೀ, ಮಾತುಗಳಿಂದಾಗಲೀ, ವರ್ಣ ಆಶ್ರಮಗಳೇ ಮುಂತಾದ ಗುರುತುಗಳಿಂದಾಗಲೀ ಆತನು ಇಂತಹವನೇ ಎಂದು ಯಾರಿಗೂ ತಿಳಿಯುತ್ತಿರಲಿಲ್ಲ. ಆತನು ಸಿದ್ಧಪುರುಷನೋ ಅಲ್ಲವೋ ಎಂಬುದೂ ಗೊತ್ತಾಗುತ್ತಿರಲಿಲ್ಲ. ಪರಮಭಾಗವತೋತ್ತಮನಾದ ಅಸುರ ರಾಜನು ಆತನ ಪಾದಗಳಿಗೆ ತಲೆಯನ್ನು ಮುಟ್ಟಿಸಿ ನಮಸ್ಕಾರಮಾಡಿ ವಿಧಿ ಪೂರ್ವಕವಾಗಿ ಆತನನ್ನು ಪೂಜಿಸಿ ತತ್ತ್ವವನ್ನು ತಿಳಿಯುವುದಕ್ಕೋಸ್ಕರ ಆತನನ್ನು ಹೀಗೆ ಪ್ರಶ್ನಿಸಿದನು : "ಶ್ರೀಭಗವಂತರೇ! ತಾವು ಹೆಬ್ಬಾವಿನಂತೆ ಬಿದ್ದುಕೊಂಡಿರುವ, ವೈರಾಗ್ಯಮೂರ್ತಿಯಾದ ಅವಧೂತಯೋಗಿಗಳಾಗಿ ದ್ದರೂ ತಮ್ಮ ದೇಹವು ಉದ್ಯೋಗವನ್ನು ಮಾಡಿ ಭೋಗಗಳನ್ನು ಅನುಭವಿ ಸುತ್ತಿರುವ ಮನುಷ್ಯನ ದೇಹದಂತೆ ಹೃಷ್ಟ-ಪುಷ್ಟವಾಗಿದೆಯಲ್ಲಾ! ಲೋಕ ದಲ್ಲಿ ಉದ್ಯೋಗಮಾಡಿದವನಿಗೇ ಹಣವು ದೊರೆಯುವುದು. ಹಣವುಳ್ಳ ವನೇ ಭೋಗವನ್ನು ಅನುಭವಿಸಲು ಶಕ್ತನಾಗುತ್ತಾನೆ. ಅಂತಹವನ ಶರೀರವು ತಾನೇ ಹೃಷ್ಟ-ಪುಷ್ಟವಾಗಿರಬೇಕು–ಎಂಬುದು ಲೋಕದಲ್ಲಿರುವ ಸಾಮಾನ್ಯ

---

* **ಮುನೇರಾಜಗರಸ್ಯ ಚ** = ಅಜಗರದ ಎಂದರೆ ಹೆಬ್ಬಾವಿನ ನೀತಿಯನ್ನನುಸರಿಸಿ, ಸಿಕ್ಕಿದಾಗ ಸಿಕ್ಕಿದಷ್ಟನ್ನು ತಿನ್ನುತ್ತಾ ಯಾರನ್ನೂ ಏನನ್ನೂ ಬೇಡದೇ ಬಿದ್ದುಕೊಂಡಿರುವ ಅವಧೂತಮುನಿಯ ಮಾರ್ಗ. ಇಲ್ಲಿ ಹೇಳಿರುವ ಅವಧೂತಮುನಿಯು ಶ್ರೀಭಗವಂತರಾದ ದತ್ತಾತ್ರೇಯರು–ಎಂದು ಕೆಲವರ ವ್ಯಾಖ್ಯಾನ.

ಅವಧೂತನು ಯಾವ ಕಣ್ಣಿಗೂ ಬೀಳದೇ ದೂರದಲ್ಲಿ ಒಂಟಿಯಾಗಿರಬೇಕು. ಹಾಗೆ ಯಾರ ಕಣ್ಣಿಗಾದರೂ ಆಕಸ್ಮಾತ್ತಾಗಿ ಸಿಕ್ಕಿದರೂ ಲೌಕಿಕರ ಮುಂದೆ ಹುಚ್ಚನಂತೆಯೂ, ಹೆಂಗಸರ ಮುಂದೆ ಚಿಕ್ಕ ಬಾಲಕನಂತೆಯೂ, ವಾಚಾಳಿಗಳಾದ ಮಹಾವಿದ್ವಾಂಸರ ಮುಂದೆ ಮೂಗನಂತೆಯೂ ನಟಿಸುತ್ತಾ ತನ್ನ ಸ್ವರೂಪವನ್ನು ಮುಚ್ಚಿಕೊಳ್ಳಬೇಕು.

(ಬಾಗಲಿಂಗಂಪಲ್ಲಿ ಪ್ರಕಾಶನದ ವ್ಯಾಖ್ಯಾನ)

ವಾದ ನಿಯಮವು. ಬೇರೇನೋ ಕಾರಣದಿಂದ ಹೀಗಾಗಲು ಸಾಧ್ಯವಿಲ್ಲ. ಪೂಜ್ಯರೇ! ತಾವು ಯಾವುದೇ ಉದ್ಯೋಗವನ್ನೂ ಕೈಗೊಳ್ಳದೇ ಹೀಗೆಯೇ ಬಿದ್ದಿರುತ್ತೀರಿ. ಆದುದರಿಂದ ತಮ್ಮಲ್ಲಿ ಯಾವುದೇ ಹಣವೂ ಇಲ್ಲ– ಎಂಬುದು ನಿಸ್ಸಂಶಯ. ಹಣವಿಲ್ಲವಾದ್ದರಿಂದ ಭೋಗಗಳ ಅನುಭವವೂ ಇರಲಿಕ್ಕೆ ಸಾಧ್ಯವಿಲ್ಲ. ಹೀಗೆ ಭೋಗಾನುಭವವೇ ಇಲ್ಲದಿದ್ದರೂ ತಮ್ಮ ದೇಹವು ಹೃಷ್ಟ-ಪುಷ್ಟವಾಗಿದೆಯಲ್ಲಾ! ಇದು ಹೇಗೆ? ನಾವು ಕೇಳಬಹು ದಾದ ವಿಷಯವಾಗಿದ್ದರೆ ಅದನ್ನು ಕೃಪೆಯಿಟ್ಟು ನಮಗೆ ತಿಳಿಸಿರಿ. ತಾವು ಕವಿಗಳು, ವಿದ್ವಾಂಸರು, ಜ್ಞಾನಿಗಳು, ಕಾರ್ಯಕುಶಲರು, ಸಮರ್ಥರು ಮತ್ತು ಚತುರರು. ತಮ್ಮ ಮಾತುಗಳು ಅದ್ಭುತವಾಗಿವೆ. ಇಂತಹ ಸ್ಥಿತಿಯಲ್ಲಿ ರುವ ನೀವು ಇಡೀ ಜಗತ್ತು ಕರ್ಮಗಳನ್ನು ಮಾಡುತ್ತಿರುವುದನ್ನು ನೋಡು ತ್ತಿದ್ದರೂ ಕೂಡ ಸಮಭಾವದಿಂದ ಹೀಗೆ ಸುಮ್ಮನೆ ಮಲಗಿಕೊಂಡಿರುವುದಕ್ಕೆ ಕಾರಣವೇನು?"

(ಶ್ಲೋಕ 11-18)

ನಾರದಮಹರ್ಷಿಗಳು ಹೇಳುತ್ತಿದ್ದಾರೆ :

ಎಲೈ ಯುಧಿಷ್ಠಿರನೇ! ಪ್ರಹ್ಲಾದನ ಪ್ರಶ್ನೆಯನ್ನು ಕೇಳಿ ಆತನ ಅಮೃತಮಯವಾದ ವಾಣಿಗೆ ವಶರಾದ ಮುನಿವರ್ಯರು ಮುಗುಳ್ನಗೆ ನಗುತ್ತಾ ಆತನಿಗೆ ಹೀಗೆ ಉತ್ತರನೀಡಿದರು :

"ಎಲೈ ಅಸುರೋತ್ತಮನೇ! ಎಲ್ಲ ಶ್ರೇಷ್ಠಪುರುಷರಿಂದಲೂ ಸಂಭಾವಿಸಲ್ಪಟ್ಟಿರುವ ಮಹಾತ್ಮನು ನೀನು. ಮನುಷ್ಯರಿಗೆ ಪ್ರವೃತ್ತಿಮಾರ್ಗದ ಕರ್ಮಗಳಿಂದ ಯಾವ ಫಲವು ದೊರೆಯುತ್ತದೆ? ನಿವೃತ್ತಿಧರ್ಮದಿಂದ ಯಾವ ಫಲವು ಸಿಕ್ಕುವುದು?–ಎಂಬುದನ್ನು ಜ್ಞಾನದೃಷ್ಟಿಯಿಂದ ನೀನು ತಿಳಿದೇ ಇರುವೆ. ನಿನ್ನ ಅನನ್ಯಭಕ್ತಿಯಿಂದ ಸಂತುಷ್ಟನಾಗಿ ದೇವಾಧಿದೇವನಾದ ಶ್ರೀಭಗವಂತನಾದ ನಾರಾಯಣನು ಸದಾ ನಿನ್ನ ಹೃದಯದಲ್ಲಿ ಬೆಳಗುತ್ತಾ ಸೂರ್ಯನು ಅಂಧಕಾರವನ್ನು ನಾಶಪಡಿಸುವಂತೆ ನಿನ್ನ ಅಜ್ಞಾನವನ್ನು ನಾಶಪಡಿಸುತ್ತಿದ್ದಾನೆ. ಆದರೂ ನೀನು ಪ್ರಶ್ನೆಮಾಡಿರುವುದರಿಂದ ನಾನು ಕೇಳಿ ತಿಳಿದಿರುವಂತೆ ನಿನ್ನ ಪ್ರಶ್ನೆಗಳಿಗೆ ಉತ್ತರವನ್ನು ಹೇಳುತ್ತೇನೆ. ಏಕೆಂದರೆ ಆತ್ಮಶುದ್ಧಿಯನ್ನು ಬಯಸುವ ಸಂತರು ನಿನ್ನನ್ನು ಗೌರವಿಸಲೇಬೇಕು. ಅಂತಹ ಸಜ್ಜನಶಿರೋಮಣಿ ನೀನು. ಪ್ರಹ್ಲಾದ! ಆಸೆ ಎನ್ನುವುದು ಎಷ್ಟು

ಭೋಗಗಳನ್ನು ತಿನ್ನಿಸಿದರೂ ತೃಪ್ತಿಹೊಂದದೇ ಇರುವ ವಸ್ತುವಪ್ಪಾ. ಸಂಸಾರ ಪ್ರವಾಹದಲ್ಲಿ ಜನರನ್ನು ಎಳೆದುಕೊಂಡು ಹೋಗುತ್ತಿರುವ ಈ ಆಸೆಯು ನನ್ನಿಂದ ಎಷ್ಟು ಕರ್ಮಗಳನ್ನು ಮಾಡಿಸಿದೆ ಮತ್ತು ಇದಕ್ಕಾಗಿ ಎಷ್ಟು ಯೋನಿಗಳಲ್ಲಿ ನನ್ನನ್ನು ಬೀಳಿಸಿದೆ?—ಎಂಬುದು ತಿಳಿಯದು. ಕರ್ಮಗಳ ಕಾರಣದಿಂದಾಗಿ ಅನೇಕಯೋನಿಗಳಲ್ಲಿ ಅಲೆದಾಡುತ್ತಾ ಕಡೆಗೆ ದೈವವಶದಿಂದ ನಾನು ಸ್ವರ್ಗ, ಮೋಕ್ಷ, ತಿರ್ಯಕ್‌ಪ್ರಾಣಿಗಳ ದೇಹ ಮತ್ತು ಈ ಮನುಷ್ಯದೇಹ—ಇವೆಲ್ಲಕ್ಕೂ ದ್ವಾರವಾಗಿರುವ (ಪುಣ್ಯಮಾಡಿದರೆ ಸ್ವರ್ಗ ವನ್ನೂ, ಪಾಪಮಾಡಿದರೆ ನರಕವನ್ನೂ ಮತ್ತು ಅನಂತರ ಪಶು-ಪಕ್ಷಿ ಮುಂತಾದುವುಗಳಲ್ಲಿ ಹುಟ್ಟನ್ನೂ ಬ್ರಹ್ಮಜ್ಞಾನವನ್ನು ಪಡೆದರೆ ಮೋಕ್ಷವನ್ನೂ ಮತ್ತು ಪುಣ್ಯ-ಪಾಪಗಳೆರಡನ್ನೂ ಆಚರಿಸಿದರೆ ಮನುಷ್ಯಯೋನಿಯನ್ನೂ ಉಂಟುಮಾಡುವ) ಈ ಮನುಷ್ಯದೇಹವನ್ನು ಪಡೆದಿದ್ದೇನೆ. ಆದರೆ ಈ ಸಂಸಾರದಲ್ಲಿ ದಂಪತಿಗಳು—'ಸುಖವು ದೊರೆಯಲಿ ಮತ್ತು ದುಃಖವು ತೊಲಗಲಿ'—ಎಂಬ ಉದ್ದೇಶದಿಂದಲೇ ಕರ್ಮಗಳನ್ನು ಮಾಡಿದರೂ ಅವರಿಗೆ ಆ ಉದ್ದೇಶಕ್ಕೆ ವಿರುದ್ಧವಾದ ಫಲವೇ ಸಿಕ್ಕುತ್ತದೆ. ಮತ್ತಷ್ಟು ದುಃಖದಲ್ಲಿಯೇ ಬೀಳುತ್ತಾರೆ—ಎಂಬುದನ್ನು ಗಮನಿಸಿ ನಾನು ಕರ್ಮಗಳಿಂದ ನಿವೃತ್ತನಾಗಿ ಬಿಟ್ಟಿದ್ದೇನಪ್ಪಾ. (ಶ್ಲೋಕ 19-25)

ಸುಖಮಸ್ಯಾತ್ಮನೋ ರೂಪಂ ಸರ್ವೇಹೋಪರತಿಸ್ತನುಃ ।
ಮನಃಸಂಸ್ಪರ್ಶಜಾನ್ದೃಷ್ಟ್ವಾ ಭೋಗಾನ್ಸ್ವಪ್ಸ್ಯಾಮಿ ಸಂವಿಶನ್ ॥

ಸುಖವೇ ಈ ಆತ್ಮನ ಸ್ವರೂಪವು. ಎಲ್ಲ ವ್ಯಾಪಾರಗಳಿಂದಲೂ ನಿವೃತ್ತಿ ಹೊಂದಿ ವಿಶ್ರಾಂತಿಯಲ್ಲಿರುವುದೇ ಇದರ ಶರೀರವು. ಆತ್ಮರತಿಯಾಗಿರುವ ಈ ಆತ್ಮನಿಗೆ ಭೋಗಗಳು ಮನಸ್ಸಿನ ಸಂಯೋಗದಿಂದಲೇ ಉಂಟಾಗಿವೆಯೇ ಹೊರತು ಸ್ವರೂಪದ ಕಾರಣದಿಂದಲ್ಲ—ಎಂಬುದನ್ನರಿತು ನಾನು ಪ್ರಾರಬ್ಧ ಕರ್ಮವನ್ನು ಮಾತ್ರ ಭೋಗಿಸುತ್ತಾ ಆತ್ಮಾರಾಮನಾಗಿ ಮಲಗಿರುತ್ತೇನೆ.

ಮನುಷ್ಯನು ತನ್ನ ನಿಜವಾದ ಸ್ವಾರ್ಥಕ್ಕಾಗಿ, ವಾಸ್ತವಿಕಸುಖವಾಗಿರುವ ತನ್ನ ಏಕೈಕವಾದ ಸ್ವಸ್ವರೂಪವನ್ನು ಮರೆತು, ಅಸತ್ಪದಾರ್ಥವಾಗಿ ಅನೇಕಾಕಾರವಾಗಿ ವಿಚಿತ್ರವಾಗಿರುವ ಈ ಜಗತ್ತನ್ನು ಸತ್ಯ-ಶಾಶ್ವತವೆಂದು ತಿಳಿದು ಅತಿವಿಚಿತ್ರವಾಗಿರುವ ಹುಟ್ಟು-ಸಾವುಗಳಲ್ಲಿ ಅಲೆದಾಡುತ್ತಿರುತ್ತಾನೆ.

ಅಜ್ಞಾನಿಯಾದ ಮನುಷ್ಯನು ಜೊಂಡು, ಪಾಚಿ ಮುಂತಾದ ಗುರುತುಗಳಿಂದ ನಿಜವಾದ ನೀರನ್ನು ನೀರೆಂದು ತಿಳಿಯದೇ ನೀರಿಗೋಸ್ಕರ ಬಿಸಿಲ್ಗೊದುರೆಯ ಕಡೆಗೆ ಓಡುವುದಿಲ್ಲವೇ? ಹಾಗೆಯೇ ತನ್ನ ಆತ್ಮದಿಂದ ಭಿನ್ನವಾದ ವಸ್ತುವಿನಲ್ಲಿ ಸುಖವಿದೆಯೆಂದು ತಿಳಿಯುವ ಅಜ್ಞಾನಿಯು ಆತ್ಮವನ್ನು ಬಿಟ್ಟು ವಿಷಯಗಳ ಕಡೆಗೆ ಓಡುತ್ತಾನಪ್ಪಾ ; ಪ್ರಹ್ಲಾದ! ಶರೀರವೇ ಮುಂತಾದುವುಗಳಾದರೋ ಅದೃಷ್ಟಕ್ಕೆ ಅಧೀನವಾದುವು. ಅವುಗಳ ಮೂಲಕ ತನಗೋಸ್ಕರ ಸುಖವನ್ನು ಪಡೆಯಲು ಮತ್ತು ದುಃಖವನ್ನು ಹೋಗಲಾಡಿಸಲು ಬಯಸುವವನು ಎಂದಿಗೂ ತನ್ನ ಕಾರ್ಯಗಳಲ್ಲಿ ಸಫಲನಾಗುವುದಿಲ್ಲ. ಆತನು ಬಾರಿ-ಬಾರಿಗೂ ಮಾಡುವ ಎಲ್ಲ ಕರ್ಮಗಳೂ ವ್ಯರ್ಥವಾಗುವುವು. ಮನುಷ್ಯನನ್ನು ಆಧ್ಯಾತ್ಮಿಕ, ಆಧಿದೈವಿಕ ಮತ್ತು ಆಧಿಭೌತಿಕ ದುಃಖಗಳು ಸದಾ ಆಕ್ರಮಿಸಿಕೊಂಡಿರುತ್ತವೆ. ಆತನು ಎಂದಾದರೂ ಸಾವನ್ನಂತೂ ಅಪ್ಪಲೇಬೇಕು. ಹೀಗಿರುವಾಗ ಆತನು ಅತಿಕಷ್ಟಪಟ್ಟು ಆಯಾಸದಿಂದ ಸ್ವಲ್ಪ ಹಣವನ್ನೂ ಮತ್ತು ಭೋಗಗಳನ್ನೂ ಸಂಪಾದನೆ ಮಾಡಿದರೂ ಅವುಗಳೆಂದರೇನು ಲಾಭ? ಇದಲ್ಲದೇ ಜಿಪುಣರಾಗಿ ಇಂದ್ರಿಯಗಳಿಗೆ ಅಧೀನರಾಗಿರುವ ಹಣಗಾರರು ಅನುಭವಿಸುವ ದುಃಖವನ್ನೂ ನಾನು ನೋಡಿದ್ದೇನೆ. ಅವರಿಗೆ ಎಲ್ಲರ ಮೇಲೂ ಸಂದೇಹ. ಭಯದಿಂದ ನಿದ್ರೆಯೇ ಬರುವುದಿಲ್ಲ. ಬದುಕಿನ ವಿಷಯದಲ್ಲೂ ಮತ್ತು ಸಂಪತ್ತಿನ ವಿಷಯದಲ್ಲೂ ಲೋಭವುಳ್ಳ ಜನರಿಗೆ ರಾಜನಿಂದ, ಕಳ್ಳಕಾಕರರಿಂದ, ಶತ್ರುಗಳಿಂದ, ಬಂಧು-ಮಿತ್ರರಿಂದ, ಪಶು-ಪಕ್ಷಿಗಳಿಂದ, ಯಾಚಕರಿಂದ, ಕಾಲದಿಂದ ಮತ್ತು ಕಡೆಯದಾಗಿ ತಮ್ಮ ದೆಸೆಯಿಂದಲೂ ಕೂಡ ಭಯವಿದ್ದೇ ಇರುವುದು. ತಾವೇನಾದರೂ ಎಚ್ಚರದಪ್ಪಿ ಹೆಚ್ಚು ಹಣವನ್ನು ಖರ್ಚುಮಾಡಿಬಿಟ್ಟರೆ ಹೇಗೆ?–ಎಂದು ತಮ್ಮ ವಿಷಯದಲ್ಲೂ ಅವರಿಗೆ ಭಯವಿದ್ದೇ ಇರುವುದು. ಆದುದರಿಂದ ಬುದ್ಧಿವಂತನಾದವನು ಯಾವ ಕಾರಣದಿಂದ ಶೋಕ, ಮೋಹ, ಭಯ, ಕ್ರೋಧ, ರಾಗ, ಹೇಡಿತನ ಮತ್ತು ಶ್ರಮ–ಮುಂತಾದುವುಗಳಿಗೆ ತುತ್ತಾಗಬೇಕಾಗುವುದೋ ಆ ಹಣದ ವಿಷಯದಲ್ಲಿ ಮತ್ತು ಜೀವನದ ವಿಷಯದಲ್ಲಿ ತುಂಬಾ ಆಸೆಯನ್ನು ಇಟ್ಟುಕೊಳ್ಳಲೇಬಾರದು. ಮಗು, ಪ್ರಹ್ಲಾದ! ನನಗೆ ಈ ಲೋಕದಲ್ಲಿ ಇಬ್ಬರೇ ಗುರುಗಳಪ್ಪಾ. ಮೊದಲನೆಯ ಗುರುವು ಹೆಬ್ಬಾವು

ಮತ್ತು ಎರಡನೆಯ ಗುರುವು ಜೇನುನೊಣ. ಅವೆರಡೂ ನೀಡುವ ಶಿಕ್ಷಣ ದಿಂದ ನನಗೆ ವೈರಾಗ್ಯ ಮತ್ತು ಸಂತೋಷಗಳು ಉಂಟಾಗಿವೆ. ಜೇನು ನೊಣವು ಜೇನನ್ನು ಸಂಗ್ರಹಿಸುವಂತೆ ಜನರು ಅತಿಕಷ್ಟದಿಂದ ಹಣವನ್ನು ಸಂಗ್ರಹಿಸುವರು. ಆದರೆ ಬೇರಾವನೋ ಆ ಹಣದ ಯಜಮಾನನನ್ನು ಕೊಂದುಹಾಕಿ ಆ ಹಣವನ್ನು ಕಿತ್ತುಕೊಂಡುಬಿಡುವನು. ಇದರಿಂದ ನಾನು ವಿಷಯಭೋಗಗಳ ವಿಷಯದಲ್ಲಿ ವಿರಕ್ತನಾಗಿರಲೇಬೇಕು–ಎಂಬ ಪಾಠವನ್ನು ಗ್ರಹಿಸಿದೆನು. ನಾನು ಹೆಬ್ಬಾವಿನಂತೆ ಮೈ-ಕೈ ಅಳ್ಳಾಡಿಸದೇ ನಿಶ್ಚೇಷ್ಟನಾಗಿ ಮಲಗಿರುವೆನು. ದೈವವಶದಿಂದ ಏನು ದೊರೆಯುತ್ತದೆಯೋ ಅದರಿಂದಲೇ ಸಂತೋಷಪಟ್ಟುಕೊಳ್ಳುವೆನು. ಹೆಬ್ಬಾವು ಆಹಾರಕ್ಕಾಗಿ ಯಾವ ಪ್ರಯತ್ನ ವನ್ನೂ ಮಾಡದೇ ದೈವವಶದಿಂದ ಅದಕ್ಕೆ ಏನು ಸಿಕ್ಕುತ್ತದೆಯೋ ಅದನ್ನೇ ತಿಂದು ಸಂತುಷ್ಟವಾಗಿರುತ್ತದೆ. ಆಹಾರವು ಸಿಕ್ಕದೇ ಇದ್ದರೆ ಬಹುದಿನಗಳ ವರೆಗೂ ಏನನ್ನೂ ತಿನ್ನದೇ ಬಿದ್ದುಕೊಂಡಿರುತ್ತದೆ. ಹೀಗಿದ್ದರೂ ಅದು ಬಲಶಾಲಿಯಾಗಿಯೇ ಇರುತ್ತದೆಯಲ್ಲವೇ? ಈ ಎಲ್ಲ ವಿಷಯಗಳಲ್ಲೂ ಹೆಬ್ಬಾವನ್ನು ಅನುಸರಿಸುತ್ತಾ 'ಅಜಗರವ್ರತ'ದಲ್ಲಿರುವ ನನಗೆ ಹೆಬ್ಬಾವು ಪಾಠಕಲಿಸುವ ಮತ್ತೊಂದು ಗುರು. ಕೆಲವೊಮ್ಮೆ ಸ್ವಲ್ಪವೇ ಸ್ವಲ್ಪ ಆಹಾರ ವನ್ನು ಸೇವಿಸುತ್ತೇನೆ. ಕೆಲವು ವೇಳೆಗಳಲ್ಲಿ ಬಹಳ ಹೆಚ್ಚು ಆಹಾರವನ್ನು ತಿನ್ನುತ್ತೇನೆ. ಕೆಲವೊಮ್ಮೆ ಸಿಹಿಯಾದ ಅನ್ನವನ್ನು ಸೇವಿಸುತ್ತೇನೆ. ಕೆಲವು ವೇಳೆಗಳಲ್ಲಿ ನೀರಸವಾದ ಆಹಾರವನ್ನು ಭುಂಜಿಸುತ್ತೇನೆ. ಕೆಲವೊಮ್ಮೆ ಎಲ್ಲ ಶ್ರೇಷ್ಠಗುಣಗಳಿಂದ ಕೂಡಿದ ಆಹಾರವನ್ನೂ, ಕೆಲವೊಮ್ಮೆ ಯಾವ ಶ್ರೇಷ್ಠ ವಾದ ಗುಣವೂ ಇಲ್ಲದ ಆಹಾರವನ್ನು ಸ್ವೀಕರಿಸುತ್ತೇನೆ. ಕೆಲವು ವೇಳೆಗಳಲ್ಲಿ ಶ್ರದ್ಧೆಯಿಂದ ಸಮರ್ಪಿಸಿದ ಆಹಾರವನ್ನು ಸೇವಿಸುತ್ತೇನೆ. ಕೆಲವೊಮ್ಮೆ ಅಸಡ್ಡೆ ಯಿಂದಲೂ, ಅಗೌರವದಿಂದಲೂ ಕೊಡಲ್ಪಡುವ ಆಹಾರವನ್ನು ತಿನ್ನುತ್ತೇನೆ. ಕೆಲವೊಮ್ಮೆ ತಾನಾಗಿಯೇ ದೊರಕುವ ಆಹಾರವನ್ನು ಭಕ್ಷಿಸುತ್ತೇನೆ. ಕೆಲವೊಮ್ಮೆ ಹಗಲಿನಲ್ಲೂ, ಕೆಲವೊಮ್ಮೆ ರಾತ್ರಿಯಲ್ಲೂ ಆಹಾರವನ್ನು ತೆಗೆದುಕೊಳ್ಳುತ್ತೇನೆ. ಕೆಲವೊಮ್ಮೆ ಒಪ್ಪತ್ತು ಮಾತ್ರ ಆಹಾರವನ್ನು ಸೇವಿಸುತ್ತೇನೆ. ಕೆಲವೊಮ್ಮೆ ಎರಡು ವೇಳೆಗಳಲ್ಲೂ ತಿನ್ನುತ್ತೇನೆ. ಅದೃಷ್ಟವು ತಂದುಕೊಟ್ಟಿದ್ದನ್ನು ಭುಂಜಿಸುತ್ತಾ ಸಂತೋಷವಾಗಿರುತ್ತೇನೆ. ರೇಷ್ಮೆಯ

ಬಟ್ಟೆಯೋ, ನೂಲಿನ ಬಟ್ಟೆಯೋ, ಜಿಂಕೆಯ ತೊಗಲೋ ಅಥವಾ ನಾರು ಬಟ್ಟೆಯೋ ಏನು ಒದಗಿರುತ್ತದೆಯೋ ಅದನ್ನು ಉಟ್ಟುಕೊಳ್ಳುತ್ತೇನೆ. ಕೆಲವೊಮ್ಮೆ ಬರೀ ನೆಲದ ಮೇಲೆ ಪವಡಿಸುತ್ತೇನೆ. ಕೆಲವು ವೇಳೆಗಳಲ್ಲಿ ಹುಲ್ಲು-ಎಲೆಗಳ ಆಸನದ ಮೇಲೋ, ಕಲ್ಲುಚಪ್ಪಡಿಯ ಮೇಲೋ ಮಲಗಿಕೊಳ್ಳುತ್ತೇನೆ. ಇತರರ ಇಚ್ಛೆಯಂತೆ ಕೆಲವು ವೇಳೆಗಳಲ್ಲಿ ಉಪ್ಪರಿಗೆಯ ಮೇಲಿರುವ ಮಂಚಗಳ ಮೇಲೂ, ಪೀಠಗಳ ಮೇಲೂ ಪವಡಿಸುತ್ತೇನೆ. ಕೆಲವೊಮ್ಮೆ ಸ್ನಾನಮಾಡಿ ಮೈಗೆ ಶ್ರೀಗಂಧವನ್ನು ಹಚ್ಚಿಕೊಂಡು ಒಳ್ಳೆಯ ಉಡಿಗೆ-ತೊಡಿಗೆಗಳನ್ನು ಧರಿಸಿ ಅಲಂಕಾರಮಾಡಿಕೊಂಡು ರಥದಲ್ಲೋ, ಆನೆಯ ಮೇಲೋ, ಕುದುರೆಯ ಮೇಲೋ ವೈಭವದಿಂದ ಸಂಚರಿಸುತ್ತೇನೆ. ಕೆಲವೆಡೆಗಳಲ್ಲಿ ದಿಗಂಬರನಾಗಿ ಪಿಶಾಚಿಗಳಂತೆ ಓಡಾಡುತ್ತೇನೆ. ಮನುಷ್ಯರ ಸ್ವಭಾವವು ಭಿನ್ನ-ಭಿನ್ನವಾಗಿರುವುದರಿಂದ ನಾನು ಯಾರನ್ನೂ ನಿಂದಿಸುವುದೂ ಇಲ್ಲ ; ಯಾರನ್ನೂ ಸ್ತುತಿಸುವುದೂ ಇಲ್ಲ. ಎಲ್ಲರಿಗೂ ಪರಮಕಲ್ಯಾಣವುಂಟಾಗಲಿ. ಪರಮಾತ್ಮನೊಡನೆ ತಾದಾತ್ಮ್ಯವುಂಟಾಗಲಿ—ಎಂದು ಆಶಿಸುತ್ತೇನೆ. ವಿವೇಕಿಯಾದ ಮನುಷ್ಯನು ಬಗೆ-ಬಗೆಯಾಗಿ ಕಾಣುವ ಪದಾರ್ಥ ಗಳನ್ನೂ ಚಿತ್ತವೃತ್ತಿಯಲ್ಲಿ ಹೋಮಮಾಡಬೇಕು. ಆ ಚಿತ್ತವೃತ್ತಿಯನ್ನು ಆ ಪದಾರ್ಥಗಳ ಬಗೆ-ಬಗೆಯ ಭ್ರಮೆಯನ್ನುಂಟುಮಾಡುವ ಚಿತ್ತ ದಲ್ಲಿಹೋಮ ಮಾಡಬೇಕು. ಆ ಮನಸ್ಸನ್ನು ಸಾತ್ತ್ವಿಕಾಹಂಕಾರದಲ್ಲಿಯೂ, ಸಾತ್ತ್ವಿಕಾ ಹಂಕಾರವನ್ನು (ಮಹತ್ತತ್ತ್ವದ ಮೂಲಕ) ಮಾಯಾ ಪ್ರಕೃತಿಯಲ್ಲಿಯೂ ಹೋಮಮಾಡಬೇಕು. ಸತ್ಯದೃಷ್ಟಿಯುಳ್ಳ ಮುನಿಯು ಆ ಮಾಯೆಯನ್ನು ಆತ್ಮಾನುಭವದಲ್ಲಿ ಹೋಮಮಾಡಿಬಿಡಬೇಕು. ಹೀಗೆ ಸ್ವಾನುಭವದಿಂದ ಆತ್ಮನಲ್ಲಿ ನೆಲೆಗೊಂಡು ಕರ್ಮರಹಿತನಾಗಿ ವಿಶ್ರಾಂತಿಯನ್ನು ಹೊಂದಬೇಕು. ಪ್ರಹ್ಲಾದ! ನನ್ನ ಈ ಆತ್ಮವೃತ್ತಾಂತವು ಅತ್ಯಂತಗೋಪ್ಯವಾಗಿ ಲೋಕಶಾಸ್ತ್ರ ಗಳ ಮರ್ಯಾದೆಯನ್ನು ಮೀರಿದ್ದರೂ ನೀನು ಭಗವತ್ಪರಾಯಣನಾದ ಸಾಧುಶ್ರೇಷ್ಠನಾಗಿರುವುದರಿಂದ ನಿನಗೆ ಇದನ್ನು ವರ್ಣಿಸಿರುವೆನು."

ಶ್ರೀನಾರದಮಹರ್ಷಿಗಳು ಹೇಳುತ್ತಾರೆ :

"ವತ್ಸ! ಯುಧಿಷ್ಠಿರ! ಅಸುರೇಶ್ವರನಾದ ಪ್ರಹ್ಲಾದನು ಅವಧೂತ ಮುನಿಶ್ರೇಷ್ಠರಿಂದ ಹೀಗೆ ಪರಮಹಂಸಧರ್ಮವನ್ನು ಕೇಳಿ ಅವರನ್ನು

ಆರಾಧಿಸಿದನು. ಅನಂತರ ಅವರಿಂದ ಬೀಳ್ಕೊಂಡು ಪರಮಸಂತೋಷದಿಂದ ತನ್ನ ಅರಮನೆಗೆ ತೆರಳಿದನು." (ಶ್ಲೋಕ 27-46)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಸಪ್ತಮಸ್ಕಂಧದ ೧೩ನೆಯ ಅಧ್ಯಾಯವು ಮುಗಿಯಿತು.

ಸಪ್ತಮಸ್ಕಂಧ ೧೪ನೆಯ ಅಧ್ಯಾಯ

ಗೃಹಸ್ಥನ ಸದಾಚಾರ

ಯುಧಿಷ್ಠಿರನು ಹೇಳುತ್ತಾನೆ :

ಗೃಹಸ್ಥ ಏತಾಂ ಪದವೀಂ ವಿಧಿನಾ ಯೇನ ಚಾಞ್ಜಸಾ ।
ಯಾತಿ ದೇವಋಷೇ ಬ್ರೂಹಿ ಮಾದೃಶೋ ಗೃಹಮೂಢಧೀಃ ॥೧॥

"ದೇವರ್ಷಿಗಳೇ! ಮನೆಯಲ್ಲಿಯೂ, ಮನೆವಾರ್ತೆಗಳಲ್ಲಿಯೂ ಆಸಕ್ತನಾಗಿರುವ ನನ್ನಂತಹ ಗೃಹಸ್ಥನು ಹೆಚ್ಚು ಆಯಾಸವಿಲ್ಲದೇ ಈ ಶ್ರೇಷ್ಠತಮವಾದ ಪದವಿಯನ್ನು ಹೇಗೆ ಪಡೆಯಬಹುದು? ಯಾವ ವಿಧಿಯಿಂದ ಪಡೆಯಬಹುದು? ಎಂಬುದನ್ನು ಕೃಪೆಯಿಟ್ಟು ತಿಳಿಸಬೇಕು."

ದೇವರ್ಷಿಗಳು ಆತನಿಗೆ ಹೀಗೆ ಉತ್ತರ ನೀಡಿದರು :

"ಧರ್ಮಪ್ರಭುವೇ! ಕೇಳು. ಮನುಷ್ಯನು ಗೃಹಸ್ಥಾಶ್ರಮದಲ್ಲಿಯೇ ಇದ್ದು ಗೃಹಸ್ಥಧರ್ಮಕ್ಕೆ ಅನುಗುಣವಾಗಿ ಎಲ್ಲ ಕರ್ಮಗಳನ್ನೂ ಮಾಡಬಹುದು. ಆದರೆ ಆ ಎಲ್ಲ ಕರ್ಮಗಳನ್ನೂ ಸಾಕ್ಷಾತ್ ಶ್ರೀವಾಸುದೇವನಲ್ಲಿ ಸಮರ್ಪಣೆಮಾಡಿ ದೊಡ್ಡ ದೊಡ್ಡ ಮಹಾಮುನಿಗಳ ಸೇವೆಯನ್ನು ಮಾಡುತ್ತಿರಬೇಕು. ಅವಕಾಶವು ದೊರಕಿದಾಗ ಪ್ರಶಾಂತಚಿತ್ತರಾದ ಸಾಧು-ಸಜ್ಜನರ ಸಹವಾಸದಲ್ಲಿರುತ್ತಾ ಶ್ರದ್ಧೆಯಿಂದ ಶ್ರೀಭಗವಂತನ ಕಥಾಮೃತವನ್ನು ಕಿವಿಗಳಿಂದ ಸವಿಯುತ್ತಿರಬೇಕು. ಕನಸಿನಿಂದ ಎಚ್ಚರಗೊಂಡ ಮನುಷ್ಯನು ಆ ಕನಸಿನಲ್ಲಿ ಕಾಣಿಸಿದ ಬಂಧು-ಮಿತ್ರರ ಸಂಬಂಧವನ್ನು ಬಿಟ್ಟುಬಿಡುವುದಿಲ್ಲವೇ! ಹಾಗೆಯೇ ಸತ್ಸಹವಾಸದಿಂದ ಬುದ್ಧಿಯನ್ನು ಶುದ್ಧಿಮಾಡಿಕೊಂಡು ಮೆಲ್ಲ-ಮೆಲ್ಲನೆ ತನ್ನ ಶರೀರ, ಮಡದಿ, ಮಕ್ಕಳು, ಧನಸಂಪತ್ತು ಮುಂತಾದುವುಗಳಲ್ಲಿಯೂ ಆಸಕ್ತಿಯನ್ನು ತೊರೆದುಬಿಡಬೇಕು. ಏಕೆಂದರೆ : ಇವೆಲ್ಲವೂ ಒಂದಲ್ಲ ಒಂದು ದಿನ ಬಿಟ್ಟುಹೋಗುವುವೇ ಆಗಿವೆ. ತಿಳಿವಳಿಕೆ

ಯುಳ್ಳ ಮನುಷ್ಯನು ದೇಹವನ್ನೂ ಮತ್ತು ಮನೆಯನ್ನೂ ಎಷ್ಟು ಅತ್ಯಂತ ಆವಶ್ಯಕವೋ ಅಷ್ಟುಮಟ್ಟಿಗೆ ಮಾತ್ರ ಸೇವಿಸಬೇಕು. ಅವುಗಳನ್ನು ತುಂಬಾ ಹಚ್ಚಿಕೊಳ್ಳಬಾರದು. ಮಾನಸಿಕವಾಗಿ ವಿರಕ್ತನಾಗಿದ್ದು ಹೊರಗಡೆ ಎಲ್ಲದರಲ್ಲಿಯೂ ಆಸಕ್ತನಾಗಿರುವಂತೆ ತೋರ್ಪಡಿಸಿಕೊಳ್ಳುತ್ತಾ ಸಾಮಾನ್ಯಮನುಷ್ಯರಂತೆಯೇ ವ್ಯವಹರಿಸಬೇಕು. ತಂದೆ-ತಾಯಿಗಳಾಗಲೀ ಹೆಂಡತಿ-ಮಕ್ಕಳಾಗಲೀ, ಇತರ ನೆಂಟರಿಷ್ಟರಾಗಲೀ, ಸ್ನೇಹಿತರಾಗಲೀ, ಸ್ವಜನರಾಗಲೀ–ಏನು ಹೇಳಿದರೂ, ಏನು ಬಯಸಿದರೂ, ಅದನ್ನು ಅನುಮೋದಿಸುತ್ತಿರಬೇಕು. ವಾಸ್ತವವಾಗಿ ಅವರಲ್ಲಿ ಯಾವ ಮಮತೆಯನ್ನೂ ಮನಸ್ಸಿನಲ್ಲಿ ಇಟ್ಟು ಕೊಳ್ಳದೇ ಅನಾಸಕ್ತನಾಗಿದ್ದರೂ ಮಮತೆಯುಳ್ಳವನಂತೆಯೇ ಅವರಲ್ಲಿ ವರ್ತಿಸಬೇಕು. ದಿವಿಯಿಂದಲೂ, ಭುವಿಯಿಂದಲೂ, ಅಂತರಿಕ್ಷದಿಂದಲೂ ತನಗೆ ದೊರಕುವ ಅನ್ನ-ಚಿನ್ನಗಳೇ ಮುಂತಾದ ಎಲ್ಲ ದ್ರವ್ಯಸಂಪತ್ತುಗಳನ್ನೂ ಶ್ರೀಭಗವಂತನ ವರಪ್ರದಾನವೆಂದು ಸ್ವೀಕರಿಸಿ ಪ್ರಸಾದಬುದ್ಧಿಯಿಂದ ಅವುಗಳನ್ನು ಸೇವಿಸಬೇಕು. ಸಾಧುಸೇವಾದಿ ಕರ್ಮಗಳಿಗೆ ಅವುಗಳನ್ನು ಬಳಸಿ ಉಳಿದುದನ್ನು ತಾನು ಸೇವಿಸಬೇಕು. ಅವುಗಳನ್ನು ಕೂಡಿಹಾಕುವುದರಲ್ಲಿ ಉತ್ಸಾಹಿಯಾಗಿರಬಾರದು. (ಶ್ಲೋಕ 2-7)

ಯಾವದ್ಭ್ರಿಯೇತ ಜಠರಂ ತಾವತ್ಸ್ವತ್ವಂ ಹಿ ದೇಹಿನಾಮ್ ।
ಅಧಿಕಂ ಯೋऽಭಿಮನ್ಯೇತ ಸ ಸ್ತೇನೋ ದಣ್ಡಮರ್ಹತಿ ॥೮॥

'ಹೊಟ್ಟೆತುಂಬಿಕೊಳ್ಳುವುದಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರವೇ ತನ್ನ ಸ್ವತ್ತು. ಅಷ್ಟರ ಮೇಲೆಯೇ ತನಗೆ ಅಧಿಕಾರ'–ಎಂದು ಮನುಷ್ಯನು ತಿಳಿಯಬೇಕು. ಅದಕ್ಕಿಂತಲೂ ಹೆಚ್ಚು ಭಾಗವನ್ನು ತನ್ನದು ಎಂದು ತಿಳಿದು ಅಭಿಮಾನಿಸುವವನು ಕಳ್ಳನು. ಕಳ್ಳನಿಗೆ ತಕ್ಕ ದಂಡನೆಯೇ ಆತನಿಗೆ ಸಲ್ಲಬೇಕು.

ಜಿಂಕೆ, ಒಂಟೆ, ಕತ್ತೆ, ಕಪಿ, ಇಲಿ, ಸರ್ಪಗಳೇ ಮುಂತಾದ ಓಡಾಡುವ ಪ್ರಾಣಿಗಳನ್ನೂ, ಪಕ್ಷಿ ಮತ್ತು ಸೊಳ್ಳೆ–ಮುಂತಾದುವುಗಳನ್ನೂ ತನ್ನ ಪುತ್ರರಂತೆ ಭಾವಿಸಬೇಕು. ಅವುಗಳಿಗೂ ಮತ್ತು ತನ್ನ ಪುತ್ರರಿಗೂ ಏನು ಮಹಾ ವ್ಯತ್ಯಾಸ? ಗೃಹಸ್ಥರೇ ಆಗಿದ್ದರೂ ಅವರು ಧರ್ಮ-ಅರ್ಥ-ಕಾಮಗಳಿಗಾಗಿ ಮಿತಿಮೀರಿ ಕಷ್ಟಪಡಬಾರದು. ದೇಶ, ಕಾಲ ಮತ್ತು ಅದೃಷ್ಟಗಳಿಗೆ ತಕ್ಕಂತೆ

ಎಷ್ಟು ಸಿಕ್ಕುತ್ತದೆಯೋ ಅಷ್ಟರಲ್ಲಿಯೇ ಸಂತೋಷಪಟ್ಟುಕೊಳ್ಳಬೇಕು. ತನ್ನ ಸಮಸ್ತಭೋಗ್ಯವಸ್ತುಗಳನ್ನೂ ಇತರರೊಡನೆ ಹಂಚಿಕೊಂಡೇ ತಾನು ಅನುಭವಿಸಬೇಕು. ನಾಯಿಯೇನು? ಪತಿತನೇನು? ಅತ್ಯಂತ ಕೀಳುವರ್ಗದವನೇನು? ಈ ಎಲ್ಲ ಪ್ರಾಣಿಗಳಿಗೂ ಯಥೋಚಿತವಾಗಿ ಹಂಚಿಕೊಟ್ಟ ನಂತರವೇ ಅವುಗಳನ್ನು ತನ್ನ ಭೋಗಕ್ಕೆ ಬಳಸಿಕೊಳ್ಳಬೇಕು. ಉಳಿದ ವಸ್ತು ಗಳ ವಿಷಯವು ಹಾಗಿರಲಿ. ತನ್ನದೇ ವಸ್ತು ಎಂದು ತಾನು ತಿಳಿದುಕೊಂಡಿ ರುವ ಪತ್ನಿಯನ್ನು ಕೂಡ ಮನುಷ್ಯನು ದೋಷವಿಲ್ಲದೇ ಇರುವ ರೀತಿಯಲ್ಲಿ ಅತಿಥಿಗಳ ಸೇವೆಗೆ ನಿಯೋಜಿಸಬೇಕು. ಸ್ತ್ರೀವ್ಯಾಮೋಹವನ್ನು ಬಿಡಬೇಕು. ಈ ವ್ಯಾಮೋಹಕ್ಕೆ ಒಳಗಾಗಿ ಸ್ತ್ರೀದಾಸರಾದ ಜನರು ಆಕೆಗಾಗಿ ತಮ್ಮ ಪ್ರಾಣವನ್ನಾದರೂ ಕೊಟ್ಟಾರು. ತಂದೆ-ತಾಯಿಗಳನ್ನು ಮತ್ತು ಗುರುಜನರನ್ನಾದರೂ ಕೊಂದುಹಾಕಿಯಾರು. ಹೀಗೆ ಮಹಾವ್ಯಾಮೋಹಕ್ಕೆ ಕಾರಣಳಾಗಿರುವ ಸ್ತ್ರೀಸಂಬಂಧವಾದ ಮಮತೆಯನ್ನು ಗೆದ್ದವನು ಸರ್ವವಿಜಯಿಯಾದ ಶ್ರೀಭಗವಂತನನ್ನೇ ಗೆದ್ದಂತೆ. ತನ್ನ ಚಿತ್ತಶುದ್ಧಿಯಿಂದ ಆತನು ಪರಮಾತ್ಮನನ್ನು ವಶಪಡಿಸಿಕೊಳ್ಳುತ್ತಾನೆ. ಈ ಶರೀರವೆಂಬುದು ಕಟ್ಟಕಡೆಗೆ ಕ್ರಿಮಿ, ಕೀಟ, ಮಲ ಅಥವಾ ಬೂದಿಯ ರಾಶಿಯಾಗಿಬಿಡುವುದು. ಇಂತಹ ಶುಚ್ಛವಾದ ಶರೀರ ಮತ್ತು ಅದರ ರತಿಗೆ ಕಾರಣಳಾದ ಆ ಸ್ತ್ರೀಯೆಲ್ಲಿ? ತನ್ನ ಮಹಿಮೆಯಿಂದ ಆಕಾಶವನ್ನೂ ಆವರಿಸಿಕೊಂಡಿರುವ ಅನಂತನಾದ ಆತ್ಮನೆಲ್ಲಿ?

(ಶ್ಲೋಕ 9-13)

ಗೃಹಸ್ಥರು ಪಂಚಮಹಾಯಜ್ಞಗಳಿಗೆ ಒದಗಿಸಿಕೊಂಡು ಆ ಯಜ್ಞಗಳನ್ನು ಆಚರಿಸಿದ ಬಳಿಕ ಮಿಗುವಂತಹ ಅನ್ನದಿಂದಲೇ ಜೀವನವನ್ನು ನಿರ್ವಹಿಸಬೇಕು. ಇಂತಹ ತುದ್ಧವಾದ ಯಜ್ಞಶೇಷವನ್ನು ಬಿಟ್ಟು ಬೇರೆ ಯಾವುದನ್ನೂ ತನ್ನ ಸ್ವತ್ತನ್ನಾಗಿ ಯಾರು ಭಾವಿಸುವುದಿಲ್ಲವೋ–ಅವರು ಸಂತರಿಗೆ ದೊರೆಯುವ ಉತ್ತಮಗತಿಯನ್ನು ಪಡೆಯುವರು. ತನ್ನ ವರ್ಣ ಮತ್ತು ಆಶ್ರಮಗಳಿಗೆ ವಿಹಿತವಾಗಿರುವ ವೃತ್ತಿಯಿಂದ ಸಂಪಾದಿಸಿದ ಸಾಮಗ್ರಿಗಳಿಂದ ಪ್ರತಿದಿನವೂ ದೇವತೆಗಳಿಗೂ, ಋಷಿಗಳಿಗೂ, ಮನುಷ್ಯರಿಗೂ, ಭೂತಗಣಗಳಿಗೂ, ಪಿತೃಗಣಗಳಿಗೂ ಮತ್ತು ತನ್ನ ಆತ್ಮಕ್ಕೂ ಪೂಜೆಯನ್ನು ಸಲ್ಲಿಸಬೇಕು. ಹೀಗೆ ಮಾಡಿದರೆ ಪರಮಪುರುಷನನ್ನು ಆತನ ವಿವಿಧವಾದ ರೂಪ

ಗಳಿಂದ ಆರಾಧಿಸಿದಂತೆ ಆಗುವುದು. ತನಗೆ ಯಜ್ಞಾಧಿಕಾರವೇ ಮುಂತಾದ ಯಜ್ಞಕ್ಕೆ ಆವಶ್ಯಕವಾದ ಎಲ್ಲ ಸಾಮಗ್ರಿಗಳೂ ದೊರಕಿದ ಪಕ್ಷದಲ್ಲಿ ದೊಡ್ಡ-ದೊಡ್ಡ ಯಜ್ಞಗಳ ಮತ್ತು ಅಗ್ನಿಹೋತ್ರಗಳೇ ಮುಂತಾದುವುಗಳ ಮೂಲಕ ಶ್ರೀಭಗವಂತನನ್ನು ಆರಾಧಿಸಬೇಕು. ಯುಧಿಷ್ಠಿರ! ಶ್ರೀಭಗವಂತನೇ ಎಲ್ಲ ಯಜ್ಞಗಳನ್ನೂ ಭುಂಜಿಸುವವನು–ಎಂಬುದು ನಿಜವಾದರೂ ಆ ಶ್ರೀಭಗವಂತನಿಗೆ ಬ್ರಾಹ್ಮಣನ ಮುಖದಲ್ಲಿ ಸಮರ್ಪಿತವಾಗುವ ಹವಿಷ್ಯಾನ್ನ ದಿಂದ ಅತ್ಯಧಿಕವಾದ ತೃಪ್ತಿಯುಂಟಾಗುವುದು. ಅಗ್ನಿಯ ಮುಖದಲ್ಲಿ ಸಮರ್ಪಿತವಾಗುವ ಹವಿಷ್ಯಗಳಿಂದಲೂ ಆತನಿಗೆ ಅಷ್ಟು ತೃಪ್ತಿಯು ಉಂಟಾಗುವುದಿಲ್ಲ . ಆದುದರಿಂದ ಬ್ರಾಹ್ಮಣರು, ದೇವತೆಗಳು ಮನುಷ್ಯರು–ಮುಂತಾದ ಎಲ್ಲ ಜೀವಿಗಳಲ್ಲಿಯೂ ಅವರವರ ಯೋಗ್ಯತೆಗೆ ತಕ್ಕಂತೆ ಅವರಿಗೆ ಉಪಯೋಗಪಡುವಂತಹ ಸಾಮಗ್ರಿಗಳಿಂದ ಎಲ್ಲರ ಹೃದಯ ಗಳಲ್ಲಿಯೂ ಅಂತರ್ಯಾಮಿಯಾಗಿ ಬೆಳಗುತ್ತಿರುವ ಶ್ರೀಭಗವಂತನನ್ನು ಆರಾಧಿಸಬೇಕು. ಈ ಪೂಜಾದ್ವಾರಗಳಲ್ಲಿ ಬ್ರಾಹ್ಮಣರೇ ಮುಖ್ಯರು. ಅವರ ಪೂಜಾನಂತರ ಇತರರ ಪೂಜೆಯನ್ನು ಸಲ್ಲಿಸಬೇಕಪ್ಪಾ. ಹಣ ಸೌಕರ್ಯ ವಿರುವ ದ್ವಿಜರು ಭಾದ್ರಪದಮಾಸದ ಕೃಷ್ಣಪಕ್ಷದಲ್ಲಿ ತನ್ನ ತಂದೆ-ತಾಯಿ ಗಳನ್ನೂ ಮತ್ತು ಅವರ ಬಂಧುಗಳನ್ನೂ ಉದ್ದೇಶಿಸಿ ಮಹಾಲಯ ಶ್ರಾದ್ಧವನ್ನು ಮಾಡಬೇಕು. (ಉಳಿದವರೂ ಅದನ್ನು ಯಥಾಶಕ್ತಿಯಾಗಿ ಆಚರಿಸಬೇಕು.) ಆ ಕಾಲದಲ್ಲಿ ಮಾತ್ರವಲ್ಲದೇ ಉತ್ತರಾಯಣ-ದಕ್ಷಿ ಣಾಯನಸಂಕ್ರಾಂತಿಗಳಲ್ಲಿಯೂ, ತುಲಾಮಾಸ-ಮೇಷಮಾಸಗಳ ವಿಷುವ ತ್ಪುಣ್ಯಕಾಲಗಳಲ್ಲಿಯೂ, ವ್ಯತೀಪಾತದಲ್ಲಿಯೂ, ದಿನಕ್ಷಯದಲ್ಲಿಯೂ, ಸೂರ್ಯ-ಚಂದ್ರಗ್ರಹಣಗಳ ಸಮಯದಲ್ಲಿಯೂ, ದ್ವಾದಶೀತಿಥಿ ಯಲ್ಲಿಯೂ, ಶ್ರವಣ, ಧನಿಷ್ಠೆ ಮತ್ತು ಅನೂರಾಧನಕ್ಷತ್ರಗಳಲ್ಲಿಯೂ, ವೈಶಾಖಶುಕ್ಲ ತೃತೀಯೆ (ಅಕ್ಷಯತೃತೀಯೆ)ಯಲ್ಲಿಯೂ, ಕಾರ್ತಿಕ ಶುಕ್ಲ ನವಮಿ (ಅಕ್ಷಯ ನವಮಿ) ಯಲ್ಲಿಯೂ, ಮಾರ್ಗಶಿರ, ಪುಷ್ಯ, ಮಾಘ, ಫಾಲ್ಗುನಗಳೆಂಬ ನಾಲ್ಕು ಮಾಸಗಳ ಕೃಷ್ಣಪಕ್ಷದ ಅಷ್ಟಮೀತಿಥಿಗಳಲ್ಲಿಯೂ, ಮಾಘಶುಕ್ಲ ಸಪ್ತಮಿಯಲ್ಲಿಯೂ ಮಾಘಮಾಸದ ಮಖಾನಕ್ಷತ್ರವು ಕೂಡಿದ ಹುಣ್ಣಿಮೆಯಲ್ಲಿಯೂ ಮತ್ತು ಚಿತ್ತೆ, ವಿಶಾಖೆ, ಜ್ಯೇಷ್ಠ ಮುಂತಾದ

ನಕ್ಷತ್ರಗಳಿಂದ ಕೂಡಿದ ಹುಣ್ಣಿಮೆಯಲ್ಲಿಯೂ, ದ್ವಾದಶೀತಿಥಿಗೆ ಅನೂರಾಧ, ಶ್ರವಣ, ಉತ್ತರಫಲ್ಗುನೀ, ಉತ್ತರಾಷಾಢಾ ಮತ್ತು ಉತ್ತರಾಭಾದ್ರ ಪದಾನಕ್ಷತ್ರಗಳ ಯೋಗವು ಇರುವ ಸಮಯದಲ್ಲಿಯೂ, ಏಕಾದಶೀ ತಿಥಿಗೆ ಮೂರು ಉತ್ತರಾನಕ್ಷತ್ರಗಳೊಡನೆಯೂ ಅಥವಾ ಜನ್ಮನಕ್ಷತ್ರ ಅಥವಾ ಶ್ರವಣನಕ್ಷತ್ರದೊಡನೆಯೂ ಯೋಗವಿರುವ ಸಮಯದಲ್ಲಿಯೂ, ಪಿತೃ ಗುಣಗಳನ್ನು ಕುರಿತು ಶ್ರಾದ್ಧಮಾಡುವುದು ಅತ್ಯಂತ ಯೋಗ್ಯವು ಮತ್ತು ಶ್ರೇಷ್ಠವಾದುದು. ಈ ಯೋಗಗಳು ಶ್ರಾದ್ಧಕ್ಕೆ ಮಾತ್ರವಲ್ಲದೇ ಎಲ್ಲ ಪುಣ್ಯಕರ್ಮಗಳ ಆಚರಣೆಗೂ ಉಪಯೋಗಪಡುವುವು. ಇವು ಶ್ರೇಯಸ್ಸಿನ ಕಾಲಗಳು. ಶ್ರೇಯಸ್ಸನ್ನು ವೃದ್ಧಿಪಡಿಸುವ ಕಾಲಗಳು. ಸಮಯಗಳಲ್ಲಿ ತನ್ನ ಸಂಪೂರ್ಣಶಕ್ತಿಯನ್ನೂ ಉಪಯೋಗಿಸಿ ಶ್ರೇಯಸ್ಸನ್ನು ಉಂಟುಮಾಡುವ ಈ ಕರ್ಮಗಳನ್ನು ಆಚರಿಸಬೇಕು. ಇದರಿಂದಲೇ ಜೀವನದ ಸಫಲತೆ. ಈ ಪರ್ವಕಾಲಗಳಲ್ಲಿ ಮಾಡಲ್ಪಡುವ ಸ್ನಾನ, ಜಪ, ಹೋಮ, ವ್ರತ, ದೇವತಾ-ಬ್ರಾಹ್ಮಣರ ಪೂಜೆ–ಇವುಗಳಿಂದಲೂ ಮತ್ತು ಈ ಸಮಯಗಳಲ್ಲಿ ದೇವತೆ ಗಳಿಗಾಗಲೀ, ಪಿತೃದೇವತೆಗಳಿಗಾಗಲೀ, ಮನುಷ್ಯರಿಗಾಗಲೀ, ಪ್ರಾಣಿಗಳಿ ಗಾಗಲೀ ಸಮರ್ಪಿಸಲ್ಪಡುವ ಪದಾರ್ಥಗಳಿಂದಲೂ ಅಕ್ಷಯವಾದ ಫಲವು ದೊರಕುತ್ತದೆ. ಧರ್ಮರಾಜ! ಇದೇ ರೀತಿಯಲ್ಲಿಯೇ ತನ್ನ ಹೆಂಡತಿಗೆ ಮಾಡುವ ಪುಂಸವನ ಸೀಮಂತಗಳೇ ಮುಂತಾದ ಗರ್ಭಸಂಸ್ಕಾರಗಳಲ್ಲಿಯೂ ಸಂತಾನಕ್ಕೆ ಮಾಡುವ ಜಾತಕರ್ಮಾದಿ ಸಂಸ್ಕಾರಗಳಲ್ಲಿಯೂ, ತನಗಾಗಿ ಮಾಡುವ ಯಜ್ಞದೀಕ್ಷೆಯೇ ಮುಂತಾದ ಸಂಸ್ಕಾರಗಳಲ್ಲಿಯೂ, ಪ್ರೇತಕರ್ಮಗಳಲ್ಲಿಯೂ, ವಾರ್ಷಿಕಶ್ರಾದ್ಧದಿನದಲ್ಲಿಯೂ, ವೃದ್ಧಿಶ್ರಾದ್ಧವೇ ಮುಂತಾದ ಮಂಗಳಕರ್ಮಗಳಲ್ಲಿಯೂ ದಾನ-ಧರ್ಮಗಳನ್ನು ವಿಶೇಷವಾಗಿ ಮಾಡಬೇಕು. (ಶ್ಲೋಕ 14-26)

ಈಗ ನಾನು ನಿನಗೆ ಧರ್ಮವೇ ಮುಂತಾದ ಶ್ರೇಯಸ್ಸನ್ನುಂಟು ಮಾಡುವ ಜಾಗಗಳು ಯಾವುವು–ಎಂಬುದನ್ನು ಹೇಳುತ್ತೇನೆ ; ಕೇಳು : ಸತ್ಪಾತ್ರವು ಎಲ್ಲಿ ಸಿಕ್ಕುತ್ತದೆಯೋ–ಅದೇ ಪವಿತ್ರತಮವಾದ ಜಾಗವು. **'ಸ ವೈ ಪುಣ್ಯತಮೋ ದೇಶಃ ಸತ್ಪಾತ್ರಂ ಯತ್ರ ಲಭ್ಯತೇ'.** ಈ ಚರಾಚರವಾದ ಜಗತ್ತಿಗೆ ಆಶ್ರಯನಾಗಿರುವ ಪರಮಾತ್ಮನ ಅರ್ಚಾವಿಗ್ರಹವು

ಯಾವ ಜಾಗದಲ್ಲಿದೆಯೋ, ತಪಸ್ಸು, ವಿದ್ಯೆ, ದಯೆ–ಮುಂತಾದ ಗುಣಗಳಿಂದ ಸಂಪನ್ನರಾಗಿರುವ ಬ್ರಾಹ್ಮಣರ ಪರಿವಾರವು ಎಲ್ಲಿ ವಾಸಮಾಡುತ್ತದೆಯೋ, ಶ್ರೀಭಗವಂತನ ಪೂಜೆಯು ಎಲ್ಲೆಲ್ಲಿ ನಡೆಯುವುದೋ ಮತ್ತು ಪುರಾಣಗಳಲ್ಲಿ ಪ್ರಸಿದ್ಧವಾಗಿರುವ ಗಂಗೆಯೇ ಮುಂತಾದ ಪುಣ್ಯನದಿಗಳು ಎಲ್ಲೆಲ್ಲಿವೆಯೋ–ಆ ಜಾಗಗಳೆಲ್ಲವೂ ಶ್ರೇಯಸ್ಸನ್ನುಂಟುಮಾಡುವ ಸ್ಥಾನಗಳೆಂದು ತಿಳಿಯುವುದು. ಪುಷ್ಕರವೇ ಮುಂತಾದ ಸರೋವರಗಳು, ಸಿದ್ಧಪುರುಷರು ಸೇವಿಸಿದ ಕ್ಷೇತ್ರ-ತೀರ್ಥಗಳು, ಕುರುಕ್ಷೇತ್ರ, ಗಯೆ, ಪ್ರಯಾಗ, ಪುಲಹಾಶ್ರಮ (ಸಾಲಿಗ್ರಾಮಕ್ಷೇತ್ರ). ನೈಮಿಷಾರಣ್ಯ, ಫಾಲ್ಗುನಕ್ಷೇತ್ರ, ರಾಮಸೇತು, ಪ್ರಭಾಸ, ದ್ವಾರಕ, ಕಾಶಿ, ಮಧುರೆ, ಪಂಪಾಸರೋವರ, ಬಿಂದುಸರೋವರ, ಬದರಿಕಾಶ್ರಮ, ಅಲಕನಂದಾ–ಇವೇ ಮುಂತಾದ ಪುಣ್ಯಕ್ಷೇತ್ರಗಳೂ, ಅಯೋಧ್ಯೆ, ಚಿತ್ರಕೂಟ–ಸೀತಾರಾಮಾಶ್ರಮ ಮುಂತಾದ ತೀರ್ಥಕ್ಷೇತ್ರಗಳೂ, ಮಹೇಂದ್ರ ಮತ್ತು ಮಲಯವೇ ಮುಂತಾದ ಸಮಸ್ತ ಕುಲಪರ್ವತಗಳೂ ಮತ್ತು ಶ್ರೀಭಗವಂತನ ಅರ್ಚಾವತಾರಗಳಿರುವ ಜಾಗಗಳು–ಈ ಸ್ಥಾನಗಳೆಲ್ಲವೂ ಅತ್ಯಂತಪವಿತ್ರವಾದುವು. ಶ್ರೇಯಸ್ಸನ್ನು ಬಯಸುವ ಮನುಷ್ಯನು ಮತ್ತೆ ಮತ್ತೆ ಈ ದೇಶಗಳನ್ನು ಸೇವಿಸಬೇಕು. ಈ ಸ್ಥಾನಗಳಲ್ಲಿ ಪುಣ್ಯಕರ್ಮಗಳನ್ನು ಮಾಡುವ ಮನುಷ್ಯರಿಗೆ ಬೇರೆ ಕಡೆಗಳಲ್ಲಿ ದೊರಕುವುದಕ್ಕಿಂತಲೂ ಸಾವಿರ ಪಾಲಿನಷ್ಟು ಹೆಚ್ಚು ಫಲವು ದೊರೆಯುವುದು.

ಪಾತ್ರಂ ತ್ವತ್ರ ನಿರುಕ್ತಂ ವೈ ಕವಿಭಿಃ ಪಾತ್ರವಿತ್ತಮೈಃ ।
ಹರಿರೇವೈಕ ಉರ್ವೀಶ ಯನ್ಮಯಂ ವೈ ಚರಾಚರಮ್ ॥೩೪॥

ಎಲೈ ರಾಜೇಂದ್ರನೇ! ಸತ್ಪಾತ್ರರು ಯಾರು? ಎಂಬುದನ್ನು ನಿರ್ಣಯಿಸುವ ಸಂದರ್ಭದಲ್ಲಿ ಶ್ರೇಷ್ಠತಮರಾದ ತಜ್ಞರು–'ಶ್ರೀಹರಿಯೊಬ್ಬನೇ ಸತ್ಪಾತ್ರನು'–ಎಂದು ಸಾರುತ್ತಾರೆ. ಚರಾಚರಜಗತ್ತೆಲ್ಲವೂ ಆ ಹರಿಮಯವೇ ಆಗಿದೆ.

ಈ ನಿನ್ನ ಯಜ್ಞದ ವಿಷಯವನ್ನೇ ನೋಡು. ಈ ಯಜ್ಞವನ್ನು ದೇವತೆಗಳೂ, ಋಷಿಗಳೂ, ಸಿದ್ಧರೂ ಮತ್ತು ಸನಕಾದಿ ಬ್ರಹ್ಮಪುತ್ರರೂ ಅಲಂಕರಿಸಿದ್ದರೂ ಕೂಡ ಅಗ್ರಪೂಜೆಗೆ ಭಗವಂತನಾದ ಶ್ರೀಕೃಷ್ಣನೇ ಪಾತ್ರತಮನೆಂದು ತಿಳಿಯಲ್ಪಟ್ಟನಲ್ಲವೇ?

ಜೀವರಾಶಿಭಿರಾಕೀರ್ಣ ಆಣ್ಡಕೋಶಾಙ್ಘ್ರಿಪೋ ಮಹಾನ್ ।
ತನ್ಮೂಲತ್ವಾದಚ್ಯುತೇಜ್ಯಾ ಸರ್ವಜೀವಾತ್ಮತರ್ಪಣಮ್ ॥೩೬॥

ಜೀವರಾಶಿಗಳಿಂದ ತುಂಬಿರುವ ಈ ಬ್ರಹ್ಮಾಂಡವೆಂಬ ಮಹಾವೃಕ್ಷಕ್ಕೆ ಆ ಶ್ರೀಕೃಷ್ಣನೊಬ್ಬನೇ ಮೂಲವಾಗಿದ್ದಾನೆ. ಆದುದರಿಂದ ಆತನಿಗೆ ಪೂಜೆ ಮಾಡಿದರೆ ಎಲ್ಲ ಜೀವಿಗಳ ಆತ್ಮಕ್ಕೂ ತೃಪ್ತಿಯಾಗುವುದು.

ಈತನೇ–ಮನುಷ್ಯರು, ಪಶು-ಪಕ್ಷಿಗಳು, ಋಷಿಗಳು, ದೇವತೆಗಳು ಮುಂತಾದವರ ಶರೀರಗಳೆಂಬ ಪುರಗಳನ್ನು ರಚಿಸಿದವನು ಮತ್ತು ಅವರ ಪುರಗಳಲ್ಲಿ ಜೀವರೂಪದಿಂದ ಶಯನಮಾಡಿರುವುದರಿಂದ ಈತನನ್ನು 'ಪುರುಷ' ಎಂದು ಕರೆಯುತ್ತಾರೆ.* ಎಲೈ ರಾಜನೇ! ತಾನು ಏಕರಸನಾಗಿದ್ದರೂ ಈ ಶ್ರೀಭಗವಂತನು ಆ ಮನುಷ್ಯಾದಿಗಳಲ್ಲಿ ತಾರತಮ್ಯವಿರುವುದರಿಂದ ಅವರಲ್ಲಿರುವ ತಾನೂ ತಾರತಮ್ಯದಿಂದ ಕೂಡಿರುವವನಂತೆ ಕಾಣುತ್ತಾನೆ. ಆದುದರಿಂದ ಪಶು-ಪಕ್ಷಿ ಮುಂತಾದುವುಗಳಿಂತಲೂ ಮನುಷ್ಯನೇ ಶ್ರೇಷ್ಠವಾದ ಪಾತ್ರನೆನಿಸುತ್ತಾನೆ. ಆ ಮನುಷ್ಯರಲ್ಲಿಯೂ ಶ್ರೀಭಗವಂತನ ಅಂಶವಾದ ತಪಸ್ಸು, ಯೋಗ–ಮುಂತಾದುವು ಎಷ್ಟು ಹೆಚ್ಚಾಗಿದ್ದರೆ ಅವರ ಪಾತ್ರತ್ವವೂ ಅಷ್ಟು ಹೆಚ್ಚು ಶ್ರೇಷ್ಠವಾಗುತ್ತದೆ. (ಶ್ಲೋಕ 37-38)

ಯುಧಿಷ್ಠಿರ! ತ್ರೇತಾಯುಗವೇ ಮುಂತಾದ ಯುಗಗಳಲ್ಲಿ ಮನುಷ್ಯರು ಒಬ್ಬರನ್ನೊಬ್ಬರು ತಿರಸ್ಕಾರಮಾಡುತ್ತಿರುವುದನ್ನು ಕಂಡು ಜ್ಞಾನಿಗಳು ಉಪಾಸನೆಯು ಸಿದ್ಧಿಸುವುದಕ್ಕೋಸ್ಕರ ಶ್ರೀಹರಿಯ ಪ್ರತಿಮೆಗಳನ್ನು ಕ್ರಿಯಾಯೋಗಕ್ಕಾಗಿ ಪ್ರತಿಷ್ಠೆಮಾಡಿದರು. ಅಂದಿನಿಂದ ಎಷ್ಟೋ ಮಂದಿ ಜನರು ಅತ್ಯಂತ ಶ್ರದ್ಧೆ ಮತ್ತು ಪೂಜಾಸಾಮಗ್ರಿಗಳಿಂದ ಶ್ರೀಭಗವಂತನನ್ನು ಪ್ರತಿಮೆಯಲ್ಲಿಯೇ ಪೂಜಿಸುತ್ತಾ ಬಂದಿದ್ದಾರೆ. ಆದರೆ ಯಾರು ಮನುಷ್ಯನನ್ನು ದ್ವೇಷಿಸುತ್ತಾರೆಯೋ-ಅವರು ಪ್ರತಿಮೆಯನ್ನು ಉಪಾಸನೆಮಾಡಿದರೂ ಅವರಿಗೆ ಸಿದ್ಧಿಯು ದೊರೆಯುವುದಿಲ್ಲ. ಯುಧಿಷ್ಠಿರ! ಮನುಷ್ಯರಲ್ಲಿಯೂ

---

* ಜೀವೇನ ರೂಪೇಣ–ಜೀವನರೂಪದಲ್ಲಿ ಪರಮಾತ್ಮನೇ ಜೀವನಾಗಿ ಶರೀರದಲ್ಲಿರುತ್ತಾನೆ–ಎಂದು ಅದ್ವೈತ ಪರವಾದ ವ್ಯಾಖ್ಯಾನ. ಪರಮಾತ್ಮನು ಜೀವನ ಅಂತರ್ಯಾಮಿರೂಪದಲ್ಲಿ, ಆತ್ಮರೂಪದಲ್ಲಿ, ಆತನ ಶರೀರದಲ್ಲಿ ಇರುತ್ತಾನೆ–ಎಂದು ದ್ವೈತ–ವಿಶಿಷ್ಟಾದ್ವೈತಪರವಾದ ವ್ಯಾಖ್ಯಾನ.

ಬ್ರಾಹ್ಮಣನು ಹೆಚ್ಚು ಸತ್ಪಾತ್ರನೆಂದು ತಿಳಿಯಲ್ಪಟ್ಟಿದ್ದಾನೆ. ಏಕೆಂದರೆ : ಆತನು ತನ್ನ ತಪಸ್ಸು, ವಿದ್ಯೆ ಮತ್ತು ಸಂತೋಷಗಳಿಂದ ಶ್ರೀಭಗವಂತನ ವೇದರೂಪವಾದ ಶರೀರವನ್ನು ಧರಿಸಿರುತ್ತಾನೆ. ಮಹಾರಾಜ! ಇತರರ ಮಾತು ಹಾಗಿರಲಿ. ಸರ್ವಾತ್ಮಕನಾದ ಭಗವಂತನಾದ, ಶ್ರೀಕೃಷ್ಣನಿಗೂ ಬ್ರಾಹ್ಮಣರು ಇಷ್ಟದೇವತೆಗಳಾಗಿದ್ದಾರೆ. ಏಕೆಂದರೆ : ಅವರ ಪಾದಗಳ ಧೂಳಿನಿಂದ ಮೂರು ಲೋಕಗಳೂ ಪವಿತ್ರವಾಗುತ್ತಿರುವುವು. (ಶ್ಲೋಕ 39-42)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಸಪ್ತಮಸ್ಕಂಧದ ೧೪ನೆಯ ಅಧ್ಯಾಯವು ಮುಗಿಯಿತು.

ಸಪ್ತಮಸ್ಕಂಧ ೧೫ನೆಯ ಅಧ್ಯಾಯ

ಗೃಹಸ್ಥರಿಗಾಗಿ ಮೋಕ್ಷಧರ್ಮದ ವರ್ಣನೆ

ಶ್ರೀ ನಾರದಮಹರ್ಷಿಗಳು ಹೇಳುತ್ತಾರೆ :

ಕರ್ಮನಿಷ್ಠಾ ದ್ವಿಜಾಃ ಕೇಚಿತ್ತಪೋನಿಷ್ಠಾ ನೃಪಾಪರೇ ।
ಸ್ವಾಧ್ಯಾಯೇಽನ್ಯೇ ಪ್ರವಚನೇ ಯೇ ಕೇಚಿಜ್ಜ್ಞಾನಯೋಗಯೋಃ ॥

ಯುಧಿಷ್ಠಿರಮಹಾರಾಜ! ದ್ವಿಜರಲ್ಲಿ ಕೆಲವರಿಗೆ ಕರ್ಮಯೋಗದಲ್ಲಿ ನಿಷ್ಠೆ ಇರುವುದು. ಕೆಲವರು ತಪಸ್ಸಿನಲ್ಲಿ ನಿಷ್ಠೆಯನ್ನು ಹೊಂದಿದ್ದಾರೆ. ಕೆಲವರ ನಿಷ್ಠೆಯು ವೇದಗಳ ಅಧ್ಯಯನ ಮತ್ತು ಪ್ರವಚನಗಳಲ್ಲಿರುತ್ತದೆ. ಕೆಲವರು ಜ್ಞಾನನಿಷ್ಠೆಯುಳ್ಳವರು ಮತ್ತು ಕೆಲವರ ನಿಷ್ಠೆಯು ಯೋಗದಲ್ಲಿರುವುದು.

ಶ್ರಾದ್ಧ ಮತ್ತು ದೇವತಾಪೂಜೆಗಳೇ ಮುಂತಾದ ಕರ್ಮಗಳಲ್ಲಿ ಅಕ್ಷಯ-ಅನಂತಫಲವು ದೊರೆಯಬೇಕೆಂದು ಬಯಸುವ ಗೃಹಸ್ಥರು ಈ ಬಗೆ-ಬಗೆಯ ನಿಷ್ಠೆಯುಳ್ಳ ದ್ವಿಜರಲ್ಲಿ ಜ್ಞಾನನಿಷ್ಠನಾದ ದ್ವಿಜನಿಗೇ ಹವ್ಯ ಮತ್ತು ಕವ್ಯಗಳನ್ನು ಸಮರ್ಪಿಸಬೇಕು. ಆತನು ಸಿಕ್ಕದೇಹೋದರೆ ಅವರವರ ಯೋಗ್ಯತಾನುಸಾರವಾಗಿ ಕ್ರಮವಾಗಿ ಯೋಗೀ, ವೇದಪಾಠೀ, ಧರ್ಮಪ್ರವಚನವನ್ನು ಮಾಡುವವನು–ಮುಂತಾದವರಿಗೆ ಅವುಗಳನ್ನು ಸಮರ್ಪಿಸಬೇಕು. ದೇವತೆಗಳ ಸ್ಥಾನದಲ್ಲಿ ಇಬ್ಬರು ಬ್ರಾಹ್ಮಣರಿಗೂ ಮತ್ತು

ಪಿತೃಸ್ಥಾನದಲ್ಲಿ ಮೂವರು ಬ್ರಾಹ್ಮಣರಿಗೂ ಭೋಜನಮಾಡಿಸಬೇಕು. ಅಥವಾ ಎರಡು ಸ್ಥಾನಗಳಲ್ಲಿಯೂ ಒಬ್ಬೊಬ್ಬ ಬ್ರಾಹ್ಮಣನಿಗೆ ಭೋಜನ ಮಾಡಿಸಬಹುದು. ಕರ್ತೃವು ತುಂಬಾ ಹಣಗಾರನಾಗಿದ್ದರೂ ಶ್ರಾದ್ಧ ಕರ್ಮದಲ್ಲಿ ಹೆಚ್ಚು ಹೆಚ್ಚು ಮಂದಿ ಬ್ರಾಹ್ಮಣರನ್ನು ಹೇಳಿ ಅದನ್ನು ವಿಸ್ತಾರ ಮಾಡಬಾರದು. ಶ್ರಾದ್ಧಕರ್ಮದಲ್ಲಿ ವಿಸ್ತಾರವನ್ನು ಏಕೆ ಮಾಡಬಾರದು?– ಎಂದರೆ : ಅದರಿಂದ ಶ್ರಾದ್ಧಕ್ರಿಯೆಯು ಸರಿಯಾಗಿ ಆಗುವುದಿಲ್ಲ. ಶ್ರಾದ್ಧದಲ್ಲಿ ತನ್ನ ನೆಂಟರಿಷ್ಟರು ಮುಂತಾದವರಿಗೆ ದಾನ-ಭೋಜನಾದಿಗಳನ್ನು ಕೊಡುವುದರಿಂದ ಮತ್ತು ಶ್ರಾದ್ಧವನ್ನು ಅಧಿಕವಾಗಿ ವಿಸ್ತರಿಸುವುದರಿಂದ ದೇಶ-ಕಾಲಗಳಿಗೆ ತಕ್ಕುದಾದ ಶ್ರದ್ಧೆ, ಪದಾರ್ಥಗಳು, ಶ್ರಾದ್ಧಪಾತ್ರರು, ಪೂಜೆ–ಇತ್ಯಾದಿಗಳು ವಿಕೃತವಾಗುವುವು. ಸರಿಯಾದ ದೇಶ ಮತ್ತು ಕಾಲಗಳು ಕೂಡಿಬಂದಾಗ ಋಷಿ-ಮುನಿಗಳು ಸೇವಿಸಲು ಯೋಗ್ಯವಾದ ಶುದ್ಧವಾದ ಹವಿಷ್ಯಾನ್ನವನ್ನು ಶ್ರೀಹರಿಗೆ ನಿವೇದನೆಮಾಡಿ ಅದನ್ನು ಶ್ರದ್ಧೆಯಿಂದ ವಿಧಿ ಪೂರ್ವಕವಾಗಿ ಸತ್ಪಾತ್ರನಿಗೆ ದಾನಮಾಡಬೇಕು. ಆಗ ಅದು ಎಲ್ಲ ಕಾಮನೆಗಳನ್ನೂ ಈಡೇರಿಸುವುದು ; ಅಕ್ಷಯವಾಗುವುದು. ಅನ್ನವನ್ನು ದೇವಾದಿಗಳಿಗೂ, ಋಷಿಗಳಿಗೂ, ಪಿತೃಗಳಿಗೂ, ಭೂತಗಳಿಗೂ, ತನ್ನ ಬಂಧು-ಮಿತ್ರರಿಗೂ ಮತ್ತು ತನಗೂ ವಿಭಾಗಮಾಡಿ ಸಮರ್ಪಿಸಬೇಕು. ಹಾಗೆ ಸಮರ್ಪಿಸುವಾಗ ಅವರೆಲ್ಲರನ್ನೂ ಮತ್ತು ಆ ಅನ್ನವನ್ನೂ ತನ್ನನ್ನೂ ಮತ್ತು ಎಲ್ಲರನ್ನೂ ಭಗವದಾತ್ಮಕರೆಂದು ಭಾವಿಸಿಕೊಳ್ಳಬೇಕು. (ಶ್ಲೋಕ 2-6)

ನ ದದ್ಯಾದಾಮಿಷಂ ಶ್ರಾದ್ಧೇ ನ ಚಾದ್ಯಾದ್ಧರ್ಮತತ್ತ್ವವಿತ್ ।
ಮುನ್ಯನ್ನೈಃ ಸ್ಯಾತ್ಪರಾ ಪ್ರೀತಿರ್ಯಥಾ ನ ಪಶುಹಿಂಸಯಾ ॥೭॥

ಧರ್ಮದ ತತ್ತ್ವವನ್ನು ಬಲ್ಲವನು ಶ್ರಾದ್ಧದಲ್ಲಿ ಮಾಂಸವನ್ನು ಸಮರ್ಪಿಸಬಾರದು. ತಾನೂ ಮಾಂಸವನ್ನು ತಿನ್ನಬಾರದು. ಏಕೆಂದರೆ : ಪಿತೃಗಳಿಗೆ, ಋಷಿ-ಮುನಿಗಳಿಗೆ ಯೋಗ್ಯವಾದ ಹವಿಷ್ಯಾನ್ನದಿಂದ ತುಂಬಾ ಸಂತೋಷವುಂಟಾಗುತ್ತದೆ. ಅಷ್ಟು ಸಂತೋಷವು ಪಶುಹಿಂಸೆಯಿಂದ ಅವರಿಗೆ ಉಂಟಾಗುವುದಿಲ್ಲ.

ಒಳ್ಳೆಯ ಧರ್ಮವನ್ನು ಪಾಲಿಸಬೇಕೆಂದು ಬಯಸುವ ಜನರು ಯಾವುದೇ ಪ್ರಾಣಿಗೂ ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ, ದೇಹ

ದಿಂದಾಗಲೀ–ಯಾವುದೇ ರೀತಿಯ ಕಷ್ಟವನ್ನೂ ಉಂಟುಮಾಡಬಾರದು. ಯಾವ ಪ್ರಾಣಿಗೂ ಎಂದಿಗೂ ಹೇಗೂ ಹಿಂಸೆಯನ್ನು ಕೊಡಬಾರದು. ಅವರಿಗೆ ಇದಕ್ಕಿಂತಲೂ ದೊಡ್ಡ ಧರ್ಮ ಬೇರೊಂದಿಲ್ಲವು. ಅದಕ್ಕೇ ಯಜ್ಞತತ್ತ್ವವನ್ನರಿತ ಕೆಲವು ಜ್ಞಾನಿಗಳು–ಈ ಎಲ್ಲ ಕರ್ಮಮಯವಾದ ಯಜ್ಞಗಳನ್ನೂ ಜ್ಞಾನದಿಂದ ಪ್ರಜ್ವಲಿತವಾದ ಆತ್ಮಸಂಯಮವೆಂಬ ಅಗ್ನಿಯಲ್ಲಿ ಹೋಮಮಾಡಿ ವಿಶ್ರಾಂತರಾಗಿರುತ್ತಾರೆ. ಯಾವನಾದರೂ ಮನುಷ್ಯನು ಈ ದ್ರವ್ಯಮಯವಾದ ಯಜ್ಞಮಾಡಲು ಪ್ರಯತ್ನಿಸುವುದನ್ನು ಕಂಡರೆ ಎಲ್ಲ ಪ್ರಾಣಿಗಳಿಗೂ ಭಯವುಂಟಾಗುವುದು. 'ತನ್ನ ಪ್ರಾಣವನ್ನು ಪೋಷಿಸಿ ಕೊಳ್ಳುವ ಈ ನಿರ್ದಯಿಯಾದ ಮೂರ್ಖನು ನನ್ನನ್ನು ಅವಶ್ಯವಾಗಿ ಕೊಂದುಹಾಕುವನು'–ಎಂದು ಅವು ಚಿಂತಿಸತೊಡಗುವುವು. ಆದುದರಿಂದ ಧರ್ಮಜ್ಞನಾದ ಮನುಷ್ಯನು ಪ್ರತಿದಿನವೂ ದೈವಯೋಗದಿಂದ ತನಗೆ ದೊರಕುವ ಮುನಿಜನೋಚಿತವಾದ ಹವಿಷ್ಯಾನ್ನದಿಂದಲೇ ನಿತ್ಯ ಮತ್ತು ನೈಮಿತ್ತಿಕ ಕರ್ಮಗಳನ್ನು ಮಾಡಿ ಅದರಿಂದಲೇ ಸಂತುಷ್ಟನಾಗಿರುವುದು ಉಚಿತವು. ಅಧರ್ಮಕ್ಕೆ-ವಿಧರ್ಮ, ಪರಧರ್ಮ, ಆಭಾಸ, ಉಪಮಾ ಮತ್ತು ಛಲ–ಎಂಬ ಐದು ಶಾಖೆಗಳುಂಟು. ಧರ್ಮಜ್ಞನಾದ ಪುರುಷನು ಅಧರ್ಮವನ್ನು ತೊರೆಯುವಂತೆಯೇ ಈ ಐದನ್ನೂ ತ್ಯಜಿಸಬೇಕು. (ಶ್ಲೋಕ 8-12)

ಧರ್ಮಬಾಧೋ ವಿಧರ್ಮಃ ಸ್ಯಾತ್ಪರಧರ್ಮೋಽನ್ಯಚೋದಿತಃ ।
ಉಪಧರ್ಮಸ್ತು ಪಾಖಣ್ಡೋ ದಮ್ಭೋ ವಾ ಶಬ್ದಭಿಚ್ಛಲಃ ॥೧೩॥

ಯಸ್ತ್ವಿಚ್ಛಯಾ ಕೃತಃ ಪುಮ್ಭಿರಾಭಾಸೋ ಹ್ಯಾಶ್ರಮಾತ್ಪೃಥಕ್ ।
ಸ್ವಭಾವವಿಹಿತೋ ಧರ್ಮಃ ಕಸ್ಯ ನೇಷ್ಟಃ ಪ್ರಶಾನ್ತಯೇ ॥೧೪॥

ಧರ್ಮಬುದ್ಧಿಯಿಂದ ಆಚರಿಸಲ್ಪಟ್ಟರೂ ಯಾವುದರಿಂದ ತನ್ನ ಧರ್ಮಕ್ಕೆ ಬಾಧೆಯುಂಟಾಗುವುದೋ–ಅದು ವಿಧರ್ಮವೆನಿಸುವುದು. ಇತರರಿಗಾಗಿ ಶಾಸ್ತ್ರದಲ್ಲಿ ವಿಧಾನಮಾಡಲ್ಪಟ್ಟ ಧರ್ಮವು ಪರಧರ್ಮವು. ಧರ್ಮದ ಸೋಗಿನಲ್ಲಿರುವ ಪಾಷಂಡಕ್ಕೆ ಅಥವಾ ದಂಭಕ್ಕೆ ಉಪಧರ್ಮ ಅಥವಾ 'ಉಪಮಾ' ಎಂದು ಹೆಸರು. ಶಾಸ್ತ್ರವಚನಗಳಿಗೆ ಬೇರೆ ರೀತಿಯಲ್ಲಿ ಅರ್ಥಮಾಡುವುದನ್ನು 'ಛಲ'ವೆಂದು ಕರೆಯುತ್ತಾರೆ. ಮನುಷ್ಯನು ತನ್ನ ಆಶ್ರಮಕ್ಕೆ ವಿರುದ್ಧವಾಗಿರುವುದನ್ನು ತನ್ನ ಇಷ್ಟಬಂದಂತೆ ಧರ್ಮವೆಂದು

ತಿಳಿದುಕೊಂಡರೆ–ಅದು ಆಭಾಸವು. ತನ್ನ ಸ್ವಭಾವಕ್ಕೆ ಅನುಕೂಲವಾಗಿರುವ (ವರ್ಣಾಶ್ರಮಗಳಿಗೆ ಉಚಿತವಾದ) ಧರ್ಮಗಳು ಯಾರಿಗೆ ತಾನೇ ಶಾಂತಿಯನ್ನುಂಟುಮಾಡುವುದಿಲ್ಲ?

ಧರ್ಮಾತ್ಮನಾದ ಮನುಷ್ಯನು ದರಿದ್ರನಾಗಿದ್ದರೂ ಧರ್ಮಕ್ಕೋಸ್ಕರವೇ ಆಗಲೀ ಅಥವಾ ಜೀವನನಿರ್ವಾಹಕ್ಕೋಸ್ಕರವೇ ಆಗಲೀ ಹಣವು ಬೇಕು, ಬೇಕು–ಎಂದು ಹಂಬಲಿಸಿ ಅದಕ್ಕೆ ಪ್ರಯತ್ನಮಾಡಬಾರದು. ಹೆಬ್ಬಾವಿಗೆ ಅದರ ಕಡೆಯಿಂದ ಯಾವ ಪ್ರಯತ್ನವೂ ಇಲ್ಲದೆಯೇ ಜೀವನವು ನಡೆಯುತ್ತದೆ. ಹಾಗೆಯೇ ನಿವೃತ್ತಿಧರ್ಮನಿಷ್ಠನಾದ ಮನುಷ್ಯನ ಜೀವನ ಯಾತ್ರೆಯನ್ನು ಆತನ ನಿವೃತ್ತಿಯೇ ನಿರ್ವಹಿಸುವುದು. ಆತ್ಮದಲ್ಲಿಯೇ ರಮಿಸುತ್ತಾ ಕರ್ಮರಹಿತನಾಗಿ ಸಂತುಷ್ಟನಾಗಿರುವ ಮನುಷ್ಯನಿಗೆ ದೊರೆಯುವ ಸುಖವು ಕಾಮನೆಯಿಂದಲೂ, ಲೋಭದಿಂದಲೂ ಪ್ರೇರಿತನಾಗಿ ಹಣಕ್ಕಾಗಿ ಹಂಬಲಿಸುತ್ತಾ ದಿಕ್ಕು-ದಿಕ್ಕುಗಳಲ್ಲೂ ಅಲೆದಾಡುವ ಮನುಷ್ಯನಿಗೆ ಹೇಗೆತಾನೇ ದೊರೆಕೀತು? ಕಾಲುಗಳಲ್ಲಿ ಪಾದರಕ್ಷೆಗಳನ್ನು ಧರಿಸಿ ಸಂಚರಿಸುವವನಿಗೆ ಮುಳ್ಳು-ಕಲ್ಲುಗಳಿಂದ ಯಾವ ತೊಂದರೆಯೂ ಇರುವುದಿಲ್ಲವಷ್ಟೇ! ಹಾಗೆಯೇ ಮನಸ್ಸಿನಲ್ಲಿ ಸಂತೋಷವನ್ನು ಧರಿಸಿರುವವನಿಗೆ ಎಲ್ಲೆಲ್ಲಿಯೂ ಯಾವಾಗಲೂ ಸುಖವೇ ಸುಖವು. ದುಃಖವು ಇಲ್ಲವೇ ಇಲ್ಲವು. ಯುಧಿಷ್ಠಿರ! ಮನುಷ್ಯನು ನೀರಿನಿಂದಲೇ ಸಂತೋಷಪಡುತ್ತಾ ಜೀವನವನ್ನು ಏಕೆ ನಡೆಸುವುದಿಲ್ಲವೋ ತಿಳಿಯುತ್ತಿಲ್ಲ. ನಾಲಿಗೆಯ ಮತ್ತು ಜನನೇಂದ್ರಿಯದ ಆಸೆಯನ್ನು ತೀರಿಸುವ ಅಲ್ಪತನಕ್ಕೆ ಒಳಗಾಗಿ ಮನೆ ಕಾಯುವ ನಾಯಿಯಂತೆ ಆಗಿಬಿಡುವನಲ್ಲಾ! ತೃಪ್ತಿ-ಸಂತೋಷಗಳಿಲ್ಲದೇ ಇಂದ್ರಿಯಗಳ ಚಾಪಲ್ಯಕ್ಕೆ ಒಳಪಡುವ ಬ್ರಾಹ್ಮಣನ ತೇಜಸ್ಸು, ವಿದ್ಯೆ, ತಪಸ್ಸು ಮತ್ತು ಕೀರ್ತಿಗಳು ಸೋರಿಹೋಗುವುವು. ಜೊತೆಗೆ ಆತನು ವಿವೇಕವನ್ನೂ ಕಳೆದುಕೊಳ್ಳುವನು. ಹಸಿವು-ಬಾಯಾರಿಕೆಗಳು ಇಂಗಿದ ಬಳಿಕ ತಿನ್ನುವ ಮತ್ತು ಕುಡಿಯುವ ಆಸೆಯು ಶಾಂತವಾಗಿ ಬಿಡುವುದು. ಕೋಪವೂ ಕೂಡ ತನ್ನ ಕೆಲಸವು ಮುಗಿದ ಬಳಿಕ ಶಾಂತವಾಗಿ ಬಿಡುವುದು. ಆದರೆ ಮನುಷ್ಯನು ಭೂಮಿಯ ಎಲ್ಲ ದಿಕ್ಕುಗಳನ್ನೂ ಜಯಿಸಿ ಭೋಗಿಸಿದರೂ ಆತನ ಲೋಭವು ಹೋಗದಪ್ಪಾ. ಬಹುವಿಷಯಗಳನ್ನು ಬಲ್ಲವರಾಗಿ, ಸಂಶಯಗಳನ್ನು ಸಮಾಧಾನಪಡಿಸಿ

ಕೊಂಡು ಮನಸ್ಸಿನಲ್ಲಿ ಶಾಸ್ತ್ರೋಕ್ತವಾದ ಅರ್ಥಗಳನ್ನು ಕೂರಿಸುವವರಾಗಿ, ವಿದ್ವಾಂಸರ ಮಹಾಸಭೆಗಳಿಗೆ ಅಧ್ಯಕ್ಷರಾಗಿರುವ ದೊಡ್ಡ ದೊಡ್ಡ ವಿದ್ವಾಂಸರೂ ಕೂಡ ಅಸಂತೋಷಕ್ಕೆ ವಶರಾಗಿ ಅಧಃಪತನಹೊಂದುವರು. ಧರ್ಮರಾಜ! ಸಂಕಲ್ಪಗಳನ್ನು ತೊರೆಯುವುದರ ಮೂಲಕ ಕಾಮವನ್ನೂ, ಕಾಮನೆಗಳನ್ನೂ ತ್ಯಜಿಸುವುದರ ಮೂಲಕ ಕ್ರೋಧವನ್ನೂ, ಅರ್ಥವನ್ನೂ ಬಿಟ್ಟುಬಿಡುವುದರ ಮೂಲಕ ಲೋಭವನ್ನೂ ಮತ್ತು ತತ್ತ್ವವಿಚಾರದಿಂದ ಭಯವನ್ನೂ ಗೆಲ್ಲಬೇಕಪ್ಪಾ. ಸಂಸಾರದಲ್ಲಿ ಮುಳುಗಿರುವ ಜನರು ಯಾವುದನ್ನು 'ಅರ್ಥ' (ಸಂಪತ್ತು) ಎಂದು ಕರೆಯುತ್ತಾರೆಯೋ–ಅದು ವಾಸ್ತವವಾಗಿ ಅನರ್ಥವೇ ಆಗಿದೆಯೆಂದು ತಿಳಿದು ಲೋಭವನ್ನು ತೊರೆಯಬೇಕು. ಅಧ್ಯಾತ್ಮವಿದ್ಯೆಯಿಂದ ಶೋಕ-ಮೋಹಗಳನ್ನೂ, ಸತ್ಪುರುಷರನ್ನು ಉಪಾಸನೆಮಾಡುವುದರಿಂದ ದಂಭವನ್ನೂ, ಮೌನದಿಂದ ಯೋಗವಿಘ್ನಗಳನ್ನೂ ಮತ್ತು ಶರೀರ-ಪ್ರಾಣಗಳ ಗತಿಯನ್ನೂ ತಡೆಯುವುದರಿಂದ ಹಿಂಸೆಯನ್ನೂ ಜಯಿಸಬೇಕು. ಆಧಿಭೌತಿಕದುಃಖವನ್ನು ದಯೆಯ ಮೂಲಕವೂ, ಆಧಿದೈವಿಕವಾದ ವೇದನೆಯನ್ನು ಸಮಾಧಿಯ ಮೂಲಕವೂ, ಆಧ್ಯಾತ್ಮಿಕವಾದ ದುಃಖವನ್ನು ಯೋಗಬಲದಿಂದಲೂ ಮತ್ತು ನಿದ್ರೆಯನ್ನು ಸತ್ತ್ವದಿಂದಲೂ (ಸಾತ್ತ್ವಿಕವಾದ ಭೋಜನ, ಸಾತ್ತ್ವಿಕವಾದ ಸ್ಥಾನ ಮತ್ತು ಸಾತ್ತ್ವಿಕ ಜನರನ್ನು ಸೇವಿಸುವುದರಿಂದಲೂ) ಗೆಲ್ಲಬೇಕು. (ಶ್ಲೋಕ 15-24)

ರಜಸ್ತಮಶ್ಚ ಸತ್ತ್ವೇನ ಸತ್ತ್ವಂ ಚೋಪಶಮೇನ ಚ ।
ಏತತ್ಸರ್ವಂ ಗುರೌ ಭಕ್ತ್ಯಾ ಪುರುಷೋ ಹ್ಯಂಜಸಾ ಜಯೇತ್ ॥೨೫॥

ಸತ್ತ್ವಗುಣದ ಮೂಲಕ ರಜೋಗುಣ-ತಮೋಗುಣಗಳನ್ನೂ ಮತ್ತು ಉಪಶಾಂತಿಯ ಮೂಲಕ ಸತ್ತ್ವಗುಣವನ್ನೂ ಜಯಿಸಬೇಕು. ಗುರುಭಕ್ತಿಯೊಂದರಿಂದಲೇ ಸಾಧಕನು ಈ ಎಲ್ಲ ದೋಷಗಳನ್ನೂ ಸುಲಭವಾಗಿ ಜಯಿಸಿಬಿಡಬಹುದಪ್ಪಾ.

ಯಸ್ಯ ಸಾಕ್ಷಾದ್ಭಗವತಿ ಜ್ಞಾನದೀಪಪ್ರದೇ ಗುರೌ ।
ಮರ್ತ್ಯಾಸದ್ಧೀಃ ಶ್ರುತಂ ತಸ್ಯ ಸರ್ವಂ ಕುಂಜರಶೌಚವತ್ ॥೨೬॥

ಯುಧಿಷ್ಠಿರ! ಜ್ಞಾನದೀಪವನ್ನು ಹೃದಯದಲ್ಲಿ ಹೊತ್ತಿಸಿರುವ ಗುರುದೇವನು ಸಾಕ್ಷಾತ್ ಶ್ರೀಭಗವಂತನೇ ಆಗಿದ್ದಾನೆ. ಆತನಲ್ಲಿ ಮನುಷ್ಯನೆಂಬ

ಬುದ್ಧಿಯನ್ನು ಇಟ್ಟುಕೊಳ್ಳುವವನು ಮಹಾಮೂರ್ಖನು. ಆ ಮೂರ್ಖನು ಮಾಡಿದ ಶಾಸ್ತ್ರಶ್ರವಣವೆಲ್ಲವೂ ಆನೆಯ ಸ್ನಾನದಂತೆ ವ್ಯರ್ಥವೇ ಆಗುವುದಪ್ಪಾ.

ಈ ಶ್ರೀಕೃಷ್ಣನನ್ನೇ ನೋಡು. ಈತನು ಪ್ರಕೃತಿ-ಪುರುಷರಿಬ್ಬರಿಗೂ ಅಧೀಶ್ವರನಾಗಿರುವ ಸಾಕ್ಷಾದ್ಭಗವಂತನೇ ಆಗಿದ್ದಾನೆ. ದೊಡ್ಡ ದೊಡ್ಡ ಯೋಗೇಶ್ವರರು ಧ್ಯಾನಮಾಡಬೇಕಾದ ಪಾದಾರವಿಂದಗಳುಳ್ಳವನು ಈತ. ಆದರೆ ಪ್ರಾಕೃತರಾದ ಜನರು ಈತನನ್ನು ಮನುಷ್ಯನೆಂದು ಭಾವಿಸುತ್ತಿಲ್ಲವೇ? ಹಾಗೆಯೇ ಪಾಮರಜನರು ಗುರುದೇವನನ್ನೂ ಮನುಷ್ಯನೆಂಬ ಬುದ್ಧಿಯಿಂದ ನೋಡುತ್ತಾರೆ. ಶಾಸ್ತ್ರಗಳಲ್ಲಿ ಯಾವ ಯಾವ ನಿಯಮಗಳು ಆಜ್ಞೆಮಾಡಲ್ಪಟ್ಟಿವೆಯೋ ಅವೆಲ್ಲದರ ತಾತ್ಪರ್ಯವೇನು? ಎಂದರೆ : ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯಗಳೆಂಬ ಶತ್ರುಗಳ ಮೇಲೆ ಜಯಗಳಿಸಬೇಕು ಅಥವಾ ಐದು ಇಂದ್ರಿಯಗಳನ್ನೂ ಮತ್ತು ಮನಸ್ಸನ್ನೂ ವಶಪಡಿಸಿಕೊಳ್ಳಬೇಕು—ಎಂಬುದಿಷ್ಟೇ. ಆದರೆ ಹೀಗೆ ಆರು ಶತ್ರುಗಳನ್ನೂ ಗೆದ್ದು ಇಂದ್ರಿಯ-ಮನಸ್ಸುಗಳನ್ನೂ ಹತೋಟಿಗೆ ತಂದುಕೊಂಡರೂ ಈ ನಿಯಮಗಳ ಮೂಲಕ ಶ್ರೀಭಗವಂತನ ಧ್ಯಾನ-ಚಿಂತನೆಗಳು ನಡೆಯದೇ ಹೋದರೆ ಇವೆಲ್ಲವೂ ನಿರರ್ಥಕವಾದ ಶ್ರಮವೇ ಆಗುವುದಪ್ಪಾ. ಕೃಷಿ, ವ್ಯಾಪಾರ ಮುಂತಾದುವುಗಳೂ ಮತ್ತು ಅವುಗಳ ಫಲಗಳೂ ಕೂಡ ಯೋಗಸಾಧನೆಯ ಫಲವಾದ ಶ್ರೀಭಗವಂತನ ಪ್ರಾಪ್ತಿಯನ್ನು ಅಥವಾ ಮುಕ್ತಿಯನ್ನುಂಟುಮಾಡಲಾರವಷ್ಟೆ! ಹಾಗೆಯೇ ದುಷ್ಟನಾದ ಮನುಷ್ಯನು ಮಾಡುವ ಯಜ್ಞಗಳೂ ಇತರ ಧರ್ಮಕಾರ್ಯಗಳೂ ಮಂಗಳವನ್ನುಂಟುಮಾಡುವುದಿಲ್ಲ. ಅದಕ್ಕೆ ವಿರುದ್ಧವಾಗಿ ಅನಿಷ್ಟಫಲಗಳನ್ನೇ ಉಂಟುಮಾಡುವುವು. (ಶ್ಲೋಕ 27-29)

ತನ್ನ ಮನಸ್ಸಿನ ಮೇಲೆ ಜಯಗಳಿಸುವ ಪ್ರಯತ್ನವನ್ನು ಕೈಗೊಂಡ

---

* ದೊಡ್ಡ ದೊಡ್ಡ ಯೋಗೇಶ್ವರರು ಯಾವನ ಪಾದಾರವಿಂದಗಳನ್ನು ಅನುಸಂಧಾನಮಾಡುತ್ತಿದ್ದಾರೆಯೋ—ಅಂತಹ ಪ್ರಕೃತಿ-ಪುರುಷರಿಗೆ ಅಧೀಶ್ವರನಾದ ಸಾಕ್ಷಾದ್ಭಗವಂತನೇ ಗುರುರೂಪದಲ್ಲಿ ಪ್ರಕಟಗೊಳ್ಳುತ್ತಾನೆ. ಜನರು (ಭ್ರಮೆಯ ಕಾರಣದಿಂದ) ಈತನನ್ನು ಮನುಷ್ಯನೆಂದೇ ತಿಳಿಯುತ್ತಾರೆ—ಎಂಬುದಾಗಿಯೂ ಅನುವಾದ ಮಾಡಬಹುದು.

ವನು ಆಸಕ್ತಿಯನ್ನೂ, ಸಹವಾಸಗಳನ್ನೂ, ಪರಿಗ್ರಹವನ್ನೂ ತೊರೆದು ಸಂನ್ಯಾಸವನ್ನು ಸ್ವೀಕರಿಸಬೇಕು. ಏಕಾಂತದಲ್ಲಿ ಒಬ್ಬಂಟಿಗನಾಗಿರಬೇಕು. ಭಿಕ್ಷಾವೃತ್ತಿಯಿಂದ ಶರೀರವು ಉಳಿಯುವುದಕ್ಕೆ ಎಷ್ಟುಬೇಕೋ ಅಷ್ಟನ್ನು ಮಾತ್ರ ಪಡೆದು ಅಲ್ಪವಾಗಿ ಪರಿಮಿತವಾದ ಭೋಜನವನ್ನು ಸೇವಿಸಬೇಕು. ಶುಚಿಯಾಗಿ ಸಮತಟ್ಟಾಗಿರುವ ಭೂಮಿಯಲ್ಲಿ ತನ್ನ ಆಸನವನ್ನು ಕಲ್ಪಿಸಿಕೊಂಡು ಅದರ ಮೇಲೆ ನೇರವಾಗಿ, ಸ್ಥಿರವಾಗಿ, ಸಮವಾಗಿ, ಸುಖಕರವಾಗಿರುವ ಯೋಗಾಸನದಲ್ಲಿ ನೇರವಾಗಿ ಕುಳಿತುಕೊಂಡು ಓಂಕಾರವನ್ನು ಜಪಿಸಬೇಕು. ಮನಸ್ಸು ಸಂಕಲ್ಪ-ವಿಕಲ್ಪಗಳನ್ನು ತೊರೆಯುವವರೆಗೂ ಮೂಗಿನ ತುದಿಯ ಮೇಲೆ ದೃಷ್ಟಿಯನ್ನಿಟ್ಟು ಪೂರಕ, ಕುಂಭಕ ಮತ್ತು ರೇಚಕಗಳ ಮೂಲಕ ಪ್ರಾಣ ಮತ್ತು ಅಪಾನಗಳ ಗತಿಗಳನ್ನು ತಡೆಗಟ್ಟಬೇಕು. ಕಾಮದ ಆಘಾತದಿಂದ ಗಾಯಗೊಂಡ ಮನಸ್ಸು ಎಲ್ಲೆಲ್ಲಿ ಸುತ್ತಾಡುತ್ತಾ ಅಲೆದಾಡುವುದೋ–ಅಲ್ಲಲ್ಲಿಂದ ಅದನ್ನು ಹಿಂದಿರುಗಿಸಿ ಮೆಲ್ಲ-ಮೆಲ್ಲನೆ ಹೃದಯದಲ್ಲಿ ತಡೆಗಟ್ಟಬೇಕು. ಸಾಧಕನು ಹೀಗೆ ನಿರಂತರವಾಗಿ ಅಭ್ಯಾಸವನ್ನು ಮಾಡುತ್ತಿದ್ದರೆ–ಆಗ ಕಟ್ಟಿಗೆಯಿಲ್ಲದೇ ಇದ್ದರೆ ಅಗ್ನಿಯು ಆರಿಹೋಗುವಂತೆ–ಆತನ ಚಿತ್ತವು ಶಾಂತವಾಗಿ ಬಿಡುವುದು. ಹೀಗೆ ಕಾಮಾದಿಗಳ ಏಟಿಗೆ ಸಿಲುಕದೇ ಎಲ್ಲ ವೃತ್ತಿಗಳನ್ನೂ ಅತ್ಯಂತವಾಗಿ ಕಳೆದುಕೊಂಡು ಶಾಂತವಾದ ಚಿತ್ತವು ಬ್ರಹ್ಮಾನಂದದ ಅನುಭವದಲ್ಲಿ ಮುಳುಗಿಹೋಗುವುದು. ಅದು ಅಲ್ಲಿಂದ ಎಂದಿಗೂ ಎದ್ದುಬರುವುದಿಲ್ಲ. ಸಂನ್ಯಾಸಿಯು ತಾನು ಬಿಟ್ಟು ಹೊರಟ ಗೃಹಸ್ಥಾಶ್ರಮಕ್ಕೆ ಖಂಡಿತವಾಗಿಯೂ ಹಿಂದಿರುಗಬಾರದು. ಯಾವನಾದರೂ ಸಂನ್ಯಾಸಿಯು ಧರ್ಮ, ಅರ್ಥ ಮತ್ತು ಕಾಮಗಳಿಗೆ ಕಾರಣವಾಗಿಸುವ ಗೃಹಸ್ಥಾಶ್ರಮವನ್ನು ತೊರೆದು ಬಂದಿದ್ದು ಮತ್ತೆ ಅವುಗಳನ್ನೇ ಸೇವಿಸತೊಡಗಿದರೆ ಆತನು–ಆತನೇ ಉಗುಳಿದ್ದನ್ನು ನಾಚಿಕೆಯಿಲ್ಲದೇ ಮತ್ತೆ ತಿನ್ನುವ ನಾಯಿಕುನ್ನಿಗೆ ಸಮನೆನಿಸುವನು. ಆ ಮೂಢನು 'ಇದು ಅನಾತ್ಮವು. ಮರಣಕ್ಕೆ ತುತ್ತಾಗುವುದು. ಮಲ-ಕ್ರಿಮಿ-ಕೀಟ ಮತ್ತು ಬೂದಿಯಾಗುವುದು'–ಎಂದು ತಿಳಿದಿದ್ದ ದೇಹವನ್ನೇ ಮತ್ತೆ ಆತ್ಮವೆಂದು ಭಾವಿಸಿ ಹೊಗಳತೊಡಗುತ್ತಾನೆ. ಕರ್ಮವನ್ನು ತ್ಯಜಿಸಿದ ಗೃಹಸ್ಥ, ವ್ರತವನ್ನು ಬಿಟ್ಟ ಬ್ರಹ್ಮಚಾರೀ, ಹಳ್ಳಿಯಲ್ಲಿ ವಾಸಮಾಡುವ

ತಪಸ್ವೀ (ವಾನಪ್ರಸ್ಥ) ಮತ್ತು ಇಂದ್ರೀಯಲೋಲುಪನಾದ ಸಂನ್ಯಾಸೀ ಈ ನಾಲ್ವರೂ ಆಶ್ರಮಕ್ಕೆ ಕಳಂಕರೂಪರಾದವರು. ವ್ಯರ್ಥವಾಗಿ ಮೋಸಕ್ಕಾಗಿ ಆಶ್ರಮದ ವೇಷವನ್ನು ಧರಿಸಿದವರು–ಎಂದು ತಿಳಿಯಬೇಕು. ವಿವೇಕಿಯಾದವನು–ಶ್ರೀಭಗವಂತನ ಮಾಯೆಯಿಂದ ಮೋಹಗೊಂಡ ಅಂತಹ ಮೂಢರಲ್ಲಿ ಕನಿಕರಗೊಂಡು ಅವರ ವಿಷಯದಲ್ಲಿ ಉದಾಸೀನವಾಗಿರಬೇಕು. ಆತ್ಮಜ್ಞಾನದಿಂದ ಎಲ್ಲ ವಾಸನೆಗಳನ್ನೂ ನಿರ್ಮೂಲಗೊಳಿಸಿಕೊಂಡು ಪರಮಾತ್ಮಸಾಕ್ಷಾತ್ಕಾರಸುಖದ ಅನುಭವವನ್ನು ಪಡೆದ ಯಾವನೂ ಇಂದ್ರಿಯಲಂಪಟನಾಗುವುದಿಲ್ಲ. ಆತನು ಯಾವ ವಿಷಯದ ಬಯಕೆಯಿಂದ ಮತ್ತು ಯಾವ ಭೋಕ್ತೃವಿನ ತೃಪ್ತಿಗಾಗಿ ಇಂದ್ರಿಯಲಂಪಟನಾಗಿ ತನ್ನ ಶರೀರವನ್ನು ಪೋಷಿಸಿಯಾನು? (ಶ್ಲೋಕ 30-40)

ಆಹುಃ ಶರೀರಂ ರಥಮಿನ್ದ್ರಿಯಾಣಿ
ಹಯಾನಭೀಷೂನ್ಮನ ಇನ್ದ್ರಿಯೇಶಮ್ ।
ವರ್ತ್ಮಾನಿ ಮಾತ್ರಾ ಧಿಷಣಾಂ ಚ ಸೂತಂ
ಸತ್ತ್ವಂ ಬೃಹದ್ಬನ್ಧುರಮೀಶಸೃಷ್ಟಮ್ * ॥೪೧॥

ಅಕ್ಷಂ ದಶಪ್ರಾಣಮಧರ್ಮಧರ್ಮೌ
ಚಕ್ರೇಽಭಿಮಾನಂ ರಥಿನಂ ಚ ಜೀವಮ್ ।
ಧನುರ್ಹಿ ತಸ್ಯ ಪ್ರಣವಂ ಪಠನ್ತಿ
ಶರಂ ತು ಜೀವಂ ಪರಮೇವ ಲಕ್ಷ್ಯಮ್[1] ॥೪೨॥

ಈ ಪರಮಾತ್ಮಸಿದ್ಧಿಗಾಗಿ ಮಾಡುವ ಸಾಧನೆಯಲ್ಲಿ ಶರೀರವೇ ರಥವು. ಇಂದ್ರಿಯಗಳೇ ರಥಕ್ಕೆ ಹೂಡಿದ ಕುದುರೆಗಳು. ಇಂದ್ರಿಯಗಳಿಗೆ ಒಡೆಯನಾಗಿರುವ ಮನಸ್ಸೇ ಲಗಾಮು. ಶಬ್ದವೇ ಮುಂತಾದ ಇಂದ್ರಿಯ ವಿಷಯಗಳೇ ಮಾರ್ಗಗಳಾಗಿವೆ. ಬುದ್ಧಿಯೇ ಸಾರಥಿಯು. ಚಿತ್ತವೇ

---

* ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು ।
ಇಂದ್ರಿಯಾಣಿ ಹಯಾನಾಹುಃ ವಿಷಯಾಂಸ್ತೇಷು ಗೋಚರಾನ್ ।
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ ॥

1 ಪ್ರಣವೋ ಧನುಃ ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯ ಮುಚ್ಯತೇ ।
ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್ ॥

ಶ್ರೀಭಗವಂತನು ಕಟ್ಟಲು ರಚಿಸಿರುವ ದೊಡ್ಡ ಹಗ್ಗ. ಹತ್ತು ಪ್ರಾಣಗಳೇ ಅಚ್ಚುಮರ ಮತ್ತು ಅವುಗಳಿಗೆ ಅಭಿಮಾನಿಯಾಗಿರುವ ಜೀವನೇ ರಥಿಯು. ಪ್ರಣವವೇ ಈ ರಥಿಯ ಬಿಲ್ಲು. ಶುದ್ಧನಾದ ಜೀವಾತ್ಮನೇ ಅದರಲ್ಲಿ ಹೂಡುವ ಬಾಣವಾಗಿದ್ದಾನೆ. ಪರಮಾತ್ಮನೇ ಆ ಬಾಣದ ಗುರಿಯು–ಎಂದು ಉಪನಿಷತ್ತುಗಳು ಹೇಳುತ್ತವೆ.

ರಾಗ, ದ್ವೇಷ, ಲೋಭ, ಶೋಕ, ಮೋಹ, ಭಯ, ಮಾನ, ಅವಮಾನ, ಅಸೂಯೆ (ಇತರರ ಗುಣಗಳಲ್ಲಿ ಪ್ರಯತ್ನಪೂರ್ವಕವಾಗಿ ದೋಷವನ್ನು ಕಾಣುವುದು), ಛಲ, ಹಿಂಸೆ, ಇತರರ ಉನ್ನತಿಯನ್ನು ಸಹಿಸದೆ ಹೊಟ್ಟೆಉರಿಯುವಿಕೆ, ದುರಾಸೆ, ಪ್ರಮಾದ (ಅಸಾವಧಾನತೆ), ಹಸಿವು ಮತ್ತು ನಿದ್ರೆ–ಇವುಗಳು ಜೀವನ ಶತ್ರುಗಳು. ಅವನಿಗೆ ಇವುಗಳಲ್ಲದೇ ಇನ್ನೂ ಅನೇಕ ಶತ್ರುಗಳುಂಟು. ಅವುಗಳಲ್ಲಿ ರಜೋಗುಣವೃತ್ತಿ ಮತ್ತು ತಮೋಗುಣ ವೃತ್ತಿಯವರೇ ಹೆಚ್ಚು. ಸತ್ತ್ವಗುಣಪ್ರಧಾನರಾದವರು ಕೆಲವೇ ಮಂದಿ. ಅವರು ತುಂಬಾ ವಿರಳ.

ಯಾವನ್ನೃಕಾಯರಥಮಾತ್ಮವಶೋಪಕಲ್ಪಂ
ಧತ್ತೇ ಗರಿಷ್ಠಚರಣಾರ್ಚನಯಾ ನಿಶಾತಮ್ ।
ಜ್ಞಾನಾಸಿಮಚ್ಯುತಬಲೋ ದಧದಸ್ತಶತ್ರುಃ
ಸ್ವಾರಾಜ್ಯತುಷ್ಟ ಉಪಶಾನ್ತ ಇದಂ ವಿಜಹ್ಯಾತ್ ॥೪೫॥

ಈ ಮನುಷ್ಯಶರೀರವೆಂಬ ರಥವು ತನ್ನ ವಶದಲ್ಲಿದ್ದು ಇಂದ್ರಿಯ, ಮನಸ್ಸು–ಮುಂತಾದ ಎಲ್ಲ ಸಾರ್ಥಗಳೂ ಚೆನ್ನಾಗಿರುವಷ್ಟರೊಳಗೇ, ಶ್ರೀಗುರುದೇವರ ಚರಣಕಮಲಗಳ ಸೇವಾ-ಪೂಜೆಗಳಿಂದ ಹರಿತವಾಗಿ ಮಾಡಲ್ಪಟ್ಟ ಜ್ಞಾನವೆಂಬ ತೀಕ್ಷ್ಣವಾದ ಖಡ್ಗವನ್ನು ಎತ್ತಿಕೊಂಡು ಶ್ರೀಭಗವಂತನ ಬಲದಿಂದ ಈ ಎಲ್ಲ ಶತ್ರುಗಳನ್ನೂ ನಾಶಪಡಿಸಿ ತನ್ನ ಸ್ವಾರಾಜ್ಯವೆಂಬ ಸಿಂಹಾಸನದಲ್ಲಿ ಕುಳಿತು ಬೆಳಗಬೇಕು ಮತ್ತು ಅನಂತರ ಶಾಂತನಾಗಿ ಈ ಶರೀರವನ್ನೂ ತೊರೆದುಬಿಡಬೇಕಪ್ಪಾ.

ನೋ ಚೇತ್ಪ್ರಮತ್ತಮಸದಿನ್ದ್ರಿಯವಾಜಿಸೂತಾ
ನೀತ್ವೋತ್ಪಥಂ ವಿಷಯದಸ್ಯುಷು ನಿಕ್ಷಿಪನ್ತಿ ।
ತೇ ದಸ್ಯವಃ ಸಹಯಸೂತಮಮುಂ ತಮೋಽನ್ಧೇ
ಸಂಸಾರಕೂಪ ಉರುಮೃತ್ಯುಭಯೇ ಕ್ಷಿಪನ್ತಿ ॥೪೬॥

ಹೀಗೆ ಮಾಡದೇ ಸ್ವಲ್ಪವೇ ಅಸಾವಧಾನತೆಯನ್ನು ತೋರಿಸಿದರೂ ಆಗ ಇಂದ್ರಿಯಗಳೆಂಬ ದುಷ್ಟವಾದ ಕುದುರೆಗಳೂ ಮತ್ತು ಅವುಗಳಲ್ಲಿ ಸ್ನೇಹವನ್ನು ಹೊಂದಿರುವ ಬುದ್ಧಿಯೆಂಬ ಸಾರಥಿಯೂ ರಥದ ಒಡೆಯನಾದ ಜೀವನನ್ನು ವಿರುದ್ಧವಾದ ದಾರಿಯಲ್ಲಿ ಕೊಂಡೊಯ್ದು ವಿಷಯಗಳೆಂಬ ಲೂಟಿಗಾರರ ಕೈಗಳಲ್ಲಿ ಒಪ್ಪಿಸಿಬಿಡುವರು. ಆ ಲೂಟಿ-ದರೋಡೆಕಾರರು ಸಾರಥಿಯೊಡನೆಯೂ ಕುದುರೆಗಳೊಡನೆಯೂ ಕೂಡಿದ ಈ ಜೀವನನ್ನು ಮೃತ್ಯುವಿಗಿಂತಲೂ ಅತಿಭಯಂಕರವಾಗಿರುವ ಕಡುಕಗ್ಗತ್ತಲೆಯ ಸಂಸಾರ ವೆಂಬ ಬಾವಿಯೊಳಗೆ ತಳ್ಳಿಬಿಡುವರು.

ವೈದಿಕಕರ್ಮಗಳಲ್ಲಿ ಎರಡು ವಿಧಗಳಿವೆಯಪ್ಪಾ. ಮೊದಲನೆಯದು ಪ್ರವೃತ್ತಿಪರವಾದುದು. ಇದು ವೃತ್ತಿಗಳನ್ನು ಅವುಗಳ ವಿಷಯಗಳ ಕಡೆಗೆ ಕೊಂಡೊಯ್ಯುವುದು. ಮತ್ತೊಂದು ನಿವೃತ್ತಿಪರವಾದುದು. ಇದು ವೃತ್ತಿಗಳನ್ನು ಅವುಗಳ ವಿಷಯಗಳ ದೆಸೆಯಿಂದ ಹಿಂದಿರುಗಿಸಿ ಶಾಂತವಾಗಿ ಆತ್ಮ ಸಾಕ್ಷಾತ್ಕಾರಕ್ಕೆ ಯೋಗ್ಯನನ್ನಾಗಿಸುವುದು. ಮೊದಲನೆಯದರಲ್ಲಿ ಕರ್ಮ ಮಾರ್ಗದಿಂದ ಮತ್ತೆ-ಮತ್ತೆ ಹುಟ್ಟು-ಸಾವುಗಳು ಉಂಟಾಗುವುವು. ಎರಡ ನೆಯದಾದ ನಿವೃತ್ತಿಪರವಾದ ಭಕ್ತಿಮಾರ್ಗದಿಂದ ಅಥವಾ ಜ್ಞಾನಮಾರ್ಗ ದಿಂದ ಪರಮಾತ್ಮನು ದೊರೆಯುವನು. ಶ್ಯೇನಯಾಗವೇ ಮುಂತಾದ ಹಿಂಸಾ ಮಯವಾದ ಕರ್ಮಗಳು, ಅಗ್ನಿಹೋತ್ರ, ದರ್ಶ, ಪೂರ್ಣಮಾಸ, ಚಾತು ರ್ಮಾಸ್ಯ, ಪಶುಯಾಗ, ಸೋಮಯಾಗ, ವೈಶ್ವದೇವ, ಬಲಿಹರಣಗಳೇ ಮುಂತಾದ ದ್ರವ್ಯಮಯಕರ್ಮಗಳಿಗೆ 'ಇಷ್ಟ' ಎಂದು ಹೆಸರು ಮತ್ತು ದೇವಾಲಯ, ಉದ್ಯಾನವನ, ಕೊಳ, ಬಾವಿ–ಮುಂತಾದುವುಗಳನ್ನು ನಿರ್ಮಿ ಸುವುದಕ್ಕೆ 'ಪೂರ್ತಕರ್ಮ'ವೆಂದು ಹೆಸರು. ಇವೆಲ್ಲವೂ ಪ್ರವೃತ್ತಿಪರವಾದ ಕರ್ಮಗಳೇ ಆಗಿವೆ. ಸಕಾಮಭಾವದಿಂದ ಇವುಗಳನ್ನು ಆಚರಿಸಿದರೆ ಇವು ಅಶಾಂತಿಗೇ ಕಾರಣವಾಗುವುವು. ಪ್ರವೃತ್ತಿಧರ್ಮನಿಷ್ಠನಾದ ಮನುಷ್ಯನು ತಾನು ಸತ್ತಾಗ ಚರು-ಪುರೋಡಾಶಗಳೇ ಮುಂತಾದ ಯಜ್ಞದ್ರವ್ಯಗಳ ಸೂಕ್ಷ್ಮಭಾಗಗಳಿಂದ ರಚಿತವಾದ ದೇಹಗಳನ್ನು ಧರಿಸಿ ಧೂಮಾಭಿಮಾನೀ ದೇವತೆಗಳ ಬಳಿಗೆ ಹೋಗುವನು. ಅನಂತರ ಕ್ರಮವಾಗಿ ರಾತ್ರಿ, ಕೃಷ್ಣಪಕ್ಷ ಮತ್ತು ದಕ್ಷಿಣಾಯನಕ್ಕೆ ಅಭಿಮಾನಿಗಳಾದ ದೇವತೆಗಳ ಬಳಿಗೆ ಹೋಗಿ

ಚಂದ್ರಲೋಕವನ್ನು ತಲುಪುವನು. ಕರ್ಮಭೋಗವು ಮುಗಿದ ಬಳಿಕ ಅಲ್ಲಿಂದ ಆತನು ಅಮಾವಾಸ್ಯೆಯ ಚಂದ್ರನಂತೆ ಕ್ಷೀಣನಾಗಿ ಮಳೆಯ ಮೂಲಕ ಕ್ರಮವಾಗಿ ಔಷಧಿ, ಲತೆ, ಅನ್ನ ಮತ್ತು ವೀರ್ಯಗಳ ರೂಪದಲ್ಲಿ ಪರಿಣಾಮಹೊಂದಿ ಪಿತೃಯಾನಮಾರ್ಗದಿಂದ ಮತ್ತೆ ಸಂಸಾರದಲ್ಲಿ ಹುಟ್ಟುವನು. ಯುಧಿಷ್ಠಿರ! ಗರ್ಭಾಧಾನದಿಂದ ಅಂತ್ಯೇಷ್ಟಿಯವರೆಗಿನ ಎಲ್ಲ ಸಂಸ್ಕಾರಗಳೂ ಯಾವನಿಗೆ ಆಗಿವೆಯೋ–ಆತನನ್ನು 'ದ್ವಿಜ'ನೆಂದು ಕರೆಯುತ್ತಾರೆ. ಅವರಲ್ಲಿ ಕೆಲವರು ಹಿಂದೆ ಹೇಳಿದ ಪ್ರವೃತ್ತಿಮಾರ್ಗವನ್ನು ಅನುಸರಿಸುವರು ಮತ್ತು ಕೆಲವರು ಮುಂದೆ ಹೇಳುವ ನಿವೃತ್ತಿಮಾರ್ಗವನ್ನು ಹಿಡಿಯುವರು. ನಿವೃತ್ತಿಧರ್ಮನಿಷ್ಠರಾದ ಮನುಷ್ಯರಾದರೋ 'ಇಷ್ಟ' ಮತ್ತು 'ಪೂರ್ತ'ಗಳೇ ಮುಂತಾದ ಕರ್ಮಗಳಿಂದ ನೆರವೇರುವ ಸಮಸ್ತ ಯಜ್ಞಗಳನ್ನೂ ವಿಷಯಗಳ ಜ್ಞಾನವನ್ನುಂಟುಮಾಡಿಸುವ ಇಂದ್ರಿಯಗಳಲ್ಲಿ ಹೋಮಮಾಡಿಬಿಡುತ್ತಾರೆ.* ಇಂದ್ರಿಯಗಳನ್ನು ಸಂಕಲ್ಪರೂಪವಾದ ಮನಸ್ಸಿನಲ್ಲಿಯೂ, ವೈಕಾರಿಕವಾದ ಮನಸ್ಸನ್ನು 'ಪರಾ' ಎಂಬ ವಾಣಿಯಲ್ಲಿಯೂ, ಆ ಪರಾವಾಣಿಯನ್ನು ವರ್ಣಸಮುದಾಯದಲ್ಲಿಯೂ, ವರ್ಣಸಮುದಾಯವನ್ನು 'ಅ ಉ ಮ್' ಎಂಬ ಮೂರು ಸ್ವರಗಳ ರೂಪದಲ್ಲಿರುವ ಓಂಕಾರದಲ್ಲಿಯೂ, ಓಂಕಾರವನ್ನು ಬಿಂದುವಿನಲ್ಲಿಯೂ, ಬಿಂದುವನ್ನು ನಾದದಲ್ಲಿಯೂ, ನಾದವನ್ನು ಸೂತ್ರಾತ್ಮನಾದ ಪ್ರಾಣದೇವರಲ್ಲಿಯೂ ಮತ್ತು ಪ್ರಾಣವನ್ನು ಮಹತ್ತಾದ ಬ್ರಹ್ಮದಲ್ಲಿಯೂ ನೆಲೆಗೊಳಿಸುವನು. ಈ ನಿವೃತ್ತಿಮಾರ್ಗನಿಷ್ಠನಾದ ಜ್ಞಾನಿಯು ಕ್ರಮವಾಗಿ ಅಗ್ನಿ, ಸೂರ್ಯ,

---

* ವಿಜಯಧ್ವಜೀಯದಂತೆ : 'ಜ್ಞಾನದೀಪೇಷು ಜುಹ್ವತಿ'–ಇಲ್ಲಿ 'ಹವನ' ಎಂದರೆ ಆಯಾ ದೇವತೆಗಳಿಗೆ ವಶವೆಂದು ಸ್ಮರಣೆಮಾಡುವುದು.

ಯಜ್ಞಾಭಿಮಾನಿನೋ ದೇವಾನ್ ಸ್ಮರನ್ತೀಂದ್ರಿಯಮಾನಿನಾಮ್ ।
ವಶಗಾಂಸ್ತಾನ್ಮನೋಮಾನಿ ಮಹೇಂದ್ರಸ್ಯ ವಶೇ ಸ್ಥಿತಾನ್ ।
ವೇದಾತ್ಮಿಕಾಯಾಃ ಪಾರ್ವತ್ಯಾಸ್ತಂ ತಾಂ ರುದ್ರವಶೇ ಸ್ಥಿತಾಮ್ ।
ವರ್ಣತ್ರಯಾತ್ಮಾಕಂ ರುದ್ರಂ ಶೇಷೇ ತು ಪ್ರಣವಾತ್ಮಕೇ ।
ಬಿಂದುರೂಪಂ ಸರಸ್ವತ್ಯಾಂ ತಂ ತಾಂ ತಸ್ಯಾಂ ಪುನರ್ನ್ಯಸೇತ್ ।
ಮೂಲಸ್ಥನಾದರೂಪಾಯಾಂ ತಾಂ ವಾಮೌ ತಂ ಜನಾರ್ದನೇ ।
ಪ್ರಕೃತ್ಯಾಮಥವಾ ಪ್ರಾಣಂ ತಾಮೇವ ಪುರುಷೋತ್ತಮೇ ॥

ಶುಕ್ಲಪಕ್ಷ, ಪೂರ್ಣಿಮೆ ಮತ್ತು ಉತ್ತರಾಯಣದ ಅಭಿಮಾನಿದೇವತೆಗಳ ಬಳಿಗೆ ಹೋಗಿ ಅನಂತರ ಸ್ವಾರಾಜ್ಯವನ್ನು ಪಡೆಯುವನು. ತನಗೆ ತಾನೇ ರಾಜನಾಗಿರುವ ಈತನಲ್ಲಿ ಎಲ್ಲವೂ ಸಮನ್ವಯಹೊಂದುವುದರಿಂದ ಈತನೇ ಜಾಗ್ರತ್, ಸ್ವಪ್ನ, ಸುಷುಪ್ತಿ ಮತ್ತು ಸಮಾಧಿಗಳಿಗೆ ಅಧಿಷ್ಠಾತೃ ವಾಗಿ ಕ್ರಮವಾಗಿ ವಿಶ್ವ. ತೈಜಸ, ಪ್ರಾಜ್ಞಮತ್ತು ತುರೀಯ ಎಂದು ಕರೆಯಲ್ಪಡುವ ಪರಮಾತ್ಮನು. (ಈ ವಿಶ್ವ, ತೈಜಸ, ಪ್ರಾಜ್ಞ ಮತ್ತು ತುರೀಯ ಎಂದು ಕರೆಯಲ್ಪಡುವ ಪರಮಾತ್ಮನು ಕ್ರಮವಾಗಿ ಪ್ರಣವದ ಅಕಾರ, ಉಕಾರ, ಮಕಾರ ಮತ್ತು ಅರ್ಧಮಾತ್ರೆಗಳಿಂದ ಹೇಳಲ್ಪಡುತ್ತಾನೆ ಮತ್ತು ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ಎಂದೂ ನಿರ್ದಿಷ್ಟನಾಗುತ್ತಾನೆ.)* ಇದನ್ನು 'ದೇವಯಾನ' ಮಾರ್ಗವೆಂದು ಕರೆಯುತ್ತಾರೆ. ಪ್ರಶಾಂತಾತ್ಮನಾಗಿ ಆತ್ಮಯಜ್ಞವನ್ನು ಮಾಡುವ ಮಹಾತ್ಮನು ಈ ದೇವಯಾನ ಮಾರ್ಗದಲ್ಲಿ ಕ್ರಮವಾಗಿ ಒಂದು ದೇವತೆಯಿಂದ ಮತ್ತೊಂದು ದೇವತೆಯ ಬಳಿಗೆ ಹೋಗುತ್ತಾ ಕಡೆಗೆ ಪರಮಾತ್ಮನಲ್ಲಿ ನೆಲೆಗೊಳ್ಳುವನು. ಆತನು ಈ ಸಂಸಾರಕ್ಕೆ ಎಂದಿಗೂ ಮರಳುವುದಿಲ್ಲ. (ಶ್ಲೋಕ 47-55)

---

* ಸ್ವರಾಟ್–ಅಂದರೆ ತನಗೆ ತಾನೇ ರಾಜನಾಗಿ ಸ್ವಯಂಪ್ರಕಾಶನಾಗಿರುವ ಈ ಪರಮಾತ್ಮನಲ್ಲಿ ಎಲ್ಲವೂ ಸಮನ್ವಯವನ್ನು ಹೊಂದುತ್ತವೆ. ಸೃಷ್ಟಿ-ಸ್ಥಿತಿ-ಲಯಗಳೂ ಮತ್ತು ಅವುಗಳನ್ನು ಮೀರಿದ ಮೌನಸ್ಥಿತಿಯೂ ಈತನಲ್ಲಿ ಸೇರುತ್ತವೆ. ವಿಶ್ವದ ಸಮಸ್ತವ್ಯಾಪಾರ ಗಳಿಗೂ ಮತ್ತು ಸಕಲಶಾಸ್ತ್ರಗಳಿಗೂ ಈತನಲ್ಲಿಯೇ ಸಮನ್ವಯ. 'ತತ್ತು ಸಮನ್ವಯಾತ್' ಎಂಬ ಬ್ರಹ್ಮಸೂತ್ರವು ಈತನನ್ನೇ ಕುರಿತದ್ದು. ಜಾಗ್ರತ್-ಸ್ವಪ್ನ-ಸುಷುಪ್ತಿ ಮತ್ತು ಸಮಾಧಿಸ್ಥಿತಿಗಳಿಗೂ ಅಭಿಮಾನಿಯಾಗಿ ವಿಶ್ವ-ತೈಜಸ-ಪ್ರಾಜ್ಞ-ತುರೀಯ ಎಂಬುದಾಗಿಯೂ, ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ–ಎಂಬುದಾಗಿಯೂ ಈತನೇ ಕ್ರಮವಾಗಿ ಶಾಸ್ತ್ರಗಳಲ್ಲಿ ಸಾರಲ್ಪಡುತ್ತಾನೆ.

ಸ್ವರಾಟ್–ಎಂಬ ಶಬ್ದಕ್ಕೆ ಬ್ರಹ್ಮಲೋಕ ಎಂದು ಅರ್ಥಮಾಡಿದೆ. ಆ ಬ್ರಹ್ಮಲೋಕ ವನ್ನು ತಲುಪಿದ ಬಳಿಕ ಅಲ್ಲಿಯ ಭೋಗಗಳನ್ನು ಮುಗಿಸಿಕೊಂಡು ಸ್ಥೂಲೋ ಪಾಧಿಯಾದ ವಿಶ್ವನಲ್ಲಿಯೂ, ಆ ವಿಶ್ವನನ್ನು ಸೂಕ್ಷ್ಮದಲ್ಲಿಯೂ ಲಯಗೊಳಿಸಿ ಸೂಕ್ಷ್ಮೋಪಾಧಿಯುಳ್ಳ ತೈಜಸನಾಗುತ್ತಾನೆ. ಮತ್ತೆ ಆ ಸೂಕ್ಷ್ಮೋಪಾಧಿಯನ್ನು ಕರಣದಲ್ಲಿ ಲಯಗೊಳಿಸಿ ಕಾರಣೋಪಾಧಿಯಾದ ಪ್ರಾಜ್ಞರೂಪನಾಗುವನು. ಆ

ಈ ದೇವಯಾನ-ಪಿತೃಯಾನಗಳೆರಡೂ ವೇದೋಕ್ತವಾದ ಮಾರ್ಗ ಗಳೇ ಆಗಿವೆ. ಈ ವಿಷಯವನ್ನು ಶಾಸ್ತ್ರವೆಂಬ ಕಣ್ಣಿನಿಂದ ತಾತ್ತ್ವಿಕವಾಗಿ ತಿಳಿದು ಕೊಂಡಿರುವವರು ಶರೀರಧಾರಿಗಳಾಗಿದ್ದರೂ ಮೋಹಕ್ಕೆ ಒಳಗಾಗುವುದಿಲ್ಲ. ಶರೀರಗಳು ಹುಟ್ಟುವುದಕ್ಕೆ ಮೊದಲೂ ಮತ್ತು ಅನಂತರವೂ, ಒಳಗೂ-ಹೊರಗಡೆಯೂ ಎಲ್ಲೆಲ್ಲಿಯೂ ಯಾವಾಗಲೂ ಇರುವುದು ಈ ಸದ್ವಸ್ತುವೇ. ಉಚ್ಚ, ನೀಚ, ಜ್ಞಾನ, ಜ್ಞೇಯ, ಮಾತು ಮತ್ತು ಮಾತಿನಿಂದ ಹೇಳಲ್ಪಡುವ ಪದಾರ್ಥ, ಕತ್ತಲೆ, ಬೆಳಕು–ಎಲ್ಲವೂ ಈ ಜ್ಯೋತಿಯೇ ಆಗಿದೆ. ಕನ್ನಡಿಯೇ ಮುಂತಾದುವುಗಳಲ್ಲಿ ಕಾಣುವ ಪ್ರತಿಬಿಂಬದ ಆಭಾಸವು ಯುಕ್ತಿಯಿಂದ ಬಾಧಿತವಾಗುತ್ತದೆ. ಆ ಆಭಾಸವು ವಾಸ್ತವಿಕವಲ್ಲ– ಎಂಬುದನ್ನು ಯುಕ್ತಿಯು ಸಿದ್ಧಪಡಿಸುತ್ತದೆ. ಆದರೂ ಅದು ವಾಸ್ತವಿಕ ವಾಗಿ ಇರುವಂತೆಯೇ ಕಾಣಿಸುವುದು. ಈ ಶರೀರವು ಪೃಥಿವಿಯೇ

ಕಾರಣೋಪಾಧಿಯಾದ ಪ್ರಾಜ್ಞವನ್ನು ಸಾಕ್ಷಿಯಾದ ಸ್ವರೂಪದಲ್ಲಿ ಲಯಗೊಳಿಸಿ ತುರ್ಯನಾಗುತ್ತಾನೆ. ಹೀಗೆ ದೃಶ್ಯಗಳೆಲ್ಲವೂ ಲಯಗೊಂಡ ಬಳಿಕ ಆತನು ಶುದ್ಧಾತ್ಮನಾಗುತ್ತಾನೆ. ಆ ಶುದ್ಧಾತ್ಮನೇ ಮೋಕ್ಷಪ್ರದನು–ಎಂದು ಶ್ಲೋಕಗಳಿಗೆ ಅರ್ಥೈಸಿದೆ.

(ಶ್ರೀಧರೀಯ)

ಸ್ವರಾಟ್–ಎಂದರೆ ಅಮಾನವಪುರುಷನು ಅಥವಾ ಪ್ರಜಾಪತಿಯು.

ಅಗ್ನಿರಹಸ್ಸಿತಪಕ್ಷಾನುದಗಯನಾಬ್ದಮರುದರ್ಕೇಂದೂನ್ ।
ಅಪಿ ವೈದ್ಯುತವರುಣೇಂದ್ರಪ್ರಜಾಪತೀನಾತಿವಾಹಕಾನಾಹುಃ ॥

ಎಂಬಂತೆ ದೇವಯಾನಮಾರ್ಗದಲ್ಲಿ ಆತನನ್ನು ಕೊಂಡೊಯ್ಯುವ ಅತಿವಾಹಿಕರಲ್ಲಿ ಈ ಪ್ರಜಾಪತಿಯೇ ಕಡೆಯವನು. ಮುಕ್ತನು ಹೊಂದುವ ಭಗವಲ್ಲೋಕದ ಮಾರ್ಗವಿದು. ಅಲ್ಲಿ ಹೊಂದಲ್ಪಡುವ ಭಗವಂತನು ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ಎಂದು ನಾಲ್ಕು ವ್ಯೂಹಗಳಿಂದ ಸಂಪನ್ನನಾಗಿರುತ್ತಾನೆ. ಸರ್ವಜ್ಞಸಂಹಿತೆಯು ಹೇಳುವಂತೆ ಸೃಷ್ಟಿ-ಸ್ಥಿತಿ-ಲಯಗಳನ್ನು ಮಾಡುವ ಮೂರು ಶಕ್ತಿಗಳೂ ಕ್ರಮವಾಗಿ ಅನಿರುದ್ಧ, ಪ್ರದ್ಯುಮ್ನ ಮತ್ತು ಸಂಕರ್ಷಣರಿಗೆ ಸೇರಿವೆ. ಇವರು ಕ್ರಮವಾಗಿ ವಿಶ್ವ ಎಂಬ ಅಕಾರಶಕ್ತಿ, ತೈಜಸ ಎಂಬ ಉಕಾರ ಶಕ್ತಿ ಮತ್ತು ಪ್ರಾಜ್ಞ ಎಂಬ ಮಕಾರಶಕ್ತಿಗಳಾಗಿದ್ದಾರೆ. ಜಾಗ್ರತ್-ಸ್ವಪ್ನ-ಸುಷುಪ್ತಿಗಳಿಗೆ ಅಧಿಷ್ಠಾತೃಗಳಾಗಿದ್ದಾರೆ. ಇವೆಲ್ಲಕ್ಕೂ ಮೇಲಿರುವ ಪ್ರಣವದ ಅರ್ಧಮಾತ್ರೆಯಿಂದ ಪ್ರಕಾಶಿತವಾಗಿರುವುದು ವಾಸುದೇವಶಕ್ತಿಯು.

ಸೃಷ್ಟಿಸ್ಥಿತ್ಯನ್ತಕಾರಿಣ್ಯಶ್ಯಕ್ತಯಸ್ತಿಸ್ರ ಊರ್ಜಿತಾಃ .... ಅಕಾರಶಕ್ತಿರ್ವಿಶ್ವಾಖ್ಯಾ

ಮುಂತಾದ ಭೂತಗಳಿಂದ ನಿರ್ಮಿತವಾದುದಲ್ಲವೇ ಅಲ್ಲ. ವಾಸ್ತವಿಕದೃಷ್ಟಿಯಿಂದ ನೋಡಿದರೆ–ಇದು ಪಂಚಭೂತಗಳ ಸಮುದಾಯವೂ ಅಲ್ಲ. ವಿಕಾರ ಅಥವಾ ಪರಿಣಾಮವೂ ಅಲ್ಲ. ಏಕೆಂದರೆ : ಇದು ತನ್ನ ಅವಯವ ಗಳಿಂದ ಪ್ರತ್ಯೇಕವಾದುದಲ್ಲ. ಹೀಗೆಯೇ ಶರೀರಕ್ಕೆ ಕಾರಣವಾಗಿರುವ ಪಂಚ ಭೂತಗಳೂ ಕೂಡ ಅವಯವಿಯಾಗಿರುವುದರಿಂದ ಇದು ತನ್ನ ಅವಯವ ಗಳಾದ ಸೂಕ್ಷ್ಮಭೂತಗಳಿಂದ ಭಿನ್ನವಲ್ಲವಾದ್ದರಿಂದ ಅವಯವರೂಪವೇ ಆಗಿದೆ. ಎಷ್ಟೇ ಹುಡುಕಿದರೂ ಕೂಡ ಅವಯವಗಳಿಂದ ಬೇರೆ ಯಾವ ಅವಯವಿಯೂ ದೊರೆಯುವುದಿಲ್ಲ. ಆದುದರಿಂದ ಇದು ಅಸದರ್ಥವೇ

ಉಕಾರಾಖ್ಯಾ ತು ತೈಜಸೀ I ಮಕಾರಶಕ್ತಿಃ ಪ್ರಾಜ್ಞಾಖ್ಯಾ ತಾಸಾಂ ರೂಪಂ ಪುನಃ ಶೃಣು II ಏತಾಸ್ತಿಸ್ರೋ ದಶಾಸ್ತಿಸ್ರಃ ಶಕ್ತೀಸ್ಸಂಪ್ರೀಣಯನ್ತಿ ತಾಃ I ಅನಿರುದ್ಧಾದಿ ರೂಪಾಸ್ತೇ ಭೋಕ್ತುಶ್ಶಕ್ತೀರ್ವಿಚಿನ್ತಯೇತ್ I ಅರ್ಥಮಾತ್ರಧಿಯಾ ದಿವ್ಯಾಃ ಪ್ರಕಾಶಾರ್ಥ ಪ್ರಕಾಶಿಕಾ I ವಾಸುದೇವಮಯೀಂ ಶಕ್ತಿಂ ವಿದ್ಧಿ ತಾಮನು ಸಂಸ್ಕೃತಾಃ II

(ವೀರರಾಘವೀಯ)

ಸ್ವರಾಟ್–ಎಂದರೆ ಇಂದ್ರದೇವರು. ಈ ದೇವಯಾನಮಾರ್ಗದಲ್ಲಿ ಹೊಂದಲ್ಪಡುವವರು ಕೇವಲ ಅಗ್ನಿ ಮುಂತಾದವರಲ್ಲ. ವಿಶ್ವಾದಿಗಳಾದ, ಅನಿರುದ್ಧಾದಿಗಳಾದ ಭಗವಂತನ ಮೂರ್ತಿವಿಶೇಷಗಳೇ ಹೊಂದಲ್ಪಡುತ್ತವೆ–ಎಂದು ಇಲ್ಲಿ ನಿರೂಪಿಸಿದೆ. ಅಥ ಎಂಬ ಶಬ್ದದಿಂದ ಅನಿರುದ್ಧನೇ ಮುಂತಾದವರು ಗ್ರಹಿಸಲ್ಪಡುತ್ತಾರೆ. ಇವರಿಬ್ಬರಿಗೂ ವಿಷ್ಣುರೂಪತ್ವವು ಸೂಚಿತವಾಗಿದೆ. 'ವಿಶ್ವಾದ್ಯಾ ಅನಿರುದ್ಧಾದ್ಯಾಸ್ತೇ ದ್ವಿಧಾ ಸಂಪ್ರಕೀರ್ತಿತಾಃ I ವಿಷ್ಣುರೂಪಾಸ್ತದನ್ಯೇ ಚ ತಾನ್ ಸರ್ವಾನ್ ಯಾತಿ ಮೋಕ್ಷಗಃ II' ಇವರಲ್ಲದೇ ಇವರ ಪಕ್ಕದಲ್ಲಿ ಇತರ ದಿವಸ್ಪುತ್ರರೂ ಉಂಟು. 'ಅಥ' ಶಬ್ದವು ಅವರನ್ನೂ ಹೇಳುತ್ತದೆ. 'ತದನ್ಯೇ ಚ ದಿವಸ್ಪುತ್ರಾಃ ಸರ್ವೇ ಚ ದ್ಯುಸಮೀಪಗಾಃ I ತೇ ದಿವಂ ಪ್ರಾಪಯನ್ತ್ಯೇನಂ ಸ ವಾಯುಂ ಸ ಹರಿಂ ಪೃಥಕ್ I ವಿಶ್ವೇ ವಿರೂಪಂ ತುರ್ಯಶ್ಚ ವಾಸುದೇವಶ್ಚ ನಾಪರಃ II '

ಹೊಂದಲ್ಪಡಬೇಕಾದವರು ಕೇವಲ ವಿಶ್ವಾದಿಗಳಲ್ಲ. ಅವರ ಮೂಲರೂಪನಾದ ಶ್ರೀಹರಿಯೇ ಕಡೆಗೆ ಹೊಂದಲ್ಪಡಬೇಕಾದವನು. ಆತ್ಮಾ = ವಿಶ್ವಾದಿರೂಪನಾದ ಹರಿಯು. ಸಮನ್ವಯಃ –ಎಂದರೂ ಹರಿಯೇ. ಜ್ಞಾನದಿಂದ ಚೆನ್ನಾಗಿ ಹೊಂದಲ್ಪಡುವವನು (ಸಮ್ಯಗನ್ವೀಯತೇ ಜ್ಞಾನೇನ ಇತಿ ಸಮನ್ವಯಃ). ವಾಸುದೇವನು ತುರ್ಯದಿಂದ ಬೇರೆಯಲ್ಲ. ತುರ್ಯನೇ ವಾಸುದೇವನು. 'ಶುದ್ಧಸ್ಫಟಿಕಸಂಕಾಶಂ ವಾಸುದೇವಂ ನಿರಂಜನಮ್' ಎಂಬಂತೆ ವಾಸುದೇವನು ಕೆಂಪುದಾಸವಾಳವೇ ಮುಂತಾದ ಯಾವ ಉಪಾಧಿಯೂ ಇಲ್ಲದೇ ಶುದ್ಧಸ್ಫಟಿಕದಂತೆ ನಿರ್ಮಲಜ್ಞಾನ

ಸರಿ. ದೇಹಕ್ಕೆ ಕಾರಣವಾಗಿರುವ ಪೃಥಿವಿಯೇ ಮುಂತಾದ ಪದಾರ್ಥಗಳಲ್ಲಿ ಯಾವುದೂ ಚೇತನದ ಕಾಂತಿಯನ್ನು ಹೊಂದಿಲ್ಲ. ಚೈತನ್ಯದ ಯಾವ ಧರ್ಮವೂ ಈ ಜಡವಾದ ಭೂತಗಳಲ್ಲಿಲ್ಲ. ಹಾಗಾದರೆ ಈ ದೇಹವು ಚೇತನ ಗಳ ಸಮುದಾಯವೇ? ಎಂದರೆ–ಅದೂ ಅಲ್ಲ. ಚೇತನಗಳ ಪರಿಣಾಮ ವಿಕಾರವೂ ಅಲ್ಲ. ಚೇತನವನ್ನು ಬಿಟ್ಟು ಪ್ರತ್ಯೇಕವಾಗಿ ಇರುವುದಕ್ಕೂ ಇದಕ್ಕೆ ಸಾಧ್ಯವಿಲ್ಲ. ಸದಾ ಚೇತನದೊಡನೆ ಇದು ಕೂಡಿರುವುದೂ ಅಲ್ಲ. ಆದುದರಿಂದ ಇದು ಚೇತನವೆಂಬುದು ಸುಳ್ಳು.* ಈ ಶರೀರಕ್ಕೆ ಕಾರಣವಾಗಿ

ರೂಪನಾದವನು. 'ಏಕಾತ್ಮಪ್ರತ್ಯಯಸಾರಂ ಪ್ರಪಂಚೋಪಶಮಂ ಶಾನ್ತಂ ಶಿವ ಮದ್ವೈತಂ ತುರ್ಯಂ ಮನ್ಯನ್ತೇ ಸ ಆತ್ಮಾ ಸ ವಿಜ್ಞೇಯಃ'–ಎಂಬುದು (ಮಾಂಡೂಕ್ಯ) ಶ್ರುತಿವಚನ. 'ತುರ್ಯಶ್ಚ ವಾಸುದೇವಶ್ಚ ನಾಪರಃ ವಿಶ್ವಾದ್ಯೈ' ಸಮಸ್ತದೇವತೆಗಳಿಗೂ ವಾಸುದೇವನಲ್ಲಿಯೇ ಸಮನ್ವಯ–ಎಂದು ಜ್ಞಾಪಿಸಲು ಇಲ್ಲಿ 'ಸಮನ್ವಯ' ವೆಂಬ ಪದವನ್ನು ಹೇಳಿದೆ.

ಜಾಗ್ರತ್ ಮುಂತಾದ ಅವಸ್ಥೆಗಳನ್ನು ನಡೆಸುವ ಕಲ್ಪಿತರಾದ ವಿಶ್ವಾದಿಗಳನ್ನು ಮೀರಿ ಪ್ರಪಂಚೋಪಮರೂಪವಾದ ತುರೀಯಾತ್ಮನಾಗಿ ಅದ್ವೈತನಾಗಿರುವನು–ಎಂದು ಕೆಲವರು ವ್ಯಾಖ್ಯಾನಮಾಡಿರುವುದು ಸರಿಯಲ್ಲ. (ವಿಜಯಧ್ವಜೀಯ)

* ಕ್ಷಿತ್ಯಾದೀನಾಮಿಹಾರ್ಥಾನಾಂ ಛಾಯಾ ನ ಕತಮಾಪಿ ಹಿ ।
ನ ಸಂಘಾತೋ ವಿಕಾರೋಽಪಿ ನ ಪೃಥಙ್ ನಾನ್ವಿತೋ ಮೃಷಾ ॥೫೫॥

ಈ ಶ್ಲೋಕಕ್ಕೆ ನಾನಾವಿಧವಾದ ವ್ಯಾಖ್ಯಾನಗಳನ್ನು ನೋಡುತ್ತೇವೆ.

೧) ಇದರ ಭಾವ ಹೀಗೆ ಆಗುತ್ತದೆ : ಪೃಥಿವಿಯೇ ಮುಂತಾದ ಪಂಚಭೂತಗಳಿಂದ ಈ ದೇಹವು ನಿರ್ಮಿತವಾಗಿಲ್ಲ. ವಾಸ್ತವಿಕವಾಗಿ ನೋಡಿದರೆ ಇದು ಆ ಪಂಚಭೂತಗಳ ಸಂಘಾತವೂ ಅಲ್ಲ ; ವಿಕಾರವೂ ಅಲ್ಲ ; ಪರಿಣಾಮವೂ ಅಲ್ಲ. ಏಕೆಂದರೆ : ಇದು ತನ್ನ ಅವಯವಗಳಿಂದ ಪ್ರತ್ಯೇಕವೂ ಅಲ್ಲ. ಅವುಗಳಲ್ಲಿ ಅನುಗತವಾಗಿಯೂ ಇಲ್ಲ. ಆದುದರಿಂದಲೇ ಇದು ಮಿಥ್ಯೆ. (ಅದ್ವೈತವ್ಯಾಖ್ಯಾನ)

೨) ಶರೀರವು ಆತ್ಮ–ಎಂಬ ಶಂಕೆಯನ್ನು ಇಲ್ಲಿ ನಿರಸನಮಾಡಲಾಗಿದೆ. ಪೃಥಿವಿಯೇ ಮುಂತಾದುವುಗಳ ಪರಿಣಾಮವಾಗಿರುವ ವೃಕ್ಷಗಳ ನೆರಳು ವೃಕ್ಷಗಳ ಸಂಘಾತವಲ್ಲ. ವೃಕ್ಷವಿಕಾರವೂ ಅಲ್ಲ. ವೃಕ್ಷಗಳನ್ನು ಬಿಟ್ಟು ಪ್ರತ್ಯೇಕವಾಗಿ ಇರುವುದೂ ಅಲ್ಲ. ವೃಕ್ಷ ಗಳೊಡನೆ ಸದಾ ಕೂಡಿರುವುದೂ ಅಲ್ಲ. ಇದು ಅನಿತ್ಯವಾದುದು. ಹಾಗೆಯೇ ಆತ್ಮವನ್ನು ಬಿಟ್ಟು ಶರೀರಕ್ಕೆ ಉಳಿವಿಲ್ಲವಾದುದರಿಂದ ಆತ್ಮನ ನೆರಳಿನಂತೆ ಇರುವ ಈ ದೇಹವು ಆತ್ಮಗಳ ಸಂಘಾತವಲ್ಲ. ಆತ್ಮವಿಕಾರವೂ ಅಲ್ಲ. ಆತ್ಮನನ್ನು ಬಿಟ್ಟು ಇರುವುದೂ ಅಲ್ಲ. ಅನಿತ್ಯವಾದುದರಿಂದ ಆತ್ಮವಿರುವವರೆಗೂ ಇರುವುದೂ ಅಲ್ಲ.

ರುವ ಪಂಚಮಹಾಭೂತಗಳು ಅವಯವಿಗಳಾಗಿರುವುದರಿಂದ (ತಮಗೆ ಕಾರಣವಾಗಿರುವ) ಪಂಚತನ್ಮಾತ್ರೆಗಳೆಂಬ ಅವಯವಗಳಿಲ್ಲದೇ ಇವು ಇರಲಾರವು. ಏಕೆಂದರೆ : ಅವಯವಿಯು ನಷ್ಟವಾದರೆ ಕೊನೆಗೆ ಅವಯವವೂ ಇಲ್ಲದೇ ಹೋಗುತ್ತದೆ.* ವಸ್ತುವಿನಲ್ಲಿ ವಿಕಲ್ಪವಿದ್ದರೆ ಆಗ ಎರಡಕ್ಕೂ

(ಶರೀರವು ಅನಿತ್ಯವಾದುದರಿಂದ ಅದರ ಉಪಾದಾನವಾಗಿರುವ ಪೃಥಿವಿಯೇ ಮುಂತಾದುವುಗಳೂ ಅನಿತ್ಯಗಳೇ.) (ವೀರರಾಘವೀಯ)

೩) ಛಾಯಾ ಎಂದರೆ : ಇಲ್ಲಿ ಪ್ರಕಾರ ಎಂದರ್ಥ. 'ಛಾಯಾ ರೀತಿಃ ಪ್ರಕಾರಶ್ಚ'– ವಿಚಾರಮಾಡಿ ನೋಡಿದರೆ ಪೃಥಿವಿಯೇ ಮುಂತಾದ ಯಾವ ಪದಾರ್ಥಗಳ ಪ್ರಕಾರವೂ ಈ ಕಾರ್ಯಪ್ರಪಂಚದಲ್ಲಿ ಘಟಿಸಲು ಸಾಧ್ಯವಿಲ್ಲ. ಯಾವ ಪ್ರಕಾರವೂ ಸಂಭವವಿಲ್ಲವಾದ್ದರಿಂದ ಪರಮೇಶ್ವರನ ರಚನೆಯಿಂದಲೇ ಇದು ಆಗಿದೆಯೆಂದು ಹೇಳಬೇಕು. ಈ ಭೂಮಿಯೆಂಬ ಕಾರ್ಯವು ಕೇವಲ ನೀರಿನ ಸಮುದಾಯವೇ? ನೀರಿನ ವಿಕಾರವೇ? ನೀರನ್ನು ಬಿಟ್ಟು ಉತ್ಪನ್ನವಾಗಿದೆಯೇ? ಅಥವಾ ಎರಡರ ಸಂಯೋಗ ವಾಗಿದೆಯೇ? ಎಂದರೆ–ಯಾವುದೂ ಅಲ್ಲ. ಇದು ನೀರಿನ ಸಂಘಾತವಲ್ಲ. ಏಕೆಂದರೆ : ಪೃಥಿವಿಯು ಕಠಿನ ಮತ್ತು ದ್ರವಪದಾರ್ಥ. ದ್ರವಪದಾರ್ಥಸಂಘಾತವೇ ಇದು ಆಗಿದ್ದರೆ ಅದರ ಕಾರ್ಯವಾದ ಇದರಲ್ಲಿ ಪರ್ವತಾದಿಗಳೆಲ್ಲಾ ಮುಳುಗಿ ಹೋಗಬೇಕಾಗಿತ್ತು. ಭೂಮಿಯ ಸ್ವರೂಪವೇ ನಾಶಹೊಂದುತ್ತಿತ್ತು. ಆಧಾರವಿಲ್ಲದೇ ಸರ್ವಪ್ರಾಣಿಗಳೂ ನಶಿಸಿಹೋಗಬೇಕಾಗಿತ್ತು. ನೀರಿನ ವಿಕಾರವೂ ಅಲ್ಲ. ಪೃಥಿವಿ. ಏಕೆಂದರೆ : ಕಾಲುಷ್ಯವೇ ಮುಂತಾದ ಲಕ್ಷಣಗಳುಳ್ಳ ವಿಕಾರಮಾತ್ರದಿಂದ ಪೃಥಿವೀತ್ವವು ಉಂಟಾಗಿರಲು ಸಾಧ್ಯವಿಲ್ಲ. ನೀರನ್ನು ಬಿಟ್ಟು ಪೃಥಿವಿಯು ಪ್ರತ್ಯೇಕವಾಗಿ ಇರಲಾರದಾದ್ದರಿಂದ ಇದು ಅದರಿಂದ ಪ್ರತ್ಯೇಕವೂ ಅಲ್ಲ. ನಾಲ್ಕನೆಯದಾಗಿ ಇದು ನೀರಿನಿಂದ ಕೂಡಿರುವುದಷ್ಟೇ–ಎಂದೂ ಹೇಳಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ : ಎರಡೂ ಜೊತೆಯಲ್ಲಿರುವುದಷ್ಟರಿಂದಲೇ ಕಾರ್ಯೋತ್ಪತ್ತಿಯಾಗಲು ಸಾಧ್ಯವಿಲ್ಲ. ಆದುದರಿಂದ ಪೃಥಿವಿಯೇ ಮುಂತಾದ ಪದಾರ್ಥಗಳ ಯಾವ ಛಾಯೆಯೂ, ಯಾವ ಭಾವವೂ, ಕಾರ್ಯವನ್ನುಂಟುಮಾಡುವ ಶಕ್ತಿಯುಳ್ಳ ಯಾವ ಪದಾರ್ಥವೂ ಘಟಿಸಲಾರದು. ಪರಮಾತ್ಮನಶಕ್ತಿಯನ್ನು ಬಿಟ್ಟು ಕೇವಲ ನೀರಿಗೆ ಭೂಮಿಯನ್ನು ಉಂಟುಮಾಡಲು ಸಾಧ್ಯವಿಲ್ಲ. 'ಅದ್ಭ್ಯಃ ಪೃಥಿವೀ' ಎಂಬಂತೆ ಆತನ ಶಕ್ತಿಯಿಂದಲೇ ನೀರಿನಿಂದ ಪೃಥಿವಿಯು ಉಂಟಾಯಿತು.

(ವಿಜಯಧ್ವಜೀಯ)

*** ಧಾತವೋSವಯವಿತ್ವಾಚ್ಚ ತನ್ಮಾತ್ರಾವಯವೈರ್ವಿನಾ ।**
ನ ಸ್ಯುರ್ಹ್ಯಸತ್ಯವಯವಿನ್ಯ ಸನ್ನವಯವೋSನ್ತತಃ ॥

ಹೀಗೆಯೇ ಶರೀರಕ್ಕೆ ಕಾರಣವಾಗಿರುವ ಪಂಚಭೂತಗಳೂ ಅವಯವಿಗಳಾಗಿರು

ಸಾದೃಶ್ಯವಿರುವ ಕಾರಣ ಭ್ರಮೆಯುಂಟಾಗುತ್ತದೆ. ಅಜ್ಞಾನಿಗೆ ತಾನೇ ಇಂತಹ ಭ್ರಮೆಯುಂಟಾಗುವುದು! ಈ ಅಜ್ಞಾನಿಯು ಅನುಸರಿಸುವ ವಿಧಿ. ನಿಷೇಧಗಳೂ ಕೂಡ ಆತ್ಮಮೂಲವಲ್ಲವಾದ ಕಾರಣ ಪ್ರಾಮಾಣಿಕಗಳಲ್ಲ. ಅವು ಕನಸಿನಲ್ಲೇ ಅನುಭವಕ್ಕೆ ಬರುವ ಎಚ್ಚರಿಕೆ ಹಾಗೂ ನಿದ್ರೆಗಳಂತೆ.*

ವುದರಿಂದ ತಮ್ಮ ಅವಯವಗಳಾದ ಸೂಕ್ಷ್ಮಭೂತಗಳಿಂದ ಭಿನ್ನವಾದುವುಗಳಲ್ಲಿ ಎಷ್ಟೇ ಹುಡುಕಿದರೂ ಅವಯವಗಳನ್ನು ಬಿಟ್ಟು ಅವಯವಿಯ ಅಸ್ತಿತ್ವವೇ ಇರಲಾರದು. ಇದು ಅಸತ್ತು ಎಂದು ಸಿದ್ಧವಾಗುತ್ತದೆ. ಆದ್ದರಿಂದ ಈ ಅವಯವಗಳೂ ಅಸತ್ತೆಂದು ತನಗೆ ತಾನೇ ಸಿದ್ಧವಾಗುತ್ತದೆ. (ಅದ್ವೈತವ್ಯಾಖ್ಯಾ)

ಶರೀರವು ಅನಿತ್ಯವಾಗಿರುವಂತೆ ಪೃಥಿವ್ಯಾದಿಗಳೂ ಅನಿತ್ಯಗಳು. (ಆತ್ಮನೇ ನಿತ್ಯನು)–ಎಂದು ಇಲ್ಲಿ ಪ್ರತಿಪಾದನೆಮಾಡಿದೆ. ಪೃಥಿವಿಯೇ ಮುಂತಾದ ಭೂತಗಳು (ಅವಯವಿಗಳಾಗಿರುವುದರಿಂದ ಅಥವಾ ಸಂಘಾತರೂಪವಾಗಿರುವುದರಿಂದ) ತನ್ಮಾತ್ರೆಗಳೆಂಬ ಅವಯವಗಳಿಲ್ಲದೇ ಇರಲಾರವು. ಅವಯವಗಳು ನಾಶವಾದರೆ ಅವುಗಳ ಸಂಘಾತವೂ ನಾಶಹೊಂದುವುದು. ಅವಯವಿಯು ಅವಯವಸಂಘಾತರೂಪವಾಗಿರುವುದರಿಂದ ಅವಯವಿಯು ನಷ್ಟವಾದಲ್ಲಿ ಕೊನೆಗೆ ಅವಯವವೂ ನಷ್ಟವಾದಂತೆಯೇ. ಅವಯವಿಯು ದೊರೆಯದಿದ್ದಾಗ ಅವಯವಗಳಾದ ಭೂತಗಳೂ ಇರುವುದಿಲ್ಲ. ಹೀಗೆ ಅವಯವಿಯಾಗಿರುವುದರಿಂದ ಶರೀರವು ಅನಿತ್ಯ. ಇದು ನಿತ್ಯನಾದ ಆತ್ಮನಾಗಲಾರದು.

(ವೀರರಾಘವೀಯ)

ಭೂಮಿಯೇ ಮುಂತಾದ ಪಂಚಮಹಾಭೂತಗಳು ತನ್ಮಾತ್ರಾವಯವಗಳಿಲ್ಲದೇ ಇರಲಾರವು. ಅವುಗಳ ಸ್ವರೂಪವೇ ಉಳಿಯುವುದಿಲ್ಲ. ಅವಯವಗಳಿಲ್ಲದಿದ್ದರೆ ಅವಯವಿಗೆ ಅವಯವಿ ಎಂಬ ವ್ಯವಹಾರವೇ ಇರದು. ಉದಾಹರಣೆಗೆ ತಂತುಗಳೆಂಬ ಅವಯವಗಳು ನಷ್ಟವಾಗಿಬಿಟ್ಟರೆ ಅವಯವರಹಿತವಾದ ಪಟದಲ್ಲಿ ಪಟ ಎಂಬ ವ್ಯವಹಾರವೇ ಸಲ್ಲುವುದಿಲ್ಲ. ಹೀಗೆ ಅವಯವಗಳು ಇಲ್ಲದೇ ಇದ್ದರೆ ಅವಯವಿಯು ಹೇಗೆ ಇರಲಾರದೋ ಹಾಗೆಯೇ ಅವಯವಿಯು ನಿವೃತ್ತವಾದರೆ ಅವಯವಗಳೂ ನಿವೃತ್ತವಾಗುವುವು. ಅವಯವಗಳಿಲ್ಲದೇ ಅವಯವಿಯು ಇರಲಾರದಾದ್ದರಿಂದ ಕಾರಣದ ಅಭಾವವುಂಟಾಗಿ ಎಲ್ಲವೂ ಇಲ್ಲದೇ ಹೋಗಬೇಕಾಗುವುದು. (ವಿಜಯಧ್ವಜೀಯ)

"ಜ್ಞಾನವೇ ಮೊದಲಾದ ಗುಣಗಳು ದೇಹ ಮತ್ತು ಆತ್ಮ ಎರಡಕ್ಕೂ ಇದ್ದಿದ್ದರೆ ಆಗ ಎರಡರಲ್ಲೂ ಸಾದೃಶ್ಯವಿರುವುದರಿಂದ ದೇಹದಲ್ಲಿ ಆತ್ಮದ ಭ್ರಮೆಯು ಉಂಟಾಗಬಹುದು. ಆದರೆ ಎರಡರ ಗುಣಗಳೂ ಬೇರೆ-ಬೇರೆಯಾದ್ದರಿಂದ ಈ

ಭಾವಾದ್ವೈತಂ ಕ್ರಿಯಾದ್ವೈತಂ ದ್ರವ್ಯಾದ್ವೈತಂ ತಥಾತ್ಮನಃ ।
ವರ್ತಯನ್ಸ್ವಾನುಭೂತ್ಯೇಹ ತ್ರೀನ್ಸ್ವಪ್ನಾನ್ಧುನುತೇ ಮುನಿಃ ॥೬೨॥

ಜ್ಞಾನಿಯು–ಆತ್ಮನಿಗೆ ಸಂಬಂಧಪಟ್ಟಂತೆ ಮೂರು ಬಗೆಯ ಅದ್ವೈತಗಳನ್ನು ತನ್ನ ಅನುಭವದಲ್ಲಿ ಕಂಡುಕೊಳ್ಳುತ್ತಾನೆ. ಅವು ಭಾವಾದ್ವೈತ, ಕ್ರಿಯಾದ್ವೈತ ಮತ್ತು ದ್ರವ್ಯಾದ್ವೈತಗಳು. ಇವುಗಳನ್ನು ಸ್ವಾನುಭವ

ಭ್ರಮೆಗೆ ಕಾರಣವಿಲ್ಲ. ಆದರೂ ಅಜ್ಞಾನಿಯು ಇವುಗಳ ಸ್ವರೂಪಭೇದವನ್ನರಿಯದೇ ಭ್ರಮೆಗೆ ಒಳಗಾಗುತ್ತಾನೆ. ಇಂತಹ ಅಜ್ಞಾನಿಯು ಅನುಸರಿಸುವ ವಿಧಿ-ನಿಷೇಧಗಳು ಕನಸಿನಲ್ಲಿಯೇ ಅನುಭವಕ್ಕೆ ಬರುವ ಎಚ್ಚರ-ನಿದ್ರೆಗಳಂತೆ. ಕನಸಿನಲ್ಲಿ ಎಚ್ಚರಿಕೆಯನ್ನು ಅನುಭವಿಸಿದರೂ ಅದು ಪ್ರಾಮಾಣಿಕವಾದ ಎಚ್ಚರಿಕೆಯಲ್ಲ. ಹಾಗೆಯೇ ಕನಸ್ಸಿನಲ್ಲಿ ನಿದ್ರೆಹೋದಂತೆ ಅನುಭವವು ಬಂದರೂ ಅದು ಪ್ರಾಮಾಣಿಕವಾದ ನಿದ್ರೆಯಲ್ಲ. ಹಾಗೆಯೇ ಅಜ್ಞಾನಿಯು ಶಾಸ್ತ್ರವಿಧಿಯೆಂದು ಯಾವುದನ್ನಾದರೂ ಅನುಸರಿಸಿದರೆ ಅಥವಾ ಶಾಸ್ತ್ರನಿಷೇಧವೆಂದು ಯಾವುದನ್ನಾದರೂ ತೊರೆದರೆ ಅವೆರಡೂ ಅಪ್ರಾಮಾಣಿಕಗಳೇ. ಏಕೆಂದರೆ : ಆತನ ಜ್ಞಾನವು ಆತ್ಮಮೂಲವಾಗಿಲ್ಲ. ದೇಹಾತ್ಮ ವಿವೇಕದಿಂದ ಬಂದುದಲ್ಲ.

ಅಜ್ಞಾನದ ಕಾರಣ ಒಂದೇ ಪರಮಾತ್ಮ ವಸ್ತುವಿನಲ್ಲಿ ವಸ್ತುಭೇದವು ಎಲ್ಲಿಯವರೆಗೆ ಕಂಡುಬರುತ್ತದೆಯೋ–ಅಲ್ಲಿಯವರೆಗೆ ಹಿಂದೆ ಇದ್ದ ವಸ್ತುಗಳೇ ಈಗಲೂ ಇವೆ ಮತ್ತು ಕನಸಿನಲ್ಲೂ ಎಚ್ಚರ-ಸ್ವಪ್ನಗಳೇ ಮುಂತಾದ ಅವಸ್ಥೆಗಳು ಬೇರೆ-ಬೇರೆಯಾಗಿ ಅನುಭವಕ್ಕೆ ಬರುವುದರಿಂದ ಅಲ್ಲಿ ವಿಧಿ-ನಿಷೇಧರೂಪವಾದ ಶಾಸ್ತ್ರಗಳು ಇರುವುದಿಲ್ಲವೇ? ಹಾಗೆಯೇ ಈ ಭೇದಗಳು ಇವೆಯೆಂಬ ಮೋಹವು ಇರುವವರೆಗೂ ಇಲ್ಲಿಯೂ ವಿಧಿ-ನಿಷೇಧಗಳೆಂಬ ಶಾಸ್ತ್ರಗಳು ಇರುವುವು. (ಶ್ರೀಧರೀಯ)

ದೇಹ ಮತ್ತು ಆತ್ಮಗಳಿಗೆ ಸಮಾನಜಾತೀಯ ಗುಣಗಳು ಇಲ್ಲವಾದ್ದರಿಂದ ಇಲ್ಲಿ ಸಾದೃಶ್ಯವು ಇಲ್ಲವೇ ಇಲ್ಲ. ಆದರೂ ಅಜ್ಞಾನಿಯು ಅಲ್ಲಿ ಭ್ರಮೆಗೆ ಒಳಗಾಗುತ್ತಾನೆ. ನೀರು ಸ್ವಾಭಾವಿಕವಾಗಿ ಬಿಸಿಯಲ್ಲ. ಆದರೂ ಬೆಂಕಿಯ ಸಂಸರ್ಗದಿಂದ ಅಲ್ಲಿ ಬಿಸಿಯ ಭ್ರಮೆ ತೋರುವಂತೆ-ಅಜ್ಞಾನಿಗೆ ಆತ್ಮ-ದೇಹಸಂಸರ್ಗದಿಂದ ಆತ್ಮವೇ ದೇಹವೆಂಬ ಭ್ರಮೆಯು ಉಂಟಾಗುವುದು. ಆತ್ಮಜ್ಞಾನವಿಲ್ಲದೇ ಇರುವವನಿಗೆ 'ನಾನು ತಿಳಿಯುತ್ತೇನೆ, ನಾನು ತಿಳಿದಿಲ್ಲ' ಎಂದು ತೋರಿದರೆ ಅದು ಪ್ರಾಮಾಣಿಕವಲ್ಲ. ಅದು ಕನಸಿನಲ್ಲಿ ತೋರುವ ಎಚ್ಚರ-ಕನಸುಗಳಂತೆ. (ವೀರರಾಘವೀಯ)

ವಸ್ತುವಿನಲ್ಲಿ ವಿಕಲ್ಪವು ಅಂದರೆ–ಭೇದವು ಇದ್ದ ಪಕ್ಷದಲ್ಲಿ ಆಗ ಸಾದೃಶ್ಯಭ್ರಮೆ ಉಂಟಾಗಬಹುದಾಗಿತ್ತು. ಉದಾಹರಣೆ : ನಗರಾದಿಗಳಲ್ಲಿ ಬೆಳ್ಳಿಯನ್ನು ನೋಡಿ ಅದರ ಸಂಸ್ಕಾರ ಇರುವವನಿಗೆ ಸೂರ್ಯಕಿರಣದಿಂದ ಹೊಳೆಯುತ್ತಿರುವ ಕಪ್ಪೆ

ದಿಂದ ಕಂಡುಕೊಂಡು ನಡೆಯುವ ಮುನಿಯು ಇವುಗಳಿಗೆ ವಿರುದ್ಧವಾದ ಭಾವದ್ವೈತ, ಕರ್ಮದ್ವೈತ ಮತ್ತು ದ್ರರ್ಯದ್ವೈತಗಳೆಂಬ ಮೂರು ಬಗೆಯ ನಿದ್ರೆ (ಅಜ್ಞಾನ)ಗಳನ್ನು ಒದರಿಹಾಕಿ ಬಿಡುತ್ತಾನೆ.*

ಕಾರ್ಯಕಾರಣವಸ್ತ್ವೈಕ್ಯಮರ್ಶನಂ ಪಟತನ್ತುವತ್ ।
ಅವಸ್ತುತ್ವಾದ್ವಿಕಲ್ಪಸ್ಯ ಭಾವಾದ್ವೈತಂ ತದುಚ್ಯತೇ ॥೬೩॥

ನೂಲಗಳಿಂದಲೇ ವಸ್ತ್ರವು ನಿರ್ಮಿತವಾಗುವುದರಿಂದ ವಸ್ತ್ರ ಮತ್ತು ನೂಲು–ಇವೆರಡೂ ಒಂದೇ ವಸ್ತುವೇ ಆಗಿದೆ. ಅವುಗಳಿಗೆ ಭೇದವಿಲ್ಲ. ಅವೆರಡಕ್ಕೂ ಐಕ್ಯ ಎಂಬ ಉದಾಹರಣೆಯಿಂದ ಕಾರ್ಯವಸ್ತು ಮತ್ತು ಕಾರಣವಸ್ತುಗಳೆರಡಕ್ಕೂ ಐಕ್ಯವೇ ಪ್ರಾಮಾಣಿಕವಾದುದು. ವಿಕಲ್ಪವು (ಭೇದವು) ಪ್ರಾಮಾಣಿಕವಲ–ಎಂದು ವಿಚಾರಮಾಡುವುದೇ ಭಾವಾದ್ವೈತವು.[1]

ಚಿಪ್ಪನ್ನು ನೋಡಿದಾಗ ಎರಡರಲ್ಲಿಯೂ ಸಾದೃಶ್ಯವಿರುವುದರಿಂದ ಅದು ಬೆಳ್ಳಿ ಎಂಬ ಭ್ರಮೆಯುಂಟಾಗುವುದು. ಆದರೆ ಇಲ್ಲಿ ಅವಯವ-ಅವಯವಿಗಳಲ್ಲಿ ಭೇದವಿಲ್ಲ. ಭೇದವನ್ನು ಒಪ್ಪಿದರೆ ಸ್ವರೂಪಹಾನಿಯಾಗುವುದು. ಆದ್ದರಿಂದ ಅವಯವವಿಲ್ಲದಿದ್ದರೆ ಅವಯವಿಯ ಅಭಾವವೂ ಉಂಟಾಗಬೇಕಾಗುತ್ತದೆ. ಏಕೆಂದರೆ : ಅದು ಸ್ವರೂಪ. ಬಟ್ಟೆಯು ಅದರ ಪ್ರತಿಯೊಂದು ದಾರಕ್ಕಿಂತಲೂ ಬೇರೆಯಾದರೂ ಸಮುದಾಯರೂಪದಿಂದ ಆ ಕಾರಣ-ಕಾರ್ಯಗಳಲ್ಲಿ ಅಭೇದವು ಇದ್ದೇ ಇರುವುದು. ...... ಕನಸಿನಲ್ಲಿ 'ಇದು ಎಚ್ಚರದ ಸ್ಥಿತಿ, ಇದು ನಿದ್ರೆಯ ಸ್ಥಿತಿ' ಎಂಬ ವಿಶೇಷವುಂಟಾಗುವುದು. ಈಶ್ವರೇಚ್ಛೆಯಿಂದ **'ಏಷ ಸ್ವಪ್ನಾನ್ ದರ್ಶಯತಿ' 'ನ ತತ್ರ ರಥಾ ನ ರಥಯೋಗಾ ನ ಸಂಧಾನೋ ಭಾವನಿ ।' 'ರಥ ರಥಾನ್ ರಥಯೋಗಾನ್ ಪಥಃ ಸೃಜತೇ'** ಎಂಬ ಶ್ರುತಿವಾಕ್ಯಗಳಂತೆ ವಿಧಿ-ನಿಷೇಧಗಳೂ ಕೂಡ ಈಶ್ವರನ ಕಲ್ಪನೆಯಿಂದಲೇ ನಡೆಯುವುದು. (ವಿಜಯಧ್ವಜೀಯ)

* ಭಾವಾದ್ವೈತ, ಕ್ರಿಯಾದ್ವೈತ ಮತ್ತ ದ್ರವ್ಯಾದ್ವೈತಗಳೆಂಬ ಮೂರು ಬಗೆಯ ಅದ್ವೈತ ಗಳಿಂದ ಜ್ಞಾನಿಯು ನಾಶಪಡಿಸುವ ಸ್ವಪ್ನಗಳು ಯಾವುವೆಂದರೆ ಜಾಗ್ರತ್, ಸ್ವಪ್ನ, ಸುಷುಪ್ತಿ ಮತ್ತು ದ್ರಷ್ಟಾ, ದರ್ಶನ ಮತ್ತು ದೃಶ್ಯಗಳ ಭೇದವೆಂಬ ಅಜ್ಞಾನಗಳು ಎಂಬಿವು.

(ಶ್ರೀಧರೀಯ)

1 ವಸ್ತ್ರವು ಸೂತ್ರರೂಪವೇ ಆಗಿರುವಂತೆ ಕಾರ್ಯವು ಕಾರಣಮಾತ್ರವೇ ಆಗಿದೆ. ಏಕೆಂದರೆ : ಭೇದವು ವಾಸ್ತವವಾಗಿ ಇಲ್ಲವೇ ಇಲ್ಲ. ಈ ರೀತಿ ಎಲ್ಲದರ ಐಕ್ಯವನ್ನು ವಿಚಾರಮಾಡುವುದೇ ಭಾವಾದ್ವೈತವು.
(ಶ್ರೀಧರೀಯ)

ದಾರಗಳೇ ಒಂದು ರೀತಿಯಲ್ಲಿ ಸೇರಿ ನಾಮ-ರೂಪಾತ್ಮಕವಾದ ಬೇರೆ ಹೆಸರನ್ನು

ಯದ್ಬ್ರಹ್ಮಣಿ ಪರೇ ಸಾಕ್ಷಾತ್ಸರ್ವಕರ್ಮಸಮರ್ಪಣಮ್ ।
ಮನೋವಾಕ್ತನುಭಿಃ ಪಾರ್ಥ ಕ್ರಿಯಾದ್ವೈತಂ ತದುಚ್ಯತೇ ॥೬೪॥

ಎಲೈ ಯುಧಿಷ್ಠಿರನೇ! ಮನಸ್ಸು, ವಾಣಿ ಮತ್ತು ಶರೀರಗಳಿಂದ ಪರಬ್ರಹ್ಮದಲ್ಲಿ ಎಲ್ಲ ಕರ್ಮಗಳನ್ನೂ ಸಮರ್ಪಣೆಮಾಡುವುದಕ್ಕೆ ಕ್ರಿಯಾದ್ವೈತ–ಎಂದು ಹೆಸರು.

ಆತ್ಮಜಾಯಾಸುತಾದೀನಾಮನ್ಯೇಷಾಂ ಸರ್ವದೇಹಿನಾಮ್ ।
ಯತ್ಸ್ವಾರ್ಥಕಾಮಯೋರೈಕ್ಯಂ ದ್ರವ್ಯಾದ್ವೈತಂ ತದುಚ್ಯತೇ ॥೬೫॥

ತನ್ನ ಹೆಂಡತಿ, ಮಕ್ಕಳು, ನೆಂಟರಿಷ್ಟರು ಮತ್ತು ಪ್ರಪಂಚದ ಇತರ ಎಲ್ಲ ಜೀವಿಗಳು ಇವರಿಗೂ ಮತ್ತು ತನಗೂ ಒಂದೇ ಸ್ವಾರ್ಥ, ಒಂದೇ ಭೋಗ. ಇವರಲ್ಲಿ ತನ್ನವರು ಮತ್ತು ಪರಕೀಯರು ಎಂಬ ಭೇದವಿಲ್ಲ– ಎಂಬುದಾಗಿ ವಿಚಾರಮಾಡುವುದನ್ನು ದ್ರವ್ಯಾದ್ವೈತ ಎಂದು ಕರೆಯುತ್ತಾರೆ.

ಜಾಗ್ರತ್ ಮುಂತಾದ ಅವಸ್ಥೆಗಳ ಅನುಭವದಿಂದ ಉಂಟಾಗಿ ಅಜ್ಞಾನವೆಂದು ಕರೆಯಲ್ಪಡುವ ಅರ್ಥಗಳು ಎಂದು. (ವಿಜಯಧ್ವಜೀಯ)

ಭಾವಾದ್ವೈತ, ಕ್ರಿಯಾದ್ವೈತ, ದ್ರವ್ಯಾದ್ವೈತಗಳಿಗೆ ವಿರುದ್ಧವಾದವು ಭಾವದ್ವೈತ ಕರ್ಮದ್ವೈತ ಮತ್ತು ವಸ್ತುದ್ವೈತಗಳು–ಎಂದು. (ವೀರರಾಘವೀಯ)

ಪಡೆದಾಗ ವಸ್ತ್ರ ಎನಿಸುತ್ತವೆ. ಆದ್ದರಿಂದ ವಸ್ತ್ರವು ದಾರಗಳಿಂದ ಬೇರೆಯಲ್ಲ. ಹಾಗೆಯೇ ಸ್ಥೂಲಚಿತ್, ಅಚಿತ್, ಈಶ್ವರಾತ್ಮಕವಾದ ಜಗತ್ತು ಸೂಕ್ಷ್ಮಚಿದ ಚಿದ್ವಿಶಿಷ್ಟವಾದ ಪರಬ್ರಹ್ಮದಿಂದ ಬೇರೆಯಲ್ಲ. ವಿಕಲ್ಪವೆಂದರೆ ಉಪಾದಾನದಿಂದ ಬೇರೆಯಾದ ದ್ರವ್ಯವನ್ನು ಕಲ್ಪಿಸುವ ಅಜ್ಞಾನ. ಅದು ವಸ್ತುಶೂನ್ಯವಾಗಿರುವುದರಿಂದ ದ್ವೈತವು ಸರಿಯಲ್ಲ. ಅದ್ವೈತವೇ ಆಗಿದೆ–ಎಂದು ಅಸತ್ಕಾರ್ಯವಾದವನ್ನು ಇಲ್ಲಿ ನಿರಸನಮಾಡಿದೆ. (ವೀರರಾಘವೀಯ)

ಚಿದಚಿದಾತ್ಮಕವಾದ ಜಗತ್ತು ಭಗವಂತನೆಂಬ ಕಾರಣದಿಂದ ಉಂಟಾಗಿ ಆತನ ಶರೀರಭೂತವಾಗಿರುವುದರಿಂದ ಭಗವಂತನಿಗೂ ಅದಕ್ಕೂ ಐಕ್ಯವೆಂದು ವಿಚಾರ ಮಾಡುವುದೇ ಭಾವಾದ್ವೈತ. ಕಾರ್ಯಕಾರಣಗಳೆಂಬ ಭಾವಗಳು ಅದ್ವೈತ. (ವೀರರಾಘವೀಯ)

ಬಟ್ಟೆಗೂ ಅದಕ್ಕೆ ಕಾರಣವಾದ ದಾರಗಳಿಗೂ ಅಭೇದರೂಪವಾದ ಐಕ್ಯವು ಪ್ರಾಮಾಣಿಕವಾಗಿರುವಂತೆಯೇ–'ಪ್ರಕೃತಿಂ ಪುರುಷಂ ಚೈವ ಪ್ರವಿಶ್ಯ ಪುರುಷೋತ್ತಮಃ'–ಎಂಬಂತೆ ಪ್ರಕೃತಿ-ಪುರುಷರಿಗೂ ಅವುಗಳಲ್ಲಿ ಅಂತರ್ಯಾಮಿಯಾಗಿ ಅವು

ಯಾವ ಮನುಷ್ಯನು ಯಾವ ದ್ರವ್ಯವನ್ನು ಯಾವ ಸಮಯದಲ್ಲಿ ಯಾವ ಉಪಾಯದಿಂದ ಯಾರಿಂದ ಗ್ರಹಿಸಬೇಕೆಂದು ಶಾಸ್ತ್ರಗಳು ಉಪದೇಶಿಸುತ್ತವೆಯೋ–ಆತನು ಆ ದ್ರವ್ಯವನ್ನು ಆ ಸಮಯದಲ್ಲಿ ಆ ಉಪಾಯದಿಂದ ಆತನಿಂದಲೇ ಗ್ರಹಿಸಿ ಕೆಲಸವನ್ನು ನೆರವೇರಿಸಬೇಕು. ಇದನ್ನು ಹೀಗೆಯೇ ಮಾಡಬೇಕು. ಬೇರೆ ರೀತಿಯಲ್ಲಿ ಮಾಡಬಾರದು. ಆಪತ್ಕಾಲದಲ್ಲಿ ಮಾತ್ರ ಬೇರೆ ರೀತಿಯಲ್ಲಿ ಮಾಡಬಹುದು. ಯುಧಿಷ್ಠಿರಮಹಾರಾಜ! ಭಗವದ್ಭಕ್ತನಾದ ಮನುಷ್ಯನು ವೇದದಲ್ಲಿ ಹೇಳಿರುವ ಈ ಕರ್ಮಗಳನ್ನೂ ಮತ್ತು ಇತರ ಸ್ವಕರ್ಮಗಳನ್ನೂ ಅನುಷ್ಠಾನಮಾಡುತ್ತಿದ್ದರೆ ಆತನು ಮನೆಯಲ್ಲೇ ಇದ್ದರೂ ಶ್ರೀಕೃಷ್ಣಪರಮಾತ್ಮನ ದಿವ್ಯಗತಿಯನ್ನೇ ಹೊಂದುವನು. ಎಲೈ ರಾಜೇಂದ್ರನೇ! ಗೃಹಸ್ಥರೇ ಆಗಿರುವ ನೀವು ಪ್ರಭುವಾದ ಶ್ರೀಕೃಷ್ಣಪರಮಾತ್ಮನ ಕರುಣೆಯಿಂದ ಮತ್ತು ಸಹಾಯದಿಂದ ಅತಿ ದೊಡ್ಡ ವಿಪತ್ತುಗಳನ್ನೂ ದಾಟಿ ಆತನ ಪಾದಕಮಲಗಳ ಸೇವೆಯಿಂದಲೇ ಸಮಸ್ತ ಭೂಮಂಡಲವನ್ನೂ ಗೆದ್ದು ರಾಜಸೂಯಾದಿ ಮಹಾಯಜ್ಞಗಳನ್ನು ಆಚರಿಸ

ಗಳಿಗೆ ನಿಯಾಮಕನಾಗಿರುವ ಪರಮಾತ್ಮನಿಗೂ ಸೇರುವೆಯಿರುವುದರಿಂದ ಐಕ್ಯವನ್ನು ತಿಳಿಯಬೇಕು. ಇದು ಸ್ವರೂಪೈಕ್ಯವಲ್ಲ; 'ಗಣಂ ಯುಗಪದಾವಿಶತ್' ಎಂಬಂತೆ ಕಾರ್ಯ-ಕಾರಣಗಳಲ್ಲಿ ಪ್ರವಿಷ್ಟರಾಗಿರುವ ಭಗವದ್ರೂಪಗಳ ಐಕ್ಯವನ್ನೂ ತಿಳಿದು ಜ್ಞಾನಪೂರ್ವಕವಾಗಿ ಆತನ ಉಪಾಸನೆ ಮಾಡಬೇಕು. **'ನ ಋತೇ ತ್ವತಿ ಯತೇ ಕಿಂಚನಾರೇ ಮಹಾಮರ್ಕಂ ಭಗವನ್ ಚಿತ್ರಮರ್ಚಾ'** ಎಂಬುದು ಕ್ರಿಯಾದ್ವೈತ. ತಾನು ತನ್ನ ಹೆಂಡತಿ-ಮಕ್ಕಳು ಇತ್ಯಾದಿಗಳೂ ಇತರರೂ ಎಲ್ಲರೂ ಭಗವಂತನಿಗೆ ಅಧೀನರೆಂದು ನೋಡುವುದು. ಅರ್ಥ-ಕಾಮಗಳೆರಡೂ ಭಗವಂತನ ವಿಷಯವಾಗಿರುವುದರಿಂದ ಅವುಗಳಲ್ಲಿ ಐಕ್ಯವನ್ನು ಕಾಣುವುದು–ಇವೆಲ್ಲವೂ ದ್ರವ್ಯಾದ್ವೈತವು. (ವಿಜಯಧ್ವಜೀಯ)

ತ್ರಿಕರಣಗಳಿಂದ ನಡೆಯುವ ಕರ್ಮಗಳೆಲ್ಲವೂ ಪರಮಾತ್ಮನಲ್ಲೇ ಆಗುತ್ತವೆ. ಅವನಲ್ಲೇ ಅಧ್ಯಸ್ತವಾಗಿವೆ–ಎಂಬ ಭಾವದಿಂದ ಎಲ್ಲ ಕರ್ಮಗಳನ್ನೂ ಭಗವಂತನಿಗೆ ಅರ್ಪಿಸುವುದು ಕ್ರಿಯಾದ್ವೈತ. (ಶ್ರೀಧರೀಯ)

ಅರ್ಥ-ಕಾಮಾದಿಗಳೆಲ್ಲವೂ ಅಸತ್ತಿನ ಪರಿಣಾಮವಾಗಿರುವುದರಿಂದ ಅವೆಲ್ಲವೂ ಒಂದೇ ಎಂದು ನೋಡುವುದು. ಚಿತ್-ಅಚಿತ್ ದ್ರವ್ಯಗಳೆರಡೂ ಪರಮಾತ್ಮನಿಗೆ ಶರೀರಭೂತವಾಗಿ ಅವನಿಗೆ ಅಧೀನವಾಗಿರುವುದರಿಂದ ಅವುಗಳಿಗೂ ಅದ್ವೈತವುಂಟು.

(ವೀರರಾಘವೀಯ)

ಲಿಲ್ಲವೇ! ಹಾಗೆಯೇ ಧರ್ಮಾನುಷ್ಠಾನಮಾಡುವ ಭಗವದ್ಭಕ್ತರು ಗೃಹಸ್ಥ ರಾಗಿದ್ದರೂ ಎಲ್ಲ ವಿಪತ್ತುಗಳನ್ನೂ ದಾಟಿ ಮಹತ್ಕಾರ್ಯಗಳನ್ನು ನೆರವೇರಿಸಿ ದಿವ್ಯಗತಿಯನ್ನು ಪಡೆಯುತ್ತಾರಪ್ಪಾ.

ಹಿಂದಿನ ಮಹಾಕಲ್ಪದಲ್ಲಿ ನಾನು 'ಉಪಬರ್ಹಣ' ಎಂಬ ಪ್ರಸಿದ್ಧನಾದ ಗಂಧರ್ವನಾಗಿದ್ದೆನು. ಗಂಧರ್ವರಲ್ಲೆಲ್ಲಾ ನಾನು ಅತ್ಯಂತ ಸಂಭಾವಿತ ನಾಗಿದ್ದೆನು. ಅಪೂರ್ವವಾದ ಸೌಂದರ್ಯ, ಸೌಕುಮಾರ್ಯ ಮತ್ತು ಮಾಧುರ್ಯಗಳಿಂದ ಸಂಪನ್ನನಾಗಿದ್ದೆನು. ನನ್ನ ದೇಹದಿಂದ ಸುವಾಸನೆಯು ಹೊರಸೂಸುತ್ತಿತ್ತು. ಹೀಗೆಲ್ಲಾ ರೂಪ-ಸೌಂದರ್ಯಗಳಿಂದ ಪೂರ್ಣನಾಗಿದ್ದ ನನ್ನನ್ನು ಸ್ತ್ರೀಯರು ತುಂಬಾ ಪ್ರೀತಿಸುತ್ತಿದ್ದರು. ಅದರಿಂದ ನಾನು ಮತ್ತೇರಿ ಸ್ತ್ರೀಲಂಪಟನಾದೆನು. ಹೀಗಿರುವಾಗ ಒಮ್ಮೆ ದೇವತೆಗಳು ಒಂದು ದೊಡ್ಡ ಜ್ಞಾನಸತ್ರವನ್ನು ಆಚರಿಸಿದರು. ದೊಡ್ಡ ದೊಡ್ಡ ಪ್ರಜಾಪತಿಗಳೂ ಅದಕ್ಕೆ ದಯಮಾಡಿಸಿದ್ದರು. ಅಲ್ಲಿ ಶ್ರೀಹರಿಯ ಚರಿತ್ರೆಯ ಲೀಲೆಗಳನ್ನು ಗಾನ ಮಾಡುವುದಕ್ಕಾಗಿ ಗಂಧರ್ವರೂ ಮತ್ತು ಅಪ್ಸರೆಯರೂ ಆಹ್ವಾನಿಸಲ್ಪಟ್ಟಿದ್ದರು. ಅದು ಸಂತರ ಸಭೆ ಮತ್ತು ಶ್ರೀಭಗವಂತನ ಲೀಲೆಗಳೇ ಗಾನಮಾಡಲ್ಪಡುವ ಜಾಗ–ಎಂಬುದು ನನಗೆ ತಿಳಿದಿತ್ತು. ಆದರೂ ನಾನು ಹೆಂಗಸರೊಡನೆ ಕೂಡಿ ಲೌಕಿಕವಾದ ಹಾಡುಗಳನ್ನು ಹಾಡುತ್ತಾ ಹುಚ್ಚನಂತೆ ಆ ಸಭೆಗೆ ನುಗ್ಗಿದೆನು. ತಮಗೆ ನನ್ನಿಂದ ಅಗೌರವವು ಉಂಟಾಗಿದ್ದುದನ್ನು ಗಮನಿಸಿ ದೇವತೆಗಳು ತಮ್ಮ ಶಕ್ತಿಯಿಂದ ನನಗೆ ಶಾಪಕೊಟ್ಟುಬಿಟ್ಟರು. 'ನೀನು ನಮ್ಮನ್ನು ತಿರಸ್ಕಾರಮಾಡಿದ್ದೀಯೆ. ಆದ್ದರಿಂದ ನಿನ್ನ ಸೌಂದರ್ಯ- ಸಂಪತ್ತುಗಳೆಲ್ಲವೂ ನಷ್ಟವಾಗಿಬಿಡಲಿ. ನೀನು ಶೀಘ್ರದಲ್ಲಿಯೇ ಶೂದ್ರನಾಗಿ ಬಿಡು'–ಎಂದು ಶಪಿಸಿಬಿಟ್ಟರು. ಆ ಶಾಪದಿಂದ ನಾನು ಒಬ್ಬ ದಾಸಿಯ ಪುತ್ರನಾಗಿ ಹುಟ್ಟಿದೆನಪ್ಪಾ. ಆದರೂ ಆ ಜನ್ಮದಲ್ಲಿ ನಾನು ಬ್ರಹ್ಮಜ್ಞಾನಿಗಳಾದ ಮಹಾತ್ಮರ ಸತ್ಸಂಗಮಾಡಿ ಅವರ ಸೇವೆ-ಶುಶ್ರೂಷೆಗಳನ್ನು ಮಾಡಿದೆನು. ಅದರ ಮಹಿಮೆಯಿಂದ ನಾನು ಅನಂತರದ ಜನ್ಮದಲ್ಲಿ ಬ್ರಹ್ಮದೇವರ ಪುತ್ರನಾಗಿ ಜನಿಸಿದೆನು. ಹೀಗೆ ಸತ್ಪುರುಷರನ್ನು ತಿರಸ್ಕಾರಮಾಡಿದರೆ ಏನು ಫಲ ವುಂಟಾಗುವುದು? ಅವರ ಸೇವೆಮಾಡಿದರೆ ಏನು ಫಲ ಸಿಕ್ಕುವುದು?– ಎಂಬುದಕ್ಕೆ ನನ್ನ ನೇರವಾದ ಅನುಭವವೇ ನನಗೆ ತಿಳಿವಳಿಕೆಯನ್ನು ನೀಡಿದೆ.

ಧರ್ಮಸ್ತೇ ಗೃಹಮೇಧೀಯೋ ವರ್ಣಿತಃ ಪಾಪನಾಶನಃ ।
ಗೃಹಸ್ಥೋ ಯೇನ ಪದವೀಮಞ್ಜಸಾ ನ್ಯಾಸಿನಾಮಿಯಾತ್ ॥೭೪॥

ನಿನ್ನ ಅಪೇಕ್ಷೆಯಂತೆ ನಿನಗೆ ಗೃಹಸ್ಥರು ಅನುಸರಿಸಬೇಕಾದ ಪಾಪ ನಾಶಕವಾದ ಧರ್ಮವನ್ನು ನಿರೂಪಿಸಿದ್ದೇನೆ. ಈ ಮಾರ್ಗವನ್ನು ಆಚರಿಸಿದರೆ ಗೃಹಸ್ಥನೂ ಕೂಡ ಸಂನ್ಯಾಸಿಗಳು ಪಡೆಯುವಂತಹ ಪರಮಪದವನ್ನು ಅನಾಯಾಸವಾಗಿಯೇ ಗಳಿಸಬಹುದಪ್ಪಾ.

ಯೂಯಂ ನೃಲೋಕೇ ಬತ ಭೂರಿಭಾಗಾ
ಲೋಕಂ ಪುನಾನಾ ಮುನಯೋಽಭಿಯನ್ತಿ ।
ಯೇಷಾಂ ಗೃಹಾನಾವಸತೀತ ಸಾಕ್ಷಾ-
ದ್ಗೂಢಂ ಪರಂ ಬ್ರಹ್ಮ ಮನುಷ್ಯಲಿಙ್ಗಮ್ ॥೭೫॥

ಎಲೈ ಪುಣ್ಯಾತ್ಮನಾದ ನೃಪತಿಯೇ! ಈ ಮನುಷ್ಯಲೋಕದಲ್ಲಿ ನೀವೇ ಅತ್ಯಂತಭಾಗ್ಯಶಾಲಿಗಳು. ಏಕೆಂದರೆ : ನಿಮ್ಮ ಮನೆಯಲ್ಲಿ ಸಾಕ್ಷಾತ್ ಪರಬ್ರಹ್ಮಪರಮಾತ್ಮನೇ ಮನುಷ್ಯರೂಪವನ್ನು ಧರಿಸಿ ಗುಟ್ಟಾಗಿ ನಿವಾಸ ಮಾಡುತ್ತಿದ್ದಾನೆ. ಇದಕ್ಕಾಗಿ ಸಮಸ್ತಲೋಕಗಳನ್ನೂ ಪವಿತ್ರಗೊಳಿಸುವ ಋಷಿ-ಮುನಿಗಳು ಮತ್ತೆ ಮತ್ತೆ ಆತನ ದರ್ಶನವನ್ನು ಪಡೆಯಲು ಎಲ್ಲ ಕಡೆಗಳಿಂದಲೂ ನಿನ್ನ ಮನೆಗೆ ದಯಮಾಡಿಸುತ್ತಿದ್ದಾರೆ.

ಸ ವಾ ಅಯಂ ಬ್ರಹ್ಮ ಮಹದ್ವಿಮೃಗ್ಯಂ
ಕೈವಲ್ಯನಿರ್ವಾಣಸುಖಾನುಭೂತಿಃ ।
ಪ್ರಿಯಃ ಸುಹೃದ್ವಃ ಖಲು ಮಾತುಲೇಯ
ಆತ್ಮಾರ್ಹಣೀಯೋ ವಿಧಿಕೃದ್ಗುರುಶ್ಚ ॥೭೬॥

ಮಹಾಪುರುಷರು ಕೂಡ ಯಾವನನ್ನು ಹುಡುಕುತ್ತಿದ್ದಾರೆಯೋ–ಅಂತಹ ಪರಮೋಕ್ಷ-ಸುಖ-ಶಾಂತಿಗಳ ಅನುಭವಸ್ವರೂಪನಾದ ಆ ಪರಬ್ರಹ್ಮಪರಮಾತ್ಮನೇ ನಿಮಗೆ ಪ್ರಿಯಸ್ನೇಹಿತನಾಗಿದ್ದಾನೆ. ಸೋದರ ಮಾವನ ಮಗನಾಗಿ ಪ್ರಿಯಬಂಧುವಾಗಿದ್ದಾನೆ. ಪೂಜನೀಯನಾಗಿದ್ದಾನೆ. ನಿಮಗೆ ವಿಧಿಯನ್ನು ಬೋಧಿಸುವವನೂ ಮತ್ತು ನೀವು ಹೇಳಿದ ವಿಧಿಗಳನ್ನು ವಿಧೇಯನಾಗಿ ಪಾಲಿಸುವವನೂ ಆಗಿದ್ದಾನೆ. ಗುರುವೂ ಆಗಿದ್ದಾನೆ ಮತ್ತು ಎಲ್ಲಕ್ಕೂ ಮಿಗಿಲಾಗಿ ನಿಮಗೆ ಆತ್ಮಸ್ವರೂಪನೇ ಆಗಿದ್ದಾನೆ.

ನ ಯಸ್ಯ ಸಾಕ್ಷಾದ್ಭವಪದ್ಮಜಾದಿಭೀ
ರೂಪಂ ಧಿಯಾ ವಸ್ತುತಯೋಪವರ್ಣಿತಮ್ ।
ಮೌನೇನ ಭಕ್ತ್ಯೋಪಶಮೇನ ಪೂಜಿತಃ
ಪ್ರಸೀದತಾಮೇಷ ಸ ಸಾತ್ವತಾಂ ಪತಿಃ ॥೭೭॥

ಸಾಕ್ಷಾತ್ತಾಗಿ ರುದ್ರದೇವರು, ಬ್ರಹ್ಮದೇವರು ಮುಂತಾದವರೂ ಕೂಡ ಯಾವನ ರೂಪವನ್ನು ತಮ್ಮ ಬುದ್ಧಿಯಿಂದ–'ಇದು ಹೀಗೆಯೇ ಇದೆ'– ಎಂದು ವಾಸ್ತವಸ್ವರೂಪದಿಂದ ವರ್ಣಿಸಲು ಆಗಿಲ್ಲವೋ–ಅಂತಹ ಶ್ರೀಭಗವಂತನನ್ನು ನಮ್ಮಂತಹವರು ಹೇಗೆ ತಾನೇ ವರ್ಣಿಸಬಲ್ಲೆವು? ಆದರೂ ನಮ್ಮ ಮೌನದಿಂದಲೂ ಭಕ್ತಿಯಿಂದಲೂ ಮತ್ತು ಸಂಗಮದಿಂದಲೂ ಯಥಾಶಕ್ತಿಯಾಗಿ ಪೂಜಿತನಾದ ಆ ಭಕ್ತವತ್ಸಲನಾದ ಯಾದವೇಂದ್ರನಾದ ಶ್ರೀಕೃಷ್ಣಪರಮಾತ್ಮನು ನಮ್ಮಲ್ಲಿ ಪ್ರಸನ್ನನಾಗಲಿ."

ಶ್ರೀಶುಕಮಹರ್ಷಿಗಳು ಹೇಳುತ್ತಿದ್ದಾರೆ :

ಎಲೈ ಪರೀಕ್ಷಿದ್ರಾಜನೇ! ದೇವರ್ಷಿಗಳು ಹೇಳಿದ ಈ ಪ್ರವಚನಗಳನ್ನು ಕೇಳಿ ನಿಮ್ಮ ದೊಡ್ಡ ತಾತ ಭರತಶ್ರೇಷ್ಠನಾದ ಯುಧಿಷ್ಠಿರನಿಗೆ ಪರಮಾನಂದ ವಾಯಿತು. ಅವನು ಪ್ರೇಮಭರಿತನಾಗಿ ದೇವರ್ಷಿನಾರದರನ್ನೂ ಮತ್ತು ಶ್ರೀಕೃಷ್ಣಪರಮಾತ್ಮನನ್ನೂ ಪೂಜೆಮಾಡಿದನು. ಆ ಮಹಾಮುನಿಯು ಯುಧಿಷ್ಠಿರನಿಂದ ಪೂಜಿತನಾಗಿ, ಶ್ರೀಕೃಷ್ಣಪರಮಾತ್ಮನಿಂದಲೂ ಮತ್ತು ಆತನಿಂದಲೂ ಬೀಳ್ಕೊಡಲ್ಪಟ್ಟು ಹೊರಟುಹೋದನು. ಶ್ರೀಕೃಷ್ಣನೇ ಸಾಕ್ಷಾತ್ ಪರಬ್ರಹ್ಮವೆಂದು ಕೇಳಿ ಯುಧಿಷ್ಠಿರನಿಗೆ ಪರಮಾಶ್ಚರ್ಯವಾಯಿತು. ಮಹಾರಾಜ! ಈ ರೀತಿ ನಾನು ನಿನಗೆ ದಕ್ಷಪುತ್ರಿಯರ ಎಲ್ಲ ವಂಶಗಳನ್ನೂ ಬೇರೆ-ಬೇರೆಯಾಗಿ ವರ್ಣನೆಮಾಡಿದ್ದೇನೆ. ಅವರ ವಂಶದಲ್ಲಿಯೇ ದೇವತೆ ಗಳು, ಅಸುರರು, ಮನುಷ್ಯರು ಮುಂತಾದವರ ಮತ್ತು ಇಡೀ ಚರಾಚರ ಜೀವಿಗಳ ಸೃಷ್ಟಿಯು ಆಗಿದೆಯಪ್ಪಾ." (ಶ್ಲೋಕ 78-80)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಸಪ್ತಮಸ್ಕಂಧದ ೧೫ನೆಯ ಅಧ್ಯಾಯವು ಮುಗಿಯಿತು.

ಸಪ್ತಮಸ್ಕಂದವು ಮುಗಿಯಿತು.

ನಾಲ್ಕನೆಯ ಸಂಪುಟವು ಮುಗಿಯಿತು.

ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು ಓಂ ತತ್ಸತ್

License No. WPP-13 Licensed to Post without pre-payment of postage
Posted at Thayagaraja Nagar Post Office
Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.